ಸುವರ್ಣ ಕರ್ನಾಟಕ - 2006

# ಮಹಿಳಾ ಸಾಹಿತ್ಯ

ಸಂ: ಡಾ. ಸಬಿಹಾ ಭೂಮಿಗೌಡ



ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು-೫೬೦ ೦೦೨

ಸುವರ್ಣ ಕರ್ನಾಟಕ – ೨೦೦೬

# ಮಹಿಳಾ ಸಾಹಿತ್ಯ

(ಮೂಡುಬಿದರೆಯಲ್ಲಿ ನಡೆದ ಕಮ್ಮಟದಲ್ಲಿ ಮಂಡಿಸಿದ ಪ್ರಬಂಧಗಳು)

ಸಂಪಾದಕರು

ಡಾ. ಸಬಿಹಾ ಭೂಮಿಗೌಡ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ. ಸಿ. ರಸ್ತೆ
ಬೆಂಗಳೂರು–೫೬೦ ೦೦೨
(☏: ೦೮೦–೨೨೨೧೧೬೩೦)

**MAHILA SAHITYA** : (Collections of articles on Workshop conducted in Moodubidire) Edited by Dr. Sabiha Bhoomigowda, Published by Registrar, Karnataka Sahitya Academy, Kannada Bhavana, J. C. Road, Bengalooru-560 002.

**First Edition** : 2006
**Pages** : 4 + 202
**Copies** : 1000
**Price** : Rs. 60-00



**ಮೊದಲ ಮುದ್ರಣ** : ೨೦೦೬
**ಪುಟಗಳು** : ೪ + ೨೦೨
**ಪ್ರತಿಗಳು** : ೧೦೦೦
**ಬೆಲೆ** : ರೂ. ೬೦-೦೦

**ಪ್ರಕಾಶಕರು :**
ವಿ. ಎನ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ. ಸಿ. ರಸ್ತೆ,
ಬೆಂಗಳೂರು-೫೬೦ ೦೦೨
(✆: ೦೮೦-೨೨೨೧೧೭೩೦)

**ಮುಖಪುಟ ಕಲೆ** : ಆಶಾರಾಣಿ ಬಿ. ನಡೋಣಿ
**ಕೃಪೆ** : ಕರ್ನಾಟಕ ಲಲಿತಕಲಾ ಅಕಾಡೆಮಿ

ಮುದ್ರಣ :
ರಾಜಾ ಪ್ರಿಂಟರ್ಸ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು-೫೬೦ ೦೨೭, ದೂ: ೨೨೨೩೪೦೬೬

# ಅಧ್ಯಕ್ಷರ ಮಾತು

ಸಾಹಿತ್ಯ ಪ್ರಕಾರದ ಹಲವು ಹದಿನೆಂಟು ವಿಷಯಗಳನ್ನು ಕುರಿತು ಕಮ್ಮಟಗಳನ್ನು ಏರ್ಪಡಿಸುವ ಒಂದು ಒಳ್ಳೆಯ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದೆ. ೨೦೦೫ರಲ್ಲಿ ರಚಿಸಲ್ಪಟ್ಟ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಮಹಿಳೆಯೊಬ್ಬರು ನಾಮಕರಣಗೊಂಡದ್ದು ಅಕಾಡೆಮಿಯ ಸುಮಾರು ೪೭ ವರ್ಷಗಳ ಇತಿಹಾಸದಲ್ಲೇ ಮೊಟ್ಟಮೊದಲು. ಅದಲ್ಲದೆ ಸದಸ್ಯರಲ್ಲಿಯೂ ಸಹ ಶೇಕಡಾ ಅರ್ಧದಷ್ಟು ಮಹಿಳಾ ಪ್ರಾತಿನಿಧ್ಯ ಹೊಂದಿದೆ.

ಮಹಿಳಾ ಸಾಹಿತ್ಯವನ್ನು ಕುರಿತಂತೆ ವಿಶಿಷ್ಟವಾದ ಮತ್ತು ಗಂಭೀರವಾದ "ಮಹಿಳಾ ಸಾಹಿತ್ಯ ಅಧ್ಯಯನ ಕಮ್ಮಟ"ವನ್ನು ಮೂಡುಬಿದರೆಯಲ್ಲಿ ಆಯೋಜಿಸಿದ್ದೆವು. ಇದರಲ್ಲಿ ಕನ್ನಡದ ಲೇಖಕಿಯರ ಸಾಧನೆ ಮತ್ತು ಇತರ ಭಾಷೆಯ ಲೇಖಕಿಯರ ಸಾಧನೆಯನ್ನು ಸೇರಿಸಿಕೊಂಡು ೬ ದಿನಗಳ ಕಾಲ ಈ ಕಮ್ಮಟ ನಡೆಸಿದೆವು.

ಈ ಕಮ್ಮಟದ ನಿರ್ದೇಶಕಿಯರಾಗಿ ಹಿರಿಯ ಸಾಹಿತಿ ಪ್ರೊ॥ ಸ. ಉಷಾ ಮತ್ತು ಪ್ರಮುಖ ವಿಮರ್ಶಕಿಯಾದ ಡಾ॥ ಮಲ್ಲಿಕಾ ಘಂಟಿಯವರು ಆರು ದಿನಗಳ ಕಾಲ ಮೂಡುಬಿದರೆಯ ನಿಸರ್ಗದ ಚೆಲುವಿನಲ್ಲಿ ಸಮರ್ಥವಾಗಿ ಕಮ್ಮಟವನ್ನು ನಿರ್ವಹಿಸಿಕೊಟ್ಟರು. ಅವರಿಗೆ ಅಕಾಡೆಮಿ ಕೃತಜ್ಞವಾಗಿದೆ.

"ಸಾಹಿತಿಯೊಂದಿಗೆ ಸಂವಾದ" ಎಂಬ ಶೀರ್ಷಿಕೆಯಡಿಯಲ್ಲಿ ಡಾ॥ ನಿರುಪಮಾ, ನಾಡೋಜ ಗೀತಾ ನಾಗಭೂಷಣ, ವೈದೇಹಿ, ಪ್ರತಿಭಾ ನಂದಕುಮಾರ, ಬಾನು ಮುಷ್ತಾಕ್ ಮತ್ತು ಪಾರ್ವತಿ ಜಿ. ಐತಾಳ ಅವರು ಭಾಗವಹಿಸಿ ಶಿಬಿರಾರ್ಥಿಗಳೊಂದಿಗೆ ಅರ್ಥಪೂರ್ಣ ಸಂವಾದ ನಡೆಸಿದರು.

ಸದರಿ ಕಮ್ಮಟವನ್ನು ಹೊಳೆಹಳ್ಳ, ಗುಡ್ಡಬೆಟ್ಟಗಳ ನಡುವಿನ ನಿತ್ಯ ಹಸಿರು ಚಿಮ್ಮುವ ಮೂಡುಬಿದರೆಯಲ್ಲಿ ನಡೆಸಲು ಕನ್ನಡದ ಸಾಂಸ್ಕೃತಿಕ ಜಗತ್ತಿನಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿರುವ ಡಾ॥ ಮೋಹನ ಆಳ್ವ ಮತ್ತು ಆಳ್ವಾಸ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ಡಾ॥ ನಿತ್ಯಾನಂದ ಬಿ. ಶೆಟ್ಟಿ ಅವರು ನೀಡಿದ ಸಹಕಾರ ಮೆಚ್ಚುವಂಥದ್ದು, ಅವರಿಗೆ ಅಕಾಡೆಮಿಯು ಕೃತಜ್ಞತೆ ಸಲ್ಲಿಸುತ್ತದೆ.

ಈ ಸಂಕಲನದ ಸಂಪಾದನಾ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ, ಸಂಚಾಲಕಿ ಹಾಗೂ ನಮ್ಮ ಅಕಾಡೆಮಿಯ ಸದಸ್ಯೆಯೂ ಆಗಿರುವ ಡಾ॥ ಸಬಿಹಾ ಭೂಮಿಗೌಡ ಅವರ ಶ್ರಮ ಶ್ಲಾಘನೀಯ. ಅವರ ನೆರವಿಗೆ ಅಕಾಡೆಮಿಯ ಕೃತಜ್ಞತೆಗಳು ಸಲ್ಲುತ್ತವೆ.

**ನಾಡೋಜ ಗೀತಾ ನಾಗಭೂಷಣ**

# ಸಂಪಾದಕರ ಮಾತು

೨೦೦೫ರಲ್ಲಿ ರಚಿತವಾದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಹೊಸ ಸದಸ್ಯರ ತಂಡದಲ್ಲಿ ಕರ್ನಾಟಕದ ಇತಿಹಾಸದಲ್ಲೇ ಮೊತ್ತಮೊದಲ ಬಾರಿಗೆ ಎಂಬಂತೆ ಶೇಕಡಾ ಐವತ್ತರಷ್ಟು ಮಹಿಳಾ ಸದಸ್ಯರು ಇದ್ದೆವು. ಮಹಿಳಾ ಅಧ್ಯಕ್ಷರ ನೇತೃತ್ವದಲ್ಲಿ ಶೇಕಡಾ ಅರ್ಧದಷ್ಟು ಪ್ರಾತಿನಿಧ್ಯ ಹೊಂದಿದ ನಮಗೆ ಒಂದು ಹೊಸ ಉತ್ಸಾಹ ಕೂಡಾ ಇತ್ತು. ಹೀಗಾಗಿ ಆ ವರ್ಷದ ಕ್ರಿಯಾಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ಮಹಿಳೆಯರ ಸಾಹಿತ್ಯವನ್ನು ಕುರಿತಂತೆ ವಿಶಿಷ್ಟ ಮತ್ತು ಗಂಭೀರವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಯೋಚಿಸಿದೆವು. ಆಗ ಹುಟ್ಟಿದ ಕಲ್ಪನೆಯೇ 'ಮಹಿಳಾ ಸಾಹಿತ್ಯ ಅಧ್ಯಯನ ಕಮ್ಮಟ'. ಇದರಲ್ಲಿ ಕನ್ನಡದ ಲೇಖಕಿಯರ ಸಾಹಿತ್ಯಿಕ ಸಾಧನೆಯ ಮರುವಿಮರ್ಶೆಯನ್ನು ಮಾಡುವುದು ಒಂದು ಆಸಕ್ತಿಯಾದರೆ, ಭಾರತೀಯ ಇತರ ಭಾಷೆಗಳಲ್ಲಿ ಬರೆಯುತ್ತಿರುವ ಲೇಖಕಿಯರ ಸಾಧನೆಯನ್ನು ಅಭ್ಯಸಿಸುವುದೂ ನಮ್ಮ ಆಸಕ್ತಿಯಾಗಿತ್ತು. ಹೀಗೆ ಮಾಡಿದಾಗ ಕನ್ನಡದ ಲೇಖಕಿಯರಿಗೆ ಮತ್ತು ಕನ್ನಡದ ಓದುಗರಿಗೆ ಇಬ್ಬರಿಗೂ ಪ್ರಯೋಜನವಿದೆ. ನೆರೆಹೊರೆಯ ಭಾಷೆಯ ಲೇಖಕಿಯರ ಸಂವೇದನೆ, ಸಾಮಾಜಿಕ ಕಾಳಜಿ ಮತ್ತು ಬದ್ಧತೆಗಳು, ಬರೆವಣಿಗೆಯ ತೀವ್ರತೆ ಮತ್ತು ವಿನ್ಯಾಸಗಳನ್ನು ಆರು ದಿನಗಳ ಕಮ್ಮಟದಲ್ಲಿ ವಿಮರ್ಶಿಸುವ ಮತ್ತು ಅಧ್ಯಯನ ಮಾಡುವ ಮೂಲಕ ಲೇಖಕರು ಮತ್ತು ಸಾಹಿತ್ಯದ ಓದುಗರು ಇಬ್ಬರೂ ಅದರ ಧನಾತ್ಮಕ ಪ್ರಯೋಜನವನ್ನು ಪಡೆಯುವುದರಲ್ಲಿ ಸಂಶಯವಿಲ್ಲ. ಇಂತಹ ಕಾರ್ಯಗಳು ತೀರ ವಿರಳವಾಗಿ ನಡೆದ ಕಾರಣದಿಂದ ಅದರ ಅಗತ್ಯವನ್ನು ಪರಿಗಣಿಸಿ, ಆರು ದಿನಗಳ ಕಮ್ಮಟವನ್ನು ಕ್ರಿಯಾಯೋಜನೆಯಲ್ಲಿ ಹಾಕಿಕೊಳ್ಳಲಾಗಿತ್ತು.

ಆರು ದಿನಗಳ ಕಮ್ಮಟದಲ್ಲಿ ಸ್ತ್ರೀವಾದಿ ತಾತ್ವಿಕತೆಯ ಹಿನ್ನೆಲೆಯಲ್ಲಿ ಆಂಗ್ಲ ಸಾಹಿತ್ಯದ ಮೊದಲಿಗರು, ಮರಾಠಿ, ಬಂಗಾಲಿ, ಹಿಂದಿ, ಉರ್ದು ಮತ್ತು ಮಲಯಾಳಂ ಭಾಷೆಗಳ ಲೇಖಕಿಯರ ಸಾಹಿತ್ಯದ ಅವಲೋಕನ, ಚರ್ಚೆ ಮತ್ತು ಪುನರ್ ವಿಮರ್ಶೆಯ ಕಾರ್ಯವನ್ನು ಯೋಜಿಸಿದ್ದೆವು. ಹೀಗಾಗಿ ಆಂಗ್ಲ ಸಾಹಿತ್ಯದ ಮೊದಲಿಗರ ಬಗ್ಗೆ ಪಟ್ಟಾಭಿರಾಮ ಸೋಮಯಾಜಿಯವರು ಮಾತನಾಡಲು ಒಪ್ಪಿದರು. ಮರಾಠಿ ದಲಿತ ಲೇಖಕಿಯರಾದ ಊರ್ಮಿಳಾ ಪವಾರ್ ಮತ್ತು ಪ್ರಜ್ಞಾ ಲೋಖಂಡೆಯವರ ಬಗ್ಗೆ ತುಳಸಿ ವೇಣುಗೋಪಾಲ್, ಮಹಾಶ್ವೇತಾದೇವಿಯವರ ಬಗ್ಗೆ ಶಶಿಕಲಾ ವೀರಯ್ಯಸ್ವಾಮಿ, ಅಮೃತಾ ಪ್ರೀತಮ್ ಬಗ್ಗೆ ಡಾ. ಎಲ್.ಸಿ. ಸುಮಿತ್ರಾ, ಉರ್ದು ಲೇಖಕಿಯರಾದ ಖುರ್ರತುಲ್ಐನ್ ಹೈದರ್ ಮತ್ತು ಇಸ್ಮತ್ ಚುಕ್ತಾಯಿ ಕುರಿತು ಕೆ. ಶರೀಫಾ, ಕನ್ನಡ ಮಹಿಳಾ ಕಾವ್ಯದ ಬಗ್ಗೆ ಅ.ನಾ. ಪೂರ್ಣಿಮಾ ಅವರು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಸಂತೋಷದಿಂದ ಒಪ್ಪಿ ಬಂದರು. '**ಮಹಿಳಾ ಸಾಹಿತ್ಯ ಅಧ್ಯಯನ ಕಮ್ಮಟ**'ವನ್ನು ಕನ್ನಡದ ಹಿರಿಯ ಲೇಖಕಿಯಾದ ಡಾ. ನಿರುಪಮಾ ಅವರು ಉದ್ಘಾಟಿಸಿ, 'ಕನ್ನಡ ಸಾಹಿತ್ಯ ಸ್ತ್ರೀಪರ ನಿಲುವು' ಎಂಬ ವಿಚಾರದ ಕುರಿತು ಒಂದು

ವಿದ್ವತ್ಪೂರ್ಣ ಉಪನ್ಯಾಸವನ್ನು ನೀಡಿದರು. ಕನ್ನಡದ ಹಿರಿಯ ಕವಯಿತ್ರಿ ಪ್ರೊ. ಸ. ಉಷಾ ಮತ್ತು ಮುಖ್ಯ ವಿಮರ್ಶಕಿಯಾದ ಡಾ. ಮಲ್ಲಿಕಾ ಘಂಟಿಯವರು ಆರು ದಿನಗಳ ಕಮ್ಮಟದ ನಿರ್ದೇಶಕರಾಗಿ ತುಂಬ ಸಮರ್ಥವಾಗಿ ಕಾರ್ಯಕ್ರಮಗಳನ್ನು ನಿರ್ವಹಿಸಿಕೊಟ್ಟರು. ಅದರ ಜೊತೆಗೆ ಸ. ಉಷಾ ಅವರು ಮಲಯಾಳಂ ಕವಯಿತ್ರಿಯರು ಮತ್ತು ಸಾರಾ ಜೋಸೆಫ್ ಬಗ್ಗೆ ಹಾಗೂ ಡಾ. ಮಲ್ಲಿಕಾ ಘಂಟಿಯವರು 'ಅಜಿತ್ ಕೌರ್' ಬಗ್ಗೆ ಉಪನ್ಯಾಸಗಳನ್ನು ನೀಡಿ, ಕಮ್ಮಟದ ಮೌಲಿಕತೆಯನ್ನು ಹೆಚ್ಚಿಸಿದ್ದಾರೆ. ಸಾಹಿತಿಗಳೊಂದಿಗೆ ಸಂವಾದ ಎಂಬ ಕಾರ್ಯಕ್ರಮದಲ್ಲಿ ಡಾ. ನಿರುಪಮಾ, ನಾಡೋಜ ಗೀತಾ ನಾಗಭೂಷಣ, ವೈದೇಹಿ, ಪ್ರತಿಭಾ ನಂದಕುಮಾರ್, ಬಾನು ಮುಷ್ತಾಕ್ ಮತ್ತು ಪಾರ್ವತಿ ಜಿ. ಐತಾಳ್ ಅವರು ಭಾಗವಹಿಸಿ, ಶಿಬಿರಾರ್ಥಿಗಳೊಂದಿಗೆ ಅರ್ಥಪೂರ್ಣ ಸಂವಾದವನ್ನು ನಡೆಸಿಕೊಟ್ಟರು.

'ಮಹಿಳಾ ಸಾಹಿತ್ಯ ಅಧ್ಯಯನ' ಕಮ್ಮಟದ ಯಶಸ್ಸಿಗೆ ಕರ್ನಾಟಕದಾದ್ಯಂತ ಬಂದ ಶಿಬಿರಾರ್ಥಿಗಳು ಕಾರಣರಾಗಿದ್ದಾರೆ. ಆರು ದಿನಗಳ ಕಾಲ ತಮ್ಮ ಖಾಸಗಿ ಕೆಲಸ ಕಾರ್ಯಗಳನ್ನು, ಕೌಟುಂಬಿಕ ಜವಾಬ್ದಾರಿಗಳನ್ನು ಬದಿಗಿಟ್ಟು, ಸಾಹಿತ್ಯಿಕ ಚರ್ಚೆಗೆ ಬರುವುದು ತುಸು ಕಷ್ಟದ ಕೆಲಸವೇ. ಆದಾಗ್ಯೂ ಒಟ್ಟು ಮೂವತ್ತು ಜನರಿಗೆ ಅವಕಾಶವಿದ್ದ ಶಿಬಿರಕ್ಕೆ ತೊಂಬತ್ತಕ್ಕೂ ಮಿಕ್ಕಿ ಅರ್ಜಿಗಳು ಬಂದಿದ್ದವು. ಈ ಸಂಖ್ಯೆಯೇ ಸಂಘಟಕರಿಗೆ ತುಂಬ ಅಚ್ಚರಿ ಮತ್ತು ಸಂತೋಷವನ್ನು ನೀಡಿದ ಸಂಗತಿಯಾಗಿತ್ತು. ಹಾಗೆಯೇ ಕಮ್ಮಟವನ್ನು ಮೂಡುಬಿದರೆಯಲ್ಲಿ ನಡೆಸುವುದಕ್ಕೆ ಕರ್ನಾಟಕದ ಸಾಂಸ್ಕೃತಿಕ ಲೋಕದಲ್ಲಿ ವಿಶಿಷ್ಟ ಮಹತ್ವವನ್ನು ಪಡೆದಿರುವ ಡಾ. ಮೋಹನ್ ಆಳ್ವ ಅವರು ಮತ್ತು ಆಳ್ವಾಸ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ನಿತ್ಯಾನಂದ ಬಿ. ಶೆಟ್ಟಿ ಅವರು ಕಾರಣಕರ್ತರಾಗಿದ್ದಾರೆ. 'ಆಳ್ವಾಸ್ ವಿರಾಸತ್' ನಡೆಯುವ ಅವಧಿಯಲ್ಲೇ ಕಮ್ಮಟವನ್ನು ನಡೆಸಲು ಸೂಚಿಸಿ, ಶಿಬಿರಾರ್ಥಿಗಳಿಗೆ ಅಪೂರ್ವವಾದ ಸಾಂಸ್ಕೃತಿಕ ಕಾರ್ಯಕ್ರಮಗಳ ವೀಕ್ಷಕರಾಗುವ ಅವಕಾಶವನ್ನು ಒದಗಿಸಿಕೊಟ್ಟಿದ್ದಾರೆ.

ಕಮ್ಮಟದಲ್ಲಿ ನಡೆಸಲಾದ ಎಲ್ಲ ಚರ್ಚೆ, ಸಂವಾದ ಹಾಗೂ ಮಂಡಿಸಲಾದ ಪ್ರಬಂಧಗಳನ್ನು ಈ ಸಂಕಲನದಲ್ಲಿ ತರಲು ಉದ್ದೇಶಿಸಿದ್ದೆವು. ಅದರಂತೆ ಹೆಚ್ಚಿನವರು ತಾವು ನೀಡಿದ ಉಪನ್ಯಾಸ, ಮಾಡಿದ ಸಂವಾದ, ಚರ್ಚೆಗೆ ಸಂಬಂಧಿಸಿದಂತೆ ಪ್ರಬಂಧಗಳನ್ನು ಒದಗಿಸಿಕೊಟ್ಟಿದ್ದಾರೆ. ಸಮಯದ ಮಿತಿಯಿಂದಾಗಿ ಉಳಿದವರ ಬರಹಗಳಿಗಾಗಿ ಇನ್ನೂ ಕಾಯಲು ಆಗಲಿಲ್ಲ. ಆದರೆ ಇಲ್ಲಿ ಒಳಗೊಂಡಿರುವ ಪ್ರಬಂಧಗಳು ಒಟ್ಟು ಕಮ್ಮಟದ ಸ್ವರೂಪವನ್ನು ಸ್ಪಷ್ಟಪಡಿಸುತ್ತವೆ ಹಾಗೂ ಕನ್ನಡದ ಓದುಗರಿಗೆ ಕೆಲವು ಹೊಸ ಒಳನೋಟಗಳನ್ನು ನೀಡುತ್ತವೆ ಎಂದು ಭಾವಿಸಿದ್ದೇನೆ. ಈ ಅರ್ಥದಲ್ಲಿ ಪುಸ್ತಕದ ಕುರಿತಾಗಿ ಓದುಗರ ಪ್ರತಿಕ್ರಿಯೆ ಮತ್ತು ವಿಮರ್ಶೆಗಳನ್ನು ಮುಕ್ತವಾಗಿ ಸ್ವೀಕರಿಸಲು ಸಂತೋಷಪಡುತ್ತೇನೆ.

೧-೧೧-೨೦೦೬

ಡಾ. ಸಬಿಹಾ ಭೂಮಿಗೌಡ

ಮಂಗಳಗಂಗೋತ್ರಿ-೫೭೪ ೧೯೯

# ಕೃತಜ್ಞತೆಗಳು

ಮಹಿಳಾ ಸಾಹಿತ್ಯ ಅಧ್ಯಯನ ಕಮ್ಮಟವು ವೈದೇಹಿ, ಮಲ್ಲಿಕಾ ಘಂಟಿ ಮತ್ತು ನಾನು ಒಟ್ಟು ಸೇರಿ ಯೋಜಿಸಿದ ಕಾರ್ಯಕ್ರಮ. ಇಂಥ ಕಮ್ಮಟಗಳು ಒಂದು ಬಾರಿ ನಡೆದರೆ ಸಾಲದು. ಮೂರು ವರ್ಷಗಳಲ್ಲಿ ಮೂರು ಕಮ್ಮಟಗಳು ಆದಲ್ಲಿ ಅರ್ಥಪೂರ್ಣವಾಗುತ್ತದೆ ಎಂದು ನಾವು ಭಾವಿಸಿದ್ದೇವೆ. ಇಂತಹ ವಿಶಿಷ್ಟ ಕಾರ್ಯಕ್ರಮವನ್ನು ಯೋಜಿಸುವಲ್ಲಿ ನೆರವಾದ ಹಿರಿಯ ಲೇಖಕಿ ವೈದೇಹಿ ಮತ್ತು ಗೆಳತಿ ಡಾ|| ಮಲ್ಲಿಕಾ ಘಂಟಿ ಅವರಿಗೆ,

ಕಮ್ಮಟದಲ್ಲಿ ಭಾಗವಹಿಸಿ, ತಮ್ಮ ವಿಚಾರಗಳನ್ನು ಪ್ರಬಂಧ ರೂಪದಲ್ಲಿ ನೀಡಿದ ಎಲ್ಲ ಲೇಖಕಿಯರಿಗೆ,

ಮೂಡಬಿದರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಡಾ. ಮೋಹನ್ ಆಳ್ವ ಅವರಿಗೆ,

ಕಾರ್ಯಕ್ರಮದ ಸಂಯೋಜನೆ, ಸಿದ್ಧತೆಗಳಲ್ಲಿ ನೆರವಾದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ನಾಡೋಜ ಗೀತಾ ನಾಗಭೂಷಣ, ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೆ, ಸಿಬ್ಬಂದಿ ವರ್ಗದವರಾದ ವಿಜಯಾ, ಸೌಭಾಗ್ಯ, ಹರೀಶ್ ಮತ್ತು ಕೃಷ್ಣಪ್ಪ ಇವರುಗಳಿಗೆ.

ಕಮ್ಮಟದ ಯಶಸ್ಸಿಗೆ ದುಡಿದ ಆಳ್ವಾಸ್ ಶಿಕ್ಷಣ ಸಂಸ್ಥೆಯ ಕನ್ನಡ ಅಧ್ಯಾಪಕರಾದ ನಿತ್ಯಾನಂದ ಬಿ. ಶೆಟ್ಟಿ, ಹರೀಶ್ ಇವರುಗಳಿಗೆ ಮತ್ತು ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

-ಡಾ. ಸಬಿಹಾ ಭೂಮಿಗೌಡ

# ಪರಿವಿಡಿ

ಸಾಹಿತ್ಯ ಮತ್ತು ಮಹಿಳೆ

# ಕನ್ನಡ ಸಾಹಿತ್ಯ - ಸ್ತ್ರೀಪರ ಕಾಳಜಿ

✍ ಡಾ. ನಿರುಪಮಾ

ಯಾವುದೇ ಭಾಷೆಯ ಸಾಹಿತ್ಯವು ಆ ಭಾಷೆಯನ್ನಾಡುವ ಜನರ ಬೌದ್ಧಿಕ, ಸಾಂಸ್ಕೃತಿಕ ಹಾಗೂ ನಾಗರಿಕತೆಯ ಬೆಳವಣಿಗೆಯೊಂದಿಗೆ ಸಮಾನಾಂತರವಾಗಿ ನೇರ ಪ್ರಮಾಣದಲ್ಲಿಯೇ ಬೆಳೆಯುತ್ತ ಹೋಗುತ್ತದೆ. ಹೀಗೆ ನಿರ್ಮಿಸಲ್ಪಟ್ಟ ಸಾಹಿತ್ಯ ಆಯಾ ಕಾಲದ ಜನರ ಸ್ಥಿತಿಗತಿಗಳನ್ನೂ, ಆ ಕಾಲದ ಜನರ ಆಲೋಚನಾ ವಿಧಾನಗಳನ್ನೂ, ಅಂತಹ ಆಲೋಚನೆಗಳು ಹುಟ್ಟಲು ಕಾರಣವಾದ ಆ ಸಮಾಜದ ವ್ಯವಸ್ಥೆಯನ್ನೂ ಅದರ ವಿಕಾಸದ ಕ್ರಮವನ್ನೂ ಸಾರಿ ಹೇಳುವ ದೃಷ್ಟಾಂತವಾಗುತ್ತದೆ.

ವಿಶ್ವದಲ್ಲಿಯೇ ಅತ್ಯಂತ ಪ್ರಾಚೀನತಮ ಸಾಹಿತ್ಯವೆಂದು ಪರಿಗಣಿಸಲ್ಪಟ್ಟ ಋಗ್ವೇದ ಸಂಹಿತೆಯು 'ಸಮಾನೀವ ಆಕುತಿಃ' ಎಂಬ ಶ್ಲೋಕದೊಂದಿಗೆ ಮುಕ್ತಾಯವಾಗುತ್ತದೆ. ಎಂದರೆ

"ನಿಮ್ಮ ಅಭಿಪ್ರಾಯಗಳು, ಮನಸ್ಸು, ಕ್ರಿಯೆ, ಪ್ರಯೋಜನ, ಸಮಾನವಾಗಿರಬೇಕು, ಆಗಲೇ ಸುಖ, ಸಂತೋಷ, ನಿಮ್ಮನ್ನು ಸೇರುತ್ತವೆ" ಎಂಬ ಉದಾತ್ತ ಭಾವನೆಯಿಂದ ಅವರ ಜೀವನ ತಳೆದಿತ್ತು.

ಋಗ್ವೇದದ ಕಾಲಕ್ಕಾಗಲೇ ಪಿತೃಸ್ವಾಮಿಕ ವ್ಯವಸ್ಥೆ ಬಲವಾಗಿ ಬೇರೂರಿತ್ತು. ಆ ಕಾಲದಲ್ಲಿಯೇ ಆರ್ಯರು ನಾಗರಿಕತೆಯ ಉನ್ನತ ಶಿಖರವನ್ನು ಮುಟ್ಟಿದ್ದರು. ಜ್ಞಾನದಲ್ಲಿ, ಶಕ್ತಿಯಲ್ಲಿ ಸಮಾಜ ವ್ಯವಸ್ಥೆಯಲ್ಲಿ ತುಂಬ ಮುಂದುವರಿದಿದ್ದರು. ಭಾರತ ದೇಶದ ಇತಿಹಾಸದಲ್ಲೇ ವೇದಗಳ ಕಾಲವನ್ನು 'ಆದರ್ಶಯುಗ'ವೆಂದು ಸಂಶೋಧಕರು ಕರೆದಿದ್ದಾರೆ. ಆ ಕಾಲದ ಸ್ತ್ರೀಯರು ಹೆಚ್ಚು ಸ್ವೇಚ್ಛಾ ಸ್ವಾತಂತ್ರ್ಯಗಳನ್ನು ಹೊಂದಿ ಪುರುಷರ ಸಮಾನರಾಗಿ ಗೌರವ ಪಡೆಯುತ್ತಿದ್ದರು ಎನ್ನುವುದಕ್ಕೆ ವೇದವಾಙ್ಮಯದಲ್ಲಿ ಹೇರಳವಾದ ಉದಾಹರಣೆಗಳಿವೆ.

ಉದಾಹರಣೆಗೆ ಮಗಳ ಮದುವೆಯ ಸಂದರ್ಭದಲ್ಲಿ ತಂದೆಯು ವರನಿಗೆ ಕನ್ಯಾದಾನ ಮಾಡುತ್ತ ಹೇಳುವ 'ಇಮಾಂ ಕನ್ಯಾಂ ಪ್ರದಾಸ್ಯಾಮಿ ಪುತ್ರವತ್ ಪಾಲಿತಾಮಯಾ' ಎನ್ನುವುದರಲ್ಲಿ ಮಗಳು, ಮಗನ ಸಮಾನಳಾಗಿ ಕಾಣಲ್ಪಡುತ್ತಿದ್ದಳು ಎಂಬುದು ವಿದಿತವಾಗುತ್ತದೆ.

ಋಗ್ವೇದದ ಮಂತ್ರಗಳಲ್ಲಿ ಇಪ್ಪತ್ತನಾಲ್ಕು ಜನ ಮಹಿಳೆಯರ ಉಲ್ಲೇಖವಿದ್ದು ದಶಮ ಮಂಡಲದಲ್ಲಿ ಹದಿನಾರು ಜನ ಸೇವಿಕೆಯರ ಹೆಸರು ಕಾಣಸಿಗುತ್ತವೆ. ಅವರಲ್ಲಿ ಒಂಬತ್ತು ಋಷಿಕೆಯರು ತಮ್ಮ ತಮ್ಮ ಹೆಸರಿನಲ್ಲಿ ಮಂತ್ರಗಳನ್ನು ರಚಿಸಿದ್ದಾರೆ. ನಾವು ಮುಖ್ಯವಾಗಿ ಗಮನಿಸಬೇಕಾಗಿರುವುದು ದಶಮ ಮಂಡಲದ ೧೨೫ನೆಯ ಸೂಕ್ತಿಯಲ್ಲಿ ಎಂಟು ಮಂತ್ರಗಳನ್ನು ರಚಿಸಿದ 'ವಾಕ್' ಎಂಬಾಕೆ ರಚಿಸಿದ ಅಂಭೃಣಿ ಸೂಕ್ತವನ್ನು. ಒಬ್ಬ ಮಹಿಳೆ ಸಾವಿರಾರು ವರುಷಗಳ ಹಿಂದೆ ರಚಿಸಿದ ಸೂಕ್ತ ಅದ್ವೈತಮತದ ಸಿದ್ಧಾಂತಕ್ಕೆ ಆಧಾರವಾಗಿ ಅದರ ಪ್ರಭಾವ ಸಾವಿರಾರು ವರುಷಗಳವರೆಗೂ ತನ್ನ ಪ್ರಭಾವ ಬೀರಿರುವುದು ಅಚ್ಚರಿಗೊಳಿಸುವಂತಹ ವಿಷಯ. ನಂತರ ಬಂದ ಉಪನಿಷತ್ತು ಪುರಾಣಗಳ ಹೊತ್ತಿಗೆ ಮಹಿಳೆಯರ ಸ್ಥಿತಿ ಇಳಿಮುಖವಾಗಿ ದುರ್ದೆಶೆಗಳನ್ನು ಕಾಣುತ್ತ ಬಂದಿತು.

ಪ್ರಾಚೀನಕಾಲದಿಂದ ಇಂದಿನವರೆಗೆ ನಡೆದುಬಂದ ಭಾರತ ನಾರಿಯರ ಜೀವನ ಹಾಗೂ ಅವರ ಸ್ಥಾನಮಾನಗಳ ಕುರಿತು ವಿವೇಚಿಸುವಾಗ ಎಲ್ಲ ಕಾಲದ ಸ್ಥಿತಿಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಮೀಕ್ಷಿಸಿದಾಗ ಮುಖ್ಯವಾಗಿ ನಮಗೆ ಎರಡು ಮುಖಗಳು ಕಾಣುತ್ತವೆ.

೧. ಭಾರತೀಯರ ದೃಷ್ಟಿಯಲ್ಲಿ ಸ್ತ್ರೀ ಅತ್ಯುನ್ನತ ಸ್ಥಾನ ಪಡೆದವಳು.

೨. ಭಾರತೀಯ ಮಹಿಳೆಯಷ್ಟು ಶೋಷಣೆಗೊಳಗಾದ ಸ್ತ್ರೀ ಇನ್ನಾವ ದೇಶದಲ್ಲೂ ಇಲ್ಲ.

ಇವೆರಡೂ ಪರಸ್ಪರ ವಿರುದ್ಧದ ಹೇಳಿಕೆಗಳಾದರೂ ಇದು ಸತ್ಯ ಸಂಗತಿ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

ಮೊದಲನೆಯ ಹೇಳಿಕೆಯನ್ನು ಸಮರ್ಥಿಸಲು ಹೊರಟರೆ, ಅದರ ಬಗ್ಗೆ ಸಾವಿರಾರು ಪುಟಗಳಷ್ಟು ಪುಸ್ತಕವನ್ನೇ ಬರೆಯಬಹುದು. ಭಾರತೀಯ ಭಾಷೆಗಳಲ್ಲಿ ಸ್ತ್ರೀ ವಾಚಕದಲ್ಲಿರುವಷ್ಟು ಪದಗಳು ಬೇರೆ ಯಾವ ಭಾಷೆಗಳಲ್ಲೂ ಇಲ್ಲವೆಂದು ಭಾಷಾತಜ್ಞರ ಹೇಳಿಕೆ. ಭಾರತೀಯರು ತಮ್ಮ ಸುತ್ತಲೂ ಕಾಣುವ ದೇಶವನ್ನು, ಭೂಮಿಯನ್ನು 'ಮಾತೆ' ಎಂದು ಕರೆದು ಗೌರವಿಸಿದರು. ದೇಶದಲ್ಲಿ ಹರಿಯುವ ನದಿಗಳನ್ನು ಸ್ತ್ರೀರೂಪಗಳಾಗಿ ಭಾವಿಸಿದರು. ವಾಕ್ಕು, ಜ್ಞಾನ, ಐಶ್ವರ್ಯ – ಇವುಗಳ ಅಧಿದೇವತೆಗಳು ಸ್ತ್ರೀಯರೇ. ಹಸುಗಳನ್ನು ಗೋಮಾತೆ ಎಂದು ಪೂಜಿಸಿದರು. ಸಮಸ್ತ ವಿಶ್ವವನ್ನೇ 'ಭೂಮಾತೆ' ಎಂದರು.

ಇನ್ನು ಎರಡನೆಯ ಹೇಳಿಕೆಯ ಬಗ್ಗೆ ಸ್ವತಃ ನಾವೇ ಅನುಭವಿಸುತ್ತ ಬಂದಿರುವುದು ಐತಿಹಾಸಿಕ ಸತ್ಯ.

ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದಲೇ ವಿದೇಶಿಯರ ದಾಳಿಗಳ, ಆಕ್ರಮಣಗಳ ಫಲವಾಗಿ ಜನಜೀವನ ಅಸ್ತವ್ಯಸ್ತಗೊಳ್ಳತೊಡಗಿತು. ಮುಖ್ಯವಾಗಿ ಮಹಿಳೆಯರ ರಕ್ಷಣೆ ಕಠಿಣವಾಗಿ

ಅವರ ಬಾಳು ಹಲವಾರು ಕಟ್ಟುಪಾಡುಗಳಿಗೊಳಗಾಯಿತು. ಜನರಲ್ಲಿ ಮತ ಮೌಢ್ಯತೆ ಅಧಿಕವಾಗಿ ಧಾರ್ಮಿಕತೆಯ ಹೆಸರಿನಲ್ಲಿ ಅರ್ಥವಿಲ್ಲದ ಆಚರಣೆಗಳು, ಮೂಢನಂಬಿಕೆಗಳು ಹೆಚ್ಚಿದವು - ಈ ಅವಧಿಯಲ್ಲಿ ಬಂದ ಭಕ್ತಿ ಚಳುವಳಿಗಳ ಫಲವಾಗಿ ಹಲವಾರು ಮಹಿಳೆಯರು ಭಾರತೀಯ ಭಾಷೆಗಳಲ್ಲಿ ಕಾವ್ಯಗಳನ್ನೂ, ಕವಿತೆ, ಹಾಡುಗಳನ್ನು ಬರೆದು ಪ್ರಸಿದ್ಧರಾದರು.

ಮುಖ್ಯವಾಗಿ ಹದಿನೆಂಟನೆಯ ಶತಮಾನದ ಹೊತ್ತಿಗೆ ಅರಸರಾಗಲೀ, ಪ್ರಜಾನಾಯಕರಾಗಲೀ ಸುಲಭವಾಗಿ ಬದಲಾಯಿಸದಂತಹ ಮೂಢನಂಬಿಕೆಗಳೂ ದುಷ್ಟ ಆಚಾರಗಳೂ ಜನರಲ್ಲಿ ಬೇರೂರಿಬಿಟ್ಟಿದ್ದವು. ಈ ಶತಮಾನದ ಹೊತ್ತಿಗೆ ಮೊಗಲರ ರಾಜ್ಯ ಅಂತ್ಯಗೊಂಡಿದ್ದು, ಹಲವಾರು ರಾಜ್ಯಗಳು ಸ್ವತಂತ್ರಗೊಂಡು, ಅವರಲ್ಲಿ ಐಕ್ಯತೆ ಇರದೇ ಸದಾ ಅಂತಃಕಲಹಗಳಲ್ಲಿ ಮುಳುಗಿದ್ದ ಅರಸರು ಮಹಿಳೆಯರ ಕಡೆಗೆ ಗಮನ ಕೊಡದಾದರು. ಜೊತೆಗೆ ಅವರ ರಕ್ಷಣೆ ಕಠಿಣವೆನಿಸಿದಾಗ ಅರ್ಥವಿಲ್ಲದ ಅತಿಕ್ರೂರ ಸಂಪ್ರದಾಯವನ್ನು ಅವರ ತಲೆಗೆ ಕಟ್ಟಿದರು. ಯುದ್ಧಕಾಲದಲ್ಲಿ ಸೋತ ರಾಜ್ಯಕ್ಕೆ ಸೇರಿದ ಮಹಿಳೆಯರು 'ಜೊಹರ್' ಎಂಬ ಹೆಸರಿನಲ್ಲಿ ಸಾಮೂಹಿಕ ಅಗ್ನಿಪ್ರವೇಶ ಮಾಡುವುದಕ್ಕೆ ಹುರಿದುಂಬಿಸಿದರು. ಈ ಅಮಾನುಷ ಕೃತ್ಯ ಮೊದಲಿಗೆ ರಜಪೂತ ಮಹಿಳೆಯರಿಂದ ಆರಂಭವಾಗಿ ಎಲ್ಲೆಡೆಗೆ ನಡೆಯತೊಡಗಿತು. ಜೊತೆಗೆ ಸತ್ತ ಪತಿಯೊಂದಿಗೆ 'ಸತಿ ಸಹಗಮನ'ವೆಂಬ ಹೆಸರಿನ ಅತಿಕ್ರೂರ ಪದ್ಧತಿ ಮೊದಲಿನಿಂದಲೂ ಇದ್ದು ೧೯ನೆಯ ಶತಮಾನದವರೆಗೂ ಆಚರಣೆಯಲ್ಲಿತ್ತು. ಈ ಅನಿಷ್ಟ ಪದ್ಧತಿಯನ್ನು ರಾಜಾರಾಮ್ ಮೋಹನರಾಯ್, ದ್ವಾರಕಾನಾಥ ಠಾಕೂರರಂತಹ ಹಿರಿಯ ನಾಯಕರು ಮುಂದಾಗಿ ನಿಂತು ಈ ದುರಾಚಾರವನ್ನು ನಿಲ್ಲಿಸಲು ಕಾಯ್ದೆ ಜಾರಿಗೆ ತರಬೇಕೆಂದು ಆಗ ಇದ್ದ ಇಂಗ್ಲಿಷ್ ಪಾಲಕರನ್ನು ಒತ್ತಾಯಿಸಿದರು. ಇದರ ಫಲವಾಗಿ ಲಾರ್ಡ್ ಬೆಂಟಿಂಕನು ೪ನೇ ಡಿಸೆಂಬರ್ ೧೮೨೯ರಲ್ಲಿ 'ಸತಿ ಸಹಗಮನ ನಿಷೇಧ' ಶಾಸನವನ್ನು ಜಾರಿಗೆ ತಂದನು. ಅದೇ ಕಾಲದಲ್ಲಿ ವಿಪರೀತವಾಗಿದ್ದ ಬಹುಪತ್ನೀ ವಿವಾಹ, ಬಾಲ್ಯ ವಿವಾಹ ಪದ್ಧತಿಗಳನ್ನು ನಿರ್ಮೂಲನಗೊಳಿಸಿ, ವಿಧವಾವಿವಾಹ ಕಾನೂನುಬದ್ಧವಾಗಬೇಕೆಂದು ಹಲವಾರು ನಾಯಕರು ಹೋರಾಡಿ ಯಶಸ್ವಿಯಾದರು. ಮಹಿಳೆಯರ ಪರವಾದ ಅನೇಕ ಮಸೂದೆಗಳು ಜಾರಿಗೆ ಬಂದರೂ ಬರಿಯ ಕಾಗದದ ಮೇಲೆ ಉಳಿದವೇ ಹೊರತು ಮಹಿಳೆಯರ ಶೋಷಣೆ ನಿಲ್ಲಲಿಲ್ಲ. ಇಪ್ಪತ್ತನೆಯ ಶತಮಾನದ ಆರಂಭ ಹಾಗೂ ಅದಕ್ಕೆ ಸ್ವಲ್ಪ ಮುಂಚೆ ಆಗುತ್ತ ಬಂದ ಸಾಹಿತ್ಯ ಸೃಷ್ಟಿ ಕ್ರಮೇಣ ಮಧ್ಯಯುಗೀನ ಭಕ್ತಿ ಆಂದೋಳನದಿಂದ ಹಿಂದೆ ಸರಿದು ಸಮಾಜಮುಖಿಯಾಗಿ ಸಮಾಜದ ಶ್ರೇಯಸ್ಸಿನತ್ತ ಹೊರಳಿದ್ದು ಒಂದು ವಿಶೇಷ. ಅದಕ್ಕೆ ಕಾರಣ ದೇಶದಲ್ಲಿದ್ದ ರಾಜಕೀಯ ಪರಿಸ್ಥಿತಿ, ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರಿಗಾಗುತ್ತಿದ್ದ ಅನ್ಯಾಯ ಹಾಗೂ ದುಷ್ಟ ಪದ್ಧತಿಗಳ ಅತಿರೇಕ. ಅಂದಿನ ದಿನಗಳಲ್ಲಿ ಸಮಸ್ತ ಭಾರತದ ಸವಾಲಾಗಿದ್ದ ಸ್ವಾತಂತ್ರ್ಯಾಕಾಂಕ್ಷೆಯ ಅಲೆ ದಟ್ಟವಾಗಿ ದೇಶಾದ್ಯಂತ ಹರಡಿ, ಸೂಕ್ಷ್ಮಸಂವೇದಿಗಳಾದ ಕವಿಗಳನ್ನೂ, ಸಾಹಿತಿಗಳನ್ನೂ ಹೋರಾಟಕ್ಕೆ ಸಜ್ಜುಗೊಳಿಸಿತು. ಜೊತೆಗೆ ಅಂದಿನ ಸಮಾಜದಲ್ಲಿ ವ್ಯಾಪಕವಾಗಿದ್ದ ವರ್ಣಾಶ್ರಮ ಧರ್ಮದ ಕಟ್ಟುಪಾಡುಗಳು, ತಲೆಮಾರುಗಳಿಂದ ಬೇರೂರಿದ್ದ ಸಂಪ್ರದಾಯ ಶರಣತೆ, ಅತಿಯಾದ

ಮೂಢನಂಬಿಕೆಗಳು ಮಹಿಳೆಯರ ಬದುಕನ್ನು ನರಕ ಸದೃಶವನ್ನಾಗಿ ಮಾಡಿದವು. ಜೊತೆಗೆ ಸಮಾಜದ ಕೆಳಸ್ತರದ ಜನರಲ್ಲಿ ಮದ್ಯಪಾನ ಮುಂತಾದ ಕೆಟ್ಟ ಚಟಗಳೊಂದಿಗೆ ಅಸ್ಪೃಶ್ಯತೆಯನ್ನು ತೊಡೆದು ಹಾಕುವತ್ತ ಸಮಾಜ ಸುಧಾರಕರು ಕೈಕೊಂಡ ಪ್ರಯತ್ನ ಸಾಹಿತಿಗಳನ್ನು ಸಾಕಷ್ಟು ಪ್ರಭಾವಿಸಿದ್ದವು.

ಈ ಹಿನ್ನೆಲೆಯಲ್ಲಿ ಭಾರತದ ಇತರ ಭಾಷೆಗಳಂತೆ ಕನ್ನಡ ಸಾಹಿತ್ಯವೂ ರೂಪು-ರೀತಿಗಳೆರಡರಲ್ಲಿಯೂ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ಪಡೆಯಿತು. ಹತ್ತೊಂಬತ್ತನೆಯ ಶತಮಾನದ ಅಂತ್ಯದವರೆಗೂ ಧಾರ್ಮಿಕ ಹಾಗೂ ಅಧ್ಯಾತ್ಮಿಕ ನೆಲೆಯಲ್ಲಿ, ಬಹುತೇಕ ಕಾವ್ಯಪ್ರಕಾರದಲ್ಲಿಯೇ ರಚಿತವಾಗುತ್ತಿದ್ದ ಕನ್ನಡ ಸಾಹಿತ್ಯ ಕಾಲಕ್ರಮೇಣ ಈ ಹೊಸದೃಷ್ಟಿ, ಹೊಸ ಬಗೆಯ ಚಿಂತನೆ, ಆದರ್ಶಗಳನ್ನು ಮೈಗೂಡಿಸಿಕೊಂಡು ಅರಳತೊಡಗಿತು. ಅಂದಿನ ಸಾಹಿತಿಗಳಿಗೆ ದೇಶಪ್ರೇಮ, ದೇಶಭಕ್ತಿ, ಬ್ರಿಟಿಷರನ್ನು ದೇಶದಿಂದ ತೊಲಗಿಸುವತ್ತ ತುಡಿತ, ಸ್ವಾತಂತ್ರ್ಯಾಕಾಂಕ್ಷೆ, ಕುಲ-ಮತ ಭೇದಗಳ ನಿರ್ಮೂಲನೆ. ಇವುಗಳ ಜೊತೆಗೆ ಸ್ತ್ರೀಪರ ಕಾಳಜಿ - ಇವೆಲ್ಲವೂ ಅವರ ಸಾಹಿತ್ಯರಚನೆಗೆ ಪ್ರಮುಖ ವಸ್ತುಗಳಾದವು. ಬಾಲ್ಯವಿವಾಹ, ವಿಷಮ ವಿವಾಹಗಳನ್ನು ಖಂಡಿಸುವುದು, ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡುವುದು, ಸ್ತ್ರೀಯರಿಗಾಗುತ್ತಿದ್ದ ಅನ್ಯಾಯಗಳ ಖಂಡನೆ - ಇವು ಈ ಕಾಲದ ಸಾಹಿತ್ಯ ಸೃಷ್ಟಿಗೆ ಒಂದು ಆಯಾಮವನ್ನೊದಗಿಸಿದವು. ಹೀಗಾಗಿ ಅಂದಿನ ಸಮಾಜಸುಧಾರಣೆಯ ಕ್ರಾಂತಿಯಲ್ಲಿ ಸಾಹಿತ್ಯವೂ ತನ್ನ ಪಾತ್ರವನ್ನು ನಿರ್ವಹಿಸಿತು.

ಈ ಅವಧಿಯಲ್ಲಾದ ಸ್ತ್ರೀ ಸುಧಾರಣಾ ಚಳುವಳಿ ಹಾಗೂ ಇಂಗ್ಲಿಷ್ ಪಾಲಕರು ಶಾಲೆಗಳನ್ನು ಸ್ಥಾಪಿಸಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಕೊಟ್ಟ ಪ್ರೋತ್ಸಾಹದಿಂದಾಗಿ ಹಲವಾರು ಹೆಣ್ಣುಮಕ್ಕಳು ಶಾಲೆಗಳಿಗೆ ಹೋಗಿ ವಿದ್ಯಾವಂತರಾದರು. ಇವರಲ್ಲಿ ಕೆಲವರು ಬರೆಯತೊಡಗಿದರು. ಈ ಲೇಖಕಿಯರಲ್ಲಿ ಎರಡು ವರ್ಗದವರನ್ನು ಕಾಣಬಹುದು. ಪೌರಾಣಿಕ ಆದರ್ಶಗಳನ್ನು ಪ್ರತಿಬಿಂಬಿಸುವ ಭಾರತೀಯ ನಾರಿಯ ಚಿತ್ರಣ ಹಾಗೂ ಅವಳ ಧ್ಯೇಯ-ಕರ್ತವ್ಯಗಳ ಕುರಿತ ಬೋಧನೆ. ಇನ್ನೊಂದು ಕಡೆ ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರಿಗಾಗುತ್ತಿದ್ದ ಅನ್ಯಾಯಗಳ ವಿರುದ್ಧ ದನಿಯ ರಚನೆಗಳು.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನಿಂತು ನಾವು ಹಿಂದಿನ ಶತಮಾನದತ್ತ ಗಮನ ಹರಿಸಿದಾಗ ನಮಗೆ ಮುಖ್ಯವಾಗಿ ಕಾಣುವುದು ಆ ಶತಮಾನದ ವೈಶಿಷ್ಟ್ಯ. ಹಳತು-ಹೊಸತುಗಳನ್ನು ಮೈಗೂಡಿಸಿಕೊಂಡು ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಜೊತೆಗೆ ದಾಪುಗಾಲಿಡುತ್ತ ಬಂದು, ಕಳೆದ ಈ ದೀರ್ಘ ಅವಧಿಯಲ್ಲಿ ಕನ್ನಡ ಸಾಹಿತ್ಯ ಹಲವಾರು ತಿರುವುಗಳನ್ನು ಪಡೆದದ್ದನ್ನು ಕಾಣುತ್ತೇವೆ. ಈ ಪ್ರಮುಖ ಧೋರಣೆಗೆ ಸ್ಪಂದಿಸಿ ಬರೆದ ನಮ್ಮ ಲೇಖಕಿಯರ ಸಾಧನೆಯನ್ನೂ ಕಾಣುತ್ತೇವೆ.

ಇಪ್ಪತ್ತನೆಯ ಶತಮಾನದ ಆರಂಭಿಕ ದಶಕಗಳಲ್ಲಿ ಹಂತ ಹಂತವಾಗಿ ರಚಿತಗೊಂಡ ನವೋದಯ ಸಾಹಿತ್ಯ ಪಾಶ್ಚಾತ್ಯ ಸಾಹಿತ್ಯಗಳ ಪ್ರಭಾವದಿಂದ ಈ ನೆಲದ ಒತ್ತಾಸೆಗಳನ್ನು ಮೈಗೂಡಿಸಿಕೊಂಡು ಹೊಮ್ಮಿದ ಅಭಿವ್ಯಕ್ತಿಯಾಗಿತ್ತು. ಈ ಕಾಲದ ಸಾಹಿತಿಗಳು ಸಮಾಜದ

ಆದರ್ಶವನ್ನೇ ತಮ್ಮ ಆದರ್ಶವನ್ನಾಗಿ ಸ್ವೀಕರಿಸಿ ಬರೆದರು. ಈ ಕಾಲದ ಜನರ ದೇಶಭಕ್ತಿ, ದೇಶಪ್ರೇಮಗಳು ಉಜ್ವಲ ಕನಸುಗಾರಿಕೆಯ ಸ್ತರಕ್ಕೇರಿದ್ದವು. (ಸ್ವಾತಂತ್ರ್ಯ ಬಂದನಂತರ ರಾಷ್ಟ್ರದ ಮನೋಧರ್ಮದಲ್ಲಾದ ಬದಲಾವಣೆ, ರಾಜಕೀಯ ಸ್ಥಿತ್ಯಂತರಗಳಿಂದ ಈ ಕನಸು ಕ್ರಮೇಣ ಕರಗುತ್ತ ಬಂತು.)

ಈ ಅವಧಿಯಲ್ಲಿ ಬರೆದ ನಂಜನಗೂಡಿನ ತಿರುಮಲಾಂಬಾ ಹಾಗೂ ಕಲ್ಯಾಣಮ್ಮನವರಿಂದ ಹಿಡಿದು ಶ್ಯಾಮಲಾ ಬೆಳಗಾವ್‌ಕರ್, ಬೆಳಗೆರೆ ಜಾನಕಮ್ಮ, ಕೊಡಗಿನ ಗೌರಮ್ಮ, ನಂತರ ಬಂದ ತಿರುಮಲೆ ರಾಜಮ್ಮ ಇವರುಗಳು ಸ್ವಾತಂತ್ರ್ಯದ ಕುರಿತ, ಸಮಾಜದ ಕುರಿತ ತಮ್ಮ ನಿರೀಕ್ಷೆಯನ್ನು ಪ್ರಕಟಪಡಿಸುತ್ತಲೇ, ಪ್ರಚಲಿತ ಸಾಮಾಜಿಕ ನಂಬಿಕೆ, ಮೌಲ್ಯಗಳ ಬಗೆಗೆ ಚಿಕಿತ್ಸಕ ದೃಷ್ಟಿಯಿಂದ ನೋಡಿ, ಬಾಲ್ಯವಿವಾಹ, ವಿಷಮ ವಿವಾಹಗಳನ್ನು ಖಂಡಿಸುವ ದನಿ ಎತ್ತಿದರು. ಈ ಸಮಸ್ಯೆಗಳನ್ನೊಳಗೊಂಡ ಕಥೆ, ಕಾದಂಬರಿ, ನಾಟಕ, ಕಾವ್ಯ-ಇತ್ಯಾದಿಗಳನ್ನು ಬರೆದರು. ಅಂದಿನ ಸಮಾಜದ ಆದರ್ಶ ನಂಬಿಕೆಗಳನ್ನು ನಿರಾಕರಿಸಿ, ಬಹುಜನಪರವಾದ ಸಾಮಾಜಿಕ ಬದಲಾವಣೆಗಳನ್ನು ಬಯಸುವ ವೈಚಾರಿಕ ಧೋರಣೆಯ 'ಪ್ರಗತಿಶೀಲ ಸಾಹಿತ್ಯ' ವೆಂಬ ಹೆಸರಿನಲ್ಲಿ, ನವೋದಯ - ನವ್ಯ ಪಂಥಗಳ ನಡುವೆ ಒಂದು ಅಲ್ಪಕಾಲಿಕ ಸಾಹಿತ್ಯ ಪ್ರಕಾರವಾಗಿ ವಿಮರ್ಶಕರ ಗಮನ ಸೆಳೆದದ್ದು ಸಹ ಒಂದು ಮುಖ್ಯ ತಿರುವು.

ನಿಜಕ್ಕೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರ ಮತ್ತು ಸಮಾಜದ ಕೆಳಸ್ತರದ ಜನರ ಬದುಕನ್ನು ಶೋಷಿಸಲ್ಪಟ್ಟವರ ನೆಲೆಯಲ್ಲಿ ತೀವ್ರ ರೀತಿಯಲ್ಲಿ ಗುರುತಿಸಿದ್ದು ಮೊದಲಿಗೆ ಪ್ರಗತಿಶೀಲರಲ್ಲೇ. ಈ ಪ್ರಗತಿಶೀಲ ಸಾಹಿತ್ಯ ಪ್ರಮುಖ ಸಾಹಿತ್ಯ ಚಳುವಳಿಯ ಒಂದು ಭಾಗವಾಗಿ ಗುರುತಿಸಲ್ಪಡದಿದ್ದರೂ ಈ ಅವಧಿಯಲ್ಲಿ ಬರೆಯತೊಡಗಿದ ಲೇಖಕಿಯರ ಬರೆಹಗಳಲ್ಲಿ ಸಾಮಾಜಿಕ ವಿಷಮತೆಯ ಬಗ್ಗೆ ಅಸಮಾಧಾನ, ದ್ವಂದ್ವನೀತಿ, ಸ್ತ್ರೀಯರ ಶೋಷಣೆಯ ಕುರಿತ ತುಡಿತ ಅಭಿವ್ಯಕ್ತಿಗೊಂಡಿವೆ.

ಈ ಅವಧಿಗೆ ಸ್ವಲ್ಪ ಮುಂಚೆ ಬಂದ ಪ್ರಮುಖ ಲೇಖಕಿಯರಲ್ಲಿ ಒಬ್ಬರಾದ ತ್ರಿವೇಣಿ ಅವರೆಗಿನ ಸ್ತ್ರೀಪರ ಕಾಳಜಿಯ ಮುಂದುವರಿಕೆಯಾಗಿ, ಬೆಳವಣಿಗೆಯ ರೀತಿಯಲ್ಲಿ ಬಂದವರೆಂದು ನಾವು ಗಮನಿಸಬೇಕು. ನಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳಲ್ಲಿ ಮಹಿಳೆಯರಿಗಾಗುತ್ತಿದ್ದ ಶೋಷಣೆ, ಹಲವಾರು ಸಮಸ್ಯೆಗಳ ಕುರಿತು ಬಿಚ್ಚುಮನಸ್ಸಿನಿಂದ ಮನೋವೈಜ್ಞಾನಿಕ ದೃಷ್ಟಿಕೋನದಿಂದ ತಮ್ಮ ಕಥೆ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಹೆಣ್ಣಿನ ಬದುಕಿನ ನಿಯಂತ್ರಿತ ಕೇಂದ್ರಗಳಾಗಿರುವ ವಿದ್ಯೆ, ವಿವಾಹ, ಶೀಲ, ಪಾವಿತ್ರ್ಯ ಮುಂತಾದ ಮೌಲ್ಯಗಳ ಬಗೆಗೆ ತ್ರಿವೇಣಿ ತೋರಿದ ಉದಾರವಾದಿ ದೃಷ್ಟಿಕೋನ ಇಂದಿನ ಸ್ತ್ರೀವಾದದ ಬೆಳವಣಿಗೆಗೆ ಪುಷ್ಟಿ ಕೊಟ್ಟಿದೆಯಲ್ಲದೇ, ಚಾರಿತ್ರಿಕ ಮಹತ್ವವನ್ನೂ ಪಡೆದುಕೊಂಡಿದೆ.

ಸುಮಾರಾಗಿ ಈ ಅವಧಿ, ನಂತರ ಬಂದ ಶ್ರೀಮತಿಯರಾದ ವಾಣಿ, ಹೆಚ್.ವಿ. ಸಾವಿತ್ರಮ್ಮ, ಎಂ.ಕೆ. ಇಂದಿರಾ, ಗೀತಾ ಕುಲಕರ್ಣಿ, ಅನುಪಮಾ ನಿರಂಜನ - ಮುಂತಾದವರ

ರಚನೆಗಳಲ್ಲಿ ಸ್ತ್ರೀ-ಪುರುಷ ಸಂಬಂಧಗಳು ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಹೆಚ್ಚಿನ ಜಾಗೃತಿಯನ್ನು ಪ್ರಕಟಿಸುತ್ತವೆ. ಈ ಅವಧಿಯ ಹಲವಾರು ಲೇಖಕಿಯರು ಸ್ತ್ರೀಯರ ಬದುಕನ್ನು ಕೌಟುಂಬಿಕ ನೆಲೆಯಲ್ಲಿ ಸೂಕ್ಷ್ಮ ಸಂವೇದನೆಯೊಂದಿಗೆ ಬರೆಯುತ್ತ ಅಥವಾ ಚಿತ್ರಿಸುತ್ತಲೇ ಸಮಕಾಲೀನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳನ್ನು ಚರ್ಚೆಗೆ ಒಳಪಡಿಸುವ ಯತ್ನ ಮಾಡಿದ್ದು ಕಂಡುಬರುತ್ತದೆ. ಹೆಚ್.ವಿ.ಸಾವಿತ್ರಮ್ಮನವರ ಸೀತೆ-ರಾಮ-ರಾವಣ, ವಿಮುಕ್ತಿ, ಎಂ.ಕೆ. ಇಂದಿರಾರವರ 'ಫಣಿಯಮ್ಮ' ಮುಂತಾದ ಕೃತಿಗಳನ್ನು ಹೆಸರಿಸಬಹುದು.

ಮಹಿಳಾ ವಿಮೋಚನಾ ಚಳುವಳಿಗೆ ತಮ್ಮನ್ನು ಬಹುಬೇಗನೆ ತೆರೆದುಕೊಂಡ ಲೇಖಕಿಯರಲ್ಲಿ ಡಾ| ಅನುಪಮಾ ನಿರಂಜನ ಪ್ರಮುಖರಾಗಿ ಕಾಣುತ್ತಾರೆ. ವರ್ಗ-ಜಾತಿ ಸಂಘರ್ಷಗಳ ಬಗ್ಗೆ ಕಳಕಳಿ ತೋರಿದರೂ ಲಿಂಗಾಧಾರಿತ ಅಸಮಾನತೆ ಮತ್ತು ಸ್ತ್ರೀ ಶೋಷಣೆಯನ್ನೇ ಪ್ರಧಾನವಾಗಿಟ್ಟುಕೊಂಡ ಇವರ ಹಲವಾರು ಕೃತಿಗಳಲ್ಲಿ **ಘೋಷ, ಮುಕ್ತಚಿತ್ರ, ಮಾಧವಿ** ಪ್ರಮುಖವಾದುವು. ಸ್ತ್ರೀವಾದದ ಬಗ್ಗೆ ಒಲವು, ಸ್ತ್ರೀಪರ ಕಾಳಜಿಯನ್ನು ತೀವ್ರ ರೀತಿಯಲ್ಲಿ ಪರಿಗಣಿಸಿದ್ದ ಡಾ. ಚಿ. ನ. ಮಂಗಳಾ ಅವರನ್ನು ಸ್ಮರಿಸದೇ ಇರಲು ಸಾಧ್ಯವೇ ಇಲ್ಲ. ಇವರು ಲೇಖಕಿಯರಿಗಾಗಿ ಮಹಿಳಾ ಅಧ್ಯಯನಕ್ಕಾಗಿ ಮಾಡಿದ ಅನನ್ಯ ಸೇವೆ ಒಂದು ಸಂಸ್ಥೆ ಮಾಡಿದ್ದಕ್ಕಿಂತಲೂ ಹೆಚ್ಚಿನದು, ಈಕೆ ಮಹಿಳಾಪರ ಚಿಂತನೆಗೆ ಪ್ರಚೋದಕ ಶಕ್ತಿಯಾಗಿದ್ದರು.

ಮುಂದೆ ಬಂದ ನವ್ಯಸಾಹಿತ್ಯದ ಧೋರಣೆ, ಹಿಂದಿನ ನವೋದಯ ಸಾಹಿತ್ಯದ ಭಾವುಕ ಲೋಕಕ್ಕೆ ವಿರುದ್ಧವಾಗಿದ್ದು, ರೀತಿಯಲ್ಲಿ ಮನುಷ್ಯನನ್ನು ಶೋಧಿಸುವತ್ತ ಅಂತರ್‌ಮುಖಿ ಯಾಗುತ್ತಲೇ ಮುಂದಿನ ಚಳುವಳಿಗೆ ದಾರಿ ಮಾಡಿಕೊಟ್ಟಿತು. ಇದೊಂದು ವಿಶಿಷ್ಟ ಸಂವೇದನೆಯ ರೂಪದಲ್ಲಿ ಪ್ರಜ್ಞಾಪ್ರವಾಹ ತಂತ್ರದ ಮೂಲಕ ನಿರೂಪಿಸುವ ಕಥಾನಕಗಳಲ್ಲಿ ವೈವಿಧ್ಯತೆ ಇತ್ತು. ಈ ಪಂಥದ ಲೇಖಕಿಯರಲ್ಲಿ ಮೊದಲಿಗೆ ಸಣ್ಣಕತೆಗಳನ್ನು ಬರೆದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಜಲಕ್ಷ್ಮಿ ಎನ್. ರಾವ್, ವೀಣಾ ಶಾಂತೇಶ್ವರ್‌ರಿಂದ ಆರಂಭವಾಗಿ ನಂತರದ ನೇಮಿಚಂದ್ರ ಮುಂತಾದವರ ಕಥೆಗಳ ಮೂಲಕ ಮತ್ತು ಹೆಚ್ಚಿನ ಸಂಖ್ಯೆಯ ಕವಯಿತ್ರಿಯರಿಂದ ನವ್ಯ ಪ್ರಕಾರ ಹುಲುಸಾಯಿತು. ಅನಂತರದ ಕಾಲದಲ್ಲಿ ನವ್ಯದ ಮೋಜು ಕಡಿಮೆಯಾಗಿ ಇದನ್ನು ಮೀರಿಸುವ ಹೊಸರೀತಿಯ ಹೊಸ ಮಾದರಿಯ ಕವಿಗಳ ಮನಸ್ಸೊಂದು ದಲಿತ, ಬಂಡಾಯ ಸಾಹಿತ್ಯವೆಂಬ ಪ್ರಕಾರಗಳಲ್ಲಿ ಅಭಿವ್ಯಕ್ತಿಗೊಳ್ಳ ತೊಡಗಿದ್ದನ್ನು ಕಾಣುತ್ತೇವೆ. ಇದು ಸಹ ಸಾಹಿತ್ಯ ಚರಿತ್ರೆಯಲ್ಲಿ ಬಂದ ಒಂದು ಮುಖ್ಯ ತಿರುವು ಎನ್ನಬಹುದು. ಇದರಲ್ಲಿ ಸಹ ನಿಮಗೆ ಕವಯಿತ್ರಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತಾರೆ. ಈ ಕಾಲದಲ್ಲಿ ಬಂದ ಮುಸ್ಲಿಂ ಸಂವೇದನೆಯ ಕುರಿತ ರಚನೆಗಳೂ ಒಂದು ಪ್ರಮುಖ ಸ್ಥಾನವನ್ನಲಂಕರಿಸುತ್ತವೆ. ಮುಸ್ಲಿಂ ಸಮಾಜದ ಕಟ್ಟುಪಾಡುಗಳಿಂದ ನಲುಗಿ ಹೋಗುತ್ತಿರುವ ಸ್ತ್ರೀ ಸಮುದಾಯದ ಕುರಿತು ಹೆಚ್ಚು ತೀವ್ರವಾದ ಕಾಳಜಿಯಿಂದ ಅಭಿವ್ಯಕ್ತಿಸಿ

ದವರಲ್ಲಿ ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್, ಸಬೀಹಾ, ರಜಿಯಾ ಮುಂತಾದವರು ಪ್ರಮುಖರಾಗಿ ಕಾಣುತ್ತಾರೆ. ಇವರು ಬರೆದ ಕಾದಂಬರಿ, ಕಥೆ, ಕವನಗಳಲ್ಲಿ ಮತದ ಕಟ್ಟುಪಾಡಿಗೆ ಒಳಗಾಗಿ, ಪರದೆಯ ಮುಸುಕಿನೊಳಗೆ ಬೆಂದು ಹೋಗುತ್ತಿರುವ ದುಃಖಿನಿಯರ ದುರ್ಭರ ಜೀವನ ಕಣ್ಣಿಗೆ ಕಟ್ಟುತ್ತದೆ. ಭಾರತದಲ್ಲಿ ಉಳಿದೆಲ್ಲ ಭಾಷೆಗಳಲ್ಲಿ ಪ್ರಕಟಗೊಂಡಂತೆ ಎಪ್ಪತ್ತರ ದಶಕದ ಆರಂಭದಲ್ಲಿಯೇ ಕೇಳಿಸತೊಡಗಿದ ಸ್ತ್ರೀವಾದದ ದನಿ ಸಹ ಇಲ್ಲಿ ನಮಗೆ ಮುಖ್ಯವಾಗುತ್ತದೆ. ಇಲ್ಲಿ ಸಹ ಕವಯಿತ್ರಿಯರ ಸಂಖ್ಯೆಯನ್ನೇ ಹೆಚ್ಚಾಗಿ ಕಾಣುತ್ತೇವೆ.

ಹೀಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೂಡಿಬಂದ ಈ ಎಲ್ಲ ಚಳುವಳಿಗಳು ಅಥವಾ ಸಾಹಿತ್ಯಕ ಧೋರಣೆಗಳು ಮೇಲ್ನೋಟಕ್ಕೆ ಪ್ರತ್ಯೇಕವಾಗಿ ಕಂಡರೂ ಆಧುನಿಕ ಸಾಹಿತ್ಯ ಪರಂಪರೆಯ ಒಟ್ಟು ಸತ್ವವನ್ನೇ ಓದುಗರಿಗೆ ಕೊಟ್ಟಿದೆ. ಒಂದು ಚಳುವಳಿ ಮತ್ತೊಂದರ ಸಂಶೋಧಿತ ಅಥವಾ ಪರಿಷ್ಕೃತ ರೂಪದಂತಿದ್ದರೂ ಅದು ತನ್ನದೇ ಆದ ವಿಶಿಷ್ಟ ಅಗತ್ಯಗಳನ್ನೂ ಸಂದರ್ಭಗಳನ್ನೂ ಸೃಷ್ಟಿಸಿಕೊಂಡಿದೆ.

ಈಗ ಇದಿಷ್ಟೂ ಆಧುನಿಕ ಕನ್ನಡ ಸಾಹಿತ್ಯದ ಹಿನ್ನೆಲೆ. ಈಗ ನಾವು ಈ ಹಿನ್ನೆಲೆಯಲ್ಲಿ ಅಡಗಿರುವ ಸ್ತ್ರೀ ವಿಮೋಚನಾ ಚಳುವಳಿ ಅಥವಾ ಸ್ತ್ರೀವಾದವನ್ನೇ ಪ್ರಮುಖ ಕಾಳಜಿಯಾಗಿರಿಸಿಕೊಂಡು ಬರೆಯುತ್ತಿರುವ ವಿಶ್ವದ ವಿವಿಧ ಭಾಗದ ಲೇಖಕಿಯರ ಕುರಿತು ಒಂದು ಸಂಕ್ಷಿಪ್ತ ಪರಿಚಯ ನೀಡಲು ಬಯಸುತ್ತೇನೆ.

ಜಗತ್ತಿನ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಸ್ತ್ರೀಯರು ಇಂದು ಯಾವುದೋ ಒಂದು ರೂಪದಲ್ಲಿ ಕೌಟುಂಬಿಕ, ಸಾಮಾಜಿಕ, ಆರ್ಥಿಕ, ನೈತಿಕ ಸಮಸ್ಯೆಗಳನ್ನೆದುರಿಸುತ್ತಿದ್ದಾರೆ. ಇಂದು ಸ್ತ್ರೀಯರು ಯಾವುದೇ ದೇಶದಲ್ಲಿದ್ದರೂ, ಅವರ ಸಮಸ್ಯೆಗಳು ಭಿನ್ನ ಭಿನ್ನ ಸ್ವರೂಪದವಾಗಿದ್ದರೂ, ಅವುಗಳ ಸ್ವಭಾವ ಒಂದೇ ಆಗಿರುತ್ತದೆ. ಭೂಗೋಳದ ಮೇಲೆ ಕಣ್ಣೀರು ಸುರಿಸುವ ಸ್ತ್ರೀಯರಿಲ್ಲದ ದೇಶವೇ ಇಲ್ಲ. ಕಣ್ಣುಗಳು ಕಮಲದಷ್ಟಿದ್ದರೂ ಕಾಸಿನಷ್ಟಿದ್ದರೂ ಸುರಿವ ಕಣ್ಣೀರು ಒಂದೇ. ಮೈ ಬಣ್ಣ ಅತಿ ಬಿಳುಪಿನದಾಗಿದ್ದರೂ, ಕಡು ಕಪ್ಪಾಗಿದ್ದರೂ ಸುಡುವ ಬೇಗೆ ಒಂದೇ, ಪಡುವ ಯಾತನೆ ಒಂದೇ ಅಲ್ಲವೆ?

ಯಾವುದೇ ಸಮಸ್ಯೆ, ಅಥವಾ ಹಿಂಸೆ ಹೆಚ್ಚಾಗುತ್ತ ಬಂದು ಅದು ಪರಾಕಾಷ್ಠೆಗೆ ತಲುಪಿದಾಗ ಪ್ರತಿಭಟನೆ ಸಹಜ. ಈ ಎರಡೂ ಒಂದು ಹಂತಕ್ಕೆ ಬಂದಾಗ ಚಳುವಳಿ ಆರಂಭವಾಗುತ್ತದೆ. ಈ ದೃಷ್ಟಿಯಿಂದ ಬಂದ ಚಳುವಳಿ ಫೆಮಿನಿಸ್ಟ್ ಚಳುವಳಿ. ಇದು ಬರವಣಿಗೆಯ ರೂಪದಲ್ಲಿ ಬಂದದ್ದು ೧೭೯೨ರಲ್ಲಿ ಸ್ತ್ರೀಯರ ಹಕ್ಕುಗಳ ಕುರಿತು ಪ್ರಶ್ನಿಸುತ್ತ ಬರೆದ ದಿ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವಿಮೆನ್, (The vindication of the Rights of women) ಎಂಬ ಕೃತಿಯ ಮೂಲಕ. ಇದನ್ನು ಬರೆದವರು ಇಂಗ್ಲೆಂಡಿನ ಮೇರಿ ಉಲ್‌ಸ್ಟೋನ್ ಕ್ರಾಫ್ಟ್ ಎಂಬ ಲೇಖಕಿ. ಇದಕ್ಕೆ ಮುಂಚೆಯೇ ೧೭೮೯ರಲ್ಲಿ ಫ್ರಾನ್ಸ್‌ನಲ್ಲಿ, ೧೮೭೦ರಲ್ಲಿ ರಷ್ಯಾದಲ್ಲಿ, ೧೯೧೧ರಲ್ಲಿ ಚೀನಾದಲ್ಲಿ ಮಹಿಳೆಯರ ಹಕ್ಕುಗಳಿಗಾಗಿ ಹೋರಾಟ

ನಡೆದು, ಸ್ತ್ರೀ ವಿಮೋಚನಾ ಚಳುವಳಿಯ ಅಂಗವಾಗಿ ಹಲವಾರು ಪತ್ರಿಕೆಗಳು, ಪುಸ್ತಕಗಳು ಪ್ರಕಟವಾದವು. ಇವುಗಳಲ್ಲಿ ವಿಭಿನ್ನ ಧೋರಣೆಗಳಿದ್ದು ಅಂದಿನ ರಾಷ್ಟ್ರಗಳ ನಾಯಕರಾಗಿ ಪ್ರಜೆಗಳನ್ನು ಪ್ರಭಾವಿಸಿದ ಕಾರ್ಲ್‌ಮಾರ್ಕ್ಸ್, ಏಂಗಲ್ಸ್ ಎಂ. ಎನ್. ರಾಯ್ ಮುಂತಾದವರ ಸಿದ್ಧಾಂತಗಳ ಆದರ್ಶಗಳನ್ನು ಒಳಗೊಂಡಿವೆ. ಹೀಗಾಗಿ ಸ್ತ್ರೀವಾದಗಳಲ್ಲಿ ಉದಾರವಾದೀ ಸ್ತ್ರೀವಾದ, ಮಾರ್ಕ್ಸಿಸ್ಟ್ ಸ್ತ್ರೀವಾದ, ರ‍್ಯಾಡಿಕಲ್ ಸ್ತ್ರೀವಾದ (Radical Feminism), ಸೋಷಲಿಸ್ಟ್ ಸ್ತ್ರೀವಾದದ ಜೊತೆಗೆ ಧಾರ್ಮಿಕ, ಸಾಂಸ್ಕೃತಿಕ ಹಕ್ಕುಗಳಿಗಾಗಿ ಸ್ತ್ರೀಪರ ಹೋರಾಟ ಹೀಗೆ ವಿವಿಧ ರೀತಿಯ ಸಿದ್ಧಾಂತಗಳೂ ಆದರ್ಶಗಳೂ ವೈಚಾರಿಕ ಧೋರಣೆಗಳೂ ಸ್ತ್ರೀವಾದಕ್ಕೆ ಪುಷ್ಟಿಯನ್ನಿತ್ತಿವೆ.

ಭಾರತದಲ್ಲಿ ತನ್ನ ಜನಾಂಗೀಯರ ನಡುವೆಯೇ ಮೇಲು-ಕೀಳು, ಅಗ್ರ-ದಲಿತ ಎಂಬ ವ್ಯತ್ಯಾಸಗಳು ಪ್ರಬಲವಾಗಿದ್ದರೆ, ಜಗತ್ತಿನ ಬೇರೆಡೆಗಳಲ್ಲಿ ಇಡೀ ಜನಾಂಗವನ್ನೇ ಬೇರೆ ಜನಾಂಗದವರು ದ್ವೇಷಿಸುವ, ಹಿಂಸಿಸುವ, ದಬ್ಬಾಳಿಕೆ, ದೌರ್ಜನ್ಯಗಳಿಗೆ ಒಳಗು ಮಾಡುವ ಹೀನ ಪರಿಸ್ಥಿತಿಯನ್ನು ಹಿಂದಿನಿಂದ ಕಾಣುತ್ತಿದ್ದೇವೆ. ಆಫ್ರಿಕೆಯ ಜನಾಂಗವಾದ ನೀಗ್ರೋಗಳನ್ನು ಬಿಳಿಯರು ನಿಕೃಷ್ಟವಾಗಿ ಕಂಡರೆ, ಯಹೂದ್ಯರನ್ನು ಒಂದು ಕಾಲದಲ್ಲಿ ಇಡೀ ಯುರೋಪ್ ಖಂಡ ದ್ವೇಷಿಸುತ್ತಿತ್ತು. ಜರ್ಮನಿಯಲ್ಲೇ ಹುಟ್ಟಿ ಬೆಳೆದ ಜಗತ್ತಿನ ಖ್ಯಾತ ವಿಜ್ಞಾನಿ ಐನ್‌ಸ್ಟೀನ್ ಯೆಹೂದ್ಯನಾದ್ದರಿಂದ ನಾಜಿಗಳ ಹಿಂಸೆ ತಡೆಯಲಾಗದೇ ಅಮೆರಿಕೆಗೆ ವಲಸೆ ಹೋಗಬೇಕಾಯಿತು. ಎರಡನೇ ಪ್ರಪಂಚ ಯುದ್ಧದಲ್ಲಿ ನಾಜಿಗಳ ಕೈಗೆ ಸಿಗದಂತೆ ಒಂದು ಕಟ್ಟಡದ ಮಹಡಿಯ ಮೇಲೆ ಬಚ್ಚಿಟ್ಟುಕೊಂಡಿದ್ದ ಯಹೂದ್ಯ ಬಾಲಿಕೆ 'ಆ್ಯನೆ' ಬರೆದ ಆ್ಯನೆ ಫ್ರಾಂಕ್ಸ್ ಡೈರಿ ಹಲವಾರು ಮುದ್ರಣಗಳನ್ನು ಕಂಡಿದೆ. ಆ್ಯನೆಯನ್ನು ನಾಜಿಗಳು ಮೃತ್ಯುಶಿಬಿರಕ್ಕೆ ಕರೆದೊಯ್ದಾಗ ಅವಳ ಗೆಳತಿ ಹೆನ್ನಾಪಿಕ್ ಆ ಡೈರಿಯನ್ನು ಕಾಪಾಡಿ ಆ್ಯನೆಯ ತಂದೆಗೆ ಒಪ್ಪಿಸುತ್ತಾಳೆ. ಆ ಕಾಲದಲ್ಲಿ ಯಹೂದ್ಯರು ಪಟ್ಟ ಬವಣೆಗಳು, ಅನುಭವಿಸಿದ ಕಷ್ಟಗಳನ್ನು ಈ ಡೈರಿ ತೆರೆದಿಡುತ್ತದೆ. ಇದರಂತೆಯೇ ಬಿಳಿಯ ಜನಾಂಗದವರಿಂದ ಹೀನವಾಗಿ ಕಾಣಲ್ಪಟ್ಟ, ಅತಿಯಾಗಿ ಶೋಷಿಸಲ್ಪಟ್ಟ ನೀಗ್ರೋ ಜನಾಂಗದ ಪ್ರತಿಭಟನೆಯ ಧ್ವನಿ ಹಲವಾರು ಕೃತಿಗಳ ಮೂಲಕ ಹೊರಹೊಮ್ಮಿರುವುದನ್ನು ಕಾಣುತ್ತೇವೆ. ಕೆಲ ಉದಾಹರಣೆಗಳನ್ನು ನೋಡೋಣ.

೧೯೯೩ರಲ್ಲಿ ನೋಬಲ್ ಪ್ರಶಸ್ತಿ ಪಡೆದ ಟೋನಿ ಮಾರಿಸನ್ ಆಫ್ರೋ-ಅಮೆರಿಕನ್ ಮಹಿಳೆ. ದಿ ಬ್ಲೂಯೆಸ್ಟ್ ಐ, ಬಿಲವಡ್ ಸಾಂಗ್ ಆಫ್ ಸಾಲಮನ್ ಮುಂತಾದ ಕಾದಂಬರಿಗಳನ್ನು ಬರೆದು ನೀಗ್ರೋ ಮಹಿಳೆಯರು ಶೋಷಿಸಲ್ಪಡುವ ರೀತಿಯನ್ನು ಬಗೆಬಗೆಯಾಗಿ ಬಣ್ಣಿಸಿದ್ದಾಳೆ. ಹಾಗೆಯೇ ಟೆಟ್ಸೆ ಡೆಂಗರಾಂಬಾ 'ನರ್ವಸ್ ಕಂಡಿಷನ್ಸ್' (Nervous conditions) ಎಂಬ ತನ್ನ ಕಾದಂಬರಿಯಲ್ಲಿ ಬಿಳಿಯರ ಆಧಿಪತ್ಯದಲ್ಲಿದ್ದ ಆಫ್ರಿಕೆಯ ಪೌರರಾದ ತಂಬೂ ಮತ್ತು ನ್ಯಾಷಾ ಎಂಬ ನೀಗ್ರೋ ಹುಡುಗಿಯರು ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡು ದಿಟ್ಟತನದಿಂದ ಬಾಳಿದ ಬಗೆಯನ್ನು ಬಹು ಚೆನ್ನಾಗಿ ಚಿತ್ರಿಸಿದ್ದಾಳೆ. ಟ್ರಿನಿಡಾಡಿನ ಕಪ್ಪು ಕವಯಿತ್ರಿ ಕ್ಲೇರ್ ಹ್ಯಾರಿಸ್

'Translation into fiction' ಮತ್ತು 'Drawing down daughter' ಎಂಬ ಕಾದಂಬರಿಗಳಲ್ಲಿ ನೀಗ್ರೋ ಜನಾಂಗದ ಮಹಿಳೆಯರು ಬಿಳಿಯರಿಂದ ಶೋಷಣೆಗೊಳಗಾದ ರೀತಿಯನ್ನೂ, ಷಾರ್ಲೆಟ್ ಪರ್ಕಿನ್ಸ್ ಗಿಲ್ಮನ್ ಬರೆದ 'Yellow Wall Paper', ಕೇಟ್ ಮಿಲೆಟ್ ಬರೆದ ಸೆಕ್ಸ್ ಪಾಲಿಟಿಕ್ಸ್ (Sex Politics) ಮುಂತಾದವು, ಹ್ಯಾರಿಯೆಟ್ ಬೀಚರ್‌ಸ್ಟೌ ಬರೆದ ಅಂಕಲ್ ಟಾಮ್ಸ್ ಕ್ಯಾಬಿನ್ (Uncle Tom's Cabin) ಮುಂತಾದುವು ಒಂದು ಇಡೀ ಜನಾಂಗವೇ ಬಿಳಿಯರ ಕೈಗೆ ಸಿಕ್ಕಿ ಹಲವಾರು ಶತಮಾನಗಳವರೆಗೆ ನರಳಿದ ಬಗೆಯನ್ನು ವಿವರಿಸುತ್ತವೆ.

ಕೆಲ ವರುಷಗಳ ಹಿಂದೆ ಸಾರಾ ಜೋನ್ಸ್ ಎಂಬ ಇಪ್ಪತ್ತೇಳು ವರುಷದ ನೀಗ್ರೋ ತರುಣಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಪಂಚದ ಎಂಟು ದೇಶಗಳ ಮಹಿಳೆಯರು ಪಡುತ್ತಿರುವ ಕಷ್ಟಗಳನ್ನೂ ಏಕ ಪಾತ್ರಾಭಿನಯದ ಮೂಲಕ ಪ್ರದರ್ಶಿಸಿದಳು. ಅದನ್ನು ನೋಡುತ್ತಿದ್ದವರ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯಿತು.

ಆಫ್ರೋ-ಅಮೆರಿಕನ್ ಫೆಮಿನಿಸ್ಟ್ ಎಂದು ಹೆಸರಾದ ಆಂಜೆಲಾ ಡೇವಿಸ್ ಪರಿಸರ, ಹಾಗೂ ಮಹಿಳಾ ಪರ ಹೋರಾಟಗಾರ್ತಿಯಾಗಿ ಗುರುತಿಸಲ್ಪಡುತ್ತಾರೆ. ಪ್ರಪಂಚವಿಡೀ ಸುದ್ದಿ ಮಾಡಿದ ಘಾತುಕನೆಂದು ಹೆಸರಾದ ಒಸಾಮಾ ಬಿನ್ ಲಾಡೆನ್‌ನ ಅಣ್ಣನ ಹೆಂಡತಿ ಕಾರ್‌ಮೆಲ್ ಬಿನ್ ಲಾಡೆನ್ ಬರೆದ ಇನ್‌ಸೈಡ್ ದಿ ಕಿಂಗ್‌ಡಮ್ (Inside the Kingdom) ಎಂಬ ಹೆಸರಿನ ಪುಸ್ತಕ ಇತ್ತೀಚೆಗೆ ಪ್ರಕಟವಾಗಿದೆ. ತಂದೆ ಕ್ರಿಶ್ಚಿಯನ್, ತಾಯಿ ಪರ್ಷಿಯನ್ - ಕಾರ್‌ಮೆಲ್ ಈ ದಂಪತಿಗಳ ಹಿರಿಯ ಮಗಳು. ಇವಳು ಪಾಶ್ಚಾತ್ಯ ದೇಶಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಬಂದ ಆಧುನಿಕ ಮನೋಭಾವದ ಯುವಕ ಮಹಮ್ಮದ್ ಬಿನ್‌ಲಾಡೆನ್ ಅಸ್ಲಾಂನನ್ನು ಮದುವೆಯಾಗುತ್ತಾಳೆ. ಕಾರ್‌ಮೆಲ್ ಸೌದಿ ಅರೇಬಿಯಾಕ್ಕೆ ಬಂದು ಅತ್ತೆ ಮನೆಯವರೊಂದಿಗೆ ವಾಸಿಸತೊಡಗುತ್ತಾಳೆ. ಆ ದೇಶದಲ್ಲಿ ಅರ್ಧದಷ್ಟು ಜನಸಂಖ್ಯೆ ಸ್ತ್ರೀಯರದೇ ಆಗಿದ್ದರೂ ಮತದ ಹೆಸರಿನಲ್ಲಿ ಅವರ ಮೆದುಳನ್ನೂ, ಮನಸ್ಸನ್ನೂ ದೇಹವನ್ನೂ ಸ್ವಾತಂತ್ರ್ಯವನ್ನೂ ಅಲ್ಲಿಯ ಜನ ಹೇಗೆ ನಿರ್ನಾಮ ಮಾಡುತ್ತಾರೆ? ಎಂಬುದನ್ನು ಕೃತಿಯು ಪರಿಚಯಿಸುತ್ತದೆ, ಅಲ್ಲಿಯ ಸ್ತ್ರೀಯರಿಗೆ ಸಾಕು ಪ್ರಾಣಿಗಳಿಗಿದ್ದಷ್ಟು ಸ್ವಾತಂತ್ರ್ಯ ಸಹ ಇರುವುದಿಲ್ಲ. ಅಲ್ಲಿಯ ಹೆಂಗಸರಿಗೆ ಮಕ್ಕಳನ್ನು ಹೆರುವುದು ಒಂದೇ ಕೆಲಸ. ಕೊನೆಗೆ ಅವನ್ನು ಸಾಕಲು ಸಹ ಹಕ್ಕು ಇರುವುದಿಲ್ಲ. ಪರದೆಯ ಒಳಗೆ ನಿರಾಳವಾಗಿ ಉಸಿರು ಸಹ ಆಡದಂತೆ ಹೆಣ್ಣು ಹೇಗೆ ವಿಲವಿಲನೆ ಒದ್ದಾಡುತ್ತಾಳೆಂಬುದನ್ನು ಈ ಲೇಖಕಿ ಸತ್ವಪೂರ್ಣವಾಗಿ ಚಿತ್ರಿಸಿದ್ದಾಳೆ.

ಇದರಂತೆಯೇ ಸೌದಿ ಅರೇಬಿಯಾದ ರಾಜಕುಟುಂಬಕ್ಕೆ ಸೇರಿದ ಒಬ್ಬ ಮಹಿಳೆ ಆ ದೇಶದ ಮಹಿಳೆಯರ ದೈನ್ಯ ಸ್ಥಿತಿಯ ಬಗ್ಗೆ, ಮತದ ಹೆಸರಿನಲ್ಲಿ ನಲುಗಿ ಹೋಗುತ್ತಿರುವ ಅವರ ಜೀವನದ ಬಗ್ಗೆ ತಿಳಿಸಲು ಧೈರ್ಯವಿಲ್ಲದೇ ಒಬ್ಬ ಅಮೆರಿಕನ್ ಸ್ನೇಹಿತೆಯ ಕೈಯಲ್ಲಿ ಬರೆಯಿಸಿದ್ದಾಳೆ. ತಾನು ಬರೆದುಕೊಂಡ ಡೈರಿಯನ್ನು ಸುಸಾನ್ ಎಂಬಾಕೆಗೆ ಕೊಟ್ಟು ಬರೆಯಿಸಿದ

ಈ ಕಾದಂಬರಿಯ ಹೆಸರು **ಪ್ರಿನ್ಸೆಸ್**. ಹೆಸರುಗಳನ್ನು ಬದಲಾಯಿಸಿ ಬರೆದ ಈ ಕಾದಂಬರಿ ಸೌದಿ ಅರೇಬಿಯಾದ ಹೆಣ್ಣು ಮಕ್ಕಳ ದುರ್ಭರ ಜೀವನವನ್ನು ಬಣ್ಣಿಸುತ್ತದೆ. ಇಂಗ್ಲಿಷ್‌ನಲ್ಲಿ ರಚಿಸಲ್ಪಟ್ಟ ಪ್ರಿನ್ಸೆಸ್, ಹೆಣ್ಣು ರಾಜಮನೆತನದವಳಾಗಿರಲಿ, ಬಡವಳಾಗಿರಲಿ ಅವಳಿಗೆ ಯಾವ ಸ್ವಾತಂತ್ರ್ಯವೂ ಇಲ್ಲವೆಂಬುದನ್ನು ವಿವಿಧ ರೀತಿಯಲ್ಲಿ ಚಿತ್ರಿಸುತ್ತದೆ.

ಬಡಜನರ ಒಳಿತಿಗಾಗಿ ಅವರ ಹಿತಕ್ಕಾಗಿ ಸಾಮಾಜಿಕ ನ್ಯಾಯವನ್ನು ಒದಗಿಸುವ ದೃಷ್ಟಿಯಿಂದ ಹೋರಾಡಿದ ಅನೇಕ ಮಹಿಳೆಯರು ನಮ್ಮಲ್ಲಿದ್ದಾರೆ. ನರ್ಮದಾ ಆಣೆಕಟ್ಟಿನ ಯೋಜನೆಯನ್ನು ವಿರೋಧಿಸಿದ ಮೇಧಾ ಪಾಟ್ಕರ್, ಸಾಮಾಜಿಕ ಕಳಕಳಿ ತೋರುತ್ತ ಸಾಹಿತ್ಯ ರಚಿಸುತ್ತಿರುವ ಅರುಂಧತಿ ರಾಯ್, ಹೆಣ್ಣು ಮಕ್ಕಳ ಬೆಳವಣಿಗೆಯಲ್ಲಿನ ಭಯ, ಆತಂಕ, ನ್ಯೂನತೆಗಳ ಕುರಿತು ಡಾಕ್ಯುಮೆಂಟರಿ ಚಿತ್ರ ಮಾಡಿ ತೋರಿಸಿದ ಮಧುಶ್ರೀ ದತ್ತಾ, ಮಹಿಳೆಯರ ಸಮಸ್ಯೆಗಳ ಕುರಿತು ತಯಾರಿಸಿದ ಬ್ಲ್ಯಾಕ್, ಫೈರ್ ಮುಂತಾದ ಚಲನಚಿತ್ರಗಳು ಇಂದಿನ ಮಹಿಳೆಯರ ಸ್ಥಿತಿಗತಿಗಳ ಬಗೆಗೆ ಬೆಳಕು ಚೆಲ್ಲುವಂತಿವೆ.

ಭಾರತದಲ್ಲಿ ವಿವಿಧ ಸಾಮಾಜಿಕ, ಆರ್ಥಿಕ ಪರವಾದ ಹೋರಾಟಗಳಲ್ಲಿ ಮಹಿಳೆಯರು ನಿರ್ವಹಿಸಿದ ಪಾತ್ರಗಳ ಕುರಿತು ಇಲೀನಾಸೇನ್ ಬರೆದ **A space within the struggle** ಒಂದು ಉತ್ತಮ ಉದಾಹರಣೆ. ಇದರಲ್ಲಿ ಗಿರಿಜನರ, ಬೆಟ್ಟಗುಡ್ಡಗಳ, ಬುಡಕಟ್ಟಿನ ಸ್ತ್ರೀಯರು ಭೂಮಿರಹಿತ ರೈತರ, ವಿವಿಧ ರೀತಿಯಲ್ಲಿ ಶೋಷಣೆಗೊಳಗಾದ ದಲಿತರ, ಬೆಸ್ತರ, ಕಾರ್ಮಿಕ ಮಹಿಳೆಯರ ಹೋರಾಟಗಳಲ್ಲಿ ಅವರು ವಹಿಸಿದ ಪಾತ್ರದ ಕುರಿತು ತಿಳಿದು ಬರುತ್ತದೆ. ೧೯೭೮-೮೨ರ ಅವಧಿಯಲ್ಲಿ ಭೂಮಿಯ ಹಕ್ಕುಗಳಿಗಾಗಿ, ಉತ್ತರ ಪ್ರದೇಶದಲ್ಲಿ ಕಂಟ್ರಾಕ್ಟರ್‌ಗಳು ಮರಗಳನ್ನು ಕಡಿಯುವುದರ ವಿರುದ್ಧ, ಮುಂಬಯಿಯಲ್ಲಿ ಬೆಲೆಗಳ ನಿಯಂತ್ರಣಕ್ಕಾಗಿ, ಮಹಾರಾಷ್ಟ್ರದಲ್ಲಿ ರೈತರ ಪರವಾಗಿ, ಅಸ್ಸಾಂನಲ್ಲಿ ವಿದೇಶೀಯರ ವಿರುದ್ಧ, ಹಾಗೂ ಬೇರೆ ಬೇರೆ ರಾಜ್ಯ ಹಾಗೂ ಪಟ್ಟಣಗಳಲ್ಲಿ ದಲಿತ, ಮಹಿಳೆಯರ ಸಮಸ್ಯೆಗಳ ಬಗೆಗೆ ಇಲೀನಾಸೇನ್ ಅಂಕಿ ಅಂಶಗಳ ಸಹಿತ ದಾಖಲಿಸಿದ್ದಾಳೆ. ಹಾಗೆಯೇ ಬೊಲಿವಿಯನ್ ಗಣಿ ಕಾರ್ಮಿಕ ಮಹಿಳೆ ದೊಮಿತಿಲಾ ದಿ ಚುಂಗಾರಾ ಬರೆದ ಕಾರ್ಮಿಕ ಮಹಿಳೆಯರ ಬವಣೆಗಳು ಸಹ ಪ್ರಪಂಚದ ಮಹಿಳೆಯರ ಗಮನವನ್ನು ಸೆಳೆದಿದೆ.

ಇವೆಲ್ಲವನ್ನು ಒಟ್ಟಾಗಿ ಗಮನಿಸಿದಾಗ ಸ್ತ್ರೀಪರ ಕಾಳಜಿ ಹಾಗೂ ಸ್ತ್ರೀ ವಿಮೋಚನಾ ಚಳುವಳಿಗೆ ಚಾಲನೆ ಇತ್ತು ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸಿದ ವಿವಿಧ ಅಂಶಗಳಲ್ಲಿ ಮುಖ್ಯವಾದವು-

೧. ಸ್ತ್ರೀ ವಿಮೋಚನೆಗಾಗಿ ಶೋಷಣೆಯ ದನಿ ಎತ್ತಿ ಪುರುಷರ ಸಮನಾದ ಹಕ್ಕುಗಳನ್ನು ಪಡೆಯಲು ವಿವಿಧ ದೇಶಗಳಲ್ಲಿ ವಿವಿಧ ಕಾಲಗಳಲ್ಲಿ ವಿವಿಧ ರೀತಿಯಲ್ಲಿ ನಡೆಸಿದ ಚಳುವಳಿಗಳು.

೨. ಸ್ತ್ರೀ ಪರ ಕಾಳಜಿಯಿಂದ ಸ್ತ್ರೀವಾದವೆಂಬ ಹೆಸರಿನಲ್ಲಿ ಜನರಲ್ಲಿ ಪ್ರಚಾರ ಮಾಡಲು ವಿವಿಧ ವರ್ಗಗಳ ಮಹಿಳೆಯರೇ ಬರೆದ ಸಾಹಿತ್ಯ, ಕಥೆ, ಕಾದಂಬರಿ, ಕವನ, ಪತ್ರಿಕಾ ಲೇಖನ ವರದಿಗಳ, ಪತ್ರಗಳ ರೂಪದಲ್ಲಿ ಬಂದವು.

೩. ಸ್ತ್ರೀಯರು ಪಡುತ್ತಿರುವ ಅನೇಕ ವಿಧವಾದ ಕಷ್ಟಗಳ, ಬಗೆಗೆ ಜನರಲ್ಲಿ ಅರಿವುಂಟು ಮಾಡಲು ಪ್ರದರ್ಶನದ ಮೂಲಕ ಮಾಡಿದ ಪ್ರಯತ್ನ ನಾಟಕ, ಚಲನಚಿತ್ರ ಹಾಗೂ ಡಾಕ್ಯುಮೆಂಟರಿ ರೂಪದಲ್ಲಿ ಬಂದವು.

೪. ಆಗಿಂದಾಗ್ಗೆ ಇಡೀ ಪ್ರಪಂಚದ ಹಲವಾರು ದೇಶಗಳ ಮಹಿಳೆಯರನ್ನು ಸಂಘಟಿಸಿ ಸಭೆ ಸಮ್ಮೇಳನ, ವಿಚಾರಸಂಕಿರಣಗಳನ್ನು ನಡೆಸಿ ವರದಿ ತಯಾರಿಸಿದ್ದು.

೫. ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ವಿಭಾಗವನ್ನು ಆರಂಭಿಸಿ ಮಹಿಳೆಯರ ಸಮಸ್ಯೆಗಳ ಕುರಿತು ವಿಶೇಷವಾಗಿ ಅಧ್ಯಯನ ನಡೆಸುತ್ತಿರುವುದು. ಹೀಗೆ ಬೇರೆ ಬೇರೆ ಪ್ರಯತ್ನಗಳ ಮೂಲಕ ರಾಷ್ಟ್ರದ ಅರ್ಧದಷ್ಟು ಜನಸಂಖ್ಯೆಯಾಗಿರುವ ಸ್ತ್ರೀಯರ ಜೀವನದಲ್ಲಿ ಮಾರ್ಪಾಟು ತರಲು ಪ್ರಯತ್ನಿಸುವ ಮೂಲಕ ಅವರ ಸ್ಥಿತಿಗತಿಗಳು ಉತ್ತಮವಾದೀತೇ ಎಂಬುದರ ಬಗ್ಗೆ ನಾವು ತೀವ್ರವಾಗಿ ಯೋಚಿಸಬೇಕಾಗಿದೆ. ಯೋಚಿಸೋಣ.

◆

## ಆಫ್ರಿಕನ್-ಅಮೆರಿಕನ್ ಮಹಿಳಾ ಕಾವ್ಯ ಅಭಿವ್ಯಕ್ತಿ : ಒಂದು ಅವಲೋಕನ

✍ ಎಂ. ಆರ್. ಕಮಲ

### ವಿಶ್ವ ರಾಜಕೀಯ ಹಿನ್ನೆಲೆ

ಸಾಮ್ರಾಜ್ಯ ವಿಸ್ತರಣೆಯ ಮಹತ್ವಾಕಾಂಕ್ಷೆ, ಅನ್ವೇಷಣಾ ಮನೋಭಾವ, ವಿಶ್ವದ ನಾನಾ ಮೂಲೆಗಳಲ್ಲಿ ಅಡಗಿರುವ ಹೊಸ ಸಂಪನ್ಮೂಲಗಳ ಮೂಲಕ ತಮ್ಮ ರಾಷ್ಟ್ರಗಳ ಖಜಾನೆಯನ್ನು ತುಂಬುವ ಬಯಕೆ, ಆ ಮೂಲಕ ಬದುಕನ್ನು ಸುಖಮಯವಾಗಿಸಿಕೊಳ್ಳುವ ಆಶಯ, ಇದು ಹದಿನೈದರಿಂದ ಹದಿನೆಂಟನೇ ಶತಮಾನದವರೆಗೆ ಯುರೋಪಿಯನ್ನರು ಸಾಹಸಮಯ ಸಾಗರ ಯಾತ್ರೆಗಳನ್ನು ಕೈಗೊಳ್ಳುವ ಹಿಂದಿದ್ದ ಸ್ಥೂಲ ಸಿದ್ಧಾಂತವಾಗಿತ್ತು. ಅದಾಗ ಕಣ್ಣು ಬಿಡುತ್ತಿದ್ದ ಆಧುನಿಕ ತಂತ್ರಜ್ಞಾನ-ಕೈಗಾರಿಕಾ ಕ್ರಾಂತಿಗೆ ನಾಂದಿ ಹಾಡಿತ್ತು. ಕೃಷಿ ಕ್ಷೇತ್ರಗಳಲ್ಲಿ ಸಾಕಷ್ಟು ಪರಿಣತಿ ಹೊಂದಿದ್ದ ಈ ರಾಷ್ಟ್ರಗಳು ಹೊಸ ತಂತ್ರಜ್ಞಾನಕ್ಕೆ ಹೊಂದಬಲ್ಲ ಸಂಪನ್ಮೂಲಗಳನ್ನು ಅರಸಿ ಹೊರಟವು. ಹೊಸ ಖಂಡಗಳಲ್ಲಿನ ಕಚ್ಚಾವಸ್ತುಗಳು ಮತ್ತು ಸಂಪನ್ಮೂಲಗಳ ಅಧ್ಯಯನವನ್ನು ನಡೆಸಿ ಅದಕ್ಕೆ ತಕ್ಕ ತಂತ್ರಗಾರಿಕೆಯನ್ನು ರೂಪಿಸುತ್ತಿದ್ದವು. ಅದಾಗ ಬೆಳಕಿಗೆ ಬಂದಿದ್ದ ವೆಸ್ಟ್ ಇಂಡೀಸ್ ಮತ್ತು ಅಮೆರಿಕಾದ ಸಹಜ ಸಂಪನ್ಮೂಲವೆಂದರೆ ಅಲ್ಲಿನ ಫಲವತ್ತಾದ ಮಣ್ಣಾಗಿತ್ತು. ಈ ನೆಲ ಹತ್ತಿ, ಕಬ್ಬು, ತಂಬಾಕು, ಬಾರ್ಲಿ ಬೆಳೆಗಳಿಗೆ ಹೇಳಿ ಮಾಡಿಸಿದಂತೆ ಕಂಡಿತು. ಯಾವುದೇ ಪರಿಶ್ರಮವಿಲ್ಲದೇ ಜಾಣ್ಮೆಯ ಮೂಲಕ ಸಂಪನ್ಮೂಲವನ್ನು ನಿಭಾಯಿಸುವುದನ್ನು ಕರಗತ ಮಾಡಿಕೊಂಡಿದ್ದ ಯುರೋಪಿಯನ್ನರು ಇಲ್ಲಿನ ಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಳ್ಳುವ ಬಗೆಯನ್ನು ಚಿಂತಿಸಿದರು. ಈ ವಿಚಾರದ ಸರಣಿಗೆ ಕೂಡಿಕೊಂಡಿದ್ದೇ ಗುಲಾಮಿ ವ್ಯಾಪಾರ. ಆಫ್ರಿಕಾ ಖಂಡದಿಂದ ಮಾನವ ವಸ್ತುವನ್ನು ವೆಸ್ಟ್ ಇಂಡೀಸ್, ಅಮೆರಿಕಾ ಖಂಡಗಳಿಗೆ ಸಾಗಿಸಿದರೆ, ಸಹಜ ಸಂಪನ್ಮೂಲವನ್ನು ಬಳಸಿ ಅಪಾರ ಲಾಭದಾಯಕ ಉದ್ಯಮವನ್ನು ನಡೆಸಬಹುದೆಂದು ಈ ವಿಶ್ವ ವ್ಯಾಪಾರಿಗಳು ಬಹು ಬೇಗ ಗ್ರಹಿಸಿದರು.

ಈ ವಿದ್ಯಮಾನವು ಗುಲಾಮ ವ್ಯಾಪಾರಕ್ಕೆ ಒಂದು ವ್ಯವಸ್ಥಿತ ಸ್ವರೂಪವನ್ನು ಒದಗಿಸಿತು. ಕ್ರಮಬದ್ಧವಾಗಿರದಿದ್ದ ಈ ವಹಿವಾಟು ಹದಿನ್ಯೆದನೆಯ ಶತಮಾನದ ಕೊನೆಯ ಭಾಗದಲ್ಲಿ ತ್ರಿಕೋನ ಮಾರ್ಗಗಳಲ್ಲಿ ಕ್ರಮಿಸಲು ಆರಂಭಿಸಿ ನಿರ್ದಿಷ್ಟವಾಯಿತು. ಮೊದಲ ಮಾರ್ಗದಿಂದ ಬರುತ್ತಿದ್ದ ಹಡಗುಗಳು ಯುರೋಪಿನ ಸಿದ್ಧ ಸರಕುಗಳನ್ನು ಹೊತ್ತು ತರುತ್ತಿದ್ದವು. ಅವನ್ನು ಆಫ್ರಿಕಾದಲ್ಲಿ ಮಾರಾಟ ಮಾಡಿದ ಮೇಲೆ, ಮುಂದಿನ ಪ್ರಯಾಣ ಆರಂಭವಾಗುತ್ತಿತ್ತು. ಈ ಜಲಯಾನದ ದಾರಿಯನ್ನು ಮಧ್ಯಮ ಮಾರ್ಗವೆಂದು ಕರೆಯಲಾಗುತ್ತಿತ್ತು. ಆಫ್ರಿಕಾ ಖಂಡದ ವಿವಿಧ ಭಾಗಗಳಿಂದ ಗುಲಾಮರನ್ನು ತುಂಬಿಕೊಂಡ ಹಡಗುಗಳು ಅಟ್ಲಾಂಟಿಕ್ ಸಾಗರವನ್ನು ಹಾದು ವೆಸ್ಟ್ ಇಂಡೀಸ್ ತಲುಪುತ್ತಿದ್ದವು. ಅಲ್ಲಿ ಗುಲಾಮರನ್ನು ಅಪಾರವಾದ ಲಾಭಕ್ಕೆ ಮಾರಾಟ ಮಾಡಿ ವ್ಯಾಪಾರಿಗಳು ಸಕ್ಕರೆ, ಕಾಫಿ, ತಂಬಾಕುಗಳನ್ನು ಕೊಂಡು ಯುರೋಪನ್ನು ಸೇರುತ್ತಿದ್ದರು.

ಇನ್ನೊಂದು ಮಾರ್ಗ ನ್ಯೂ ಇಂಗ್ಲೆಂಡ್‌ನಿಂದ ಪ್ರಾರಂಭವಾಗುತ್ತಿತ್ತು. ಈ ವ್ಯಾಪಾರಿಗಳು ಆಫ್ರಿಕಾದಲ್ಲಿ ಗುಲಾಮರನ್ನು ತುಂಬಿಕೊಂಡು, ವೆಸ್ಟ್ ಇಂಡೀಸ್ ಮತ್ತು ವರ್ಜೀನಿಯಾಗಳಲ್ಲಿ ಅವರನ್ನು ಮಾರಿ ಮದ್ಯಸಾರ ತಯಾರಿಕೆಗೆ ಬೇಕಾದ ಸಕ್ಕರೆ, ಜೇನುಬೆಲ್ಲವನ್ನು ತೆಗೆದುಕೊಂಡು ಹೋಗುತ್ತಿದ್ದರು. ಉತ್ತರ ಅಮೇರಿಕಾ ಮತ್ತು ಯುರೋಪ್ ನಡುವೆ ವಾಣಿಜ್ಯ ವ್ಯವಹಾರಗಳು ನಡೆಯುತ್ತಿದ್ದರೂ ಇಂಗ್ಲಿಶರು ಗುಲಾಮ ವ್ಯಾಪಾರ ಪ್ರಾರಂಭಿಸಿದ್ದು ಕೊಂಚ ತಡವಾಗಿಯೇ. ೧೬೬೩ರಲ್ಲಿ ಕಂಪನಿ ಆಫ್ ರಾಯಲ್ ಅಡ್ವೆಂಚರರ್ಸ್ ಆಫ್ ಇಂಗ್ಲೆಂಡ್‌ಅನ್ನು ಸ್ಥಾಪಿಸಿದರು. ಸ್ಪ್ಯಾನಿಶ್ ಶಾಹಿಗಳು ಯೂಟ್ರೆಕ್ಟ್ ಒಪ್ಪಂದದ ಮೂಲಕ ವ್ಯಾಪಾರದ ಸಂಪೂರ್ಣ ಆಧಿಪತ್ಯವನ್ನು ಇಂಗ್ಲೆಂಡ್‌ಗೆ ಬಿಟ್ಟುಕೊಟ್ಟರು. ವ್ಯಾಪಾರಿಗಳು ಬಹುಪಾಲು ಗುಲಾಮರನ್ನು ಅವರು ವಾಸಿಸುತ್ತಿದ್ದ ತೀರ ಪ್ರದೇಶದ ಮೂಲ ನೆಲೆಗಳಿಂದ ಹಿಡಿದು ತರುತ್ತಿದ್ದರು. ಆಫ್ರಿಕಾದ ಪಶ್ಚಿಮ ತೀರದ ಒಂದು ಭಾಗವಾದ ಗಿನಿ ದಂಡೆಗೆ ವ್ಯಾಪಾರಕ್ಕೆ ಬರುವ ಮುಂಚೆಯೂ ಆಫ್ರಿಕಾದಲ್ಲಿ ತನ್ನದೇ ಆದ ಗುಲಾಮ ಪದ್ಧತಿಯಿತ್ತು. ಬುಡಕಟ್ಟು ಯುದ್ಧಗಳಲ್ಲಿ ಸೆರೆ ಹಿಡಿದವರನ್ನು ಆಫ್ರಿಕಾದ ರಾಜರು ಬಂಧನದಲ್ಲಿರಿಸುತ್ತಿದ್ದರು. ಯುರೋಪಿಯನ್ನರು ಗುಲಾಮ ವ್ಯಾಪಾರವನ್ನು ಪ್ರಾರಂಭಿಸಿದ್ದೇ ತಡ ಈ ಆಫ್ರಿಕನ್ ದೊರೆಗಳು ಸಿಕ್ಕಷ್ಟು ಬಾಚಿಕೊಳ್ಳುವ ತಂತ್ರಕ್ಕೆ ಒಲಿದರು. ಹೆಚ್ಚು ಯುದ್ಧಗಳನ್ನು ಮಾಡಿದರು. ಬರಗಾಲದಲ್ಲಿ ಆಫ್ರಿಕಾದ ಕುಟುಂಬಗಳು ತಮ್ಮನ್ನು ತಾವೇ ಮಾರಾಟ ಮಾಡಿಕೊಳ್ಳುತ್ತಿದ್ದರು. ಬುಡಕಟ್ಟು ರಾಜರು ಈ ಲಾಭದಾಯಕವಾದ ದಂಧೆಯನ್ನು ಅವಲಂಬಿಸಿದ್ದರಿಂದ ಗುಲಾಮ ವ್ಯಾಪಾರ ಕಾನೂನುಬದ್ಧ ವಾಣಿಜ್ಯ ಉದ್ಯಮವಾಯಿತು.

ಮೊದಲು ಗಿನಿ ತೀರದಲ್ಲಿ ಅವರಿಗೆಂದೇ ನಿರ್ಮಿಸಿದ್ದ ಸೆರೆಮನೆಗಳಲ್ಲಿ ಗುಲಾಮರನ್ನು ಕೂಡಿ ಹಾಕುತ್ತಿದ್ದರು. ಮಧ್ಯ ಆಫ್ರಿಕಾದಿಂದ ಬಂದವರು ಸಮುದ್ರ, ಹಡಗು, ಬಿಳಿಯರು, ಅಲೆಗಳನ್ನು ನೋಡಿಯೇ ಬೆಚ್ಚಿ ಬೀಳುತ್ತಿದ್ದರು. ನೀರಿಗೆ ಧುಮುಕಿ, ಕತ್ತನ್ನು ಹಿಸುಕಿಕೊಂಡು ಸಾಯುತ್ತಿದ್ದರು. ವ್ಯಾಪಾರಿಗಳು ಬಂದಾಗ ವೈದ್ಯರು ತಪಾಸಣೆ ಮಾಡಿ ಒಪ್ಪಿಗೆಯಾದವರನ್ನು ಆಯ್ಕೆ ಮಾಡುತ್ತಿದ್ದರು. ಅಂಗೀಕರಿಸಿದ ಗುಲಾಮರ ಎದೆಯ ಮೇಲೆ ಕಾದ ಕಬ್ಬಿಣದಿಂದ ಮುದ್ರೆ

ಒತ್ತಲಾಗುತ್ತಿತ್ತು. ಇಬ್ಬಿಬ್ಬರನ್ನು ಸರಪಳಿಗಳಲ್ಲಿ ಬಂಧಿಸಿ ಸಣ್ಣ ದೋಣಿಗಳಲ್ಲಿ ಹಡಗಿನ ಸಮೀಪ ತರುತ್ತಿದ್ದರು. ಗುಲಾಮರನ್ನು ಹಡಗಿನಲ್ಲಿ ಕೋಣೆಯಲ್ಲಿ ಕೂಡುತ್ತಿದ್ದರು. ಲಾಭದ ಆಸೆಗೆ ಹೆಚ್ಚಿನ ಗುಲಾಮರನ್ನು ವ್ಯಾಪಾರಿಗಳು ತುಂಬಿಕೊಳ್ಳುತ್ತಿದ್ದರು. ಒತ್ತೊತ್ತಾಗಿ ಕುಳಿತುಕೊಳ್ಳ ಬೇಕಾಗುತ್ತಿದ್ದುದರಿಂದ ಕೈಕಾಲುಗಳನ್ನು ಆಡಿಸಲಾಗುತ್ತಿರಲಿಲ್ಲ. ಈ ವ್ಯಾಪಾರಿಗಳು ಕರಿಯ ಹೆಣ್ಣು ಮಕ್ಕಳನ್ನು ಲೈಂಗಿಕವಾಗಿ ಶೋಷಣೆ ಮಾಡುತ್ತಿದ್ದರು. ಮಲ ವಿಸರ್ಜನೆಗೆ ಬಕೀಟುಗಳನ್ನು ನೀಡುತ್ತಿದ್ದರಾದರೂ ಕೈಕಾಲುಗಳನ್ನು ಕಟ್ಟಿ ಹಾಕಿರುತ್ತಿದ್ದರಿಂದ ಸರಿಯಾಗಿ ನಡೆಯಲಾಗದೇ ಗುಲಾಮರು ನಿಂತ ಸ್ಥಳವನ್ನೇ ಮಲಿನಗೊಳಿಸಿಬಿಡುತ್ತಿದ್ದರು. ಕೊಳಕು, ಕಫ, ವಾಸನೆಯಿಂದಾಗಿ ಕೋಣೆಗಳು ಅಸಹನೀಯವಾಗಿರುತ್ತಿದ್ದವು. ಹಸಿವು, ಆಹಾರದ ಕೊರತೆ, ನೀರನ್ನು ಸರಿಯಾಗಿ ವಿತರಿಸದಿರುವುದು ಈ ಎಲ್ಲದರಿಂದ ಸಿಡುಬು, ಕಾಲು ಊದುವುದು, ಆಮಶಂಕೆ, ಸಾಂಕ್ರಾಮಿಕ ರೋಗಗಳಿಗೆ ಗುಲಾಮರು ತುತ್ತಾಗುತ್ತಿದ್ದರು. ಅಟ್ಲಾಂಟಿಕ್ ಸಾಗರದಲ್ಲಿ ಪ್ರಯಾಣದ ನಂತರ ವೆಸ್ಟ್ ಇಂಡೀಸ್, ಉತ್ತರ ಅಮೇರಿಕಾ ಖಂಡದ ವರ್ಜೀನಿಯಾ, ದಕ್ಷಿಣ ಕೆರೊಲಿನಾ ಮುಂತಾದ ಕಡೆ ಗುಲಾಮರನ್ನು ಮಾರಾಟ ಮಾಡಲಾಗುತ್ತಿತ್ತು. ಬೀದಿಯಲ್ಲಿ ಬಲವಂತವಾಗಿ ಮೆರವಣಿಗೆ ಮಾಡಿ, ಕಿಂದರಿ ಬಾರಿಸಿ ಹರಾಜು ಕಟ್ಟೆಯಲ್ಲಿ ನಿಲ್ಲಿಸಲಾಗುತ್ತಿತ್ತು.

ಬೆಳೆಗಾರರು ಇವರನ್ನು ಕೊಂಡು ತೋಟಗಳಲ್ಲಿ ಕೆಲಸ ಮಾಡಿಸುತ್ತಿದ್ದರು. ಒಡೆಯರ ಮನೆಯಿಂದ ಸ್ವಲ್ಪ ದೂರದಲ್ಲಿ ವಾಸ ಮಾಡುತ್ತಿದ್ದ ಇವರ ಜೋಪಡಿಗಳಿಗೆ ಕಿಟಕಿಗಳಿರುತ್ತಿರಲಿಲ್ಲ. ಗಾಳಿ-ಬೆಳಕಿರುತ್ತಿರಲಿಲ್ಲ. ಬೆಳಗ್ಗೆ ಐದರಿಂದ ರಾತ್ರಿ ಹತ್ತು ಗಂಟೆಯವರೆಗೆ ಮನೆಗೆಲಸ, ತೋಟದ ಕೆಲಸ, ಗಾಡಿ ಓಡಿಸುವುದು, ಸಾಮಾನು ತರುವುದು, ಮುಂತಾದವುಗಳನ್ನು ಮಾಡುತ್ತಿದ್ದರು. ಒಡೆಯರು ಸ್ಥಳಾಂತರ ಮಾಡಿದರೆ ಅಗಲಿಕೆ ಅನಿವಾರ್ಯವಾಗುತ್ತಿದ್ದುದರಿಂದ ಕೌಟುಂಬಿಕ ಬಂಧನ ಸಾಧ್ಯವಿರಲಿಲ್ಲ. ಮಕ್ಕಳನ್ನು ಹರಾಜು ಮಾಡುತ್ತಿದ್ದರು. ಗುಲಾಮ ಹೆಣ್ಣು ಮಕ್ಕಳು ಧಣಿಗಳಿಂದ ಅತ್ಯಾಚಾರಕ್ಕೆ ಒಳಗಾಗುತ್ತಿದ್ದರು. ಸಣ್ಣ ತಪ್ಪುಗಳಿಗೂ ಚಾವಟಿಯೇಟು ಬೀಳುತ್ತಿತ್ತು. ಕುರಿ ಕೋಳಿ ಪ್ರಾಣಿಗಳಂತೆ ಗುಲಾಮರನ್ನು ಹರಾಜು ಮಾಡುವುದು ಅತ್ಯಂತ ನೋವಿನ ವಿಷಯವಾಗಿತ್ತು.

ಸಮುದ್ರ ಪ್ರಯಾಣದಲ್ಲಿ ನಾವಿಕರಿಗೆ ಹಾಗೂ ಅನಂತರ ಮಾರಾಟ ಮಾಡಿದ ಒಡೆಯರಿಗೆ ಮಹಿಳೆಯರು ದೈಹಿಕ ಅಗತ್ಯ ತೀರಿಸುವ ಸರಕಾಗಿ ಮತ್ತು ಪುರುಷರಿಗಿಂತ ಹೆಚ್ಚು ಶ್ರಮದ ಕೆಲಸ ಮಾಡುವ ಪರಿಕರವಾಗಿ ಅತ್ಯಂತ ಉಪಯುಕ್ತವಾಗಿದ್ದರು. ಹೀಗೆ ವಿವಿಧ ಆಫ್ರಿಕನ್ ದೇಶಗಳಿಂದ ಅಮೇರಿಕ, ವೆಸ್ಟ್ ಇಂಡೀಸ್ ದ್ವೀಪಗಳಿಗೆ ಹೊತ್ತು ತಂದ ಮಹಿಳೆಯರ ಸಂಖ್ಯೆ ಲಕ್ಷ ಲಕ್ಷ!

ಇದೇ ಬಗೆಯಲ್ಲಿ ನೌಕೆಯಲ್ಲಿ ಹೊತ್ತು ತಂದ ಫಿಲಿಸ್ ವೀಟ್ಲಿ ಎಂಬ ಮುಗ್ಧ ಬಾಲೆ ಇತಿಹಾಸ ಮತ್ತು ಸಾಹಿತ್ಯದಲ್ಲಿ ಮೊಟ್ಟ ಮೊದಲ ಆಫ್ರಿಕನ್ - ಅಮೆರಿಕನ್ ಮಹಿಳಾ ಕವಿ ಎಂದು ಖ್ಯಾತಿ ಪಡೆದಳು. ಈ ಪುಟ್ಟ ಪೋರಿಯನ್ನು ಆಫ್ರಿಕನ್ ಮೂಲದ ತಂದೆ-ತಾಯಿಗಳಿಂದ

ಜೇರ್ಪಡಿಸಿ ಪರಾಜುಕಟ್ಟೆಯಲ್ಲಿ ಮಾರಲಾಗಿತ್ತು. ಇಲ್ಲಿದೆ ಆಕೆಯ ಬದುಕಿನ ಕಹಿ ನೆನಪಿನ ಪಾಥೇಯ.

**ಫಿಲಿಸ್ ವೀಟ್ಲೆ (೧೭೫೪-೧೭೮೪)**

೧೭೬೧ರ ಇಸ್ವಿ. ಬಾಸ್ಟನ್ ನಗರದ ಗುಲಾಮ ಮಾರುಕಟ್ಟೆಗೆ ಏಳು ವರ್ಷದ ಕಪ್ಪು ಬಾಲೆಯನ್ನು ಹರಾಜು ಹಾಕಲು ತರಲಾಗಿತ್ತು. ವಜ್ರದ ಗಣಿಗಳ ತವರಾದ ಆಫ್ರಿಕಾದಿಂದ ಬಂದಿದ್ದ ಈ ಬಾಲೆ ಹರಾಜಾಗಲು ಸಿದ್ಧವಾಗಿ ನಿಂತಿದ್ದ ಇನ್ನೂ ಕೆಲವರೊಂದಿಗೆ ಏನು ನಡೆಯಲಿದೆ ಎಂದು ಕೂಡ ತಿಳಿಯದೇ ಮುಗ್ಧತೆಯಲ್ಲಿ ನಿಂತಿದ್ದಳು. ಆ ಊರಿನ ಶ್ರೀಮಂತೆ ಶ್ರೀಮತಿ ಜಾನ್ ವೀಟ್ಲೆ ಬಳಿ ಅನೇಕ ಗುಲಾಮರಿದ್ದರು. ಆದರೇನು ಎಲ್ಲರೂ ವಯಸ್ಸಾದವರು. ಮನೆಗೆಲಸದಲ್ಲಿ ಚುರುಕಾಗಿರಲಿಲ್ಲ. ಆದ್ದರಿಂದ ಆಕೆ ಹುಡುಗಿಯೊಬ್ಬಳನ್ನು ಕೊಂಡುಕೊಳ್ಳಲು ಮಾರುಕಟ್ಟೆಗೆ ಬಂದಿದ್ದರು. ದಯಾಳುವಾಗಿದ್ದ ಆಕೆಯ ಕಣ್ಣು ಈ ಹುಡುಗಿಯ ಮೇಲೆ ಬಿತ್ತು. ಸಾವಿರಾರು ಮೈಲಿ ಹಡಗಿನಲ್ಲಿ ಪ್ರಯಾಣಿಸಿ ದಣಿದು ನಿಸ್ತೇಜಗೊಂಡಿದ್ದ ಪುಟ್ಟ ಹುಡುಗಿಯನ್ನು ಕಂಡು ಅನುಕಂಪ ಮೂಡಿತು. ಮನೆಗೆ ಕರೆತಂದು ಸ್ನಾನ ಮಾಡಿಸಿ ತಲೆ ಬಾಚಿದಳು. ಆಫ್ರಿಕನ್ ಭಾಷೆಯನ್ನು ಬಿಟ್ಟರೆ ಒಂದೆರಡು ಇಂಗ್ಲಿಶ್ ಪದಗಳು ಮಾತ್ರ ಗೊತ್ತಿದ್ದ ಆ ಪುಟ್ಟ ಹುಡುಗಿಗೆ ಫಿಲಿಸ್ ವೀಟ್ಲೆ ಎಂದು ಹೆಸರಿಟ್ಟರು.ಅವಳಿಗೆ ಓದು-ಬರಹವನ್ನು ಜಾನ್ ವೀಟ್ಲೆಯ ಮಗಳು ಕಲಿಸಿದಳು. ಆಫ್ರಿಕಾದ ಯಾವ ಪ್ರದೇಶದಿಂದ ಬಂದಿರುವೆ ಎನ್ನುವುದು ಆ ಹುಡುಗಿಗೆ ತಿಳಿದಿರಲಿಲ್ಲ. ಅವಳಿಗಿದ್ದ ಒಂದೇ ಒಂದು ನೆನಪೆಂದರೆ ಸೂರ್ಯ ಹುಟ್ಟುವ ಸಮಯದಲ್ಲಿ ಆಕೆಯ ತಾಯಿ ಒಂದು ಚೆಂಬು ನೀರನ್ನು ಹೊರಗೆ ತಂದು ಸುರಿಯುತ್ತಿದ್ದುದು. ಆದ್ದರಿಂದ ಸೂರ್ಯನನ್ನು ಆರಾಧಿಸುವ ಬುಡಕಟ್ಟಿನವರು ಎಂದಷ್ಟೇ ಒಡತಿಗೆ ತಿಳಿದಿದ್ದು, ಬುದ್ಧಿವಂತೆಯಾಗಿದ್ದ ಹುಡುಗಿ ಒಂದು ವರ್ಷದಲ್ಲಿಯೇ ಇಂಗ್ಲಿಶ್ ಮಾತು, ಓದು, ಬರಹವನ್ನು ಕಲಿತುಕೊಂಡಳು. ಬೈಬಲ್ ಕೂಡ ಬಾಯಿಪಾಠವಾಯಿತು.

ಹದಿನಾಲ್ಕನೆಯ ವಯಸ್ಸಿಗೆ ಪದದೊಂದಿಗೆ ಪದ ಜೋಡಿಸುತ್ತ ಕವಿತೆಗಳನ್ನೂ ಬರೆಯಲು ಪ್ರಾರಂಭಿಸಿದಳು. ಭೂಗೋಳ, ಇತಿಹಾಸ, ಇಂಗ್ಲಿಶ್ ಕಾವ್ಯವನ್ನು ಅಭ್ಯಾಸ ಮಾಡಿದಳು. ಲ್ಯಾಟಿನ್ ಭಾಷೆಯನ್ನು ಕಲಿತಳು. ಮೆಸಾಚುಸೆಟ್ಸ್ ರಾಜ್ಯದಲ್ಲಿ ಗುಲಾಮ ಹೆಣ್ಣು ಮಕ್ಕಳ ಕಲಿಕೆಗೆ ಅಡ್ಡಿ ಇರಲಿಲ್ಲ. ಫಿಲಿಸ್‌ಳನ್ನು ಧಾರ್ಮಿಕವಾಗಿ ಬೆಳೆಸಿ ಮಗಳಂತೆ ಜಾನ್ ವೀಟ್ಲೆ ನೋಡಿಕೊಂಡಳು. ಅವಳನ್ನು 'ಮೈ ಫಿಲಿಸ್' ಎಂದೇ ಕರೆಯುತ್ತಿದ್ದಳು. ಶ್ರೀಮಂತರು ಮನೆಗೆ ಆಹ್ವಾನಿಸಿ ಕವನಗಳನ್ನು ಓದಿಸುತ್ತಿದ್ದರು. ಹತ್ತೊಂಬತ್ತನೇ ವಯಸ್ಸಿನಲ್ಲಿ ಫಿಲಿಸ್‌ಳ ಆರೋಗ್ಯ ಕ್ಷೀಣಿಸಿದಾಗ ವೈದ್ಯರು ಸಮುದ್ರ ಯಾನ ಮಾಡಬೇಕೆಂದು ಹೇಳಿದ್ದರು. ಶ್ರೀಮತಿ ಜಾನ್ ವೀಟ್ಲೆಯವರ ಮಗ ಇಂಗ್ಲೆಂಡಿನಲ್ಲಿದ್ದ. ಅವಳನ್ನು ಅಲ್ಲಿಗೆ ಕಳುಹಿಸಲಾಯಿತು. ಅಲ್ಲಿ ಕೆಲವು ಕಾಲವಿದ್ದು ಸಾಕು ತಾಯಿಯ ಅನಾರೋಗ್ಯದ ವಿಷಯ ತಿಳಿದು ಮತ್ತೆ ಅಮೆರಿಕಾಕ್ಕೆ ಫಿಲಿಸ್ ಬಂದಳು. ಆದರೆ ದುರಾದೃಷ್ಟವಶಾತ್ ಸಾಕು ತಾಯಿ ಮತ್ತು ಅವಳ ಮಗಳು ಸತ್ತು ಹೋಗಿ ಫಿಲಿಸ್‌ಗೆ ನೆಲೆಯಿಲ್ಲ

ದಾಯಿತು. ೧೭೭೬ರಲ್ಲಿ ಅಮೆರಿಕನ್ ಕ್ರಾಂತಿ ಯುದ್ಧ ಪ್ರಾರಂಭವಾಯಿತು. ಸ್ನೇಹಿತೆಯ ಮನೆಯಲ್ಲಿ ಕೆಲ ಕಾಲ ಇದ್ದವಳು ತರಕಾರಿ ಅಂಗಡಿಯ ಮಾಲಿಕನೊಬ್ಬನನ್ನು ವಿವಾಹವಾದಳು. ಆತ ಸೋಮಾರಿಯಾಗಿದ್ದ. ಗರ್ವಿಷ್ಠನಾಗಿದ್ದ. ಪೌರುಷಕ್ಕೇನೂ ಕಡಿಮೆ ಇರಲಿಲ್ಲ. ಮೂರು ಮಕ್ಕಳ ತಂದೆಯಾಗಲು ಕುಟುಂಬದ ಬಡತನ ಅಡ್ಡಿಯಾಗಲಿಲ್ಲ.

ಆದರೆ ಮಕ್ಕಳೆಲ್ಲ ಕಾಯಿಲೆಯಿಂದ ತೀರಿಹೋದರು. ಆ ಸಮಯದಲ್ಲಿ ಎಲ್ಲರೂ ಕ್ರಾಂತಿ ಯುದ್ಧದಲ್ಲಿ ಮಕ್ಕಳನ್ನು ಕಳೆದುಕೊಳ್ಳುತ್ತಿದ್ದುದರಿಂದ ಈ ಬಗ್ಗೆ ಯಾರೂ ಗಮನ ಹರಿಸಲಿಲ್ಲ. ಸೂಕ್ಷ್ಮ ಮನಸ್ಸಿನವಳಾಗಿದ್ದ ಫಿಲಿಸ್, ಜಾರ್ಜ್ ವಾಶಿಂಗ್‌ಟನ್ ಬಗ್ಗೆ ಕೆಲವು ಪದ್ಯಗಳನ್ನು ಬರೆದಿದ್ದಳು. ಆತ ಅದಕ್ಕೆ ಉತ್ತರವನ್ನೂ ಬರೆದಿದ್ದ. ಆದರೆ ಕಷ್ಟದ ದಿನಗಳಲ್ಲಿ ಆಫ್ರಿಕನ್ ಕವಯಿತ್ರಿಯ ಬಗ್ಗೆ ಯಾರಿಗೂ ಗಮನವಿರಲಿಲ್ಲ. ಅವಳು ಏಕಾಂಗಿಯಾಗಿ ಕೊಳಕು, ಕೊರೆವ ಕೋಣೆಯೊಂದರಲ್ಲಿ ಬದುಕಿ ಮೂವತ್ತನೆಯ ವಯಸ್ಸಿನಲ್ಲಿ ಯಾರಿಗೂ ಗೊತ್ತಾಗದಂತೆ ಈ ಜಗದ ವ್ಯಾಪಾರವನ್ನು ಮುಗಿಸಿದಳು.

ಆಕೆ ಇಂಗ್ಲೆಂಡಿನಲ್ಲಿದ್ದಾಗ ಪ್ರಕಟಿಸಿದ ಒಂದೇ ಒಂದು ಸಂಕಲನವೆಂದರೆ **ಪೊಯಮ್ಸ್ ಆನ್ ವೇರಿಯಸ್ ಸಬ್ಜೆಕ್ಟ್ಸ್, ರಿಲಿಜಿಯಸ್ ಅಂಡ್ ಮಾರಲ್**. ಬಾಲ್ಯದಲ್ಲಿ ಗುಲಾಮಗಿರಿಯ ನೋವು ಗಾಢವಾಗಿ ತಟ್ಟಿದಿದ್ದರೂ ಕುರಿ, ಕೋಳಿಗಳಂತೆ ಮನುಷ್ಯರನ್ನು ಮಾರುವ ಕ್ರಿಯೆ ಅವಳಿಗೆ ಅಸಹನೀಯವೆನಿಸಿತ್ತು. ಇಂಗ್ಲೆಂಡಿನಲ್ಲಿದ್ದಾಗ ಅವಳ ಬಗ್ಗೆ ದಯಾರ್ದ್ರ ಭಾವ ಹೊಂದಿದ್ದ ಅರ್ಲ್ ಆಫ್ ಡಾರ್ಟ್‌ಮೌತ್‌ನನ್ನು ಉದ್ದೇಶಿಸಿ ಬರೆದಿದ್ದ ಪದ್ಯದಲ್ಲಿ ಈ ಬಗ್ಗೆ ಬರೆದಿದ್ದಳು. ತನ್ನೊಳಗೆ ಸ್ವಾತಂತ್ರ್ಯದ ಬಯಕೆ ಎಂದು ಹುಟ್ಟಿತೋ ತಿಳಿಯದು. ಆದರೆ,

'I, young in life, by seeming cruel fate,
was snatched from arfie's fancied happy state.
what pangs excruciating must molest,
what sorrows labor in my parent's breast!
steeled was that soul, and by no misery moved,
that from a father seized his babe beloved,
such was my case; and can i then pray
others may never feel tyrannic sway

ಹಾಗೆ ತನ್ನನ್ನು ಎಳೆದು ತಂದಾಗ ತಂದೆ-ತಾಯಿಗಳಿಗೆ ಆಗಿರಬಹುದಾದ ನೋವನ್ನು ಊಹಿಸಲಾರೆ ಎನ್ನುತ್ತಾಳೆ. ಇದು ತನ್ನ ದುರಂತ. ಮತ್ತಾರಿಗೂ ಇಂತಹ ದುರಂತ ಸಂಭವಿಸದಿರಲಿ ಎಂದು ಕವಿತೆಯನ್ನು ಕೊನೆಗೊಳಿಸುತ್ತಾಳೆ. ದೈವದ ಬಗ್ಗೆ ಗಾಢವಾದ ಶ್ರದ್ಧೆಯಿಂದ ಫಿಲಿಸ್ ವೀಟ್ಲಿ ದೈವವೇ ತನ್ನನ್ನು ಆಫ್ರಿಕಾದಿಂದ ಎಳೆದು ತಂದಿತೆಂದು ನಂಬಿದ್ದಳು.

ಅಮೆರಿಕ ಒಂದು ರಾಷ್ಟ್ರವಾಗಿ ರೂಪುಗೊಳ್ಳಲು ಪ್ರಯತ್ನಿಸುತ್ತಿದ್ದ ಆ ಕಾಲದಲ್ಲಿ ಕ್ಷೋಭೆ, ದಂಗೆ, ಕ್ರಾಂತಿಯುದ್ಧಗಳೇ ತುಂಬಿ ಹೋಗಿದ್ದವು. ತಲ್ಲಣಗಳಿಂದ ಒಂದು ಸುಸಂಸ್ಕೃತ ವಾತಾವರಣದಲ್ಲಿ ಅರಳಬಹುದಾದ ಸಾಹಿತ್ಯ-ಕಲೆಗಳ ಕುರಿತು ಯೋಚಿಸಲು ಅವಕಾಶವಿಲ್ಲದಂತಹ

ಸನ್ನಿವೇಶವದು. ಆದರೆ ನೆನಪುಗಳೇ ಜೀವಸೆಲೆಯಾದ ಕಪ್ಪು ಜನಾಂಗದ ಸೃಜನಶೀಲ ಮನಸ್ಸುಗಳು ತಮ್ಮ ಹಾಡುಹಸೆ, ನಾದನೃತ್ಯಗಳನ್ನು ಮರೆತಿರಲಿಲ್ಲ. ಶೋಷಣೆ, ನೋವು ಹೆಚ್ಚಾದಂತೆಲ್ಲ ಅವರ ಅಭಿವ್ಯಕ್ತಿ ನಿಶಿತಗೊಳ್ಳುತ್ತಿತ್ತು. ಗುಲಾಮಗಿರಿಯ ಭಯಾನಕತೆಯನ್ನು ಕಣ್ಣಾರೆ ಕಂಡು ಅದರ ಭೀಭತ್ಸ ಮುಖಗಳನ್ನು ಕವಿತೆಗಳಲ್ಲಿ ದಾಖಲಿಸಿದವಳೆಂದರೆ ಫಿಲಿಸ್ ಸಾವಿನ ನಾಲ್ಕು ದಶಕಗಳ ನಂತರ ಹುಟ್ಟಿದ ಫ್ರಾನ್ಸಿಸ್ ಎಲೆನ್ ವ್ಯಾಟ್‌ಕಿನ್ಸ್ ಹಾರ್ಪರ್.

## ಫ್ರಾನ್ಸಿಸ್ ಎಲೆನ್ ವ್ಯಾಟ್‌ಕಿನ್ಸ್ ಹಾರ್ಪರ್ (೧೮೨೫-೧೯೦೦)

ಫ್ರಾನ್ಸಿಸ್ ಎಲೆನ್ ವ್ಯಾಟ್‌ಕಿನ್ಸ್ ಹಾರ್ಪರ್ ಹುಟ್ಟಿದ್ದು ಮೇರಿಲ್ಯಾಂಡ್‌ನ ಬಾಲ್ಟಿಮೋರ್‌ನಲ್ಲಿ. ಆಕೆಯ ತಂದೆ-ತಾಯಿಗಳೇನೂ ಗುಲಾಮರಾಗಿರಲಿಲ್ಲ. ಆದರೆ ಸ್ವತಂತ್ರರೂ ಕೂಡ ಆ ರಾಜ್ಯದಲ್ಲಿದ್ದ ಗುಲಾಮ ಕಾನೂನಿನಡಿ ತತ್ತರಿಸಿ ಹೋಗಿದ್ದರು. ಅವಳ ಬಾಲ್ಯ ಹಿತಕರವಾದ ಅನುಭವಗಳಿಂದ ಕೂಡಿರಲಿಲ್ಲ. ಆ ಕಾಲದಲ್ಲಿ ತನ್ನನ್ನು ತೀವ್ರವಾಗಿ ಕಾಡಿದ ಒಂಟಿತನವನ್ನು 'ನಾನು ತಾಯಿಯ ಪ್ರೀತಿಗಾಗಿ ಹಂಬಲಿಸುತ್ತಿದ್ದೆ. ಸಾವು ಅವಳನ್ನು ಕಿತ್ತುಕೊಂಡಿತು. ಮೂರು ವರ್ಷದ ನನ್ನನ್ನು ಸಂತೈಸುವುದಕ್ಕೆ, ತಲೆ ಸವರುವುದಕ್ಕೆ ಒಬ್ಬ ಸೋದರನೂ ಇರಲಿಲ್ಲ' ಎಂದು ತನ್ನ ಬರವಣಿಗೆಯಲ್ಲಿ ದಾಖಲಿಸಿದ್ದಾಳೆ. ಚಿಕ್ಕಮ್ಮನ ಆಶ್ರಯ ಪಡೆದು ವಿದ್ಯಾಭ್ಯಾಸ ಮಾಡಿ ಹದಿಮೂರನೆಯ ವಯಸ್ಸಿನಿಂದ ಸ್ವಂತ ದುಡಿಮೆಗೆ ತೊಡಗಿದಳು. ಅವಳು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಬರೆದ ಲೇಖನವೊಂದರಿಂದ ಆಕರ್ಷಿತಳಾದ ಆಕೆಯ ಮನೆಗೆಲಸದ ಒಡತಿ ಅವಳ ಪ್ರತಿಭೆಯನ್ನು ಗುರುತಿಸಿದಳು. ಮನೆಗೆಲಸ ಮಾಡುತ್ತಲೇ ದಯಾಳು ಒಡತಿಯ ಔದಾರ್ಯದಿಂದ ಪುಸ್ತಕಗಳನ್ನು ಓದುವ ಅವಕಾಶ ಸಿಕ್ಕಿತು. ಪರಿಶ್ರಮ ಮತ್ತು ಪ್ರತಿಭೆಗಳ ಸಂಗಮದಂತಿದ್ದ ಅವಳ ಗದ್ಯ ಪದ್ಯಗಳ ಪುಟ್ಟ ಸಂಕಲನ **ಆಟಮ್ ಲೀವ್ಸ್** ಪ್ರಕಟವಾಯಿತು. ಅವಳ ಪ್ರತಿಭೆಯನ್ನು ಕಂಡು ಬೆರಗಾದವರು ಈ ಕೃತಿಗಳು ಅವಳು ಬರೆದದ್ದೇ ಇರಲಿಕ್ಕಿಲ್ಲ ಎಂದರು. ಧಾರ್ಮಿಕ ಮನಸ್ಸಿನವಳಾದ್ದರಿಂದ ಅವಳ ಲೇಖನಗಳಲ್ಲಿ ನೈತಿಕತೆಗೆ ಒತ್ತಿರುತ್ತಿತ್ತು. ೧೮೫೦ರಲ್ಲಿ ಬಾಲ್ಟಿಮೋರ್‌ನಿಂದ ಸ್ವತಂತ್ರ ರಾಜ್ಯವನ್ನು ಅರಸಿ ಹೋದವಳು ಒಹಾಯೋದಲ್ಲಿ ನೆಲೆಸಿದಳು. ಕೊಲಂಬಸ್‌ನ ಯೂನಿಯನ್ ವಿಶ್ವವಿದ್ಯಾನಿಲಯದಲ್ಲಿ ಗೃಹ ವಿಜ್ಞಾನ ಬೋಧಿಸಲು ಅವಳನ್ನು ಕರೆಸಿಕೊಳ್ಳಲಾಯಿತು. ವೃತ್ತಿಶಿಕ್ಷಣ ವಿಭಾಗದಲ್ಲಿ ಕೆಲಸ ಮಾಡಿದ ಪುಟ್ಟ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಪಡೆದಳು. ಮೇರಿಲ್ಯಾಂಡ್‌ನ ತನ್ನ ಜನರ ಸ್ಥಿತಿಗತಿಯ ಬಗ್ಗೆ ಆಕೆಗೆ ಅಪಾರವಾದ ನೋವಿತ್ತು.

'ಬಾಲ್ಟಿಮೋರ್‌ನ ಉಳಿದ ಜನರಂತೆ ನಾವೂ ಸಹಜ ಉಸಿರಾಡುತ್ತಿದ್ದೇವೆ ನಿಜ. ಆದರೆ ಯಾರ ಭಾಷೆಯನ್ನು ನಮ್ಮದೆಂದು ಮಾತನಾಡುತ್ತಿದ್ದೇವೋ, ಯಾರ ಧರ್ಮವನ್ನು ನಮ್ಮದೆಂದು ಭಾವಿಸಿ ಬದುಕುತ್ತಿದ್ದೇವೋ, ಯಾರ ರಕ್ತ ನಮ್ಮೊಂದಿಗೆ ಬೆರೆತು ಹೋಗಿದೆಯೋ ಅವರೇ ನಮ್ಮೊಂದಿಗೆ ಅಪರಿಚಿತರಂತೆ ನಡೆದುಕೊಳ್ಳುತ್ತಿದ್ದಾರೆ. ನಾವು ಹುಟ್ಟಿದ ನೆಲದಲ್ಲಿ ಮನೆಯಿಲ್ಲದ ಅನಾಥರು. ನಮ್ಮ ಜನಾಂಗ ಹುಟ್ಟಿದ ದೇಶದಲ್ಲಿ ನಾವು ಅಪರಿಚಿತರು' ಎಂದಿದ್ದಳು.

ಆಕೆ ಲಿಟ್ಲ್ ಯಾರ್ಕ್‌ನಲ್ಲಿ ವಾಸಿಸುತ್ತಿದ್ದಾಗ 'ಅಂಡರ್ ಗ್ರೌಂಡ್ ರೈಲ್ ರೋಡ್' ಮೂಲಕ ತಪ್ಪಿಸಿಕೊಂಡು ಹೋಗುತ್ತಿದ್ದ ಗುಲಾಮರ ಪಾಡನ್ನು ಕಣ್ಣಾರೆ ಕಂಡು ಹೀಗೆ ಹೇಳಿದ್ದಳು.

'ಅಂಡರ್ ಗ್ರೌಂಡ್ ರೈಲ್ ರೋಡ್ ಪ್ರಯಾಣಿಕನೊಬ್ಬನನ್ನು ನೋಡಿದೆ. ತಪ್ಪಿಸಿಕೊಂಡು ಹೋಗುವ ಗುಲಾಮರ ಮೇಲಿನ ಭಯಾನಕ ಕಾನೂನುಗಳ ಅರಿವಿದ್ದೂ ಅವರು ಧೃತಿಗೆಡಲಿಲ್ಲ. ಕತ್ತಲೆಯ ಕೂಪದಲ್ಲಿ ಬಿದ್ದವರ ಬದುಕಿಗೂ ಬೆಳಕು ಹರಿಯುತ್ತಿದೆಯೆನ್ನಿಸುತ್ತಿದೆ. ಈ ಗುಲಾಮರು ನಡೆದಾಡುವ ಆಸ್ತಿಗಳು. ಕಾಮನ ಬಿಲ್ಲಿನ ಕಿರೀಟ ಧರಿಸಿರುವ ನಯಾಗರದಿಂದ ಹಿಡಿದು ಚಿಮ್ಮುವ ಮೆಕ್ಸಿಕನ್ ಕೊಲ್ಲಿಯವರೆಗೆ, ಮರ್ಮರಿಸುವ ಅಟ್ಲಾಂಟಿಕ್ ಸಾಗರದಿಂದ ತಡೆಯಿಲ್ಲದೆ ಭೋರ್ಗರೆಯುವ ಪೆಸಿಫಿಕ್ ಸಾಗರದವರೆಗೆ ಪಲಾಯನ ಮಾಡುವ, ಹಸಿವಿನಿಂದ ಕಂಗೆಟ್ಟ ಬಡ ಗುಲಾಮರಿಗೆ ಅರೆಕ್ಷಣ ನಿಂತು ವಿಶ್ರಮಿಸಲು ಸ್ಥಳವಿಲ್ಲ'

೧೮೫೩ರಲ್ಲಿ ಅವಳ ಹುಟ್ಟು ನೆಲವಾದ ಮೇರಿಲ್ಯಾಂಡ್ ಉತ್ತರದ ಸ್ವತಂತ್ರ ಕರಿಯರು ರಾಜ್ಯವನ್ನು ಪ್ರವೇಶಿಸದಂತೆ ಕಾನೂನು ಮಾಡಿತು. ಹಾಗೆ ಪ್ರವೇಶಿಸಿದವರನ್ನು ಸೆರೆಮನೆಗೆ ತಳ್ಳಿ ಗುಲಾಮರಂತೆ ಮಾರಾಟ ಮಾಡುತ್ತಿದ್ದರು. ಈ ಕಾನೂನು ಉಲ್ಲಂಘಿಸಿ ಹೋದವನೊಬ್ಬ ಹೀಗೆ ಮಾರಾಟವಾಗಿ ಗುಲಾಮ ಬದುಕಿಗೆ ಹೊಂದಿಕೊಳ್ಳಲಾಗದೆ ಸತ್ತೇ ಹೋದನೆಂಬ ವರದಿ ಬಂದಿತ್ತು. ಈ ಬಗ್ಗೆ ಹಾರ್ಪರ್ ಹೀಗೆ ಪ್ರತಿಕ್ರಿಯಿಸಿದ್ದಳು.

'ಅವನ ಗೋರಿಯ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಾನಿನ್ನು ನನ್ನ ಜೀವನವನ್ನು ದಾಸ್ಯ ವಿರೋಧಿ ಕಾರ್ಯಕ್ಕೆ ಸಮರ್ಪಿಸಿಕೊಂಡಿದ್ದೇನೆ. ನನ್ನ ಬುದ್ಧಿ, ಭಾವ, ಚೈತನ್ಯಗಳೆಲ್ಲವನ್ನು ಜನಾಂಗದ ವಿಮುಕ್ತಿಗಾಗಿಯೇ ಬಳಸಬೇಕೆಂದು ಬಹುಶಃ ದೇವರು ನನ್ನ ಹಣೆಯಲ್ಲಿ ಬರೆದಿದ್ದಾನೆ'

ಆ ದಿನಗಳಲ್ಲಿ ಜಾನ್ ಬ್ರೌನ್ ನೀಡಿದ ಹೊಡೆತ ದೇಶದಲ್ಲಿ ಕ್ಷೋಭೆಯನ್ನು ಹುಟ್ಟಿಸಿತ್ತು. ಬ್ರೌನ್ ಮರಣ ದಂಡನೆಯ ದಿನವನ್ನು ಎಣಿಸುತ್ತಿದ್ದಾಗ ಸಂಕಟದಿಂದಿದ್ದ ಆತನ ಪತ್ನಿಯೊಂದಿಗಿದ್ದಳು. ಅವಳ ಆರೋಗ್ಯ ಹದಗೆಡುತ್ತಿತ್ತು. ತಾನು ಬಾಲ್ಯವನ್ನು ಕಳೆದ ನೆಲಕ್ಕಾಗಿ, ಮನೆಗಾಗಿ ಅವಳ ಹೃದಯ ಹಂಬಲಿಸುತ್ತಿತ್ತು. ಆದರೆ ಗುಲಾಮ ರಾಜ್ಯದಲ್ಲಿ ಸಾಯುವುದನ್ನು ಮಾತ್ರ ಇಷ್ಟಪಡಲಿಲ್ಲ.

ಹೂಳಿಬಿಡಿರಿ ನನ್ನನ್ನು ಸ್ವತಂತ್ರ ನೆಲದಲ್ಲಿ ಎನ್ನುವ ತನ್ನದೊಂದು ಪದ್ಯದಲ್ಲಿ

> ನಿಮಗಿಷ್ಟ ಬಂದ ಕಡೆ ನನ್ನ ಗೋರಿಯ ತೋಡಿ
> ಎತ್ತರದ ಪರ್ವತವೋ, ತಗ್ಗು ನೆಲವೋ
> ಘೋರ ದಾಸ್ಯದ ನಾಡನೊಂದುಳಿದು
> ಯಾವ ಮೂಲೆಯಾದರೂ ಸರಿ ಹೂಳಿ ಬಿಡಿ

ಎಂದು ಬರೆದಳು. ಅವಳ ಕವನಗಳು ಅತ್ಯಂತ ಸರಳವಾಗಿದ್ದವು. ಜನರ ಮನಸ್ಸನ್ನು ಕಲಕುವಂತಿದ್ದವು. ಜೀವನದುದ್ದಕ್ಕೂ ಗುಲಾಮಗಿರಿಯ ವಿರುದ್ಧ ಹೋರಾಡಿದ ಹಾರ್ಪರ್ ಗುಲಾಮರ ಹರಾಜಿನ ಘೋರ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ತನ್ನ ಕವನಗಳಲ್ಲಿ ಚಿತ್ರಿಸಿದಳು.

ಶುರು ಹರಾಜು – ಹರೆಯದ ಹುಡುಗಿಯರು
ಬಿಕ್ಕಿ ಬಿಕ್ಕಿ ಅಳುತ್ತಾರೆ
ಹತಾಶೆ, ನೋವು, ನಿರಾಶೆ
ಎದೆಯ ನೋವು ಕಕ್ಕುತ್ತಾರೆ

ತಾಯಂದಿರ ಕಣ್ಣಲ್ಲಿ ಕಂಬನಿಯ ಧಾರೆ
ಕಂದಮ್ಮಗಳ ಕಣ್ಣೆದುರೇ ಕಿತ್ತೊಯ್ದು
ಮಾರುವವರಿಗೆ ಕೇಳುತ್ತಿಲ್ಲ ಕರುಳ ಕೂಗು
ಅವರೀಗ ಚಿನ್ನದ ನಾಣ್ಯ ಎಣಿಸುತ್ತಾರೆ.

ಅಲ್ಲೊಬ್ಬಳು ಪತಿನಿಷ್ಠೆ, ಎದೆ ತುಂಬ
ಪ್ರೀತಿ, ಗಂಡನತ್ತಲೇ ಕಣ್ಣು
ಪಾಪದ ಕರಿಯ ಹೆಣ್ಣು
ಅವಳ ನೋವನ್ನಾರು ಚಿತ್ರಿಸುತ್ತಾರೆ

ದೇವರು ಕರಿಯ ಬಣ್ಣ ಕೊಟ್ಟಿದ್ದೇ,
ಹುಟ್ಟಿದ್ದೇ ಈ ಗಂಡಸರ ತಪ್ಪು
ಈ ಶೋಕಾಚರಣೆಯ ಹಿಂದಿನಲ್ಲಿ
ಕುಸಿಯುತ್ತಿರುವ ಮಕ್ಕಳ ದಂಡು

ಪ್ರೀತಿ ಪಾತ್ರರ ಎಳೆದೊಯ್ಯುತ್ತಾರೆ
ನಿಮಗವರ ನೋವು ತಿಳಿಯುವುದಿಲ್ಲ
ಎದೆಯ ಮೇಲೊಂದು ಹೊರೆ ಹೊತ್ತು
ನಡೆಯುತ್ತಾಳೆ – ಅಳಲು ಅರ್ಥವಾಗುವುದಿಲ್ಲ.

(ಗುಲಾಮರ ಹರಾಜು)

೧೮೬೦ರಲ್ಲಿ ಹಾರ್ಪರ್ ಎಂಬ ವಿಧುರನನ್ನು ಮದುವೆಯಾದಳು. ಮದುವೆಯಾದ ಮೇಲೂ ದಾಸ್ಯ ವಿರೋಧಿ ಮತ್ತು ಸಾಹಿತ್ಯ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ಕಳೆದುಕೊಳ್ಳಲಿಲ್ಲ. ಮದುವೆಯಾದ ನಾಲ್ಕು ವರ್ಷಕ್ಕೇ ಅವಳ ಗಂಡ ಸತ್ತು ಹೋದ. ಅಂತರ್ಯುದ್ಧದ ಸಮಯ. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಉಪನ್ಯಾಸಗಳನ್ನು ನೀಡುವ, ಬರೆಯುವ ಯಾವ ಅವಕಾಶವನ್ನು ತಪ್ಪಿಸಿಕೊಳ್ಳಲಿಲ್ಲ. ಅಬ್ರಹಾಂ ಲಿಂಕನ್ ವಿಮೋಚನಾ ಘೋಷಣೆಯನ್ನು ಮಾಡುವ ಸಮಯದಲ್ಲಿ ಆಕೆಯ ಭಾಷಣಗಳಿಗೆ ಭಾರೀ ಬೇಡಿಕೆಯಿತ್ತು. ಮಾನವ ಹಕ್ಕುಗಳು, ಶಿಕ್ಷಣ ಮತ್ತು ಸಮಾನ ಕಾನೂನಿಗಾಗಿ ಸಮರವನ್ನೇ ಸಾರಿದ್ದಳು. ವಿಷಮ ಪರಿಸ್ಥಿತಿಯಲ್ಲೂ ಧೃತಿಗೆಡದೆ ದಕ್ಷಿಣದ ಯಾತ್ರೆಗಳನ್ನು ಕೈಗೊಂಡಿದ್ದಳು. ನಿರ್ಭಯವಾಗಿ, ಒಂಟಿಯಾಗಿ ದಕ್ಷಿಣದಲ್ಲಿ ಓಡಾಡುವಾಗ ಅವಳು ತನ್ನ ಹೃದಯದ ನಂಬಿಕೆಯನ್ನು ಮಾತ್ರ ನೆಚ್ಚಿಕೊಂಡಂತಿತ್ತು. 'ಮಾತಾಡಿ ಮಾತಾಡಿ ಬಿದ್ದು ಹೋಗುವಷ್ಟು ಬಳಲಿದ್ದೇನೆ. ನನಗಿಂತ ತಿಳಿದವರು ಬೇಕಾದಷ್ಟು

ಜನರಿರಬಹುದು. ನಾನು ನನ್ನ ಅಲ್ಪಜ್ಞಾನದೊಂದಿಗೆ ನನ್ನ ಜನಾಂಗವನ್ನು ಒಂದು ಹೆಜ್ಜೆಯಾದರೂ ಮುನ್ನಡೆಸಲು ಸಾಧ್ಯವೇ ಎಂದು ಯೋಚಿಸುತ್ತಿದ್ದೇನೆ. ನನ್ನ ಜನ ಕುರುಬನಿಲ್ಲದ ಕುರಮಂದೆಯಂತಿದ್ದಾರೆ. ಹೆಣ್ಣು ಮಕ್ಕಳೊಂದಿಗೆ ಖಾಸಗಿಯಾಗಿ ಮಾತನಾಡಬೇಕೆಂದಿದ್ದೇನೆ. ಅವರ ಹೆಣ್ಣು ಮಕ್ಕಳಿಗೆ ಅಭಿವೃದ್ಧಿ ಇತ್ಯಾದಿಗಳ ಬಗ್ಗೆ ತಿಳಿ ಹೇಳಬೇಕಾಗಿದೆ. ಇದೀಗ ನಮ್ಮ ಹೆಣ್ಣು ಮಕ್ಕಳು ತಲೆಯೆತ್ತಿ ನಿಂತು ಅಡುಗೆ ಬೇಯಿಸುವ ಒಲೆಗಳ ಅಡಿಯಲ್ಲಿಯೇ ಪ್ರಗತಿಯ ವೇದಿಕೆಯನ್ನು ನಿರ್ಮಿಸಬೇಕು' ಎಂದಾಕೆ ಬರೆದಿದ್ದಳು.

ಅವಳ ಭಾಷಣ ಅತ್ಯಂತ ಪ್ರಭಾವಯುತವಾಗಿರುತ್ತಿತ್ತು. ಹೃದಯವನ್ನು ಮುಟ್ಟುವಂತಿರುತ್ತಿತ್ತು. ಇನ್ನೂರು ವರ್ಷಗಳ ನೋವು ಅವಳ ಧ್ವನಿಯಲ್ಲಿ ಹೊರಹೊಮ್ಮು ವಂತಿತ್ತು. ಅವಳ ಕಣ್ಣಿನ ಪ್ರತೀ ವೇದನೆಯ ನೋಟ ತನ್ನ ಜನಾಂಗಕ್ಕಾಗಿರುವ ಅನ್ಯಾಯವನ್ನು ಹೇಳುತ್ತಿತ್ತು. ಅವಳ ಮಾತುಗಳನ್ನು ಕೇಳಿದರೆ ತಣ್ಣನೆಯ ಕ್ರೌರ್ಯ ಹರಿದಂತಾಗುತ್ತಿತ್ತು. ಈಕೆಯ ತಾಯಿ ಸತ್ತಾಗ ರಕ್ಷಣೆ ಸಿಗದಿದ್ದರೆ ಬಹುಶಃ ಇವಳೂ ಹರಾಜಿನ ಕಟ್ಟೆಯ ಮೇಲೆ ನಿಲ್ಲಬೇಕಾಗುತ್ತಿತ್ತು. ಈಕೆಯ ಶಕ್ತಿಶಾಲಿ ಚೈತನ್ಯ, ಬುದ್ಧಿಮತ್ತೆ, ಪರಿಶುದ್ಧವಾದ ವ್ಯಕ್ತಿತ್ವ ಎಲ್ಲವೂ ಹರಾಜಾಗಿ ಹೋಗುತ್ತಿತ್ತು.

ಅವಳ ಕೌಶಲವನ್ನು ಆಕೆ ಪ್ರಕಟಿಸಿರುವ ಪುಸ್ತಕಗಳಾದ ಮೋಸಿಸ್ ದಿ ಸ್ಟೋರಿ ಆಫ್ ದಿ ನೈಲ್, ದಿ ಡೈಯಿಂಗ್ ಬಾಂಡ್ಸ್‌ಮನ್, ಎಲಿಸಾ ಹ್ಯಾರಿಸ್ ಕ್ರಾಸಿಂಗ್ ದಿ ಐಸ್ ಮುಂತಾದ ಕೃತಿಗಳಲ್ಲಿ ನೋಡಬಹುದು.

ಅವಳ ಪ್ರಸಿದ್ಧ ಪ್ರಬಂಧ ಅರಿವುಳ್ಳ ತಾಯ್ತನ ಅಥವಾ ಎನ್‌ಲೈಟನ್ಡ್ ಮದರ್‌ಹುಡ್ ನಲ್ಲಿ ಹೀಗೆ ಹೇಳುತ್ತಾಳೆ – 'ನಮ್ಮ ಜನಾಂಗದ ತಾಯಂದಿರು ರಚನಾತ್ಮಕ ಕೆಲಸಗಳಲ್ಲಿ ತೊಡಗಿಕೊಳ್ಳಬೇಕು. ಮುರಿದ ಮನೆ, ಪಾಳು ಬಿದ್ದ ಜಾಗಗಳಲ್ಲಿ ಚಿಂತನೆ ಮತ್ತು ಕ್ರಿಯಾಶೀಲತೆಯ ಅಡಿಪಾಯದೊಂದಿಗೆ ಕಟ್ಟಡಗಳನ್ನು ಕಟ್ಟಬೇಕು. ಎಷ್ಟೋ ಜನಾಂಗಗಳೇ ನಾಶವಾಗಿವೆ. ಆದರೆ ಇಂದು ಜಗತ್ತು ಜಗಳಗಂಟತನ, ಸೊಕ್ಕು, ಸರ್ವಾಧಿಕಾರಿ ಪ್ರವೃತ್ತಿಯ ಆಚೆಗಿರುವ ಮತ್ತೇನನ್ನೋ ಬಯಸುತ್ತಿದೆ. ಪ್ರೇಮ ತುಂಬಿದ, ಶಾಂತ, ಪ್ರಾಮಾಣಿಕ, ಗಟ್ಟಿ ವ್ಯಕ್ತಿತ್ವವನ್ನು ರೂಪಿಸಬಲ್ಲ ತಾಯಂದಿರು ಬೇಕಾಗಿದ್ದಾರೆ. ಅವರು ಮಾತ್ರ ಜನಾಂಗವನ್ನು ಮೇಲೆತ್ತಬಲ್ಲರು. ತಮ್ಮ ಪ್ರಾಮಾಣಿಕ ಬದುಕಿನಿಂದ, ಕೋಮಲ ಹೃದಯದಿಂದ, ಬೌದ್ಧಿಕತೆಯಿಂದ ಮನೆಯನ್ನು ಬೆಳಗಬಲ್ಲರು. ಇಂದು ಯಾವ ಜನಾಂಗವೂ ಅರಿವುಳ್ಳ ತಾಯ್ತನವನ್ನು ನಿರಾಕರಿಸುವಂತಿಲ್ಲ. ಶಾಲಾ ಕಾಲೇಜುಗಳಲ್ಲಿ ಮಕ್ಕಳು ಪ್ರಾಚೀನ ಮತ್ತು ಆಧುನಿಕ ವಿಚಾರಗಳನ್ನು ತಿಳಿಯಬಹುದು. ಆದರೆ ಮನೆಯ ತಂಪು ನೆರಳಿನಲ್ಲಿ ಮಕ್ಕಳು ವಿಜ್ಞಾನದಲ್ಲಿಯೇ ಅತ್ಯುತ್ತಮವಾದ ಪ್ರಾಮಾಣಿಕ ಬದುಕಿನ ವಿಜ್ಞಾನವನ್ನು ಅರಿಯಬೇಕು. ಬದುಕಿನ ಕಗ್ಗತ್ತಲ ಕಣಿವೆಯ ನಡೆದಾಟದಲ್ಲಿ, ಸಾವಿನ ನೆರಳಿನಲ್ಲೂ ಪ್ರಾಮಾಣಿಕ ಬದುಕು ಬೆಳಕನ್ನು ಚೆಲ್ಲಿ ಭಾರವಾದ ಎದೆಯನ್ನು ಹಗುರಾಗಿಸಬಲ್ಲುದು'

ಹಾರ್ಪರ್ ಬದುಕಿದ್ದು, ಹೋರಾಟ ಮಾಡಿದ್ದು, ಹಾಡು ಕಟ್ಟಿದ್ದು ತನ್ನ ಜನಾಂಗದವರಿಗಾಗಿ; ಅವರ ವಿಮುಕ್ತಿಗಾಗಿ. ಹಾಗೆಂದ ಮಾತ್ರಕ್ಕೆ ಅವಳೆಂದೂ ಹಿಂಸೆಯನ್ನು ಪ್ರತಿಪಾದಿಸಲಿಲ್ಲ. ಅವಳ ಧೋರಣೆ, ನಿಲುವು **ಹಾಡು ಕಟ್ಟುವೆ ನಾನು ಜನರಿಗಾಗಿ** ಕವಿತೆಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ.

**ಹಾಡು ಕಟ್ಟುವೆ ನಾನು ಜನರಿಗಾಗಿ**
**ಹಾಡು ಕಟ್ಟುವೆ ನಾನು ಜನರಿಗಾಗಿ**
**ಹಿರಿಯರೇ ಇರಲಿ, ಕಿರಿಯರಿರಲಿ**
**ಎಲ್ಲೇ ಹಾಡಿದರೂ ಹೇಗೆ ಹಾಡಿದರೂ**
**ಮನವ ಕಲಕಲಿ ಅದು ಕದನದಂತೆ**

**ಕತ್ತಿ ಕುದುಗೋಲುಗಳ ಕಾಳಗಕ್ಕಲ್ಲ**
**ಕಚ್ಚಾಟ, ಕೊಲೆಗಾಗಿ ಮೊದಲೇ ಅಲ್ಲ**
**ಜನರ ಎದೆಯೊಳಗೆ ಪುಳಕ ಹರಿಯುವಂತೆ**
**ಜೀವ ಸಮೃದ್ಧ ಭಾವ ಮೂಡುವಂತೆ**

**ಸೋತು ಸೊರಗಿದೆ ಇಂದು ಧರೆಯು**
**ಬೇಕು ಇಲ್ಲೀಗ ಶುದ್ಧ, ಶಕ್ತಿಗೀತೆ**
**ಆದ ಗಾಯಗಳು ಮಾಯುವಂತೆ**
**ವೇದನೆಯ ಅಪಸ್ವರವು ಮೂಡದಂತೆ**

**ಯುದ್ಧ, ಕೊಲೆಗಳು ನಿಲ್ಲುವಂತೆ**
**ನೊಂದ ನೋವನು ಶಮನಗೊಳಿಸುವಂತೆ**
**ಎಲ್ಲ ಮನುಜರ ಹೃದಯ ಮೆದುವಾಗಿ**
**ಶಾಂತಿ ಮಂತ್ರವ ವಿಶ್ವ ಪಠಿಸುವಂತೆ**

### ಹರ್ಲೆಮ್ ನವೋದಯ ಕಾಲ

೧೯೧೯ರಲ್ಲಿ ಮೊದಲ ಮಹಾಯುದ್ಧ ಕೊನೆಗೊಂಡಾಗ ಎಲ್ಲೆಡೆಯು ಒಂದು ಬಗೆಯ ಮಂಕು ಆವರಿಸಿತ್ತು. ಆಫ್ರಿಕನ್ - ಅಮೆರಿಕನ್ ಹೆಣ್ಣು ಮಕ್ಕಳಿಗೆ ಮಾತ್ರ ಇದು ಸವಾಲಿನ ಸಮಯವಾಗಿತ್ತು. ಈ ಹೆಣ್ಣು ಮಕ್ಕಳಿಗೆ ತಮ್ಮ ಅರಿವನ್ನು ವಿಸ್ತರಿಸಿಕೊಳ್ಳುವ, ಹೊಸ ಭರವಸೆಗಳನ್ನು ತುಂಬಿಕೊಳ್ಳುವ ಅನಿವಾರ್ಯತೆಯಿತ್ತು.

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಆಫ್ರಿಕನ್-ಅಮೆರಿಕನ್ ಹೆಣ್ಣು ಮಕ್ಕಳು ಸಾಹಿತ್ಯಾಭಿವ್ಯಕ್ತಿಯಲ್ಲಿ ತೊಡಗಿಕೊಂಡಾಗ ಅವರು ಆಯ್ದುಕೊಂಡಿದ್ದು ಕಾವ್ಯ ಪ್ರಕಾರವನ್ನು. ಭಾವುಕ ಜನಾಂಗವಾದ್ದರಿಂದ ಈ ಆಯ್ಕೆ ಅತ್ಯಂತ ಸಹಜವಾಗಿತ್ತು. ಆ ಕಾಲದ ಪ್ರಮುಖ ಕಪ್ಪು ಪತ್ರಿಕೆಗಳಾದ **ಕ್ರೈಸಿಸ್** ಮತ್ತು ಅಪರ್ಚುನಿಟಿ ಇವರ ಕಾವ್ಯಾಭಿವ್ಯಕ್ತಿಗೆ ವೇದಿಕೆಯನ್ನು

ಒದಗಿಸಿಕೊಟ್ಟಿತು. ಈ ಪತ್ರಿಕೆಗಳು ಜನಾಂಗಭೇದವನ್ನೇ ಪ್ರಮುಖ ಚರ್ಚೆಯ ವಿಷಯವನ್ನಾಗಿ ಮಾಡಿಕೊಂಡಿದ್ದವು. ಹೆಣ್ಣು ಮಕ್ಕಳ ಕಾವ್ಯದಲ್ಲಿ ನವ ನೀಗ್ರೋ ಭಾವನೆಗಳು ವ್ಯಕ್ತವಾಗುತ್ತಿದ್ದವು. ಕವಿಯಾದವರು ಕಪ್ಪು ಜನಾಂಗವೊಂದಿಗೆ ಗುರುತಿಸಿಕೊಳ್ಳುವುದು, ವರ್ಣಭೇದದ ಕುರಿತು ಆಕ್ರೋಶ, ಶೋಷಣೆಯ ವಿರುದ್ಧ ಧ್ವನಿ, ಬಿಳಿಯ ಸಂಸ್ಕೃತಿ ಮತ್ತು ಅದರ ಸಾರ್ವಭೌಮತ್ವದ ತಿರಸ್ಕಾರ ಮತ್ತು ಅಗೋಚರವಾಗಿದ್ದ ತನ್ನ ಪರಂಪರೆಯ ಪುನಃ ನಿರ್ಮಾಣ ನವ ನೀಗ್ರೋ ಸಾಹಿತ್ಯದ ಭಾವನೆಗಳಾಗಿದ್ದವು.

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಕಪ್ಪು ಜನರ ಮೇಲೆ ಹಿಂಸೆ ಮತ್ತು ಕ್ರೌರ್ಯ ಅತಿರೇಕಕ್ಕೆ ಹೋಯಿತು. ಸುಮಾರು ಇಪ್ಪತ್ತೈದು ನಗರಗಳಲ್ಲಿ ಕಪ್ಪು ಜನರ ಮೇಲೆ ದಾಳಿ ನಡೆಯಿತು. ಕ್ಯು ಕ್ಲಕ್ಸ್ ಕ್ಲ್ಯಾನ್ ಎಂಬ ಗುಂಪು ಹಿಂಸಾತ್ಮಕ ಚಟುವಟಿಕೆಗಳಲ್ಲಿ ಭಾಗಿಯಾಗಿತ್ತು. ಕಾನೂನಿಗೆ ವಿರುದ್ಧವಾಗಿ ಕಪ್ಪು ಜನರನ್ನು ಗಲ್ಲಿಗೇರಿಸಲಾಗುತ್ತಿತ್ತು. ಬೌದ್ಧಿಕ ಸಾಮರ್ಥ್ಯವಿಲ್ಲದ ಜನಾಂಗವೆಂದು ಕಪ್ಪು ಜನರನ್ನು ಬಿಂಬಿಸಲಾಗುತ್ತಿತ್ತು. ಸಾರ್ವಜನಿಕ ಸೌಲಭ್ಯಗಳ ವಿಷಯದಲ್ಲಿ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳಲಾಗುತ್ತಿತ್ತು. ಮತದಾನದ ಹಕ್ಕು ಇರಲಿಲ್ಲ. ಕಲಿಕೆಗೆ ಸಮಾನ ಅವಕಾಶವಿರಲಿಲ್ಲ. ಕಲಿಸಲು ಸರಿಯಾದ ಶಿಕ್ಷಕರೂ ಇರಲಿಲ್ಲ. ನಂಬಬಹುದಾಗಿದ್ದ ದಾದಿಗಳು, ಡಾಕ್ಟರ್‌ಗಳು, ವಕೀಲರೂ ಇರಲಿಲ್ಲ. ಹೆಚ್ಚಿನ ಹೆಣ್ಣು ಮಕ್ಕಳು ಶಿಕ್ಷಣ ವಿದೂರವಾಗಿ ಹಳ್ಳಿಯಲ್ಲಿ ಬದುಕುತ್ತಿದ್ದರು. ನಗರವು ಅವರಲ್ಲಿ 'ಪರಕೀಯ' ಭಾವನೆ ಮೂಡಿಸಿತ್ತು. ಕಪ್ಪು ಜನರು ಒಗ್ಗಟ್ಟಾಗಿ ಚಳವಳಿಯೊಂದನ್ನು ರೂಪಿಸುವುದಕ್ಕೆ ಹದವಾದ ವಾತಾವರಣ ನಿರ್ಮಾಣವಾಗಿತ್ತು. ಆದರೆ ಈ ಹೆಣ್ಣು ಮಕ್ಕಳು ವೈಯಕ್ತಿಕವಾಗಿ ಪ್ರತ್ಯೇಕತೆಯನ್ನು ವಿರೋಧಿಸುತ್ತಿದ್ದರಾದರೂ ಕಾವ್ಯದಲ್ಲಿ ಇದು ಅಭಿವ್ಯಕ್ತಿ ಪಡೆದಿದ್ದುದು ಕಡಿಮೆಯೆಂದೇ ಹೇಳಬಹುದು. ಸುಮಾರು ೧೯೧೮ರಿಂದ ೧೯೩೧ರ ವರೆಗಿನ ಕಾಲವನ್ನು ಆಫ್ರಿಕನ್ - ಅಮೆರಿಕನ್ ಸಾಹಿತ್ಯದಲ್ಲಿ 'ಹರ್ಲೆಮ್ ರೆನೈಸಾನ್ಸ್' ಎಂದು ಕರೆಯುತ್ತಾರೆ.

ಹರ್ಲೆಮ್ ನ್ಯೂಯಾರ್ಕ್ ನಗರದ ಒಂದು ಭಾಗವಾಗಿದ್ದ ಪ್ರದೇಶ. ೧೯೬೦ರ ದಶಕದಲ್ಲಿ ಪ್ರಮುಖ ಮಹಿಳಾ ಕವಿಗಳಾಗಿದ್ದ ಗ್ವಾಂಡೆಲಿನ್ ಬ್ರೂಕ್ಸ್, ನಿಕ್ಕಿ ಗಿವಾನಿ, ಸೋನಿಯಾ ಸ್ಯಾಂಕೆಸ್, ಜೂನ್ ಜೋರ್ಡಾನ್ ಮುಂತಾದವರು ತಮ್ಮ 'ಕಪ್ಪುತನ'ವನ್ನು ಬೀದಿ ಬೀದಿಗಳಲ್ಲಿ, ಬಾರ್‌ಗಳಲ್ಲಿ, ಲೇಖನಗಳಲ್ಲಿ, ಕಾಲೇಜು ಕ್ಯಾಂಪಸ್ಸುಗಳಲ್ಲಿ ಪ್ರದರ್ಶನ ಮಾಡುತ್ತಾ, ಕಪ್ಪು ಕವಿಗಳೆಂದು ಸಾರುತ್ತಾ ದಿಟ್ಟವಾಗಿ ಓಡಾಡುತ್ತಿದ್ದರು. ಆದರೆ ಅಂತಹ ಅವಕಾಶವಾಗಲಿ, ದಿಟ್ಟತನವಾಗಲಿ ಹರ್ಲೆಮ್ ರೆನೈಸಾನ್ಸ್‌ನ ಆಫ್ರಿಕನ್ - ಅಮೆರಿಕನ್ ಮಹಿಳಾ ಕವಿಗಳಿರಲಿಲ್ಲ. ಬಹುಶಃ ಅದಕ್ಕಿನ್ನೂ ಕಾಲ ಪಕ್ವಗೊಂಡಿರಲಿಲ್ಲ. ಎರಡು ಪತ್ರಿಕೆಗಳಲ್ಲಿ ಕವನಗಳನ್ನು ಪ್ರಕಟಿಸುತ್ತಿದ್ದರಾದರೂ ಉಳಿದವರಿಗೆ ಅವರ ಬಗೆಗಿನ ಹೆಚ್ಚಿನ ವಿವರಗಳು ತಿಳಿದೇ ಇರಲಿಲ್ಲ. ಈ ಸಮಯದಲ್ಲಿ ಕಾವ್ಯದಲ್ಲಿ ತೊಡಗಿಕೊಂಡ ಮೂವತ್ತೆಂಟು ಹೆಣ್ಣು ಮಕ್ಕಳಲ್ಲಿ ಹದಿನೈದು ಜನರನ್ನು ಬಿಟ್ಟರೆ ಉಳಿದವರು ಎಲ್ಲಿ ಬದುಕಿ ಸತ್ತರೆಂದು ಇತಿಹಾಸದಲ್ಲಿ ದಾಖಲಾಗಲಿಲ್ಲ. ಆಫ್ರೊ- ಅಮೆರಿಕನ್ ಸಾಹಿತ್ಯ ಎಷ್ಟರ ಮಟ್ಟಿಗೆ ಪುರುಷ ಪ್ರಧಾನವಾಗಿಬಿಟ್ಟಿತೆಂದರೆ ೧೯೩೦ರ

ನಂತರದಲ್ಲಿ ಈ ಹೆಣ್ಣು ಮಕ್ಕಳ ಯಾವ ಸಂಕಲನವೂ ಪ್ರಕಟವಾಗಲಿಲ್ಲ. ಆ ಕಾಲದಲ್ಲಿ ಅತ್ಯಂತ ಪ್ರಾತಿನಿಧಿಕ ಕಾವ್ಯವನ್ನು ಬರೆದ ಕೆಲವು ಬರಹಗಾರರ ವಿವರಗಳನ್ನಿಲ್ಲಿ ನೀಡಲಾಗಿದೆ.

ಜಾರ್ಜಿಯಾ ಡಗ್ಲಾಸ್ ಜಾನ್‌ಸನ್, ಆ್ಯನಿ ಸ್ಪೆನ್ಸರ್, ಹೆಲೆನೆ ಜಾನಸನ್, ಜೆಸ್ಸಿ ರೆಡ್ಮಂಡ್ ಫಾಸೆಟ್, ಮೇ ಕೌಡ್ರ, ಆಂಜಲಿನಾ ವೆಲ್ಡ್ ಗ್ರಿಮ್ಕೆ, ಆಲೀಸ್ ಡನ್‌ಬಾರ್ ನೆಲ್ಸನ್, ಕ್ಲಾರಿಸಾಸ್ಕಾಟ್ ಡೆಲೆನಿ ಮತ್ತು ಗ್ವ್ಯಾಂಡೆಲಿನ್ ಬೆನೆಟ್ ಹರ್ಲೆಮ್ ನವೋದಯದ ಪ್ರಮುಖ ಮಹಿಳಾ ಕವಿಗಳು.

ಹರ್ಲೆಮ್ ನವೋದಯದ ಮಹಿಳಾ ಕವಿಗಳಲ್ಲಿ ಬದುಕಿರುವ ತನಕ ಬರೆದ ಏಕೈಕ ಕವಿಯೆಂದರೆ **ಜಾರ್ಜಿಯಾ ಡಗ್ಲಾಸ್ ಜಾನಸನ್**(೧೮೮೦-೧೯೬೬). ಫ್ರಾನ್ಸಿಸ್ ಎಲೆನ್ ಹಾರ್ಪರ್‌ಳ ನಂತರ ಇಪ್ಪತ್ತನೇ ಶತಮಾನದಲ್ಲಿ ಬಂದ ಮೊಟ್ಟ ಮೊದಲನೆಯ ಕವಯಿತ್ರಿ ಈಕೆ. **ಹಾರ್ಟ್ ಆಫ್ ಎ ವುಮನ್, ಬ್ರ್ಯಾಂಜ್, ಎನ್ ಆಟಮ್ ಲವ್ ಸೈಕಲ್, ಶೇರ್ ಮೈ ವರ್ಲ್ಡ್** ಎಂಬ ಐದು ಕವನ ಸಂಕಲನಗಳನ್ನು ಡಗ್ಲಾಸ್ ಪ್ರಕಟಿಸಿದಳು. ಶಿಕ್ಷಕಿ, ಕವಿ, ಹಾಡುಗಾರ್ತಿ. ಗದ್ಯ, ನಾಟಕಗಳನ್ನು ಬರೆಯುವುದರಲ್ಲೂ ಆಸಕ್ತಿಯಿದ್ದ ಈಕೆ ಪತ್ರಿಕೋದ್ಯಮದಲ್ಲಿಯೂ ತೊಡಗಿಕೊಂಡಿದ್ದವಳು. ವಾಶಿಂಗ್‌ಟನ್ ಡಿ.ಸಿ.ಯ ಅವಳ ಮನೆ ಕವಿ-ಕಲಾವಿದರು ಸೇರುವ ಜಾಗವಾಗಿತ್ತು.

**ಆ್ಯನಿ ಸ್ಪೆನ್ಸರ್** (೧೮೮೨-೧೯೭೫) ಬಡತನದಲ್ಲಿ ಬೆಳೆದವಳು. ಅವಳ ತಂದೆ-ತಾಯಿಗಳು ಮಾಜಿ ಗುಲಾಮರು. ತೋಟದಲ್ಲಿ ಕೆಲಸ ಮಾಡುತ್ತಿದ್ದವರು. ಸ್ವಾತಂತ್ರ್ಯ ಸಿಕ್ಕ ಮೇಲೆ ಸ್ವಂತ ಬದುಕನ್ನು ಕಟ್ಟಿಕೊಳ್ಳಲು ಹೊರಟಾಗ ಬಿಳಿಯರಿಗಾಗಿ ಕೆಲಸ ಮಾಡಬಾರದೆಂದು ನಿರ್ಧರಿಸಿದವರು. ಆ್ಯನಿಗೆ ಹನ್ನೊಂದನೇ ವಯಸ್ಸಿನವರೆಗೆ ಸಾಂಪ್ರದಾಯಿಕ ಶಿಕ್ಷಣ ದೊರೆತಿರಲಿಲ್ಲ. ಶಾಲೆಗೆ ಸೇರಿದ ಮೇಲೆ ಆ್ಯನಿ ಗ್ರಂಥಾಲಯದಲ್ಲಿ ಪಾಲಿಸುತ್ತಿದ್ದ ಪ್ರತ್ಯೇಕತೆಯನ್ನು ವಿರೋಧಿಸಿದ್ದಳು. ಅವಳಿಗೆ ರಾಜಕೀಯ ಪ್ರಜ್ಞೆ ಇತ್ತು. ಅನ್ಯಾಯದ ವಿರುದ್ಧ ಬಂಡೇಳುವ ಸ್ವಭಾವವಿತ್ತು. ಈ ಗುಣಗಳೇ ಅವಳ ಕಾವ್ಯದಲ್ಲಿ ಅಭಿವ್ಯಕ್ತಿ ಪಡೆದಿವೆ. ತನ್ನ ಪ್ರಾರಂಭದ ಕವಿತೆಯನ್ನು ಇಂಗ್ಲೆಂಡಿನಿಂದ ಪ್ರಕಟವಾಗುತ್ತಿದ್ದ 'ಮ್ಯಾಂಚೆಸ್ಟರ್ ಗಾರ್ಡಿಯನ್'ಗೆ ಕಳುಹಿಸಿದ್ದಳು. ಹೆಣ್ಣು ಮಕ್ಕಳ ಕವಿತೆಯ ಬಗ್ಗೆ ತಾತ್ಸಾರ ಮನೋಭಾವನೆಯಿದ್ದುದರಿಂದ ಅದು ಪ್ರಕಟವಾಗಲಿಲ್ಲ.

**ಹೆಲೆನ್ ಜಾನ್‌ಸನ್** (೧೯೦೭-?) ಆ್ಯನಿಗೆ ವಿರುದ್ಧವಾಗಿದ್ದವಳು. ಆ ಕಾಲದ ಬರಹಗಾರರಲ್ಲಿ ಅತ್ಯಂತ ಕಿರಿಯಳು. ಆ್ಯನಿ ತನ್ನ ನಲವತ್ತನೇ ವರ್ಷದವರೆಗೆ ಕವಿತೆಯನ್ನು ಪ್ರಕಟಿಸಿರಲಿಲ್ಲ. ಆ್ಯನಿಯ ಗ್ರಾಮಾಂತರ ಪ್ರದೇಶವಾದ ಲಿಂಚ್‌ಬರ್ಗ್‌ಗೆ ಸಾಹಿತಿಗಳು, ಕಲಾವಿದರು, ಹೋರಾಟಗಾರರು ಭೇಟಿ ನೀಡುತ್ತಿದ್ದರಾದರೂ ಅವಳು ನ್ಯೂಯಾರ್ಕ್‌ಗೆಂದೂ ಕಾಲಿಟ್ಟಿರಲಿಲ್ಲ. ಹೆಲೆನೆಯು ಆ್ಯನಿಯಂತೆ ದಿಟ್ಟ ಹುಡುಗಿ, ಆದರೆ ಅವಳ ಕವಿತೆಗಳಲ್ಲಿ ಸಾಂಪ್ರದಾಯಿಕ ಶೈಲಿಯಿರಲಿಲ್ಲ. ಹರ್ಲೆಮ್‌ನ ಬೀದಿ ಭಾಷೆಯನ್ನು ಕವಿತೆಗಳಲ್ಲಿ ಬಳಸುತ್ತಿದ್ದಳು. ತನ್ನ ಕಪ್ಪು ಸಂಸ್ಕೃತಿಯ ಬಗ್ಗೆ ಅಪಾರ ಹೆಮ್ಮೆಯಿದ್ದ ಅವಳಿಗೆ ಕಾವ್ಯವೊಂದು 'ಸೆಲೆಬ್ರೇಷನ್'.

ಅವಳ ಕಾವ್ಯ ಜೀವಂತಿಕೆಯಿಂದ ಪುಟಿಯುತಿತ್ತು. ಆ ಕಾಲದ ಎಲ್ಲ ಪತ್ರಿಕೆಗಳಲ್ಲೂ ಅವಳ ಕವನಗಳು ಪ್ರಕಟವಾಗಿದ್ದವು. ಬಾಸ್ಟನ್ನಿನ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿದ್ದ ಹೆಲೆನೆ ಜಾನ್‌ಸನ್ ದಿ ಸಾಟರ್‌ಡೇ ಈವನಿಂಗ್ ಕ್ವಿಲ್ ಎಂಬ ಪತ್ರಿಕೆಯನ್ನು ನಡೆಸುತ್ತಿದ್ದಳು. ೧೯೩೪ರಲ್ಲಿ ಆಕೆಯ ಕೊನೆಯ ಕವಿತೆ ಪ್ರಕಟವಾಯಿತು. ನಂತರ ಅಗೋಚರವಾದ ಶಕ್ತಿಗಳು ಅವಳ ದನಿಯನ್ನು ಕಿತ್ತುಕೊಂಡವು.

ಮೇ ವಿ. ಕೌಡ್ರೆ (೧೯೦೯-೧೯೫೩) ಎಂಬ ಕವಯಿತ್ರಿಯೂ ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಕಾವ್ಯಲೋಕವನ್ನು ಪ್ರವೇಶಿಸಿದಳು. ಅನೇಕ ವಿದ್ವಾಂಸರ ಗಮನವನ್ನು ಸೆಳೆದಳು. ಕವನ ಸಂಕಲನವನ್ನು ಪ್ರಕಟಣೆ ಮಾಡಿದ ಕೆಲವೇ ಕೆಲವು ಕವಯಿತ್ರಿಯರಲ್ಲಿ ಕೌಡ್ರೆ ಒಬ್ಬಳು. ಕಾಮ ಕೇಂದ್ರಿತ ಎನ್ನಬಹುದಾದ ಕವಿತೆಗಳನ್ನು ನಿರ್ಭಿಡೆಯಿಂದ ಬರೆಯುತ್ತಿದ್ದಳು. ಉಳಿದ ಕವಯಿತ್ರಿಯರೊಂದಿಗೆ ಬೆರೆಯದೇ ದೂರ ಉಳಿದಿದ್ದ ಈಕೆ ಆತ್ಮಹತ್ಯೆಯ ಮೂಲಕ ತನ್ನ ಬದುಕನ್ನು ಕೊನೆಗಾಣಿಸಿಕೊಂಡಳು.

ಗ್ವಾಂಡೆಲಿನ್ ಬೆನೆಟ್ (೧೯೦೨-೧೯೮೧) ವಿದ್ಯಾವಂತ ಕುಟುಂಬದಿಂದ ಬಂದವಳು. ತಂದೆ ವಕೀಲರು, ತಾಯಿ ಶಿಕ್ಷಕಿ. ಹಾವರ್ಡ್ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿದ್ದ ಈಕೆ ೧೯೨೬ರಲ್ಲಿ ಆಪರ್ಚುನಿಟಿ ಪತ್ರಿಕೆಯ ಸಹಾಯಕ ಸಂಪಾದಕಿಯಾಗಿ ಕೆಲಸ ಮಾಡಿದಳು. ೧೯೨೭ರಲ್ಲಿ ವಿವಾಹವಾಗಿ ಫ್ಲೋರಿಡಾಗೆ ತೆರಳಿದಳು. ೧೯೩೬ರಲ್ಲಿ ಗಂಡನ ಸಾವಿನ ನಂತರ ಹರ್ಲೆಮ್‌ನಲ್ಲಿ ನೆಲೆಸಿದಳು.

ಅಲೀಸ್ ಡನ್‌ಬಾರ್ ನೆಲ್ಸನ್ (೧೮೭೫-೧೯೩೫) ನ್ಯೂ ಆರ್ಲಿಯನ್ಸ್‌ನ ದರ್ಜಿಯ ಮಗಳು. ಪತ್ರಿಕೋದ್ಯಮಿ, ಶಿಕ್ಷಕಿ, ಗದ್ಯ ಬರಹಗಾರ್ತಿ ಮತ್ತು ಕವಿ. ಅವಳ ಗಂಡನೂ ಪ್ರಸಿದ್ಧ ಕವಿ(ಡನ್‌ಬಾರ್). ಆದರೆ ಅವನೊಂದಿಗೆ ವಿಚ್ಛೇದನ ಪಡೆದು ನೆಲ್ಸನ್ ಎಂಬ ಪತ್ರಿಕೋದ್ಯಮಿಯನ್ನು ಮದುವೆ ಮಾಡಿಕೊಂಡು ವಿಲ್ಮಿಂಗ್‌ಟನ್‌ಗೆ ಬಂದು ವಿಲ್ಮಿಂಗ್‌ಟನ್ ಅಡ್ವೋಕೇಟ್ ಎಂಬ ಪತ್ರಿಕೆಯನ್ನು ೧೯೨೦ರಿಂದ ೨೨ರವರೆಗೆ ನಡೆಸುತ್ತಿದ್ದಳು. ೧೮೯೫ರಲ್ಲಿಯೇ ವಯಲೆಟ್ಸ್ ಆಂಡ್ ಅದರ್ ಟೇಲ್ಸ್ ಎಂಬ ಸಣ್ಣ ಕತೆಗಳ ಸಂಕಲನವನ್ನು ಪ್ರಕಟಿಸಿದಳು. ನ್ಯಾಶನಲ್ ಅಸೋಸಿಯೇಶನ್ ಆಫ್ ಕಲರ್ಡ್ ವಿಮೆನ್ (ಎನ್ ಸಿಡಬ್ಲ್ಯು) ಸಂಸ್ಥೆಯ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು.

ಜೆಸ್ಸಿ ರೆಡ್ಮಂಡ್ ಫಾಸೆಟ್ (೧೮೮೨-೧೯೬೧) ಫಿಲಿಡೆಲ್ಫಿಯಾದ ದೊಡ್ಡ ಕುಟುಂಬ ವೊಂದರಲ್ಲಿ ಹುಟ್ಟಿ ಬೆಳೆದವಳು. ಅವಳು ಶಾಲೆಗೆ ಹೋಗುತ್ತಿದ್ದಾಗ ತರಗತಿಯಲ್ಲಿ ಕಪ್ಪು ಹೆಣ್ಣು ಮಕ್ಕಳೇ ಇರಲಿಲ್ಲ. ಈ ಕಾರಣಕ್ಕಾಗಿ ಅನೇಕ ಬಾರಿ ಸಹಪಾಠಿಗಳಿಂದ ಅವಮಾನಕ್ಕೆ ಗುರಿಯಾಗಿದ್ದಳು. ಸ್ನಾತಕೋತ್ತರ ಪದವೀಧರೆಯಾಗಿದ್ದ ಫಾಸೆಟ್ ಫ್ರೆಂಚ್ ಮತ್ತು ಲ್ಯಾಟಿನ್ ಬೋಧಿಸುತ್ತಿದ್ದಳು. ೧೯೧೯ರಿಂದ ೧೯೨೬ರವರೆಗೆ ದಿ ಕ್ರೈಸಿಸ್ ಪತ್ರಿಕೆಯ ಸಂಪಾದಕಿಯಾಗಿದ್ದಳು. ಆಂಜಲೀನಾ ವೆಲ್ಡ್ ಗ್ರಿಮ್ಕೆ (೧೮೮೦-೧೯೫೮) ಸ್ವಾತಂತ್ರ್ಯ ಪಡೆದ ಗುಲಾಮನ ಮಗಳು. ಇವಳ

ತಾಯಿ ಬಿಳಿಯಳು. ದಾಸ್ಯ ವಿರೋಧಿ ಚಳವಳಿಯಲ್ಲಿ ಭಾಗಿಯಾಗಿದ್ದ ಗ್ರಿಮ್ಕೆ ಸೋದರಿಯರು ಇವಳಿಗೆ ಸಂಬಂಧದವರಾಗಿದ್ದುದರಿಂದ ಹೋರಾಟದ ಪರಿಚಯವಿತ್ತು. ಮದುವೆಯಾಗದೇ ಉಳಿದ ಈಕೆಯು ಸತ್ತಾಗ ಯಾರಿಗೂ ವಿಷಯವೇ ತಿಳಿಯಲಿಲ್ಲ.

ಕ್ಲಾರಿಸಾ ಸ್ಕಾಟ್ ಡೆಲೆನಿಯ (೧೮೦೧-೧೯೨೭)ತಂದೆ ಬುಕರ್ ಟಿ. ವಾಶಿಂಗ್‌ಟನ್‌ಗೆ ಕಾರ್ಯದರ್ಶಿಯಾಗಿದ್ದವರು. ೧೯೨೩ರಲ್ಲಿ ವೆಲ್ಲೆಸ್ಲಿ ಕಾಲೇಜಿನಿಂದ ಪದವಿಯನ್ನು ಪಡೆದ ಮೇಲೆ ವಾಶಿಂಗ್‌ಟನ್ ಡಿ.ಸಿ. ಯ ಡನ್‌ಬಾರ್ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾದಳು. ಆಂಜಲೀನಾ ವೆಲ್ಡ್ ಗ್ರಿಮ್ಕೆ ಆಕೆಯ ಸಹೋದ್ಯೋಗಿಯಾಗಿದ್ದಳು. ತನ್ನ ಇಪ್ಪತ್ತಾರನೆಯ ವಯಸ್ಸಿನಲ್ಲಿಯೇ ಡೆಲೆನಿ ಕೊನೆಯುಸಿರೆಳೆದಳು.

ಈ ಹೆಣ್ಣು ಮಕ್ಕಳೆಲ್ಲ ಜನಾಂಗವಾದ, ಶೋಷಣೆಯ ವಿರುದ್ಧ ಧ್ವನಿಯೆತ್ತಿದವರೇ. ಚಾರ್ಜಿಯಾದ ಬಿಳಿಯರ ಸಾಂಸ್ಕೃತಿಕ ಸಾರ್ವಭೌಮತ್ವವನ್ನು ಪ್ರಶ್ನಿಸಿದರು. ಆಫ್ರಿಕನ್ ಪರಂಪರೆಯ ಶ್ರೀಮಂತಿಕೆ, ಕಪ್ಪು ಸಂಸ್ಕೃತಿಯ ಶ್ರೇಷ್ಠತೆ, ಕಪ್ಪು ಮೈ ಬಣ್ಣದ ಸೌಂದರ್ಯ, ಹಕ್ಕುಗಳ ಸ್ಥಾಪನೆ ಮುಂತಾದ ವಿಷಯಗಳು ಇವರ ಕಾವ್ಯದ ಜನಪ್ರಿಯ ವಸ್ತುಗಳಾಗಿದ್ದವು. ಬಿಳಿಯ ಸಂಸ್ಕೃತಿಗೆ ಒಂದು ಪ್ರತಿಸಂಸ್ಕೃತಿಯನ್ನು ರೂಪಿಸಿಕೊಳ್ಳಬೇಕೆಂಬ ಛಲ ಎಲ್ಲ ಕವಯಿತ್ರಿಯರಿಗಿತ್ತು. ಜೆಸ್ಸಿ ಫಾಸೆಟ್ ತನ್ನ ಖಾಸಗಿ ಅನುಭವಗಳು, ರೊಮ್ಯಾಂಟಿಕ್ ಭಾವನೆಗಳ ಬಗ್ಗೆ ಕವಿತೆಗಳನ್ನು ಬರೆದರೂ, ಅಂತರ್ಮುಖಿಯಾಗಿದ್ದರೂ ತನ್ನ ಮೈ ಬಣ್ಣವನ್ನು 'ಅಸರ್ಟೈನ್' ಮಾಡಿಕೊಳ್ಳುತ್ತ 'I can not if I will forget the fact of colour in almost everything I do or say' ಎಂದಿದ್ದಳು. ಜನಾಂಗವಾದದ ವಿರುದ್ಧವೇ ಹೋರಾಡಿದ ಆ್ಯನಿ I proudly love being a negro woman ಎಂದರೆ ಅನಿಟಾ ಸ್ಕಾಟ್ ಕೋಲ್‌ಮನ್ ಎಂಬುವವಳು I love black faces ಎಂದಿದ್ದಳು.

ಅಮೆರಿಕಾದ ಹಳ್ಳಿಗಳಲ್ಲಿ ಬೆಳೆದಿದ್ದ ಈ ಕಪ್ಪು ಕವಿಗಳು ಆಫ್ರಿಕಾದೊಂದಿಗೆ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಅವರ ಭಾಷೆಯೂ ಯುರೋಪಿಯನ್ನರು ಬಳಸುವ ಭಾಷೆಯೇ ಆಗಿತ್ತು. ಧರ್ಮ ಕೂಡ ಅವರ ಧರ್ಮವೇ ಆಗಿತ್ತು. ತಮ್ಮ ಬೇರುಗಳು ಆಫ್ರಿಕಾದಲ್ಲಿದ್ದರೂ ಆ ಸಂಸ್ಕೃತಿ ಅಗೋಚರವಾಗಿತ್ತು. ಅವರ ಜತೆಗಿದ್ದುದು ನೆನಪಿನ ಬುತ್ತಿ ಮಾತ್ರ. ತಮ್ಮ ಮೈ ಬಣ್ಣದಿಂದಾಗಿಯೇ ತಿರಸ್ಕೃತಗೊಂಡಿದ್ದ ಅವರು; ಬಣ್ಣದ ಕಾರಣದಿಂದಲೇ ಕೀಳರಿಮೆಯ ರಾಜಕೀಯಕ್ಕೆ ಬಲಿಯಾಗಿದ್ದ ಅವರು, ಅದನ್ನೇ ಹೆಚ್ಚುಗಾರಿಕೆಯಾಗಿ ಮಾಡಿಕೊಳ್ಳುವ ಅಗತ್ಯ ಮತ್ತು ಅನಿವಾರ್ಯತೆಯಿತ್ತು. ಪೂರ್ವಜರಿಂದ ಬಂದ ನೆನಪುಗಳ ಆಧಾರದ ಮೇಲೆಯೇ ಪ್ರತಿಸಂಸ್ಕೃತಿಯನ್ನು ಕಟ್ಟುತ್ತಾ ಹೋಗಬೇಕಾಗಿತ್ತು.

ಸ್ವಭಾವತಃ ಯುರೋಪಿಯನ್ನರಿಗಿಂತ ಕಪ್ಪು ಜನಾಂಗದವರು ಹೆಚ್ಚು ಭಾವುಕರಾಗಿದ್ದರು. ಹೀಗಾಗಿಯೇ, ಶಕ್ತಿಯುತ ಕಪ್ಪು ಪರಂಪರೆಯ ಘನತೆಯನ್ನು ಅರಿಯದೇ ಅದನ್ನು ಪ್ರದರ್ಶನದ ಮತ್ತು ಗೇಲಿಯ ವಸ್ತುವಾಗಿ ಮಾಡಿರುವುದರ ಬಗ್ಗೆ ಅವರಿಗೆ ರೋಷವಿತ್ತು.

ಹೆಲೆನೆ ಜಾನ್‌ಸನ್‌ಳ ಬಾಟ್‌ಲ್ಡ್ ಎನ್ನುವ ಕವಿತೆಯಲ್ಲಿ ಇದು ವ್ಯಕ್ತವಾಗಿದೆ.

ಹರ್ಲೆಮ್‌ನ ೧೩೫ನೇ ರಸ್ತೆಯಲ್ಲಿರುವ ಗ್ರಂಥಾಲಯವೊಂದರಲ್ಲಿ ಕವಿ ಒಂದು ಚಿಕ್ಕ ಪ್ರದರ್ಶನಕ್ಕಿಟ್ಟಿದ್ದ ಮರಳು ತುಂಬಿದ್ದ ಶೀಶೆಯನ್ನು ಕಂಡಿದ್ದಳು. ಆ ಶೀಶೆಯ ಮೇಲೆ 'ದಿಸ್ ಸ್ಯಾಂಡ್ ವಾಸ್ ಟೇಕನ್ ಫ್ರಮ್ ದಿ ಸಹರಾ ಡೆಸರ್ಟ್' ಎಂದು ಬರೆಯಲಾಗಿತ್ತು. ಸ್ವಲ್ಪ ದಿನಗಳ ನಂತರ ಆಕೆ ಹರ್ಲೆಮ್‌ನ ರಸ್ತೆಯಲ್ಲಿ ಓಡಾಡುವಾಗ ಅದ್ಭುತವಾಗಿ ಕುಣಿಯುತ್ತ, ಕೋಲು ತಿರುಗಿಸುತ್ತಿದ್ದ ಕಪ್ಪು ಮನುಷ್ಯನೊಬ್ಬ ಕವಿಗೆ ಕಂಡಿದ್ದ. ಅವನೊಬ್ಬ ಪ್ರದರ್ಶನದ ವಸ್ತುವೆಂಬಂತೆ ಆತನನ್ನು ಕಂಡ ಜನ ನಗುತ್ತ ನಿಂತಿದ್ದರು. ಆ ದೃಶ್ಯ ಮೊದಲು ನಗುವನ್ನು ತರಿಸಿದರೂ ಅವನ ನೃತ್ಯ ಘನತೆಯಿಂದ ಕೂಡಿದ್ದು ಎಂಬ ಭಾವನೆ ಕವಿಯಲ್ಲಿ ಮೂಡಿತು. ತಕ್ಷಣ ಕವಿಗೆ ಆಫ್ರಿಕಾದ ಕಾಡಿನಲ್ಲಿ ಕುಣಿಯುತ್ತಿರುವ ವ್ಯಕ್ತಿಯ ಚಿತ್ರ ಕಣ್ಣ ಮುಂದೆ ಬಂದಿತು. ಅವನ ಕಿವಿಯ ಆಭರಣಗಳು, ಕತ್ತಿನಲ್ಲಿ ಆನೆದಂತ, ಕೈ ಬಳೆ ಇತ್ಯಾದಿಗಳು ಅವನ ಸೌಂದರ್ಯವನ್ನು ಇಮ್ಮಡಿಸಿದಂತೆ ಭಾಸವಾಯಿತು. ಯಾವ ವ್ಯಕ್ತಿ ಸಹರಾ ಮರುಭೂಮಿಯಿಂದ ಮರಳನ್ನು ತಂದು ಶೀಶೆಗೆ ತುಂಬಿದನೋ ಅವನೇ ಈತನನ್ನು ಇಲ್ಲಿ ಕುಣಿಸುತ್ತಿದ್ದಾನೆ. ಉಸಿರುಗಟ್ಟಿಸುವ ಬಾಟಲ್ಲಿನಲ್ಲಿ ಬಲವಾದ ಬಿರಡೆ ಹಾಕಿ ಮುಚ್ಚಿಟ್ಟಿದ್ದಾನೆ ಎಂಬ ಭಾವನೆ ಮೂಡಿತು. ತಮ್ಮದಲ್ಲದ ಸಂಸ್ಕೃತಿ, ಅಸಹಜವಾದ ವಾತಾವರಣದಲ್ಲಿ ಉಸಿರುಗಟ್ಟಿರುವ ಸ್ಥಿತಿಯಲ್ಲಿ ಕಪ್ಪು ಜನಾಂಗವು ಘನತೆಯನ್ನು ಕಳೆದುಕೊಂಡು ಬದುಕುತ್ತಿರುವುದನ್ನು ಸಾಂಕೇತಿಕವಾಗಿ ಹೆಲೆನೆ ಹೇಳುತ್ತಾಳೆ.

ಆಕೆಯದೇ ಮತ್ತೊಂದು ಪದ್ಯ ಮಗಾಲುವಿನಲ್ಲಿ ಧರ್ಮಬೋಧಕನೊಬ್ಬನ ಮಾತನ್ನು ಆಲಿಸದಂತೆ ಆಫ್ರಿಕಾದ ಹೆಂಗಸಿಗೆ ಎಚ್ಚರಿಕೆ ನೀಡುವ ಚಿತ್ರಣವಿದೆ.

***Do not let him lure you from your laughing waters***
***Lulling lakes, lissome winds***
***Would you Sell your colours of your sunset***
***And fragrance of your flowers***
***And the passionate wonder of your forest***
***For a creed that will not let you dance?***
***Oh! Come magalu, take my hand***
***I will read you poetry***

◆

ಹರ್ಲೆಮ್ ನವೋದಯದ ಆಫ್ರಿಕನ್-ಅಮೆರಿಕನ್ ಹೆಣ್ಣು ಮಕ್ಕಳ ಕಾವ್ಯದಲ್ಲಿ ಪರಂಪರೆ, ಪ್ರತಿಭಟನೆ, ಪ್ರಕೃತಿ, ಪ್ರೇಮ, ಕನಸು, ರಮ್ಯ ಭಾವನೆಗಳು ಗಾಢವಾಗಿ ಅಭಿವ್ಯಕ್ತಿ ಪಡೆದಿವೆ. ಜನಾಂಗಭೇದವನ್ನು ಖಂಡಿಸಿ, ಕವಿತೆಗಳನ್ನು ಬರೆಯುವುದು ಆ ಕಾಲಕ್ಕೆ ಅಷ್ಟು ಸುಲಭವಾಗಿರಲಿಲ್ಲ.

ಆ್ಯನಿ ಸ್ಪೆನ್ಸರ್ ವೈಟ್ ಥಿಂಗ್ಸ್ ಎನ್ನುವ ತನ್ನ ಕವಿತೆಯಲ್ಲಿ ಬಿಳಿಯರ ಕ್ರೌರ್ಯದ ಬಗ್ಗೆ ಹೇಳುತ್ತಾಳೆ. ಅವಳ ಪಾಲಿಗೆ ಜಗತ್ತಿನಲ್ಲಿರುವ ಎಲ್ಲ ಬಣ್ಣಗಳು ಅತ್ಯಂತ ಸಹಜವಾದದ್ದು. ಆದರೆ ಬಿಳಿಯ ಬಣ್ಣ ಮಾತ್ರ ಅಪರೂಪ ಹಾಗೂ ಅಸಹಜವಾದದ್ದು.

***Most things are colourful things - the sky, the earth, and sea***
***Black men are most men. But the white are free***
***white things are rare things so rare, so rare***
***they stole from out a silvered world-somewhere.***

ಯೂರೋಪಿಯನ್ನರು ಕಾಲಿಟ್ಟ ತಕ್ಷಣ ಬೆಟ್ಟಗಳೆಲ್ಲ ಕೆಂಪಾಗಿ ರಕ್ತದಲ್ಲಿ ತೋಯ್ದು ಹೋಗುತ್ತವೆ. ಕೆಂಪು ಗುಲಾಬಿ ತನ್ನ ಬಣ್ಣವನ್ನು ಕಳೆದುಕೊಂಡು ಪೇಲವವಾಗಿ ಬಿಳಿಯಾಗಿ ಬಿಡುತ್ತದೆ. ಬಿಳಿಯರೆಲ್ಲ ಸೇರಿಕೊಂಡು ಕಪ್ಪು ಜನಾಂಗವನ್ನು ಹಿಡಿದು ಒಟ್ಟಲು ಹಾಕಿ ಸುಟ್ಟು ಭಸ್ಮ ಮಾಡಿ ಕುಣಿದು ಕುಪ್ಪಳಿಸುತ್ತಾರೆ. ಅವರ ಆಶ್ಚರ್ಯಕ್ಕೆ ಕಾರಣವೆಂದರೆ ಕಪ್ಪು ಜನರ ತಲೆಬುರುಡೆಗಳೆಲ್ಲ ಬೆಳ್ಳಗಿರುವುದು. ಅವರಲ್ಲೊಬ್ಬ ತಲೆಬುರುಡೆಯೊಂದನ್ನು ತೆಗೆದು ಆಕಾಶಕ್ಕೆ ಅಂದರೆ ದೇವರ ಮುಖಕ್ಕೆ ಎಸೆಯುತ್ತ 'ಓ, ದೇವರೇ ಬಿಳಿಯದನ್ನು ಮಾತ್ರ ಸೃಷ್ಟಿಸು' ಎನ್ನುತ್ತಾನೆ. ಇಡೀ ಆಫ್ರೋ ಅಮೆರಿಕನ್ ಜನಾಂಗವನ್ನೇ ನಿರ್ನಾಮ ಮಾಡುವ ಬಿಳಿಯರ ಹುನ್ನಾರದ ವಿರುದ್ಧ ಬರೆದ ಈ ಕವಿತೆಯನ್ನು ಮುದ್ರಣ ಮಾಡುವುದಕ್ಕೆ ಮೊದಲು ನಿರಾಕರಿಸುತ್ತಾರೆ. 'ವೈಟ್ ಮೆನ್' ಎಂಬ ಪದ ತೆಗೆದು ಹಾಕಲು ಆ್ಯನಿಗೆ ಸೂಚಿಸುತ್ತಾರೆ. ಈ ಕಾರಣದಿಂದಾಗಿ ಹರ್ಲೆಮ್ ಕವಯಿತ್ರಿಯರು ತಮ್ಮ ಪ್ರತಿಭಟನೆಯನ್ನು ಕಾವ್ಯದಲ್ಲಿ ರೂಪಕ ಹಾಗೂ ಸಂಕೇತಗಳ ಮೂಲಕ ವ್ಯಕ್ತಪಡಿಸಬೇಕಾಯಿತು.

ಸೋದರಿಗೆ ಪತ್ರ ಎನ್ನುವ ಕವಿತೆಯಲ್ಲಿ ಇದನ್ನು ಸಾಂಕೇತಿಕವಾಗಿ ಹೇಳುತ್ತಾಳೆ.

ದೇವತೆಗಳನ್ನು ಮೂದಲಿಸುವುದು,
ತೆಳು ನಾಲಗೆ ತುದಿಯಿಂದ ಹಂಗಿಸುವುದು
ಹೆಂಗಸರಿಗೆ ಅಪಾಯಕಾರಿ.
ನೀನು ಅಂಜುಕುಳಿಯಾಗಿ
ಇದಕ್ಕೆ ಹೊಂದಿಕೊಂಡರೆ,
ಅತ್ತ ಇತ್ತ ಹೊಯ್ದಾಡಿದರೆ, ಪ್ರಾರ್ಥಿಸಿದರೆ
ಡೊಗ್ಗು ಸಲಾಮು ಹಾಕಿದರೆ,
ಯಾತನೆಯ ಬೆವರು ಹರಿಸಿದರೆ
ದೇವರುಗಳೆಲ್ಲ ಜಗನ್ನಾಥರಾಗಿ
ರಥಚಕ್ರದ ಗಾಲಿಗಳನ್ನು
ನಮ್ಮ ಮೇಲೆ ಉರುಳಿಸುತ್ತಾರೆ.
ಕತ್ತಲೆ ಕವಿದಾಗ ದೀಪ ಬೆಳಗಿಸಬೇಡ,
ಸೂರ್ಯನಿಗೆ ಹೆದರಿ ನೆರಳು ನಿರ್ಮಿಸಬೇಡ.

**ಸಾಯಬೇಕೆಂದಿದ್ದರೂ ಧೈರ್ಯವಾಗಿ ತಿರಸ್ಕರಿಸು**
**ಈ ದೇವರುಗಳ ದೇವಗಾರುಡಿಗಳ**

ಇಲ್ಲಿ 'ದೇವರು' ಬಿಳಿಯರನ್ನು ಸೂಚಿಸುತ್ತದೆ. ಪುರುಷ ಪ್ರಾಧಾನ್ಯವನ್ನು ಈ ಕವಿತೆ ಹೇಳುತ್ತಿರುವಂತಿದೆ.

ಕವಯತ್ರಿಯರು 'ಕಪ್ಪು' ಪದವನ್ನು ಶ್ರೇಷ್ಠತೆಯ ಸಂಕೇತವಾಗಿ ಬಳಸಿದಂತೆ 'ಬಿಳಿ' ಎಂಬ ಪದವನ್ನು ಕೆಡುಕು, ಸಾವು, ಉಸಿರುಗಟ್ಟಿಸುವ ವಾತಾವರಣ ಇತ್ಯಾದಿಗಳನ್ನು ಸೂಚಿಸಲು ಬಳಸುತ್ತಾರೆ. ಲಿಲಿಯನ್ ಬ್ರೈನ್ಸ್ ಎಂಬ ಕವಯಿತ್ರಿ ಚಾಕ್‌ಡಸ್ಟ್ ಎಂಬ ಕವಿತೆಯನ್ನು ಬರೆದಿದ್ದಾಳೆ. ಮೇಲು ನೋಟಕ್ಕೆ ಶಿಕ್ಷಕಿಯೊಬ್ಬಳು ತರಗತಿಯ ಚಾಕ್‌ಪೀಸಿನ ಧೂಳಿನಿಂದ ಬಿಡುಗಡೆ ಹೊಂದಲು ಬಯಸುತ್ತಿರುವುದರ ಬಗ್ಗೆ ಕವಿತೆಯನ್ನು ಬರೆದಿರಬಹುದೆಂಬ ಭಾವನೆ ಮೂಡುತ್ತದೆ. ಗಾಳಿಯಲ್ಲಿ, ಮೈಮೇಲೆ, ಬಟ್ಟೆಯಲ್ಲಿ, ಕೂದಲಿನಲ್ಲಿ ಅಂಟಿರುವ ಧೂಳು ಒಣ ಅನುಭವ ನೀಡುವುದರ ವರ್ಣನೆಯೊಂದಿಗೆ ಕವಿತೆ ಆರಂಭವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸರಾಗವಾಗಿ ಉಸಿರಾಡುವುದೇ ಕಷ್ಟವಾಗಿದೆ. ಬಿಳಿಯರ ನಡುವೆ ಜೀವಂತಿಕೆಯಿಲ್ಲದೆ ಬದುಕುತ್ತಿರುವ ಸ್ಥಿತಿಯನ್ನು ಸೂಚಿಸುತ್ತಿದ್ದಾಳೆ. ಈ ಪೇಲವವಾದ, ಉಸಿರುಗಟ್ಟಿಸುವ ವಾತಾವರಣದಿಂದ ತಪ್ಪಿಸಿಕೊಂಡು ಪ್ರಕೃತಿಯಲ್ಲಿ ಒಂದಾಗಬೇಕು ಎಂಬ ಬಯಕೆ ತೀವ್ರವಾಗಿ ಮೂಡುತ್ತದೆ.

***I want to roll in wet, green grass***
***to plunge headfirst into youth, and music, and laughter;***
***I am tired, tired-of chalk dust***

ಎನ್ನುವಲ್ಲಿ ಕವಯಿತ್ರಿ ಬಿಳಿಯ ಸಂಸ್ಕೃತಿ ದುರಾಕ್ರಮಣದ ಬಗ್ಗೆ ಹೇಳುತ್ತಾಳೆ. ಅಕ್ವಾ ಲಲೂವ ಎನ್ನುವ ಮತ್ತೊಬ್ಬಳು ಕವಯಿತ್ರಿ ಲಲ್ಲಬಿ ಎನ್ನುವ ಕವನದಲ್ಲಿ ಚಂದ್ರನನ್ನು, ಅವನ ಬಿಳಿಯ ಬೆಳಕನ್ನು ಮಗುವಿನ ಆತ್ಮವನ್ನು ಕದಿಯಲು ಬಂದ ರಾಕ್ಷಸ ಎನ್ನುವಂತೆ ಚಿತ್ರಿಸುತ್ತಾಳೆ.

**ಮಗು, ಕಣ್ಣು ಮುಚ್ಚಿಕೋ**
ಚಂದ್ರನ ಬೆಳಕು ಕದ್ದೊಯ್ಯುತ್ತದೆ ನಿನ್ನ
ಈ ನಿಗೂಢ ಮೌನದಲ್ಲಿ ನೀನು ಚಂದ್ರನಂತೆ ಬೆಳ್ಳಗಾಗಿಬಿಡುತ್ತೀಯ
ಚಂದ್ರ ಬೆಳಕಿನ ತೋಳನ್ನು ಚಾಚಿ ಕರೆಯುತ್ತಿದ್ದಾನೆ
ಹಿಂಬಾಲಿಸಬೇಡ

ಚಂದ್ರ ಮತ್ತವನು ನೀಡುವ ಬೆಳದಿಂಗಳು ಬಿಳಿಯರು ಮತ್ತು ಅವರ ಸಂಸ್ಕೃತಿಯ ಸೂಚಕವಾಗುತ್ತವೆ. ಮಗು ಹೆಚ್ಚು ಹೊತ್ತು ಚಂದ್ರನನ್ನು ದಿಟ್ಟಿಸಿದರೆ ಮಗುವಿನ ಬೇರುಗಳೇ ಅಲುಗಿ ಬಿಡಬಹುದೆಂಬ ಭಯ ವ್ಯಕ್ತವಾಗುತ್ತದೆ.

ಬಿಳಿಯ ಸಾರ್ವಭೌಮತ್ವ ಅಪಾಯಕಾರಿಯಾದದ್ದು. ತಮ್ಮ ಅಸ್ತಿತ್ವವನ್ನೇ ನುಂಗುವಂತಹುದು ಎಂಬುದನ್ನು ಅತ್ಯಂತ ಮಾರ್ಮಿಕವಾಗಿ ಸ್ನೋ ಇನ್ ಅಕ್ಟೋಬರ್ ಕವನದಲ್ಲಿ

ಅಲೀಸ್ ಡನ್‌ಬಾರ್ ನೆಲ್ಸನ್ ಹೇಳುತ್ತಾಳೆ. ಶರದೃತುವಿನ ಮರವೊಂದರ ವರ್ಣನೆ ಈ ಕವಿತೆಯಲ್ಲಿದೆ. ಅದು ಅತ್ಯಂತ ಸುಂದರವಾದ ಮರ. ಆ ಮರದ ತುಂಬ ಕೆಂಪು ಹೂಗಳಿವೆ. ಆದರೆ ಅದರ ಹಸಿರು ಎಲೆಗಳ ಸಂದಿ ಸಂದಿಯಲ್ಲಿ ಹಿಮ ಕೂತಿದೆ. ಚಳಿಗಾಲದಲ್ಲಿ ಮಾತ್ರ ಸುರಿಯಬೇಕಾಗಿದ್ದ ಹಿಮ ಅಕ್ಟೋಬರ್ ತಿಂಗಳಲ್ಲೂ ಸುರಿಯುತ್ತಿದೆ. ಕಾಲವಲ್ಲದ ಕಾಲದಲ್ಲಿ, ಸಂದಿಗೊಂದಿಯಲ್ಲಿ ಸೇರಿಕೊಂಡು ಎಲ್ಲ ಕಡೆಯೂ ಹಕ್ಕನ್ನು ಸ್ಥಾಪಿಸುತ್ತಿರುವ ಹಿಮವನ್ನು ಬಿಳಿಯರಿಗೆ ಸಾಂಕೇತಿಕವಾಗಿ ಹೋಲಿಸುತ್ತಿದ್ದಾಳೆ.

ಈ ಬಿಳಿಯ ಸಂಸ್ಕೃತಿಯ ದಾಳಿಯ ಬಗೆಗೆ ಪ್ರತಿರೋಧವನ್ನು ಅತ್ಯಂತ ಸಾಂಕೇತಿಕವಾಗಿ ತನ್ನ ಟೆನಿಬ್ರಿಸ್ ಎನ್ನುವ ಕವನದಲ್ಲಿ ಹೇಳಿದವಳು ಆಂಜಲಿನಾ ವೆಲ್ಡ್ ಗ್ರಿಮ್ಕೆ.

**ಹಗಲು ಅಲ್ಲೊಂದು ಮರ**
**ಅದಕ್ಕೆ ದಟ್ಟ ನೆರಳು**
**ಆ ದಟ್ಟ ನೀಳ ಕಪ್ಪು ನೆರಳ ಬೆರಳುಗಳು**
**ಬಿಳಿಯನ ಮನೆಯ ಮೇಲೆ**
**ಚಾಚುತ್ತವೆ ಮಂದಗಾಳಿಯಲ್ಲಿ**

**ಕಪ್ಪು ಕೈ ಇಟ್ಟಿಗೆಗಳನ್ನು ಒಂದೊಂದಾಗಿ**
**ಕೀಳುತ್ತಲೇ ಹೋಗುತ್ತದೆ**
**ಆ ಇಟ್ಟಿಗೆಗಳಿಗೆ ನೆತ್ತರಿನ ಕೆಂಪು**
**ಅದು ನಿಜಕ್ಕೂ ಕಪ್ಪು ಬೆರಳೇ ಅಥವಾ ದಟ್ಟ ನೆರಳೇ?**

ಮರದ ನೆರಳು ಬಿಳಿಯನೊಬ್ಬನ ಮನೆಯ ಮೇಲೆ ಬಿದ್ದಿದೆ. ನೋಡುವುದಕ್ಕೆ ಈ ಕಪ್ಪು ನೆರಳಿನ ಬೆರಳು ಬಿಳಿಯನ ಮನೆಯ ಒಂದೊಂದೇ ಇಟ್ಟಿಗೆಯನ್ನು ಕೀಳುತ್ತಿವೆ ಎನ್ನುವಂತಿದೆ. ಬಿಳಿಯನ ಮನೆಗೆ ಅಪಾಯವಿದೆ ಎಂಬುದನ್ನು ಕವಯಿತ್ರಿ ಸೂಚ್ಯವಾಗಿ ತಿಳಿಸುತ್ತಿದ್ದಾಳೆ. ಶಾಡೋ ಎನ್ನುವ ಪದ ಘೋಸ್ಟ್ ಎನ್ನುವ ಅರ್ಥದಲ್ಲಿಯೂ ಬಳಕೆಯಾಗಿದೆ.

ಇದರ ಜೊತೆಗೆ ಪುರುಷ ಪ್ರಧಾನ ಸಮಾಜದ ಕಟ್ಟುಪಾಡುಗಳಲ್ಲಿ ಬದುಕಬೇಕಾದ ಅನಿವಾರ್ಯ ಸ್ಥಿತಿ ಕಪ್ಪು ಮತ್ತು ಬಿಳಿಯ ಮಹಿಳೆಯರಿಬ್ಬರದೂ ಆಗಿತ್ತು. ಹೊಸ ಅನ್ವೇಷಣೆಯ ತುಡಿತವಿದ್ದರೂ ಪಂಜರದಲ್ಲಿ ಬದುಕಬೇಕಾದ ಹೆಣ್ಣು ಮಕ್ಕಳ ಸ್ಥಿತಿಯ ಬಗ್ಗೆ ಎಫಿ ಲೀ ನ್ಯೂಸಮ್ ಎನ್ನುವ ಕವಯಿತ್ರಿ ತನ್ನ ಬರ್ಡ್ ಇನ್ ಎ ಕೇಜ್ ಎನ್ನುವ ಕವನದಲ್ಲಿ ಚರ್ಚಿಸುತ್ತಾಳೆ. ತನ್ನ ಸೋದರನ ಮನೆಯಲ್ಲಿರುವ ಪಂಜರದ ಪಕ್ಷಿಯ ತುಡಿತ, ಹಾರುವ ಆಸೆ, ಅನ್ವೇಷಣೆಯ ಬಯಕೆ, ಸ್ವಾತಂತ್ರ್ಯದ ಬಗೆಗಿನ ಪ್ರೀತಿಯನ್ನು ವಿವರಿಸುತ್ತಾ ಕೊನೆಯಲ್ಲಿ 'ಹಿ ಹ್ಯಾಸ್ ಎ ಬರ್ಡ್ ಇನ್ ದಿ ಕೇಜ್ ಅಂಡ್ ಐ ಹ್ಯಾವ್ ನಾಟ್' ಎನ್ನುತ್ತಾಳೆ. ಅವನ ಬಳಿ ಪಂಜರದ ಪಕ್ಷಿ ಇದೆ. ಆದರೆ ತನ್ನ ಬಳಿ ಇಲ್ಲ. ಕಾರಣ ತಾನೇ ಪಂಜರದ ಪಕ್ಷಿಯಾಗಿ ಬದುಕುವ ವಾತಾವರಣವನ್ನು ಸಮಾಜ ಸೃಷ್ಟಿಸಿದೆ.

ಈ ನಿರ್ಬಂಧಿತ ಸ್ಥಿತಿ ಅಥವಾ ಸ್ಥಗಿತತೆಯಿಂದ ಚಲನಶೀಲತೆಯ ಕಡೆಗೆ ನಡೆಯಬೇಕೆನ್ನುವ ತುಡಿತ, ಹೊಸ ದಿಗಂತಗಳ ಹುಡುಕಾಟ ಇತ್ಯಾದಿ ವಸ್ತುಗಳು ಜಾರ್ಜಿಯಾ ಡಗ್ಲಾಸ್ ಜಾನ್‌ಸನ್‌ಳಲ್ಲಿ ಅತ್ಯಂತ ಭಾವಗೀತಾತ್ಮಕವಾಗಿ ವ್ಯಕ್ತಗೊಂಡಿದೆ. ಹಾಳು ಹೆಣ್ಣಿನ ಹೃದಯ ಮತ್ತು ನಿನ್ನ ಪ್ರಪಂಚ ಕವಿತೆಗಳು ಉತ್ತಮ ಉದಾಹರಣೆಗಳು.

ನೀನು ನಿರ್ಮಿಸಿದಂತೆ
ನಿನ್ನ ಪ್ರಪಂಚ ವಿಸ್ತಾರವಾಗುತ್ತದೆ.
ನಾನೂ ಒಮ್ಮೆ ಚಿಕ್ಕ ಗೂಡಿನ ಮೂಲೆಯೊಂದರಲ್ಲಿ
ರೆಕ್ಕೆ ಮುದುರಿ ವಾಸ ಮಾಡುತ್ತಿದ್ದ –
ಸಾಗರಕ್ಕೆ ಬಳಿದ ದಿಗಂತದ ಹರಹನ್ನು
ಆಕಸ್ಮಿಕವಾಗಿ ನಿಟ್ಟಿಸಿದೆ
ಪಯಣಿಸಬೇಕು ಈ ಅಪಾರವನ್ನು
ಎಂಬ ಸುಡು ಬಯಕೆ ಹುಟ್ಟಿ ಕಾಡಿತು
ಸರಿ, ನನ್ನ ಸುತ್ತಲಿನ ಬಂಧನದ ಬಿಗಿ
ಕಟ್ಟು ಸಡಿಲಿಸಿ ಗಾಳಿಯಲ್ಲಿ ರೆಕ್ಕೆ ತೂಗಿದೆ
ಸೇರಲಾರದ ತೀರಗಳ ತಬ್ಬಿದೆ –
ಹಗುರಾಗಿ, ಎದೆ ಬಿರಿವ ಖುಷಿಯಲ್ಲಿ,
ಆತ್ಮ ವಿಶ್ವಾಸದಲ್ಲಿ (ನಿನ್ನ ಪ್ರಪಂಚ)

ಸಮುದ್ರದ ದಡದಲ್ಲಿ ಕುಳಿತುಕೊಳ್ಳುವ, ಅಪರಿಚಿತ ನಾಡು ನಗರದಲ್ಲಿ ಸಂಚರಿಸುವ, ಕಿಟಕಿಯ ಮೂಲಕ ಆಗಸವನ್ನು ವೀಕ್ಷಿಸುವ ವಿಚಾರಗಳು ಕವಿತೆಯಲ್ಲಿ ಪುನಾರವರ್ತನೆಗೊಂಡಿವೆ. ಈ ಮೂಲಕ ಬಿಡುಗಡೆಯ ಹಂಬಲವನ್ನು ಕವಯಿತ್ರಿಯರು ವ್ಯಕ್ತಪಡಿಸಿದ್ದಾರೆ. ತಮ್ಮ ಸ್ಥಗಿತ, ನಿರ್ಬಂಧಿತ ಸ್ಥಿತಿಯನ್ನು ಚಲನೆಯಿರದ ಮರಕ್ಕೆ ಅನೇಕ ಕಡೆ ಹೋಲಿಸುತ್ತಾರೆ. ಜೊತೆಗೆ ಮರದ ಸಂಕೇತದ ಮೂಲಕ ತಮ್ಮ ಸಂಸ್ಕೃತಿಯಲ್ಲಿ ತಾವು ಆಳವಾಗಿ ಬೇರು ಬಿಟ್ಟಿರುವುದನ್ನು ಹೇಳುತ್ತಾರೆ.

ಈಗಷ್ಟೇ ಚೆಂದವಾದುದನ್ನು ಕಂಡೆ
ನೀಳ, ನಿಶ್ಚಲ ಸೂಕ್ಷ್ಮಾತಿಸೂಕ್ಷ್ಮ
ಊರ್ಧ್ವಗಾಮಿ ಕಪ್ಪು ಬೆರಳು
ಯಾಕೆ ನಿಶ್ಚಲ – ನೀಳ ಬೆರಳೆ ನೀನು ಕಪ್ಪಗಿದ್ದೀಯ,
ಯಾಕೆ ಆಗಸದೆಡೆ ಮುಖ ಮಾಡಿದ್ದೀಯ?

(ಕಪ್ಪು ಬೆರಳು – ಆಂಜಲಿನಾ ವೆಲ್ಡ್ ಗ್ರಿಮ್ಕೆ)

ಕಪ್ಪು ಜನಾಂಗವನ್ನು ಸಂಕೇತಿಸುವ ಕಪ್ಪು ಬೆರಳು ಅಥವಾ ಮರ ಆಕಾಶದೆಡೆಗೆ ಮುಖ ಮಾಡಿ ನಿಂತಿದೆ. ಕೊಂಬೆ, ರೆಂಬೆಯನ್ನು ಚಾಚುವ ಮಹತ್ವಾಕಾಂಕ್ಷೆ ಇದ್ದರೂ ಅದರ ಬೇರುಗಳು ಗಟ್ಟಿಯಾಗಿದೆ. ಬಿರುಗಾಳಿಯಂತಹ ಕಷ್ಟವನ್ನು ಎದುರಿಸಿ ನಿಲ್ಲುವ ಗಟ್ಟಿತನ ಮರಕ್ಕಿದೆ. ಕಪ್ಪು ಸಂಸ್ಕೃತಿಯ ಗಟ್ಟಿತನವನ್ನು ಸೂಚಿಸುವ ಮರವು ಆತ್ಮಪ್ರತ್ಯಯ, ಘನತೆಗೆ ಸಂಕೇತವಾಗಿದೆ.

ಕಪ್ಪು ಕವಯಿತ್ರಿಯರು ಕತ್ತಲೆಯನ್ನು ದಯಾಳುವಾದ ಹೆಣ್ಣಿಗೆ ಹೋಲಿಸುತ್ತಾರೆ ಮತ್ತು ಕತ್ತಲೆಗೆ ವ್ಯಕ್ತಿತ್ವವನ್ನು ಆರೋಪಿಸುತ್ತಾರೆ. ಸಾಮಾನ್ಯವಾಗಿ ರಾತ್ರಿಯೆಂದರೆ ಭಯ, ನಿಗೂಢತೆ, ಬುದ್ಧಿ ತರ್ಕಗಳ ನಿಯಂತ್ರಣವನ್ನು ಕಳೆದುಕೊಳ್ಳುವುದು, ದೆವ್ವ ಭೂತಗಳ ಸಂಚಾರ, ಅಪರಿಚಿತ ಭಾವನೆ ಇತ್ಯಾದಿ ಅರ್ಥಗಳು ಹುಟ್ಟಿಕೊಂಡಿದ್ದರೂ ಕಪ್ಪು ಕವಯಿತ್ರಿಯರಿಗೆ ರಾತ್ರಿ ಬಿಡುಗಡೆಯ ಸಂಕೇತ. 'ಈ ಇರುಳು, ಎಷ್ಟೊಂದು ದಯಾಳು' ಎಂದು ಕ್ಲಾರಿಸಾ ಸ್ಕಾಟ್ ಡೆಲೆನಿ ಹೇಳುತ್ತಾಳೆ. ರಾತ್ರಿ ಒಂದರ್ಥದಲ್ಲಿ ಸೃಷ್ಟ್ಯಾತ್ಮಕ ಶಕ್ತಿಯನ್ನು ದಯಪಾಲಿಸುವಂಥದ್ದು. ತಮ್ಮನ್ನು ತಾವು ರಾತ್ರಿಯೊಂದಿಗೆ ಗುರುತಿಸಿಕೊಳ್ಳುವುದು ಇವರಿಗೆ ಅತ್ಯಂತ ಆಪ್ಯಾಯಮಾನಕರ ವಿಷಯ. ಜೊತೆಗೆ ಕಪ್ಪು ಮತ್ತು ಕತ್ತಲೆಗೆ ಅಂಟಿಕೊಂಡಿರುವ ಕಳಂಕದ ಅರ್ಥಗಳನ್ನು ತೊಡೆಯಬೇಕೆಂಬ ಹಟವೂ ಈ ಕವಿಗಳಿಗಿದೆ.

***What do I care for morning***
***Give me the beauty of the evening***
***The cool consummation of night***

**(ವಾಟ್ ಡೂ ಐ ಕೇರ್ ಫಾರ್ ಮಾರ್ನಿಂಗ್ – ಹೆಲೆನೆ ಜಾನ್‌ಸನ್)**

ರಾತ್ರಿ ಇರುವುದು ನಿದ್ರಿಸುವುದಕ್ಕೆ, ವಿಶ್ರಮಿಸುವುದಕ್ಕೆ
ತೆಳುಗಾಳಿ ತೆಳ್ಳಗೆ ಬೀಸುವುದಕ್ಕೆ
ಈ ರಾತ್ರಿ ಇರುವುದು ಕೊರಗಿ ಕಣ್ಣೀರಿಡುವುದಕ್ಕಲ್ಲ
ಈ ರಾತ್ರಿ ಎಷ್ಟೊಂದು ದಯಾಳು,
ನನ್ನಾತ್ಮದ ಸೋಲನ್ನೆಲ್ಲ ಮುಚ್ಚಿಡುವ ಕರುಣಾಳು

**(ನೆಮ್ಮದಿ – ಕ್ಲಾರಿಸಾ ಸ್ಕಾಟ್ ಡೆಲೆನಿ)**

ಕತ್ತಲನ್ನು ದೇವತೆಯಂತೆ ಗ್ವಾಂಡಲಿನ್ ಬೆನೆಟ್ ಚಿತ್ರಿಸುತ್ತಾಳೆ.

***Night wears a garment***
***all vevlet soft***
***all vevlet blue***

ಕತ್ತಲ ದೇವತೆ ಮುಖದ ಮೇಲೆ ತೆಳುವಾದ ಪರದೆಯನ್ನು ಹೊದ್ದು ತನ್ನ ಅದ್ಭುತ ಸೌಂದರ್ಯವನ್ನು ಮರೆ ಮಾಡಿದ್ದಾಳೆ. ಅವಳನ್ನು ನೋಡಲಾಗದವರು ನಿಗೂಢ ಎನ್ನುತ್ತಾರೆ. ಆಫ್ರಿಕಾ ಖಂಡವನ್ನು ನಿಗೂಢ ಎಂದು ಕರೆಯುವುದರ ಬಗ್ಗೆ ಕವಯಿತ್ರಿ ಇಲ್ಲಿ ಪರೋಕ್ಷವಾಗಿ ಹೇಳುತ್ತಾಳೆ. ಸಾವಿನ ಮನೆಯಂತಹ ಮೌನ ರಾತ್ರಿಗಿಲ್ಲ. ರಾತ್ರಿ ನೆಮ್ಮದಿಯನ್ನು ನೀಡುವಂಥದ್ದು. ದಿನಪೂರ್ತಿಯ ಬೇಸರದ ದುಡಿತದಿಂದ ಬಳಲಿದವರಿಗೆ ದಣಿವು, ಹತಾಶೆಯನ್ನು ಹೋಗಲಾಡಿಸುವಂಥದ್ದು. ರಾತ್ರಿಯೆಂದರೆ ಹೆಣ್ಣು ಮಕ್ಕಳಿಗೆ ಬಿಡುಗಡೆ.

ಈ ಕಪ್ಪು ಹೆಣ್ಣು ಮಕ್ಕಳ ಕಾವ್ಯದಲ್ಲಿ ಕಪ್ಪು ಶಕ್ತಿಯ ಸಂಕೇತವಾಗಿ ಬಳಕೆಯಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಅಸ್ತಿತ್ವಕ್ಕಾಗಿ ಹೋರಾಟ ಮತ್ತು ತಮ್ಮ ಅಸ್ತಿತ್ವದ ಹುಡುಕಾಟವನ್ನು ಕಾಣಬಹುದು.

ಜಾರ್ಜಿಯಾಳಂತಹ ಕವಿ ಕಪ್ಪು ಬಣ್ಣವನ್ನು ಅಪಮಾನಕಾರಿಯಾಗಿ ಕಾಣುವ ರಾಜಕೀಯವನ್ನು ಟೀಕಿಸಿದ್ದಾಳೆ. ಅದು ಗಟ್ಟಿ ಧ್ವನಿಯಾಗಿರಲಿಲ್ಲ ಎನ್ನುವುದು ನಿಜವಾದರೂ ತಮ್ಮ ಅಸಹಾಯಕತೆಯನ್ನೇ ಬಂಡವಾಳವಾಗಿ ಮಾಡಿಕೊಂಡಿರುವವರ ಬಳಿ ಭಿಕ್ಷುಕರಂತೆ ಕೈಯೊಡ್ಡಿ ಸಮಾನತೆಗಾಗಿ ಬೇಡುವುದಕ್ಕಿಂತ ತಮ್ಮ ಹಕ್ಕುಗಳಿಗಾಗಿ ಬಡಿದಾಡಲೇಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳಿದಳು.

**ಬದುಕಿನ ನಿಷ್ಠುರ ಕದವನ್ನು**
**ಹಲವಷ್ಟು ಬಾರಿ ತಟ್ಟಿದ್ದೇನೆ**
**ಈ ಹೇಡಿ ಕೈಗಳಿಂದ!**
**ಮತ್ತೆ ಮತ್ತದೇ ಅಜ್ಜ, ಅವರಜ್ಜರ**

**ನಿಷ್ಫಲ–ನಿರರ್ಥಕ ಹಾಡು ಹಾಡುತ್ತಾ ಬೇಡುತ್ತಾ––**
**ಕೇಳುವ ಕಾತರದ ಕಿವಿಗೆ**
**ಒಂದಾದರೂ ಸ್ವಾಂತ ನುಡಿ ಬೀಳಲಿಲ್ಲ,**
**ಹೆಜ್ಜೆ ಸಪ್ಪಳ ಕೇಳಲಿಲ್ಲ.**
**ಇದೀಗ ವರುಷ ವರುಷಗಳ**
**ಹೊಸಿಲ ಮೇಲೆ ತಣ್ಣಗೆ**
**ಬಂದು ನಿಂತಿದೆ ನೋಡಿ, ದಟ್ಟ ಬೇಡಿಕೆಗಳು**
**ಉಗ್ರ ಹೋರಾಟಗಳು, ಗೆಲುವಿನೋತ್ಸಾಹಗಳು,**
**ಓ ಭಿಕ್ಷುಕ, ನೀನ್ಯಾವತ್ತು ಮೂರ್ಖ!**

**(ಭಿಕ್ಷುಕ – ಮೂರ್ಖ)**

ಪ್ರೇಮದ ಬಗ್ಗೆ ಬರೆಯುವಾಗ ಈ ಕವಯಿತ್ರಿಯರು ಯಾವುದೇ ಮುಖವಾಡವನ್ನು ಧರಿಸಲಿಲ್ಲ. ನೋವು, ನಿರಾಶೆ, ಹತಾಶೆ, ಫಲಿಸದ ಪ್ರೇಮದ ಬಗ್ಗೆ ಅತ್ಯಂತ ಸಹಜವಾಗಿ, ಭಾವುಕವಾಗಿ ಈ ಹೆಣ್ಣು ಮಕ್ಕಳು ಬರೆದರು. ನೋವು ಅವರ ಕವಿತೆಗಳ ಸ್ಥಾಯಿ ಭಾವ. ರೊಮ್ಯಾಂಟಿಕ್ ಭಾವನೆಗಳನ್ನು ಉತ್ಕೃಷ್ಟವಾಗಿ ವ್ಯಕ್ತಪಡಿಸಲಾರರು ಎಂಬ ಬಿಳಿಯರ ಆಪಾದನೆಯನ್ನು ಸುಳ್ಳು ಮಾಡುವಂತೆ ಇರುವ ಅನೇಕ ಕವನಗಳನ್ನು ಉದಾಹರಿಸಬಹುದು. ಬಿಳಿಯ ಜನಾಂಗದಂತೆ ತಮ್ಮದು 'ಸತ್ತ ಭಾವನೆ'ಯಲ್ಲ ಎಂದು ಜೆಸ್ಸಿ ರೆಡ್ಮಂಡ್ ಫಾಸೆಟ್ ಹೇಳುತ್ತಾಳೆ.

ನಿರ್ಭಾವುಕ ಮಂದ ಮನಃಸ್ಥಿತಿಯೇ ಶಾಂತಿಯಾಗುವುದಾದರೆ
ನನ್ನ ಸುತ್ತಲಿನ ವಿಷಜಂತುಗಳು ಕಚ್ಚುವುದು ವಾಸಿ
ಕಚ್ಚಿ, ನರಳಿಸಿ ಮುಲಾಮಿಗಾಗಿ ಜೀವನವಿಡೀ ಕಾಯಿಸುವುದೇ ವಾಸಿ
ಭಾವೋದ್ರೇಕ ಸತ್ತು, ಯಾತನೆಗಳ ಕೊನೆಗಾಣಿಸುವುದಾದರೆ
ನಾನು ಕಡುಯಾತನೆಯನ್ನು, ನೀರಸ ನೀಳ ಹಗಲನ್ನು,

ನಿದ್ರೆಯಿರದ ರಾತ್ರಿಗಳನ್ನು, ನಿಟ್ಟುಸಿರನ್ನು, ಬಿಕ್ಕಿ ಬಿಕ್ಕಿ ಅಳುವುದನ್ನು ಆರಿಸಿಕೊಳ್ಳುತ್ತೇನೆ.

ಪ್ರೇಮ ಕವನಗಳು ಅತ್ಯಂತ ಸರಳವಾಗಿದ್ದರೂ ಆರ್ದ್ರವಾಗಿವೆ.

**ನಾನೊಂದು ನೆನಪು, ಮುಗಿದ ಮಧುರ ಕನಸಿನಂತೆ**
**ಒಂದೇ ದಿನದಲ್ಲಿ, ಅರಳಿ, ನಕ್ಕು ಬಾಡಿ ಬತ್ತಿದ ಹೂವಿನಂತೆ**
**ಏಕೆಂದರೆ ಭಾವೋದ್ರೇಕ ತಣ್ಣಗಾಗುತ್ತದೆ, ನಿದ್ರಿಸುತ್ತದೆ**
**ಸೆರಗೊಡ್ಡಿ ಬೇಡಿದರೂ, ಕಣ್ಣೀರು ಸುರಿಸಿದರೂ ಎಚ್ಚರಗೊಳ್ಳುವುದಿಲ್ಲ**
**(ನಾನೊಂದು ನೆನಪು - ಜಾರ್ಜಿಯಾ ಡಗ್ಲಾಸ್ ಜಾನ್‌ಸನ್)**

ಆದರೆ ಈ ಹೆಣ್ಣು ಮಕ್ಕಳು ಬರೆಯಲು ಪ್ರಾರಂಭಿಸಿದಾಗ ಬೌದ್ಧಿಕ ವಲಯ ಅತ್ಯುತ್ಸಾಹವನ್ನು ತೋರಿತ್ತು. ಮೊದಲ ಮೊದಲು ಆ್ಯನಿಯನ್ನು ಅಮೆರಿಕಾದ ಪ್ರಸಿದ್ಧ ಕವಯಿತ್ರಿ ಎಮಿಲಿ ಡಿಕನ್‌ಸನ್‌ಗೆ ಹೋಲಿಸಿದ್ದರು. ಜಾರ್ಜಿಯಾಳ ಕಾವ್ಯ ಸರಾಗ, ಸಹಜ, ಕೌಶಲಪೂರ್ಣ ಎಂದಿದ್ದರು. ಗ್ವಾಂಡೆಲಿನ್ ಬೆನೆಟ್‌ಳನ್ನು ಸೂಕ್ಷ್ಮ, ಹೃದಯಸ್ಪರ್ಶಿ, ಮನೋವೇದಕ ಕವನಗಳನ್ನು ಬರೆಯಬಲ್ಲಳು ಎಂದು ಹೊಗಳಿ ಹಾಡಿದ್ದರು. ಆದರೆ ಮುಂದೆ ಬಂದವರು ಇವರ ಕಾವ್ಯವನ್ನು 'ಭಾವುಕ, ಜನಾಂಗ ಪ್ರಜ್ಞೆಯ ಉಗ್ರಗಾಮಿ ಕಾವ್ಯ' ಎಂದರು. ಮತ್ತೆ ಕೆಲವರು ಈ ಹೆಣ್ಣು ಮಕ್ಕಳ ಕಾವ್ಯ ಯುರೋಪ್ ಪರಂಪರೆಯ ಅನುಕರಣೆ, ಖಾಸಗಿ ಅನುಭವಗಳಿಗೆ ಸೀಮಿತವಾದದ್ದು ಎಂದು ಟೀಕಿಸಿದರು. ಹೀಗೆ ಎರಡು ತಪ್ಪು ಅಭಿಪ್ರಾಯಗಳು ರೂಪುಗೊಂಡವು. ಇವುಗಳ ಹಿಂದೆ ರಾಜಕೀಯ ಮತ್ತು ಜನಾಂಗೀಯ ಹುನ್ನಾರದ ಜತೆಗೇ ಲಿಂಗಪ್ರಜ್ಞೆಯ ಕುಟಿಲತೆಯೂ ಸೇರಿ ಮುಂದೆ ಕಪ್ಪು ಕಾವ್ಯ ಪುರುಷ ಪ್ರಧಾನವಾಯಿತು.

೧೯೩೦ರ ನಂತರ ಹೆಣ್ಣು ಮಕ್ಕಳ ಕಾವ್ಯ ಅತ್ಯಂತ ಕಟು ವಿಮರ್ಶೆಗೆ ಒಳಗಾಯಿತು. ಆ್ಯನಿ ಬರೆಯುವುದನ್ನೇ ನಿಲ್ಲಿಸಿಬಿಟ್ಟಳು. ಕೌಡ್ರೆ ಆತ್ಮಹತ್ಯೆ ಮಾಡಿಕೊಂಡಳು. ಹೆಲೆನ್ ಜಾನ್‌ಸನ್ ಕಾವ್ಯ ಬರೆಯದಂತೆ ಅಗೋಚರ ಶಕ್ತಿಗಳು ತಡೆದವು. 'ದಿ ಕ್ರೈಸಿಸ್' ಪತ್ರಿಕೆಯನ್ನು ಜೆಸ್ಸಿ ಬಿಟ್ಟು ಹೊರಟು ಹೋದಳು. ಜಾರ್ಜಿಯಾ ಪದ್ಯದಿಂದ ಗದ್ಯಕ್ಕೆ ವಾಲಿದಳು. ಈ ನಿಯೋ ನಿಗರೊ ಚಳವಳಿ ಪುರುಷ ಪ್ರಧಾನವಾಗಿ ಹೆಣ್ಣು ಮಕ್ಕಳ ಸಾಹಿತ್ಯವನ್ನು ಕಡೆಗಣಿಸಲಾಯಿತು.

◆

ಈ ಚಳವಳಿಗೆ ಮುಂದಿನ ಕೊಂಡಿಗಳಂತೆ ಸಹಜವಾಗಿ ಬೆಸೆದವರು **ಮಾರ್ಗರೇಟ್ ವಾಕರ್** ಮತ್ತು **ಗ್ವಾಂಡೆಲಿನ್ ಬ್ರೂಕ್ಸ್**. ಮಾರ್ಗರೆಟ್ ಪ್ರತ್ಯೇಕತೆಯನ್ನು ಪಾಲಿಸುತ್ತಿದ್ದ ದಕ್ಷಿಣದ ಅಲಬಾಮಾದ ಬರ್ಮಿಂಗ್‌ಹ್ಯಾಮ್‌ನಲ್ಲಿ ಹುಟ್ಟಿದವಳು. ಅಯೋವಾ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಪಡೆದಾಕೆ. ೧೯೪೨ರಲ್ಲಿ ಅವಳ ಮೊದಲ ಸಂಕಲನ **ಫಾರ್ ಮೈ ಪೀಪಲ್**‌ಗೆ 'ಯೇಲ್ ಸೀರಿಸ್ ಆಫ್ ಯಂಗರ್ ಪೊಯಟ್ರಿ ಅವಾರ್ಡ್' ದೊರಕಿತು. ಸಾಹಿತ್ಯವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಕಾವ್ಯದ ಶಿಸ್ತನ್ನೇ ಮೈಗೂಡಿಸಿಕೊಂಡಿದ್ದಳು.

ಆದರೆ ಅವಳ ಕಾವ್ಯ ವ್ಯಾಕರಣವನ್ನು ಮೀರಿ ನೇರ ಹೃದಯಕ್ಕೆ ತಟ್ಟುವಂತಿತ್ತು. ಆಕೆ ಅಮೆರಿಕಾದ ದಕ್ಷಿಣ ಭಾಗವನ್ನೇ ತನ್ನ ಮನೆಯೆಂದು ಭಾವಿಸಿದ್ದಳು.

The south is my home - and my adjustment or accomadation to the south-whether real or imagined, violent or non violent is the subject and source of all my poetry - it is also my life.

ಮಾರ್ಗರೆಟ್ ವಾಕರ್‌ಳ ಕಾವ್ಯ ಕಥನ ಪ್ರಧಾನ. ಲಾವಣಿ, ಭಾವಗೀತೆಗಳು ಅವಳಿಗೆ ಅಚ್ಚುಮೆಚ್ಚು. ಜನಾಂಗಭೇದ, ವರ್ಣ ರಾಜಕಾರಣದ ಬಗ್ಗೆ ತೀವ್ರ ಅಸಮಾಧಾನ ಮತ್ತು ಆಕ್ರೋಶವಿತ್ತು. ನೆನಪಿನ ಬುತ್ತಿ ಚಿಗುರನ್ನು ಹೊತ್ತು ತಂದ ತನ್ನ ಜನಾಂಗದ ಹೆಣ್ಣು ಮಕ್ಕಳ ಬಗ್ಗೆ ಅಪಾರವಾದ ಹೆಮ್ಮೆ, ಗೌರವವಿತ್ತು.

**ನನ್ನಜ್ಜಿ ಮುತ್ತಜ್ಜಿಯರು ಗಟ್ಟಿ ಮುಟ್ಟಾಗಿದ್ದರು**
**ನೆಲ ಉತ್ತು ಬೀಜ ಬಿತ್ತುತ್ತಿದ್ದರು.**
**ಹೊಲದ ಕಳೆ ಕೀಳುತ್ತಿದ್ದರು.**
**ಇಳೆಯನ್ನು, ಬೆಳೆಯನ್ನು ಪುಟ್ಟಿ ಮೈದಡವಿ**
**ಸುಗ್ಗಿ ಪದವ ಹಾಡುತ್ತಿದ್ದರು.**
**ನನ್ನಜ್ಜಿ, ಮುತ್ತಜ್ಜಿಯರು ಗಟ್ಟಿಮುಟ್ಟಾಗಿದ್ದರು.**
**ನೆನಪಿನ ಬುತ್ತಿ ಚಿಗುರ ಅವರು ಹೊತ್ತು ತಂದಿದ್ದರು**
**ಚುರುಕು ಕೈಗಳಲ್ಲಿ ಉಬ್ಬಿದ ಅವರ ನರನಾಡಿಗಳೆ**
**ಒದ್ದೆ ಮಣ್ಣಿನ - ಹಣ್ಣಿನ ಘಮಲ ಉಸುರುತ್ತಿದ್ದವು.**
**ನಮಗಾಗಿ ಅವರ ಬಳಿ ನೂರು ಚೊಕ್ಕಟ ಮಾತುಗಳಿದ್ದವು**
**ನಮ್ಮಜ್ಜಿ ಮುತ್ತಜ್ಜಿಯರು ಎಷ್ಟು ಗಟ್ಟಿಗಿತ್ತಿಯರು**
**ನಾವೇಕೆ ಅವರಂತಿಲ್ಲ?**

**(ಪೀಳಿಗೆ)**

ಐವತ್ತರ ಮತ್ತು ಅರವತ್ತರ ದಶಕದಲ್ಲಿ ಅಮೆರಿಕನ್ ಸಮಾಜ ಆಘಾತಕಾರಿಯಾಗಿತ್ತು. ಹಿಂಸೆ ತಾರಕಕ್ಕೇರಿತ್ತು. ನಾಗರಿಕ ಹಕ್ಕುಗಳ ಚಳವಳಿಯಲ್ಲಿ ಅನೇಕ ದುರ್ಘಟನೆಗಳು ನಡೆದವು. ವಾಕರ್‌ಳ ನೆರೆಮನೆಯವಳನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ಬ್ಯಾಪ್ಟಿಸ್ಟ್ ಚರ್ಚ್ ಮೇಲೆ ನಡೆದ ಬಾಂಬ್ ದಾಳಿಯಲ್ಲಿ ನಾಲ್ಕು ಪುಟ್ಟ ಹುಡುಗಿಯರು ಸತ್ತು ಹೋಗಿದ್ದರು. ಮನಸ್ಸನ್ನು ಘಾಸಿಗೊಳಿಸುತ್ತಿದ್ದ ತನ್ನ ಸುತ್ತಮುತ್ತಲಿನ ಪರಿಸರಕ್ಕೆ ಸ್ಪಂದಿಸಿ ಕವಿತೆಗಳನ್ನು ಅನೇಕ ಹೋರಾಟದ ಹಾಡುಗಳನ್ನು ಬರೆದಳು. ಬರ್ಮಿಂಗ್‌ಹ್ಯಾಮ್, ಲಿಂಕನ್ ಸ್ಮಾರಕದ ಸಮೀಪದಲ್ಲಿ ಲೂಥರ್ ಕಿಂಗ್ ಮಾಡಿದ ಭಾಷಣ, ಅಸನ ಹರತಾಳಗಳು, ಪ್ರದರ್ಶನಗಳು ಎಲ್ಲವೂ ಅವಳ ಕಾವ್ಯ ವಸ್ತುಗಳಾಗಿದ್ದವು.

◆

ಅಮೆರಿಕದ ಅತ್ಯಂತ ಪ್ರಸಿದ್ಧ ಪುರಸ್ಕಾರವಾಗಿ ಹೊರಹೊಮ್ಮಿದ ಮೊದಲ ಪುಲಿಟ್ಜರ್ ಪ್ರಶಸ್ತಿಯನ್ನು ಪಡೆದ **ಗ್ವೆಂಡೆಲಿನ್ ಬ್ರೂಕ್ಸ್** ಲಾವಣಿಯ ಸಂಪ್ರದಾಯವನ್ನು ಮುಂದುವರಿಸಿದಳು. ಪ್ರಖರ ರಾಜಕೀಯ ಪ್ರಜ್ಞೆಯ ಕವನಗಳನ್ನು ಬರೆದಳು. ಹದಿನಾಲ್ಕು ವರ್ಷದ ಹುಡುಗ ಎಮಿಟ್ ಟಿಲ್ ಮಿಸಿಸಿಪ್ಪಿಯಲ್ಲಿ ಕೊಲೆಯಾದಾಗ **ಬ್ರಾಂಜ್‌ವಿಲ್ ಮದರ್ ಲಾಯ್ಟರ್ಸ್ ಇನ್ ಮಿಸಿಸಿಪ್ಪಿ, ಮೀನ್‌ವೈಲ್ ಮಿಸಿಸಿಪ್ಪಿ ಮದರ್ ಬರ್ನ್ಸ್ ಬೇಕನ್** ಎಂಬ ಕವಿತೆ ಬರೆದಿದ್ದಳು. ರುಡಾಲ್ಫ್ ರೀಡ್ ಎಂಬ ನಿಗ್ರೋ ಗಂಡಸನ್ನು ಬೀದಿಯಲ್ಲಿ ಚಿತ್ರಹಿಂಸೆ ನೀಡಿ ಹತ್ಯೆ ಮಾಡಲಾಯಿತು. ಘಟನೆಗೆ ಪ್ರತಿಕ್ರಿಯೆಯಾಗಿ **ದಿ ಬ್ಯಾಲಡ್ ಆಫ್ ರುಡಾಲ್ಫ್ ರೀಡ್** ಎಂಬ ಕವಿತೆಯನ್ನು ಬ್ರೂಕ್ಸ್ ಬರೆದಳು.

೧೯೬೦ರ ದಶಕದಲ್ಲಿ ಇವರೊಂದಿಗೆ ಸೇರಿಕೊಂಡವರು **ಸೋನಿಯಾ ಸ್ಯಾಂಕೆಜ್. ನಿಕ್ಕಿ ಗಿವೋನಿ ಮತ್ತು ಜೂನ್ ಜೋರ್ಡಾನ್**, ಬೀದಿ ಬೀದಿಯಲ್ಲಿ ಪ್ರದರ್ಶನಗಳನ್ನು ಮಾಡಿ ಕಪ್ಪು ಬಣ್ಣದ ಹಿರಿಮೆಯನ್ನು ಜಗತ್ತಿಗೆ ಸಾರಿದರು. ಪುರುಷ ಪ್ರಾಧಾನ್ಯದ ವಿರುದ್ಧ ದಿಟ್ಟವಾಗಿ ಹೋರಾಡಿದರು. ಸೋನಿಯಾ ಸ್ಯಾಂಕೆಸ್ ತನ್ನ **ರೈಟ್ ಆನ್ ವೈಟ್** ಅಮೆರಿಕಾ ಪದ್ಯದಲ್ಲಿ –

***amerika once a pioneer land***
***but there are no more indians***
***no more real***
***white – all american bad guys.***

ಎಂದು ದಿಟ್ಟವಾಗಿ ಟೀಕಿಸಿದ್ದಳು.

ನಿಕ್ಕಿಯದು ಬಂಡಾಯವನ್ನೇ ಪ್ರಧಾನ ಆಶಯವಾಗಿರಿಸಿಕೊಂಡ ಕಾವ್ಯವೆನ್ನಬಹುದು. ಅವಳ ಪ್ರಮುಖ ಕವಿತೆಯೆಂದರೆ ನಿಕ್ಕಿ ರೋಸಾ. ಈ ಪದ್ಯದಲ್ಲಿ ತಮ್ಮ ಜನಾಂಗದ ಸಂಬಂಧಗಳ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲಾಗದ ಬಿಳಿಯ ಜನಾಂಗದ ಬಗ್ಗೆ ಕಟುವಿಮರ್ಶೆ ಇದೆ. ಬಡತನದ ಬೇಗೆಯಲ್ಲಿ ಬೆಂದರೂ ಕಪ್ಪು ಜನಾಂಗವು ಬದುಕು ನೀಡುವ ಖುಷಿಯನ್ನು ಕಳೆದುಕೊಂಡವರಲ್ಲ. ಕೌಟುಂಬಿಕ ಬಾಂಧವ್ಯ ಅವರನ್ನು ಬೆಸೆದಿತ್ತು. 'ನಮ್ಮ ಬಾಲ್ಯವೆಂದರೆ ಜೋಪಡಿಯಲ್ಲಿ ವಾಸ ಮಾಡುವುದು, ಟಾಯ್ಲೆಟ್ ಇಲ್ಲದ ಮನೆಯಲ್ಲಿ ಇರುವುದು, ಅಪ್ಪಂದಿರು ಕುಡುಕರು, ಕೊಳಕರು ಎಂದಷ್ಟೇ ಬಿಳಿಯರು ಆಲೋಚಿಸುತ್ತಾರೆ'.

'I really hope no white person has cause to write about me
because they never understand black love is black wealth and they will probably talk about my hard childhood and never understand that all the while I was quite happy.'

•

ಸುಮಾರು ನೂರರವತ್ತು ವರ್ಷಗಳ ಆಫ್ರಿಕನ್ – ಅಮೆರಿಕನ್ ಆಧುನಿಕ ಕಾವ್ಯದ ಇತಿಹಾಸ ಹೊಂದಿರುವ ಈ ಜನಾಂಗ ಕಾಲಕಾಲಕ್ಕೆ ತನ್ನ ಅಭಿವ್ಯಕ್ತಿಯ ಕ್ರಮ ಮತ್ತು ಮಾದರಿಯನ್ನು ಬದಲಿಸಿಕೊಂಡಿದೆ. ಆದರೆ ಕಾವ್ಯ ಆಶಯ ಮಾತ್ರ ಸಮಾನತೆ, ಸಹಜ ಪ್ರೀತಿ

ವಿಶ್ವಾಸ, ಜನಾಂಗ ಶೋಷಣೆ, ತರತಮ ನೀತಿ ಇವುಗಳೇ ಆಗಿವೆ. ಒಂದೆಡೆ ಹಿಂದಿನ ಪ್ರತಿ ತಲೆಮಾರಿನ ಅಭಿವ್ಯಕ್ತಿಗೆ ಹೊಸ ಬಗೆಯ ವಿಚಾರ, ಸಮಕಾಲೀನ ಸಮಸ್ಯೆ, ವಿಷಯಗಳನ್ನು ಸೇರಿಸುತ್ತ ಇನ್ನೊಂದೆಡೆ ನೆನಪುಗಳ ಪರಂಪರೆಯನ್ನು ಹೊಸ ಅರ್ಥದಲ್ಲಿ ಶೋಧಿಸುತ್ತ ಕಾವ್ಯವನ್ನು; ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತ ಬಂದಿರುವ ಕಪ್ಪು ಕವಿಗಳು ಎಷ್ಟು ಭಾವುಕರೋ ಅಷ್ಟೇ ಪ್ರಖರ ರಾಜಕೀಯ ಅಂಶಗಳನ್ನೂ ಒಳಗೊಂಡವರು.

ಪರಂಪರೆಯ ಎಲ್ಲ ಶ್ರೇಷ್ಠ ಅಂಶಗಳನ್ನು ಉಳಿಸಿಕೊಂಡು ಕಪ್ಪು ಕಾವ್ಯದ ಹೊಸ ಆಶಯಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸ್ತಾಪಿತವಾಗುವಂತೆ ಬರೆಯುತ್ತಿರುವ ಇಂದಿನ ಪ್ರಮುಖ ಕವಯಿತ್ರಿಯರಲ್ಲಿ **ಮಾಯಾ ಏಂಜೆಲೋ** ಮತ್ತು **ಅಲೀಸ್ ವಾಕರ್** ಮುಖ್ಯರು. ಮಾಯಾ ಬಾಲ್ಯದಲ್ಲಿ ಅಂದರೆ ತನ್ನ ಎಂಟನೆಯ ವಯಸ್ಸಿನಲ್ಲಿಯೇ ತಾಯಿಯ ಎರಡನೆಯ ಗಂಡನಿಂದ ಅತ್ಯಾಚಾರಕ್ಕೆ ಒಳಗಾಗಿ ನ್ಯಾಯಾಲಯದಲ್ಲಿ ನಿಂತವಳು. ತನ್ನ ಅಣ್ಣನನ್ನು ಬಿಟ್ಟರೆ ಬೇರೆ ಯಾರೊಂದಿಗೂ ಮಾತನಾಡದಿದ್ದ ಅವಳು ಈ ಘಟನೆಯ ನಂತರ ಮಾತನ್ನೇ ಕಳೆದುಕೊಂಡಿದ್ದಳು. ಮುಂದೆ ಮದುವೆಯಾಗದೇ ತಾಯಿಯಾಗಿ ಆ ಮಗುವನ್ನು ಸಲಹಲು ನೈಟ್ ಕ್ಲಬ್‌ಗಳಲ್ಲಿ ನೃತ್ಯ ಮಾಡಿದಳು. ಬದುಕನ್ನು ಸಾಗಿಸಲು ಕೆಲವು ಕಾಲ ವೇಶ್ಯಾವೃತ್ತಿಯನ್ನು ಮಾಡಬೇಕಾಯಿತು. ೧೯೬೦ರಲ್ಲಿ ಆಕೆ ನಾಗರಿಕ ಹಕ್ಕುಗಳ ಚಳವಳಿಯಲ್ಲಿ ಭಾಗಿಯಾಗಿದ್ದಳು. ಕೈರೋದಲ್ಲಿ ಕೆಲವು ಕಾಲವಿದ್ದು ಆಫ್ರಿಕಾ ಎನ್ನುವ ಪತ್ರಿಕೆಯ ಸಂಪಾದಕಿಯಾಗಿದ್ದಳು. ಟಾಶ್ ಏಂಜೆಲೋ ಎಂಬ ಗ್ರೀಕ್ ಅಮೆರಿಕನ್‌ನನ್ನು ಮದುವೆಯಾದರೂ ಹೆಚ್ಚು ದಿನ ಅವನೊಡನೆ ಸಂಸಾರ ನಡೆಸಲಿಲ್ಲ. ಪ್ರಪಂಚದ ಅತ್ಯುತ್ತಮ ಕವಯಿತ್ರಿಯರಲ್ಲಿ ಒಬ್ಬಳು ಎಂಬ ಹೆಗ್ಗಳಿಕೆಗೆ ಪಾತ್ರಳಾಗಿದ್ದಾಳೆ.

**ಅದ್ಭುತ ಸೃಷ್ಟಿ, ಆದರೂ ನಾನು ಮೇಲೇಳುತ್ತೇನೆ, ಪಂಜರದ ಪಕ್ಷಿ, ಗಂಡಸರು** – ಇವು ಅವಳ ಪ್ರಸಿದ್ಧ ಕವಿತೆಗಳು.

**ಇತಿಹಾಸದ ಪುಟಗಳಲ್ಲಿ ನೀ ನನ್ನ ತುಂಬಬಹುದು**
**ನಿನ್ನ ಮಾತುಗಳಿಂದ, ತಿರುಚಿದ ಸತ್ಯಗಳಿಂದ**
**ಮಣ್ಣಂತೆ ನೀ ನನ್ನ ತುಳಿಯಬಹುದು**
**ಆದರೂ, ಧೂಳ ಕಣವಾಗಿ ನಾನು ಮೇಲೇಳುತ್ತೇನೆ**
**(ಆದರೂ, ನಾನು ಮೇಲೇಳುತ್ತೇನೆ)**

**ಪಂಜರದ ಹಕ್ಕಿ**
**ಕಂಪಿಸುವ ದನಿಯಲ್ಲಿ**
**ಕಾಣದೂರನ್ನು ಕುರಿತು**
**ಕಾಣುವಾಸೆಯಲಿ ಹಾಡುತ್ತೆ**

ದೂರದ ಬೆಟ್ಟಗಳಲ್ಲಿ
ಹಕ್ಕಿಯ ರಾಗ ಮಾರ್ದನಿಸುತ್ತೆ
ಯಾಕೆಂದರೆ – ಪಂಜರದ ಹಕ್ಕಿ
ಸ್ವಾತಂತ್ರ್ಯ ಗೀತೆ ಹಾಡುತ್ತೆ (ಪಂಜರದ ಪಕ್ಷಿ)

ಅಲೀಸ್ ವಾಕರ್ ಜಾರ್ಜಿಯಾದವಳು. ತಂದೆ ತಾಯಿಯರಿಗೆ ಎಂಟನೆಯ ಮಗಳು. ಚಿಕ್ಕಂದಿನಲ್ಲಿ ಅಪಘಾತಕ್ಕೆ ಈಡಾದ ಇವಳು ತನ್ನ ಒಂದು ಕಣ್ಣನ್ನೇ ಕಳೆದುಕೊಂಡಿದ್ದಳು. ೧೯೬೦ರಲ್ಲಿ ಜಾರ್ಜಿಯಾದಲ್ಲಿ ಕಪ್ಪು ಜನರ ಮತದಾನದ ನೋಂದಣಿಯ ಚಳವಳಿಯಲ್ಲಿ ಅಪಾರ ಕೆಲಸವನ್ನು ಮಾಡಿದವಳು. ೧೯೬೫ರಲ್ಲಿ ಪದವಿ ಪಡೆದ ಈಕೆ ನ್ಯೂಯಾರ್ಕ್ ನಗರದಲ್ಲಿ ಕೆಲಸಕ್ಕೆ ಸೇರಿಕೊಂಡಳು. ಮೊದ ಮೊದಲು ಆಕೆ ಅತ್ಯಾಚಾರ, ಜನಾಂಗವಾದ, ಹಿಂಸೆ, ಒಂಟಿತನ ಇತ್ಯಾದಿಗಳ ಬಗ್ಗೆ ಬರೆಯುತ್ತಿದ್ದಳು. ಕೇವಲ ಆರು ಸಾಲಿನಲ್ಲಿ ತನ್ನ ಜನಾಂಗದ ಹೆಣ್ಣು ಮಕ್ಕಳ ಮೇಲೆ ನಡೆಸಿದ ಶೋಷಣೆಯನ್ನು ಮನ ಮುಟ್ಟುವಂತೆ ಬರೆದಳು.

'ನೀನು ನಿಗ್ರೊ ಹುಡುಗಿಯೇ?'
'ಹೌದು!'
'ಅದೊಂದು ರೀತಿಯ ಆಹಾರವಿರಬಹುದಲ್ಲವೆ?'
'ಹೌದು!'
'ಬಿಳಿಯ ನಿನ್ನನ್ನು ತಿನ್ನುತ್ತಿದ್ದನಲ್ಲವೆ?'
'ಹೌದು'

ಬರು ಬರುತ್ತಾ ಅವಳು ಸಂಬಂಧಗಳು, ಕೌಟುಂಬಿಕ ಮೌಲ್ಯಗಳಿಗಿರುವ ಶಕ್ತಿ, ಆಂತರಿಕ ಸತ್ವ ಮತ್ತು ಅಧ್ಯಾತ್ಮದ ಬಗ್ಗೆ ಬರೆಯಲು ಪ್ರಾರಂಭಿಸಿದಳು. ಫೆಮಿನಿಸಮ್ ಪದಕ್ಕೆ ಸಂವಾದಿಯಾದ 'ವುಮನಿಸ್ಟ್' ಪದದ ಕೊಡುಗೆ ನೀಡಿದವಳು. ಅಲೀಸ್ ವಾಕರ್ ಪರಿಸರವಾದಿ, ಸಕ್ರಿಯ ಹೋರಾಟಗಾರ್ತಿ. ಪರಿಪೂರ್ಣವಾದ ಪ್ರೀತಿಗೆ ತಹತಹಿಸಿದವಳು. ನೋವನ್ನು ನುಂಗಿ ನಗಬೇಕೆಂದು ಆಸೆಪಟ್ಟವಳು. ಇಡೀ ಭೂಮಿಯೇ ಅವಳ ಪಾಲಿಗೆ ನಿರ್ಲಕ್ಷ್ಯಕ್ಕೆ ಗುರಿಯಾದ ನಿಗ್ಗರ್. ಪ್ರಕೃತಿ ಮತ್ತು ಪರಿಸರದ ಬಗ್ಗೆ ಆಕೆಗೆ ಅಪಾರವಾದ ಕಾಳಜಿ.

When the earth is enslaved none of us are free
How hard it would be not to see the sunrise everymorning, the snow, the sky, the trees, the rocks, the faces of people all so different.

ನಿನ್ನ ತಾಯಿಯನ್ನವರು ಹಿಂಸಿಸಿದಾಗ
ನೀನೊಂದು ಗಿಡವ ನೆಡು
ನಿನ್ನ ತಂದೆಯನ್ನವರು ಹಿಂಸಿಸಿದಾಗ
ನೀನೊಂದು ಗಿಡವ ನೆಡು

ನಿನ್ನ ಸೋದರ – ಸೋದರಿಯನ್ನವರು
ಹಿಂಸಿಸಿದಾಗ –
ನೀನೊಂದು ಗಿಡವ ನೆಡು
ನಿನ್ನನ್ನವರು ಚಿತ್ರಹಿಂಸಿಸಿದಾಗ
ಮಾತನಾಡಲು ಒಂದು ಗಿಡವ ನೆಡು (ಹಿಂಸೆ)

ನೂರಾರು ಜನಾನುರಾಗಿ ಕವಿತೆ, ಕಥೆ, ಕಾದಂಬರಿಗಳನ್ನು ಆಲೀಸ್ ಬರೆದಿದ್ದಾಳೆ.

ಕಪ್ಪು ಕವಯಿತ್ರಿಯರು ಯಾರಾದರೂ ಅವರ ಕಾವ್ಯದ ಒಟ್ಟು ಧ್ವನಿ, ಧೋರಣೆ, ಉದ್ದೇಶ ಒಂದೇ; ಮಾನವ ಪ್ರೀತಿ, ಹದವರಿತ ಸಂಬಂಧಕ್ಕಾಗಿ ತುಡಿತ, ಭೇದ ಭಾವಗಳಿಲ್ಲದ ಸುಂದರ ಸಮಾಜಕ್ಕಾಗಿ, ಪ್ರೇಮಾಂತಃಕರಣಗಳಿಗಾಗಿ, ದ್ವೇಷರಹಿತ ವಾತಾವರಣಕ್ಕಾಗಿ ಇಲ್ಲಿನ ಮೃದು-ಮುಗ್ಧ ಹೆಣ್ಣು ಮನಸ್ಸುಗಳಿಗಿರುವ ಹಂಬಲ, ಬಯಕೆ.

ಈ ಅಂಶಗಳೇ ಆ ಜನಾಂಗದ ಹಿಂದಿನ – ಇಂದಿನ ಕವಿಗಳ ಪ್ರಮುಖ ಅಭಿವ್ಯಕ್ತಿಯಾಗಿ ಕೆಲಸ ಮಾಡಿವೆ.

◆

# ಸ್ತ್ರೀವಾದಿ ವಿಮರ್ಶೆಯ ತಾತ್ವಿಕತೆ

◆ ಡಾ. ಸಬಿಹಾ ಭೂಮಿಗೌಡ

ಮ್ಯಾಗಿ ಹಮ್ (Maggie Humm) ತನ್ನ Feminist critisism ಎಂಬ ಕೃತಿಯನ್ನು ಒಂದು ಸಣ್ಣ ಕತೆಯ ಮೂಲಕ ಆರಂಭಿಸುತ್ತಾಳೆ. ಆ ಕತೆಯು ಸ್ಥೂಲವಾಗಿ ಇಂತಿದೆ. "ಒಬ್ಬ ರಾಜನಿದ್ದ. ಆತ ತನ್ನ ಗುಟ್ಟುಗಳನ್ನು ಇತರರಿಗೆ ಹೇಳುತ್ತಿದ್ದ. ಆತನನ್ನು 'ವಿಮರ್ಶೆಯ ರಾಜ' ಎಂದು ಕರೆಯಲಾಗುತ್ತಿತ್ತು. ರಾಜ ತನ್ನ ಸಾಮಂತರ ಜೊತೆಗೆ ಗುಟ್ಟುಗಳನ್ನು ಹೇಳುವ ಸಂದರ್ಭದಲ್ಲಿ, ಹೆಂಗಸರಿಗೆ ಅವುಗಳನ್ನು ಕೇಳುವ ಅವಕಾಶವಿರಲಿಲ್ಲ. ಈತ ಹೇಳುವ ಗುಟ್ಟುಗಳು ಯಾವ ಪುಸ್ತಕದಲ್ಲಿವೆ ಎಂಬುದನ್ನು ನೋಡಲೂ ಅವರಿಗೆ ಅವಕಾಶವಿರಲಿಲ್ಲ. ರಾಜನ ಮಗಳು ಒಂದು ದಿನ ಆತನ ಪುಸ್ತಕವನ್ನೋದಿ, ಅವನ ರಹಸ್ಯಗಳನ್ನು ತಿಳಿದುಕೊಂಡಳು. ರಾಜ ಇದುವರೆಗೆ ಓದಿದ್ದು ನಿಜವಾದ ಪುಸ್ತಕವನ್ನಲ್ಲ; ಆತ ಅದುವರೆಗೆ ಹೇಳಿದ್ದು ಕೂಡಾ ಯಾವುದೇ ಸತ್ಯವನ್ನಲ್ಲ ಎಂಬುದನ್ನು ತಿಳಿದು ರಾಜಕುಮಾರಿಗೆ ಸಿಟ್ಟು ಬಂದಿತು. ಮುಂದೆ ಅವಳು ಸಾಮಂತರ ಮಗಳಂದಿರಿಗೆಲ್ಲ ಈ ಸತ್ಯವನ್ನು ತಿಳಿಸಿದಳು. ಅವರೆಲ್ಲರೂ ಕೂಡ ಅಹೋರಾತ್ರಿ ಕನಸಿನಲ್ಲಿ, ಎಚ್ಚರದಲ್ಲಿ ಈ ವಿಷಯದ ಕುರಿತೇ ಚಿಂತಿಸತೊಡಗಿದರು. ಕಾಲಕ್ರಮೇಣ ಅವರೆಲ್ಲರ ತಂದೆಯಂದಿರು ತೀರಿಕೊಂಡರು. ಆಗ ಈ ಹುಡುಗಿಯರೆಲ್ಲಾ ಒಬ್ಬರು ಇನ್ನೊಬ್ಬರ ಮುಖವನ್ನು ನೋಡಿದಾಗ, ಅವರದು ಬಂಗಾರದ ಮುಖವಾಗಿತ್ತು; ಧ್ವನಿ ಬಂಗಾರದ ಧ್ವನಿಯಾಗಿತ್ತು. ಅನಂತರ ಆ ಹುಡುಗಿಯರು ಇಡೀ ನಾಡನ್ನು ವಶಪಡಿಸಿಕೊಂಡು, ತಮ್ಮ ಧ್ವನಿಯನ್ನು ಕೇಳಿಕೊಂಡು ಎಲ್ಲಾ ಹುಡುಗಿಯರೂ ಸಾಮೂಹಿಕವಾಗಿ ಒಗ್ಗೂಡಿ ನಾಡನ್ನು ಆಳಿದರು". ಮ್ಯಾಗಿ ಹಮ್ ಹೀಗೆ ಸ್ತ್ರೀವಾದಿ ವಿಮರ್ಶೆಯ ನಿರೂಪಣೆಯನ್ನು ಮಾಡಿದ್ದಾಳೆ.

ಈ ಕತೆ, ಅದರ ಆರಂಭ ಮತ್ತು ಅದರ ಉದ್ದೇಶಗಳನ್ನು ಗಮನಿಸಿದರೆ ಹಲವು ವಿಶೇಷತೆಗಳನ್ನು ಗುರುತಿಸಬಹುದು. ಮೊದಲನೆಯದಾಗಿ ಮ್ಯಾಗಿ ಹಮ್ ಸಾಹಿತ್ಯ ವಿಮರ್ಶೆಯಂಥ ಶಿಸ್ತನ್ನು ತೀರ ಅನೌಪಚಾರಿಕವಾದ ಶೈಲಿಯಲ್ಲಿ ಆರಂಭಿಸಿದ್ದಾಳೆ. ಇದು ಕೇವಲ ಆಕಸ್ಮಿಕವಾಗಿರದೆ ಉದ್ದೇಶಪೂರ್ವಕವಾಗಿ ಮಾಡಿದ್ದಾಗಿದೆ. ಮಹಿಳೆಗೆ ಔಪಚಾರಿಕ ಭಾಷೆಗಿಂತ ಅನೌಪಚಾರಿಕ ಭಾಷೆಯೇ ಹೆಚ್ಚು ಸಹಜವಾದದ್ದು ಮತ್ತು ಆಪ್ತವಾದದ್ದು. ಅಷ್ಟೇ ಅಲ್ಲ, ವಿಮರ್ಶೆಯ ಸಿದ್ಧ ಭಾಷೆ ಮತ್ತು ಅದರ ಧೋರಣೆಗಳನ್ನು ಬದಲಾಯಿಸುವುದು ಕೂಡ ಮ್ಯಾಗಿ ಹಮ್‌ಳ ಉದ್ದೇಶವಾಗಿದ್ದಿರಬೇಕು. ಕತೆಯಲ್ಲಿ ಮಾತನಾಡುವ ಮತ್ತು ಜ್ಞಾನವನ್ನು ಪಡೆಯುವ ಅವಕಾಶದಿಂದ ವಂಚಿತರಾದ ಹಾಗೂ ಸಾರ್ವಜನಿಕ ವಲಯದಲ್ಲಿ ಮುಖ ತೋರಿಸಲೂ ಅವಕಾಶವಿಲ್ಲದ ಹುಡುಗಿಯರು ಆರಂಭದಲ್ಲಿ ಕಂಡುಬರುತ್ತಾರೆ. ಈ ಹುಡುಗಿಯರು ಒಟ್ಟು ಸ್ತ್ರೀ ಸಮುದಾಯದ ಪ್ರತಿನಿಧಿಗಳಾಗಿದ್ದಾರೆ. ಅವರನ್ನು ಪ್ರಜ್ಞಾಪೂರ್ವಕವಾಗಿ ಅಜ್ಞಾನದಲ್ಲಿ ಇಡಲಾಗಿದೆ ಎಂಬ ವಿಚಾರ ಕೂಡಾ ಕತೆಯಲ್ಲಿ ಮಾರ್ಮಿಕವಾಗಿ ಮೂಡಿಬಂದಿದೆ. ವಿಮರ್ಶೆಯ ರಾಜ, ಆತನ ಸಾಮಂತರು, ಅವರು ಹೇಳುವ ಗುಟ್ಟುಗಳು, ಅವುಗಳ ಅರ್ಥಹೀನತೆ - ಈ ಎಲ್ಲವೂ ಒಟ್ಟು ಪ್ರಧಾನ ಸಾಹಿತ್ಯಧಾರೆಯು ಮಹಿಳಾ ಸಾಹಿತ್ಯವನ್ನು ಪರಿಭಾವಿಸಿದ ಬಗೆಯಲ್ಲಿ ಅಡಕವಾಗಿರುವ ಲಿಂಗರಾಜಕಾರಣವನ್ನು ಬಯಲಿಗೆಳೆಯುತ್ತವೆ ಹಾಗೂ ಇಂಥ ಅವಕಾಶವಂಚಿತ ಹುಡುಗಿಯರು ಕತೆಯ ಕೊನೆಯಲ್ಲಿ ಎಲ್ಲಾ ರೀತಿಯ ಅವಕಾಶಗಳನ್ನು ಮೊತ್ತಮೊದಲ ಬಾರಿಗೆ ಪಡೆದುಕೊಳ್ಳುತ್ತಾರೆ ಎಂಬುದನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ಎಂದರೆ ಇದು ಒಂದು ಸಮಾಜ ಮತ್ತು ಸಂಸ್ಕೃತಿಯಲ್ಲಿ ಸಾಧ್ಯವಾಗದ್ದನ್ನು ಸಾಹಿತ್ಯ ಕೇಂದ್ರದಲ್ಲಿ ಇಟ್ಟು ಚರ್ಚಿಸುವ ಕೆಲಸವನ್ನು ಮಾಡುತ್ತದೆ. ಆ ಮೂಲಕ ಸಾಹಿತ್ಯದೊಳಗಿನ ರಾಜಕೀಯ ಮಾತ್ರವಾಗಿರದೆ, ಒಟ್ಟು ಸಮಾಜ ಮತ್ತು ಸಂಸ್ಕೃತಿಯೊಳಗೆ ಸ್ತ್ರೀವಿರೋಧೀ ನಿಲುವುಗಳು ಹೇಗೆ ಕೆಲಸಮಾಡುತ್ತಿರುತ್ತವೆ ಎಂಬುದನ್ನು ಕತೆಯು ನವಿರಾಗಿ ಅನಾವರಣ ಮಾಡುತ್ತದೆ.

ಸ್ತ್ರೀವಾದಿ ವಿಮರ್ಶೆಯ ತಾತ್ವಿಕತೆಗೆ ಹೋಗುವ ಪೂರ್ವದಲ್ಲಿ ಕೆಲವು ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ಉಚಿತ. ಅವುಗಳೆಂದರೆ ಸ್ತ್ರೀ, ಸ್ತ್ರೀತ್ವ, ಸ್ತ್ರೀವಾದಿತ್ವ ಮತ್ತು ಸ್ತ್ರೀಯಾತ್ಮಕತೆ.

ಸ್ತ್ರೀ : ಇದು ಜೈವಿಕ ಸಂಬಂಧಿಯಾಗಿ ಬಳಕೆಯಾಗುವ ಪದ

ಸ್ತ್ರೀತ್ವ : ಇದು ಸಾಂಸ್ಕೃತಿಕವಾಗಿ ಕಟ್ಟಲಾದುದು. ಎಂದರೆ ಸ್ತ್ರೀಯಲ್ಲಿ ಏನೇನು ಗುಣಗಳು, ಲಕ್ಷಣಗಳು ಇರಬೇಕು ಎಂದು ಸಮಾಜ ಒಪ್ಪಿ, ನಿರ್ದೇಶಿಸಿ ರೂಪುಗೊಳಿಸಿರುತ್ತದೋ ಅವೆಲ್ಲವುಗಳ ಮೊತ್ತ.

ಸ್ತ್ರೀವಾದಿತ್ವ : ಸಮಾಜ ಮತ್ತು ಸಂಸ್ಕೃತಿಗಳೊಳಗೆ ಅಡಕವಾಗಿರುವ ಲಿಂಗಾಧಾರಿತ ಅಸಮಾನತೆಗಳನ್ನು ಹುಡುಕಿ ತೆಗೆದು, ಅವುಗಳನ್ನು ವಿರೋಧಿಸುವ ಮತ್ತು ನಿವಾರಿಸ ಬಯಸುವ ನೆಲೆ. ಇದೊಂದು ರಾಜಕೀಯ ಸಿದ್ಧಾಂತವಾಗಿ ಕೂಡ ಕೆಲಸ ಮಾಡುತ್ತದೆ.

**ಸ್ತ್ರೀಯಾತ್ಮಕ :** ಸ್ತ್ರೀದೇಹಿಯಾಗಿ ತಾನು ಪಡೆದ ಅನುಭವಗಳ ಕುರಿತು ಅಭಿಮಾನದಿಂದ ಮತ್ತು ವಿಶ್ವಾಸದಿಂದ ಬರೆಯುವ, ವಿಶ್ಲೇಷಿಸುವ ನೆಲೆ. ಇದು ಪುರುಷರೊಂದಿಗೆ ತನ್ನ ತುಲನೆಗೆ ತೊಡಗದೆ, ತನ್ನ ಜಗತ್ತನ್ನು ಸ್ವಾವಲಂಬಿ, ಸ್ವಸಂಪೂರ್ಣ ಎಂಬ ನೆಲೆಯಲ್ಲಿ (ಸ್ವಲ್ಪ ಮಟ್ಟಿಗೆ) ಗ್ರಹಿಸುವ ಬಗೆಯಾಗಿದೆ.

ಎಲೆನ್ ಶೋವಾಲ್ಟರ್ (Elaine Showaltor) ಎಂಬ ಪಶ್ಚಿಮದ ಸ್ತ್ರೀವಾದಿ ಚಿಂತಕಿಯು ಅಲ್ಲಿನ ಬರವಣಿಗೆಗೆ ಸಂಬಂಧಿಸಿದಂತೆ ಮೂರು ಹಂತಗಳನ್ನು ಗುರುತಿಸುತ್ತಾಳೆ. ಅವುಗಳೆಂದರೆ -

Feminine Face (ಸ್ತ್ರೀತ್ವದ ನೆಲೆ) - ೧೮೪೦ -೧೮೮೦
Feminist Face (ಸ್ತ್ರೀವಾದಿ ನೆಲೆ) - ೧೮೮೦ - ೧೯೨೦
Female Face (ಸ್ತ್ರೀಯಾತ್ಮಕ ನೆಲೆ) - ೧೯೨೦ ರಿಂದ ಈಚೆಗೆ.

ಹೀಗೆ ಎಲೆನ್ ಶೋವಾಲ್ಟರ್ ಪಶ್ಚಿಮದ ಮಹಿಳೆಯರ ಸಾಹಿತ್ಯವನ್ನು ವಿಂಗಡಿಸಿದ್ದಾರೆ. ಆದರೆ ಕನ್ನಡ ಸಾಹಿತ್ಯ ಸಂದರ್ಭವನ್ನು ಇಟ್ಟುಕೊಂಡು ಮಾತನಾಡುವಾಗ, ಈ ರೀತಿಯ ಕಾಲದ ವರ್ಗೀಕರಣವು ನಿಂತುಕೊಳ್ಳುವುದಿಲ್ಲ. ಏಕೆಂದರೆ ಇಪ್ಪತ್ತೊಂದನೆಯ ಶತಮಾನದ ಆರಂಭದ ಈ ಹೊತ್ತಿನಲ್ಲೂ ನಮ್ಮಲ್ಲಿ ಮೂರೂ ಮಾದರಿಯ ಬರವಣಿಗೆಯ ಲೇಖಕಿಯರು ಕಾಣಸಿಗುತ್ತಾರೆ. ಈ ಮಾತುಗಳನ್ನು ಸ್ಪಷ್ಟಪಡಿಸುವುದಾದರೆ, ಸಂಚಿಯ ಹೊನ್ನಮ್ಮನ **ಹದಿಬದೆಯ ಧರ್ಮ** ಕೃತಿಯು Feminine Faceಗೆ ಒಂದು ಉತ್ತಮ ನಿದರ್ಶನ. ಇದರಲ್ಲಿ 'ಪೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ.....' ಎಂಬ ಕೆಲವು ಮಾತುಗಳನ್ನು ಬಿಟ್ಟರೆ, ಕೃತಿ ಸಂಪೂರ್ಣವಾಗಿ ಹೆಣ್ಣು ಹೇಗೆ ಗಂಡನಿಗೆ ವಿಧೇಯಳಾಗಿರಬೇಕು, ಆಕೆಯ ಕರ್ತವ್ಯಗಳು ಏನೇನು ಎಂಬುದನ್ನೇ ತಿಳಿಸುತ್ತದೆ. ಸಂಚಿಯ ಹೊನ್ನಮ್ಮನ ಚಿಂತನೆಗಳಿಗೂ ಪಿತೃಪ್ರಧಾನ ಸಮಾಜದ ಮೌಲ್ಯಗಳಿಗೂ ಯಾವ ಅಂತರವನ್ನೂ ಗುರುತಿಸಲು ಸಾಧ್ಯವಿಲ್ಲ. ಸಂಚಿಯ ಹೊನ್ನಮ್ಮನ ಮಾದರಿಯನ್ನೇ ಅನುಸರಿಸಿ ಬರೆಯುವ ಹಲವು ಲೇಖಕ-ಲೇಖಕಿಯರು ಇಂದಿಗೂ ನಮ್ಮಲ್ಲಿ ಹೇರಳವಾಗಿದ್ದಾರೆ. ಜನಪ್ರಿಯ ಕತೆ-ಕಾದಂಬರಿಗಳನ್ನು ಬರೆಯುವ ಹೆಚ್ಚಿನ ಲೇಖಕಿಯರನ್ನೆಲ್ಲ ಸುಲಭವಾಗಿ Feminine Faceನಲ್ಲಿ ಗುರುತಿಸಬಹುದು.

ತ್ರಿವೇಣಿಯವರ ಬರವಣಿಗೆಯು ಮೇಲಿನ ವಿಚಾರಗಳಿಗಿಂತ ಕೊಂಚ ಭಿನ್ನವಾಗುತ್ತದೆ. ಅವುಗಳಲ್ಲಿ ಸ್ತ್ರೀತ್ವದ ಮಾದರಿಯನ್ನು ಮುರಿಯುವ ಧೋರಣೆಯಿದೆ. ಆದರೆ ಅವರು ಸಂಪೂರ್ಣ ಸ್ತ್ರೀವಾದಿ ನೆಲೆ (Feminist)ಯ ಲೇಖಕಿಯೂ ಆಗಲಾರರು. ಅಪಸ್ವರದ ನಾಯಕಿಯ ಅಪೇಕ್ಷೆಗಳು ಎಷ್ಟೇ ಪ್ರಾಮಾಣಿಕವಾಗಿದ್ದರೂ, ಅವು ದಾಂಪತ್ಯದಲ್ಲಿ ಅಪಸ್ವರ ಎಂದೇ ಗುರುತಿಸಿಕೊಳ್ಳುವುದು ಅಥವಾ ಅವಳ ಸಾಧನೆಯೂ ಅಪಜಯವಾಗಿ ಬಿಂಬಿತವಾಗುವುದು, ಈ ಕಾರಣಕ್ಕಾಗಿ ಎಂಬುದನ್ನು ಮರೆಯುವಂತಿಲ್ಲ. ವೀಣಾ ಶಾಂತೇಶ್ವರ ಅವರ ಬರವಣಿಗೆಯಲ್ಲಿ ಸ್ತ್ರೀವಾದಿ ಧೋರಣೆ ತುಂಬ ಪ್ರಖರವಾಗಿ ಒಡಮೂಡಿದೆ. ಬಾನು ಮುಷ್ತಾಕ್, ಸಾರಾ

ಅಬೂಬಕರ್ ಅವರ ಬರೆವಣಿಗೆಗಳನ್ನೂ ಸ್ಪಷ್ಟವಾಗಿ ಸ್ತ್ರೀವಾದಿತ್ವದ ನೆಲೆಯಲ್ಲಿ ಗುರುತಿಸಬಹುದಾಗಿದೆ. ಅನುಪಮಾ ನಿರಂಜನ ಅವರು ಮಾಧವಿ ಕಾದಂಬರಿಯ ಮೂಲಕ ತಮ್ಮ ಅದುವರೆಗಿನ ಬರೆಹದ ಮಾದರಿಗೆ ತಿರುವನ್ನು ತಂದುಕೊಂಡುದನ್ನೂ ಗಮನಿಸಬಹುದು. ಇವು ಸ್ತ್ರೀವಾದಿತ್ವದ (Feminist Face) ಮಾದರಿಗಳು.

ಸ್ತ್ರೀಯಾತ್ಮಕ ನೆಲೆ(Female Face) ಎಂದರೆ ಹೆಣ್ಣಿನ ಬರೆವಣಿಗೆ ಮತ್ತು ಹೆಣ್ಣಿನ ಅನುಭವಗಳ ಮೇಲೆ, ಕೇಂದ್ರೀಕೃತವಾದ ಸಾಹಿತ್ಯ. ಇಲ್ಲಿ ಸಮಾಜದ ಕುರಿತಾಗಲಿ, ಪುರುಷರ ಮೇಲಾಗಲಿ ಪ್ರತಿಭಟನೆಯ ಧ್ವನಿಗಳಿರುವುದಿಲ್ಲ. ಬದಲಾಗಿ ಮಹಿಳೆ ತನ್ನ ಅನುಭವಗಳು ಪುರುಷನ ಅನುಭವಗಳಷ್ಟೇ ಪ್ರಾಮಾಣಿಕವೂ ಮೌಲಿಕವೂ ಆಗಿವೆ ಎಂಬ ಆತ್ಮವಿಶ್ವಾಸದಿಂದ ಬರೆಯುವ ಧಾಟಿ ಕಂಡುಬರುತ್ತದೆ. ತನ್ನ ಅನುಭವಗಳನ್ನು ಹೇಳುವುದಕ್ಕೆ ಈಗಾಗಲೇ ಇರುವ ಭಾಷೆ, ಅದರ ಲಯ, ಸಾಹಿತ್ಯಿಕ ಮಾನದಂಡಗಳು ಅಡ್ಡಿ ಎನಿಸಿದಾಗ, ಸಹಜವಾಗಿ ಎಂಬಂತೆ, ಅನಿವಾರ್ಯ ಎಂಬಂತೆ ಬೇಲಿ ಮುರಿದು ತನ್ನ ದಾರಿಯನ್ನು ಕಂಡುಕೊಳ್ಳುವ ಧಾಟಿ ವ್ಯಕ್ತವಾಗುತ್ತದೆ. ವೈದೇಹಿಯವರ ಬರೆವಣಿಗೆಗಳು ಇದಕ್ಕೊಂದು ಸಶಕ್ತ ಮಾದರಿ. ಅವರ ಜಾತ್ರೆ ಕೃತಿ ಮೇಲಿನ ಎಲ್ಲ ವಿಚಾರಗಳಿಗೂ ಸಾಕಷ್ಟು ಪುಷ್ಟಿಯನ್ನು ಕೊಡುತ್ತದೆ. ಇಂತಹ ಪ್ರಯತ್ನಗಳನ್ನು ಪ್ರತಿಭಾ ನಂದಕುಮಾರ ಅವರ ಕಾವ್ಯಗಳಲ್ಲಿ ಕೂಡಾ ಕಾಣಬಹುದು. (ಇಲ್ಲಿ ಪ್ರಸ್ತಾವಿಸಿರುವ ಹೆಸರುಗಳು ಕೇವಲ ಸಾಂಕೇತಿಕ. ವಿಚಾರವೊಂದರ ಮನವರಿಕೆಗಾಗಿ ಹೇಳಿದ್ದೇ ಹೊತು, ಅವಷ್ಟೇ ಅಂತಿಮ, ಆ ಲೇಖಕಿಯರು ಮಾತ್ರ ಒಳ್ಳೆಯ ಲೇಖಕಿಯರು ಎಂಬ ಅರ್ಥ ಖಂಡಿತವಾಗಿಯೂ ಸಲ್ಲ.) ಒಟ್ಟಿನಲ್ಲಿ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಈ ಮೂರು ಕಾಲಗಳೂ ಒಂದರ ನಂತರ ಒಂದು ಬಂದುದಾಗಿರದೆ, ಒಂದೇ ಕಾಲದಲ್ಲಿ ಮೂರೂ ಮನೋಧರ್ಮದ ಲೇಖಕಿಯರೂ ಇದ್ದಾರೆ ಎಂಬುದನ್ನು ಸ್ಪಷ್ಟಪಡಿಸುವುದಷ್ಟೆ ಇಲ್ಲಿಯ ಉದ್ದೇಶವಾಗಿದೆ.

ಸ್ತ್ರೀವಾದಿ ತಾತ್ವಿಕತೆಯು ಏಕಾಕಾರ ಹೊಂದಿದ್ದಲ್ಲ. ಅದು ಬಹುಮುಖಿ; ಬಹು ವ್ಯಾಪಕವಾದ ಶಿಸ್ತು. ಅದೇ ರೀತಿಯಲ್ಲಿ ಸ್ತ್ರೀವಾದಿ ವಿಮರ್ಶೆಯ ಕುರಿತು ಇದಮಿತ್ಥಂ ಎಂದು ಹೇಳಲು ಬರುವುದಿಲ್ಲ. ಈ ಬಗೆಯ ಸಂಕೋಚನ - ವಿಕಸನಕ್ಕೆ ಒಗ್ಗಿಕೊಳ್ಳುವ ಚಿಂತನೆಗೆ ಹಲವು ಪ್ರಯೋಜನಗಳಿರುವಂತೆ ಮಿತಿಗಳೂ ಇರುತ್ತವೆ. ಆದುದರಿಂದ ಸ್ತ್ರೀವಾದಿ ತಾತ್ತ್ವಿಕತೆಯನ್ನು ಒಬ್ಬರ ವಿಚಾರಗಳಿಂದ ಬೆಳೆಸುವ ಕೆಲಸವನ್ನು ಇಲ್ಲಿ ನಾನು ಮಾಡಲು ಹೊರಟಿಲ್ಲ. ಬದಲಾಗಿ ಪಶ್ಚಿಮದ ಪ್ರಮುಖ ಸ್ತ್ರೀವಾದಿ ಚಿಂತಕಿಯರು, ಭಾರತೀಯ ಸ್ತ್ರೀವಾದಿ ಚಿಂತಕಿಯರು, ಲೇಖಕಿಯರು, ಮಹಿಳಾ ಚಳುವಳಿಯ ಧೋರಣೆಗಳು - ಇವೆಲ್ಲವುಗಳ ನೆಲೆಯಲ್ಲಿ ಸಂಗ್ರಹಿಸಿ ವಿವೇಚಿಸುವ ಕೆಲಸವನ್ನು ಮಾಡುತ್ತೇನೆ.

ಪ್ರಧಾನ ಸಾಹಿತ್ಯ ಚರಿತ್ರೆಯು ಮಹಿಳೆಯರ ಸಾಹಿತ್ಯಿಕ ಸಾಧನೆಯನ್ನು ಅವಗಣಿಸಿದೆ; ಮಹಿಳೆಯರು ಬರೆದ ಕೃತಿಗಳು ಶೋಧಗೊಳ್ಳದೆ ಮರೆಯಾಗಿವೆ. ಅವುಗಳನ್ನು ಮರು ಶೋಧಿಸುವ ಕೆಲಸ ಆಗಬೇಕು; ಅವುಗಳಿಗೆ ಸಲ್ಲಬೇಕಾದ ಮಾನ್ಯತೆಯನ್ನು ಸ್ಥಾಪಿಸಬೇಕು ಎಂಬುದು ಸ್ತ್ರೀವಾದಿ

ವಿಮರ್ಶೆಯ ಒಂದು ಪ್ರಧಾನ ಕಾಳಜಿಯಾಗಿದೆ. ಈ ಚಿಂತನೆಯನ್ನು ವರ್ಜೀನಿಯಾ ವುಲ್ಫ್ ಮತ್ತು ಕೇಟ್ ಮಿಲೆಟ್, ಜರ್ಮನ್ ಗ್ರಿಯರ್ ಮುಂತಾದವರು ವಿಸ್ತಾರವಾಗಿ ಚರ್ಚಿಸಿದ್ದಾರೆ.

ಶ್ರೇಷ್ಠ ಕೃತಿಗಳ ಸಾಲಿನಲ್ಲಿ ಮಹಿಳೆಯರ ಕೃತಿಗಳು ಇಲ್ಲದಿರುವುದನ್ನು ವರ್ಜೀನಿಯಾ ವುಲ್ಫ್ ಗುರುತಿಸಿದಳು. ಹಾಗೂ ಅದೇ ಕಾರಣಕ್ಕೆ ಎಲೆಮರೆಯ ಕಾಯಂತೆ ಬದುಕಿದ ಲೇಖಕಿಯರ ಆಕೃತಿಗಳನ್ನು ಮುದ್ರಣ ಮಾಡುವುದು, ಹಸ್ತಪ್ರತಿಗಳನ್ನು ಸಂಗ್ರಹಿಸುವುದು, ಮತ್ತು ಅವುಗಳ ಅಧ್ಯಯನವನ್ನು ಕೈಗೊಳ್ಳುವುದು ಅವಶ್ಯ ಎಂದು ಕರೆಕೊಟ್ಟಳು. ಕೇಟ್ ಮಿಲೆಟ್ ಎಂಬಾಕೆ ಪ್ರಧಾನ ಸಾಹಿತ್ಯ, ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ಚರಿತ್ರೆಯೊಳಗೆ ಬೆರೆತುಬಿಟ್ಟಿರುವ ಲಿಂಗತ್ವ ರಾಜಕೀಯದ ಎಳೆಗಳನ್ನು ಬಯಲಿಗೆಳೆದಳು. ಒಂದೇ ಕವನವನ್ನು ವಿಮರ್ಶಕರ ಎರಡು ತಂಡಕ್ಕೆ ನೀಡಿ ಬಂದ ಪ್ರತಿಕ್ರಿಯೆಯನ್ನು ಆಕೆ ಗಮನಿಸಿದಳು. ಕವನವನ್ನು ಬರೆದವರು ಪುರುಷ ಎಂದು ತಿಳಿದ ಗುಂಪು ಅದರಲ್ಲಿ ಪುರುಷತ್ವದ ಸಾಲುಗಳಿವೆ ಎನ್ನುತ್ತ ಕವನವನ್ನು ಬಲಿಷ್ಠ ಸಾಹಿತ್ಯ ಎಂದು ವಿಶ್ಲೇಷಿಸಿತು. ಬರೆದವರು ಮಹಿಳೆ ಎಂದು ತಿಳಿದ ಗುಂಪು ಅದೇ ಕವನದಲ್ಲಿ ಸ್ತ್ರೀತ್ವದ ಸಾಲುಗಳಿವೆ ಎನ್ನುತ್ತ ಕವನವನ್ನು ನಾಜೂಕಿನ, ಕೋಮಲತೆಯಿಂದ ಕೂಡಿದ ಕವನ ಎಂದು ಪ್ರತಿಪಾದಿಸಿತು. ಇಂಥ ದೃಷ್ಟಾಂತಗಳ ಮೂಲಕ ಸಾಹಿತ್ಯದೊಳಗಿನ ರಾಜಕೀಯವನ್ನು ಕೇಟ್‌ಮಿಲೆಟ್ ಬಹಿರಂಗಪಡಿಸಿ, ತನ್ನ ಕಾಲದ ಹಲವರ ನಿಷ್ಠುರಕ್ಕೆ ಪಾತ್ರಳಾದಳು. ಜರ್ಮನ್ ಗ್ರಿಯರ್ ಈ ವಿಚಾರವನ್ನು ಇನ್ನಿಷ್ಟು ವಿಸ್ತಾರವಾಗಿ ಚರ್ಚಿಸಿದ್ದಾಳೆ. ಹದಿನೆಂಟನೆ ಶತಮಾನದ ಇಂಗ್ಲಿಷ್ ಸಾಹಿತ್ಯ ಚರಿತ್ರೆಯಲ್ಲಿ ಆದ ರಾಜಕೀಯವನ್ನು ಕಟುವಾಗಿ ಟೀಕಿಸಿದ್ದಾಳೆ. ಒಟ್ಟು ಕಾದಂಬರಿ ರಚನೆಯಲ್ಲಿ ಅರ್ಧಪಾಲು ಮಹಿಳೆಯರ ರಚನೆಗಳೇ ಇದ್ದರೂ, ಸಾಹಿತ್ಯ ಚರಿತ್ರಕಾರರು ದಾಖಲಿಸದಿರುವುದನ್ನು ಪ್ರಸ್ತಾವಿಸುತ್ತಾ, ವಿಮರ್ಶೆಗೆ ಎತ್ತಿಕೊಳ್ಳದೆ, ಮುಂದೆ ಚರಿತ್ರೆಯಲ್ಲಿ ದಾಖಲಿಸದೆ ಅನುಲ್ಲೇಖದ ಮೂಲಕ ದಮನದ ಪ್ರವೃತ್ತಿ ಪ್ರಕಟವಾಗಿದೆ ಎಂದು ಗುರುತಿಸಿದ್ದಾಳೆ ಹಾಗೂ ಇದೊಂದು ಗಂಭೀರ ಒಳಸಂಚು ಎಂದೂ ಹೇಳಿದ್ದಾಳೆ.

ಕನ್ನಡ ಸಾಹಿತ್ಯದ ಸಂದರ್ಭವನ್ನು ಮೇಲಿನ ಸ್ತ್ರೀವಾದಿ ಚಿಂತಕಿಯರ ಚಿಂತನೆಯ ಬೆಳಕಿನಲ್ಲಿ ಗಮನಿಸುವ ಕೆಲಸವನ್ನು ಈಗ ಮಾಡಬಹುದು. ಆಧುನಿಕ ಪೂರ್ವದ ಕನ್ನಡ ಸಾಹಿತ್ಯದ ಚರಿತ್ರಕಾರರಿಗೆ ಕವಯಿತ್ರಿ ಕಂತಿ ಮುಖ್ಯವಾಗಲಿಲ್ಲ. ಎ. ವೆಂಕಟಸುಬ್ಬಯ್ಯನವರು ಕಂತಿ ಎಂಬ ಕವಯಿತ್ರಿಯ ಅಸ್ತಿತ್ವವನ್ನೇ ಸಂದೇಹಿಸಿದರೆ, ರಂ.ಶ್ರೀ ಮುಗಳಿಯವರು 'ಕಂತಿಯ ಕತೆ ಸುಳ್ಳಿನ ಕಂತೆ' ಎಂದರು. ಮುಂದುವರಿದು, "ಅವಳಿದ್ದುದೇ ನಿಜವಿದ್ದರೆ, ಮೊದಲ ಕವಯಿತ್ರಿಯಾಗುತ್ತಾಳೆ" ಎಂದು ಪರೋಕ್ಷವಾಗಿ ಆಕೆಯ ಅಸ್ತಿತ್ವವನ್ನು ಒಪ್ಪಿಕೊಂಡಿದ್ದಾರೆ. ಟಿ.ಎಸ್. ನಾಗರತ್ನ ಮಾತ್ರ ಕಂತಿಯನ್ನು ಸಾಹಿತ್ಯ ಚರಿತ್ರೆಯಲ್ಲಿ ಗಮನಿಸುವಂತೆ ಒತ್ತಾಯಿಸುತ್ತಾರೆ. ಈ ರೀತಿಯ ಚರ್ಚೆಯನ್ನು ಮಧ್ಯಕಾಲೀನ ಕನ್ನಡ ಕವಯಿತ್ರಿಯರ ಕುರಿತೂ ಬೆಳೆಸಬಹುದಾಗಿದೆ - ಹೀಗೆ ಸಾಹಿತ್ಯದಲ್ಲಿ ಕಂತಿಯ ಪ್ರತಿನಿಧೀಕರಣ ಸ್ತ್ರೀವಾದಿ ವಿಮರ್ಶಕರಿಗೆ ಮುಖ್ಯ ಪ್ರಶ್ನೆಯಾಗಿದೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಪ್ರತಿನಿಧೀಕರಣವಂತೂ ತೀರಾ ಸೊರಗಿರುವುದನ್ನು ಸ್ತ್ರೀವಾದಿ ವಿಮರ್ಶೆ

ಗುರುತಿಸಿತು. ನಂಜನಗೂಡು ತಿರುಮಲಾಂಬಾ, ಆರ್. ಕಲ್ಯಾಣಮ್ಮ, ಶ್ಯಾಮಲಾದೇವಿ ಬೆಳಗಾಂಕರ, ಸರಸ್ವತಿದೇವಿ ಗೌಡರ್, ಸರಸ್ವತಿಬಾಯಿ ರಾಜವಾಡೆ, ಬೆಳಗೆರೆ ಜಾನಕಮ್ಮ, ಎಚ್.ಎಸ್. ಕಾತ್ಯಾಯಿನಿ ಮುಂತಾದ ಲೇಖಕಿಯರ ಕೃತಿಗಳನ್ನು ಶೋಧಿಸಿ, ಅಧ್ಯಯನ ಕೈಗೊಂಡು ಸಂಪಾದಿತ ಕೃತಿಗಳನ್ನು ಒಂದು ವ್ರತದಂತೆ, ಒಂದು ಕರ್ತವ್ಯ ಎಂಬಂತೆ ಡಾ. ವಿಜಯಾ ದಬ್ಬೆ, ಡಾ. ಬಿ.ಎನ್. ಸುಮಿತ್ರಾಬಾಯಿ, ಡಾ. ಎಸ್. ಗಾಯತ್ರಿ, ನೇಮಿಚಂದ್ರ, ಡಾ. ಶ್ರೀವಳ್ಳಿ ಟಿ. ಎಸ್. ಮುಂತಾದವರು ನಡೆಸಿದರು. ಲೇಖಕಿಯರು ಕೈಗೊಂಡ ಸಾಧನೆಯ ಅಧ್ಯಯನದ ಫಲವಾಗಿ ಮುಂದಿನ ಸಾಹಿತ್ಯದ ಓದುಗರು ಮೊದಲ ತಲೆಮಾರಿನ ಲೇಖಕಿಯರ ಸಾಧನೆಯನ್ನು ಅವಗಣಿಸದ ವಾತಾವರಣ ನಿರ್ಮಾಣವಾಗಿದೆ.

ಸಾಂಸ್ಥಿಕ ರೂಪದ ಕನ್ನಡ ಸಾಹಿತ್ಯ ಚರಿತ್ರೆಯ ದಾಖಲೀಕರಣವೂ ಪೂರ್ವಾಗ್ರಹದಿಂದ ಕೂಡಿದ್ದು; ಅಸಮತೋಲನದಿಂದ ಸಿದ್ಧಗೊಂಡಿದೆ. ಅವುಗಳಿಗೆ ಆಯಾ ಪ್ರಕಾರದ ಸಂಕಲನಗಳ ಸಂಪಾದನೆಗಳೇ ಸಾಕ್ಷಿ ಹೇಳುತ್ತವೆ. ಮಾದರಿಗಾಗಿ ಗಮನಿಸುವುದಾದರೆ,

| ಕೃತಿ ಮತ್ತು ಪ್ರಕಾಶಕರು | ಕತೆ/ಕಾವ್ಯಗಳ ಒಟ್ಟು ಸಂಖ್ಯೆ | ಲೇಖಕಿಯರಿಗೆ ದೊರೆತ ಪ್ರಾತಿನಿಧ್ಯ |
|---|---|---|
| ೧. ಶತಮಾನದ ಕಾವ್ಯ<br>ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೧ | ೧೧೩ | ೧೪ |
| ೨. ದಕ್ಷಿಣ ಕನ್ನಡದ ಶತಮಾನದ ಕಾವ್ಯ,<br>ಕನ್ನಡ ಸಂಘ ಕಾಂತಾವರ | ೧೧೬ | ೦೨ |
| ೩. ಶತಮಾನದ ಲಲಿತ ಪ್ರಬಂಧ<br>ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೧ | ೬೨ | ೦೬ |
| ೪. ನಮ್ಮ ಕನ್ನಡ ಕಾವ್ಯ<br>ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,೧೯೯೭ | ೯೫ | ೦೧ |
| ೫. ಶತಮಾನದ ಸಣ್ಣಕತೆಗಳು<br>ಪ್ರಿಸಂ ಬುಕ್ಸ್, ೧೯೯೭ | ೪೫ | ೦೬ |

ಈ ಅಂಕಿಅಂಶಗಳೇ ಪ್ರಧಾನ ಸಾಹಿತ್ಯ ಚರಿತ್ರೆಯಲ್ಲಿ ಮಹಿಳೆಯರ ಸಾಧನೆಯ ದಾಖಲೀಕರಣದ ಅಸಮತೋಲನತೆಗೆ ಸಾಕ್ಷಿಯಾಗಿವೆ. ಸ್ತ್ರೀವಾದಿ ವಿಮರ್ಶೆಯು ಸಾಹಿತ್ಯ ಚರಿತ್ರೆಯನ್ನು ಮಹಿಳಾ ನೆಲೆಯಿಂದ ಪುನರ್‌ರಚಿಸುವ ಅಗತ್ಯವನ್ನು ಈ ಕಾರಣಕ್ಕಾಗಿ ಒತ್ತಾಯಿಸುತ್ತದೆ.

❖ ಪುರುಷರಿಂದ ರಚಿತವಾದ ಸಾಹಿತ್ಯದಲ್ಲಿ ಹೆಣ್ಣಿನ ಪ್ರತಿನಿಧೀಕರಣವನ್ನು ಪರಿಶೀಲಿಸುವುದು ಮತ್ತು ಮಹಿಳೆಯರಿಂದ ರಚಿತವಾದ ಸಾಹಿತ್ಯದಲ್ಲಿ ಹೆಣ್ಣಿನ ಪ್ರತಿನಿಧೀಕರಣವನ್ನು ಪರಿಶೀಲಿಸುವುದು ಸ್ತ್ರೀವಾದಿ ವಿಮರ್ಶೆಯ ಇನ್ನೊಂದು ಮುಖ್ಯ ಕಾಳಜಿಯಾಗಿದೆ.

ಈ ಚಿಂತನೆಯನ್ನು ಎಲೆನ್ ಶೋವಾಲ್ಟರ್‌ಳ ಮಾತುಗಳಲ್ಲಿ ಗಮನಿಸಬಹುದು. ಆಕೆ ಎಪ್ಪತ್ತರ ದಶಕದಲ್ಲಿ ಎರಡು ಪರಿಕಲ್ಪನೆಗಳನ್ನು ಬಳಸಿದ್ದಾಳೆ. ಅವುಗಳೆಂದರೆ –

೧. Androtext ಮತ್ತು Gynotext

೨. Androcritic ಮತ್ತು Gynocritic

ಇದರ ಪ್ರಕಾರ ಪುರುಷರು ರಚಿಸಿದ ಕೃತಿಗಳೆಲ್ಲಾ Androtext ಎನಿಸಿಕೊಂಡರೆ, ಮಹಿಳೆಯರು ರಚಿಸಿದ ಕೃತಿಗಳೆಲ್ಲ Gynotext ಎನಿಸಿಕೊಳ್ಳುತ್ತವೆ.

Androcritic ಎಂದರೆ ಪುರುಷರ ಕೃತಿಗಳನ್ನು ವಿಮರ್ಶೆ ಮಾಡಿದವರು. ಸ್ತ್ರೀಯರು ಮತ್ತು ಪುರುಷರು ಎಂಬ ಭೇದವಿಲ್ಲದೆ, ಪುರುಷರ ಪಠ್ಯವನ್ನು ವಿಮರ್ಶೆಗೆ ಒಳಪಡಿಸಿದವರೆಲ್ಲ Androcritic ಎನಿಸಿಕೊಳ್ಳುತ್ತಾರೆ. Gynocritic ಎಂದರೂ ಅಷ್ಟೇ. ಮಹಿಳೆಯರ ಕೃತಿಗಳಿಗೆ ಸ್ತ್ರೀ/ಪುರುಷ ಯಾರೇ ವಿಮರ್ಶೆ ಬರೆದಿರಲಿ – ಆ ಎಲ್ಲ ವಿಮರ್ಶಕರೂ Gynocritc ಎನಿಸುತ್ತಾರೆ. Gynocriticism ಎಂಬುದು ತುಂಬ ವ್ಯಾಪಕವಾದ ಅಧ್ಯಯನ. ಏಕೆಂದರೆ ಮಹಿಳೆಯರ ಬರವಣಿಗೆಯ ಇತಿಹಾಸ, ಪ್ರಕಾರ, ಶೈಲಿ, ರಚನೆ, ವಸ್ತು ಇವೆಲ್ಲವೂ ಇಲ್ಲಿ ಅಧ್ಯಯನಕ್ಕೆ ಒಳಪಡುತ್ತವೆ.

ಶೋವಾಲ್ಟರ್ ಪ್ರಕಾರ Gynocriticism ಎಂಬುದು ಸ್ತ್ರೀವಾದಿ ವಿಮರ್ಶೆಯ ಒಂದು ಭಾಗ. ಮೊದಲಿನದು ಕೇವಲ ಮಹಿಳೆಯರ ಕೃತಿಗಳ ಅಧ್ಯಯನಕ್ಕೆ ಸಂಬಂಧಿಸಿದರೆ, ಎರಡನೆಯದು ಎಲ್ಲರ ಕೃತಿಗಳ ಅಧ್ಯಯನವನ್ನು ಒಳಗೊಂಡಿರುತ್ತದೆ ಮತ್ತು ವೈಚಾರಿಕ ಅಧ್ಯಯನವಾಗಿರುತ್ತದೆ.

ಪ್ರಾಚೀನ ಕನ್ನಡ ಸಾಹಿತ್ಯವನ್ನು ತಕ್ಕಮಟ್ಟಿಗೆ ಓದಿದ ಯಾರಿಗೇ ಆದರೂ ಅಲ್ಲಿ ಸ್ತ್ರೀಯ ಪ್ರತಿನಿಧೀಕರಣ ಹೇಗಾಗಿದೆ ಎಂಬುದು ಅರಿವಿಗೆ ಬಂದಿರುತ್ತದೆ. ಪಂಪ, ರನ್ನ, ಪೊನ್ನ, ಕುಮಾರವ್ಯಾಸ, ರತ್ನಾಕರ ಮುಂತಾದ ಕವಿಗಳ ಕಾವ್ಯದಲ್ಲಿ ಬರುವ ಹೆಣ್ಣು ಗಂಡಿನ ಉಪಭೋಗದ ಪರಿಕರವಾಗಿ ಮಾತ್ರ ಮೂಡಿಬಂದಿದ್ದಾಳೆ. ಅವಳು ಕೇವಲ ಮೈ ಇರುವ, ಮನಸ್ಸೇ ಇಲ್ಲದ ಜೀವಿಯಾಗಿ ಚಿತ್ರಿತವಾಗಿದ್ದಾಳೆ. ಭರತೇಶ ವೈಭವದಲ್ಲಿ ಸ್ವಲ್ಪ ಅವಳ ಭಾವನೆಗೆ ಅವಕಾಶ ಸಿಕ್ಕಿದೆ ಎಂದುಕೊಂಡರೂ, ಸುಂದರ ಆಕಾರವುಳ್ಳ, ಹಾಡುವ, ಕಾವ್ಯ ರಚಿಸುವ, ಮಾತನಾಡುವ ಸ್ತ್ರೀಯರಿದ್ದಾರೆಯೇ ಹೊರತು ಬೌದ್ಧಿಕವಾಗಿ ಚಿಂತಿಸುವ, ತಮ್ಮ ಅಸ್ಮಿತೆಯ ಬಗೆಗೆ ಹುಡುಕಾಟ ನಡೆಸುವ ಸ್ತ್ರೀಯರು ದೊರೆಯುವುದಿಲ್ಲ. ಮುದ್ದಣ ಮೊತ್ತಮೊದಲು ಹೆಣ್ಣಿಗೆ ವ್ಯಕ್ತಿತ್ವವನ್ನು ನೀಡಿದ ಕವಿ ಎನ್ನಬಹುದು. ಆದ್ದರಿಂದ ಮನೋರಮೆ ಮೊದಲ ವಿಮರ್ಶಕಿಯಾಗಿ ಕಂಡುಬರುತ್ತಾಳೆ. ಹೊಸಗನ್ನಡದ ಕುವೆಂಪು, ಕಾರಂತ, ಅನಂತಮೂರ್ತಿ, ಶಾಂತಿನಾಥ ದೇಸಾಯಿ ಮುಂತಾದ ಎಲ್ಲ ಲೇಖಕರ ಕೃತಿಗಳಲ್ಲಿ ಸ್ತ್ರೀಪಾತ್ರಗಳ ಪ್ರತಿನಿಧೀಕರಣ ಹೇಗಾಗಿದೆ ಎಂಬುದನ್ನು ಸುಮಿತ್ರಾಬಾಯಿ ಬಿ.ಎನ್., ಎನ್.ಗಾಯತ್ರಿ, ವಿಜಯಾ ದಬ್ಬೆ, ಚಂದ್ರಮತಿ ಸೋಂಪಾ, ಎಲ್.ಸಿ. ಸುಮಿತ್ರ ಮುಂತಾದ ಹಲವರು ತಮ್ಮ ವಿಮರ್ಶಾ ಲೇಖನಗಳಲ್ಲಿ ವಿಶ್ಲೇಷಿಸಿದ್ದಾರೆ.

ಇದೇ ರೀತಿಯ ಅಧ್ಯಯನವನ್ನು ಮಹಿಳೆಯರಿಂದ ರಚಿತವಾದ ಸಾಹಿತ್ಯಕ್ಕೂ ಅನ್ವಯಿಸಬೇಕಾಗಿದೆ. ಲೇಖಕಿಯರ ಕೃತಿಗಳಲ್ಲಿ ಸಿದ್ಧಮಾದರಿಯ ಪಾತ್ರಗಳು, ಸ್ವಂತಿಕೆಯ ಹುಡುಕಾಟದ ಪಾತ್ರಗಳು, ಅನನ್ಯ ಸ್ತ್ರೀ ಚೇತನಗಳು ಎಲ್ಲೆಲ್ಲಿ ಬಂದಿವೆ, ಹೇಗೆ ಬಂದಿವೆ ಎಂಬ ಅಧ್ಯಯನ ಸ್ತ್ರೀವಾದಿ ವಿಮರ್ಶೆಯ ಆಸಕ್ತಿಯಾಗಿದೆ.

◆ ಸಾಹಿತ್ಯದಲ್ಲಿ ಹೆಣ್ಣನ್ನು ಪ್ರತಿನಿಧಿಸುವಾಗ ಆಕೆಯನ್ನು ಅನ್ಯವೆಂದು, ಕೊರತೆಯೆಂದು, ನಿಸರ್ಗದ ಭಾಗವೆಂದು ಚಿತ್ರಿಸುವುದನ್ನು ಪ್ರಶ್ನಿಸುವುದು ಸ್ತ್ರೀವಾದದ ಕಾರ್ಯವಾಗಿದೆ. ಪುರಾಣಗಳು ಹೆಣ್ಣನ್ನು ಮೂರು ಪಡಿಯಚ್ಚುಗಳಲ್ಲಿ (ದೇವತೆ, ರಾಕ್ಷಸಿ, ಮೋಹಿನಿ) ಚಿತ್ರಿಸಿದಂತೆ ಕನ್ನಡ ಸಾಹಿತ್ಯವೂ ಹೆಣ್ಣನ್ನು ತಾಯಿ, ಪ್ರೇಯಸಿ ಮತ್ತು ಪತ್ನಿ ಎಂಬ ಮೂರು ಪಡಿಯಚ್ಚಿನಲ್ಲಿ ಕಡೆದಿಟ್ಟಿದೆ. ಎಂದರೆ ಇಲ್ಲಿ ತಾಯಿಯಾದವಳಿಗೆ ಮಕ್ಕಳನ್ನು ಪೋಷಿಸುವ, ಮಕ್ಕಳು ಎಸಗುವ ಯಾವುದೇ ಬಗೆಯ ಹಿಂಸೆ ಮತ್ತು ಉಪಟಳಗಳನ್ನು ಕ್ಷಮಿಸುವ ಕರ್ತವ್ಯವನ್ನು ಆರೋಪಿಸುತ್ತದೆ. ಪತ್ನಿಯಾದವಳು ಗಂಡನಿಗೆ ವಿಧೇಯಳಾಗಿದ್ದುಕೊಂಡು, ಆತನ ಎಲ್ಲ ಬಯಕೆಗಳನ್ನು ಈಡೇರಿಸಬೇಕು, ಆತನ ಹಿಂಸೆಗಳನ್ನು ಸಹಿಸಿಕೊಂಡಿರಬೇಕು ಎಂಬ ಕರ್ತವ್ಯಗಳನ್ನು ಹೇರುತ್ತದೆ. ಪ್ರೇಯಸಿಯ ಚಿತ್ರಣವೂ ವಿಶಿಷ್ಟವಾಗಿದೆ. ಪತ್ನಿಯನ್ನು ಪ್ರೇಯಸಿಯಾಗಿ ಗ್ರಹಿಸದ ಚಿಂತನೆಯೂ ಇಲ್ಲಿದೆ. ಅಷ್ಟೇ ಅಲ್ಲ, ಈಕೆ ಗಂಡಸಿನ ಭೋಗದ ಸಾಮಗ್ರಿಯಾಗಿ ಕಾರ್ಯ ನಿರ್ವಹಿಸುವುದನ್ನು ಕರ್ತವ್ಯವೆಂಬಂತೆ ಸೂಚಿಸಲಾಗಿದೆ. ಪ್ರೇಯಸಿ ಅಥವಾ ಮೋಹಿನಿ ಈ ಪಡಿಯಚ್ಚುಗಳು ಗಂಡಿನ ಇಂದ್ರಿಯನಿಗ್ರಹವನ್ನು ಕೆಡಿಸುವವಳು ಎಂಬ ಅರ್ಥವನ್ನು ಧ್ವನಿಸುತ್ತವೆ. ಎಂದರೆ ಇಲ್ಲಿ ಗಂಡಸಿನಲ್ಲಿ ಸಹಜವಾಗಿ ಇಂದ್ರಿಯನಿಗ್ರಹ ಇರುತ್ತದೆ; ಅದನ್ನು ಕೆಡಿಸುವವಳು ಸ್ತ್ರೀ ಎಂಬುದು ಅಂತರಾರ್ಥ. ಇಂತಹ ಚಿಂತನೆಗಳನ್ನು ನಾವು ಆಧುನಿಕ ಸಾಹಿತ್ಯದಲ್ಲಿ ಕೂಡ ಹೇರಳವಾಗಿ ಕಾಣಬಹುದು. ಸಿಮನ್ ದಿ ಬುವಾ ಈ ಚಿಂತನೆಗಳನ್ನು ಅದರ ಹಿಂದಿನ ರಾಜಕೀಯವನ್ನು ತನ್ನ ಕೃತಿಯಲ್ಲಿ ಅನಾವರಣಗೊಳಿಸಿದ್ದಾಳೆ.

ಸಮಾಜ ರಚನೆಯೊಳಗೆ ಕೂಡಾ ಹೆಣ್ಣನ್ನು ಅನ್ಯ ಎಂದು ಪರಿಗಣಿಸಲಾಗಿದೆ. ಸಮಾಜದಲ್ಲಿ ಆಕೆಗೆ ಕ್ರಿಯಾಶೀಲವಾದ ಪಾತ್ರವಿಲ್ಲ. ಸಮಾಜದ ಕೇಂದ್ರದಲ್ಲಿ ಹೆಣ್ಣು ಕಾಣಿಸುವುದಿಲ್ಲ. ಏನಿದ್ದರೂ ಅವಳ ಸ್ಥಾನ ಅಂಚಿನಲ್ಲಿ ಮಾತ್ರ ಇರುತ್ತದೆ. ಅವಳಿಗೆ ಕ್ರಿಯಾಶೀಲವಾದ ಯಾವ ಪಾತ್ರಗಳನ್ನೂ ಸಮಾಜವು ನೀಡುವುದಿಲ್ಲ. ಏನಿದ್ದರೂ ಪುರುಷನಿಗೆ ಅವಲಂಬಿತವಾಗಿ ಅವಳ ಬದುಕಿನ ಸಾರ್ಥಕತೆ ಎಂದು ಬಿಂಬಿಸಲಾಗುತ್ತದೆ. ಈ ಮನೋಧರ್ಮ ಸಾಹಿತ್ಯಕ್ಕೂ ವರ್ಗಾವಣೆಗೊಂಡಾಗ, ಸಾಹಿತ್ಯಿಕ ಪಠ್ಯದಲ್ಲೂ ಅವಳ ಹಾಜರಿ ದ್ವಿತೀಯ ದರ್ಜೆಯ ಮಟ್ಟಕ್ಕೆ ಇಳಿಯುತ್ತದೆ. ಒಂದೋ ಅವಳ ಹಾಜರಿಯನ್ನೇ ನಿರಾಕರಿಸುವುದು, ಅದು ಸಾಧ್ಯವಾಗದಿದ್ದಲ್ಲಿ ಅವಳನ್ನು ಸೇವಕಿಯ ಮಟ್ಟಕ್ಕೆ ಸೀಮಿತಗೊಳಿಸುವುದು ಕಂಡುಬರುತ್ತದೆ. ಇಂದಿಗೂ ಹೆಚ್ಚಿನ ಸಾಹಿತ್ಯಿಕ ಪಠ್ಯಗಳಲ್ಲಿ ಸವಾಲಿನ ಮತ್ತು ಸಾಧನೆಯ ಕೆಲಸಗಳನ್ನು ಮಾಡುವಾತ ಪುರುಷನೇ ಆಗಿರುತ್ತಾನೆ. ಹೆಣ್ಣು ಎಂದೂ ಕೇಂದ್ರಕ್ಕೆ ಬರುವುದಿಲ್ಲ. ಅಂಚಿನಲ್ಲಿ ಉಳಿದಿರುತ್ತಾಳೆ. ಇಂಥ ಚಿಂತನಾಕ್ರಮಗಳನ್ನು ಸ್ತ್ರೀವಾದಿ ವಿಮರ್ಶೆಯು ಪ್ರಶ್ನಿಸುತ್ತದೆ.

◆ ಸಾಹಿತ್ಯವನ್ನು ಓದುವುದು ಎಂಬುದೇ ಒಂದು ರಾಜಕೀಯ ವಿವರಣೆಯಾಗುತ್ತದೆ. ಬದುಕಿನಲ್ಲಿ ಕಾಣುವ ಶಕ್ತಿಯ ಅಥವಾ ಪ್ರಭುತ್ವದ ಸಂಬಂಧಗಳನ್ನು ನಾವು ಸಾಹಿತ್ಯಿಕ ಪಠ್ಯದೊಳಗೂ ಗುರುತಿಸಬಹುದು. ಸ್ತ್ರೀವಾದಿ ವಿಮರ್ಶೆಯು ಇಂಥ ಸಂಬಂಧಗಳನ್ನು ಗುರುತಿಸಿ, ಅದನ್ನು ಒಡೆಯುವ ಕೆಲಸದಲ್ಲಿ ಆಸಕ್ತಿಯನ್ನು ತಾಳುತ್ತದೆ. ಆದ್ದರಿಂದ ಸಾಹಿತ್ಯದ ಓದುವಿಕೆಯು ನಾವು ನಮ್ಮ ಬದುಕನ್ನು ಕಾಣುವ ದೃಷ್ಟಿಕೋನವನ್ನು ಬದಲಾಯಿಸುತ್ತದೆ. ನಿದರ್ಶನಕ್ಕೆ ಮಹಿಳೆಯರ ವ್ರತದ ಕತೆಗಳನ್ನು ತೆಗೆದುಕೊಳ್ಳೋಣ. ಇದರಲ್ಲಿ ವಾಚಕರೇ ಸಾಧಕರೂ ಆಗಿದ್ದಾರೆ. ಅವರು ಕತೆಗಳನ್ನು ಭಕ್ತಿಭಾವದಿಂದ ಓದುವುದರಿಂದ ಅವರಿಗೆ ಅವುಗಳ ಸಾಹಿತ್ಯಿಕ ಮೌಲ್ಯ ಮುಖ್ಯವಾಗುವುದಿಲ್ಲ. ಇನ್ನು ವಿಮರ್ಶಕರ ಆಸಕ್ತಿಯೇ ಬೇರೆ. ಒಟ್ಟು ಕಥಾಸಾಹಿತ್ಯದಲ್ಲಿ ವ್ರತದ ಕತೆಗಳ ಸ್ಥಾನಮಾನ ಏನಾಗಿದೆ, ಕಥೆಯ ಸ್ವರೂಪ, ಅದರಲ್ಲಿನ ವ್ಯಕ್ತಿ ವೈಶಿಷ್ಟ್ಯಗಳೇನು ಮುಂತಾದುವು ವಿಮರ್ಶಕರ ಆಸಕ್ತಿಯಾಗುತ್ತವೆ. ಶೈಲಿ ಶಾಸ್ತ್ರಜ್ಞರಿಗೆ ವ್ರತದ ಕತೆಗಳ ಇನ್ನಿತರ ಅಂಶಗಳಿಗಿಂತ ಅಲ್ಲಿ ಬಳಕೆಯಾಗಿರುವ ಭಾಷಿಕ ವೈಶಿಷ್ಟ್ಯ ಮುಖ್ಯವಾಗುತ್ತದೆ. ಆದರೆ ಸ್ತ್ರೀವಾದಿ ವಿಮರ್ಶೆಗೆ ವ್ರತದ ಕತೆಗಳ ಸಾಹಿತ್ಯಿಕ ಮೌಲ್ಯಕ್ಕಿಂತ ಸಾಮಾಜಿಕ ಮೌಲ್ಯಮಾಪನ ಮುಖ್ಯವಾಗುತ್ತದೆ. ಎಂದರೆ ವ್ರತದ ಕಥೆಯಲ್ಲಿ ಒಡಮೂಡುವ ಸ್ತ್ರೀ ಎಂಥವಳು? ಸಾಮಾಜಿಕ ವ್ಯವಸ್ಥೆಯಲ್ಲಿ ಅವಳಿಗಿರುವ ಸ್ಥಾನ ಯಾವುದು? ಅವಳ ಸ್ತ್ರೀಧರ್ಮ ಯಾವುವೆಂದು ಸೂಚಿತವಾಗಿವೆ? ಅವಳು ಏತಕ್ಕಾಗಿ ವ್ರತನಿಯಮಗಳನ್ನು ಆಚರಿಸುತ್ತಿದ್ದಾಳೆ? ಅವಳ ವ್ಯಕ್ತಿತ್ವದ ಸ್ವತಂತ್ರ ಸಂಗತಿಗಳು ಸಾಹಿತ್ಯದ ಮೇಲೆ ಪ್ರಭಾವಿಸಿವೆಯೇ? ಇವೇ ಮುಂತಾದ ಸಂಗತಿಗಳ ನೆಲೆಯಲ್ಲಿ ವ್ರತದ ಕತೆಗಳನ್ನು ಸ್ತ್ರೀವಾದವು ವಿಶ್ಲೇಷಿಸತೊಡಗುತ್ತದೆ. ಈ ರೀತಿಯ ಓದುವಿಕೆ ಎಂಬುದೇ ಒಂದು ರಾಜಕೀಯ ಚಟುವಟಿಕೆ. ಅದರಿಂದ ಪುರುಷ ಪಠ್ಯವೊಂದು ಹೇಗೆ ಪುರುಷ ಪ್ರಭುತ್ವವನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಗಮನಿಸುವುದು ಮತ್ತು ಆ ರೀತಿಯ ಸಂಗತಿಯನ್ನು ಒಡೆಯುವ ಕೆಲಸವನ್ನು ಸ್ತ್ರೀವಾದಿ ವಿಮರ್ಶೆ ಮಾಡುತ್ತದೆ. (ಪುರುಷೋತ್ತಮ ಬಿಳಿಮಲೆ ಅವರ ಲೇಖನ – ಜನಪದ ಕಥೆಯೊಂದು ಪಿತೃಪ್ರಧಾನ ಚಿಂತನೆಗೆ ಒಳಪಟ್ಟಾಗ ಪಡೆಯುವ ರೂಪಾಂತರದ ಕುರಿತ ಸೂಕ್ಷ್ಮ ಒಳನೋಟಗಳನ್ನು ಕೊಡುತ್ತದೆ.)

◆ ಗಂಡು ಮತ್ತು ಹೆಣ್ಣಿನ ನಡುವೆ ನಿರ್ಮಾಣವಾಗಿರುವ ಭಿನ್ನತೆಯು ಮುಖ್ಯವಾಗಿ ಜೈವಿಕ ನೆಲೆಯದ್ದೋ ಅಥವಾ ಸಾಮಾಜಿಕ ನೆಲೆಯಿಂದ ರೂಪುಗೊಂಡದ್ದೋ ಎಂಬ ಪ್ರಶ್ನೆಯನ್ನು ಸ್ತ್ರೀವಾದಿ ತಾತ್ವಿಕತೆ ಸಾಕಷ್ಟು ಗಂಭೀರವಾಗಿ ಚರ್ಚಿಸುತ್ತದೆ. ಜೈವಿಕ ಭಿನ್ನತೆಗಿಂತ ಸಾಮಾಜಿಕ ಭಿನ್ನತೆಯು ಉಂಟುಮಾಡುವ ಗಂಭೀರ ಊನತೆಗಳನ್ನು ಸ್ತ್ರೀವಾದಿ ವಿಮರ್ಶೆಯು ವಿಶ್ಲೇಷಿಸುತ್ತದೆ. ಬದುಕಿನಲ್ಲಿ ಹೆಣ್ಣಿನದ್ದೇ ಆದ ಗುಣಗಳು, ಗಂಡಿನದ್ದೇ ಆದ ಗುಣಗಳು ಎಂದು ಹೆಣ್ಣಿನಲ್ಲಿರುವ ಗಂಡು ಗುಣಗಳು ಎಂದು ವರ್ಗೀಕರಿಸುವುದು ಸಾಧ್ಯವಿಲ್ಲ. ಆದುದರಿಂದ ಗಂಡಿನಲ್ಲಿರುವ ಹೆಣ್ಣು ಗುಣಗಳನ್ನು ನಿರುತ್ತೇಜಿಸುವ ಬದಲು ಮಾನ್ಯ ಮಾಡಬೇಕೆಂದು ಸ್ತ್ರೀವಾದಿ ವಿಮರ್ಶೆ ಪ್ರತಿಪಾದಿಸುತ್ತದೆ. ಹೀಗೆ ಪ್ರತಿಯೊಬ್ಬರಲ್ಲೂ ಇರುವ ದ್ವಿಲಿಂಗಿ ಗುಣಗಳಿಗೆ ಸ್ತ್ರೀವಾದ ಗೌರವವನ್ನು ಕೊಡುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿ ಇದ್ದುದಕ್ಕಿಂತ ಆಧುನಿಕ ಸಮಾಜದಲ್ಲಿ ಗಂಡು-ಹೆಣ್ಣಿನ ಭಿನ್ನತೆಗಳ ಪ್ರಮಾಣ ಕಡಿಮೆಯಾಗುತ್ತ ಬಂದಿವೆ ಎನ್ನಬಹುದು. ಆದರೆ

ಸೂಕ್ಷ್ಮವಾಗಿ ಗಮನಿಸಿದರೆ, ಹಳೆ ಮಾದರಿಗಳು ದುರ್ಬಲವಾದಂತೆ ಕೆಲ ಹೊಸ ಮಾದರಿಗಳು ಸ್ಥಾಪನೆಗೊಳ್ಳುತ್ತಿರುತ್ತವೆ.

◆ ಭಾಷೆಯ ಬಳಕೆಗೂ ಸ್ತ್ರೀವಾದದ ಚಿಂತನಾಕ್ರಮಕ್ಕೂ ನಿಕಟವಾದ ಸಂಬಂಧವಿದೆ. ಮಧ್ಯದ್ರಾವಿಡ ಭಾಷೆಗಳಲ್ಲಿ ಲಿಂಗ ಮತ್ತು ವಚನ ವಿವಕ್ಷೆಯನ್ನು ಮಾಡುವಾಗ ಹೆಣ್ಣು ಅಮಹತ್ ವರ್ಗಕ್ಕೆ ಸೇರುತ್ತಾಳೆ. ತೆಲುಗಿನಲ್ಲಿ ಅದಿ ಎಂದರೆ 'ಅದು' ಮತ್ತು 'ಅವಳು' ಎಂಬ ಎರಡೂ ಅರ್ಥಗಳಿವೆ. 'ಮಂಚಿದಿ' ಎಂದರೆ 'ಒಳ್ಳೆಯದು' ಎಂಬ ಅರ್ಥವೂ 'ಒಳ್ಳೆಯವಳು' ಎಂಬ ಅರ್ಥವೂ ಇದೆ. ಹೀಗೆ ಸ್ತ್ರೀವಾಚಕ ಪದಗಳು ಏಕವಚನವಾಗಿದ್ದಾಗ ನಪುಂಸಕಲಿಂಗಕ್ಕೂ ಬಹುವಚನವಾದಾಗ ಪುಲ್ಲಿಂಗಕ್ಕೂ ಸೇರುತ್ತವೆ. ಇಸ್ಲಾಂ ಧರ್ಮೀಯರ ಕಾನೂನಿನಲ್ಲಿ ಓರ್ವ ಪುರುಷನ ಸಾಕ್ಷ್ಯಕ್ಕೆ ವಿರುದ್ಧವಾಗಿ ಇಬ್ಬರು ಮಹಿಳೆಯರು ಸಾಕ್ಷ್ಯ ನುಡಿದಾಗ ಮಾತ್ರ ಅದು ಸಮಬಲವನ್ನು ಪಡೆಯುತ್ತದೆ. ಎಂದರೆ ಸಮಾಜವೊಂದು ಗಂಡು-ಹೆಣ್ಣಿನ ಕುರಿತು ಹೊಂದಿರುವ ಲಿಂಗ ಅಸಮಾನತೆಯ ಸೂಚಕಗಳಾಗಿ ಇವು ಉಳಿದುಕೊಂಡಿವೆ.

ಸಾಮಾನ್ಯವಾಗಿ ಅಧಿಕಾರ ಸೂಚಕ ಪದಗಳೆಲ್ಲ ಪುರುಷ ವಾಚಿಗಳೇ. ಮಹಿಳೆ ಒಂದೊಂದೇ ಕ್ಷೇತ್ರವನ್ನು ಪ್ರವೇಶಿಸತೊಡಗಿದಂತೆ, ಸ್ತ್ರೀವಾಚಿ ಪ್ರತ್ಯಯಗಳನ್ನು ಸೇರಿಸಿ ಹೊಸ ಪದಗಳ ಸೃಷ್ಟಿ ಮಾಡುತ್ತಿರುವುದು ಸಾಮಾನ್ಯ. (ಅರಸ-ಅರಸಿ, ಮಂತ್ರಿ-ಮಂತ್ರಿಣಿ, ನ್ಯಾಯಾಧೀಶ-ನ್ಯಾಯಾಧೀಶೆ, ವೈದ್ಯ-ವೈದ್ಯೆ...) ರಾಜ್ಯಪಾಲ ಹುದ್ದೆಗೆ ಮಹಿಳಾ ಅಭ್ಯರ್ಥಿ ಬಂದಾಗ ರಾಜ್ಯಪಾಲೆ ಎಂದೇನೋ ಮಾಡಿದರು. ರಾಷ್ಟ್ರಪತಿ ಹುದ್ದೆಗೆ ಮಹಿಳೆ ಬಂದಾಗ (ಒಂದೊಮ್ಮೆ ಬಂದರೆ) ಯಾವ ಪದ ನಿರ್ಮಾಣವಾದೀತು ಎಂಬ ಕುತೂಹಲ ನನ್ನದು.

ಇಂಗ್ಲೀಷಿನಲ್ಲೂ government, law ಮುಂತಾದ ಪದಗಳನ್ನು ಬಳಸುವಾಗ 'He' ಎಂದೇ ಸಂಬೋಧಿಸಲಾಗುತ್ತಿತ್ತು. ಏಕೆಂದರೆ, ಇಂಥ ಕಾನೂನು/ಸರಕಾರಗಳನ್ನು ರಚಿಸಿದವರು ಗಂಡಸರು. ಇಂದು ಇದು ಬದಲಾಗಿದೆ. He/She ಎಂದು ಬರೆಯುವ ಪದ್ಧತಿ ಇದೆ. ಇಲ್ಲಿ ಹೇಳಬೇಕಾದುದು ಏನೆಂದರೆ, ವ್ಯಾಕರಣ ಮಾತ್ರವಲ್ಲ, ನಾವು ಮಾತನಾಡುವ, ಬರೆಯುವ ಭಾಷೆ ಕೂಡಾ ಕಟ್ಟಲ್ಪಟ್ಟದ್ದು. ನಾವು ಸಹಜವೆಂದು ಭಾವಿಸುವ ಎಷ್ಟೋ ಪದಗಳು, ಪರಿಕಲ್ಪನೆಗಳನ್ನು ಒಡೆದು, ಅದನ್ನು ವ್ಯಾಖ್ಯಾನಿಸುವುದರಲ್ಲಿ ಸ್ತ್ರೀವಾದಿ ವಿಮರ್ಶೆಯು ಆಸಕ್ತಿಯನ್ನು ಹೊಂದಿದೆ. ಈಗಿರುವ ರೂಢಿಯ ಮಾತುಗಳಲ್ಲಿ ಸ್ತ್ರೀ-ಪುರುಷ ಸಂಬಂಧವನ್ನು ಹೇಳಲು ಯಾವ ರೀತಿಯ ಉಪಮೆಗಳನ್ನು ಬಳಸಲಾಗುತ್ತಿದೆ ಎಂಬುದರ ಚರ್ಚೆಯೂ ಸಾಕಷ್ಟು ನಡೆದಿದೆ. ನದಿ-ಸಾಗರ, ಹೂ-ದುಂಬಿ, ಬಳ್ಳಿ-ಮರ ಮುಂತಾದ ಹೋಲಿಕೆಗಳ ಒಳಗೆ ಪಿತೃಪ್ರಧಾನ ಮೌಲ್ಯಗಳ ಸಮರ್ಥನೆ ಅಡಕವಾಗಿರುವುದನ್ನು ಅನಾವರಣ ಮಾಡಲಾಗಿದೆ. ದ್ವಿಲಿಂಗಿ ಪ್ರಧಾನವಾದ ಅಥವಾ ಸಮಾನವಾದ ಹೋಲಿಕೆಗಳ ಶೋಧದತ್ತ, ಅಂಥ ಉಪಮೆಗಳ ಬಳಕೆಯತ್ತ ಹೆಚ್ಚು ಕ್ರಿಯಾಶೀಲವಾಗಬೇಕಾದ ತುರ್ತನ್ನು ಸ್ತ್ರೀವಾದ ಮುಂದಿಡುತ್ತದೆ.

'ಮಹಿಳಾ ಭಾಷೆ' ಎಂಬುದೊಂದು ಇದೆಯೇ ಎಂಬ ಪ್ರಶ್ನೆ ಮೇಲಿಂದ ಮೇಲೆ ಏಳುತ್ತದೆ. ಸಾಹಿತ್ಯದಲ್ಲಿ ಮಾತ್ರವಲ್ಲ ಬದುಕಿನ ಎಲ್ಲ ರಂಗಗಳಲ್ಲೂ ಸ್ತ್ರೀಪುರುಷರ ಅಭಿವ್ಯಕ್ತಿಗೆ ಬಳಕೆಯಾಗುವ ಭಾಷೆಗಳಲ್ಲಿ ಖಂಡಿತವಾಗಿಯೂ ವ್ಯತ್ಯಾಸಗಳಿವೆ. ಪುರುಷರ ಭಾಷೆ ಹೆಚ್ಚು ಖಚಿತವೂ, ಆದೇಶಾತ್ಮಕವೂ, ವ್ಯಾಖ್ಯಾನ ರೂಪದ್ದೂ ಆಗಿದ್ದರೆ, ಮಹಿಳೆಯರ ಭಾಷೆ ಹೆಚ್ಚು ಅಸ್ಪಷ್ಟವಾದದ್ದು; ಅನುಮೋದನಾ ಮಾದರಿಯ ಕ್ರಿಯಾಪದಗಳಿಂದ ಕೂಡಿರುತ್ತದೆ; ವಿವರಣಾತ್ಮಕ ಮಾದರಿಯ ವಾಕ್ಯಗಳಿಂದ ಕೂಡಿರುತ್ತದೆ ಎಂಬುದನ್ನು ಕೆಲವು ವಿದ್ವಾಂಸರು ಈಗಾಗಲೇ ಸೋದಾಹರಣವಾಗಿ ಚರ್ಚಿಸಿದ್ದಾರೆ. ಇವೆಲ್ಲಕ್ಕೂ ಸಮಾಜದಲ್ಲಿ ಅವರಿಬ್ಬರಿಗಿರುವ ಅವಕಾಶಗಳೇ ಕಾರಣ ಎಂದು ವಿವರಿಸಬೇಕಾಗಿಲ್ಲ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಗಮನಿಸಿದರೆ, ವಚನಕಾರರಲ್ಲೇ ಅಲ್ಲಮ ಪ್ರಭು ಮತ್ತು ಅಕ್ಕಮಹಾದೇವಿಯು ಬಳಸುವ ರೂಪಕಗಳನ್ನು ತುಲನಾತ್ಮಕವಾಗಿ ನೋಡಬಹುದು. ಔಪಚಾರಿಕವಾದ ಭಾಷೆ ಲೇಖಕರ ಕೃತಿಗಳಲ್ಲಿ ಕಂಡು ಬಂದರೆ, ಅನೌಪಚಾರಿಕ ಭಾಷೆ ಸ್ತ್ರೀಯಾತ್ಮಕ ಮಾದರಿಯ ಲೇಖಕಿಯರಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಇದಕ್ಕೆ ಹೆಣ್ಣು ಹೆಚ್ಚಾಗಿ ಅನೌಪಚಾರಿಕ ಕ್ಷೇತ್ರದಲ್ಲೇ ಸಮಯ ಕಳೆಯುವುದು ಕಾರಣ ಎಂಬ ಅಭಿಪ್ರಾಯವೂ ಕೇಳಿಬರುತ್ತದೆ. ಮನೆಯೆಂಬ ಖಾಸಗಿ ಜಗತ್ತಿನಲ್ಲೇ ಕಾಲಕಳೆಯುವ ಹೆಣ್ಣು ಚಾವಡಿಯಲ್ಲಿ ಕಾಣಿಸಿಕೊಳ್ಳುವುದೇ ಕಡಿಮೆ. ಮನೆಗೆ ಸಂಬಂಧಿಸಿದ ಮಹತ್ವದ ತೀರ್ಮಾನದಲ್ಲಿ ಅವಳಿಗೆ ಅವಕಾಶ ಸಿಗುವುದು ಇನ್ನೂ ವಿರಳ. ಮನೆಯಿಂದ 'ಹೊರಗೆ' ಆಕೆ ಪ್ರೇಕ್ಷಕಿಯಾಗುತ್ತಾಳೆಯೇ ಹೊರತು ಅಲ್ಲೂ ಮಾತಾಡುವ ಅವಕಾಶಗಳಿರುವುದಿಲ್ಲ. ಆದುದರಿಂದ ಒಮ್ಮೆಲೇ ಸಾರ್ವಜನಿಕ ವಲಯಕ್ಕೆ ಬಂದ ತಕ್ಷಣ ಸಂಕೋಚ, ಅಂಜಿಕೆ, ಮುಜುಗರಗಳು ಅವಳನ್ನು ಮುತ್ತಿಕೊಂಡು, ಆಕೆಯ ಭಾಷೆ ಅನೌಪಚಾರಿಕವಾಗುತ್ತದೆ. 'ಹೊರಗೆ' ಬರಲೇಬೇಕಾದಾಗಲೂ ಅವಳು ಪುರುಷ ಮಾದರಿಗಳನ್ನು ಆಯ್ದುಕೊಳ್ಳಲು ಹೊರಟಾಗ, ಸಂಕೀರ್ಣ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವಿಭಕ್ತ ಕುಟುಂಬಗಳು ವಿರಳವಾಗಿ ವಿಭಕ್ತ ಕುಟುಂಬಗಳೇ ಸಹಜವೆನಿಸಿರುವ ಇಂದಿನ ದಿನಗಳಲ್ಲಿ ಹೆಣ್ಣು ಚಾವಡಿಯಲ್ಲಿ ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾಳೆ. ಇಂದು ಬೇರೆ ಬೇರೆ ಕಾರಣಗಳಿಗಾಗಿ ಖಾಸಗಿ ವಲಯದಿಂದ ಸಾರ್ವಜನಿಕ ವಲಯಕ್ಕೆ ಮಹಿಳೆ ಬರುವ ಸಂದರ್ಭಗಳು ಹೆಚ್ಚುತ್ತಿರುವುದರಿಂದ ಅವು ಇಬ್ಬರ ಭಾಷೆಯ ನಡುವಿನ ವ್ಯತ್ಯಾಸಗಳನ್ನು ಕಡಿಮೆ ಮಾಡುತ್ತವೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

◆ ಸ್ತ್ರೀ ಅನನ್ಯತೆ (female identity) ಮತ್ತು ಪುರುಷ ಅನನ್ಯತೆ(male identity) – ಇವು ಸ್ತ್ರೀವಾದದ ಒಟ್ಟು ಆಲೋಚನೆಗಳಲ್ಲಿ ಮುಖ್ಯವಾದ ಒಂದು ಪ್ರಶ್ನೆ ಎನಿಸಿಕೊಂಡಿದೆ. ಒಂದು ಕಾಲದಲ್ಲಿ female identity ಮತ್ತು male identity ಇವುಗಳನ್ನು ಇಟ್ಟುಕೊಳ್ಳಬೇಕು ಎಂಬ ವಾದವಿತ್ತು. ಮನೋವಿಶ್ಲೇಷಣೆಯ ದೃಷ್ಟಿಯಿಂದ ನೋಡುವಾಗ ಇವು ಎರಡೂ ಮನೆಯಿಂದಲೇ ಆರಂಭವಾಗುತ್ತವೆ. ಇಲ್ಲಿ ಹೆಣ್ಣಿಗೆ ಮನೆಗೆಲಸ ಮಾಡುವ identity ಇರುತ್ತದೆ. ಅದೇ ರೀತಿಯಲ್ಲಿ ಪುರುಷ ಎಷ್ಟೇ ಪ್ರಗತಿಪರನಾದರೂ, ಮನೆಯಲ್ಲಿ ಹೆಂಡತಿ ಆತನಿಗೆ ಎದುರು ವಾದಿಸಿದರೆ ಸಹಿಸಲಾರ. ಏಕೆಂದರೆ 'ಪುರುಷ' ಎಂಬ 'ಅಹಂ' ನ್ನು ಇಟ್ಟುಕೊಳ್ಳುವ identity

ಅಪನಿದ್ದಾಗಿರುತ್ತದೆ. ಇವೆಲ್ಲ ಮಾನಸಿಕವೇ. ಆದರೆ ಇದರ ಬೇರು ಎಷ್ಟು ಆಳವಾಗಿರುತ್ತವೆ ಎಂಬುದನ್ನು ಸ್ತ್ರೀವಾದಿ ವಿಮರ್ಶೆ ಪರಿಶೀಲಿಸುತ್ತದೆ.

Female identity ಬೇಕು ಎನ್ನುವುದರ ಹಿಂದೆ ಒಂದು ಹಿತಾಸಕ್ತಿಯೂ ಇದೆ. ಇದರಲ್ಲಿ ರಾಜಕೀಯ ವ್ಯಾಪ್ತಿಯೊಳಗೆ ಸವಲತ್ತುಗಳನ್ನು ಅಥವಾ ಹಕ್ಕುಗಳನ್ನು ಪಡೆಯುವ ಉದ್ದೇಶವಿರುತ್ತದೆ (ದಲಿತ identity, ಅಲ್ಪ ಸಂಖ್ಯಾತ identity ಇತ್ಯಾದಿಗಳಂತೆ). ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ 'ಮಹಿಳಾ ಗೋಷ್ಠಿ'ಗಳನ್ನು ಇಡಬೇಕು ಎಂಬ ಚರ್ಚೆ ಆರಂಭವಾಗಿ, ಅನಂತರ ಪ್ರತ್ಯೇಕ ಮಹಿಳಾ ಸಾಹಿತ್ಯ ಸಮ್ಮೇಳನಗಳೇ ನಡೆಯತೊಡಗಿದವು. ಮಹಿಳೆಯರ ರಚನೆಗಳನ್ನು ವಿಮರ್ಶಾವಲಯ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂಬ ಕಾರಣಕ್ಕೆ ಮತ್ತು ಹೆಚ್ಚುತ್ತಿರುವ ಬರಹಗಾರರ ಸಂಖ್ಯೆಯಲ್ಲಿ ಹೊಸಬರಿಗೆ ಅವಕಾಶ ದೊರೆಯುವುದು ಕಷ್ಟ ಎನಿಸಿದಾಗಲೆಲ್ಲ identity ಯ ಚರ್ಚೆ ಬೇರೆ ಬೇರೆ ಆಯಾಮ ಪಡೆಯಿತು. ಲೇಖಕರ ಮೊದಲ ಕೃತಿಗೆ ಪ್ರತ್ಯೇಕ ಬಹುಮಾನ ಇಡುವಂತೆ, 'ದಾನ ಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿ, ಎಂ.ಕೆ. ಇಂದಿರಾ ಪ್ರಶಸ್ತಿ, ಅನುಪಮಾ ನಿರಂಜನ ಪ್ರಶಸ್ತಿ, ಗುಡಿಬಂಡೆ ಪೂರ್ಣಿಮಾ ಪ್ರಶಸ್ತಿ, ಅತ್ತಿಮಬ್ಬೆ ಪ್ರತಿಷ್ಠಾನದ ಪ್ರಶಸ್ತಿ ಇವೇ ಮುಂತಾದವು ಕೇವಲ ಮಹಿಳೆಯರಿಗಾಗಿಯೇ ಮೀಸಲಾದ ಪ್ರಶಸ್ತಿಗಳೆನಿಸಿವೆ. ಇಲ್ಲೆಲ್ಲ ಮಹಿಳೆ ಎಂಬ identity ಆಕೆಗೆ ಸಹಕಾರಿಯಾಗುತ್ತದೆ. ಇನ್ನೊಂದೆಡೆ ಇದೇ identity ಆಕೆಯನ್ನು ಒಟ್ಟು ಸಾಹಿತ್ಯಿಕ ವಲಯದಿಂದ ಬೇರ್ಪಡಿಸುವ ಕಂಟಕವೂ ಆಗಿಬಿಡುತ್ತದೆ.

◆ ಸಾಹಿತ್ಯ ವಿಮರ್ಶೆಯಲ್ಲಿ ಕೃತಿಗೂ-ಲೇಖಕನಿಗೂ ಇರುವ ಸಂಬಂಧದ ಕುರಿತು ಪ್ರಶ್ನೆಯು ಆಗಾಗ ಏಳುತ್ತದೆ. ಸಾಹಿತ್ಯ ಚರಿತ್ರೆ ಮತ್ತು ಸಾಹಿತ್ಯ ವಿಮರ್ಶೆಯಲ್ಲಿ ಸಾಮಾನ್ಯವಾಗಿ ಲೇಖಕರು ಕಾಲವಾದ ಬಳಿಕ ಅವರಿಗೂ ಕೃತಿಗೂ ಇದ್ದ ಸಂಬಂಧ ಕಳಚಿತೆಂದು ಭಾವಿಸಲಾಗುತ್ತಿತ್ತು. ಆದರೆ ಸ್ತ್ರೀವಾದವು ಈ ಚಿಂತನೆಯನ್ನು ಒಪ್ಪಿಕೊಳ್ಳುವುದಿಲ್ಲ. ಇದರ ಪ್ರಕಾರ ಲೇಖಕಿಯೊಬ್ಬಳು ಯಾವ ಕಾಲದಲ್ಲಿ, ಯಾವ ಪರಿಸರದಲ್ಲಿ, ಯಾವ ಒತ್ತಡಗಳಲ್ಲಿ ಕೃತಿ ರಚಿಸಿದಳು ಎಂಬುದನ್ನು ಮುಖ್ಯ ಎಂದು ಭಾವಿಸುತ್ತದೆ. ಯಾಕೆಂದರೆ ಹೆಣ್ಣಿನ ಅನುಭವಗಳು ಎಲ್ಲೆಡೆ ಒಂದೇ ರೀತಿಯಾಗಿ ಇರುವುದಿಲ್ಲ. ಅವು ಪ್ರದೇಶ , ಜಾತಿ, ಧರ್ಮ, ಆರ್ಥಿಕ ವರ್ಗ ಇವೆಲ್ಲವುಗಳನ್ನು ಹೊಂದಿಕೊಂಡು ಬೇರೆಬೇರೆಯಾಗಿರುತ್ತವೆ. ಸಾರಾ ಅಬೂಬಕರ್, ಬಾನು ಮುಷ್ತಾಕ್ ಅವರ ಅನುಭವಗಳೇ ಬೇರೆ. ಎಂ.ಕೆ. ಇಂದಿರಾ, ತ್ರಿವೇಣಿ, ವೈದೇಹಿಯವರ ಅನುಭವಗಳೇ ಬೇರೆ. ಬಿ.ಟಿ. ಲಲಿತಾ ನಾಯಕ್, ಗೀತಾನಾಗಭೂಷಣ, ಎಚ್. ನಾಗವೇಣಿ ಮುಂತಾದ ಶೂದ್ರ ಸಮುದಾಯದಿಂದ ಬಂದ ಲೇಖಕಿಯರ ಅನುಭವಗಳು ಇವರ ಅನುಭವಗಳಿಗಿಂತ ಭಿನ್ನ. ಬಿ.ಟಿ. ಜಾಹ್ನವಿ ಮುಂತಾದವರ ಅನುಭವಗಳು ಮತ್ತೆ ಭಿನ್ನವಾಗುತ್ತವೆ. ಎಂದರೆ ಮಹಿಳೆಯ ಅನುಭವಗಳು ಎಂಬುದು ಏಕಾಕಾರವಾದವುಗಳಲ್ಲ. ಹೀಗಾಗಿ ಕೃತಿಯೊಂದನ್ನು ವಿಶ್ಲೇಷಿಸುವಾಗ ಕೃತಿಯಷ್ಟೇ ಲೇಖಕಿಯ ಹಿನ್ನೆಲೆ ಕೂಡಾ ಮುಖ್ಯವೆಂದು ಸ್ತ್ರೀವಾದ ಅಭಿಪ್ರಾಯಪಡುತ್ತದೆ.

◆ ಸಾಮಾನ್ಯವಾಗಿ ಸ್ತ್ರೀವಾದದ ಸಾಹಿತ್ಯಿಕ ವಿವರಣೆ, ವ್ಯಾಖ್ಯಾನ ಬಂದಾಗಲೆಲ್ಲ ಒಂದು ರೀತಿಯ ಸಾಹಿತ್ಯಿಕ ಜಗಳವು ಏರ್ಪಡುತ್ತದೆ. ಸ್ತ್ರೀವಾದವು ಒಂದು ರೀತಿಯ ಪ್ರತ್ಯೇಕತೆಯನ್ನು ನಿರ್ಮಿಸುತ್ತದೆ. 'ಮಹಿಳಾ ಸಾಹಿತ್ಯ' ಎನ್ನುವಾಗ 'ಪುರುಷ ಸಾಹಿತ್ಯ' ಎಂಬುದೊಂದು ಇದೆಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಹಾಗೂ ಸಾಹಿತ್ಯ ಎಂಬುದು ಲಿಂಗಾತೀತವಾದ ಸ್ವರೂಪದ್ದು ಎಂಬ ಚರ್ಚೆಯನ್ನು ಕೇಳುತ್ತಿರುತ್ತೇವೆ. ಇಲ್ಲೆಲ್ಲ 'ಸಾಹಿತ್ಯ' ಎಂಬುದು ತಟಸ್ಥವಾದುದು; ಎಲ್ಲರ ವಿಚಾರಧಾರೆಗಳನ್ನು ಒಳಗೊಂಡದ್ದು ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತದೆ.

ವಾಸ್ತವಿಕವಾಗಿ ಬದುಕಿನಲ್ಲಿ 'ತಟಸ್ಥ' ಎಂಬುದೇ ಇಲ್ಲ. ನಾವು ಕೊಡುವ ಯಾವುದೇ ಹೇಳಿಕೆ; ಪ್ರತಿಕ್ರಿಯೆಗಳ ಹಿಂದೆ ಪೂರ್ವಾಗ್ರಹ ಅಥವಾ ಕೆಲವು ಪರಿಮಿತಿಗಳು ಇದ್ದೇ ಇರುತ್ತವೆ. ಯಾವ ಒಂದು ಸಂಗತಿಯನ್ನೂ ಎಲ್ಲರಿಗೂ ಮೆಚ್ಚುಗೆಯಾಗುವಂತೆ ಅಥವಾ ಒಪ್ಪಿತವಾಗುವಂತೆ ಹೇಳಲು ಸಾಧ್ಯವಿಲ್ಲ. ನಿದರ್ಶನಕ್ಕೆ ಕುವೆಂಪು ಅವರ ಎರಡೂ ಕಾದಂಬರಿಗಳ ಕುರಿತು ಇತ್ತೀಚೆಗೆ ಕೇಳಿ ಬರುತ್ತಿರುವ ಪ್ರತಿಕ್ರಿಯೆಗಳನ್ನು ಗಮನಿಸಬೇಕು. ಕುವೆಂಪು ಅವರು ಮುಸ್ಲಿಂ ಪಾತ್ರಗಳನ್ನು ಹೀನಾಯ ರೀತಿಯಲ್ಲಿ ಚಿತ್ರಿಸಿದ್ದಾರೆ ಎಂದು ಹಲವರ ಆಕ್ಷೇಪ. ದಲಿತ ಪಾತ್ರಗಳ ಕುರಿತು ದಲಿತರ ಪ್ರತಿಕ್ರಿಯೆ; ದಕ್ಷಿಣದ ಕನ್ನಡದಿಂದ ಮಲೆನಾಡಿಗೆ ಬದುಕು ಅರಸಿ ಬಂದ ಪಾತ್ರಗಳ ಬಗ್ಗೆ ದಕ್ಷಿಣ ಕನ್ನಡದವರಿಗೆ ಅಸಮಾಧಾನ ಅವರವರ ವಿಮರ್ಶೆಯಲ್ಲಿ ಪ್ರಕಟವಾಗಿರುವುದನ್ನು ನೆನಪಿಸಿಕೊಳ್ಳಬಹುದು. ಇದೇ ರೀತಿಯಲ್ಲಿ ಓರ್ವ ಕವಿ ಎಷ್ಟೇ ಒಳ್ಳೆಯ ಕವಿಯಾದರೂ ಆತನೊಳಗೆ 'ಪುರುಷತ್ವ'ದ ಚಿಂತನೆಗಳು ಕೆಲಸಮಾಡಿರುತ್ತವೆ. ಆದುದರಿಂದ 'ಕವಿ' ಎಂದಷ್ಟೇ ಹೇಳಿದರೆ ಸಾಲದು; ಆತ 'ಪುರುಷ' ಎಂದು ಗುರುತಿಸುವುದೂ ಮುಖ್ಯ ಎಂಬುದು ಸ್ತ್ರೀವಾದದ ಆಸಕ್ತಿಯಾಗಿದೆ.

ಇಲ್ಲಿಯವರೆಗೆ ಚರ್ಚಿಸಿದ್ದು ಮಾತ್ರ ಸ್ತ್ರೀವಾದಿ ವಿಮರ್ಶೆಯ ತಾತ್ತ್ವಿಕತೆ ಎನ್ನುವುದು ನನ್ನ ಅಭಿಪ್ರಾಯವಲ್ಲ. ಬದಲಾಗಿ ಇವು ಸ್ತ್ರೀವಾದಿ ವಿಮರ್ಶೆಯ ಮುಖ್ಯ ತಾತ್ವಿಕತೆಗಳಾಗಿವೆ. ಈ ಚಿಂತನೆಗಳು ನಮಗೆ ಇದುವರೆಗಿನ ಸಾಹಿತ್ಯ ಮತ್ತು ಈಗಿನ ಸಾಹಿತ್ಯವನ್ನು ನೋಡುವ, ಓದುವ ಮತ್ತು ವಿಮರ್ಶಿಸುವ ಸಂದರ್ಭಗಳಲ್ಲಿ ಹೊಸ ಕಾಳಜಿಗಳನ್ನು ಹುಟ್ಟು ಹಾಕುತ್ತವೆ. ಮಹಿಳಾ ಸಾಹಿತ್ಯ ಅಧ್ಯಯನ ಶಿಬಿರದ ಈ ಸಂದರ್ಭದಲ್ಲಿ ಕನ್ನಡದ ಮಾತ್ರವಲ್ಲ ಯಾವುದೇ ಭಾಷೆಯ ಸಾಹಿತ್ಯವನ್ನು ಅವಲೋಕಿಸಿ ಮರುವಿಮರ್ಶೆಯನ್ನು ಮಾಡಿಕೊಳ್ಳಲು ಈ ವಿಚಾರಗಳು ನಿಮಗೆ ಊರುಗೋಲುಗಳಾಗಿ ಸಹಾಯಕವಾದಾವು ಎಂದು ಆಶಿಸುತ್ತ ನನ್ನ ಮಾತಿಗೆ ವಿರಾಮವನ್ನು ಹಾಕುತ್ತೇನೆ.

◆

# ಮರಾಠಿ ದಲಿತ ಮಹಿಳಾ ಲೇಖಕಿಯರು : ಊರ್ಮಿಳಾ ಪವಾರ್ ಮತ್ತು ಪ್ರಜ್ಞಾ ಲೋಖಂಡೆ

✍ **ತುಳಸಿ ವೇಣುಗೋಪಾಲ್**

ಸಾಹಿತ್ಯ ಒಂದು ನೆಲದ ಸಂಸ್ಕೃತಿಯನ್ನು ಕಾಲದ ನಿರಂತರ ಪ್ರವಾಹದಲ್ಲಿ ತೇಲಿಸುತ್ತಾ, ಕಾಪಾಡುತ್ತಾ, ಹಂಚುತ್ತಾ ಬರುತ್ತದೆ. ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ವೇದಗಳು, ಮಹಾ ಕಾವ್ಯಗಳು, ಪುರಾಣಗಳು, ಭಾಗವತ ಕತೆಗಳು ಹೀಗೆ ಉಲ್ಲೇಖಿಸುತ್ತಾ ಹೋಗುತ್ತೇವೆ. ಆದರೆ ಭಾರತೀಯ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ, ಅದು ಧಾರ್ಮಿಕತೆಯನ್ನೂ ಮೈಗೂಡಿಸಿ ಕೊಂಡಿದ್ದರಿಂದ ಹಿಂದೂ ಸಮಾಜದ ವರ್ಣ ವ್ಯವಸ್ಥೆಯಲ್ಲಿ ಸಾಹಿತ್ಯ ಕೂಡಾ ಗರ್ಭಗುಡಿ ಸೇರಿ ಮೆರೆಯುವಂತಾಯಿತು. ಅದನ್ನು ಬರೆದ ಭಾಷೆ ದೇವಭಾಷೆಯೆನಿಸಿಕೊಂಡಿತು. ಹೀಗೆ ಒಂದೆಡೆ ಮಾನವ ಸಂವೇದನೆಗಳು ಪುರೋಹಿತಶಾಹಿ ಸಮಾಜದಲ್ಲಿ ಶಿಷ್ಟತೆಯ ಕಿರೀಟ ತೊಟ್ಟು, ಪಟ್ಟಾಭಿಷೇಕ ಮಾಡಿಸಿಕೊಳ್ಳುತ್ತಿದ್ದರೆ, ಇನ್ನೊಂದೆಡೆ ಅದಕ್ಕೆ ಸಮಾನಾಂತರವಾಗಿ ಜನಪದರ ಎದೆಯೊಳಗಿನ ಧ್ವನಿಗಳು ಹಾಡಾಗಿ, ಕತೆಗಳಾಗಿ ಭೂಮಿಯನ್ನು ಅರಳಿಸುತ್ತಿದ್ದವು. ವಾಲ್ಮೀಕಿಯ ರಾಮಾಯಣ, ವ್ಯಾಸರ ಮಹಾಭಾರತದ ಪಾತ್ರಗಳು ಅಲೌಕಿಕತೆಯ ಮುಚ್ಚಟೆಯೊಂದಿಗೆ ಅಂತರಿಕ್ಷದಲ್ಲೇ ಬೆಳಗುತ್ತಿದ್ದರೆ, ಜನಪದರ ರಾಮ, ಸೀತೆ, ರಾವಣ, ಕೌಸಲ್ಯೆಯರು, ಕೃಷ್ಣ, ಅರ್ಜುನ, ದ್ರೌಪದಿ, ಕುಂತಿ, ಮಾತೆಯರು, ನೇಗಿಲ ಹಾಡಾಗಿಯೋ, ಮಡಿಲ ಮೊಮ್ಮಗುವಿಗೆ ಕತೆಯಾಗಿಯೋ ನೆಲಕ್ಕೆ ಬೆಸೆದುಕೊಂಡು ಬಂದರು. ಕಾರುಣಿಕ ಮತ್ತು ಕಾರುಣ್ಯಸ್ಥಾಯಿಯಾದ ಜನಪದ ಸಾಹಿತ್ಯ ಮಾನವ ಸಂವೇದನೆಗಳ ನಿಜದ ಮುಖವಾಗಿ ನಿಂತಿರುವುದನ್ನು ನಾವೀಗ

ಗ್ರಹಿಸತೊಡಗಿದ್ದೇವೆ. ಮೌಖಿಕ ಪರಂಪರೆಯ ಈ ಸಾಹಿತ್ಯ ಅಂತರಗಂಗೆಯಾಗಿ ಜನಪದ ಸಂಸ್ಕೃತಿಯನ್ನು ಸದ್ದಿಲ್ಲದೆ ಕಾಪಾಡುತ್ತಾ ಬಂದಿರುವುದನ್ನೂ ಕಾಣಬಹುದು.

ಮೌಖಿಕ ಸಾಹಿತ್ಯ ಪರಂಪರೆ ತೊಡಗಿದ್ದೇ ಅಕ್ಷರ ನಿಷೇಧಿಸಲ್ಪಟ್ಟ ವರ್ಗಗಳಿಂದ. ಹಾಗೆ ನೋಡಿದರೆ, ಯಾವಾಗ ಮಾನವಜೀವಿ ಧ್ವನಿಯನ್ನು ಹೊಸೆದು ಶಬ್ದಗಳನ್ನು ಉಚ್ಚರಿಸಿತೋ, ಆ ಕ್ಷಣದಲ್ಲೇ ಕತೆಯೊಂದು ಹುಟ್ಟಿತು. ಕವನವೊಂದು ಹುಟ್ಟಿತು. ನಂತರ ಬಂತು ಅಕ್ಷರ. ಅದು ದಕ್ಕಿಸಿಕೊಂಡವರ ಪಾಲಿಗೆ ಹೋಯಿತು. ಆದರೆ ಮಾನವನ ಸಂವೇದನೆ ಸಾಹಿತ್ಯವಾಗಿ ಹೊರಬರಲು ಯಾವುದೂ ತಡೆಯಾಗಲಿಲ್ಲ. ಈ ಸಂವೇದನೆಯೇ ಮಾನವ ಕುಲವನ್ನೂ ರಕ್ಷಿಸುತ್ತಾ ಬಂದಿದೆ. ಇಲ್ಲದಿದ್ದರೆ ಬೆಂಕಿ, ಆಯುಧ, ಮಾರಕಾಸ್ತ್ರಗಳನ್ನು ಕೈಯಲ್ಲಿಟ್ಟುಕೊಂಡು ಆಡುವ ಮಾನವರು ಡೈನೋಸಾರ್‌ಗಳಂತೆ ಭೂಮಿಯಿಂದ ನಾಮಾವಶೇಷಗೊಳ್ಳುತ್ತಿದ್ದರು.

ದಲಿತ ಸಾಹಿತ್ಯದ ಮೂಲ ಸೆಲೆ ಇರುವುದೇ ಈ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ. ಶೋಷಣೆ, ಬಡತನ, ಉಳ್ಳವರ ಕ್ರೌರ್ಯ ಇವುಗಳೇ ಕತೆ, ಕಥನ ಕಾವ್ಯ, ಲಾವಣಿ, ಪಾಡ್ದನಗಳಾಗಿ ಧ್ವನಿಸಿರುವುದನ್ನು ನಾವು ಗಮನಿಸಿದ್ದೇವೆ. ಆದರೆ ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಅವು ಬರೇ ಧ್ವನಿಗಳಾಗಿ ಉಳಿಯಲಿಲ್ಲ. ಸಾಮಾಜಿಕ ಪಲ್ಲಟಗಳು ಈವರೆಗೆ ದಮನಿಸಲ್ಪಟ್ಟಿದ್ದ ಮನಸ್ಸುಗಳಿಗೆ ಕಾಯಕಲ್ಪ ನೀಡುವುದರೊಂದಿಗೆ ಅವು ಎದೆ ತಟ್ಟಿ ನಿಂತವು. ದೇಶದ ಸ್ವಾತಂತ್ರ್ಯಕ್ಕಾಗಿ ಹುಟ್ಟಿಕೊಂಡ ಅರಿವು ವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನೂ ಮನಗಂಡಿತು. ವರ್ಣ ವ್ಯವಸ್ಥೆ, ಊಳಿಗಮಾನ್ಯತೆ, ಪುರೋಹಿತಶಾಹಿ ಇವುಗಳನ್ನು ಕೆಡವದೆ ಸ್ವತಂತ್ರ ಭಾರತದ ಕಲ್ಪನೆಯೇ ಅಸಾಧ್ಯವಿತ್ತು. ಅಸಾಧ್ಯ ಎನ್ನುವುದಕ್ಕಿಂತ ಅಸಹನೀಯ ಎಂದೇ ಹೇಳಬೇಕು. ಆದರೆ ದೇಶದುದ್ದಕ್ಕೂ ಎದ್ದ ದಲಿತಪರ ಕಾಳಜಿ ಸುಲಭದಲ್ಲಿ ಸ್ವೀಕೃತಗೊಳ್ಳಲಿಲ್ಲ. ವರ್ಗ ತಾರತಮ್ಯ, ಅಸಮಾನತೆ, ಶೋಷಣೆ ವಿರುದ್ಧದ ಹೋರಾಟ ಕೂಡಾ ದೇಶದ ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ ಪರಿಣಮಿಸಿದ್ದು ಸಾಂಕೇತಿಕ. ದೇಶದ ಪ್ರತಿಯೊಂದು ಭಾಗದಲ್ಲೂ ಜನರು ಎಚ್ಚೆತ್ತುಕೊಳ್ಳುವಂತೆ ಮಾಡಲು, ಅಕ್ಷರ ಜ್ಞಾನವನ್ನು ಪಡೆಯುವಂತೆ ಪ್ರೇರೇಪಿಸಲು ಸಮಾಜ ಸುಧಾರಕರು ಮುಂದಾಗಿದ್ದರು.

ಮಹಾರಾಷ್ಟ್ರದಲ್ಲಿ ದಲಿತಪರ ಕಾಳಜಿಯೊಂದಿಗೆ ಸಂಘರ್ಷಕ್ಕೆ ತೊಡಗಿದವರು ಜ್ಯೋತಿಬಾ ಫುಲೆ. ಅವರು ಅದನ್ನು ತಮ್ಮ ಮನೆಯಿಂದಲೇ ಆರಂಭಿಸಿದ್ದು ಇಲ್ಲಿ ಮಹತ್ವದ ಸಂಗತಿ. ತಮ್ಮ ಪತ್ನಿ ಸಾವಿತ್ರಿಬಾಯಿ ಅವರಿಗೆ ಅಕ್ಷರ ದೀಕ್ಷೆಯನ್ನು ಕೊಡುವುದರ ಮೂಲಕ ಜ್ಯೋತಿಬಾ ರೂಢಿಗತ ಸಮಾಜಕ್ಕೆ ಸವಾಲು ಒಡ್ಡಿದ್ದರು. 'ದಲಿತ' ಶಬ್ದದ ವ್ಯಾಖ್ಯೆಯಲ್ಲಿ ಮಹಿಳೆಯರನ್ನೂ ಸೇರಿಸಬೇಕೆನ್ನುವ ಸತ್ಯವನ್ನು ಅವರು ಕಂಡುಕೊಂಡಿದ್ದರು. ೧೮೪೮ರಲ್ಲಿ ಪುಣೆಯಲ್ಲಿ ಮಹಿಳೆಯರಿಗಾಗಿ ಮೊದಲ ಪಾಠಶಾಲೆಯನ್ನು ತೆರೆದ ಅವರು, ಸಾವಿತ್ರಿಬಾಯಿಯನ್ನೇ ಹೆಣ್ಣು ಮಕ್ಕಳಿಗೆ ಪಾಠ ಹೇಳಲು ನಿಯಮಿಸಿದ್ದರು. ಹೀಗೆ ಮಹಾರಾಷ್ಟ್ರದ ಮೊತ್ತಮೊದಲ ಅಧ್ಯಾಪಕಿಯೆಂದು ಸಾವಿತ್ರಿಬಾಯಿ ಅವರನ್ನು ಹೇಳಬೇಕಾಗುತ್ತದೆ. ಸಮಾಜದ ಎಲ್ಲಾ

ನಿಷ್ಠುರಗಳನ್ನು ಎದುರಿಸಿದ್ದ ಈ ದಂಪತಿಗಳು ವರ್ಗವೈಷಮ್ಯದ ಜೊತೆ ಕೂಡಾ ಹೋರಾಡಬೇಕಾಯಿತು. ಈ ಸಿಟ್ಟಿನಲ್ಲಿ ದಲಿತರಿಗಾಗಿಯೇ ೧೮೭೧ರಲ್ಲಿ ಶಾಲೆಯೊಂದನ್ನು ಜ್ಯೋತಿಬಾ ಆರಂಭಿಸಬೇಕಾಗಿ ಬಂತು. ಫುಲೆ ದಂಪತಿಗಳು ಈ ರೀತಿ ಹಚ್ಚಿಟ್ಟ ಹಣತೆ ಪ್ರಕಾಶಮಾನವಾಗಿ ಬೆಳಗಲು ಮತ್ತೂ ಅರ್ಧ ಶತಕದಷ್ಟು ಕಾಲ ಕಾಯಬೇಕಾಗಿ ಬಂತು.

ಬಾಬಾ ಸಾಹೇಬ ಅಂಬೇಡ್ಕರ್ ಬಂದರು. ಕತ್ತಲೆಯ ಜಗತ್ತನ್ನು ಲಂಘಿಸಿ ನಿಂತು ಉಳಿದವರಿಗೂ ಧೈರ್ಯ ತುಂಬಿ ಬೆಳಕಿನತ್ತ ನಡೆಸಿದರು. ದಲಿತ ಪದ ತನ್ನ ಅನನ್ಯತೆಯನ್ನು ಕಂಡುಕೊಂಡದ್ದು ಆ ಕ್ಷಣಗಳಲ್ಲಿ. ಜ್ಯೋತಿಬಾ ದಲಿತ ಮಹಿಳೆಯರಿಗೆ ಅಕ್ಷರದ ಲೋಕ ತೆರೆದಿದ್ದರೆ, ಅಂಬೇಡ್ಕರ್ ಲೇಖನಿಯನ್ನು ಖಡ್ಗವಾಗಿ ಝಳಪಿಸುವುದನ್ನು ಹೇಳಿಕೊಟ್ಟರು. ಅವರ ಪ್ರೋತ್ಸಾಹದಿಂದಲೇ ದಲಿತ ಮಹಿಳೆಯರು ಸಣ್ಣ ರೀತಿಯಲ್ಲೇ ಬರವಣಿಗೆಗೆ ತೊಡಗಿಕೊಂಡರು. ೧೯೩೭ರಲ್ಲಿ ಶಾಂತಾಬಾಯಿ ಗೋಂಡಣೆ **ಪತಿತಪಾವನ** ಸಾಪ್ತಾಹಿಕದಲ್ಲಿ ಬಾಬೂ ಹರ್‌ದಾಸ್ ಎನ್ನುವ ದಲಿತ ಅಭ್ಯರ್ಥಿಯನ್ನು ಕೌನ್ಸಿಲ್ ಚುನಾವಣೆಯಲ್ಲಿ ಗೆಲ್ಲಿಸಿ ತರಲು ಆತನ ಪರವಾಗಿ ಒಂದು ಸಶಕ್ತ ಲೇಖನ ಬರೆದರು. ಇದೇ ರೀತಿ ಮೀನಾಂಬಲ್ ಶಿವರಾಜ್, ಕೌಸಲ್ಯಾ ನಂದೇಶ್ವರ್, ಶಾರದಾ ಶೇವಾಲೆ, ದ್ರೌಪದಿಬಾಯಿ ಬಾಪೂ ಕಾಂಬ್ಳೆ ಪತ್ರಿಕಾ ರಂಗದಲ್ಲಿ ತಮ್ಮ ಲೇಖನಗಳ ಮೂಲಕ ಗಮನ ಸೆಳೆಯತೊಡಗಿದ್ದರು. **ಬಹಿಷ್ಕೃತ್ ಭಾರತ್, ಜನತಾ, ಪ್ರಬುದ್ಧ ಭಾರತ್** ಮೊದಲಾದ ಪತ್ರಿಕೆಗಳಲ್ಲಿ ಇವರೆಲ್ಲರ ಬರಹಗಳು ಪ್ರಕಟವಾದವು.

ಈ ಮಹಿಳೆಯರಿಗೆ ಬರವಣಿಗೆ ಸುಲಭದ್ದಾಗಿರಲಿಲ್ಲ. ದಲಿತ ಮಹಿಳೆಯರ ಸಾಮಾಜಿಕ ಸ್ಥಿತಿಗತಿ ಶೋಚನೀಯವಾಗಿತ್ತು. ಜಾತಿ, ಅಂತಸ್ತು ಮತ್ತು ಲಿಂಗ ತಾರತಮ್ಯ ಹೀಗೆ ಮೂರು ವಿಧಗಳಲ್ಲಿ ಅವರ ಶೋಷಣೆ ನಡೆಯುತ್ತಿತ್ತು. ಹೊರ ಜಗತ್ತಿನ ಆಗುಹೋಗುಗಳಿಗೆ ತೆರೆದುಕೊಳ್ಳುವುದಕ್ಕೂ ಅವರು ಹೋರಾಟ ನಡೆಸಬೇಕಾಗಿ ಬರುತ್ತಿತ್ತು. ಅಂಬೇಡ್ಕರ್ ಅವರಿಗೆ ಈ ಮಹಿಳೆಯರ ಪರಿಸ್ಥಿತಿಯ ಅರಿವಿತ್ತು. ಅವರು ದಲಿತ ಚಳುವಳಿ ಆರಂಭಿಸಿದಾಗ ಗಂಡಸರಂತೆ ಹೆಂಗಸರೂ ಅದರಲ್ಲಿ ಭಾಗವಹಿಸಿದ್ದರು. ತಮ್ಮ ಹೋರಾಟದ ಅರಿವು ಹೆಂಗಸರವರೆಗೆ ತಲುಪಬೇಕೆಂಬ ಉದ್ದೇಶದಿಂದ ಬಾಬಾ ಸಾಹೇಬ ತಮ್ಮ ಕಾರ್ಯಕರ್ತರಿಗೆ ಅವರ ಮನೆಯ ಹೆಂಗಸರನ್ನೂ ಭಾಷಣ ಕೇಳಲು ಕರೆ ತರಲು ಒತ್ತಾಯಿಸುತ್ತಿದ್ದರು. ವಿಪರ್ಯಾಸದ ಮಾತೆಂದರೆ ತಮ್ಮ ಹಕ್ಕಿಗಾಗಿ, ಆತ್ಮ ಸಮ್ಮಾನಕ್ಕಾಗಿ ಹೋರಾಟಕ್ಕೆ ಇಳಿದಿದ್ದ ಗಂಡಸರು ತಮ್ಮ ಮನೆಯ ಹೆಂಗಸಿಗೆ ಅದನ್ನು ನಿರಾಕರಿಸಿದ್ದರು. ಆಗಷ್ಟೇ ಹೊರ ಬರತೊಡಗಿದ ದಲಿತ ಸಾಹಿತ್ಯ, ದಲಿತತ್ವದ ಬಗ್ಗೆ, ಹಸಿವಿನ ಬಗ್ಗೆ, ಹೀನ ಸ್ಥಿತಿ, ಕಷ್ಟಕಾರ್ಪಣ್ಯಗಳನ್ನು ಬಿಚ್ಚಿಡತೊಡಗಿತ್ತು. ದಲಿತ ಮಹಿಳೆಗೂ ನೋವಿತ್ತು ಮತ್ತು ಅದಕ್ಕೆ ಮೂಲ ಕಾರಣ ಮನೆಯ ಗಂಡಸರೇ ಆಗಿದ್ದರು. ಮನೆಯ ಒಳಗೆ ಹಾಗೂ ಹೊರಗೆ ಎರಡೂ ಕಡೆಯ ದಾಳಿಯನ್ನು ಆಕೆ ಎದುರಿಸಬೇಕಾಗಿತ್ತು. ಈ ರೀತಿ ದಲಿತ ಬರಹಗಾರ್ತಿಯರ ಎದುರಿಗಿತ್ತು ಬೆಟ್ಟದಂತಹ ಸವಾಲು.

**ಸಂತತಿ** ನಿಯಮ ಇದನ್ನು ಮರಾಠಿ ದಲಿತ ಲೇಖಕಿಯರು ಅತ್ಯಂತ ತೀವ್ರ ರೀತಿಯಲ್ಲಿ ಪ್ರಶ್ನಿಸಿರುವುದನ್ನು ಕಾಣಬಹುದು. ಜನತಾ ಪತ್ರಿಕೆಯಲ್ಲಿ ಪ್ರಕಟವಾದ ಕಮಲಿನಿ ಅವರ **ಯಾ ಪ್ರಶ್ನಾ ಕಡೆ ದುರ್ಲಕ್ಷ್ಯ ಕಾ** ಎನ್ನುವ ಪತ್ರಲೇಖನ ಹಾಗೂ ವಸುಧಾ ಶಿಂಧೆಯವರ ಸ್ತ್ರೀ ಪುರುಷ ಸಮಾನತೆಯ ಕುರಿತಾದ ಲೇಖನಗಳು ಎಲ್ಲರ ಗಮನ ಸೆಳೆದಿದ್ದವು. ಈ ಎಲ್ಲಾ ಲೇಖನಗಳ ಕಾಲಘಟ್ಟ ಐವತ್ತರ ದಶಕದ ಆದಿ ಎನ್ನುವುದು ಮುಖ್ಯ.

ಈ ವರೆಗೆ ಅದುಮಿಟ್ಟ ನೋವನ್ನು ಆಕ್ರೋಶವನ್ನು ದಾಖಲಿಸುವ ಅವಕಾಶ ದೊರೆತಾಗ ದಲಿತ ಮಹಿಳೆ ಹಿಂಜರಿಯಲಿಲ್ಲ. ತನ್ನ ಸಂವೇದನೆಯನ್ನು ಕತೆ, ಹಾಡುಗಳ ಮೂಲಕ ಹೇಗೆ ಅಭಿವ್ಯಕ್ತಿಸುತ್ತಿದ್ದಳೊ ಅದೀಗ ಬರಹದ ರೂಪದಲ್ಲಿ ಬರತೊಡಗಿತು. ಪದ್ಮಾವತಿಬಾಯಿ ಅಸಯಿಕರ್ ಅವರ **ಕೃತಿಮ್ ಜೀವನ್** ಸಂಜೀವನಿ ಕಾಂಬ್ಳೆ ಅವರ **ಕಳಂಕ್** ಸುಶೀಲಾ ಗಜಭಿಯೆ ಅವರ **ದೂರ್ ಚೆ ದಿವೆ** ಮೊದಲಾದ ಸಣ್ಣ ಕತೆಗಳು ನಿಯತಕಾಲಿಕೆಗಳಲ್ಲಿ ಪ್ರಕಟವಾಗುವುದರೊಂದಿಗೆ ಮಹಿಳೆಯರ ಸೃಜನಶೀಲ ಬರವಣಿಗೆಗೆ ಚಾಲನೆ ದೊರೆಯಿತು. ಶೀಲಾ ವಿ. ಪವಾರ ಅವರ **ವಿಷಾವ್ಯಾಂಚೆ ಶಿವಾರದಲ್ಲಿ** ದಲಿತರ ಮೇಲೆ ನಡೆಯುವ ಜಮೀನುದಾರರ ಅತ್ಯಾಚಾರ, ಶೋಷಣೆಗಳ ವಿರುದ್ಧ ಧ್ವನಿ ಇದ್ದರೆ, ದ್ರೌಪದಿಬಾಯಿ ಶೇಜುವಳ್ ಅವರ **ಸ್ವಾವಲಂಬಿ ಸರೂ** ಕತೆಯಲ್ಲಿ ದೀನಾವಸ್ಥೆಯಲ್ಲೂ ತನ್ನ ಆತ್ಮಸಮ್ಮಾನ ಉಳಿಸಿಕೊಳ್ಳುವ ಸ್ತ್ರೀಯ ಚಿತ್ರಣ ಇತ್ತು. ಅದೇ ರೀತಿ ಪ್ರಭಾವತಿ ಬಾಲೇರಾವ್ ಅವರ **ಅನ್ಯಾಯ್ ವಿರುದ್ಧ್ ಝುಗಡ್‌ನಾರಾ ಬಂಡ್‌ಕೋರ್**, ವತ್ಸಲಾ ಗೋರೆ ಅವರ **ಮಹಿಳಾನೋ ಸಂಘಟಿತ್ ವ್ಹಾ** ಘೋಂಡಾಬಾಯಿ ಅವರ **ಭಗವಂತ್ ಅಣ ಧನಿಯಾ** ಮೊದಲಾದ ಕತೆಗಳು ಈ ಲೇಖಕಿಯರ ಸಂವೇದನೆಯ ತೀವ್ರತೆಯನ್ನು ಪ್ರಕಟಗೊಳಿಸಿದ್ದು ಮಾತ್ರವಲ್ಲ ಅವರ ಜಗತ್ತನ್ನು ಉಳಿದವರು ಅಥವಾ ಆಳಿದವರು ಬೆರಗಿನಿಂದ ನೋಡುವಂತೆ ಮಾಡಿತ್ತು. ಬಹುಶಃ ಈ ಎಲ್ಲಾ ಲೇಖಕಿಯರು ಒಂದು ಮಿತಿಯಲ್ಲಿ, ಸಣ್ಣ ರೀತಿಯಲ್ಲಿ ಮಿನುಗಿ ಮಾಯವಾದರು. ಆದರೂ ವರ್ತಮಾನ ಮರಾಠಿ ಸಾಹಿತ್ಯಕ್ಷೇತ್ರದ ಅತ್ಯಂತ ಪ್ರಮುಖ ಬರಹಗಾರ್ತಿಯರಾದ ಊರ್ಮಿಳಾ ಪವಾರ್ ಮತ್ತು ಪ್ರಜ್ಞಾ ಲೋಖಂಡೆಯವರ ಸೃಜನಶೀಲತೆ, ಕೃತಿಗಳ ಬಗ್ಗೆ ಹೇಳುವ ಮೊದಲು ದಲಿತಸಾಹಿತ್ಯಕ್ಕೆ ತಮ್ಮ ದೇಣಿಗೆ ನೀಡಿದ್ದ ಆ ಹಿರಿಯ ಲೇಖಕಿಯರನ್ನು ಸ್ಮರಿಸುವುದು ಅಗತ್ಯ.

ಆಧುನಿಕ ಮರಾಠಿ ಸಾಹಿತ್ಯಕ್ಕೆ ದೊಡ್ಡ ಕೊಡುಗೆಯಾಗಿ ಆತ್ಮಚರಿತ್ರೆಗಳು ಬಂದವು. ಅದೂ ದಲಿತ ಲೇಖಕರಿಂದ. ದಯಾ ಪವಾರ್ ಅವರ ಬಲುತ್‌ನಿಂದ ಆರಂಭವಾದ ಈ ಬೆಳವಣಿಗೆ, ಮರಾಠಿ ಶಿಷ್ಟ ಸಾಹಿತ್ಯದ ಪ್ರಾಮುಖ್ಯತೆಗೇ ಸವಾಲಾಗಿ ನಿಂತಿತು. ದಲಿತ ಭಾಷೆಯ ಬಳಕೆ, ವಾಸ್ತವದ ಪ್ರಖರ ಚಿತ್ರಣ ಎಲ್ಲಕ್ಕೂ ಮಿಗಿಲಾಗಿ ಈ ವರೆಗೆ ಯಾರೂ ಇಣುಕಿಯೂ ನೋಡಿರದಂತಹ ಗುಡಿಸಲೊಳಗಿನ ಕತ್ತಲ ಬದುಕನ್ನು ಎಗ್ಗಿಲ್ಲದೆ ತೆರೆದಿಟ್ಟಿತ್ತು ಅದು. ಆ ಹೊತ್ತಿಗಾಗಲೇ ಜಗತ್ತಿನಾದ್ಯಂತ ವರ್ಣ ತಾರತಮ್ಯ, ಅಸ್ಪೃಶ್ಯತೆ, ಜನಾಂಗ ದ್ವೇಷ ಇದೆಲ್ಲಾ ಮಾನವ ಕುಲಕ್ಕೇ ಕಳಂಕ ಎನ್ನುವ ಕುರಿತು ಚರ್ಚೆಯೂ ಆಗುತ್ತಿತ್ತು. ಈ ಹಿನ್ನೆಲೆಯಲ್ಲಿ ತಮ್ಮ

ಬದುಕಿನ ಅಸ್ಮಿತೆಯನ್ನು ಕಂಡುಕೊಂಡ ದಲಿತ ವರ್ಗ ಅದನ್ನೇ ಬರಹದ ಮೂಲಕ ಅನಾವರಣ ಮಾಡತೊಡಗಿತು. ಮಹಿಳೆಯರು ಕೂಡಾ ಆತ್ಮಚರಿತ್ರೆಯ ಮೂಲಕ ಅಭಿವ್ಯಕ್ತಿಸತೊಡಗಿದ್ದು ಇನ್ನೊಂದು ವಿಶೇಷ. ಬೇಬಿ ತಾಯಿ ಕಾಂಬ್ಳೆ ಅವರ **ಜೀಣಾ ಆಮ್ಚಾ** (ಜೀವನ ನಮ್ಮದು) ಶಾಂತಾಬಾಯಿ ಕಾಂಬ್ಳೆ ಅವರ **ಮಾಝ್ಯಾ ಜಲ್ಮಾಚಿ ಚಿತ್ತರ್ ಕಥಾ** (ನನ್ನ ಜನುಮದ ಚಿತ್ತಾರ ಕಥೆ), ಕುಮುದ್ ಪಾವ್ಡೆ ಅವರ **ಅಂತಃಸ್ಫೋಟ್** (ಅಂತಃಸ್ಫೋಟ), ಮಲ್ಲಿಕಾ ಅಮರ್ ಶೇಕ್ ಅವರ **ಮಲಾ ಉಧ್ವಸ್ತ ವ್ಹಾಯಚ್** (ನನಗೆ ಧ್ವಂಸವಾಗಬೇಕಿದೆ), ಮುಕ್ತಾ ಸರ್ವಗೋಡ್ ಅವರ **ಮಿಠಲೀ ಕವಾಡೆ** (ಮುಚ್ಚಿದ ಬಾಗಿಲು) ಮೊದಲಾದ ಆತ್ಮಚರಿತ್ರೆಗಳು ಅವರವರ ಬದುಕಿನ ಪುಟಗಳನ್ನು ತೆರೆದಿಟ್ಟವು. ಇವೆಲ್ಲಾ ಪಿತೃಪ್ರಧಾನ ವ್ಯವಸ್ಥೆಯನ್ನೂ, ಶೋಷಿತ ಸ್ತ್ರೀ ವರ್ಗದ ನೋವುಗಳನ್ನು ಪ್ರತಿಬಿಂಬಿಸಿದವು. ಇಂತಹ ಒಂದು ಪರ್ವಕಾಲದಲ್ಲೇ ಊರ್ಮಿಳಾ ಪವಾರ್ ಮತ್ತು ಪ್ರಜ್ಞಾ ಲೋಖಂಡೆ ಬರವಣಿಗೆಗೆ ತೊಡಗಿದ್ದು.

ಇಂದು ಮರಾಠಿ ಸಾಹಿತ್ಯಕ್ಷೇತ್ರದ ಸಂವೇದನಾಶೀಲ ಬರಹಗಾರರ ಸಾಲಲ್ಲಿ ನಿಲ್ಲುವ ಊರ್ಮಿಳಾ ಮತ್ತು ಪ್ರಜ್ಞಾ, ತಮ್ಮ ಪ್ರಾಮಾಣಿಕ ಹಾಗೂ ನಿರ್ಭಿಡೆಯ ಅಭಿವ್ಯಕ್ತಿಯಿಂದಾಗಿ ಓದುಗರ ಮನಸ್ಸನ್ನು ತಟ್ಟುತ್ತಾರೆ. ಊರ್ಮಿಳಾ ತಮ್ಮ ಸಣ್ಣ ಕತೆ ಹಾಗೂ ಆತ್ಮಚರಿತ್ರೆಯ ಮೂಲಕ ಜನಮಾನಸಕ್ಕೆ ಸಮೀಪವಾಗಿದ್ದರೆ, ಪ್ರಜ್ಞಾ ಕವನ ಹಾಗೂ ಲೇಖನಗಳ ಮೂಲಕ ಮನಸ್ಸನ್ನು ತಟ್ಟುತ್ತಾರೆ. ಇವರದು ಬರೇ ಸ್ತ್ರೀಲೋಕವಲ್ಲ. ಮಾನವ ಬದುಕಿನ ಎಲ್ಲಾ ನೋವುಗಳಿಗೆ ಅವರು ಸ್ಪಂದಿಸಿರುವುದನ್ನು ಅವರ ಕೃತಿಗಳಲ್ಲಿ ಕಾಣಬಹುದು.

ಊರ್ಮಿಳಾ ಪವಾರ್ ಹುಟ್ಟಿದ್ದು ಕೊಂಕಣದ ಹಳ್ಳಿಯೊಂದರಲ್ಲಿ. ಮಹಾರ್ ಜಾತಿಗೆ ಸೇರಿದ ಊರ್ಮಿಳಾ ಅಸ್ಪೃಶ್ಯತೆಯ, ಹಸಿವಿನ ಬೇಗೆಯನ್ನು ಅನುಭವಿಸಿದರು. ಅವರ ತಂದೆ ಎಲಿಮೆಂಟರಿ ಶಾಲೆಯಲ್ಲಿ ಮಾಸ್ತರರಾಗಿದ್ದರು. ಆ ದಿನಗಳಲ್ಲಿ ಆರನೇ ತರಗತಿಯವರೆಗೆ ಓದಿದ್ದ ಅವರಿಗೆ ಬಳಗದಲ್ಲಿ ಗೌರವ ಸಲ್ಲುತ್ತಿತ್ತು. ಶಿಕ್ಷಣದ ಮಹತ್ವವನ್ನು ಮನಗಂಡಿದ್ದ ಅವರು ತಮ್ಮ ಮಕ್ಕಳನ್ನು ಓದಿಸಲೇಬೇಕೆನ್ನುವ ಹಟ ತೊಟ್ಟಿದ್ದರು. ಅದಕ್ಕಾಗಿಯೇ ತಮ್ಮ ಹಳ್ಳಿ ಪನ್ಹಾಳ್‌ವೆ ಬಿಟ್ಟು ರತ್ನಗಿರಿಗೆ ಬಂದು ನೆಲೆಸಿದ್ದರು. ಆದರೆ ದುರ್ದೈವದಿಂದ ಊರ್ಮಿಳಾರ ತಂದೆ ತೀರಿಕೊಂಡರು. ಹೇಗಾದರೂ ಮಕ್ಕಳನ್ನು ಓದಿಸಲೇಬೇಕೆನ್ನುವ ಪತಿಯ ಕೊನೆಯ ಇಚ್ಛೆಯನ್ನು ಈಡೇರಿಸುವುದು ಈಗ ತಾಯಿಯ ಗುರಿಯಾಯಿತು. ಆಕೆ ಅನಕ್ಷರಸ್ಥೆ. ಆರು ಮಂದಿ ಮಕ್ಕಳನ್ನು ಸಾಕಿ ಬೆಳೆಸುವ ಜವಾಬ್ದಾರಿ ಆಕೆಯ ಮೇಲಿತ್ತು. ಜೀವನ ನಿರ್ವಹಣೆಗಾಗಿ ಆಕೆ ಬುಟ್ಟಿ ಹೆಣೆದು ಮೇಲ್ವರ್ಗದವರಿಗೆ ಮಾರಿ ಹಣ ಸಂಪಾದಿಸುತ್ತಿದ್ದರು. ತಾಯಿ ಹಣೆದ ಬುಟ್ಟಿಗಳನ್ನು ಖರೀಸಿದವರ ಮನೆಗೆ ತಲುಪಿಸುವ ಕೆಲಸ ಊರ್ಮಿಳಾರದು. ಅಲ್ಲಿ ಅಸ್ಪೃಶ್ಯತೆಯ ಅಪಮಾನಗಳಿದ್ದವು. ಹೊಟ್ಟೆಯೊಳಗೆ ಹಸಿವೆಯ ಉರಿ ಇತ್ತು. ಅದರೊಂದಿಗೆ ವಿದ್ಯಾಭ್ಯಾಸ ಒದಗಿಸಬಹುದಾದ ಒಳ್ಳೆಯ ದಿನಗಳ ನಿರೀಕ್ಷೆಯೂ ಇತ್ತು. ಆದರೆ ಎಸ್.ಎಸ್.ಎಲ್.ಸಿ. ಪಾಸಾಗಿದ್ದ ಊರ್ಮಿಳಾರ ಅಣ್ಣ ವಿಷಮಶೀತಜ್ವರಕ್ಕೆ ಬಲಿಯಾದ ಆಘಾತದಿಂದ ತಾಯಿ

ಚೇತರಿಸಿಕೊಳ್ಳಲೇ ಇಲ್ಲ. ತಮ್ಮ ಆತ್ಮಚರಿತ್ರೆ ಆಯದಾನ್‌ನಲ್ಲಿ ಊರ್ಮಿಳಾ ತಮ್ಮ ಬಾಲ್ಯದ ದಿನಗಳನ್ನು ಮತ್ತು ತಮಗಾಗಿ ಸವೆದು ಹೋದ ತಾಯಿಯ ಬಗ್ಗೆ ಹೃದಯಸ್ಪರ್ಶಿಯಾಗಿ ಹೇಳಿಕೊಂಡಿದ್ದಾರೆ.

ರತ್ನಗಿರಿಯಲ್ಲೇ ಹೈಸ್ಕೂಲು ಶಿಕ್ಷಣ ಮುಗಿಸಿದ ಊರ್ಮಿಳಾ ಕೆಲಸಕ್ಕೆ ಸೇರಿಕೊಂಡರು. ಅವರು ಮದುವೆಯಾಗಿ ಮೂವರು ಮಕ್ಕಳಾದ ಬಳಿಕ ಕಾಲೇಜು ಸೇರಿಕೊಂಡು ಎಂ.ಎ.ವರೆಗೆ ಕಲಿತರು. ಅಂಬೇಡ್ಕರ್‌ರ ಪ್ರಭಾವ ಮತ್ತು ದಲಿತ ಮಹಿಳೆಯರ ಬವಣೆ ಊರ್ಮಿಳಾರನ್ನು ಕಾಡಿದವು. ಆಗಲೇ ಪ್ರಕಟವಾಗುತ್ತಿದ್ದ ದಲಿತ ಮಹಿಳೆಯರ ಬರಹಗಳು ಅರ್ಧ ಸತ್ಯವನ್ನಷ್ಟೇ ಹೇಳುತ್ತಿದ್ದವು. ದಲಿತ ಮಹಿಳೆಯರ ಶೋಷಣೆ ಮೂರು ಸ್ತರಗಳಲ್ಲಿ ನಡೆಯುತ್ತಿರುವುದನ್ನೂ ಆಕೆ ಕಂಡಿದ್ದರು. ಅಂತಸ್ತು, ಜಾತೀಯತೆ ಮತ್ತು ಲೈಂಗಿಕ ನೆಲೆಗಳಲ್ಲಿ ದಲಿತ ಮಹಿಳೆಯ ಬದುಕು ಮೂರಾಬಟ್ಟೆಯಾಗಿ ಬಿಡುತ್ತಿತ್ತು. ಆದುದರಿಂದ ಊರ್ಮಿಳಾ ತಮ್ಮ ಕತೆಗಳಲ್ಲಿ, ಲೇಖನಗಳಲ್ಲಿ ಪುರುಷವರ್ಗವನ್ನೇ ಮೊದಲಿಗೆ ಪ್ರಶ್ನಿಸಹತ್ತಿದರು. ಉಳಿದ ಲೇಖಕಿಯರ ಪ್ರತಿಭಟನೆ ಜಾತೀಯತೆಯ ವಿರುದ್ಧವಿರುತ್ತಿತ್ತು. ಬಡತನದ ವಿರುದ್ಧವಿರುತ್ತಿತ್ತು. ಆದರೆ ಮನೆಯೊಳಗೆ ತಮ್ಮ ಶೋಷಣೆ ನಡೆಸುತ್ತಿದ್ದ ಗಂಡಸರ ಕುರಿತು ಅವರು ಮೌನವಾಗಿ ಬಿಡುತ್ತಿದ್ದರು. ಊರ್ಮಿಳಾಗೆ ಆ ಮೌನವನ್ನು ಒಡೆಯುವುದಿತ್ತು.

ಊರ್ಮಿಳಾರನ್ನು ಕಾಡಿದ್ದು ಬರೇ ಸ್ವಂತದ ನೋವಲ್ಲ. ತಮ್ಮ ತಾಯಿಯಂತೆ ಲೆಕ್ಕವಿಲ್ಲದಷ್ಟು ದಲಿತ ಮಹಿಳೆಯರ ಬದುಕನ್ನು ಅವರು ಕಂಡಿದ್ದರು. ತಳಮಳಿಸಿದ್ದರು. ಅದನ್ನೇ ಕತೆಯಾಗಿ ಹೊರಹಾಕಬೇಕಿತ್ತು. ಅವರ ಎರಡನೇ ಕತೆ ನ್ಯಾಯ ಅವರಿದ್ದ ಹಳ್ಳಿಯಲ್ಲೇ ನಡೆದ ಘಟನೆಯಾಗಿತ್ತು. ಅಲ್ಲೊಬ್ಬ ವಿಧವೆ ಗರ್ಭಿಣಿಯಾದಳು. ಹಳ್ಳಿಯ ಮುಖಂಡರು ಸಭೆ ಕರೆದು ಅದಕ್ಕೆ ಕಾರಣವಾದ ಗಂಡಸಿನ ಹೆಸರು ಕೇಳಿದರೆ ಆಕೆ ಹೇಳಲೇ ಇಲ್ಲ. ವಿಚಾರಣೆ ನಡೆಸುವವರಲ್ಲಿ ಅವನೂ ಒಬ್ಬನಾಗಿದ್ದ. ಕೊನೆಗೆ ಉಳಿದ ಹೆಂಗಸರು ಅಲ್ಲೇ ಅವಳನ್ನು ಬಗ್ಗಿಸಿ ಹಿಡಿದು ಗರ್ಭಪಾತವಾಗುವವರೆಗೂ ಒದ್ದರು. ನಂತರ ಅದೇ ಹೆಂಗಸರು ಮಹತ್ಕಾರ್ಯ ಸಾಧಿಸಿದವರಂತೆ ಊರ್ಮಿಳಾರ ಅಮ್ಮನ ಬಳಿ ಹೇಳಿಕೊಂಡರಂತೆ. ಆ ಗಳಿಗೆಯ ಆಘಾತ ಹಾಗೂ ದುಃಖ ಊರ್ಮಿಳಾರ ಮನಸ್ಸಿನೊಳಗೇ ಇದ್ದು, ನಂತರ ಕತೆಯಾಗಿ ಹೊರಬಂದಿತ್ತು. ಹೀಗೆ ಅವರ ಆರಂಭದ ಕತೆಗಳೆಲ್ಲಾ ಅವರ ಒಳಗೆ ಹುದುಗಿಕೊಂಡಿದ್ದ ನೋವಿನ ಎಳೆಗಳೇ ಆಗಿದ್ದು ಅದರಿಂದಲೇ ಕತೆಗಳು ಹೆಣೆಯಲ್ಪಟ್ಟಿತ್ತು. ಅವರ ಮೊದಲ ಕಥಾ ಸಂಕಲನ **ಸಹಾವೆ ಬೋಟ್** (ಆರನೇ ಬೆರಳು) ೧೯೮೮ರಲ್ಲಿ ಪ್ರಕಟವಾಯಿತು. ಅದಕ್ಕೂ ಮೊದಲೇ ಊರ್ಮಿಳಾ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ದಲಿತ ಚಳುವಳಿಯಲ್ಲಿ ಭಾಗವಹಿಸಿದ್ದ ದಲಿತ ಮಹಿಳೆಯರ ಕುರಿತು ಅಧ್ಯಯನ ನಡೆಸಿ ಬರೆದ **ಅಮ್ಹೀ ಇತಿಹಾಸ್ ಘಡವ್‌ಲಾ**(ನಾವೂ ಇತಿಹಾಸ ನಿರ್ಮಿಸಿದೆವು) ಪುಸ್ತಕ ೧೯೮೯ರಲ್ಲಿ ಹೊರ ಬಂದು ಸಾಕಷ್ಟು ವಿಮರ್ಶೆಗೆ ಒಳಗಾಯಿತು. ಏಕೆಂದರೆ ಅವರೆಗೆ ಅಂಬೇಡ್ಕರ್ ಅವರ ಚಳುವಳಿಯಲ್ಲಿ ಮಹಿಳೆಯರ ಪಾತ್ರ ಇಲ್ಲವೇ ಇಲ್ಲ ಎಂದು

ಸಾಧಿಸಿದವರೇ ಇದ್ದರು. ಅಷ್ಟೇ ಅಲ್ಲಾ, ಈ ಮಹಿಳೆಯರು ಎಷ್ಟೆಲ್ಲಾ ಕೌಟುಂಬಿಕ ಹಿಂಸೆಗಳನ್ನು ಸಹಿಸಿಕೊಳ್ಳುತ್ತಲೇ ಚಳುವಳಿಯಲ್ಲಿ ಭಾಗವಹಿಸಿದ್ದರು ಎಂದು ಊರ್ಮಿಳಾ ಕಂಡುಕೊಂಡ ಸತ್ಯವನ್ನು ಒಪ್ಪಿಕೊಳ್ಳಲು ಯಾರೂ ಸಿದ್ಧರಿರಲಿಲ್ಲ. ಈಗಲೂ, ಈ ಇಪ್ಪತ್ತೊಂದನೇ ಶತಮಾನದಲ್ಲಿ, ಮಹಿಳೆಯರಿಗೆ ಎಷ್ಟೆಲ್ಲಾ ಬಾಗಿಲುಗಳು ತೆರೆದಿರುವಾಗಲೂ ದಲಿತ ಮಹಿಳೆಯರು ಗಮನಾರ್ಹ ರೀತಿಯಲ್ಲಿ ಮುಂದುವರಿಯುತ್ತಿಲ್ಲ ಎನ್ನುವ ದುಗುಡ ಊರ್ಮಿಳಾ ಅವರಿಗೆ ಇದೆ.

ಊರ್ಮಿಳಾ ಎಷ್ಟು ನಿರ್ಭಿಡೆಯಿಂದ ಕತೆ ಹೇಳಬಲ್ಲರೋ ಅಷ್ಟೇ ಸೂಕ್ಷ್ಮವಾಗಿ ಅಂತರಂಗದ ನೋವನ್ನು ಬಿಚ್ಚಿಡಬಲ್ಲರು. ಅವರ ಎರಡನೇ ಕತಾ ಸಂಕಲನ **ಚೌಥಿ ಭಿಂಥ್** (ನಾಲ್ಕನೆಯ ಗೋಡೆ) ೧೯೯೦ರಲ್ಲಿ ಬಂತು. ಈ ಸಂಕಲನದ ಹೆಚ್ಚಿನ ಕತೆಗಳೂ ಊರ್ಮಿಳಾರ ಬದುಕಿಗೇ ಸಂಬಂಧಪಟ್ಟವುಗಳಾಗಿದ್ದು, ಒಂದೆರಡು ಕತೆಗಳನ್ನು ಬಿಟ್ಟರೆ ಮತ್ತೆಲ್ಲವೂ ಅವರು ಕಂಡ ಬಾಲ್ಯದ ಮಗ್ಗುಲನ್ನು ತೆರೆದಿಡುತ್ತವೆ. ಆದರೆ ಈ ಸಂಕಲನದ ವಿಶಿಷ್ಟತೆ ಎಂದರೆ ಕತೆಗಾರ್ತಿಯಾಗಿ ಬೆಳೆಯುವಲ್ಲಿ ಊರ್ಮಿಳಾ ಪಡೆದ ಜೀವನ ದರ್ಶನ ಹಾಗೂ ಅದನ್ನು ಅಭಿವ್ಯಕ್ತಿಸುವಲ್ಲಿರುವ ಸ್ವಚ್ಛಂದತೆ. ಮೊದಲ ಕತಾ ಸಂಕಲನದಲ್ಲಿ ಬದುಕಿನ ಕುರಿತಾದ ಏಕಮುಖಿ ಅನಿಸಿಕೆಗಳು ಅಷ್ಟೇ ರೂಕ್ಷವಾಗಿ, ಆಘಾತ ನೀಡುವ ಉದ್ದೇಶದಿಂದಲೇ ಮೂಡಿ ಬಂದಂತೆನಿಸುತ್ತದೆ. ಆದರೆ **ಚೌಥಿ ಭಿಂಥ್**‌ನ ಕತೆಗಳು ಜೀವನ್ಮುಖಿಯಾಗಿ ಬೆಳೆಯುವುದನ್ನೂ, ಊರ್ಮಿಳಾ ಮಗುವಿನ ಮುಗ್ಧತೆಯೊಂದಿಗೆ ಅದನ್ನು ಅವಲೋಕಿಸುತ್ತಲೇ ಕತೆ ಹೇಳುವ ಅದ್ಭುತ ಇಲ್ಲಿ ಕಾಣಬಹುದು.

ಈ ಸಂಕಲನದಲ್ಲಿ ಗಮನ ಸೆಳೆಯುವ ಕತೆಗಳೆಂದರೆ ಗೋಷ್ಟ್ ಶೈಶವಾಚಿ (ಬಾಲ್ಯಕಾಲ ಕತೆ), ಚೌಥಿ ಭಿಂಥ್, ಮುಕ್ತಿ, ಘರ್‌ಭರಣಿ, ಬಾಯಿಚಿ ಜಾತ್ (ಸ್ತ್ರೀ ಜಾತಿ), ಅಸ್ತಿತ್ವ್ ಮತ್ತು ಕವಚ್. **ಗೋಷ್ಟ್ ಶೈಶವಾಚಿ** ಇದರಲ್ಲಿ ತಮ್ಮ ಬಾಲ್ಯದ ಕತೆಯನ್ನೇ ಹುಡುಗಿಯ ದೃಷ್ಟಿಯ ಮೂಲಕ ವೀಕ್ಷಿಸಿ ಹೇಳುವ ತಂತ್ರವನ್ನು ಊರ್ಮಿಳಾ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಭಾಷೆಯ ಲವಲವಿಕೆಯ ಮೂಲಕವೇ ವಿಷಾದವನ್ನು ಬಿಚ್ಚಿಡುವ ರೀತಿಯೂ ಬೆರಗುಪಡಿಸುವಂತಹದ್ದು. ಈ ಕತೆಯಲ್ಲಿ ನೋವಿದೆ, ಆರೋಪವಿಲ್ಲ, ನಿರ್ಲಿಪ್ತತೆಯಿದೆ, ವಿಮುಖತೆಯಿಲ್ಲ. ಹುಡುಗಿ ತನ್ನ ಬಾಲ್ಯದ ನಾಲ್ವರು ಶತ್ರುಗಳ ಬಗ್ಗೆ ಹೇಳುತ್ತಾ, ಅವರೇ ತನ್ನ ಜೀವನದ ಅಡಿಗಲ್ಲು ಇಟ್ಟವರು ಎಂದು ಹೇಳುತ್ತಾಳೆ. ಆ ಶತ್ರುಗಳಾದರೂ ಯಾರು? ಮೊದಲನೇ ಶತ್ರು ಅಪ್ಪ, ಎರಡನೆ ಸ್ಥಾನದಲ್ಲಿ ಅಮ್ಮ, ಮೂರನೇಯಾತ ಅಣ್ಣ ಹಾಗೂ ನಾಲ್ಕನೆಯಾತ ಶಾಲೆಯ ಮಾಸ್ತರು ಹರ್ಲೆಕರ್ ಗುರೂಜೀ. ಇಲ್ಲಿ ಕತೆಗಾರ್ತಿ ಕೊಡುವ ಅಪ್ಪನ ಚಿತ್ರಣ ಹೀಗಿದೆ : 'ಸಮುದ್ರ ದಂಡೆಯ ಮರಳ ಮೇಲೆ ಚಿಕ್ಕ ಚಿಕ್ಕ ಏಡಿಗಳು ತುರು ತುರು ಓಡಾಡುವ ಹಾಗೆ ನಮ್ಮಪ್ಪನ ನಡಿಗೆ. ಸದಾ ಅಲ್ಲಿಂದಿಲ್ಲಿಗೆ ಓಡಾಡಿಕೊಂಡಿರುತ್ತಿದ್ದರು. ಬಿಸಿಲ ಧಗೆಯಲ್ಲಿ, ಮಳೆಗಾಲದಲ್ಲಿ, ಬಿಸಿಲು ಮಳೆ ಯಾವುದೂ ಇಲ್ಲದಾಗಲೂ ಕಪ್ಪು ಕೊಡೆಯೊಂದನ್ನು ಸದಾ ಕಾಲ ಕೈಯಲ್ಲಿ ಹಿಡಿದಿರುತ್ತಿದ್ದರು.

ಆ ಕೊಡೆಯೆಂದರೆ ಅವರ ಮೂರನೆ ಕೈ ಇದ್ದ ಹಾಗೆ. ನಮ್ಮ ಬೆನ್ನ ಮೇಲೂ ಬಹಳಷ್ಟು ಸಲ ಅದರ ಏಟು ಬೀಳುತ್ತಿತ್ತು'. ತನ್ನ ತಂದೆಯ ಬಗ್ಗೆ ಅಸಾಧ್ಯ ಕೋಪ ವ್ಯಕ್ತಪಡಿಸುವ ಹುಡುಗಿಯ ನಂತರದ ಮಾತುಗಳು ಅಷ್ಟೇ ಹೃದಯಸ್ಪರ್ಶಿ. 'ನಾನು ಆಸ್ಪತ್ರೆಗೆ ಹೋದಾಗ ಅಪ್ಪನಿಗೆ ಬಿಳಿಯ ಚಾದರ ಹೊದೆಸಿದ್ದರು. ಅಪ್ಪ ಕಾಣುತ್ತಿರಲಿಲ್ಲ. ಅವರ ಹೊಟ್ಟೆ ಮಾತ್ರ ಗರ್ಭಿಣಿಯಂತೆ ಮೇಲೆ ಬಂದದ್ದು ಕಾಣುತ್ತಿತ್ತು. ನಾವು ಅವರ ತಲೆದಿಂಬಿನ ಬಳಿ ನಿಂತಾಗ ಚಿಕ್ಕ ಮಕ್ಕಳಂತೆ ಅಳತೊಡಗಿದರು. ಅವ್ವನೊಡನೆ 'ಮಕ್ಕಳಿಗೆ ಕಲಿಸು' ಎಂದರು. ಈ ಹುಡುಗಿ ಅಪ್ಪ ತೀರಿಕೊಂಡ ಮಾರನೇ ದಿನವೇ ಶಾಲೆಗೆ ಹೋಗಲೇ ಎಂದು ಕೇಳುತ್ತಾಳೆ. ಆ ದಿನದ ಮುಂಚೆಯಾಗಲಿ, ನಂತರವಾಗಲೀ ಆಕೆಯೆಂದೂ ಶಾಲೆಗೆ ಹೋಗುವ ಬಗೆಗೆ ಅಷ್ಟೊಂದು ಉತ್ಸಾಹ ತೋರಿಸಿರಲೇ ಇಲ್ಲ. ಈ ಒಂದೇ ವಾಕ್ಯದಲ್ಲಿ ಕತೆಗಾರ್ತಿ, ತಂದೆ ತೀರಿಹೋದ ದಿನದಂದಿನ ಹುಡುಗಿಯ ಮಾನಸಿಕ ತುಮುಲವನ್ನು ಕಟ್ಟಿಕೊಡುತ್ತಾರೆ.

ಶಾಲೆಯಲ್ಲಿ ಹರ್ಲೆಕರ್ ಗುರೂಜಿಯ ಕೈಯಲ್ಲಿ ಹೊಡೆಯಿಸಿಕೊಂಡು, ಕೆನ್ನೆ ಊದಿಸಿಕೊಂಡು ಬಂದ ಮಗಳಿಗೆ ಆಕೆಯ ಇನ್ನೋರ್ವ ಶತ್ರು ತಾಯಿ ಹೇಗೆ ನ್ಯಾಯ ಕೊಡಿಸುತ್ತಾಳೆ, ನೋಡಿ. 'ಗುರೂಜಿ ನೀವಿಷ್ಟು ಕಲಿತೋರಾಗಿ ಪುಟ್ಟ ಮಕ್ಕಳ ತರ ಮಾತಾಡ್ತೀರಲ್ಲಾ. ಇಲ್ನೋಡಿ....ನಾನೇನು ಮರ್ಯಾದಸ್ತ ಹೆಂಗ್ಸಲ್ಲ...ಇಲ್ಲಿ ಮರದ ಕೆಳಗೆ, ರಸ್ತೆಬದಿಯಲ್ಲಿ ವನವಾಸಿಯಂತೆ ಮಕ್ಕಳೊಂದಿಗೆ ಇದ್ದೇನೆ....ಯಾಕೆ ಗೊತ್ತಾ? ನನ್ನ ಮಕ್ಳು ಕಲ್ತು.... ದೊಡ್ಡ ಮನುಷ್ಯರಾಗಬೇಕೂಂತ. ಮತ್ತೆ ನೀವು ಹುಡ್ಗೀಗೆ ಈ ರೀತಿ ತ್ರಾಸ ಕೊಡ್ತೀರಾ. ಆಂ?' ಅಮ್ಮ ವ್ಯಾಕರಣ ದೋಷಯುಕ್ತ ಭಾಷೆಯಲ್ಲಿ ಬಡಬಡಿಸುತ್ತಿದ್ದಳು. 'ಇಲ್ನೋಡಿ ಇನ್ಮುಂದೆ ನನ್ನ ಹುಡ್ಗೀಗೆ ನಿಮ್ಮ ಬೆರಳು ತಾಕಿದ್ರೂ, ನೀವು ಈ ರಸ್ತೆಯಲ್ಲಿ ಹೇಗೆ ನಡೀತೀರೋ ನೋಡ್ತೀನಿ...' ಏರುದನಿಯಲ್ಲಿ ಗುರೂಜಿಗೆ ಎಚ್ಚರಿಕೆ ನೀಡುತ್ತಿದ್ದಳು.... ಆ ದಿನದ ನಂತರ ಹಲವು ಕೆಲಸಗಳು ಸುಲಭವಾದವು. ನನ್ನ ಹಣೆಬರಹವಾಗಿದ್ದ ಸೆಗಣಿ ಎತ್ತುವ ಕೆಲಸ, ಗುರೂಜಿಯ ಹೊಡೆತಗಳು ಕೊನೆಗೊಂಡವು. ನಾನು ಸಮಯಕ್ಕೆ ಸರಿಯಾಗಿ ಶಾಲೆಗೆ ಹೋಗಲಾರಂಭಿಸಿದೆ. ಎಲ್ಲಕ್ಕಿಂತ ಮುಖ್ಯವೆಂದರೆ ಅವ್ವನಲ್ಲೊಂದು ಪ್ರಚಂಡ ಆಸರೆಯನ್ನು ಕಾಣತೊಡಗಿದೆ ಮತ್ತು ನನ್ನ ಬಾಳಿಗೊಂದು ದಿಕ್ಕು ದೊರಯಿತು. ಹೀಗೆ ಕತೆ ಕೊನೆಗೊಳ್ಳುವುದು ದಿಕ್ಕು ದೊರಕಿಸಿಕೊಂಡ ಧನ್ಯತೆಯೊಂದಿಗೆ.

ಇದೇ ರೀತಿಯ ಊರ್ಮಿಳಾರ ಇನ್ನೊಂದು ಮಹತ್ವದ ಕತೆ **ಕವಚ್** ಕೂಡಾ ದಲಿತ ಮಕ್ಕಳ ಬದುಕಿನ ಒಂದು ವಿಷಮತೆಯನ್ನು ಅನಾವರಣಗೊಳಿಸುತ್ತದೆ. ಇಲ್ಲಿ ಕೂಡಾ ಕತೆ ಕೊನೆಗೊಳ್ಳುವುದು ಮುಗ್ಧ ಮನಸ್ಸು ಕಂಡುಕೊಳ್ಳುವ ಹೊಸ ಶಕ್ತಿ ಹಾಗೂ ಭರವಸೆಯ ಬೆಳಕಿನೊಂದಿಗೆ. 'ಗೌರ್‍ಯಾ ತನ್ನ ಅವ್ವನನ್ನೇ ನೋಡುತ್ತಾ ನಿಂತ. ಕೋಮಲವಾಗಿ, ಅಸಹಾಯಕಳಂತೆ ಕಾಣುತ್ತಿದ್ದ ಅವನ ಅವ್ವ ಈಗ ಬೇರೆಯಾಗಿ ಕಂಡಳು. ಮಾವಿನ ಹಣ್ಣಿನ ಒಳಗೆ ದೃಢವಾದ, ಗಟ್ಟಿಯಾದ ಓಟೆಯಿರುವಂತೆ. ಕೋಮಲತೆಯೂ ಅವಳ ಕವಚವೆಂಬುದು ಅವನಿಗೆ ಅರ್ಥವಾಯಿತು. ಅವನು ನೋಡು ನೋಡುತ್ತಿದ್ದಂತೆಯೇ, ಆ ಕವಚವು ದೊಡ್ಡದಾಗಿ.... ಇನ್ನಷ್ಟು ದೊಡ್ಡದಾಗಿ..... ಸೀತೆಯ ಮಾಳವನ್ನು ತೆಕ್ಕೆಯಲ್ಲಿ ಹುದುಗಿಸಿಕೊಳ್ಳುವ ಆಕಾಶದಷ್ಟಾಗಿ ಬೆಳೆಯಿತು.'

**ಅಸ್ತಿತ್ವ** ಕತೆಗೆ ಊರ್ಮಿಳಾರ ಬದುಕಿನಲ್ಲಿ ಎದುರಾದ ಒಂದು ದುರಂತವ ಹಿನ್ನೆಲೆಯಿದೆ. ಅವರಿಗೆ ಮೂವರು ಮಕ್ಕಳಿದ್ದರು. ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ಎಂ.ಬಿ.ಬಿ.ಎಸ್. ಎರಡನೇ ವರ್ಷ ಓದುತ್ತಿದ್ದ ಮಗ, ಮುಂಬಯಿಯ ಲೋಕಲ್ ರೈಲಿನ ನೂಕುನುಗ್ಗಲಿನಲ್ಲಿ ಕೆಳಗೆ ಬಿದ್ದು ತೀರಿಕೊಂಡ. ಈ ಆಘಾತದಿಂದ ಹೊರ ಬರುವಲ್ಲಿ ಊರ್ಮಿಳಾ ಬಹಳ ಪ್ರಯಾಸಪಟ್ಟರು. ತುಂಬಾ ಓದುತ್ತಿದ್ದ ಅವರಿಗೆ ಏಕಾಗ್ರತೆ ಸಾಧ್ಯವಾಗುತ್ತಿರಲಿಲ್ಲ. ಅದಕ್ಕೆಂದೇ ಅವರು ಬರೆಯುತ್ತಾ ಹೋದರು. ೧೯೮೮ರಿಂದ ಅವರು ತುಂಬಾ ಬರೆದಿದ್ದಾರೆ. **ಅಸ್ತಿತ್ವ** ಕತೆಯಲ್ಲಿ ಮಗನ ನೆನಪಿನಿಂದ ಹೊರ ಬರಲಾಗದ ತಾಯಿಯೊಬ್ಬಳ ಒಳತೋಟಿಯಿದೆ.

**ಚೌಥಿ ಭಿಂಥ್** (ನಾಲ್ಕನೇ ಗೋಡೆ) ಮತ್ತು **ಬಾಯಿಚಿ ಜಾತ್** (ಸ್ತ್ರೀ ಜನ್ಮ) ಕತೆಗಳು ಆಧುನಿಕ ದಲಿತರ ಇಬ್ಬಂದಿತನವನ್ನು ಹೇಳುತ್ತವೆ. ದಲಿತ ಕುಟುಂಬದೊಳಗೆ ನಡೆಯುವ ಕ್ರೌರ್ಯವನ್ನು ಊರ್ಮಿಳಾ ಅನಾವರಣ ಮಾಡಹತ್ತಿದಾಗ, ಆಕೆ ದಲಿತರನ್ನು ನಗೆಪಾಟಲಿಗೆ ಈಡಾಗಿಸುತ್ತಾರೆಂಬ ಆರೋಪಗಳು ಕೇಳಿ ಬಂದವು. 'ನಮ್ಮನ್ನು ಶೋಷಣೆ ಮಾಡುತ್ತಿದ್ದ ಮೇಲ್ವರ್ಗದವರ ಬಗ್ಗೆ ಬರೆ. ನಿನ್ನದೇ ಜನರ ವಿರುದ್ಧ ಯಾಕೆ ಬರೆಯುತ್ತೀ' ಇಂತಹ ಮಾತುಗಳು ಕೇಳಿ ಬಂದವು. ಮನೆಯ ಒಳಗೆ ಅಥವಾ ಹೊರಗೆ, ಶೋಷಣೆಯ ವಿರುದ್ಧ ತಾನು ಧ್ವನಿ ಎತ್ತುವವಳು ಎನ್ನುವುದನ್ನು ಊರ್ಮಿಳಾ ಸ್ಪಷ್ಟಪಡಿಸಿದ್ದರು. **ಚೌಥಿ ಭಿಂಥ್‌**ನ ವೃದ್ಧ, ತನ್ನ ಮಕ್ಕಳು ಕಾರ್ಯಕರ್ತರಾಗಿರುವ ದಲಿತ ಸಂಘದಲ್ಲಿ ಫುಲೆ, ಅಂಬೇಡ್ಕರ್ ಕುರಿತಾದ ಭಾಷಣದಿಂದ ಭಾವುಕನಾಗಿ, ನಿವೃತ್ತಿಯ ವೇಳೆ ತನಗೆ ದೊರಕಿದ್ದ ದೊಡ್ಡ ಮೊತ್ತವನ್ನು ದೇಣಿಗೆ ನೀಡುತ್ತಾನೆ. ಇದರಿಂದ ಕೋಪಗೊಂಡ ಮಕ್ಕಳು ಆತನನ್ನು ಮನೆಯಿಂದ ಹೊರಹಾಕಿದಾಗ ಆತ ವೃದ್ಧಾಶ್ರಮ ಸೇರಬೇಕಾಗುತ್ತದೆ. ಒಂದು ಕೊಠಡಿಯ ನಾಲ್ಕು ಗೋಡೆಗಳಿಗೂ ತಾಗಿದಂತಿರುವ ಒಂದೊಂದು ಮಂಚದ ಪ್ರಪಂಚ ಅಲ್ಲಿ. ಈತನಿಗೆ ನಾಲ್ಕನೆಯ ಗೋಡೆ ಸಿಗುತ್ತದೆ. ಅದರಲ್ಲಿ ಆತ ತನಗೆ ಬೇಕಾದ ದೇವರ ಫೋಟೋಗಳನ್ನು ತೂಗಿ ಹಾಕಬಹುದು. ಅದನ್ನು ಖಾಲಿಯಾಗಿಯೇ ಇರಿಸಲು ಆತನ ಜಗಳ, ದಲಿತತ್ವದ ನೆಲೆ ಯಾವುದು ಎನ್ನುವುದನ್ನು ಶೋಧಿಸುತ್ತದೆ. **ಬಾಯೀಚಿ ಜಾತ್‌**ನಲ್ಲಿ ದಲಿತ ಗಂಡಸರು ಎರಡೋ, ಮೂರೋ ಮದುವೆ ಮಾಡಿಕೊಳ್ಳುವುದನ್ನೇ ವಸ್ತುವಾಗಿಸಿಕೊಂಡು ಊರ್ಮಿಳಾ ಪ್ರಶ್ನೆ ಮಾಡಿದ್ದಾರೆ. ದಲಿತ ಚಿಂತನೆ ಹಾಗೂ ಖಾಸಗಿ ಬದುಕನ್ನು ಬೇರೆ ಬೇರೆಯಾಗಿ ನಡೆಸಿಕೊಂಡು ಬರುವ ಪುರುಷವರ್ಗಕ್ಕೆ ತಮ್ಮ ಹೆಂಗಸರ ಕಷ್ಟ ಕಾಣಿಸುವುದೇ ಇಲ್ಲ.

ಊರ್ಮಿಳಾ ಪವಾರ್ ಅವರ **ದೋನ್ ಏಕಾಂಕಿಕಾ** ೧೯೯೦ರಲ್ಲಿ ಬಂತು. ಆ ಬಳಿಕ ಒಂದು ಪ್ರವಾಸ ಕಥನ, **ಮಾರಿಷಸ್ : ಏಕ್ ಪ್ರವಾಸ್** ೧೯೯೪ರಲ್ಲಿ ಪ್ರಕಟವಾಯಿತು. ಸಾರ್ವಜನಿಕ ಕಾಮಗಾರಿ ಇಲಾಖೆಯಲ್ಲಿ ನೌಕರಿಯಲ್ಲಿದ್ದ ಅವರು ಬರವಣಿಗೆಯನ್ನು, ಶಿಕ್ಷಣವನ್ನು ಜತೆಗೆ ಸಂಸಾರವನ್ನೂ ನಡೆಸಿಕೊಂಡು ಬಂದವರು. ಆಕೆ ಮರಾಠಿ ಸಾಹಿತ್ಯದಲ್ಲಿ ಎಂ. ಎ. ಪದವಿಯನ್ನು ಪಡೆದದ್ದು ಮಕ್ಕಳು ಓದು ಮುಗಿಸಿ ತಮ್ಮ ದಾರಿ ಕಂಡುಕೊಂಡ ಬಳಿಕ. ಹಾಗಾಗಿ ದುಡಿಯುವ ಮಹಿಳೆಯ ಕಷ್ಟ, ಸುಖಗಳೂ ಅವರ ಕತೆಗಳಿಗೆ ವಸ್ತು ಆಗಿ

ಬಂದಿವೆ. ಪುರುಷ ಪ್ರಧಾನ ಸಮಾಜದಲ್ಲಿ ಬದುಕುತ್ತಿರುವ ಮಹಿಳೆಯರ ಮೌನ ಧ್ವನಿಗಳನ್ನೂ ಅವರು ತಮ್ಮ ಅಕ್ಷರಗಳಲ್ಲಿ ಹಿಡಿದಿರಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಬಂದ ಊರ್ಮಿಳಾ ಪವಾರ್ ಅವರ ಎರಡು ಕೃತಿಗಳು ಮರಾಠಿ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ಎಂದೇ ಹೇಳಬೇಕು. ೨೦೦೩ರಲ್ಲಿ ಪ್ರಕಟವಾದ **ಆಯದಾನ್**(ಬೆತ್ತದ ಸೆಂದೂಕು), ಇದು ಊರ್ಮಿಳಾರ ಆತ್ಮಚರಿತ್ರೆ ಮತ್ತು ೨೦೦೪ರಲ್ಲಿ ಬಂದ ಸಣ್ಣಕತಾ ಸಂಕಲನ **ಹಾತಚ್ಯಾ ಏಕ್** (ಕೈಯಲ್ಲಿನ ಒಂದು), ಸಾಕಷ್ಟು ಚರ್ಚೆ ಹಾಗೂ ವಿಮರ್ಶೆಯನ್ನು ಕಂಡವು. ಒಬ್ಬ ದಲಿತ ಮಹಿಳೆಯ ಗುರುತಿನೊಂದಿಗೆ ತನ್ನ ಜೀವನದ ವಿವಿಧ ಸ್ತರಗಳನ್ನು ದಾಟುತ್ತಾ, ತನ್ನನ್ನೇ ತಾನು ಕಂಡುಕೊಳ್ಳುತ್ತಾ ಬಂದ ಬಗೆಯನ್ನು ಮುಕ್ತವಾಗಿ **ಆಯದಾನ್**ನಲ್ಲಿ ಊರ್ಮಿಳಾ ಹೇಳಿಕೊಂಡಿದ್ದಾರೆ. ಹಾಗೆ ನೋಡಿದರೆ ಈ ಆತ್ಮಚರಿತ್ರೆ ಬರೀ ಆಕೆಯದಷ್ಟೇ ಅಲ್ಲ, ಅವರ ತಾಯಿ, ಸಹೋದರಿ, ಗೆಳತಿಯರು, ನೆರೆಹೊರೆಯ ಹೆಂಗಸರು ಎಲ್ಲರನ್ನೂ ಒಳಗೊಳ್ಳುತ್ತಾ ಸ್ತ್ರೀ ಲೋಕವೊಂದು ಇಲ್ಲಿ ಕಾಣಸಿಗುತ್ತದೆ. ಊರ್ಮಿಳಾ ಹೇಳಿಕೊಳ್ಳುವಂತೆ, 'ಅಂಗಳದ ಮಾವಿನ ನೆರಳಿನಲ್ಲಿ ತಾಯಿ ಬೆತ್ತದ ಬುಟ್ಟಿಗಳನ್ನು ಹೆಣೆಯುತ್ತಾ ಕುಳಿತಿರುವಾಗ, ಸುತ್ತುಮುತ್ತಲಿನ ಹಳ್ಳಿ ಹೆಂಗಸರು ಬಂದು ಅವರ ಬಳಿ ಕುಳಿತು ತಮ್ಮ ಸುಖ ದುಃಖಗಳನ್ನು ಹಂಚಿಕೊಳ್ಳುವುದಿತ್ತು. ಗ್ರಾಮ್‌ಫೋನ್‌ನ ರೆಕಾರ್ಡ್‌ಗೆ ಮುಳ್ಳು ತಾಗಿಸಿ ತಿರುಗಿಸಿದರೆ ಅದರಿಂದ ಹಾಡು ಹೊಮ್ಮುವಂತೆ, ಅಮ್ಮ ಹೆಣೆಯುತ್ತಿದ್ದ ಆ ಚಕ್ರಾಕಾರದ ಬುಟ್ಟಿಗಳನ್ನೂ ಮುಳ್ಳು ತಾಗಿಸಿ ತಿರುಗಿಸುವಂತಿದ್ದರೆ ಅದರ ಒಡಲೊಳಗಿಂದಲೂ ಎಂಥೆಂಥ ಕತೆಗಳನ್ನು ಕೇಳಲು ಸಾಧ್ಯವಾಗುತ್ತಿತ್ತು'

ಮುಂಬಯಿ ವಿಶ್ವವಿದ್ಯಾಲಯದ ಎಂ.ಎ. ಮೊದಲ ವರ್ಷದ ತರಗತಿಗೆ **ಆಯದಾನ್** ಕೃತಿ ಪಠ್ಯವಾಗಿದೆ. ಅಂತೆಯೇ ಹನ್ನೊಂದನೇ ತರಗತಿಗೆ ಈ ಕೃತಿಯ ಒಂದು ಭಾಗವನ್ನು ಪಠ್ಯವಾಗಿ ಸೇರಿಸಿಕೊಳ್ಳಲಾಗಿದೆ. ಆಯದಾನ್ ಪ್ರಕಟವಾದಾಗ ಅದು ಬಹಳಷ್ಟು ಟೀಕೆಯನ್ನು ಎದುರಿಸಬೇಕಾಗಿ ಬಂತು. ತಮ್ಮ ಆತ್ಮಚರಿತ್ರೆಯಲ್ಲಿ ಊರ್ಮಿಳಾ ತಮ್ಮ ಮೊದಲ ರಾತ್ರಿಯ ಬಗ್ಗೆ ಹೇಳಿಕೊಂಡದ್ದು ಸಾಹಿತ್ಯಕ್ಷೇತ್ರದ ಸಂಪ್ರದಾಯವಾದಿಗಳಿಗೆ ಇಷ್ಟವಾಗಲಿಲ್ಲ. ಆಕೆ ಅಶ್ಲೀಲವಾಗಿ ಬರೆದಿದ್ದಾರೆ ಎಂದು ಆರೋಪಿಸಿದರು. ಈ ಬೆಳವಣಿಗೆಯಿಂದ ಊರ್ಮಿಳಾ ಕಂಗೆಡಲಿಲ್ಲ. 'ಇಂದಿಗೂ ನಮ್ಮ ಸಮಾಜದಲ್ಲಿ ಹೆಣ್ಣನ್ನು ದೇಹವಾಗಿಯಷ್ಟೇ ಕಾಣುವ ಧೋರಣೆಯಿರುವಾಗ, ಆಕೆಯ ಮನಸ್ಸಿನೊಳಗಿನ ಸತ್ಯ ಹೊರಬಂದರೆ ಅದು ದೊಡ್ಡ ಅಪರಾಧವಾಗಿಬಿಡುತ್ತದೆ. ಹಾಗೆಂದೇ ಕೌಟುಂಬಿಕ ಸುರಕ್ಷಿತತೆಯ ನಡುವೆಯೂ ಹೆಣ್ಣು ಲೈಂಗಿಕ ದೌರ್ಜನ್ಯಕ್ಕೆ ಬಲಿಯಾಗುತ್ತಲೇ ಇರುತ್ತಾಳೆ'.ಹೀಗೆಂದು ಅವರು ಹೇಳುತ್ತಾರೆ. ಇಂದಿಗೂ ಲೈಂಗಿಕ ನೆಲೆಯಲ್ಲಿ ಮಹಿಳೆಯ ಪಾಡು ಎರಡು ಅಲಗಿನ ಚೂರಿಯಲ್ಲಿ ಕಸರತ್ತು ಮಾಡಿದಂತೆ ಎನ್ನುವುದು ಅವರ ಮಾತಿನಲ್ಲಿ ವ್ಯಕ್ತವಾಗುತ್ತದೆ.

**ಹಾತ್ ಚಾ ಏಕ್** ಸಂಕಲನದ ಕತೆಗಳನ್ನು ಗಮನಿಸಿದರೆ ಊರ್ಮಿಳಾರ ಸಂವೇದನಾಶೀಲತೆ ಹೊಸ ದಿಕ್ಕನ್ನು ಅರಸುತ್ತಿರುವ ಕುರುಹು ಕಾಣಬಹುದು. ದಲಿತ ಪ್ರಜ್ಞೆ, ಸ್ತ್ರೀವಾದ ಇವುಗಳನ್ನು ಒಳಗೊಂಡಂತೆಯೇ, ನಿರ್ದಿಷ್ಟ ಚೌಕಟ್ಟನ್ನು ದಾಟಿ ವಿಶಾಲವಾದ ನೆಲೆಯಲ್ಲಿ ನಿಂತು ಕತೆಗಾರ್ತಿ ಜಗತ್ತನ್ನು ವೀಕ್ಷಿಸುತ್ತಿರುವುದನ್ನು ಇಲ್ಲಿಯ ಕತೆಗಳು ತೋರಿಸಿಕೊಡುತ್ತವೆ. ಇಲ್ಲಿ ಆಕ್ರೋಶದ ಧಗೆಯಿಲ್ಲ. ಆರೋಪದ ಭರ್ತ್ಸನೆಯಿಲ್ಲ. ದೈನ್ಯತೆಯ ಕಣ್ಣೀರಿಲ್ಲ. ಬದುಕನ್ನು ಅದರೆಲ್ಲಾ ಇತಿಮಿತಿಯಲ್ಲೇ ಆತ್ಮಸಮ್ಮಾನದೊಂದಿಗೆ ಸ್ವೀಕರಿಸುವ, ಪ್ರೀತಿಸುವ, ಹೋರಾಡುವ ಪಾತ್ರಗಳು ಓದುಗರ ಮನಸ್ಸಿನೊಳಗಿಳಿದು ಕಾಡಿ ಬಿಡುತ್ತವೆ. ಹಾಗೆಂದೇ **ಹಾತ್ ಚಾ ಏಕ್** ಕತೆಯ ರಜನಿ, **ದಮ್ಮಚಕ್ರದ** ಮುದುಕಿ, **ಮಾಜಿ ಮಾಣುಸ್‌ನ** ಹುಚ್ಚಿ ಕಮಲಾ ಮತ್ತು ವಾರ್ಡನ್ ಇಂದೂ ತಾಯಿ, **ಫುಟೆ ಸಾಂವರೀಂಚೆ ಬೋಂಡ್‌ನ** ಯಮುನಾ ಕಾಕಿ ಎಲ್ಲರೂ ಒಂದಲ್ಲ ಒಂದು ರೀತಿಯ ಶೋಷಣೆಗೆ ಒಳಗಾಗುತ್ತಾ ಹೋದರೂ, ಕುಸಿಯುವುದಿಲ್ಲ. ಬದುಕಿನ ಅರ್ಥ ಗ್ರಹಿಸಿಕೊಂಡವರಂತೆ ಸಂಬಂಧಗಳ ಸ್ವಾರ್ಥ, ಸಣ್ಣತನಗಳ ತಲೆಯನ್ನು ಮೆಲ್ಲನೆ ಮೊಟಕಿ ಮುಂದೆ ನಡೆದು ಬಿಡುತ್ತಾರೆ.

ಈ ಸಂಕಲನದ ಇನ್ನೆರಡು ಕತೆಗಳು **ಕೌಲ್** ಮತ್ತು **ಏಕ್ ದುವಾ ಖಂಡ್‌ಣಾರಾ** ಮನುಷ್ಯ ಸ್ವಭಾವಗಳ ಸಂಕೀರ್ಣತೆಯನ್ನು ನಾಟಕೀಯ ರೀತಿಯಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. **ಕೌಲ್** ಕತೆಯ ಆರಂಭ ನಿಗೂಢ. ಅದು ಬೆಳೆಯುವುದು ದೇವಿಯ ಆಲಯದಲ್ಲಿ ನೆರೆದ ಜನಪದರ ಸಂಭ್ರಮ, ಸಂಕಟಗಳಲ್ಲಿ. ಕೊನೆಗೊಳ್ಳುವುದು ಸಾವಿನ ತೆಕ್ಕೆಯಲ್ಲಿರುವ ವ್ಯಕ್ತಿ, ಮಾತೆಯ ವಾತ್ಸಲ್ಯದ ನೋಟವೆಂಬ ಆಶೀರ್ವಾದ ತನ್ನತ್ತ ಹರಿಯಲಿ ಎನ್ನುವ ಉತ್ಕಟ ಹಾರೈಕೆಯೊಂದಿಗೆ. ಮರಾಠಿ ಲೋಕಗೀತೆಯ ಲಯದೊಂದಿಗೆ ಸಾಗುವ ಈ ಕತೆ ನೀಡುವ ಅನುಭವ ಅನನ್ಯವಾದದ್ದು. **ಏಕ್ ದುವಾ ಖಂಡ್‌ಣಾರಾ** ಕೂಡಾ ವಾಸ್ತವಿಕ ಪ್ರಜ್ಞೆಗೆ ಅತೀತವಾದಂತಹ ಸನ್ನಿವೇಶಗಳೊಂದಿಗೆ ಬೆಳೆಯುತ್ತಾ, ಕೊನೆಯಲ್ಲಿ ಮನುಷ್ಯ ತನ್ನ ಮಿತಿಯನ್ನು ಕಂಡುಕೊಂಡು ವಾಸ್ತವ ಜಗತ್ತಿಗೆ ಮರಳುವಂತಹ ದರ್ಶನವನ್ನು ನೀಡುತ್ತದೆ.

ಊರ್ಮಿಳಾ ಅವರದು ಸರಳ ನೇರ ನಿರೂಪಣೆ. ಆದರೆ ಭಾಷೆಯ ಕಲೆಗಾರಿಕೆಯ ಮೂಲಕ ಅದ್ಭುತವಾದ ಪರಿಣಾಮವನ್ನು ನಿರ್ಮಿಸುತ್ತಾರೆ. **ಹಾತ್ ಚಾ ಏಕ್** ಕತೆಯಲ್ಲಿ ಬರುವ ಸಾಲುಗಳು..... ಕಾಕಾ ತನ್ನ ಇಚ್ಛೆಯನ್ನು ಶಿಲೆಯ ಮೇಲಿನ ರೇಖೆಗಳಂತೆ ದಾಖಲಿಸುತ್ತಾನೆ. ತೀರಾ ಸಹಜವೆನ್ನುವಂತೆ ಕಾಲಿಗೆ ಬಿಸಿ ನೀರಿನ ಮಾರ್ಜನದ ಬಳಿಕ ಕಾಲುಚೀಲ ತೊಟ್ಟು, ಹಾಸಿಗೆಯಲ್ಲಿ ಒರಗುತ್ತಾ, ಆತ ಅದನ್ನು ಕಾಕಿಗೆ ಹೇಳಿದ್ದ. ಆತ ಕಾಲು ತೊಳೆದ ನೀರನ್ನು ಕಾಕಿ ಹೊರಗೆ ಒಯ್ದು ಎಸೆಯುವ ನಿರ್ಲಿಪ್ತತೆಯಲ್ಲೇ ಪಾಲುಗಾರಿಕೆಯ ಪೇಪರ್ ಮೇಲೆ ಸಹಿ ಮಾಡಲಿ ಎನ್ನುವ ಅಪೇಕ್ಷೆ ಆತನದಿತ್ತು.....' ಕತ್ತಲಲ್ಲಿ ಕುಳಿತು ಮನ ಬಿಚ್ಚಿ ಅತ್ತಾಗ ಆಕೆಗೆ ಹೀಗೊಂದು ದಿವ್ಯ ಬೆಳಕಿನಲ್ಲಿ ಹೊಳೆದ ಸತ್ಯ ಯಾವುದು? ಒಬ್ಬ ಬಾಲಿಕೆ.... ವಿನೋದಿನಿ.... ನಂತರ ರಜನಿ....ಆ ಬಳಿಕ ಕಾಕಿ. ಮತ್ತೀಗ ಸಮರ್ಪಿತಾ... ಎಲ್ಲವನ್ನೂ ಅರ್ಪಿಸುವವಳು.... ಸಹಿಸುವವಳು ಮತ್ತೆ ಮೌನವಾಗಿ ಉಳಿಯುವವಳು.' ಒಬ್ಬ ವಿನೋದಿನಿಯನ್ನು ಸಮರ್ಪಿತ

ಳನ್ನಾಗಿಸುವ ಪುರುಷ ಪ್ರಾಧಾನ್ಯ ಮೌಲ್ಯಗಳನ್ನು ಊರ್ಮಿಳಾ ತಮ್ಮ ಕತೆಗಳ ಮೂಲಕ ಸಾರಾಸಗಟಾಗಿ ನಿರಾಕರಿಸುತ್ತಾರೆ.

ವಿಷಾದ ಸ್ಥಾಯಿಯಾಗಿ ಸಾಗುವ ಗಳಿಗೆಯಲ್ಲೂ ನಗುವಿನ ಹೊಳಹುಗಳನ್ನು ಮಿಂಚಿಸುವ ಸೃಜನಶೀಲ ಮನಸ್ಸೂ ಇಲ್ಲಿದೆ. ಬಾಲ್ಯದಲ್ಲಿ ಒಂದು ಹೊತ್ತಿನ ಊಟಕ್ಕಾಗಿ, ಮೈ ಮುಚ್ಚುವ ಬಟ್ಟೆಗಾಗಿ ಪರದಾಡಿದ್ದ ದಿನಗಳಲ್ಲಿ ಆ ಗುಡಿಸಲಲ್ಲಿ ತಮ್ಮೆಲ್ಲರ ನಗು ಬೆಳಗುತ್ತಿದ್ದುದನ್ನು ಊರ್ಮಿಳಾ ಮರೆತಿಲ್ಲ. ಬಡತನ ದೇಹವನ್ನು ಕಾಡಬಹುದು. ಆದರೆ ಆತ್ಮದ ದೃಢತೆಯನ್ನಲ್ಲಾ ಎನ್ನುವುದೇ ಊರ್ಮಿಳಾರ ಸತ್ಯ. ಅದು ಬಾಬಾ ಸಾಹೇಬ ಅಂಬೇಡ್ಕರ್ ಅವರ ಸತ್ಯವೂ ಹೌದು, ದಲಿತರೆಲ್ಲರದೂ ಹೌದು.

ಊರ್ಮಿಳಾ ಪವಾರ್‌ರ ಕೃತಿಗಳಿಗೆ ಹಲವಾರು ಪ್ರಶಸ್ತಿಗಳು ಸಂದಿವೆ. **ಸಹಾವೆ ಬೋಟ್**ಗೆ ಸಾಹಿತ್ಯ ಸರಸ್ವತಿ ಮಂಡಲ್ ಪ್ರಶಸ್ತಿ ದೊರಕಿದರೆ, **ಚೌಥಿ ಬಿಂಥ್** ಸಂಕಲನಕ್ಕೆ ಶಕುಂತಲಾ ನೇನ್ನೆ ಪುರಸ್ಕಾರ, ಕೊಂಕಣ ಸಾಹಿತ್ಯ ಪರಿಷತ್‌ನ ಪುರಸ್ಕಾರ, ಅಸ್ಮಿತಾ ದರ್ಶನ ಪ್ರಶಸ್ತಿ ಸಿಕ್ಕಿವೆ. **ಆಯದಾನ್** ಕೃತಿಗೆ ಪ್ರಿಯದರ್ಶನ ಅಕಾಡೆಮಿ ಪ್ರಶಸ್ತಿ,ಅಮೇರಿಕಾದ ಮಹಾರಾಷ್ಟ್ರ ಫೌಂಡೇಶನ್ ಪ್ರಶಸ್ತಿ, ಪದ್ಮಶ್ರೀ ವಿ.ಕೆ. ಪಾಟೀಲ್ ಪ್ರಶಸ್ತಿ, ಸತಾರಾದ ಭೀಮಾಬಾಯಿ ಅಂಬೇಡ್ಕರ್ ಪ್ರಶಸ್ತಿ ಇವುಗಳು ದೊರಕಿವೆ. ಅವರ ಹಲವಾರು ಕತೆಗಳು ಉರ್ದು, ಗುಜರಾಥಿ, ಬಂಗಾಲಿ, ಕನ್ನಡ, ಇಂಗ್ಲಿಷ್ ಮೊದಲಾದ ಭಾಷೆಗಳಿಗೆ ಅನುವಾದಗೊಂಡಿವೆ.

ಮರಾಠಿಯ ಮತ್ತೊಬ್ಬ ಮಹತ್ವದ ಲೇಖಕಿ ಪ್ರಜ್ಞಾ ಲೋಖಂಡೆ. ಮಹಿಳಾ ಲೇಖಕಿಯರ ರಮ್ಯ ಕವಿತಾಲೋಕವನ್ನು ವಾಸ್ತವದ ನೆಲಕ್ಕೆ ತಂದವರಲ್ಲಿ ಪ್ರಜ್ಞಾ ಕೂಡ ಒಬ್ಬರು. ತಮ್ಮ ಕವನಗಳ ಮೂಲಕ ಸಂಸ್ಕೃತಿ, ಸ್ತ್ರೀ ಧರ್ಮ ಮೊದಲಾದವುಗಳ ವೈಭವೀಕರಣಗಳನ್ನು ತೀವ್ರವಾಗಿ ಖಂಡಿಸಿದವರು ಆಕೆ. ಎಲ್ಲಿಯವರೆಗೆ ಧರ್ಮದ ಪರದೆಯೊಳಗಿನಿಂದ ಮಹಿಳೆಯ ಶೋಷಣೆ ನಡೆಯುತ್ತಾ ಇರುತ್ತದೋ ಅಲ್ಲಿಯವರೆಗೆ ಆಕೆಯ ಶಿಕ್ಷಣವಾಗಲಿ, ಆರ್ಥಿಕ ಸ್ವಾವಲಂಬನೆಯ ದಾರಿಯಾಗಲಿ ಬೆಳಕಿನತ್ತ ನಡೆಸದು ಎನ್ನುವುದು ಆಕೆಗೆ ಸ್ಪಷ್ಟವಾಗಿತ್ತು. ಪ್ರಜ್ಞಾ ಕೂಡಾ ಅಂಬೇಡ್ಕರ್‌ರ ವಿಚಾರಧಾರೆಯಿಂದ ಪ್ರಭಾವಿತರಾದರು. ಅಷ್ಟೇ ಅಲ್ಲ, ದಲಿತ ಸಾಹಿತ್ಯಕ್ಕೆ ಹೊಸ ಆಯಾಮವನ್ನು ನೀಡಿದ್ದ ಲೇಖಕ ದಯಾ ಪವಾರ್‌ರ ಮಗಳೂ ಆಗಿರುವುದರಿಂದ ತಮ್ಮ ಸಾಮಾಜಿಕ ಬದುಕಿನ ದ್ವಂದ್ವಗಳನ್ನು, ಸಂಘರ್ಷಗಳನ್ನು ಚಿಕ್ಕ ವಯಸ್ಸಿನಿಂದಲೇ ಗ್ರಹಿಸುತ್ತಾ ಬಂದರು.

ಊರ್ಮಿಳಾ ಸಂದು ಬಂದ ಹಸಿವಿನ ಲೋಕವನ್ನು ಪ್ರಜ್ಞಾ ಕಂಡಿಲ್ಲ ನಿಜ. ಆದರೆ ಆಕೆಯ ಮುಂದೆ ತನ್ನೆಲ್ಲಾ ವೇದನೆಗಳೊಂದಿಗೆ ತೆರೆದು ನಿಂತ ಸ್ತ್ರೀಲೋಕವಿತ್ತು. ಸ್ವತಂತ್ರ ಭಾರತದಲ್ಲಿ ಸ್ತ್ರೀ ಇನ್ನೂ ಅವಹೇಳನಕಾರಿಯಾದ ಬದುಕನ್ನೇ ನಡೆಸುತ್ತಿದ್ದಾಳೆ. ಮಹಿಳೆಗೆ ಶಿಕ್ಷಣದ ಬಾಗಿಲು ತೆರೆದಿದ್ದೇವೆ. ಅವಕಾಶಗಳನ್ನು ಸೃಷ್ಟಿಸುತ್ತಿದ್ದೇವೆ. ಮೀಸಲಾತಿಯ ಕೃಪೆಯನ್ನೂ ತೋರಿದ್ದೇವೆ. ಆ ಹಕ್ಕು ಇದೆ ಈ ಹಕ್ಕು ಇದೆ ಎನ್ನುವ ಯಜಮಾನಿಕೆಯ ಉದಾರತೆಯನ್ನೇ ಪ್ರಜ್ಞಾರಂತಹ

ಪ್ರಜ್ಞಾವಂತ ಮಹಿಳೆಯರು ಪ್ರಶ್ನಿಸಿದ್ದು. ನಮ್ಮ ಹಕ್ಕನ್ನು ನಾವು ಆತ್ಮ ಸಮ್ಮಾನದೊಂದಿಗೆ ಪಡೆದುಕೊಳ್ಳುತ್ತೇವೆ ವಿನಹ ನಿಮ್ಮ ಉದಾರತೆಗೆ ಕೈ ಒಡ್ಡುವುದಿಲ್ಲಾ. ಅದು ಅಂಬೇಡ್ಕರ್‌ರ ಮಾತೂ ಹೌದು, ದಲಿತರಿಗಾಗಿ....'ನೀವು ನಮಗಾಗಿ ಪಶ್ಚಾತ್ತಾಪ ಪಡುವುದು ಬೇಡ. ದಲಿತರು ಭಾರತದ ಮಣ್ಣಿನಲ್ಲಿ ಹುಟ್ಟಿದ ಪ್ರಜೆಗಳಾಗಿ ತಮ್ಮ ಹಕ್ಕನ್ನು ಪಡೆದೇ ತೀರುತ್ತಾರೆ'. ಮಹಿಳೆಯರನ್ನು ದಲಿತ ವರ್ಗಕ್ಕೇ ಸಮೀಕರಿಸಿ ಸ್ತ್ರೀವಾದ ಚಾಲನೆ ಪಡೆಯತೊಡಗಿದಾಗ ಅಡುಗೆಮನೆ ಸಾಹಿತ್ಯಕ್ಕೇ ವಿಪ್ಲವದ ಪರಿಮಳ ಹತ್ತಿತು.

ಪ್ರಜ್ಞಾ ಮುಂಬಯಿ ಮಹಾನಗರದಲ್ಲೇ ಹುಟ್ಟಿ ಬೆಳೆದವರು. ಮಹಾನಗರ ಒಂದರ ಒಳಿತು, ಕೆಡುಕುಗಳಿಗೆಲ್ಲಾ ಸಾಕ್ಷಿಯಾದವರು. ದಲಿತ ಶಬ್ದದ ದುರ್ಭರತೆಯನ್ನು ಜಾತೀಯತೆಯ ನೆಲೆಯಲ್ಲಿ ಅನುಭವಿಸದಿದ್ದರೂ, ಲಿಂಗ ತಾರತಮ್ಯ ಹೆಣ್ಣನ್ನು ದಮನಿಸುತ್ತಿರುವುದರ ಬಿಸಿ ಹತ್ತಿಸಿಕೊಂಡವರು. ದಯಾ ಪವಾರ್ ಮತ್ತು ಪ್ರಜ್ಞಾ ಇಬ್ಬರೂ ಭಿನ್ನ ನೆಲೆಗಳಲ್ಲಿ ದಲಿತತ್ವದ ಚಳುವಳಿಗೆ ಇಳಿಯುವುದನ್ನು ಕಾಣಬಹುದು. ದಯಾ ಪವಾರ್ ಹುಟ್ಟಿದ್ದು ತಮಾಶಾ ಮತ್ತು ಲಾವಣಿ ಕಲಾವಂತರ ಕುಟುಂಬದಲ್ಲಿ. ಅವರ ಹಿರಿಯರು ತಮಾಶಾ. ಲಾವಣಿ ತಂಡದಲ್ಲಿ ಡೋಲಕ್ ಬಾರಿಸುತ್ತಿದ್ದರು. ಒಂದೊಮ್ಮೆ ರಾಜಾಶ್ರಯದ ಮಾನ್ಯತೆ ಪಡೆದಿದ್ದ ಈ ಕಲಾ ಪ್ರಕಾರ, ಕೊನೆಯ ಪೇಶ್ವೆಗಳ ಕಾಲದಲ್ಲಿ ಹೀನಸ್ಥಿತಿಗಿಳಿದು, ತಮಾಶಾ ಕಲಾವಿದರ ಲೈಂಗಿಕ ಶೋಷಣೆಯೂ ನಡೆದಿತ್ತು. ದಲಿತ ಚಳುವಳಿಯ ಹಿನ್ನೆಲೆಯಲ್ಲಿ ದಯಾ ಪವಾರ್ ತಮ್ಮ ಬಳಗದವರೆಲ್ಲಾ ತಮಾಶಾ ವೃತ್ತಿಯಿಂದ ಹೊರ ಬರುವಂತೆ ಮಾಡಿದ್ದರು. ಆದರೆ ಪ್ರಜ್ಞಾ, ತಮಾಶಾ ಕಲಾವಿದೆಯರ ಬದುಕನ್ನು ಸ್ತ್ರೀತ್ವ ಹಾಗೂ ಲೈಂಗಿಕ ಹಕ್ಕುಗಳ ಶೋಷಣೆಯ ನೆಲೆಯಲ್ಲಿ ವಿಶ್ಲೇಷಿಸತೊಡಗುತ್ತಾರೆ. ಅವರ **ಕೇಂದ್ರ ಆಣಿ ಪರಿಘ್** ಸಂಕಲನದಲ್ಲಿ ತಮಾಶಾ ಕಲಾವಿದೆಯರ ಕುರಿತು ಮಾರ್ಮಿಕ ಲೇಖನಗಳಿವೆ. ಅದರಲ್ಲೂ ಆಧುನಿಕ ಕಾಲದ ತಮಾಶಾ ಕಲಾವಿದೆ ಸುರೇಖಾ ಪುಣೇಕರ್ ಬಗ್ಗೆ ಆಕೆ ಕೆಲವೆಲ್ಲಾ ಪ್ರಶ್ನೆಗಳನ್ನು ಎತ್ತುತ್ತಾರೆ. ಇಲ್ಲಿ ಸುರೇಖಾ ನಾರಾಯಣ್ ಗಾಂವ್ಕರ್ ಪುಣೆಗೆ ಬಂದು ಪುಣೇಕರ್ ಆಗಬೇಕಾದ ದುರಂತವನ್ನು ಚಿತ್ರಿಸುತ್ತಾರೆ ಪ್ರಜ್ಞಾ. ಯಾವ ನಗರದ ರೂಢಿವಾದಿಗಳು, ದಲಿತ ವರ್ಗಕ್ಕೆ ಸೇರಿದ್ದ ಈ ಕಲಾವಿದರ ಶೋಷಣೆಯನ್ನು ಧರ್ಮದ ಹೆಸರಿನಲ್ಲೇ ನಡೆಸಿದ್ದರೋ ಅಲ್ಲೇ ತಮಾಶಾ ಪ್ರದರ್ಶನ ನೀಡುತ್ತಿರುವ ಸುರೇಖಾಳನ್ನು ಪ್ರಜ್ಞಾ ಈ ರೀತಿ ವಿನಂತಿಸುತ್ತಾರೆ. 'ಅತ್ಯಂತ ಹಳೆಯ ಹಾಗೂ ಹೃದಯಸ್ಪರ್ಶಿ ತಮಾಶಾ ಹಾಡು 'ಕಾಳಜಾಜ್ಯಾ ಝೂಮರ್‌ಲಾ ದುಃಖ ಮಾಝಾ ಟಾಂಗ್‌ಲೆಗೋ...' (ಕರುಳಿನ ತೂಗುದೀಪಕ್ಕೆ ತೂಗು ಹಾಕಿರುವೆನೇ ನನ್ನ ದುಃಖ....) ಇದನ್ನು ಮಾತ್ರ ಹಾಡಬಾರದು.'

ಈ ತಮಾಶಾ, ಲಾವಣಿ ಕಲೆಯೊಂದಿಗೆ ಪ್ರಜ್ಞಾ ಭಾವಾತ್ಮಕವಾಗಿ ಬೆಸೆದುಕೊಂಡಿದ್ದಾರೆ. ಅದು ತನ್ನ ಬೇರು, ಅದರಿಂದ ಕಳಚಿಕೊಳ್ಳುವುದೆಂದರೆ ತನ್ನ ಗುರುತನ್ನೇ ಅಳಿಸಿಕೊಂಡಂತೆ ಎಂದು ಆಕೆ ಹೇಳುತ್ತಾರೆ. ಅವರ ಸದ್ಯದ ಅನ್ವೇಷಣೆ ಅದೇ ದಿಕ್ಕಿನಲ್ಲಿ ಸಾಗಿದೆ. ಹಿರಿಯ ತಮಾಶಾ ಕಲಾವಿದೆಯಾಗಿದ್ದ ಪಾಪ್ಪಾ ಹಿರವೇಗಾಂವ್ಕರ್ ಅವರ ಬದುಕಿನ ಉತ್ಖನನವನ್ನು ಪ್ರಜ್ಞಾ

ಆರಂಭಿಸಿದ್ದಾರೆ. ಪರ್ಶೇ ಬಾಪುರಾವ್ ಎನ್ನುವ ಬ್ರಾಹ್ಮಣ ಪಾವ್ಳಾಗಾಗಿ ಲಾವಣಿ ಹಾಡುಗಳನ್ನು ರಚಿಸಿಕೊಡುತ್ತಿದ್ದು, ಅದೇ ಕಾರಣಕ್ಕಾಗಿ ಸಮಾಜದಿಂದ ಬಹಿಷ್ಕೃತಗೊಂಡಿದ್ದ. ಈ ಎಲ್ಲಾ ಇತಿಹಾಸಗಳನ್ನು ಆಕೆ ಕಲೆ ಹಾಕುತ್ತಿದ್ದಾರೆ. ಖ್ಯಾತ ತಮಾಶಾ ಕಲಾವಿದೆ ದಿವಂಗತ ವಿಠಾಬಾಯಿ ನಾರಾಯಣ್ ಗಾಂವ್ಕರ್ ಕುರಿತು ಲೇಖನ, ಕವನ ಮತ್ತೀಗ ಖಂಡ ಕಾವ್ಯದ ಮೂಲಕ ಜನಮನಕ್ಕೆ ಒಯ್ಯುವ ಪ್ರಯತ್ನವನ್ನೂ ನಡೆಸಿದ್ದಾರೆ ಅವರು. ತಮಾಶಾ ಕಲಾವಿದೆಯರ ಹಿನ್ನೆಲೆ ಮತ್ತು ವಾಸ್ತವ ಪರಿಸ್ಥಿತಿ ಎರಡನ್ನೂ ನಿರಾಕರಿಸದೆ, ಶೋಷಿಸಲ್ಪಟ್ಟ ವರ್ಗದ ನೆಲೆಯಲ್ಲಿ ಅವರನ್ನು ಕಂಡುಕೊಳ್ಳುವ ಅಗತ್ಯದತ್ತ ಪ್ರಜ್ಞಾ ಪ್ರವರ್ತಿಸುತ್ತಿದ್ದಾರೆ.

ಪ್ರಜ್ಞಾರ ಸೃಜನಶೀಲತೆಯ ಕಾಳಜಿ ಸ್ತ್ರೀ. ಅವರ **ಅಂತಸ್ಥ** ಮತ್ತು **ಉತ್ಕಟ್ ಜೀವ್‌ಗೇಣ್ಯಾ ಧಘೀವರ್** (ಜೀವ ಕಳೆಯುವ ಉತ್ಕಟ ಉರಿಯಲ್ಲಿ), ಈ ಎರಡೂ ಸಂಕಲನಗಳ ಕವನಗಳು ಹೆಣ್ಣು ಜೀವದ ಯಾತನೆಯ ಪುಟಗಳೇ. ಹೆಣ್ಣಿನ ಬದುಕಿನ ಎಲ್ಲಾ ಮಗ್ಗುಲುಗಳನ್ನೂ ಶೋಧಿಸಿ, ಒಂದೊಂದಾಗಿ ಬೆಳಕಿಗೆ ತೆರೆದಿಡುವ ರೀತಿ ತಳಮಳದ್ದೂ ಹೌದು, ಸಮಾಧಾನದ್ದೂ ಹೌದು. ಮುಚ್ಚಿಡಲ್ಪಟ್ಟವುಗಳನ್ನು ಬಂಧಮುಕ್ತಗೊಳಿಸುವುದೇ ಈ ಕವನಗಳ ಉದ್ದೇಶ. ಅದು ಕವಿತೆಯನ್ನು ಹೆರುವ ನೋವು ಇರಬಹುದು, ಮಮಕಾರ, ನಿಷ್ಠುರತೆಯೂ ಇರಬಹುದು. ಇಲ್ಲಿ ಕವಿ ಪ್ರಾಮಾಣಿಕವಾಗಿ ತೆರೆದುಕೊಳ್ಳುವ ರೀತಿ ಮಾತ್ರ ಮನಸ್ಸನ್ನು ಗದ್ಗದಗೊಳಿಸುವಂತಹದ್ದು.

ಪ್ರಜ್ಞಾ ಲೋಖಂಡೆ ಅವರ ಕವನಗಳನ್ನು ಮೂರು ನೆಲೆಗಳಲ್ಲಿ ವಿಶ್ಲೇಷಿಸಬಹುದು. ೧) ಫುಲೆ, ಅಂಬೇಡ್ಕರ್ ವಿಚಾರಧಾರೆಯಿಂದ ಪ್ರಭಾವಿತ ೨) ಸಾಹಿತ್ಯದ ಮೂಲಕ ಸ್ತ್ರೀವಾದದ ಅಭಿವ್ಯಕ್ತಿಯ ಸಾಧ್ಯತೆ, ೩) ವೈಯಕ್ತಿಕ ಬದುಕಿನ ದ್ವಂದ್ವಗಳು.

ಎಲ್ಲಾ ದಲಿತ ಮನಸ್ಸುಗಳೂ ಫುಲೆ ಮತ್ತು ಅಂಬೇಡ್ಕರ್‌ರಿಂದ ಪ್ರೇರಿತಗೊಂಡೇ ಸೃಜನಶೀಲತೆಗೆ ತೊಡಗಿಕೊಂಡವು. ಪ್ರಜ್ಞಾ ಕೂಡ ಅದಕ್ಕೆ ಹೊರತಲ್ಲ. ಆದರೆ ಆಕೆಯ ಚಿಂತನೆ ಬೆಳೆಯುವ ಕಾಲಕ್ಕೆ, ದಲಿತತ್ವ ಹಲವು ಶಾಖೆಗಳಾಗಿ ಒಡೆದಿದ್ದವು. ಜಾತಿ ಮೂಲ, ಅಸ್ತಿತ್ವ ಮೂಲ, ವಾಸ್ತವ ಮೂಲ, ಹೀಗೆ ವಿಘಟನೆಗೆ ಒಳಗಾಗುವಾಗ ಅದರಾಚೆ ನಿಂತು ಗ್ರಹಿಸುವಂತಹ ಮನಸ್ಥಿತಿಯೊಂದು ನಿರ್ಮಾಣವಾಗುತ್ತಿತ್ತು. ಹೀಗೆ ದಲಿತರ ಅಥವಾ ದಲಿತ ಮಹಿಳೆಯರ ಬದುಕಷ್ಟೇ ಪ್ರಶ್ನೆಚಿನ್ಹೆಯಾಗಿ ಉಳಿಯದೇ ಸಮಗ್ರ ಮಾನವ ಕುಲದಲ್ಲಿ ಬೇರು ಬಿಟ್ಟಿರುವ ಅಸಮಾನತೆ, ಲಿಂಗ ತಾರತಮ್ಯತೆ, ಊಳಿಗ ಮಾನ್ಯತೆ ಮೊದಲಾದವು ಪ್ರಜ್ಞಾರನ್ನು ಕಾಡಹತ್ತಿದವು. **ಟೋಟಲ್ ಡಿಸಾಸ್ಟರ್** ಎನ್ನುವ ಕವನದಲ್ಲಿ ಆಕೆ ಹೇಳುತ್ತಾರೆ. 'ಮರುಭೂಮಿಯ ಧಗಧಗಿಸುವ ಆಕಾಶದ ಕೆಳಗೆ / ತಪ್ತ ಬಂಜರು ಮರಳಿನಲ್ಲಿ / ಬದುಕು / ಕಪ್ಪು ಬದುಕು / ಹೆಪ್ಪುಗಟ್ಟಿದೆ ಟೋಟಲ್ ಡಿಸಾಸ್ಟರ್ / ಇಪ್ಪತ್ತೊಂದನೇ ಶತಮಾನದಲ್ಲಿ ಬೀಸುತ್ತಿರುವ / ಗಾಳಿಯಲ್ಲಿ ರಮ್ಮ ರೂಮರ್' ಮನುಷ್ಯನ ಲಾಲಸೆ ಬದುಕನ್ನು ಬಂಜರಾಗಿಸುವ ರೀತಿಯನ್ನು ಕವಿತೆ ಹೇಳುತ್ತದೆ.

ಇದೇ ರೀತಿ ದಿಂಡಿ, ದಹಶತ್, ಕೇಳ್, ಕೇಂದ್ರ ಆಣಿ ಪರೀದ್ , ಗ್ಲೋಬಲ್ ವಿಲೇಜ್ ಮೊದಲಾದ ಕವನಗಳೂ ಆಧುನಿಕ ಸಮಾಜದ ಭ್ರಷ್ಟತೆ ಮತ್ತು ಕ್ರೌರ್ಯವನ್ನು ಅತ್ಯಂತ ತೀಕ್ಷ್ಣವಾಗಿ ಪ್ರತಿಬಿಂಬಿಸುತ್ತವೆ.

ಕಳೆದ ಶತಮಾನದ ಉತ್ತರಾರ್ಧದಲ್ಲಿ ಮಹಿಳೆಯ ಅಭಿವ್ಯಕ್ತಿ ಹೊಸ ದಿಕ್ಕನ್ನು ಕಂಡುಕೊಂಡಿತಷ್ಟೇ. ಬರವಣಿಗೆಯ ಮೂಲಕ ಆಕೆ ತನ್ನ ಹಕ್ಕಿಗಾಗಿ ಹೋರಾಟಕ್ಕೆ ಇಳಿದಾಗ ಅದಕ್ಕೆ ಸ್ತ್ರೀವಾದದ ರಂಗು ಹತ್ತಿಕೊಂಡದ್ದು ನಿಜ. ಬಹುಶಃ ಆ ಕಾಲಕ್ಕೆ ಅದರ ಅವಶ್ಯಕತೆಯಿತ್ತೋ ಏನೋ. ಈಗ ಪ್ರಜ್ಞಾರಂತಹ ಲೇಖಕಿಯರ ಸಂವೇದನೆಗಳನ್ನು ಸ್ತ್ರೀವಾದದ ಚೌಕಟ್ಟಿನಲ್ಲಿಟ್ಟು ಮಾತನಾಡುವ ಮೊದಲು ಚಿಂತನೆ ಅಗತ್ಯ. ಅವರು ತಮ್ಮ ಬರವಣಿಗೆಯ ಮೂಲಕ ತಮ್ಮ ಹಕ್ಕಿಗಾಗಿ ವಾದಿಸುತ್ತಿದ್ದಾರೆಯೇ ಅಥವಾ ತಾವು ಕಂಡ ಸತ್ಯವನ್ನು ಪ್ರತಿಪಾದಿಸುತ್ತಿದ್ದಾರೆಯೇ ಎನ್ನುವುದನ್ನು ಕಂಡುಕೊಳ್ಳಬೇಕಾಗುತ್ತದೆ. ಪ್ರಜ್ಞಾರ ಈ ಕವಿತೆಯನ್ನು ಮರಾಠಿಯಲ್ಲೇ ಓದುತ್ತೇನೆ. ಸರಳವಾಗಿದೆ. ಭಾಷೆಯ ಮಿತಿಯನ್ನು ದಾಟಿ ನಿಮ್ಮನ್ನು ತಟ್ಟುತ್ತದೆ.

**ಶೀರ್ಷಿಕೆ : ಕವಿತಾ : ನೈತಿಕ್ : ಸಂಪೂರ್ಣ ನೈತಿಕ್**

ಕವಿತಾ : ನೈತಿಕ್ : ಸಂಪೂರ್ಣ ನೈತಿಕ್/ ಕವಿತಾ ತೃಷ್ಣಾ ಪರಮ್ ತೃಷ್ಣಾ / ಕವಿತಾ ಭೋಗ್ ಅಖಂಡ ಭೋಗ್ / ಕವಿತಾ ತುಡ್ ಣಾ ಫಕ್ತ್ ತುಟ್‌ಣಾ / ಕವಿತಾ ಅರಾಜಕ್ ಮುಕ್ತ್ ಅರಾಜಕ್ / ಕವಿತಾ ಯಾತನಾ ಅಪಾರ್ ಯಾತನಾ / ಕವಿತಾ ವ್ಯಾಕುಲ್ ಬೇಹದ್ ವ್ಯಾಕುಲ್ / ಕವಿತಾ ಶಾಂತ್ ಆತ್ ಆತ್ ಶಾಂತ್ / ಕವಿತಾ ಸ್ತ್ರೀ ಸಂಪೂರ್ಣ ಸ್ತ್ರೀ.

ಈ ಕವನ ಈಗ ನಿಮ್ಮದು. ಕವನದ ಒಂದು ಸಾಲಿಗೆ ಹಲವು ಅರ್ಥಗಳಿರಬಹುದು. ಅವರವರ ಭಾವಕ್ಕೆ ಅವರವರ ಭಕುತಿಗೆ ಎಂಬಂತೆ. ಆದುದರಿಂದ ಈ ಕವನವನ್ನು ನೀವು ಹೇಗೆ ಗ್ರಹಿಸಿಕೊಂಡಿರೋ ಹಾಗೇ ಇರಲಿ. ಪ್ರಜ್ಞಾರ ಸಂವೇದನೆ ಮಾತ್ರ ನಿಮ್ಮನ್ನು ಕಾಡಲಿ.

ಪ್ರಜ್ಞಾರ ಕವನದೊಳಗೆ ಇಳಿಯಲು ಪ್ರೀತಿಗೆ, ಅಂತಃಕರಣಕ್ಕೆ ತೆರೆದುಕೊಳ್ಳುವ ಮನಸ್ಸಿದ್ದರೆ ಸಾಕು. ಕವನದ ಭಾವ ಲಹರಿ ನಿಮ್ಮನ್ನು ತೇಲಿಸುತ್ತಾ ಹೋಗುತ್ತದೆ. ಆದರೆ ನೋವಿನ ದನಿಗೆ ಕಿವಿಗೊಡಿ. ಅವರ ಕವನಗಳಲ್ಲಿ ವಿಷಾದ ಸ್ಥಾಯಿ. ಉಳಿದೆಲ್ಲವೂ ಸಂಚಾರಿ.

ಮುಕ್ತಾಯಿ ಕುರಿತೂ ಕವಿತೆಯೊಂದಿದೆ. ಆಕೆಯ ಬದುಕಿನ ನಿರ್ಮೋಹದ ಬಗ್ಗೆ ಹೇಳುತ್ತಲೇ ಪ್ರಜ್ಞಾ ಮಾರ್ಮಿಕವಾಗಿ ಪ್ರಶ್ನಿಸುತ್ತಾರೆ. 'ತೆರೆಯಲೇ ಇಲ್ಲ ಮನಃಪೂರ್ವಕ ಎಂದೂ ನಿನ್ನ ಗರ್ಭಗೃಹದ ಬಾಗಿಲು / ಎಷ್ಟೆಲ್ಲಾ ಹೂಗಳನ್ನು ಅರಳಿಸಿದಿ ಆದರೂ ಹೀಗೆ ಸಹಜವಾಗಿ/ ಸೃಜನಶೀಲತೆಯ ಕೋಶ ಒಡೆದು / ಸೃಷ್ಟಿಯ ಅಸ್ತಿತ್ವವನ್ನು ಮಗ್ನತೆಗೀಳಿಸಿದ / ಯಾವ ಕುಂಕುಮದ ಮಡಿ ನಿನಗೆ ಸಿಕ್ಕಿತು.... ಮುಕ್ತಾಯಿ?

ಮುಕ್ತಾಯಿ ಮೊದಲಾದ ಸಂತ ಪರಂಪರೆ ರಚಿಸಿದ ಅಭಂಗ್, ಓವಿ ಮೊದಲಾದ ಸಾಹಿತ್ಯ ಪ್ರಕಾರ ಕೂಡಾ ಪ್ರಜ್ಞಾರ ಮೇಲೆ ಪ್ರಭಾವ ಬೀರಿದೆ. ಓವಿ ಸ್ತ್ರೀಪ್ರಧಾನ ಗೀತೆ. ಬೀಸುವ, ಕುಟ್ಟುವ ವೇಳೆ ಹೆಂಗಸರು ಹಾಡುವಂತದ್ದು. ಪ್ರಜ್ಞಾರ ಓವಿ **ಕಾಳೋಖಲೆ ಮನ್**‌ನಲ್ಲಿ ಧರ್ಮ ಕೊಡುವ

ಆಘಾತವಲ್ಲಿ ಗಾಯಗೊಂಡ ಸಮುದಾಯದ ಅಳಲು ಇದೆ. 'ಕಾಲೋಖಲೆ ಮನ್/ಜೀಣ್ಯಾಚೆ ಸರಣ್/ರಿತೆ ರಿತೆಪಣ್ ವಸ್ತೀತೂನ್/ಸಂಸಾರಾಚ್ಯಾ ಚಿಂಧ್ಯಾ / ವಾರ್‍ಯಾವರ್ ಗೇಲ್ಯಾ / ಮಾಗೆ ಹಾಕಾ ಮೂಕ್ಯಾ ಕೊಂಡಲೇಲ್ಯಾ' (ಕತ್ತಲೆಯಲ್ಲಿ ಮನಸ್ಸು/ಜೀವನ ಮೃತ್ಯು/ ಖಾಲಿ ಖಾಲಿಯಿದೆ/ ಬಸ್ತಿಯಿಡೀ /ಬದುಕೆಲ್ಲಾ ಚಿಂದಿ ಗಾಳಿಯಲ್ಲಿ ಹಾರಿದೆ / ಹಿಂದೆ ಇದೆ ಮೂಕ ಕರೆ/ಗಂಟಲಲ್ಲಿ ಬಂಧಿಯಾಗಿದೆ'.

ತನ್ನನ್ನು ಪ್ರೀತಿಸಿದವರನ್ನೂ, ನೋಯಿಸಿದವರನ್ನೂ ಜತೆಯಲ್ಲೇ ಕವಿತೆಯ ಮೂಲಕ ತಮ್ಮ ಎದೆಯೊಳಗಿಟ್ಟುಕೊಳ್ಳುತ್ತಾರೆ ಪ್ರಜ್ಞಾ. ತಂದೆಯನ್ನು ಕುರಿತು ಬರೆದ **ತೂ ಮಾಝಾ ಬಾಪ್ ಆಹೇಸ್**ನಲ್ಲಿ ತನ್ನ ವ್ಯಕ್ತಿತ್ವ ರೂಪಿಸಿದಾತನಿಗೆ ಮಮತೆಯೊಂದಿಗೆ ಹೇಳುತ್ತಾರೆ 'ಒಲೆ ಊದುವ ಗೊಂಬೆಗಳ ಕಪ್ಪು ನೆರಳು ನನ್ನ ಎಳೆ ಕಿರಣಗಳ ಮೇಲೆ ಬೀಳದಂತೆ ಮಾಡಿದೆ, ಸಹಜ ನಾನು ಮುಕ್ತಳಾದೆ....' ತಾಯಿ ಹೀರಾ ಬಗ್ಗೆ ಕೂಡಾ ಆಕೆ ಬರೆದಿದ್ದಾರೆ. ಹೀರಾ ದಯಾ ಪವಾರ್ ಎನ್ನುವ ಶೀರ್ಷಿಕೆಯಲ್ಲಿ ಬರೆದ ಈ ಕವಿತೆಯಲ್ಲಿ ಆಕೆ, ತಾಯಿ ಎಂಬ ಮಹಿಳೆಯೊಬ್ಬಳ ಬದುಕನ್ನು ಚಿತ್ರಿಸುತ್ತಾರೆ. 'ಪ್ರೀತಿಯ ಹೆಂಗಸೇ' ಎಂದು ಸಂಬೋಧಿಸುತ್ತಾ, 'ಅಗಣಿತ ಆಯುಷ್ಯ ಕಳೆದಿ ನಮಗಾಗಿ/ ಮಣ್ಣು, ನೀರು, ಬೆಳಕು, ಗಾಳಿ / ಈಗ ಕ್ರಮದಲ್ಲಿಡು ಸ್ವಂತಕ್ಕಾಗಿ / ಒಂದು ತುಣುಕು ಆಕಾಶದ/ಚದುರಿದ ನೀಲಛಾಯ' ಒಂದಿಷ್ಟು ನಿರ್ವಾಜ್ಯ ಪ್ರೀತಿಗಾಗಿ ಹೆಣ್ಣಿನ ತಹತಹಿಸುವಿಕೆ, ನಿರಾಶೆ, ಬದುಕಿನ ಜಂಜಡಗಳನ್ನು **ತೃಷ್ಣಾ, ಬಾಯಿ, ಏಕ್ ಮೇಕಾಂಮಧೂನ್, ಕೇಂದ್ರ ಆಣಿ ಪರೀದ್** ಮೊದಲಾದವು ಕಟ್ಟಿ ಕೊಡುತ್ತವೆ.

**ಉತ್ಕಟ್ ಜೀವಗೇಣ್ಯಾ ಧಘೀವರ್** ಕವನದ ಸಾಲುಗಳಲ್ಲಿ ಹೆಣ್ಣು ಮತ್ತು ಆಕೆಯ ಸಂವೇದನೆಯ ಮುಖಾಮುಖಿ ಮಾತುಗಳಾಗಿ ನಿಲ್ಲುತ್ತವೆ.' ಎಂದಿನಿಂದಲೂ ನೀನು ಇದ್ದಿ / ನನ್ನೊಂದಿಗೆ / ಭಾವನೆ, ಸಂವೇದನೆ ತೃಷೆಯ / ಮೊನಚು ತುದಿಯಲ್ಲಿ / ಪ್ರಜ್ಞೆ ಕಾರುಣ್ಯದ / ಕೊನೆಯೇ ಇಲ್ಲದ ಭ್ರೂಣದಲ್ಲಿ /ಹೆಣ್ಣಾಗಿ /ಜೀವ ಕಳೆವ ಉತ್ಕಟ ಉರಿಯಲ್ಲಿ / ಹೆಣ್ತನದ ಕವಚ ಭೇದಿಸುವ/ಲಕಲಕಿಸುವ ಅಣುರೇಣುವಿನ ಮೇಲೂ.'ತನ್ನನ್ನು ಕಾಪಾಡಿಕೊಂಡು ಬಂದ ಈ ಸಂವೇದನೆಯನ್ನು ಇಲ್ಲಿ ಎಲ್ಲರಿಗೂ ಹಾರೈಸುತ್ತಾರೆ ಕವಿ. ಬದುಕಿನ ನಿಷ್ಠುರತೆ ಮನುಷ್ಯನನ್ನು ಕುಗ್ಗಿಸಲೂಬಹುದು, ಎತ್ತರಕ್ಕೆ ಬೆಳೆಸಲೂಬಹುದು. ಅದನ್ನು ಪ್ರಜ್ಞಾ ತಮ್ಮ ತಂದೆಯಿಂದಲೇ ಕಲಿತರು. ದಯಾ ಪವಾರ್ ಹೇಳುತ್ತಾರೆ. 'ಬದುಕು ನನಗೆ ನೀಡಿದ ಕಹಿಯಿಂದ ನನ್ನ ಆಂತರ್ಯ ಕಹಿಯಾಗಲಿಲ್ಲ. ಬದಲಿಗೆ ಇನ್ನಷ್ಟು ಸಿಹಿಯಾಯಿತು.'

ಈ ರೀತಿಯ ಉತ್ಕಟ ಕವಿತೆಗಳ ಮೂಲಕ ಪ್ರಜ್ಞಾ ಮರಾಠಿ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದಾರೆ. ಅವರ **ಕೇಂದ್ರ ಆಣಿ ಪರೀದ್** ಸಾಕಷ್ಟು ವಿಮರ್ಶೆಗೆ ಒಳಗಾಯಿತು. ಈ ಕೃತಿಯಲ್ಲಿ ಆಕೆ ತಸ್ಲೀಮ್ ನಸ್ರೀನ್ ಹಾಗೂ ಪ್ರೊತಿಮಾ ಬೇಡಿ ಅವರ ಆತ್ಮಚರಿತ್ರೆಗಳ ಕುರಿತು ಲೇಖನಗಳನ್ನು ಬರೆದಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಈ ಎಲ್ಲಾ ಮಹಿಳೆಯರು ಎಷ್ಟೆಲ್ಲಾ ದಿಮ್ಮಕ್ಕೆ ಒಡ್ಡಿಕೊಂಡರೆನ್ನುವುದನ್ನು ನಿರ್ಭಿಡೆಯಾಗಿ ಆಕೆ ಹೇಳುತ್ತಾರೆ. ಕೇಂದ್ರದಲ್ಲಿರುವ ಪೌರುಷ

ಮತ್ತು ಪರಿಧಿಯಲ್ಲೇ ಭ್ರಮಿಸುವ ಸ್ತ್ರೀತ್ವ, ಈ ಸಮೀಕರಣವನ್ನು ಒಡೆಯುವತ್ತ ಎಲ್ಲಾ ಸೃಜನಶೀಲ ಮನಸ್ಸುಗಳು ಕೆಲಸ ಮಾಡಬೇಕು. ಮಹಿಳೆ ತನ್ನ ಅವಕಾಶವನ್ನು (space) ನಿರ್ಮಿಸಿಕೊಳ್ಳಬೇಕು. ದಲಿತರಿಗೆ 'ಅಸ್ಮಿತೆ' ದೊರಕಿಸಿಕೊಟ್ಟವರು ಅಂಬೇಡ್ಕರ್. ಆದಕ್ಕಾಗಿ ಪ್ರಜ್ಞಾ ಕೃತಜ್ಞತೆಯೊಂದಿಗೆ ಎತ್ತಿದ ಉದ್ಗಾರ 'ಕಿತೀ ದೇಖಣಾ ಕೆಲಾ ಅಮ್ಹಾಲಾ' (ನಮ್ಮನ್ನು ಎಷ್ಟು ಚೆಲುವಾಗಿಸಿದರು). 'ಬ್ಲಾಕ್ ಈಸ್ ಬ್ಯೂಟಿ' ಎನ್ನುವ ಜಾಗತಿಕ ದಲಿತ ಪ್ರಜ್ಞೆಯೊಂದಿಗೆ ಅನುರಣಿಸಬಹುದು.

ಠಾಣಾದ ಜ್ಞಾನಸಾಧನಾ ಕಾಲೇಜ್‌ನಲ್ಲಿ ಮರಾಠಿ ಸಾಹಿತ್ಯ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿರುವ ಪ್ರಜ್ಞಾ, ಮರಾಠಿಯ ಭಾಷಾಭೇದಗಳ ಪುನರ್ ರಚನೆಗಾಗಿಯೂ ದುಡಿಯುತ್ತಿದ್ದಾರೆ. ಭಾರತೀಯ ಶಿಷ್ಟ ಭಾಷೆಗಳೆಲ್ಲಾ ಅವನತಿಯತ್ತ ನಡೆಯುತ್ತಿರುವುದನ್ನು ಸೂಚಿಸುವ ಅವರು, ಜನಪದರ ಆಡು ಭಾಷೆಯನ್ನೇ ಜ್ಞಾನದ ಭಾಷೆಯಾಗಿಯೂ ಬಳಸಬೇಕೆಂದು ಹೇಳುತ್ತಾರೆ. ಪ್ರಜ್ಞಾ ಅಭಿವ್ಯಕ್ತಿಸುವ ಭಾಷೆಯ ಸರಳತೆಯನ್ನು ಇಲ್ಲಿ ಗಮನಿಸಬೇಕು. ಮರಾಠಿ ಮತ್ತು ಕನ್ನಡ ಎರಡೂ ಭಾಷೆಗಳ ಕುರಿತು ಆಕೆ ಕಾಳಜಿ ವ್ಯಕ್ತಪಡಿಸುತ್ತಾರೆ. ಕನ್ನಡ ಭಾಷೆ ಆಕೆಗೆ ಪರಕೀಯವಲ್ಲ. ತಾಯಿ ಹೀರಾ ಅವರ ಮನೆ ಮಾತು ಕನ್ನಡ. ಆಕೆ ಶೋಲಾಪುರದ ಬಳಿಯ ಹಳ್ಳಿ ಖಾನಾಪುರದವರು. ಆಕೆಯ ತಂದೆಯ ಹೆಸರು ಸಂಗಪ್ಪ. ಪ್ರಜ್ಞಾ ಲೋಖಂಡೆ ಅವರ **ಅಂತಃಸ್ಥ** ಸಂಕಲನಕ್ಕೆ **ಬಾಲಕವಿ** ಪುರಸ್ಕಾರ, ಹಿರಿಯ ಕವಿ ಕುಸುಮಾಗ್ರಜರ ಹೆಸರಿನಲ್ಲಿ ಕೊಡಮಾಡುವ ವಿಶಾಖಾ ಪ್ರಶಸ್ತಿ ಮೊದಲಾದವು ದೊರಕಿವೆ. **ಉತ್ಕಟ್ ಜೀವ್‌ಗೇಣ್ಯಾ ಧಗೀವರ್** ಸಂಕಲನಕ್ಕೆ **ಭೀಮಾಬಾಯಿ ಅಂಬೇಡ್ಕರ್** ಪ್ರಶಸ್ತಿ, ಸಾಹಿತ್ಯರತ್ನ ಪ್ರಶಸ್ತಿ ಸಂದಿವೆ.

ಊರ್ಮಿಳಾ ಪವಾರ್ ಮತ್ತು ಪ್ರಜ್ಞಾ ಲೋಖಂಡೆ ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ ದಲಿತ ಸಂವೇದನೆ ಮತ್ತು ದಲಿತ ಮಹಿಳೆಯರ ಧ್ವನಿಯಾಗಿಯೇ ಗುರುತಿಸಲ್ಪಡುತ್ತಾರೆ. ಇವರಿಬ್ಬರ ಪ್ರತಿಭೆಯ ಪಾತಳಿ ಬೇರೆ ಬೇರೆಯೇ. ಮನುಷ್ಯನ ಮೂಲಭೂತ ಆವಶ್ಯಕತೆ, ಆಹಾರ, ಬಟ್ಟೆ, ಸೂರು ಇವುಗಳಿಂದ ವಂಚಿತರಾದವರ ಆಕ್ರೋಶದ ಧ್ವನಿ ಊರ್ಮಿಳಾ ಅವರದು. ಹೆಣ್ಣಿನ ಕುರಿತಾದ ಲಿಂಗ ತಾರತಮ್ಯ, ಅಸಮಾನತೆ, ಲೈಂಗಿಕ ದೌರ್ಜನ್ಯ, ಕೌಟುಂಬಿಕ ಹಿಂಸೆ ಇವೆಲ್ಲದರ ವಿರುದ್ಧ ಪ್ರಜ್ಞಾರ ಹೋರಾಟ ಇದೆ. ಇಬ್ಬರಿಗೂ ಹೋರಾಟದ ದೀಕ್ಷೆ ದೊರಕಿದ್ದು ಫುಲೆ, ಅಂಬೇಡ್ಕರ್‌ರ ದಲಿತ ಚಳುವಳಿಯಿಂದ. ಹೊರ ಜಗತ್ತಿನ ಸಂಗತಿಗಳಾಗಿ ಈವರೆಗೆ ನಿಂತಿದ್ದವರು ಸಮಾಜದ ಒಳಗೆ ಸೇರಿಕೊಳ್ಳುವುದರೊಂದಿಗೆ, ಹೊಸ ಬಗೆಯ ಸವಾಲುಗಳಿಗೆ ಒಡ್ಡಿಕೊಳ್ಳುವಂತಾಯಿತು. ಪ್ರಜ್ಞಾರ ಪ್ರಕಾರ ಅದು ಹೇಗೆಂದರೆ, ತನ್ನ ನಿಜ ಸ್ವರೂಪದ ಶೋಧನೆಯಲ್ಲಿ ಒಂದೊಂದಾಗಿ ಪರೆ ಕಳಚುತ್ತಾ ಹೋಗುವುದು. ಅದೊಂದು ನಿಧಾನ ಪ್ರಕ್ರಿಯೆ ಆಗಿದ್ದರೂ, ಪ್ರತಿ ಬಾರಿ ಹೊಳೆಯುವ ಹೊಸ ಮೇಲ್ಮೈಯನ್ನು ಕಂಡೊಡನೆ ಆಗುವ ಪುಳಕ. ಮತ್ತದು ಹಳತಾದಂತೆ ಅದನ್ನೂ ಕಳಚಿಕೊಳ್ಳುವ ತವಕ.

ದಲಿತ ಸಂವೇದನೆಯ ಅಭಿವ್ಯಕ್ತಿಯೊಂದಿಗೆ ಆರಂಭವಾದ ಈ ಲೇಖಕಿಯರ ಅಭಿಯಾನ ಈಗ ಕೇಂದ್ರವನ್ನು ಸೇರುವ ತತ್ಪರತೆಯಲ್ಲಿಲ್ಲ. ಬದಲಿಗೆ ಪರಿಧಿಯನ್ನು ದಾಟಿ ಅನಂತದೆಡೆಗೆ ಸಾಗುವ ಯಾತ್ರೆಯಲ್ಲಿದೆ. ಸೃಜನಶೀಲತೆಯ ಮೂಲ ಉದ್ದೇಶ ಅದು ತಾನೇ. ಊರ್ಮಿಳಾ, ಪ್ರಜ್ಞಾ ಇವರಿಬ್ಬರ ಸಂವೇದನೆ ನಮ್ಮೊಳಗೆ ಯಾವ ರೀತಿಯಾಗಿ ಸ್ಪಂದಿಸುತ್ತಿವೆ. ಅಥವಾ ಅದು ನಮ್ಮನ್ನು ತಟ್ಟದೆ ಹೋಗಿದೆಯೇ? ನಮಗೆ ಸಂಬಂಧಿಸಿದ್ದಲ್ಲ ಎಂದು ನಾವೇ ದೂರೀಕರಿಸಿದ್ದೇವೆಯೇ? ಈ ಎಲ್ಲಾ ಪ್ರಶ್ನೆಗಳನ್ನು ಮೊದಲಿಗೆ ನಮ್ಮನ್ನು ನಾವೇ ಕೇಳಿಕೊಳ್ಳೋಣ. ಏಕೆಂದರೆ 'ಸಾಹಿತ್ಯದ ಮುಖ್ಯ ಕಾಳಜಿಯೇ ಮನುಷ್ಯ. ಮಾನವ ಜೀವಿಗಳು ಹುಟ್ಟುವುದೇ ಮನುಷ್ಯರಾಗಲು'. ಕನ್ನಡದ ಹಿರಿಯ ಕತೆಗಾರ ಯಶವಂತ ಚಿತ್ತಾಲರ ಈ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಸಾಹಿತ್ಯದ ಮೂಲಕ ಈ ಇಬ್ಬರೂ ಲೇಖಕಿಯರು ನಮ್ಮೊಳಗನ್ನು ತಟ್ಟಲು ಬಿಡೋಣ. ಅದನ್ನು ದಲಿತ ಅಥವಾ ಸ್ತ್ರೀವಾದದ ಚೌಕಟ್ಟಿಗೊಳಪಡಿಸಿ, ಅದು ನಮಗೆ ಸಲ್ಲದ ಜಗತ್ತು ಎನ್ನುವ ಉಡಾಫೆ ಬೇಡ. ಇಂದು ಇಡೀ ಜಗತ್ತೇ ಉಳ್ಳವರು ಮತ್ತು ಇಲ್ಲದವರು ಎನ್ನುವ ಎರಡು ವರ್ಗಗಳಾಗಿ ಒಡೆಯುತ್ತಿರುವಾಗ ಸಾಹಿತ್ಯ ಕೂಡಿಸುವ ಕೆಲಸ ಮಾಡಲಿ. ಉಳ್ಳವರ ವರ್ಗಕ್ಕೆ ಸೇರುವ ಹಪಾಹಪಿಯ ಓಟದಲ್ಲಿ ಮಾನವ ಸಂವೇದನೆಗಳು ಹಿಂದೆಯೇ ಉಳಿದು ಬಿಡುತ್ತಿವೆ. ಈ ಸಂವೇದನೆಗಳೆಲ್ಲಾ ರಾಜಮಾರ್ಗದಲ್ಲಿ ಅಪಮೃತ್ಯು ಕಾಣದಂತೆ ಜಗತ್ತಿನ ಎಲ್ಲಾ ಸೃಜನಶೀಲ ಮನಸ್ಸುಗಳು ಕಾಪಾಡುತ್ತಾ ಬರುತ್ತಿವೆ. ಅವರಲ್ಲಿ ಊರ್ಮಿಳಾ ಪವಾರ್, ಪ್ರಜ್ಞಾ ಲೋಖಂಡೆ ಅವರ ಮಡಿಲು ಕೂಡಾ ಇವೆ.

❖❖❖

# ಮಹಾಶ್ವೇತಾದೇವಿ

✍ ಶಶಿಕಲಾ ವೀರಯ್ಯಸ್ವಾಮಿ

ಮಹಾಶ್ವೇತಾ ಅವರ ಬರಹಗಳು ಸಂಶೋಧನೆ, ಪಾಂಡಿತ್ಯ, ತಿಳುವಳಿಕೆಗಳೆಂಬ ಕೇವಲ ಬೌದ್ಧಿಕ ಚಟುವಟಿಕೆಯ ಪರಿಣಾಮಗಳಲ್ಲ. ಬದಲಿಗೆ ಸಮುದಾಯಗಳ ಭಾಗವಾಗಿ ನಿರ್ವಹಿಸಿದ ಕ್ರಾಂತಿಯ ಪ್ರತಿಫಲನಗಳು. ಅವರ ಕೃತಿಗಳ ನಾಯಕ -ನಾಯಕಿಯರು ಈ ಸಮುದಾಯಗಳ ಒಳಗಿನವರೇ. ಇವರು ಒಂದು ಸಂಘವನ್ನೋ ಚಳುವಳಿಯನ್ನೋ ರೂಪಿಸಲೆಂದೇ ಸೃಷ್ಟಿಸಲಾದ ಸಾಂಕೇತಿಕ ಪಾತ್ರಗಳಲ್ಲ. ಮಾನವೀಯತೆಯ ಸಹಜ ಪ್ರತೀಕಗಳು.

ಚರಿತ್ರೆಯೊಂದನ್ನು ಪುನಾರಚಿಸುವುದರೊಂದಿಗೆ ವರ್ತಮಾನವನ್ನು ದಾಖಲೀಕರಣ ಮಾಡುವುದು ಕೂಡ ವ್ಯವಸ್ಥೆಯೊಂದಿಗಿನ ಹೋರಾಟದಲ್ಲಿ ಬಹುಮುಖ್ಯವಾದ ಹಂತವೇ ಆಗುತ್ತದೆ. ಅವರ ಬರಹಗಳು ಈ ಎರಡೂ ಅಂಶಗಳನ್ನು ಮುಖ್ಯ ಧ್ಯೇಯಗಳೆಂದು ಪರಿಗಣಿಸಿದಂಥವು. ದಮನಿತ ಸಮುದಾಯಗಳು ಚರಿತ್ರೆಯ ವಿಸ್ಮೃತಿಯಿಂದಾಗಿಯೇ ತಮ್ಮ ನಿಜದ ಚಹರೆಗಳನ್ನು ಕಳೆದುಕೊಂಡಿರುತ್ತವೆ. ಚಹರೆಗಳಿಲ್ಲದ ಸ್ಥಿತಿಯಲ್ಲಿ ವರ್ತಮಾನದ ಬದುಕು ಬೊಗಸೆಯಲ್ಲಿ ಹಿಡಿದ ನೀರಿನಂತಾಗುತ್ತದೆ. ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ಚಹರೆಗಳ ಶೋಧವು ಒದಗಿಸುವ ಬಲದಲ್ಲಿ ಮಾತ್ರ ಪರಂಪರೆಯನ್ನು ಅದರ ಮೌಲ್ಯಗಳನ್ನು ಆವಾಹಿಸಿಕೊಳ್ಳುವದು ಸಾಧ್ಯವಾಗುತ್ತದೆ. ಮಹಾಶ್ವೇತಾದೇವಿಯವರ ಬರಹಗಳು ಈ ಪುನಾರಚನೆ ಹಾಗೂ ದಾಖಲೀಕರಣಗಳನ್ನಷ್ಟೇ ಹಿಡಿದಿಟ್ಟವುಗಳಾಗಿದ್ದರೂ ಬೌದ್ಧಿಕವಾಗಿ, ಶೈಕ್ಷಣಿಕವಾಗಿ ಅತ್ಯುಪಯುಕ್ತವಾದ ಕೆಲಸವೆನಿಸಿ ಅವರು ಬುದ್ಧಿಜೀವಿಗಳ ಶ್ರೇಣಿಯಲ್ಲಿ ಅತ್ಯುನ್ನತ ಕೀರ್ತಿಗೆ ಭಾಜನರಾಗುತ್ತಿದ್ದರೆಂಬುದರಲ್ಲಿ ಅನುಮಾನಗಳಿಲ್ಲ. ಆದರೆ ಈ ಶುದ್ಧ ಚಟುವಟಿಕೆಯಿಂದ ಆ ಬುಡಕಟ್ಟು, ಸಮುದಾಯಗಳವರಿಗೆ ಏನಾದರೂ ಉಪಯೋಗವಾಗುತ್ತಿತ್ತೇ ಎಂಬುದಕ್ಕೆ

ಉತ್ತರಗಳಿರುತ್ತಿರಲಿಲ್ಲ. ಈ ಸಮುದಾಯಗಳ ನಟ್ಟನಡುವೆ ಹೋಗಿ ನಿಂತು ಅವರೊಂದಿಗೆ ಬೆರೆತು ಅವರ ದೀದಿ ಎನಿಸಿದ ಮಹಾಶ್ವೇತಾದೇವಿಯವರು ಅವರ ಧ್ವನಿಗೆ ಉಸಿರನ್ನು ತುಂಬಿದರು.

ಬುಡಕಟ್ಟು ಸಮುದಾಯಗಳು ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ನೆಲೆಗಳಲ್ಲಿ ಹಕ್ಕುಗಳನ್ನು ಗಳಿಸಲು ನೆರವಾಗುವ ಅಸಂಖ್ಯ ಬರಹಗಳನ್ನು ದೇಶದ ಪ್ರಮುಖ ಪತ್ರಿಕೆಗಳಲ್ಲಿ ಅವರು ನಿರಂತರವಾಗಿ ಬರೆಯುತ್ತಲೇ ಇದ್ದಾರೆ. ಅಲ್ಲದೆ ಶೋಷಣೆಗೆ ಒಳಗಾದವರೇ ಸ್ವತಃ ತಮ್ಮ ಅನುಭವಗಳನ್ನು ದಾಖಲಿಸಲು ಅವಕಾಶವನ್ನು ಕಲ್ಪಿಸುವ **ಬಾರ್ತಿಕ** ಎಂಬ ಬಂಗಾಲೀ ಪತ್ರಿಕೆಯನ್ನು ಅವರು ನಡೆಸುತ್ತಿದ್ದಾರೆ. ಸಮುದಾಯದವರ ಶಿಕ್ಷಣಕ್ಕಾಗಿ ಪಠ್ಯಪುಸ್ತಕಗಳನ್ನು ನವಸಾಕ್ಷರರಿಗಾಗಿ ಪುಸ್ತಕಗಳನ್ನು ಅವರು ರಚಿಸಿದ್ದಾರೆ. ಸಾಹಿತ್ಯಕ್ಷೇತ್ರದಲ್ಲಿ ಅವರಿಗೆ ಖ್ಯಾತಿಯನ್ನು ತಂದುಕೊಟ್ಟಿರುವ ಅವರ ಕತೆ-ಕಾದಂಬರಿ-ನಾಟಕಗಳ ಸಂಖ್ಯೆ ಸುಮಾರು ನೂರರಷ್ಟಿವೆ. ಇವುಗಳಲ್ಲಿ **ರುಡಾಲಿ** ಮತ್ತು **ಹಜಾರ್ ಚೌರೇಶೀರ್ ಮಾ**ಗಳು ಚಲನಚಿತ್ರಗಳೂ ಆಗಿ ಭಾರತೀಯ ಚಲನಚಿತ್ರದ ಇತಿಹಾಸದಲ್ಲಿ ಮೈಲುಗಲ್ಲುಗಳಾಗಿವೆ.

ಆದರೆ ಮಹಾಶ್ವೇತಾದೇವಿಯವರು ತಮ್ಮ ಸಾಹಿತ್ಯವನ್ನು ಸ್ತ್ರೀವಾದಿ ಎಂದು ಪಟ್ಟಿ ಮಾಡಿರುವುದನ್ನು ಒಪ್ಪುವುದಿಲ್ಲ. ಆದರೂ ಸ್ತ್ರೀವಾದಿಗಳಂತೂ ತಮ್ಮ ಚಿಂತನೆಗಳಿಗೆ ಇವರ ಸಾಹಿತ್ಯವು ಸೂಕ್ತ ಪಠ್ಯವಾಗಿ ಒದಗಿ ಬರುತ್ತದೆಂದು ಹೇಳುತ್ತಾರೆ. ಮಹಾಶ್ವೇತಾದೇವಿ ಕಷ್ಟದಲ್ಲಿ ಸಿಲುಕಿ ನೋಯುವ, ಬೇಯುವ ಜನರ ಪರವಾಗಿ ಹಗಲಿರುಳೂ ದುಡಿಯುವ ಸಾಹಸಿ. ತನ್ನ ಸಾಹಿತ್ಯ ಹಾಗೂ ಬದುಕು ಪರಸ್ಪರ ಬದ್ಧವಾಗಿರಬೇಕು ಎಂಬುದನ್ನು ಸ್ವೀಕರಿಸಿ ಬದುಕಿರುವ ಆದರ್ಶ ವ್ಯಕ್ತಿ. ಜಾಗತಿಕ ಸಾಹಿತ್ಯಕ್ಷೇತ್ರದಲ್ಲಿ ಹೀಗೆ ಬದುಕು-ಬರವಣಿಗೆಗಳನ್ನು ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡಿರುವವರು ಬಹಳೇ ಅಪರೂಪ. ೨೦೦೬ರ ಜನವರಿ ೧೪ಕ್ಕೆ ೮೦ಕ್ಕೆ ಕಾಲಿಟ್ಟಿರುವ ಇವರು, "ಇನ್ನಷ್ಟು ದುಡಿಯಲು ದುರ್ಗೆಯಂತೆ ನನಗೆ ಹತ್ತು ಕೈಗಳಿಲ್ಲವಲ್ಲಾ" ಎಂದು ಚಡಪಡಿಸುವ ಉತ್ಸಾಹಿ. ನಾನು ಅವರನ್ನು ಕಲಕತ್ತೆಯ ಅವರ ಮನೆಯಲ್ಲಿ ಭೇಟಿಯಾದಾಗ ೬೮ ವರ್ಷ. ಆಗಲೂ ಕುಂದದ ಉತ್ಸಾಹ. ಭೇಟಿಗೆ ಬೇಗ ಸಿಗಲಿಲ್ಲ. ಯಾವಾಗ ಕೇಳಿದರೂ ಇನ್ನೂ ಹಳ್ಳಿಗಳಲ್ಲಿ ಸುತ್ತಾಡುತ್ತಿದ್ದಾರೆ ಎಂದೇ ಹೇಳುವರು. ಅವರ ಮನೆಯಲ್ಲಿ, ತುಳಿಯಲ್ಪಟ್ಟಿರುವ ಜನರೊಂದಿಗೆ ಅದೂ ಮುಖ್ಯವಾಗಿ ಬುಡಕಟ್ಟು ಜನರೊಂದಿಗೇ ಬದುಕುತ್ತಾ ಅವರ ನೋವನ್ನು ಇವರು ತಮ್ಮದಾಗಿಸಿಕೊಂಡಿರುವುದರಿಂದ ಅವರ ಬದುಕಿನ ಪ್ರತಿಯೊಂದು ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡಿರುವುದರಿಂದ ಇವರ ಕತೆಗಳು ನಾವೆಷ್ಟೋ ಮಂದಿ ಕಂಡರಿಯದ ಬುಡಕಟ್ಟು ಜನರ ಬದುಕನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸಿ, ಎಂಥ ನಿರ್ದಯಿಗಳೂ ಆರ್ದ್ರರಾಗುವಂತೆ ಮಾಡುತ್ತವೆ. ಅವರಿಗೆ ಶೈಲಿ ತಂತ್ರಗಳ ಹಂಗಿಲ್ಲ. ತಮಗೆ ಹೇಳಬೇಕೆನಿಸಿದ್ದನ್ನು ಯಾವ ಮುಲಾಜೂ ಇಲ್ಲದೆ ನೇರವಾಗಿ ಹೇಳಿ ಬಿಡುವದು ಅವರ ಬರಹದ ಜಾಯಮಾನ. ಧ್ವನಿ, ಸಂಕೇತ, ಪ್ರತಿಮೆ – ಉಹುಂ ಯಾವುದರ ಮರ್ಜಿಯನ್ನೂ ಅವರ ಕೃತಿಗಳು

ಕಾಯುವುದಿಲ್ಲ. ಸುತ್ತು ಬಳಸಿ ಹೇಳುವ ನಯನಾಜೂಕಿನ ಸಕಲ ವಿಧಾನಗಳು ಅವರಿಗೆ ಗೊತ್ತೇ ಇಲ್ಲ. ಗಡುಸಾದ, ನೇರವಾದ ಗಟ್ಟಿತನದ ಅಸಲಿ ವಿಧಾನಗಳ ಹಂದರದಲ್ಲೇ ಅವರ ಬರಹ ಹರಡಿದೆ.

ಮಹಾಶ್ವೇತಾದೇವಿಯವರ ಬದುಕಿನ ಬಗ್ಗೆ ವಿಸ್ತೃತವಾಗಿ ಹೇಳಬೇಕಿಲ್ಲ. ಅವರ ಚಿಂತನೆಯ ಫಲಗಳೇ ಅವರ ಬದುಕಿನ ರೀತಿ ಮತ್ತು ಬರವಣಿಗೆಯ ನೀತಿಗಳಾಗಿವೆ. ೧೯೨೬ರ ಜನವರಿ ೧೪ ರಂದು ಬಾಂಗ್ಲಾದೇಶದ ಢಾಕಾದ ಒಂದು ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದರು. ತಂದೆ ಮನೀಶ್ ಘಟಕ್, ಬಹುದೊಡ್ಡ ಕವಿ-ಕಾದಂಬರಿಕಾರ. ತಾಯಿ ಧರಿತ್ರಿದೇವಿಯವರೂ ಲೇಖಕಿ, ಸಮಾಜಸೇವಕಿ. ಹತ್ತು ಮಕ್ಕಳ ದೊಡ್ಡ ಪರಿವಾರದಲ್ಲಿ ಇವರೇ ಹಿರಿಯಕ್ಕ. ಢಾಕಾದಲ್ಲೇ ಅವರು ಶಾಲೆಗೆ ಹೋಗಲು ಆರಂಭಿಸಿದ್ದು. ಆದರೆ ದೇಶವು ಭಾಗವಾದ ಸಂದರ್ಭದಲ್ಲಿ ಕುಟುಂಬವು ಭಾರತದ ಪಶ್ಚಿಮ ಬಂಗಾಳದಲ್ಲಿ ಬಂದು ನೆಲೆಸಿತು. ಮಹಾಶ್ವೇತಾದೇವಿ ಅವರು ಹೈಸ್ಕೂಲು ಪಂತ ಹಾಗೂ ಬಿ.ಎ. ಆನರ್ಸ್ ಪದವಿಗಳನ್ನು ರವೀಂದ್ರನಾಥ ಠಾಗೂರರು ಸ್ಥಾಪಿಸಿದ ಶಾಂತಿನಿಕೇತನದ ವಿಶ್ವಭಾರತಿಯಲ್ಲಿ ಗಳಿಸಿಕೊಂಡರು. ಮಹಾಶ್ವೇತಾದೇವಿಯವರ ಬಾಲ್ಯದ ಬದುಕಿನಲ್ಲಿ ಸುಸಂಸ್ಕೃತ ಕುಟುಂಬದ ಸಂತೋಷಗಳಿದ್ದರೂ ಕಾರ್ಪಣ್ಯಗಳಿಗೂ ಕೊರತೆ ಇರಲಿಲ್ಲ. ಪದವಿಯ ನಂತರದಲ್ಲಿ ಅವರು ಮನೆಮನೆಗೆ ಸರಕುಗಳನ್ನು ಮಾರಾಟಮಾಡಿ ಒಂದಿಷ್ಟು ಪುಡಿಗಾಸು ಗಳಿಸುವ ಸಾಹಸದಲ್ಲಿ ಸೈಕಲ್ ತುಳಿದು ದಣಿದರು. ಸಣ್ಣ ಮಕ್ಕಳಿಗೆ ಮನೆಪಾಠ ಹೇಳಲು ಅಲೆದರು. ಕೊನೆಗೊಮ್ಮೆ ಅಂಚೆ ಇಲಾಖೆಯಲ್ಲಿ ಸಣ್ಣದೊಂದು ನೌಕರಿ ಸಿಕ್ಕಿತು. ಆದರೆ ಕಮ್ಯುನಿಸ್ಟ್ ಪಕ್ಷದೊಂದಿಗೆ ಅನುಮಾನಾಸ್ಪದ ಸಂಬಂಧಗಳನ್ನು ಹೊಂದಿದ್ದಾರೆ ಎಂಬ ಆರೋಪದೊಂದಿಗೆ ಈ ಸಣ್ಣ ಕೆಲಸವೂ ಹೋಯಿತು. ಮತ್ತೆ ಮನೆಪಾಠಗಳಿಗೇ ಮೊರೆ ಹೋಗುವುದು ಅನಿವಾರ್ಯವಾಯಿತು. ನಂತರ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಎಂ.ಎ. ಮಾಡಿಕೊಂಡು ೧೯೬೩ರಲ್ಲಿ ಕಾಲೇಜೊಂದರ ಅಧ್ಯಾಪಕಿಯೂ ಆದರು. ೧೯೪೭ರಲ್ಲಿ ಬಿಜೋನ್ ಭಟ್ಟಾಚಾರ್ಯ ಅವರೊಂದಿಗೆ ಮದುವೆಯಾಯಿತು. ಇವರು ಪ್ರಸಿದ್ಧ ನಾಟಕಕಾರ, ಪ್ರಗತಿಶೀಲ ಲೇಖಕ, ಕ್ರಾಂತಿಕಾರಿ ಬರಹಗಾರರಾಗಿದ್ದರು. ನವಾರುಣ ಎಂಬ ಮಗನ ಜನ್ಮವಾಯಿತು. ಆದರೆ ಈ ದಾಂಪತ್ಯ ಬಹುಕಾಲ ಬಾಳಲಿಲ್ಲ. ೧೯೬೨ರಲ್ಲಿ ವಿಚ್ಛೇದನವಾಯಿತು. ನಂತರ ಅವರು ಅಸಿತ್ ಗುಪ್ತಾ ಎಂಬ ಲೇಖಕರೊಡನೆ ಎರಡನೇ ವಿವಾಹವಾದರೂ ಅದು ೧೯೭೬ರಲ್ಲಿ ವಿಚ್ಛೇದನಗೊಂಡಿತು. ಖಾಸಗಿ ಬದುಕಿನಲ್ಲಿ ಏಕಾಂಗಿಯಾಗಿ ಉಳಿದ ಸಂಗತಿ ತಮ್ಮ ಜೀವನದ ಮುಖ್ಯ ಧ್ಯೇಯವನ್ನು ವಿಚಲಿತಗೊಳಿಸದಂತೆ ಕ್ರಿಯಾಶೀಲರಾದ ಮಹಾಶ್ವೇತಾ ಅವರು ತಮ್ಮ ಮಹತ್ವದ ಬದುಕು ಹಾಗೂ ಬರಹಗಳೆರಡನ್ನೂ ಸಮುದಾಯದ ಒಳಿತಿಗಾಗಿ ಮೀಸಲಿಟ್ಟು ಸಾಗಿದರು. ಗಂಡ, ಮಗ, ಕುಟುಂಬ, ನೌಕರಿ, ಲೇಖಕಿಯ ಸ್ಥಾನಗಳೆಂಬ ಖಾಸಗಿ ವಲಯದ ಮಿತಿಗಳನ್ನು ದಾಟಿದ್ದೆಂಬುದು ಅವರ ಬದುಕಿನ ಧಾಟಿಯನ್ನೇ ಬದಲಿಸಿತು. ಅವರ ಕಾರ್ಯಕ್ಷೇತ್ರ ಅನೂಹ್ಯವೆಂಬಂತೆ ವಿಸ್ತರಿಸಿತು. ಸಾಮಾಜಿಕ ಬದ್ಧತೆಗೆ ಅಣಿಯಾಗದ ಬರಹವನ್ನು ಗೌರವಿಸುವುದು

ಆಕೆಗೆ ಸಾಧ್ಯವೇ ಇರಲಿಲ್ಲ. ಹಾಗೆಂದು ಬರಹವನ್ನೇನೂ ಅವರು ಗೌಣವಾಗಿ ಭಾವಿಸಲಿಲ್ಲ. ಸಮುದಾಯಕ್ಕಾಗಿ ಬರಹವನ್ನು ದುಡಿಸಿಕೊಳ್ಳುವ ಮಾರ್ಗಗಳು ಅವರಿಗೆ ನಿಚ್ಚಳವಾಗಿದ್ದವು. ಅವರ ಮುಂದಿನ ಬದುಕಿನುದ್ದಕ್ಕೂ ಕಾಣುವುದು ಅವರ ನಡೆ ಮತ್ತು ನುಡಿಗಳ ಈ ಅವಿನಾಭಾವ ಸಂಬಂಧವೇ. ಆಕೆಯ ಸಾಹಿತ್ಯವು ಒಂದು ಸೃಜನಶೀಲ ಶಕ್ತಿಯು ಗ್ರಹಿಸಿದ ಸಮಾಜದ ಪ್ರತಿಫಲನ ಮಾತ್ರವಾಗಿ ಉಳಿಯಲಿಲ್ಲ. ಬದಲಿಗೆ ಸಮಾಜವನ್ನು ನಡೆಸಬಲ್ಲ ಸಾಧನವಾಗಿ ಬಳಕೆಗೊಳ್ಳಲು ಅದು ಅಣಿಯಾಯಿತು. ಅವರು ಸೃಷ್ಟಿಸಿರುವ ಸಾಹಿತ್ಯದ ಅಗಾಧತೆಯೇ ವಿಸ್ಮಯಕಾರಿಯಾದುದು. ಪ್ರಧಾನವಾಗಿ ಬಂಗಾಲಿ, ಸಾಂದರ್ಭಿಕವಾಗಿ ಇಂಗ್ಲಿಷಿನಲ್ಲಿ ಬರೆದ ಅವರ ಕೃತಿಗಳ ಸಂಖ್ಯೆ ನೂರನ್ನೂ ದಾಟಿದೆ. ವಸ್ತುವೈವಿಧ್ಯವೂ ಅಪಾರ. ಮಕ್ಕಳಿಗೆ ಹೇಳುವ ಕತೆ-ಹಾಡುಗಳಿಂದ ಮೊದಲಾಗಿ ಸಾಹಿತ್ಯಿಕ ಹಾಗೂ ಸಾಮಾಜಿಕ ಅಗತ್ಯಗಳಿಗಾಗಿ ಬರೆಯುವ ಕತೆ, ಕಾದಂಬರಿ, ನಾಟಕ, ಪ್ರಬಂಧ, ಅಂಕಣ ಬರಹ, ಪತ್ರಿಕಾ ಬರಹಗಳಲ್ಲಿ ವಿಸ್ತಾರಗೊಂಡಿದೆ. ಇವೆಲ್ಲವೂ ಸಾಮಾಜಿಕ, ಸಾಂಸ್ಕೃತಿಕ ಕ್ರಾಂತಿ ಬೀಜಗಳನ್ನೇ ಒಳಗೊಂಡವು. ಹೀಗಿದ್ದರೂ ಸಮುದಾಯ ಚಳುವಳಿಗಳ ಭಾಗವೇ ಆಗಿ ಆ ಅಗತ್ಯಗಳಿಗಾಗಿ ಬರೆದ ಕ್ರಾಂತಿ ಸಾಹಿತ್ಯವೂ ಪ್ರತ್ಯೇಕವಾಗಿ ಪರಿಗಣಿಸುವಷ್ಟು ವ್ಯಾಪಕ ಪ್ರಮಾಣದಲ್ಲಿದೆ.

ಎಚ್. ಎಸ್. ಶ್ರೀಮತಿಯವರು 'ಮಹಾಶ್ವೇತಾದೇವಿ' ಎಂಬ ಪರಿಚಯ ಗ್ರಂಥವನ್ನು ಬರೆದಿದ್ದು ಅದನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಎಚ್.ಎಸ್. ಶ್ರೀಮತಿಯವರು ಮಹಾಶ್ವೇತಾದೇವಿಯವರ ನಾಲ್ಕು ಕೃತಿಗಳನ್ನು ಕನ್ನಡಿಸಿದ್ದಾರೆ. ೧. **ದೋಪ್ದಿ ಮತ್ತು ಇತರ ಕತೆಗಳು** (೧೯೯೭). ೨. **ರುಡಾಲಿ** (೧೯೯೮). ೩. **೧೦೮೪ರ ತಾಯಿ** (೧೯೯೮) ೪. **ಬೇಟೆ** (೨೦೦೦).

ದೋಪ್ದಿ ಮತ್ತು ಇತರ ಕತೆಗಳಲ್ಲಿ ನಾಲ್ಕು ಕತೆಗಳಿವೆ. ಇವುಗಳಲ್ಲಿ ನಾನು ದೋಪ್ದಿ ಮತ್ತು ಸ್ತನದಾಯಿನಿ ಕತೆಗಳನ್ನು ಎತ್ತಿಕೊಂಡಿದ್ದೇನೆ. ಝಾರ್‌ಖಾನಿಯ ಅರಣ್ಯಪ್ರದೇಶಕ್ಕೆ ಸಂಬಂಧಪಟ್ಟಂತೆ ದಂಗೆಕೋರರ ಗುಂಪೊಂದು ಕೆಲಸ ಮಾಡುತ್ತಿರುತ್ತದೆ. ದೋಪ್ದಿ ಮತ್ತು ಅವಳ ಗಂಡನನ್ನು ಗುಮಾನಿಯಿಂದ ನೋಡುವ ಸರಕಾರ ಅವಳ ಗಂಡನನ್ನು ಗುಂಡಿಕ್ಕಿ ಕೊಲ್ಲುತ್ತದೆ. ದೋಪ್ದಿ ಪಾರಾದರೂ ಅವಳ ತಲೆಗೆ ಇನಾಮು ಸಾರಲಾಗುತ್ತದೆ. ಕೊನೆಗೂ ಸೇನೆಯುವರಿಗೆ ದೋಪ್ದಿ ಸಿಕ್ಕಿ ಬೀಳುತ್ತಾಳೆ. ಅಲ್ಲಿಂದ ಸುರುವಾಗುವುದೇ ನಿಜವಾದ ಕತೆ.

ದ್ರೌಪದಿ ಮೇಝೆನ್‌ಳನ್ನು ಸಂಜೆ ೬-೫೩ಕ್ಕೆ ಸೆರೆ ಹಿಡಿಯಲಾಯಿತು. ಅವಳನ್ನು ಕ್ಯಾಂಪಿಗೆ ಕರೆತರಲು ಒಂದು ಗಂಟೆಯೇ ಹಿಡಿಯಿತು. ಅವಳನ್ನು ಯಾರೊಬ್ಬರೂ ಮುಟ್ಟಲೂ ಇಲ್ಲ. ಕ್ಯಾನ್‌ವಾಸ್ ಕ್ಯಾಪ್ ಸ್ಟೂಲಿನ ಮೇಲೆ ಕುಳಿತುಕೊಳ್ಳಲು ಅವಳಿಗೆ ಅವಕಾಶ ನೀಡಲಾಗಿತ್ತು. ೮.೫೭ಕ್ಕೆ ಸರಿಯಾಗಿ ಸೇನಾನಾಯಕ ಊಟಕ್ಕೆ ಎಂದು ಹೊರಟ. "ಅದೇನು ಮಾಡಬೇಕೋ ಸರಿಯಾಗಿ ಮಾಡ್ರೋ ಅವಳಿಗೆ" ಎಂದು ಹೇಳಿ ಅವನು ಹೊರಟು ಹೋದ. ಆಮೇಲೆ "ಅದೆಷ್ಟು ಹೊತ್ತು ಕಳೆಯಿತೋ ಸಾವಿರಾರು ವರ್ಷಗಳೇ? ಜನ್ಮ-ಜನ್ಮಾಂತರಗಳ ನಂತರದಲ್ಲೋ ಎಂಬಂತೆ ನಿಧಾನವಾಗಿ ದ್ರೌಪದಿ ಕಣ್ಣು ತೆರೆದಳು. ಆಕಾಶ, ಚಂದ್ರ ಎಲ್ಲವೂ ಕಾಣುತ್ತಿದೆಯಲ್ಲ?

ನಿಧಾನವಾಗಿ ತನ್ನ ತಲೆಯ ತುಂಬ ಮೊಳೆ ಹೊಡೆದಿರುವರೇನೋ ಎನ್ನುವ ಅನುಭವ. ಅಲ್ಲಾಡಲು ನೋಡಿದಳು. ತನ್ನ ಕೈಗಳನ್ನು ಕಾಲುಗಳನ್ನೂ ನಾಲ್ಕು ದಿಕ್ಕಿಗೆ ಎಳೆದು ಕಟ್ಟಿ ಬಿಟ್ಟಿರುವಂತೆ ತೋರಿತು. ಸೊಂಟಕ್ಕೇ ಸುತ್ತಿದ ಬಟ್ಟೆ ಇಲ್ಲ. ಸ್ಸಹಿಸಲಾರದ ಬಾಯಾರಿಕೆ. ತನ್ನ ಬಾಯಿಂದ 'ನೀರು' ಎಂಬ ಶಬ್ದ ಹೊರಟಿದ್ದನ್ನು ತುಟಿ ಕಚ್ಚಿ ನಿಲ್ಲಿಸಿದಳು. ಕಣ್ಣಿನ ಕೊನೆಯಲ್ಲಿ ಉಕ್ಕಿದ ಕಂಬನಿಗೆ ಹೇಸಿದಳು. ಮಂಕಾದ ಚಂದ್ರನ ಬೆಳಕಿನಲ್ಲಿ ತನ್ನ ಮೈಯುದ್ದಕ್ಕೂ ಕಾಂತಿಹೀನವಾದ ಕಣ್ಣುಗಳನ್ನಾಡಿಸಿದಳು. ಎದೆಯ ಅವಸ್ಥೆಯನ್ನು ನೋಡಿದಳು. ರಾಕ್ಷಸರಂತೆ ಎರಗಿದ್ದಾರೆ. ಹಸಿಮಾಂಸವನ್ನೇ ತಿನ್ನುವವರಂತೆ ಮೊಲೆಗಳನ್ನು ಕಚ್ಚಿದ್ದರು. ಮೊಲೆ ತೊಟ್ಟುಗಳು ಪ್ರತ್ಯೇಕಗೊಂಡು ಜೋತಾಡುತ್ತಿದ್ದವು. ಎಷ್ಟು ಜನ ಇರಬಹುದು? ನಾಲ್ಕೇ ಐದೇ ಆರೇ? ದ್ರೌಪದಿಗೆ ಪ್ರಜ್ಞೆ ಇದ್ದಿದ್ದರಲ್ಲವೇ? ಮತ್ತೆ ಮತ್ತೆ ಇದೇ ಪುನರಾವರ್ತನೆಯಾಯ್ತು. ಅಂತೂ ಬೆಳಗಾಯಿತು. ದ್ರೌಪದಿ ಮೇಝನ್‌ಳನ್ನು ಕ್ಯಾಂಪಿಗೆ ತಂದು ಹುಲ್ಲಿನ ಮೇಲೆ ಎಸೆದರು. ಅವಳ ಬಟ್ಟೆಯನ್ನು ಅವಳ ದೇಹದ ಮೇಲೆ ಎಸೆದರು. ಆಮೇಲೆ ಬೆಳಗಿನ ತಿಂಡಿ, ಪೇಪರು, "ದ್ರೌಪದಿ ಮೇಝನ್‌ಳನ್ನು ಬಂಧಿಸಲಾಯಿತು" ಎಂಬ ರೇಡಿಯೋ ಸಂದೇಶವನ್ನು ಬಿತ್ತರಿಸಿದ್ದು. ಇದೆಲ್ಲ ಆದಮೇಲೆ ದ್ರೌಪದಿ ಮೇಝನ್‌ಳನ್ನು ಒಳಗೆ ಕರೆತರಲು ಆಜ್ಞಾಪಿಸಲಾಯಿತು.

ಆದರೆ ದ್ರೌಪದಿ ಬಟ್ಟೆ ಹಾಕಿಕೊಳ್ಳುವುದನ್ನು ನಿರಾಕರಿಸಿ ಬತ್ತಲೆಯಾಗೇ ಸೇನಾ ನಾಯಕನೆಡೆಗೆ ನಡೆದು ಬರುತ್ತಾಳೆ. ಅವಳನ್ನು ನೋಡಿ ಅವನು "ಇದೇನಿದು?" ಎಂದು ಬೊಗಳಿದ್ದ. ದ್ರೌಪದಿ ಮತ್ತಷ್ಟು ಹತ್ತಿರ ಬಂದಳು. ದೊಡ್ಡದಾಗಿ ನಗುತ್ತ, "ದ್ರೌಪದಿ ಮೇಝನ್‌ಳನ್ನು ಇದ್ದಕ್ಕಲ್ಲವೇ ಹುಡುಕಿದ್ದು? ಸರಿಯಾಗಿ ಮಾಡ್ರೋ ಅಂತ ಅವರಿಗೆ ಹೇಳಿದೆಯಲ್ಲ, ಹೇಗೆ ಮಾಡಿದ್ದಾರೆ ಅಂತ ನೋಡಲ್ಲವೇನು?" ಎಂದು ಸವಾಲೆಸೆದಳು. ಮೊದಲೇ ಗಾಯಗೊಂಡಿದ್ದ ಅವಳ ತುಟಿಗಳು ಅವಳು ನಗಲು ತೊಡಗಿದ್ದೇ ಬಿರುಕು ಬಿಟ್ಟಿತು. ರಕ್ತ ಜಿನುಗತೊಡಗಿತು. ದ್ರೌಪದಿ ತನ್ನ ಕೈಯಿಂದ ರಕ್ತವನ್ನೊರಸಿಕೊಂಡಳು. "ಏನು ಮಾಡ್ತೀಯೋ ಬಟ್ಟೆ ತೊಗೊಂಡು? ನನ್ನನ್ನು ಬೆತ್ತಲು ಮಾಡಬಹುದು. ಮತ್ತೆ ಬಟ್ಟೆ ತೊಡಿಸಿ ನೋಡೋಣ? ಲೋ, ನೀನೂ ಒಬ್ಬ ಗಂಡಸೇನೋ" ಎನ್ನುತ್ತ ಭಯಂಕರವಾಗಿ ಕೂಗಿದಳು. ಆಕಾಶವೇ ಹರಿಯುವಂತೆ. ಅತ್ತಿತ್ತ ನೋಡಿದಳು. ತನ್ನ ಬಾಯಲ್ಲಿ ತುಂಬಿ ನಿಂತ ರಕ್ತಸಿಕ್ತ ಉಗುಳನ್ನು ತುಪ್ಪಲು ಸೇನಾನಾಯಕನ ಬಿಳಿ ಬುಷ್ ಶರ್ಟಿನ ಭಾಗವೇ ಸರಿಯಾದ ಜಾಗ ಎಂಬಂತೆ ಕಾಲರ್ ಹಿಡಿದು ಉಗಿದಳು. "ನಾನು ನಾಚಿಕೆ ಪಟ್ಟುಕೊಳ್ಳಬೇಕಾದ ಯೋಗ್ಯತೆಯುಳ್ಳ ಒಬ್ಬ ಗಂಡಸೂ ಇಲ್ಲಿಲ್ಲ. ನನಗೆ ಹೇಗೆ ಬಟ್ಟೆ ತೊಡಿಸುವಿರೋ ನೋಡೇ ಬಿಡ್ತೀನಿ. ನೀವಿನ್ನೇನು ತಾನೇ ಮಾಡಲು ಸಾಧ್ಯ? ಬನ್ರೋ... ಹಿಡಿರೋ ನನ್ನ. ಬನ್ರೋ ಹಿಡೀರೋ....." ದ್ರೌಪದಿ ನೇರ ನಡೆದು ಸೇನಾನಾಯಕನನ್ನು ಅತ್ತ ದೂಡಿದಳು. ನಿಶ್ಶಸ್ತ್ರ ಎದುರಾಳಿಯ ಮುಂದೆ ನಿಲ್ಲಲು ಸಾಧ್ಯವಾಗದೇ ಸೇನಾನಾಯಕ ತತ್ತರಿಸಿ ನಡುಗಿದ. ಇಡೀ ಕತೆ ದಮನಿತ ಸ್ತ್ರೀಯರಿಗೆ ಜಾಗೃತಿಯ ಪಾಠವಾಗಬಲ್ಲದು.

೨. ಸ್ತನದಾಯಿನಿ : ಬಾಡಿಗೆಯ ಗರ್ಭಧಾರಿಣಿಯರಂತೆ ಬಾಡಿಗೆಯ ಮೇಲೆ ಮನೆಯ ಯಜಮಾನನ ಮೊಮ್ಮಕ್ಕಳಿಗೆ ಎದೆಹಾಲು ಕೊಡುವ ಯಶೋದೆಯ ಕತೆ ಇದು. ದಟ್ಟ ದಾರಿದ್ರ್ಯದ ಕಾರಣದಿಂದ ಅವಳು ತನ್ನ ಮಕ್ಕಳು ಹಸಿವಿನಿಂದ ಬಳಲಬಾರದೆಂದು ಇದನ್ನು ಒಪ್ಪಿದ್ದಾಳೆ. ಅವಳ ಧಣಿಯ ಹೆಂಡತಿ "ಸೊಸೆಯಂದಿರು ತಾಯಂದಿರಾಗ್ತಾರೆ. ತಾಯಿಯರಾದಾಗ ಮಕ್ಕಳಿಗೆ ಮೊಲೆ ಕೊಡ್ತಾರೆ. ತಾಯಿಯರಾಗುವ ವಯಸ್ಸು ಕಳೆಯುವವರೆಗೂ ಅವರು ತಾಯಿಯರಾಗ್ತಾನೇ ಇರ್ತಾರೆ. ಮೊಲೆ ಕೊಡ್ತಾನೇ ಇರ್ತಾರೆ. ಒಂದೇ ಸಮನೆ ಕೊಡ್ತಾ ಇದ್ದರೆ ಅವುಗಳ ಅಂದವೇ ಹೊರಟು ಹೋಗುತ್ತದೆ. ಜೋತು ಬಿದ್ದ ಮೊಲೆಗಳಿಗೆ ತನ್ನ ಮಗಂದಿರು ಮುಖ ತಿರುಗಿಸಿ ಹೊರಗೆ ಹೋಗಲು ತೊಡಗಿದರೆ ಮನೆಯ ಕೆಲಸದ ಹೆಣ್ಣಾಳುಗಳನ್ನು ಗೋಳು ಹೊಯ್ಯಲು ಆರಂಭಿಸಿದರೆ ತಾನು ಅವರಿಗೆ ಏನೂ ಹೇಳಲು ಸಾಧ್ಯವಾಗುವುದಿಲ್ಲ. ಮನೆಯಲ್ಲಿ ಸಿಗ್ತಾ ಇಲ್ಲ ಅನ್ನೋದರಿಂದ ಹೊರಗೆ ಹೋಗ್ತಾರೆ ಅನ್ನೋದರಲ್ಲಿ ನ್ಯಾಯ ಇದ್ದೇ ಇದೆ. ಯಶೋದ ಈ ಮಕ್ಕಳಿಗೆಲ್ಲ ಮೊಲೆತಾಯಿಯಾಗಿ ಬಿಟ್ಟರೆ? ಅವಳಿಗೆ ಒಂದಿಷ್ಟು ಊಟ, ಹಬ್ಬಕ್ಕೆ ಬಟ್ಟೆ, ತಿಂಗಳಿಗೊಂದಿಷ್ಟು ದುಡ್ಡು ಕೊಟ್ಟರೂ ಸಾಕು." ಎಂದು ಅವಳನ್ನು ಒಪ್ಪಿಸುತ್ತಾಳೆ. ಯಶೋದೆಯ ಗಂಡ ಆಸೆಬುರುಕ, ಕಾಮುಕ. "ನೀನು ಸದಾ ಗರ್ಭಿಣಿಯಾಗಿರಬೇಕು ಮಗು ಹೆರಬೇಕು ಆಗ ತಾನೇ ಎದೆ ಹಾಲು ಬರೋದು?" ಎಂದು ಅವಳನ್ನು ನಂಬಿಸಿ ಸದಾ ಲೈಂಗಿಕೇಚ್ಛೆಗಳನ್ನು ಪೂರೈಸಿಕೊಳ್ಳುತ್ತಾನೆ.

ಇಪ್ಪತ್ತು ವರ್ಷಗಳವರೆಗೆ ಯಶೋದೆ ಧಣಿಯ ಮಕ್ಕಳು ಮೊಮ್ಮಕ್ಕಳಿಗೆ ಹಾಲೂಡಿಸುತ್ತಾ ವರ್ಷಕ್ಕೊಂದು ಹೆರುತ್ತಾ ಸೋತು ಹೋಗುತ್ತಾಳೆ. ಅವಳು ಕಸುವು ಕಳೆದುಕೊಂಡ ಮೇಲೆ ಗಂಡ ಬಿಟ್ಟು ಬಿಡುತ್ತಾನೆ. ಮಕ್ಕಳು ದೂರಾಗುತ್ತಾರೆ. ಅವಳಿಗೆ ಸ್ತನ ಕ್ಯಾನ್ಸರ್ ಆಗಿ ಧಣಿಯ ಮನೆಯವರು ಅವಳನ್ನು ಆಸ್ಪತ್ರೆಗೆ ಸೇರಿಸಿ ಮರೆತುಬಿಡುತ್ತಾರೆ. ಅವಳ ಕೊನೆಯ ಕ್ಷಣಗಳನ್ನು ಕತೆಗಾರ್ತಿ ಹೀಗೆ ಹಿಡಿದಿಟ್ಟಿದ್ದಾರೆ. ಯಶೋದೆ ಬ್ರಾಹ್ಮಣಳಾಗಿದ್ದು ತನ್ನ ಕುಲದ ಬಗ್ಗೆ ಹೆಮ್ಮೆ ಇದ್ದವಳು.

ಕೊನೆಗೂ ಒಂದು ರಾತ್ರಿ ತನ್ನ ಕೈಕಾಲುಗಳು ತಣ್ಣಗಾಗುತ್ತಿವೆ ಎಂದು ಯಶೋದಳ ಅರಿವಿಗೆ ಬಂತು. ಯಶೋದಳಿಗೆ ಕಣ್ಣುಗಳನ್ನು ತೆರೆಯಲಾಗದಿದ್ದರೂ ತನ್ನ ಕೈಯನ್ನು ಕೆಲವರು ಗಮನಿಸುತ್ತಿದ್ದಾರೆ ಎಂಬುದೂ ತಿಳಿಯಿತು. ತೋಳಿಗೊಂದು ಸೂಜಿ ಚುಚ್ಚಿತು. ಒಳಗೆ ಉಸಿರಾಟ ಪ್ರಯಾಸದಾಯಕ ಅನ್ನಿಸುತ್ತದೆ. ಅನ್ನಿಸಲೇಬೇಕಲ್ಲ. ಯಾರು ನೋಡುತ್ತಿರುವವರು? ಅವಳ ಸಂಬಂಧಿಗಳೇ? ತಾನು ಹೆತ್ತದ್ದು ಎಂಬುದಕ್ಕಾಗಿ ಹಾಲೂಡಿಸಿದೆನಲ್ಲ ಅವರೇ ಅಥವಾ ತನ್ನ ಜೀವನ ನಿರ್ವಹಣೆಗಾಗಿ ಹಾಲೂಡಿಸಿದೆನಲ್ಲ ಅವರೇ? ಯಶೋದಳಿಗನ್ನಿಸಿತು. ತಾನೆಷ್ಟಾದರೂ ಇಡೀ ಲೋಕಕ್ಕೆ ಹಾಲೂಡಿಸಿದವಳು. ಸಾಯುವಾಗ ಒಂಟಿಯಾಗುವೆನೆ? ಪ್ರತಿನಿತ್ಯ ಅವಳನ್ನು ಉಪಚರಿಸುವ ಡಾಕ್ಟರು, ನಂತರ ಹೊದಿಕೆಯಿಂದ ತನ್ನ ಮುಖವನ್ನು ಮುಚ್ಚುವವನು, ಚಟ್ಟದ ಮೇಲೆ ಇಡುವವನು, ಸ್ಮಶಾನದಲ್ಲಿ ಚಟ್ಟದಿಂದ ಇಳಿಸುವವನು, ಅಲ್ಲಿಂದ ಎತ್ತಿ ಚಿತೆಯ ಮೇಲೆ

ಇರಿಸುವ ಅಸ್ಪೃಶ್ಯ ಎಲ್ಲರೂ ಅವಳು ಹಾಲೂಡಿಸಿದ ಮಕ್ಕಳೇ" ಈ ಲೋಕಕ್ಕೆ ಹಾಲೂಡಿಸಿದವರೆಲ್ಲರೂ ಕೊನೆಗೆ ಯಶೋದೆಯರೇ ಆಗಬೇಕಾಗುತ್ತದೆ. ಯಾರೂ ಇಲ್ಲದೆ ಅನಾಥರಾಗಿ ಸಾಯಬೇಕು. ಸಾಯುವ ಕಾಲಕ್ಕೆ ನೀರು ಬಿಡುವವರು ಗತಿ ಇಲ್ಲದಂತೆ ಆಗಬೇಕು. ಆದರೂ ಆ ಕೊನೆಯಲ್ಲಿ ಯಾರಾದರೂ ಇರಬಹುದೇ? ಯಾರದು? ಅದಾರು? ಯಾರದು?" ಯಶೋದ ಹನ್ನೊಂದು ಗಂಟೆಗೆ ಸತ್ತಳು. ಧಣಿಯ ಮನೆಯವರಿಗೆ ಫೋನು ಮಾಡಲಾಯಿತು. ಫೋನಿನ ಗಂಟೆ ಬಾರಿಸಲೇ ಇಲ್ಲ. ರಾತ್ರಿಯ ವೇಳೆ ಧಣಿಗಳು ಫೋನನ್ನು ಡಿಸ್‌ಕನೆಕ್ಟ್ ಮಾಡಿ ಬಿಡುತ್ತಿದ್ದರು. ಯಶೋದಾದೇವಿ ಎಂಬ ಹಿಂದೂ ಸ್ತ್ರೀ ಆಸ್ಪತ್ರೆಯ ಹೆಣದ ಮನೆಯಲ್ಲಿ ತೀರಾ ಮಾಮೂಲಾಗಿ ಬಿದ್ದಿದ್ದಳು. ವ್ಯಾನಿನಲ್ಲಿ ಸ್ಮಶಾನಕ್ಕೆ ಹೋದಳು. ಸುಟ್ಟು ಭಸ್ಮವಾದಳು. ಅಸ್ಪೃಶ್ಯನೊಬ್ಬನು ಬಂದು ಅವಳ ಅಂತ್ಯಕ್ರಿಯೆಯನ್ನು ನೆರವೇರಿಸಿದ. ಯಶೋದ ಆ ಭಗವಂತನ ಸೃಷ್ಟಿಯಲ್ಲಿ, ಮಿಕ್ಕವರೆಲ್ಲರೂ ತನ್ನಂತೆಯೇ ನಡೆದರು, ನಡೆಯುತ್ತಾರೆ ಎಂದು ನಂಬಿದಳು. ಯಶೋದಳ ಸಾವು ಎಂದರೆ ಆ ಭಗವಂತನ ಸಾವು. ಮಾನವ ಮಾತ್ರದವರು ಈ ಲೋಕದಲ್ಲಿ ಭಗವಂತನೆಂಬಂತೆ ಬಾಳಿದರೆ! ಅವಳು ಯಾರಿಗೂ ಬೇಡವಾದಳು. ಅವಳು ಸಾಯಬೇಕಾದ್ದೇ ಒಂಟಿಯಾಗಿ.

೩. **ರುಡಾಲಿ:** ಶ್ರೀಮಂತ ರಜಪೂತ ಮನೆತನಗಳಲ್ಲಿ ಸಾವುಗಳು ಸಂಭವಿಸಿದಾಗ ಆ ಮನೆಗಳವರು ಅಳುತ್ತಾ ಕೂರುವುದಿಲ್ಲವಂತೆ. ಬದಲಿಗೆ ಆ ಸಂದರ್ಭದಲ್ಲಿ ಅತ್ತು ಕರೆದು ಗೋಳಾಡಲೆಂದು ಸಂಬಳಕ್ಕೆ ಜನರನ್ನು ಗೊತ್ತು ಮಾಡುತ್ತಾರಂತೆ. ಮನೆಯ ಜನರಿಗೆ ಆಸ್ತಿ ಪಾಸ್ತಿಗಳ ಮೇಲೆ ಹಕ್ಕು ಸ್ಥಾಪಿಸುವ ಹುನ್ನಾರಗಳಲ್ಲಿ ಸತ್ತವನ ಸೊಂಟದ ಬೀಗದ ಕೈಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಗಡಿಬಿಡಿಯಲ್ಲಿ ಸಾವಿಗಾಗಿ ಅಳುತ್ತಾ ಕೂರುವ ಪುರಸೊತ್ತು ದೊರೆಯುವುದು ಕಷ್ಟ. ಹಾಗಾಗಿ ಸತ್ತವನು ಇಟ್ಟುಕೊಂಡಿದ್ದ ಅಥವಾ ಬಳಸಿ ಬಿಸಾಡಿದ್ದ ಸೂಳೆಯರನ್ನು ಅಳುವ ಕೆಲಸಕ್ಕಾಗಿ ಕರೆಸಿಕೊಳ್ಳುತ್ತಾರಂತೆ. ಹೀಗೆ ಬಜಾರಿನ ವೇಶ್ಯೆಯರಿಗೆ 'ರುಡಾಲಿ' ಕೆಲಸ ಒಂದು ಉಪವೃತ್ತಿಯಾಗುತ್ತದೆ.

ಮಹಾಶ್ವೇತಾದೇವಿಯವರ **ರುಡಾಲಿಯ** ಶನಿಚರಿಯದು ಉದ್ದಕ್ಕೂ ಗೋಳಿನ ಕತೆಯೇ. ತನ್ನ ಆಪ್ತರೆಲ್ಲರನ್ನೂ ಒಬ್ಬೊಬ್ಬರನ್ನಾಗಿ ಕಳೆದುಕೊಳ್ಳುತ್ತಲೇ ಹೋಗುವ ಶನಿಚರಿಗೆ ಆ ಯಾವ ಸಾವುಗಳಲ್ಲೂ ಎರಡು ತೊಟ್ಟು ಕಣ್ಣೀರು ಹಾಕಲು ಪುರುಸೊತ್ತೇ ದೊರೆಯುವುದಿಲ್ಲ. ಅಂಥಾ ದುರ್ಭರ ಸಮುದಾಯಕ್ಕೆ ಅವಳು ಸೇರಿದ್ದಾಳೆ. ಸದಾ ತುತ್ತಿನ ಪ್ರಶ್ನೆಯಲ್ಲೇ ಸಿಲುಕಿದ ಅವಳು ತನ್ನ ಆಪ್ತರ ಸಾವಿಗೆ ಕಣ್ಣೀರಿಡುವ ಅವಕಾಶವನ್ನು ಪಡೆಯಲಿಲ್ಲ. ವಿಪರ್ಯಾಸವೆಂದರೆ ಜೀವ ಹಿಡಿದಿಡಲಷ್ಟೇ ಅಗತ್ಯವಾದ ತುತ್ತನ್ನು ಗಳಿಸಲು ಅವಳು ರುಡಾಲಿ ವೃತ್ತಿಯನ್ನು ಅವಲಂಬಿಸಬೇಕಾಗುತ್ತದೆ.

ಶನಿಚರಿಯ ಗಂಡ ಸತ್ತ, ಅತ್ತೆ ಸತ್ತಳು. ಮಗ ಕ್ಷಯ ಬಂದು ಸತ್ತ. ಸೊಸೆ ಓಡಿಹೋದಳು. ಮೋಸ ಮಾಡಿದವನು ಅವಳನ್ನು ವೇಶ್ಯಾವಾಟಿಕೆಗೆ ಬಿಟ್ಟ. ಶನಿಚರಿಯ ಜೊತೆ ಬಂದೇ.

ಹೊಟ್ಟೆಪಾಡಿಗೇನು ಮಾಡುವುದು? ಆಗ ಆ ಊರಿನ ಒಬ್ಬ ದಲ್ಲಾಳಿ ಅವಳ ಹತ್ತಿರ ಬರುತ್ತಾನೆ. ಊರ ಸಾಹುಕಾರ ಸತ್ತಿದ್ದಾನೆ. ಅವನಿಗೆ ಅಳಲು ರುಡಾಲಿಗಳು ಬೇಕು. ಶನಿಚರಿಗೆ ಹೇಳುತ್ತಾನೆ. "..... ನೀವಿಬ್ಬರೂ ಅಲ್ಲಿಗೆ ಹೋಗಿ, ಚೀರಾಡಿ ಅಳುತ್ತಾ ಹೆಣದ ಹಿಂದೆ ಮೆರವಣಿಗೆಯಲ್ಲಿ ಹೋಗಿ. ನಿಮಗೆ ದುಡ್ಡು ಸಿಗುತ್ತೆ. ಅಕ್ಕಿ ಕೂಡಾ ಕೊಡ್ತಾರೆ. ಕೊನೆಯ ದಿನ ಒಳ್ಳೆ ಊಟ-ಬಟ್ಟೆಗಳು ಸಿಗುತ್ತವೆ". "ಶನಿಚರಿಯ ಒಳಗೆ ದೊಡ್ಡದೊಂದು ಭೂಕಂಪವಾದಂತೆನಿಸಿತು. ಅವಳು ಜೋರಾಗಿ "ಅಳೋದಾ? ನಾನಾ? ಯಾಕಯ್ಯಾ, ನಿನಗೇ ಗೊತ್ತಿಲ್ಲವಾ, ಕಣ್ಣೀರು ಅನ್ನೋದು ನನ್ನ ಕಣ್ಣುಗಳಲ್ಲಿ ಸಾಧ್ಯವೇ ಇಲ್ಲಾಂತ. ನನ್ನ ಈ ಎರಡೂ ಕಣ್ಣುಗಳೂ ಬತ್ತಿಯೇ ಹೋಗಿವೆಯಲ್ಲ" "ಈಗ ನೀನು ಹರಿಸಲಿರುವ ಕಣ್ಣೀರು ನಿನ್ನ ಹೊಟ್ಟೆಯ ಪಾಡಿಗಾಗಿ" ಎಂದ. ಮುಂದೆ ಶನಿಚರಿ ರುಡಾಲಿಯ ವೃತ್ತಿಯನ್ನು ನಡೆಸಲು ಮುಂದಾಳತ್ವ ವಹಿಸಿಕೊಳ್ಳುತ್ತಾಳೆ. ಅದರಲ್ಲಿ ಪರಿಣತಿ ಸಾಧಿಸುತ್ತಾಳೆ. ಅವಳ ಮಾತುಕತೆಯಿಂದ ಇದನ್ನು ಗುರುತಿಸಬಹುದು. ಸತ್ತವರ ಮನೆಯ ಗುಮಾಸ್ತನೊಂದಿಗೆ " ನಾವು ಎಂಥಾ ಚೆನ್ನಾಗಿ ಗೋಳು ಗರಿಯುತ್ತೀವಿ ಅಂತ ನೀವೇ ನೋಡ್ತೀರಿ ಹುಜೂರ್! ಮಧ್ಯೆ ಮಧ್ಯೆ ಶ್ರೀರಾಮನ ಹೆಸರನ್ನೂ ಅದರೊಳಕ್ಕೆ ಸೇರಿಸುತ್ತೀವಿ! ಬರೀ ಐದು ರೂಪಾಯಿ ಮತ್ತು ಒಂದಿಷ್ಟು ಅಕ್ಕಿ ಅಷ್ಟೇ ನಾವು ತೆಗೆದುಕೊಳ್ಳೋದು. ಇನ್ನು ಕ್ರಿಯೆಯ ಕೊನೆಯ ದಿನ ಊಟ-ಬಟ್ಟೆ ಕೊಡೋದಂತೂ ಇದ್ದೇ ಇದೆ. ನಾವು ಇದಕ್ಕಿಂತ ಹೆಚ್ಚಿಗೆ ಏನನ್ನೂ ಕೇಳಲ್ಲ. ಕಡಿಮೆಗೂ ಒಪ್ಪಿಕೊಳ್ಳೋದಿಲ್ಲ.

ಸಾದಾ ಅಳುವಾದರೆ ಅದಕ್ಕೆ ಒಂದು ರೇಟು. ಅಳುತ್ತಾ ನೆಲದ ಮೇಲೆ ಉರುಳಾಡಬೇಕು ಎಂದರೆ ಐದು ರೂಪಾಯಿ, ಮೇಲೆ ನಾಲ್ಕು ಆಣೆ ಕೊಡಬೇಕು. ಗೋಳಿಟ್ಟು ಅಳುತ್ತಾ ನೆಲದ ಮೇಲೆ ಉರುಳುತ್ತಾ ತಲೆಯನ್ನು ಚಚ್ಚಿಕೊಳ್ಳುತ್ತಿರಬೇಕು. ಎಂದರೆ ಐದು ರೂಪಾಯಿ ಮೇಲೆ ಎಂಟಾಣೆ ಆಗುತ್ತದೆ. ಇನ್ನು ಎದೆ ಎದೆ ಬಡಿದುಕೊಳ್ಳುತ್ತಾ ಅಳಬೇಕು, ಸ್ಮಶಾನಕ್ಕೆ ಹೋಗುವ ಹೆಣದ ಮೆರವಣಿಗೆಯೊಂದಿಗೆ ಕೂಡ ಹೋಗಿ ಅಲ್ಲಿ ನೆಲದ ಮೇಲೆ ಉರುಳಾಡಿ ಅಳಬೇಕು ಅಂದರೆ ಪೂರಾ ಆರು ರೂಪಾಯಿಗಳನ್ನು ಕೊಡಲೇಬೇಕು.....ಈ ಶನಿಚರಿ ಎಲ್ಲೆಲ್ಲಿ ಹೋಗ್ತಾಳೋ ಅಲ್ಲೆಲ್ಲಾ ತಪ್ಪದೇ ನಿಮ್ಮ ಗುಣಗಾನ ಮಾಡ್ತಾಳೆ."

ಕೊನೆಗೆ ಅವಳು ಹೆಚ್ಚು ರುಡಾಲಿಗಳನ್ನು ಕರೆತರಲು ಆ ಊರಿನ ವೇಶ್ಯಾವಾಟಿಕೆಗೆ ಹೋದಾಗ ಅಲ್ಲಿ ಅವಳ ಸೊಸೆಯೇ ಸಿಗುತ್ತಾಳೆ. "ನಮ್ಮ ಬುಧುವಿನ ಹೆಂಡತಿಯಲ್ಲವೇನೇ? ನೀನೂ ಬಾರೇ ಬಹೂ, ಗುಲ್‌ಬದನ್ ನೀನೂ ಕೂಡ ಬಾ. ಗಂಭೀರ್ ಸಿಂಗ್ ಸತ್ತ. ಬಾ, ಬಾ ತಲೆಗೆ ಐದು ರೂಪಾಯಿಗಳು. ಜೊತೆಗೆ ಅಕ್ಕಿ ಬಟ್ಟೆ, ಎಲ್ಲವನ್ನೂ ಕ್ರಿಯೆಯ ದಿನ ಕೊಡಿಸುತ್ತೇನೆ ಎಲ್ಲರೂ ಬನ್ನಿ"ಸೂಳೆಯರೆಲ್ಲ ಗಡಿಬಿಡಿ ಮಾಡುತ್ತಾ ಕೂಡಿದರು. ಎಳೆಯರಾದ ಕೆಲವರು "ನಾವು ಕೂಡಾ ಬರಬಹುದಾ?" ಎಂದು ಕೇಳಿದರು. ಶನಿಚರಿ ಹೇಳುತ್ತಾಳೆ. "ಬನ್ನಿ, ಬನ್ನಿ ಎಲ್ಲರೂ ಬನ್ನಿ. ವಯಸ್ಸಾದ ಮೇಲೆ ಹೇಗೂ ಇದನ್ನೇ ನೀವು ಮಾಡಬೇಕಾಗಿರೋದು. ಈಗೇನಾಯ್ತು? ನನ್ನ ಕೈ ಇನ್ನೂ ನಡೆಯುತ್ತಾ ಇದೆ. ಅಷ್ಟುವಾಗಲೇ ಇದನ್ನೆಲ್ಲಾ ಚೆನ್ನಾಗಿ ಕಲಿತುಬಿಡಿ"

೪) ೧೦೮೪ರ ತಾಯಿ : ೧೦೮೪ ಅನ್ನುವದು ಒಬ್ಬ ತರುಣನ ಶವಕ್ಕೆ ಕೊಟ್ಟ ನಂಬರು. ಇವನು ಸಾರ್ವಜನಿಕ ದಂಗೆಗಳಲ್ಲಿ ಭಾಗಿಯಾದನು. ಸಾಮಾಜಿಕ ಪ್ರಜ್ಞೆಯಿಂದಾಗಿ ಮನೆಯಿಂದ ಹೊರಗುಳಿದನು. ಇವನ ತಾಯಿ ಸುಜಾತ ಕೂಡ ಇವನ ವಿಚಾರಧಾರೆಯವಳೇ. ಆದರೆ ಮನೆಯಲ್ಲಿ ಉಳಿದವರೆಲ್ಲರ ತೋರಿಕೆಯ ದೊಡ್ಡಸ್ತಿಕೆಗಾಗಿ ಒಣಪ್ರತಿಷ್ಠೆಯ ಬದುಕನ್ನು ಸಾಗಿಸುವವರು. ಕೊನೆಗೆ ಮಗ ಸತ್ತ ಅಂತ ತಿಳಿದಾಗ ತಾಯಿ ತನ್ನಂಥ ಅನೇಕ ತಾಯಂದಿರ ಸಾಂತ್ವನಕ್ಕಾಗಿ ಹೊರಡುತ್ತಾಳೆ. 'ನಮ್ಮ ಸಮಾಜದಲ್ಲಿ, ಈ ವ್ಯವಸ್ಥೆಯಲ್ಲಿ ನಮ್ಮ ಸಾಂಸ್ಕೃತಿಕ ಹಾಗೂ ಬೌದ್ಧಿಕ ಪರಿಸರಗಳಲ್ಲಿ ರಾಜಕಾರಣದಲ್ಲಿ ಎಲ್ಲೆಲ್ಲೂ ನ್ಯಾಯಬಾಹಿರ ಅಂಶಗಳೇ ಪ್ರಬಲವಾಗಿವೆ. ನಿರ್ದಯವಾದ ರಾಜಕೀಯ ವರ್ತನೆಗಳೆಲ್ಲವನ್ನೂ ಇವು ಸಮರ್ಥಿಸುತ್ತಾ ಪೋಷಿಸುತ್ತವೆ. ಕುಟುಂಬದ ಆಪ್ತ ಸಂಬಂಧಗಳು ಕೂಡ ಈ ರಾಜಕೀಯದಿಂದ ಮುಕ್ತವಾಗಿ ಉಳಿಯುವುದಿಲ್ಲ. ಪ್ರತಿಭಟನೆಗಳನ್ನೊಡ್ಡುವ ಸಾರ್ವಜನಿಕ ಚಳುವಳಿಗಳಲ್ಲಿ ನಡೆದುಹೋಗುವ ಹತ್ಯಾಕಾಂಡಗಳು ಹೊರಕಣ್ಣುಗಳಿಗೆ ಕಾಣದೆ ಉಳಿಯುತ್ತವೆ. ಈ ಹತ್ಯೆಗೆ ಹೆಚ್ಚಾಗಿ ಬಲಿಯಾಗುವವರು ತರುಣರು ಹಾಗೂ ಹೆಂಗಸರು. ತರುಣ ಪೀಳಿಗೆಯನ್ನು ಇದು ಆಹುತಿಗೊಳ್ಳುವಂತೆ ಪ್ರೇರೇಪಿಸಬಹುದು. ಹೆಂಗಸರು ತಮ್ಮಲ್ಲೇ ಕುದಿದು ಸಿಡಿದು ಹೋಗಬಹುದು. ಬದುಕನ್ನೇ ಕೊನೆಗಾಣಿಸಿ ಬಿಡುವ ಈ ದುರಂತಗಳಿಂದ ಪಾರಾಗಬೇಕೆಂದರೆ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳಲು ಯತ್ನಿಸುವದು ಮುಖ್ಯವಾದ ಸಿದ್ಧತೆ. ಹಾಗೆಯೇ ಅದಕ್ಕನುಗುಣವಾಗಿ ದಮನಕ್ಕೊಳಗಾದ ಧ್ವನಿಯನ್ನು ಗುರುತಿಸಿ ಅದನ್ನು ದೃಢವಾಗಿ ನಿಲ್ಲಿಸುವದು ಕೂಡಾ ತುಂಬಾ ಮುಖ್ಯವಾದ ಸಂಗತಿ. ಮಹಾಶ್ವೇತಾದೇವಿಯವರ **ಹಜಾರ್ ಚಾರೇಶಿರ್ ಮಾ** ಅಂತಹ ಒಂದು ಮಹತ್ವದ ಸಂದೇಶವನ್ನು ತಿಳುವಳಿಕೆಯನ್ನು ನೀಡುವ ಕಾದಂಬರಿ. ಈ ಕಾದಂಬರಿಯ ಕೊನೆಯಲ್ಲಿ ಬರುವ ಈ ಮಾತುಗಳು ಚಳವಳಿಗಳಲ್ಲಿ ಸಾಯುವ ಮಕ್ಕಳ ತಾಯಂದಿರ ಹೃದಯವಿದ್ರಾವಕ ಶೋಕ ಹೀಗಿದೆ: 'ಅದೆಷ್ಟು ಆಳದಲ್ಲಿ ದೀರ್ಘಕಾಲದಿಂದ ಒಳಗೇ ಮುಚ್ಚಿಟ್ಟಿದ್ದ ಹೃದಯ ವಿದ್ರಾವಕ ಶೋಕವು ಕೊನೆಗೂ ಸ್ಫೋಟಿಸಿ ಹೊರಬಂದು ಬಿಟ್ಟಿತು. ನಗರದ ಮನೆಮನೆಗಳಲ್ಲೂ ಪ್ರತಿಧ್ವನಿಸುತ್ತಾ, ನಗರದ ಬೀದಿ ಬೀದಿಗಳನ್ನು ಆವರಿಸುತ್ತಾ ಆ ಅಳು ಆಕಾಶಕ್ಕೇ ಏರಿತು. ಈ ಅಳುವನ್ನು ಹೊತ್ತ ಗಾಳಿಯು ರಾಜ್ಯದಿಂದ ರಾಜ್ಯಕ್ಕೇ ಭೂಮಿಯ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಚರಿತ್ರೆಯ ಸಾಕ್ಷಿಗಳಾಗಿ ನಿಂತ ಕತ್ತಲ ಕಂಬ ಕಂಬಗಳಿಗೆ, ಚರಿತ್ರೆಯ ಅತಿಪ್ರಾಚೀನ ಕಾಲದಿಂದಲೂ ಸರಿದು ಪಾತಾಳದಲ್ಲಿ ಹುದುಗಿ ಹೋದ ಕಟ್ಟಡ ಹಾಗೂ ಶಿಲಾಶಾಸನಗಳಿಗೆ ತಾಕುವಂತೆ ಧಾವಿಸಿ ಸಾಗಿತು. ತನ್ನ ಪ್ರಭಾವದಡಿಗೆ ಭೂತ ವರ್ತಮಾನ ಭವಿಷ್ಯತ್ತಿನ ಎಲ್ಲ ಸಂಗತಿಗಳನ್ನು ಸಿಲುಕಿಸಿ ಆ ಅಳು ಏಕಾಗ್ರವಾಗಿ ಆವರಿಸಿ ಬಿಟ್ಟಿತು. ಇನ್ನಾವ ಸಂತೋಷ ತೃಪ್ತಿಗಳೂ ಉಳಿಗಾಲವೇ ಇಲ್ಲದಂತಾಗಿ ನುಚ್ಚುನೂರಾಗಿ ಹೋದವು. ಆ ಅಳುವಿನ ತುಂಬಾ ರಕ್ತ, ಪ್ರತಿಭಟನೆ, ದುಃಖಗಳ ವಾಸನೆ ಹರಡಿ ಹೋಗಿತ್ತು.

ಬೇಟೆ ಕಥಾಸಂಗ್ರಹದಿಂದ ಎರಡು ಕತೆಗಳನ್ನು ಆರಿಸಿಕೊಂಡಿದ್ದೇನೆ. ಒಂದು **ಬೇಟೆ** ಇನ್ನೊಂದು **ದೌಲೊತಿ.**

ಬೇಟೆ ಕಥಾನಾಯಕಿ ಮೇರಿ. ಇವಳ ತಾಯಿ ಪರಿಶಿಷ್ಟ ಪಂಗಡದವಳು. ಬ್ರಿಟಿಷ್ ಅಧಿಕಾರಿಯ ಮನೆಯಲ್ಲಿ ಇವಳು ಕೆಲಸ ಮಾಡುವಾಗ ಅವನ ಅತ್ಯಾಚಾರದಿಂದ ಈ ಮಗಳು ಹುಟ್ಟಿರುತ್ತಾಳೆ. ಇದರಿಂದಾಗಿ ಅವಳನ್ನು ಅವಳ ಜಾತಿಯವರು ಮದುವೆಯಾಗುವುದಿಲ್ಲ. ಆದರೆ ಅವಳು ಮುಸ್ಲಿಂ ಯುವಕನೊಬ್ಬನನ್ನು ಪ್ರೀತಿಸಿದ್ದಾಳೆ. ಅವರಿಬ್ಬರೂ ಮದುವೆಯಾಗಲಿದ್ದಾರೆ. ಊರಿಗೆಲ್ಲ ಈ ವಿಷಯ ಗೊತ್ತು. ಅವರಿಬ್ಬರೂ ಸ್ವಲ್ಪ ದುಡ್ಡು ಸಂಪಾದಿಸಬೇಕು. ಅದಕ್ಕೇ ಮೇರಿ ಧಣಿಯ ಮನೆಯಲ್ಲಿ ಮೈಮುರಿದು ದುಡಿಯುತ್ತಿದ್ದಾಳೆ. ಈ ನಡುವೆ ಆ ಊರಿಗೆ ಸಾಲುವೃಕ್ಷಗಳನ್ನು ಕೊಳ್ಳಲು ಒಬ್ಬ ಕಂಟ್ರಾಕ್ಟರ ಬರುತ್ತಾನೆ. ವಿವಾಹಿತ ಹೆಣ್ಣು ಬಾಕ. ಅವನು ಮೇರಿಯನ್ನು ಬಯಸಿ ಅವಳನ್ನು ಸಿಕ್ಕ ಸಿಕ್ಕಲ್ಲಿ ಕಾಡಲು ಪ್ರಾರಂಭಿಸುತ್ತಾನೆ. ಅವನನ್ನು ಮೇರಿ ಹೇಗೆ ನಿವಾರಿಸುತ್ತಾಳೆ ಅನ್ನುವುದೇ ಕಥಾವಸ್ತು. ಆ ಊರಲ್ಲಿ ಒಂದು ಸಂಪ್ರದಾಯವಿದೆ. ಹನ್ನೆರಡು ವರುಷಗಳಿಗೊಮ್ಮೆ ಅವರಲ್ಲಿ ಹೆಂಗಸರು ಬೇಟೆಯಾಡುವ 'ಜಾನಿ ಪರಬ್' ಹಬ್ಬ. ಗಂಡಸರು ಮಾಡುವಂತೆ ಈ ವರ್ಷ ಹೆಂಗಸರು ಕೂಡಿ ಬಿಲ್ಲುಬಾಣಗಳನ್ನು ಹಿಡಿದು ಬೇಟೆಗೆ ಹೊರಡುತ್ತಾರೆ. ಮೇರಿಯೂ ಬೇಟೆಗೆ ಹೊರಟಿದ್ದಾಳೆ. ಕಂಟ್ರಾಕ್ಟರನ ಕಾಟದಿಂದ ಬೇಸತ್ತು ಬೇಟೆಯ ದಿನ ಅವನಿಗೆ ಬಂಡೆಯ ಬಳಿ ಬಂದು ತನ್ನನ್ನು ಕಾಣಲು ತಿಳಿಸುತ್ತಾಳೆ. ಅವನು ಅತಿಯಾಸೆಯಿಂದ ಮೋಹಿತನಾಗಿ ಅವಳು ಹೇಳಿದಲ್ಲಿ ಕಾಯುತ್ತಾನೆ. ಅವನಿಗೆ ಕುಡಿಸಿ ಮೈಮರೆಸುತ್ತಾಳೆ. 'ನಂತರ ಮೇರಿ ನಕ್ಕಳು. ಅವನನ್ನು ಹಿಡಿದು ನೆಲಕ್ಕೇ ಕೆಡವಿದಳು. ಅವನೂ ನಗುವಿನಲ್ಲಿ ಮುಳುಗಿದ್ದಾನೆ. ಮೇರಿ ಚೂರಿಯನ್ನೆತ್ತಿ ಕೆಳಗಿಳಿಸಿದಳು. ಮತ್ತೆ ಎತ್ತಿದಳು ಮತ್ತೆ ಇಳಿಸಿದಳು. ಮತ್ತೆ...... ಮತ್ತೆ.....ಮತ್ತೆ... ಅದೆಷ್ಟು ಕಾಲ ಕಳೆಯಿತೋ ಮೇರಿ ಎದ್ದುನಿಂತಳು. ರಕ್ತ? ಬಟ್ಟೆಗಳಿಗೆ? ಹರಿಯುವ ಹೊಳೆಯಲ್ಲಿ ತೊಳೆದು ಬಿಟ್ಟರಾಯ್ತು. ನಿರ್ದಾಕ್ಷಿಣ್ಯವಾಗಿ ಅವನ ಜೇಬಿಗೆ ಕೈ ಹಾಕಿ ಅಲ್ಲಿದ್ದ ಪರ್ಸನ್ನು ಎಳೆದುಕೊಂಡಳು. ಆಮೇಲೆ ಮೊದಲಿಗೆ ಮಾಡಿದ್ದೆಂದರೆ ಆ ಶವವನ್ನು ಕಣಿವೆಯ ಆಳಕ್ಕೇ ಎಸೆದಳು. ಜೊತೆಗೇ ಅವನ ಪರ್ಸ್. ಸಿಗರೇಟುಗಳು ಅವನ ಕರ್ಚೀಫ್....

ಇದೇ ಸಂಗ್ರಹದಲ್ಲಿ ಬರುವ ಇನ್ನೊಂದು ಕತೆ **ದೌಲೊತಿ**. ಇದು ದೌಲೊತಿಯ ಕುಟುಂಬ ಸರ್ವನಾಶವಾದ ಕತೆ. ತಮ್ಮದೊಂದು ಸಂದರ್ಶನದಲ್ಲಿ ಈ ಕತೆಯ ಪಾತ್ರಗಳನ್ನು ಕಣ್ಣಾರೆ ಕಂಡಿದ್ದಾಗಿ ಮಹಾಶ್ವೇತಾದೇವಿಯವರು ಹೇಳಿದ್ದಾರೆ.

ದೌಲೊತಿಯ ತಂದೆ ಗನೊರಿ ನಗೇಸಿಯಾ ದೃಢಕಾಯದ ಆಳು. ಆದರೆ ಒಮ್ಮೆ ಅವನು ತಾನು ಜೀತ ಮಾಡುತ್ತಿದ್ದ ಮುನಾವರನ ಮನೆಯಲ್ಲಿ ಭತ್ತದ ಮೂಟೆಗಳನ್ನು ಇಳಿಸುವಾಗ ಬಿದ್ದು ಸೊಂಟ ಮುರಿದುಕೊಳ್ಳುತ್ತಾನೆ. ಇದು ನಿಜವಾಗಿ ನಡೆದ ಘಟನೆ. ಅವರೇ ಹೇಳುತ್ತಾರೆ, "ಒಂದು ಮೇ ತಿಂಗಳ ಬಿರುಬೇಸಿಗೆಯಲ್ಲಿ ಯಾವುದೋ ಕೆಲಸಕ್ಕೆ ನಾನು ಜಮೀನುದಾರನೊಬ್ಬನ ಅಂಗಳದಲ್ಲಿ ನಿಂತಿದ್ದೆ. ಅಲ್ಲಿ ಭತ್ತದ ಮೂಟೆಗಳನ್ನು ಭರ್ತಿಯಾಗಿ ತುಂಬಿಕೊಂಡಿದ್ದ ಗಾಡಿ ನಿಂತಿತ್ತು. ಒಬ್ಬ ಜೀತದಾಳು ಗಾಡಿಯ ನೊಗಕ್ಕೆ ಹೆಗಲುಕೊಟ್ಟು, ಎಳೆಯಲು ಹೆಣಗುತ್ತಿದ್ದ. ಹೇಗೋ ಭಾರವನ್ನು ಹೊತ್ತ ಅವನು ಅಂತೂ ಹೆಜ್ಜೆಯೊಂದನ್ನು ಇಟ್ಟಿದ್ದಷ್ಟೇ. ಕಾಲು ಡೊಂಕಾಗಿ ಮುಗ್ಗರಿಸಿ ಕೆಳಗೆ ಬಿದ್ದ. ಭತ್ತದ ಮೂಟೆಗಳು ಅವನ ಮೇಲೆ ಉರುಳಿದವು. ಅಲ್ಲಿದ್ದ ಕೆಲವು

ಆಳುಗಳು ಓಡಿಬಂದು ಸೊಂಟಮುರಿದು ಬಿದ್ದು ನರಳುತ್ತಿದ್ದ ಅವನನ್ನು ಎತ್ತಿ ಜಗಲಿಯ ಮೇಲೆ ಮಲಗಿಸಿದರು. ಜಮೀನ್ದಾರ ಮಾತ್ರ ನಿಶ್ಚಿಂತೆಯಾಗಿ ಯಾವ ಕೆಲಸವನ್ನೂ ಸರಿಯಾಗಿ ಮಾಡುವುದಿಲ್ಲ ಎಂದು ಆಳುಗಳನ್ನು ಬೈಯುತ್ತಾ ನಿಂತ. ಅಲ್ಲೇ ನಿಂತಿದ್ದ ನನಗೆ ದಿಗ್ಭ್ರಮೆಯಾಯ್ತು. 'ಅಲ್ಲಾ ಸ್ವಾಮಿ, ನೊಗಕ್ಕೇ ಎತ್ತುಗಳನ್ನು ಕಟ್ಟುವ ಬದಲು ಮನುಷ್ಯನನ್ನು ಕಟ್ಟುವದೇ?' ಎಂದು ಕೇಳಿದೆ. 'ಅಲ್ಲಾ ತಾಯಿ, ಈ ಬಿಸಿಲಲ್ಲಿ ಎತ್ತುಗಳನ್ನು ಕಟ್ಟಿದರೆ ಅಷ್ಟೇ. ಸತ್ತೇ ಹೋಗುತ್ತವೆ. ಸಾವಿರಾರು ರೂಪಾಯಿಗಳ ನಷ್ಟ. ಇವನಾದರೆ ಜೀತದಾಳು, ಪರವಾಗಿಲ್ಲ' ಎಂಬ ಉತ್ತರ ಕೇಳಿ ನಡುಗಿ ಹೋದೆ. ಈ ಸತ್ಯಗಳನ್ನು ಕಾಣಿಸಬೇಕಿದೆ. ನನ್ನ ಬರಹಗಳ ಮೂಲ ಉದ್ದೇಶ ಇಂಥಾ ಶೋಷಕರನ್ನು ಬಯಲಿಗೆಳೆಯುವುದೇ ಆಗಿದೆ" ಎನ್ನುತ್ತಾರೆ.

ಈ ದೌಲೊತಿ ನತದೃಷ್ಟ ಹೆಣ್ಣು. ಬಡತನದಿಂದಾಗಿ ಮೋಸ ಹೋಗುತ್ತಾಳೆ. ಅವಳನ್ನು ಮದುವೆಯಾಗುವೆನೆಂದು ನಂಬಿಸಿ ಕರೆತಂದವ ತನಗೆ ಸಾಕೆನ್ನುವಷ್ಟು ಬಳಸಿಕೊಂಡು ಬಿಸಾಡಿ ಬಿಡುತ್ತಾನೆ. ವೇಶ್ಯಾವೃತ್ತಿ ಅವಳಿಗೆ ಅನಿವಾರ್ಯವಾಗಿ ಇಪ್ಪತ್ತೊಂಬತ್ತನೆಯ ವಯಸ್ಸಿಗೆ ರೋಗಪೀಡಿತಳಾಗುತ್ತಾಳೆ. ಡಾಕ್ಟರು ಅವಳನ್ನು ಅಲ್ಲಿಂದ ಸಾಗಿಸುತ್ತಾನೆ. ಅವಳಿಗೆ ಸಾವು ತನಗೆ ಸಮೀಪವಾಗಿದೆ ಎಂದು ಗೊತ್ತಾಗುತ್ತದೆ. ತನ್ನೂರಿನಲ್ಲೇ ಸಾಯಬೇಕೆಂದು ಕಷ್ಟಪಟ್ಟು ನಡೆಯುತ್ತಾಳೆ. ಆಗುವುದಿಲ್ಲ. ಹಳ್ಳಿಯೊಂದರಲ್ಲಿ ಬಿದ್ದು ಬಿಡುತ್ತಾಳೆ. ಅಂದು ಆಗಸ್ಟ್ ೧೫. ಇಂಡಿಯಾದ ಭೂಪಟವನ್ನು ಬಲು ಜಾಗರೂಕತೆಯಿಂದ ಬಿಡಿಸಿದ್ದರು. ಮಣ್ಣಿನಲ್ಲಿ ಮೊದಲು ಗೆರೆ ಕೊರೆದು ನಂತರ ಆ ಗೆರೆಯಲ್ಲಿ ಸುಣ್ಣದ ನೀರನ್ನು ಬಿಟ್ಟಿದ್ದಾರೆ. ದೌಲೊತಿ ಅದರ ಮೇಲೇ ಬಿದ್ದು ಪ್ರಾಣ ಬಿಟ್ಟಳು. ಅಲ್ಲಿಯ ಮಾಸ್ತರು ಮೋಹನ ಶ್ರೀವಾಸ್ತವ ಧಾವಿಸಿ ಬಂದು ನೋಡುತ್ತಾರೆ ಮೂರು ಕಡೆಗಳಿಂದ ಮಹಾಸಮುದ್ರಗಳಿಂದಲೂ, ಒಂದು ಕಡೆಗೆ ಹಿಮಾಲಯದಿಂದಲೂ ಆವೃತವಾದ ಭಾರತವನ್ನು ಇಡಿಯಾಗಿ ಆವರಿಸಿದಂತೆ ಈಗ ಜೀತದಾಳಿನ ದೇಹವೊಂದು ಹರಡಿಕೊಂಡು ಬಿದ್ದಿದೆ. ಈ ದಿನ ಸ್ವಾತಂತ್ರ್ಯೋತ್ಸವದ ಈ ಪುಣ್ಯದಿನ. ಇಂಡಿಯಾದ ದೇಶಭಕ್ತ ಜನರೆನಿಸಿದ ಮೋಹನನಂಥವರು ಧ್ವಜಾರೋಹಣ ಮಾಡಲು ಒಂದಿಷ್ಟು ಜಾಗ ಬಿಡದೆ ದೌಲೊತಿ ಹರಡಿ ಆಕ್ರಮಿಸಿ ಬಿಟ್ಟಿದ್ದಾಳೆ. ಈಗ ಮೋಹನನ ಗತಿಯೇನು? ಇಂಡಿಯವನ್ನು ಈ ದೌಲೊತಿ ಪೂರ್ತಿಯಾಗಿ ಆವರಿಸಿಕೊಂಡು ಬಿಟ್ಟಿದ್ದಾಳಲ್ಲ?

ಅಗ್ನಿಗರ್ಭ: ಮಹಾಶ್ವೇತಾದೇವಿಯವರು ಚರಿತ್ರೆಯನ್ನು ವಸ್ತುವಾಗುಳ್ಳ ಕಾದಂಬರಿಗಳನ್ನು ಬರೆಯುವ ಮೂಲಕವೇ ತಮ್ಮ ಬರವಣಿಗೆಯನ್ನು ಆರಂಭಿಸಿದ್ದು. ಅವರ ಮೊದಲ ಕೃತಿ ಝಾನ್ಸೀ ಲಕ್ಷ್ಮೀಬಾಯಿಯನ್ನು ಕುರಿತಾಗಿತ್ತು. ಆದರೆ ಮುಂದೆ ಅವರು ಚರಿತ್ರೆಯನ್ನು ಆಧರಿಸಿ ಬರೆಯುವಾಗ ಯಾವುದೋ ಕಾಲದ ತಮ್ಮ ಗ್ರಹಿಕೆಗೆ ದೂರವಾದ ದೇಶಕಾಲಗಳಿಗೆ ಹೋಗುವದನ್ನು ನಿಲ್ಲಿಸಿದರು. ನಿಕಟತಮ ಕಾಲದೇಶದ ಜೀವನ ಸಂದರ್ಭಗಳಿಂದ ವಸ್ತುಗಳನ್ನು ಆಯ್ದು ಕೃತಿಗಳನ್ನು ಬರೆಯತೊಡಗಿದರು. ಸಮಕಾಲೀನ ನಿಜಸಂದರ್ಭವನ್ನು ಆಶ್ರಯಿಸಿ ಅವರು ಬರೆದ ಮಹತ್ವದ ಕೃತಿಗಳಲ್ಲಿ ಅರಣ್ಯೇರ್ ಅಧಿಕಾರವೂ ಒಂದಾಗಿದೆ. ಮುಂಡಾ ಬುಡಕಟ್ಟಿಗೆ

ಸೇರಿದ ನಾಯಕನೊಬ್ಬನ ಕಥೆ ಇಲ್ಲಿದೆ. ಬಿರ್ಸಾ ಮುಂಡ ಎಂಬುದು ಅವನ ಹೆಸರು. ಒಂದು ಶತಮಾನದ ಹಿಂದೆಯಷ್ಟೇ ಇದ್ದವನು. ತನ್ನ ಜನರ ಹಕ್ಕುಗಳಿಗಾಗಿ ಬ್ರಿಟಿಷರ ಆಡಳಿತವನ್ನು ಎದುರಿಸಿದವನು. ಸಂಚಿಗೆ ಬಲಿಯಾಗಿ ನ್ಯಾಯ ದೊರೆಯದೆ ಸೆರೆಮನೆಯಲ್ಲೇ ಕೊಲೆಯಾದವನು. ಅವನ ಜನರು ಅವನನ್ನು ದೇವರು ಎಂದು ತಿಳಿದರು. ವಿಚಿತ್ರವೆಂದರೆ ಈಗ ತನ್ನ ವರ್ಗಚಹರೆಯನ್ನು ಬದಲಾಯಿಸದ ಇಂದಿನ ಆಡಳಿತ ಅವನನ್ನು ಜನನಾಯಕನೆಂದು ಪರಿಗಣಿಸಿ ಅವನಿಗೊಂದು ಪ್ರತಿಮೆ, ಅವನ ಹೆಸರಿನಲ್ಲೊಂದು ವಿಶ್ವವಿದ್ಯಾಲಯ ಎಲ್ಲವನ್ನೂ ಸ್ಥಾಪಿಸಿದೆ. ಅವರ ಮಾತು ಹಾಗಿರಲಿ ಈ ಬಿರ್ಸಾ ಮುಂಡಾನ ಜೀವನಗಾಥೆ ಅವನ ವೈಯಕ್ತಿಕ ನೆಲೆಯ ಕಥೆಯಲ್ಲಿ ಎತ್ತುವ ಪ್ರಶ್ನೆ ಅರಣ್ಯ ಯಾರದು? ಮುಂಡಾ ಜನರ ಮುಗ್ಧ ಆದರೆ ಅಷ್ಟೇ ಆತಂಕದ ಪ್ರಶ್ನೆ ಇದು. ಎಷ್ಟೋ ಶತಮಾನಗಳಿಂದ ಅರಣ್ಯದೊಡನೆ ಬದುಕುತ್ತಿರುವ ಜನರ ಅಳಲಿದು. ರಾಜ್ಯಾಡಳಿತ ಈ ಅರಣ್ಯವನ್ನು ತನ್ನದು ಎಂದು ತಿಳಿದು ಅದನ್ನು ಕಂಟ್ರಾಕ್ಟರುಗಳಿಗೆ ಮಾರಿದೆ. ತನಗೆ ಇಷ್ಟ ಬಂದಂತೆ ಲೂಟಿ ಹೊಡೆದಿದೆ. ಪೋಲೀಸರು ಆ ಲೂಟಿಗಾರರ ಹಕ್ಕುಗಳನ್ನು ಕಾಯ್ದುಕೊಳ್ಳಲು ಸನ್ನದ್ಧರಾಗಿದ್ದಾರೆ. ಜಗತ್ತಿನಾದ್ಯಂತ ಇಂಥ ಜನರು ಕೇಳುತ್ತಿರುವ ಪ್ರಶ್ನೆ ಇದೇ ಆಗಿದೆ. ನಮ್ಮ ಜೀವನದ ಲಯಗಳನ್ನು ಪಲ್ಲಟಗೊಳಿಸುತ್ತಿರುವ ಅನ್ಯಶಕ್ತಿಗಳಿಗೆ ಈ ಅಧಿಕಾರವನ್ನು ಯಾರು ಕೊಟ್ಟವರು? ಇದಕ್ಕೆ ಉತ್ತರವಿದೆಯೆಂದಲ್ಲ. ಈ ಪ್ರಶ್ನೆಯನ್ನು ಕೇಳಿದ್ದಕ್ಕೆ ಎಷ್ಟು ಜನರು ತಮ್ಮ ಪ್ರಾಣವನ್ನು ಕಳೆದುಕೊಳ್ಳಬೇಕಾಗಿ ಬಂದಿದೆ ಎಂಬುದು ನಮ್ಮ ಸಮಕಾಲೀನ ಇತಿಹಾಸದ ಪುಟಗಳಲ್ಲಿ ಕಂಡೂ ಕಾಣದಂತೆ ಮರೆಯಾಗಿ ಹೋಗಿದೆ.

ಇಂದೂ ಕೂಡ ಆದಿವಾಸಿಗಳ ಹಕ್ಕುಗಳಿಗಾಗಿ ನಡೆಯುವ ಹೋರಾಟಗಳಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ. ಈ ಕಾದಂಬರಿ ಒಂದು ರೋಚಕ ಕಥಾನಕವಲ್ಲ. ನಾಯಕ ಪ್ರಧಾನವಾದ ಕಥೆಗಳಲ್ಲಿ ಕಾಣುವ ರೋಚಕತೆಯನ್ನು ಎಚ್ಚರಿಕೆಯಿಂದಲೇ ಕಥನದಿಂದ ದೂರವಿರಿಸಿದ್ದಾರೆ. ವರದಿ ಮತ್ತು ಕಥನದ ತಂತ್ರಗಳನ್ನು ವಿಶಿಷ್ಟ ರೀತಿಯಲ್ಲಿ ಬೆರೆಸಿ ಇಲ್ಲಿ ಒಂದು ನಿರೂಪಣಾ ವಿಧಾನವನ್ನು ರೂಪಿಸಿಕೊಂಡಿದ್ದಾರೆ. ರಿಕಾರ್ಡುಗಳನ್ನು ದಾಖಲೆಗಳನ್ನು ಯಥಾಕ್ರಮದಲ್ಲಿ ಬಳಸಿಕೊಂಡಿದ್ದಾರೆ. ಇದು ಚರಿತ್ರೆಯ ಮರುಕಟ್ಟುವಿಕೆಯಲ್ಲ. ಚರಿತ್ರೆಯ ಅನಾವರಣ. ಅದರ ಹಿಂದಿನ ಜನಪರವಾದ ತರ್ಕಗಳನ್ನು ಮುಂಚೂಣಿಗೆ ತರುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ. ಸಮಕಾಲೀನ ವಸ್ತುವನ್ನು ತೆಗೆದುಕೊಂಡು ಅದನ್ನು ಹೀಗೊಂದು ಕಥಾನಕವನ್ನಾಗಿಸುವುದಕ್ಕೆ ಇದೊಂದು ಹೊಸ ಮಾದರಿಯನ್ನು ಒದಗಿಸುತ್ತದೆ.

"ಮಹಾಶ್ವೇತಾದೇವಿಯವರು ಬಿರ್ಸಾ ಮುಂಡಾನ ಕಥೆಯನ್ನು ಹಾಡಿನಲ್ಲಿ ಹೇಳುವುದನ್ನು ಕೇಳಿದ್ದೇನೆ. ಅವರು ಅವನನ್ನು ಹತ್ತಿರದ ವ್ಯಕ್ತಿಯೆಂಬಂತೆ ಬಲ್ಲವರು, ಹಾಗಾಗಿಯೇ ಇಲ್ಲಿನ ನಿರೂಪಣೆಗೆ ಚರಿತ್ರಕಾರರ 'ದೂರ' ಅಥವಾ ರೋಚಕ ಕಾದಂಬರಿಗಳ 'ಹತ್ತಿರ' ಇವೆರಡಕ್ಕಿಂತ ಭಿನ್ನವಾದ ಅಂತರ ಲಭ್ಯವಾಗಿದೆ. ಕನ್ನಡಕ್ಕೆ ಇದೊಂದು ಹೊಸ ಮಾದರಿ" ಎಂದು ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದ ಡಾ. ಕೆ. ವಿ. ನಾರಾಯಣ ಅವರು ಹೇಳುತ್ತಾರೆ.

ಮಹಾಶ್ವೇತಾದೇವಿ ಹೀಗೆ ಹೇಳುತ್ತಾರೆ,

ಭಾರತ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಬಿರ್ಸಾ ಮುಂಡಾರಿ ಹೆಸರಿಗೆ, ಅವನು ನಡೆಸಿದ ದಂಗೆಗೆ ಅದ್ವಿತೀಯವಾದ ಸ್ಥಾನ ವಿನೂತನವಾದ ಅರ್ಥ ಇದೆ. ಅಂದಿನ ರಾಜಕೀಯ ಸಾಮಾಜಿಕ ಪರಿಸ್ಥಿತಿಯಲ್ಲಿ ಅದು ಕೇವಲ ವಿದೇಶಿ ಆಳ್ವಿಕೆಗೆ ಜನಪೀಡನೆಗೆ ವಿರುದ್ಧವಾಗಿ ಅಲ್ಲ: ಅಂದಿನ ಫ್ಯೂಡಲ್ ವ್ಯವಸ್ಥೆಯ ವಿರುದ್ಧವಾಗಿಯೂ ಸಾಗಿದ ಹೋರಾಟ. ಈ ಎರಡನ್ನೂ ಒಂದು ಮಾಡಿ ನೋಡದ ಹೊರತು ಬಿರ್ಸಾ ಮುಂಡಾರಿ ಹುಟ್ಟು - ಪರಿಣಾಮಗಳ ಯಥಾರ್ಥ ರೂಪ ಗೋಚರಿಸದು.

ಲೇಖಕಿಯಾಗಿ, ವರ್ತಮಾನ ಸಮಾಜದ ವ್ಯಕ್ತಿಯಾಗಿ ಪರಿಪೂರ್ಣ ಚಾರಿತ್ರಿಕ ಭೌತಿಕವಾದ ದೃಷ್ಟಿಯಿಂದ ಆ ಇತಿಹಾಸವನ್ನು ದರ್ಶಿಸಿದ್ದೇನೆ. ರಚನೆಯಲ್ಲಿ ಆ ಮಾರ್ಗವನ್ನು ಆ ಜವಾಬ್ದಾರಿಯನ್ನು ಮರೆತರೆ ಸಮಾಜಕ್ಕೆ ಅಪಚಾರವೆಸಗಿದಂತಾಗುತ್ತದೆ. ಕಾದಂಬರಿ ಎಂದ ಮೇಲೆ ಅದಕ್ಕೆ ಕಲಾತ್ಮಕ ಅಂಶಗಳು ಇರಬೇಕು. ಆದ್ದರಿಂದಲೇ ಈ ಕಾದಂಬರಿ ಬಿರ್ಸಾನ ಮರಣದೊಂದಿಗೆ ಮುಗಿಯುತ್ತದೆ. ಆದರೆ ಯಾವುದೇ ಜೀವನ ಪ್ರವಾಹವಾಗಲೀ ಕ್ರಾಂತಿಯಾಗಲೀ ಪ್ರಗತಿಯಾಗಲೀ ಯಾವ ಕಾಲದಲ್ಲೂ ಯಾವ ದೇಶದಲ್ಲೂ ನಾಯಕನ ಮರಣದೊಂದಿಗೆ ನಿಲ್ಲಲಾರವು. ಕಾಲಕ್ರಮೇಣ ಅವರ ವಾರಸುದಾರರೇ ಸಮಾಜವನ್ನು ಕ್ರಾಂತಿಪಥದಲ್ಲಿ ನಡೆಸುತ್ತಾರೆ. ಕ್ರಾಂತಿಯು ಹೋರಾಟದಿಂದ ಅರಳುತ್ತದೆ. ಅದೇ ಈ ಕಾದಂಬರಿಯ ಕೊನೆಯ ಮಾತು.

ಅಗ್ನಿಗರ್ಭದಲ್ಲಿ ದಮನಿತರ ಹೀನ ಬದುಕು ಮತ್ತು ಅವರ ಹೋರಾಟದ ನೆಲೆ ರೂಪು ಪಡೆದಿದೆ. ಡಾರ್ಜಿಲಿಂಗ್ ಜಿಲ್ಲೆಯ ನಕ್ಸಲ್‌ಬಾರಿ, ಖಡಿಬಾರಿ ಪ್ರದೇಶಗಳ ಹೆಚ್ಚಿನ ಭಾಗಗಳಲ್ಲಿ ವಾಸಿಸುತ್ತಿರುವವರಲ್ಲಿ ಬಹುಪಾಲು ಜನರು ಭೂಹೀನ ಆದಿವಾಸಿ ಕೃಷಿಕರು. ಅವರು ಮೇದಿ, ಲೆಪ್ಚಾ, ಭೋಟಿಯಾ, ಸಂತಾಲಿ, ಬರಾಂವ್, ರಾಜವಂಶಿ, ಗೋರ್ಖಾ ಸಮುದಾಯಗಳಿಗೆ ಸೇರಿದ್ದಾರೆ. ಇಲ್ಲಿನ ಜಮೀನುದಾರರು ಅನೂಚಾನವಾಗಿ ನಡೆದು ಬಂದಿರುವ ಅಧಿಯಾ ವ್ಯವಸ್ಥೆಯ ಮೂಲಕ ಇಲ್ಲಿನ ಮೂಲನಿವಾಸಿಗಳ ಶೋಷಣೆ ಮಾಡುತ್ತಾ ಬಂದಿದ್ದಾರೆ. ಅಧಿಯಾ ವ್ಯವಸ್ಥೆಯಲ್ಲಿ ಜಮೀನುದಾರನು ಭೂಹೀನ ಕೃಷಿಕರಿಗೆ ತನ್ನದೇ ಆದ ಬೀಜ, ಬೇಸಾಯಕ್ಕೆ ಬೇಕಾದ ನೇಗಿಲು ಇತ್ಯಾದಿ, ಎತ್ತು ಊಟ ಅಥವಾ ಆಹಾರದ ದಿನಸಿ ಮತ್ತು ಒಂದಷ್ಟು ಹಣ ನೀಡಿ ತನ್ನ ಜಮೀನಿನಲ್ಲಿ ದುಡಿಸಿಕೊಳ್ಳುತ್ತಾನೆ. ಬೆಳೆ ಬಂದಾಗ ಬೆಳೆಯ ಸಿಂಹಪಾಲನ್ನು ತನ್ನ ಮನೆಗೆ ಸಾಗಿಸಿಕೊಳ್ಳುತ್ತಾನೆ. ಇದರ ವಿರುದ್ಧವಾಗಿಯೇ ಭೂಹೀನ ಕೃಷಿಕರ ಸಿಟ್ಟು, ಮತ್ತು ಹೋರಾಟ. ಫಸಲಿನ ಸಿಂಹಪಾಲನ್ನು ಕಬಳಿಸುವುದು, ತನ್ನಿಚ್ಛೆಯಂತೆ ಕೃಷಿಕರನ್ನು ತನ್ನ ಜಮೀನಿನಿಂದ ಹೊರ ಹಾಕುವುದು ಮತ್ತು ಭೂಮಿಯ ಬಗ್ಗೆ ಮನುಷ್ಯನಲ್ಲಿ ಇರುವ ಅದಿಮ ಹಸಿವು - ಈ ಹೋರಾಟಗಳಿಗೆ ಮೂಲ ಕಾರಣಗಳು. ಇಂತಹ ಹೋರಾಟಗಳಿಂದಾಗಿಯೇ ೧೯೫೪ರಲ್ಲಿ ಸರಕಾರವು ಎಸ್ಟೇಟ್ ಆಕ್ವಿಜಿಷನ್ ಆ್ಯಕ್ಟನ್ನು ಪಾಸು ಮಾಡಿತು. ಈ ಕಾನೂನಿನ

ಪ್ರಕಾರ ಯಾವೊಬ್ಬ ವ್ಯಕ್ತಿಯೂ ಸಹ ಇಪ್ಪತ್ತೈದು ಎಕರೆಗಳಿಗಿಂತ ಹೆಚ್ಚಿನ ಜಮೀನನ್ನು ಇರಿಸಿಕೊಳ್ಳುವಂತಿಲ್ಲ. ಈ ಕಾನೂನನ್ನು ಜಾರಿ ಮಾಡುವುದರ ಹಿನ್ನೆಲೆಯಲ್ಲಿ ಇದ್ದ ಒಳ್ಳೆಯ ಆಶಯವನ್ನು ಸಂಶಯಿಸುವಂತೆಯೇ ಇಲ್ಲ. ಆದರೆ ಅದರ ಅನುಷ್ಠಾನದ ಸಮಯದಲ್ಲಿ ಜಮೀನಿನ ಮಾಲೀಕರು ಅಲ್ಪ ಸ್ವಲ್ಪ ಜಮೀನನ್ನಷ್ಟೇ ಕಳೆದುಕೊಂಡರು. ಉಳಿದೆಲ್ಲ ಜಮೀನು ಅವರಲ್ಲೇ ಉಳಿಯಿತು. "ನನ್ನ ಕಥೆಗಳ ಹಿನ್ನೆಲೆಯೂ ಸಹ ಈ ನಕ್ಸಲ್ ಬಾರಿ ಘಟನೆಗಳ ಹಿನ್ನೆಲೆಯನ್ನು ನೀಡುವದೇ ಆಗಿದೆ. ನಮ್ಮ ದೇಶದಲ್ಲಿ ಈ ಕೆಲವು ದಶಕಗಳ ಇತಿಹಾಸದಲ್ಲಿ ಆ ಘಟನೆಗಳೇ ಹೆಚ್ಚು ಉಲ್ಲೇಖನೀಯ. ಪ್ರೇರಣಾಮೂಲ" ಎನ್ನುತ್ತಾರೆ ಲೇಖಕಿ.

ಸಾಲು ವೃಕ್ಷಗಳ ಕರೆ ಎಂಬ ಕಾದಂಬರಿ ೧೯೮೪ರಲ್ಲಿ ಪ್ರಕಟವಾಯಿತು. ಬುಡಕಟ್ಟು ಸಮುದಾಯಗಳವರ ವಿಶಿಷ್ಟ ಗುಣಗಳನ್ನು ಕಣ್ಣಿಗೆ ಕಟ್ಟಿದಂತೆ ನಿರೂಪಿಸಿರುವ ಕೃತಿ. ಬ್ರಿಟಿಷರ ನಿರ್ದಯ ಕುತಂತ್ರಗಳನ್ನು ಸಂಥಾಲರು ಹೇಗೆ ಎದುರಿಸಿದರು ಎಂಬ ಕತೆ ಇಲ್ಲಿದೆ. ಸಂಥಾಲರು ಸಾಮಾಜಿಕ ಸಂಬಂಧಗಳ ಎಳೆಗಳನ್ನು ಗಟ್ಟಿಯಾಗಿ ಬೆಸೆದುಕೊಂಡವರು. ಒಗ್ಗಟ್ಟು ಅವರ ಪ್ರಬಲ ಅಸ್ತ್ರ. ಅವರೇನೂ ವಿಶಾಲ ಪ್ರದೇಶಗಳನ್ನು ಆಕ್ರಮಿಸಿ ಹರಡಿಕೊಂಡವರಲ್ಲ. ಆದರೆ ಬ್ರಿಟಿಷರಿಗೆ ಮಾತ್ರ ಈ ಸಣ್ಣ ಗುಂಪೇ ಚಳ್ಳೇ ಹಣ್ಣು ತಿನ್ನಿಸಲು ಸಮರ್ಥವಾಯಿತು. ಸಂಥಾಲರ ಈ ಸಮುದಾಯ ಶಕ್ತಿಯನ್ನು ಪಹಾಡಿಯಾಗಳು ರೂಢಿಸಿಕೊಂಡವರಲ್ಲ. ಅವರಿಗೆ ಬ್ರಿಟಿಷರನ್ನು ಎದುರಿಸುವುದು ಸಾಧ್ಯವಾಗಲಿಲ್ಲ. ಈ ಸತ್ಯಗಳನ್ನು ಸಾಲುವೃಕ್ಷಗಳ ಕರೆಯಲ್ಲಿ ಮಹಾಶ್ವೇತಾ ಹಿಡಿದಿಡುತ್ತಾರೆ.

ಚರಿತ್ರೆಯಲ್ಲಿ ಬುಡಕಟ್ಟುಗಳ ಸ್ಥಾನವೇನು ಎಂಬುದನ್ನು ಕಾದಂಬರಿ ನಿರೂಪಿಸಿ ತೋರಿಸುತ್ತದೆ. ಬ್ರಿಟಿಷರ ವಿರುದ್ಧದ ಹೋರಾಟಗಳನ್ನು ಆರಂಭಿಸಿದವರೇ ಈ ಸಮುದಾಯಗಳ ಜನ ಎಂಬ ಅರಿವಿನೊಂದಿಗೆ ಚರಿತ್ರೆಯನ್ನು ಹೊಸದಾಗಿ ಬರೆಯುವದು ಅನಿವಾರ್ಯವಾಗುತ್ತದೆ. ಬುಡಕಟ್ಟು ಜನರೆಂದರೆ ಏನೊಂದೂ ತಿಳಿಯದ ಅಜ್ಞಾನಿಗಳು ಎಂದು ಭಾವಿಸಿದವರಿಗೆ ಸುಂದ್ರಾ ಮಾಂಝಿ, ತಿಲ್ಕಾ ಮಾಂಝಿಗಳಂಥಾ ವೀರ ನಾಯಕರನ್ನು ಕಂಡು ದಿಗ್ಭ್ರಮೆಯಾಗಬಹುದು. ಆದರೆ ನಮ್ಮೆಲ್ಲರಿಂದ ಮರೆಮಾಚಿಡಲಾದ ನಿಜವಾದ ಸತ್ಯ ಇದೇ ಆಗಿದೆ. ಈ ಸತ್ಯದ ಮುಖವನ್ನು ಶೋಧಿಸಲು ಮಹಾಶ್ವೇತಾ ದೇವಿಯವರಿಗೆ ನೆರವಾದದ್ದು ಧೂಳಿನಿಂದ ಆವೃತವಾದ ಕಡತಗಳಲ್ಲ. ವಿದ್ವಾಂಸರ ಕೃತಿಗಳೂ ಅಲ್ಲ. ಆ ಸಮುದಾಯಗಳವರೇ ರಕ್ಷಿಸಿಕೊಂಡು ಬಂದಿದ್ದ ಮೌಖಿಕ ಪರಂಪರೆಯು ಕಟ್ಟಿಕೊಟ್ಟ ಮಾಹಿತಿಗಳು! ಮನೆಯ ಅಜ್ಜಿಯರು ಮೌಖಿಕ ಪರಂಪರೆಯ ಮುಖ್ಯವಾಹಕವೆನಿಸುತ್ತಾರೆಂಬುದನ್ನು ಮಹಾಶ್ವೇತಾ ಅವರು ತಿಲ್ಕಾಮಾಂಝಿಯ ಅಜ್ಜಿ ಸೋಮಿಯ ಪಾತ್ರದಲ್ಲಿ ಕಂಡರಿಸಿದ್ದಾರೆ. ಹೊರಗಿನಿಂದ ಬಂದ ನಿರ್ಗತಿಕರಿಗೆ ಉಣ್ಣಲು ನೀಡಬೇಕೆಂದಾಗ ಅವರ ಮಕ್ಕಳ ಅಳುವನ್ನು ಹೇಗಾದರೂ ಸಮಾಧಾನಪಡಿಸಬೇಕೆಂದಾಗ ತಮ್ಮ ಸಮುದಾಯದ ಹಿತಾಸಕ್ತಿಗಳಿಗೆ ಅಪಾಯವೇ ಆಗಬಹುದಾದ ನಿರ್ಧಾರವನ್ನು ಆಕೆ ತೆಗೆದುಕೊಳ್ಳಬೇಕಾಗಿರುತ್ತದೆ. ಅಳುವ ಆ ಎಲ್ಲ ಮಕ್ಕಳಿಗೆ ತಮ್ಮ ಸೊಸೆಯ ಮೊಲೆಹಾಲು ಆಧಾರವಾಗಲಿ ಎಂಬ ಕಕ್ಕುಲತೆಯಿಂದ ಅಜ್ಜಿ ತೀರ್ಪನ್ನು ನೀಡಿದಾಗ ಮಾನವೀಯತೆಯ ಅಕಳಂಕ

ರೂಪದರ್ಶನವೇ ಆಗುತ್ತದೆ. ಸಾಲು ವೃಕ್ಷಗಳ ಕರೆ ಈ ಅಪರೂಪದ ವಸ್ತುವನ್ನು ಧರಿಸಿರುವಂಥದ್ದು.

ಅರಣ್ಯೇರ್ ಅಧಿಕಾರ ಯಾರದೀ ಕಾಡು ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದವಾಗಿದೆ. ಬುಡಕಟ್ಟು ಕ್ರಾಂತಿಯ ಅದ್ಭುತ ಕತೆ ಇದು. ಈ ಕ್ರಾಂತಿಯ ನಾಯಕ ಭಿರ್ಸಾ ಮುಂಡನಂತೂ ಚಿರಂತನವಾಗಿ ನಮ್ಮ ಮನಸ್ಸಿನಲ್ಲಿ ಉಳಿದು ಬಿಡುತ್ತಾನೆ. 'ಯಾರದೀ ಕಾಡು' ಎಂಬ ಪ್ರಶ್ನೆಯೇ ಅರಣ್ಯವಾಸಿಗಳ ಪರವಾಗಿ ನಿಂತು ನಾಗರಿಕ ಸಮಾಜದೊಂದಿಗೆ ವಾಗ್ವಾದಕ್ಕೆ ಇಳಿಯುವಂಥದ್ದು. ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸಿ ಓಡಿಸುತ್ತಲೇ ಇರುವ ಈ ಸಮಾಜವನ್ನು ನ್ಯಾಯದ ಕಟಕಟೆಯಲ್ಲಿ ನಿಲ್ಲಿಸಿರುವಂಥದ್ದು.

ನಾಗರಿಕರ ಪಾಲಿಗೆ ದಾನ, ಧರ್ಮ, ಮಾನವೀಯತೆಗಳೆಲ್ಲ ಸ್ವಾರ್ಥ ಸಾಧನೆಯ ಸಲಕರಣೆಗಳೇ ಆಗಿರುತ್ತವೆ ಎಂಬುದರ ನಿದರ್ಶನವಾಗಿ ಕ್ರೈಸ್ತ ಮಿಶನರಿಗಳ ನೆರವಿನ ಸ್ವರೂಪವನ್ನು ಬತ್ತಲಾಗಿಸಲಾಗಿದೆ. ಮುಂಡಾಗಳಿಗೆ ಅವರು ಧಾರಾಳವಾಗಿ ದಾನಗಳನ್ನು ನೀಡುತ್ತಾರೆ. ಆದರೆ ಅವರು ಕ್ರಿಶ್ಚಿಯನ್‌ರಾಗಿ ಮತಾಂತರಗೊಳ್ಳುತ್ತಾರೆಂದರೆ ಮಾತ್ರವೇ, ಈ ದಾನ ಜಾರಿಯಲ್ಲಿರುತ್ತದೆ. ಈ ತಂತ್ರದಲ್ಲಿ ಎರಡು ಲಾಭಗಳು ಅವರಿಗಿವೆ. ಮೊದಲಿನದು ಮತದ ಪ್ರಚಾರ ಮತ್ತು ವಿಸ್ತರಣೆ. ಇದಕ್ಕಿಂತಲೂ ಮುಖ್ಯವಾದ ಇನ್ನೊಂದು ಸಂಗತಿಯೆಂದರೆ ಬ್ರಿಟಿಶರ ಪ್ರಭುತ್ವಕ್ಕೇ ಸವಾಲೊಡ್ಡುವವರ ಕೈಬಾಯಿ ಕಟ್ಟಿಡುವದು.

ಭಿರ್ಸಾನಿಗಿದ್ದ ಪರಂಪರೆಯ ಜ್ಞಾನ, ಶಿಕ್ಷಣ, ಹೊರಲೋಕಕ್ಕೆ ತೆರೆದುಕೊಂಡ ಅನುಭವ ಗಳು ಇಂಥಾ ಕ್ರಾಂತಿಯನ್ನು ಹುಟ್ಟುಹಾಕಿ ಮುನ್ನಡೆಸುವ ಸಾಮರ್ಥ್ಯವನ್ನು ಅವನಲ್ಲಿ ತುಂಬಿದ್ದವು. ಶತ್ರುವನ್ನು ಎದುರಿಸುವ ಶಕ್ತಿ ವ್ಯವಸ್ಥಿತವಾದ ಸಂಘಟನೆಗೆ ಮಾತ್ರವೇ ಇರುತ್ತದೆ. ಸಮುದಾಯವನ್ನು ಹೀಗೆ ಒಗ್ಗೂಡಿಸುವ ಶಕ್ತಿ ಹಾಗೂ ಹೊಣೆಗಾರಿಕೆ ನಾಯಕನದೇ ಆಗಿರುತ್ತದೆ. ಭಿರ್ಸಾ ಇಂಥಾ ಸಮರ್ಥ ನಾಯಕನಾಗಿ ಬೆಳೆಯುತ್ತಾನೆ. ಹೋರಾಡುತ್ತಾನೆ.

ಭಿರ್ಸಾ ಮುಂಡಾ ತಾನು ಕಟ್ಟಿದ ಹೋರಾಟವು ವಾಸ್ತವದಲ್ಲಿ ಸಫಲವಾಯಿತೇ ಎಂಬುದನ್ನು ಕಾಣಲು ಬದುಕಲಾರದೇ ಹೋದ. ಆದರೆ ಅವನ ಸಾವೇನೂ ನಿಷ್ಫಲವಾಗಲಿಲ್ಲ. ಅವನ ಅನುಯಾಯಿಗಳೇ ಆದ ಸಮುದಾಯದವರು ಅವನ ಪ್ರತಿಜ್ಞೆಗಳನ್ನು ಪೂರೈಸುವ ಪ್ರಮಾಣಕ್ಕೆ ಬದ್ಧರಾಗಿ ಮುನ್ನಡೆದರು. ಹೊಸ ಪ್ರಾರ್ಥನೆಗಳನ್ನು ರಚಿಸಿ ಹಾಡಿದರು. ಭಿರ್ಸಾನನ್ನು ಮೌಖಿಕ ಪರಂಪರೆಯಲ್ಲಿ ಅಜರಾಮರವಾಗಿ ದಾಖಲುಗೊಳಿಸಿದರು. ಇಷ್ಟರಿಂದಲೇ ಸರ್ಕಾರದ ಅಧಿಕಾರಿಗಳು ಮಿಷನರಿಗಳು ಹಾಗೂ ಜಮೀನುದಾರರು ಬೆಚ್ಚಿ, ಬೆದರಿ ನ್ಯಾಯದ ಹಾದಿಗೆ ಬಂದು ಬಿಟ್ಟರೆಂದು ಸಾರಿದರೆ, ಅದು ಕೇವಲ ಸಿನಿಮೀಯವಾದೀತಷ್ಟೇ. ಶೋಷಣೆ ನಿರಂತರವಾಗಿ ಅನಂತ ವೈವಿಧ್ಯಗಳಲ್ಲಿ ಮುಂದುವರಿದೇ ಬಂದಿದೆ ಎಂಬುದೇ ವಾಸ್ತವ. ಆದರೂ ಸಮುದಾಯ ಶಕ್ತಿಗೂ ಒಂದು ಅಸ್ತಿತ್ವವಿದೆ. ಶೋಷಣೆಯು ಕೂಡಾ ತೀರ ಲಂಗು ಲಗಾಮಿಲ್ಲದಂತೆ ನಡೆಯಲಾರದು. ಆಗೀಗಲಾದರೂ ಸಮುದಾಯ ಶಕ್ತಿಯ ಎದುರು ಅದು ನಡುಗಬೇಕಾಗುತ್ತದೆ

ಎಂಬುದು ಕೂಡ ಅಷ್ಟೇ ದೊಡ್ಡ ಸತ್ಯ. ಈ ಕಾದಂಬರಿಯ ಸಾಹಿತ್ಯ ಚರ್ಚೆಯನ್ನು ಇನ್ನಿತರ ಆಯಾಮಗಳಿಗೂ ವಿಸ್ತರಿಸಿ ಬೆಳೆಸುವುದು ಸಾಧ್ಯ. ಆದರೂ ಮಹಾಶ್ವೇತಾ ಅವರ ಸಾಹಿತ್ಯವು ಸಮುದಾಯ ಚಳುವಳಿಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿರುವ ಸ್ವರೂಪವನ್ನು ಗ್ರಹಿಸಲು ಈ ಒಂದು ಸಣ್ಣ ವಿಶ್ಲೇಷಣೆ ಕೂಡ ಎಷ್ಟೋ ನೆರವಾದೀತೆಂದು ತೋರುತ್ತದೆ. ನಮ್ಮ ಸ್ವಾತಂತ್ರ್ಯ ಸಂಗ್ರಾಮವೆಂಬುದು ಬ್ರಿಟಿಶರ ವಿರುದ್ಧದ ಒಂದು ಪ್ರತ್ಯೇಕ ಘಟನೆಯಲ್ಲ. ಅದು ಅಧಿಕಾರಶಾಹಿಯ ವಿರುದ್ಧ ಜನಸಮುದಾಯವು ನಿರಂತರವಾಗಿ ನಡೆಸುತ್ತಲೇ ಹೋಗಬೇಕಾದ ಒಂದು ಚಳುವಳಿ ಎನ್ನುವ ಸಂದೇಶ ತುಂಬಾ ಗಂಭೀರವಾದ ಒಂದು ವಾಸ್ತವ.

ಭಿರ್ಸಾ ಹುಟ್ಟು ಹಾಕಿದ ಚಳುವಳಿಯನ್ನು ಸಮುದಾಯವು ಅವನ ನಂತರವೂ ಮುಂದುವರಿಸಿಕೊಂಡ ಹೋದ ಕತೆಯನ್ನು ಮಹಾಶ್ವೇತಾ ಅವರು **ಛೋಟಿ ಮುಂಡಾ ಔರ್ ಎಸ್ ಕಾ ಲೇರ್** ಎಂಬ ಕಾದಂಬರಿಯಲ್ಲಿ ಬೆಳೆಸಿದ್ದಾರೆ. ಈ ಕೃತಿಗೆ ಸಾಹಿತ್ಯಕ ಮಹತ್ವವಿದೆಯೆಂದು ವಿಮರ್ಶಕರು ಒಪ್ಪುವರೋ ಇಲ್ಲವೋ ತಿಳಿಯದು. ಆದರೆ ಹೆಚ್ಚೂ ಕಡಿಮೆ ವಸಾಹತು ಆಡಳಿತದ ಕೊನೆಯವರೆಗೆ ಎಪ್ಪತ್ತು ವರ್ಷಗಳಷ್ಟು ವಿಸ್ತಾರವಾಗಿ ಹರಡಿರುವ ಕಾಲವ್ಯಾಪ್ತಿಯನ್ನು ಹೊಂದಿರುವ ಈ ಕತೆಯ ಚಾರಿತ್ರಿಕ ಮಹತ್ವ ಅಮೂಲ್ಯವಾದುದು. ಬುಡಕಟ್ಟು ಲೋಕವು ನಾಗರಿಕ ಸಮಾಜದಿಂದಾಗಿ ಪಡುತ್ತಿರುವ ಬವಣೆಗಳಿಗೆ ಕೊನೆಯೇ ಇದ್ದಂತಿಲ್ಲ. ವಸಾಹತು ಕಾಲ ಮುಗಿಯಿತೆಂಬುದು ದೇಶದ ಇನ್ನಿತರರಿಗೆ ನಿಜವಿರಬಹುದು. ಆದರೆ ಬುಡಕಟ್ಟುಗಳವರನ್ನು ಶೋಷಿಸುವ ಪ್ರವೃತ್ತಿಯಲ್ಲಿ ಸ್ವತಂತ್ರ ಭಾರತದ ಸರ್ಕಾರ ಬ್ರಿಟಿಷರ ಹಾದಿಯನ್ನೇ ಮುಂದುವರಿಸಿದಂತೆ ತೋರುತ್ತದೆ. ಮಹಾಶ್ವೇತಾ ಅವರು ಈ ಕಟುಸತ್ಯವನ್ನು ಅನುಮಾನಗಳಿಲ್ಲದೇ ಕಾಣಿಸಿದ್ದಾರೆ. ಬ್ರಿಟಿಷರ ಪ್ರವೃತ್ತಿಯನ್ನು ಚರಿತ್ರೆಯ ನೆನಪಿನಾಳಕ್ಕೇ ಚಲಿಸಿ ತೋರಿಸಿದ್ದಾರಾದರೆ ನಮ್ಮದೇ ಸ್ವತಂತ್ರ ಸರಕಾರದ ಪ್ರವೃತ್ತಿಯ ವರ್ತಮಾನದ ಕಟು ವಾಸ್ತವಗಳನ್ನು ನೇರವಾಗಿ ದಾಖಲಿಸಿದ್ದಾರೆ.

- ಮಹಾಶ್ವೇತಾ ದೇವಿಯವರ ಎಲ್ಲ ಕೃತಿಗಳನ್ನೂ ಕುರಿತು ಇಲ್ಲಿ ಚರ್ಚಿಸಲಾಗಿಲ್ಲ. ಕೆಲವನ್ನು ಮಾತ್ರ ಕೈಗೆತ್ತಿಕೊಂಡಿದ್ದೇನೆ. ಅನೇಕ ಕೃತಿಗಳು ಓದಲು ಲಭ್ಯವಾಗಿಲ್ಲ. ಆದರೆ ಎಚ್.ಎಸ್. ಶ್ರೀಮತಿ ಅವರ 'ಮಹಾಶ್ವೇತಾದೇವಿ' ನನಗೆ ಬಹಳಷ್ಟು ಸರಕನ್ನು ಒದಗಿಸಿದೆ. ಹೆಚ್ಚಿನ ವಿವರಗಳನ್ನು ನಾನು ಇಲ್ಲಿಂದಲೇ ಬಳಸಿಕೊಂಡಿದ್ದೆನೆಂದರೂ ತಪ್ಪಾಗಲಾರದು. ಅದಕ್ಕಾಗಿ ಎಚ್. ಎಸ್. ಶ್ರೀಮತಿ ಅವರಿಗೆ ನಾನು ಋಣಿಯಾಗಿದ್ದೇನೆ.
- ಗೆಳತಿ ಸಬಿಹಾ ಈ ಕುರಿತು ಹಲವಾರು ಪುಸ್ತಕಗಳನ್ನು ಕಳಿಸಿ ಸಹಕರಿಸಿದ್ದಾರೆ ಅವರ ಸ್ನೇಹಕ್ಕೆ ನಮನಗಳು.
- ಕರ್ನಾಟಕ ಸಾಹಿತ್ಯ ಅಕಾಡೆಮಿಯು ಇಂಥದೊಂದು ಅಪರೂಪವಾದ ಮತ್ತು ಅರ್ಥಪೂರ್ಣವಾದ ಚಿಂತನ-ಮಂಥನಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಕಾಡೆಮಿಗೆ ನನ್ನ ಪ್ರಣಾಮಗಳು.

## ಮಹಾಶ್ವೇತಾದೇವಿಯವರ ಜೀವನದ ಮುಖ್ಯ ವಿವರಗಳು

| | |
|---|---|
| ಜನನ | ಢಾಕಾದಲ್ಲಿ ಜನವರಿ ೧೪, ೧೯೨೬ |
| ತಂದೆ | ಮನಿಶ್ ಘಟಕ್, ಕವಿ |
| ತಾಯಿ | ಧಾರಿಣೀದೇವಿ, ಸಾಮಾಜಿಕ ಕಾರ್ಯಕರ್ತೆ |
| ಒಡಹುಟ್ಟಿದವರು | ಹತ್ತುಮಂದಿ. ಇವರಲ್ಲಿ ಒಬ್ಬ ತಮ್ಮ ಭಾರತದ ಪ್ರಖ್ಯಾತ ಚಲನಚಿತ್ರ ನಿರ್ದೇಶಕ ರಿತ್ವಿಕ್ ಘಟಕ್ |
| ಪತಿ | (ಮೊದಲ ವಿವಾಹ) ಬಿಜೊನ್ ಭಟ್ಟಾಚಾರ್ಯ ನಟ, ನಾಟಕಕಾರ<br>(ಎರಡನೆಯ ವಿವಾಹ) ಅಸಿತ್ ಗುಪ್ತಾ ಸಾಹಿತಿ |
| ಮಗ | ನವಾರುಣ ಭಟ್ಟಾಚಾರ್ಯ, ಸಾಹಿತಿ |
| ವಿದ್ಯಾಭ್ಯಾಸ | ಬಾಂಗ್ಲಾದೇಶದ ರಾಜ ಶಾಯಿಯಲ್ಲಿ ಮೆಟ್ರಿಕ್ ೧೯೪೨<br>ಶಾಂತಿನಿಕೇತನ, ವಿಶ್ವಭಾರತಿಯಲ್ಲಿ ಎಮ್.ಎ. (ಇಂಗ್ಲಿಶ್) ೧೯೪೪ |
| ಅಧ್ಯಾಪಕರಾಗಿ ವೃತ್ತಿ | ಶಾಲೆಗಳಲ್ಲಿ ೧೯೪೮, ಉಪನ್ಯಾಸಕಿಯಾಗಿ ೧೯೬೪ರಿಂದ, ಕೊಲ್ಕೊತ್ತಾದ ವಿಜಯ ಘರ್ ಕಾಲೇಜಿನಲ್ಲಿ |
| ೧೯೮೪ರಲ್ಲಿ ಸ್ವಯಂ ನಿವೃತ್ತಿ | |
| ವೃತ್ತಿ ಬರೆಹಗಾರ್ತಿ | ೧೯೫೬ರಿಂದ ಸಮುದಾಯ ಚಳುವಳಿಗಳನ್ನು ನಡೆಸುತ್ತಾ ಆಕೆ ಸ್ಥಾಪಿಸಿದ ಸಂಸ್ಥೆಗಳು<br>೧. ವೆಸ್ಟ್ ಬೆಂಗಾಲ್ ಒರೆಯಾನ್ ವೆಲ್‌ಫೇರ್ ಸೊಸೈಟಿ<br>೨. ಆಲ್ ಇಂಡಿಯಾ ವಂದನಾ ಲಿಬರೇಶನ್ ಮೋರ್ಚಾ<br>೩. ವೆಸ್ಟ್ ಬೆಂಗಾಲ್ ಖೇಡಿಯಾ – ಶಬರ್ ವೆಲ್‌ಫೇರ್ ಸೊಸೈಟಿ<br>೪. ಅಬಾರಿಜಿನಲ್ ಯುನೈಟೆಡ್ ಅಸೋಸಿಯೇಶನ್ |

## ಮಹಾಶ್ವೇತಾ ಅವರಿಗೆ ಸಂದ ಪ್ರಶಸ್ತಿಗಳು

| | | |
|---|---|---|
| • ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | – | ೧೯೭೯ |
| • ಪದ್ಮಶ್ರೀ | – | ೧೯೮೬ |
| • ಜ್ಞಾನಪೀಠ ಪ್ರಶಸ್ತಿ | – | ೧೯೯೭ |
| • ಮ್ಯಾಗ್ಸೇಸೆ ಪ್ರಶಸ್ತಿ | – | ೧೯೯೭ |
| • ದೇಶಿಕೋತ್ತಮ (ಶಾಂತಿನಿಕೇತನ) | – | ೧೯೯೯ |
| • ಅಫೀಸಿಯರ್ ದ ಆರ್ಟ್ಸ್ ದ ಲೆತ್ರಿಯಾ (ಫ್ರಾನ್ಸ್ ದೇಶವು ನೀಡುವ ಅತ್ಯುನ್ನತ ಪ್ರಶಸ್ತಿ) | – | ೨೦೦೪ |

**ಸ್ಥಳೀಯ ಪ್ರಶಸ್ತಿಗಳು:**

| | | |
|---|---|---|
| • ಲೀಲಾ ಪ್ರಶಸ್ತಿ | – | ೧೯೭೮ |
| • ಶರಶ್ಚಂದ್ರ ಪ್ರಶಸ್ತಿ | – | ೧೯೬೭ |
| • ಅಮೃತ ಬಜಾರ್ ಪತ್ರಿಕಾ ಪ್ರಶಸ್ತಿ | – | ೧೯೬೭ |
| • ತಾರಾಶಂಕರ ಪ್ರಶಸ್ತಿ | – | ೧೯೭೭ |
| • ಜ್ಯೋತಿಭೂಷಣ ಸ್ಮರಣ ಪ್ರಶಸ್ತಿ | – | ೧೯೯೦ |

# ಅಮೃತಾ ಪ್ರೀತಮ್ - ವ್ಯಕ್ತಿ - ಅಭಿವ್ಯಕ್ತಿ

✍ ಡಾ. ಎಲ್.ಸಿ. ಸುಮಿತ್ರಾ

'ಅಮೃತ್ ಲೆಹರಾನ್' ಅಂದರೆ ಅಮೃತದ ಅಲೆಗಳು. ಅದು ಅಮೃತಾ ಪ್ರೀತಂ ತಮ್ಮ ಹದಿನೇಳನೇ ವಯಸ್ಸಿನಲ್ಲಿ ಪ್ರಕಟಿಸಿದ ಮೊದಲ ಕವನ ಸಂಕಲನದ ಹೆಸರು. ಆಧುನಿಕ ಭಾರತೀಯ ಸಾಹಿತ್ಯ ಸಾಗರಕ್ಕೆ ಅಮೃತದ ಅಲೆಗಳನ್ನು ತಂದವರು ಅಮೃತಾ ಪ್ರೀತಂ.

೧೯೧೯ರಲ್ಲಿ ಪಶ್ಚಿಮ ಪಂಜಾಬಿನ ಗುಜರನ್‌ವಾಲಾದಲ್ಲಿ ಜನಿಸಿದ ಅಮೃತಾಕೌರ್ ಚಿಕ್ಕವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ತಂದೆ ಲೇಖಕ, ಕವಿ, ಕರ್ತಾರ್ ಸಿಂಗ್ ಹಿತಕಾರಿಯವರ ಜೊತೆ ಲಾಹೋರ್‌ಗೆ ಬಂದರು.

ಸ್ವಾತಂತ್ರ್ಯಪೂರ್ವ ಭಾರತದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂಘರ್ಷಗಳು ಅಮೃತಾ ಅವರ ವ್ಯಕ್ತಿತ್ವ ರೂಪಿಸಿವೆ. ನಾಲ್ಕನೆಯ ವಯಸ್ಸಿನಲ್ಲಿ ನಿಶ್ಚಯವಾದ ಮದುವೆ ಹದಿನೇಳನೇ ವಯಸ್ಸಿನಲ್ಲಿ ನಡೆಯಿತು. ಹದಿನೇಳನೇ ವಯಸ್ಸಿನಲ್ಲಿ ಸಿಖ್ ಧರ್ಮಗುರುಗಳ ಕುರಿತು ತಮ್ಮ ಮೊದಲನೆಯ ಕೃತಿ ರಚಿಸಿದ ಅಮೃತಾ ತಮ್ಮ ಎಂಭತ್ತಾರು ವರ್ಷಗಳ ತುಂಬುಬಾಳಿನಲ್ಲಿ ಎಪ್ಪತ್ತೈದಕ್ಕೂ ಹೆಚ್ಚು ಕೃತಿ ರಚನೆ ಮಾಡಿದ್ದಾರೆ. ಇಪ್ಪತ್ತೆಂಟು ಕಾದಂಬರಿಗಳು, ಹದಿನೆಂಟು ಕವನ ಸಂಗ್ರಹಗಳು, ಐದು ಕಥಾಸಂಗ್ರಹಗಳು, ಆತ್ಮಚರಿತ್ರೆಯ ಮೂರು ಕೃತಿಗಳು. (ರಸೀದಿ ಟಿಕೆಟ್, ಅಕ್ಷರೋಂಕಿ ಛಾಯಾ, The other Dimension), ಪ್ರಬಂಧಗಳು, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆಗಳು ಇವುಗಳ ಜೊತೆ ನಾಗಮಣಿ ಎಂಬ ವಿಶಿಷ್ಟ ಮಾಸಪತ್ರಿಕೆಯನ್ನು ನಾಲ್ಕು ದಶಕಗಳ ಕಾಲ ಪ್ರಕಟಿಸಿದರು. ದಿಟ್ಟ, ಧೈರ್ಯಶಾಲಿ, ಅಪರಿಮಿತ ಆತ್ಮವಿಶ್ವಾಸದ,

ತುಂಬು ಜೀವನ ಪ್ರೀತಿಯ ಅಮೃತಾ ಕೊನೆಯವರೆಗೂ ಈ ಜೀವನೋತ್ಸಾಹವನ್ನು ಉಳಿಸಿಕೊಂಡಿದ್ದರು. ಅವರ ಪ್ರಸಿದ್ಧ ಕಾದಂಬರಿ ಪಿಂಜರ್ ಆಧರಿಸಿ ತಯಾರಾದ ಹಿಂದಿ ಚಲನಚಿತ್ರಕ್ಕೆ ಅವರು ತಮ್ಮ ಎಂಬತ್ತೆರಡನೇ ವಯಸ್ಸಿನಲ್ಲಿ ಎರಡು ಹಾಡುಗಳನ್ನು ಬರೆದರು.

ಸಾಮಾಜಿಕ ಚಿಂತನೆಯನ್ನು, ಮಾನವತಾವಾದವನ್ನು ತೀವ್ರ ಸಂವೇದನಾಶೀಲತೆಯಿಂದ ಅಭಿವ್ಯಕ್ತಿಸಿದ ಅವರ ಕಾವ್ಯ ಕಾದಂಬರಿಗಳು ಅವರಿಗೆ ಅಪಾರ ಜನಮನ್ನಣೆ ಗಳಿಸಿಕೊಟ್ಟಿವು. ಭಾರತದ ಇಪ್ಪತ್ತೊಂದು ಭಾಷೆಗಳಿಗೇ ಅಲ್ಲದೆ ಇಂಗ್ಲಿಷ್, ಫ್ರೆಂಚ್, ರಷ್ಯನ್, ಸ್ಪ್ಯಾನಿಷ್, ಬಲ್ಗೇರಿಯನ್, ಪೋಲಿಷ್, ಅಲ್ಬೇನಿಯನ್ ಭಾಷೆಗಳಿಗ ಅವರ ಕೃತಿಗಳು ಅನುವಾದಗೊಂಡಿವೆ.

"ಮನುಷ್ಯ ಮನುಷ್ಯರ ನಡುವೆ ಜಾತಿ, ಧರ್ಮಗಳ ಅಡ್ಡಗೋಡೆಗಳು ಯಾಕಿವೆ?" ಎಂಬ ಪ್ರಶ್ನೆಯನ್ನು ಅಮೃತಾ ಚಿಕ್ಕ ವಯಸ್ಸಿನಲ್ಲೇ ಚಿಂತಿಸಿದ್ದರು. ಒಂದು ಸಲ ತಮ್ಮ ತಾಯಿಯ ಜೊತೆ ಹತ್ತು ವರ್ಷದ ಅಮೃತಾ ರೈಲಿನಲ್ಲಿ ಹೋಗುವಾಗ ನಿಲ್ದಾಣಗಳಲ್ಲಿ ಕೇಳಿಸಿದ ಒಂದು ಕೂಗು...... ' ಹಿಂದೂಗಳಿಗೆ ನೀರು, ಮುಸಲ್ಮಾನರಿಗೆ ನೀರು.....' ನಾನು ಅಮ್ಮನಿಗೆ ಕೇಳಿದೆ 'ನೀರಿನಲ್ಲೂ ಹಿಂದೂ - ಮುಸ್ಲಿಂ ಎಂಬ ಭೇದ ಇರುತ್ತದೆಯೇ? - (ನುಡಿಯ ನೆರಳು, ೪)

ಮನೆಗೆ ಬರುವ, ತಂದೆಯ ಮುಸ್ಲಿಂ ಸ್ನೇಹಿತರಿಗಾಗಿ ಅಜ್ಜಿ ಮೂರು ಲೋಟಾಗಳನ್ನು ಪ್ರತ್ಯೇಕವಾಗಿರಿಸಿದ್ದರು. ಪುಟ್ಟ ಅಮೃತಾ ತಾನೂ ಅದೇ ಲೋಟಗಳಲ್ಲಿ ಕುಡಿಯುವುದಾಗಿ ಹಠಮಾಡಿ ಲೋಟಗಳನ್ನು ಪ್ರತ್ಯೇಕವಾಗಿರಿಸುವುದನ್ನು ತಪ್ಪಿಸಿದರು. ಚಿಕ್ಕ ಹುಡುಗಿಯಾಗಿದ್ದಾಗಲೇ ಮನುಷ್ಯರ ನಡುವಿನ ಈ ಭೇದಭಾವ ಸರಿಯಲ್ಲ ಎಂಬುದು ಮನಸ್ಸಿಗೆ ನಾಟಿತು. ದೇಶ ವಿಭಜನೆಯ ಸಂದರ್ಭದ ನೋವು, ದುಃಖ, ಹಿಂಸೆ, ಅನಾಥ ಪ್ರಜ್ಞೆಗಳು ಈ ಕುರಿತು ತೀವ್ರವಾಗಿ ಅಭಿವ್ಯಕ್ತಿಸುವಂತೆ ಮಾಡಿದವು.

ವಿಮರ್ಶಕ, ಪಂಜಾಬಿ ಲೇಖಕ ಕರ್ತಾರ ಸಿಂಗ್ ದುಗ್ಗಲ್ ಅವರು ಅಮೃತಾಪ್ರೀತಂ ಬರವಣಿಗೆ ಕುರಿತು "Amrita is a sensitive writer who has highlighted the problems of Indian women in her poetry and fiction. Her poetic expression lends charm to her prose. She knows the craft of weaving a plot and creating motivated characters" ಎಂದು ಬರೆದಿದ್ದಾರೆ. ಅಮೃತಾ ಪ್ರೀತಂ ಅವರ ಗದ್ಯ ಕೃತಿಗಳು ಗಮನಾರ್ಹವಾಗಿದ್ದರೂ ಅವರು ಭಾರತದಲ್ಲೂ ಹೊರದೇಶಗಳಲ್ಲೂ ತಮ್ಮ ಕವಿತೆಗಳಿಂದಾಗಿಯೇ ಜನಮನ್ನಣೆ ಗಳಿಸಿದರು. ಅಮೃತಾ ಅವರ ಕಾವ್ಯ ಕುರಿತು ಸುಮಿತ್ರಾ ನಂದನ್ ಪಂತ್ ಅವರು 'ಅಮೃತಾ ಪ್ರೀತಂ ಕವನಗಳ ಆಸ್ವಾದನೆ, ಹೃದಯದಲ್ಲಿ ಇರಿತದ ಗಾಯ ಹೊತ್ತು ಪ್ರೀತಿ ಹಾಗೂ ಸೌಂದರ್ಯದ ನೆಳಲು - ಬೆಳಕಿನ ಬೀದಿಗಳಲ್ಲಿ ಸಂಚರಿಸಿದಂತೆ" ಎಂದಿದ್ದಾರೆ (ರಸೀದಿ ಟಿಕೆಟ್, ೯೨). ಅಮೃತಾ "ತಾವು ಯಾವ ಜಾತಿಗೂ ಸೇರಿದವರಲ್ಲವೆಂದು ಹೇಳುತ್ತಾ ಪ್ರಾಚೀನ ಕಾಲದಲ್ಲಿ ಜೀವನಪೂರ್ತಿ ಜ್ಞಾನಾರ್ಜನೆಗಾಗಿ ಮೀಸಲಿಡುವವರನ್ನು ಚರಕ ಎಂದು ಕರೆಯುತ್ತಿದ್ದರು. ನಾನು ಆ ಜಾತಿಯವಳು. ನನ್ನ ಎರಡೂ ಕೈಗಳಿಂದ ಯಾವುದನ್ನು ಪಡೆಯುತ್ತಾ ಹೋದೆನೋ ಸಾವಿರ ಕೈಗಳಿಂದ ನಾನು ಹಂಚುತ್ತಾ ನಡೆದೆ"

'ಮಾನವ ಮನಸ್ಸಿನಲ್ಲಿ ನಿದ್ರಿಸಿರುವ ದೇವತೆಗಳನ್ನು ಎಚ್ಚರಿಸುವುದಕ್ಕಾಗಿಯೇ ನಾನು ಜೀವನ ಪೂರ್ತಿ ಯೋಚಿಸಿ ಬರೆದೆ. (೧೯೮೩ - ಜ್ಞಾನಪೀಠದ ಸನ್ಮಾನದಲ್ಲಿ ಆಡಿದ ಮಾತುಗಳು: "ಗೆಳೆಯರೇ ನಾನು ತೀರ ಚಿಕ್ಕವಳಾಗಿದ್ದೆ, ಆಗ ಅಜ್ಜಿ ಹೇಳುತ್ತಿದ್ದಳು. ಅದೇ ನೀ ಹುಟ್ಟಿದ್ದು ಮಳೆಗಾಲದ ಭಾದ್ರಪದ ೧೫ನೇ ದಿನ. ಅದು ದೇವತೆಗಳು ಮಲಗುವ ಕಾಲ, ಶಿಶಿರ ವಸಂತ ಮತ್ತು ಗ್ರೀಷ್ಮ ಈ ಮೂರು ಋತುಗಳು ದೇವತೆಗಳಿಗೆ ಹಗಲು. ಆಗ ಅವರು ಎಚ್ಚರವಾಗಿರುತ್ತಾರೆ. ವರ್ಷಾ ಶರದ ಹೇಮಂತ ಈ ಮೂರು ಋತುಗಳು ರಾತ್ರಿಯಾಗಿರುತ್ತವೆ. ಆಗ ದೇವತೆಗಳು ನಿದ್ರೆ ಮಾಡುತ್ತಾರೆ. ನನಗನ್ನಿಸುತ್ತದೆ ನಾನು ನನ್ನ ಜೀವನದುದ್ದ ಯೋಚಿಸಿದ್ದು ಬರೆದದ್ದು ಆ ದೇವತೆಗಳನ್ನು ಎಚ್ಚರಿಸುವುದಕ್ಕಾಗಿ. ಮಾನವನ ಮನಸ್ಸಿನಲ್ಲಿ ಮಲಗಿರುವ ಅವರನ್ನು ಎಚ್ಚರಿಸುವುದಕ್ಕಾಗಿಯೇ ಎಂದುಕೊಳ್ಳುತ್ತೇನೆ. (ಪುಟ ೬೯ - ನುಡಿಯ ನೆರಳು)

ದೇಶವಿಭಜನೆಯ ಕಾಲದಲ್ಲಿ ಅಮೃತಾ ಅನುಭವಿಸಿದ ನೋವು ಅವರ ಹಲವು ಕವಿತೆ, ಕತೆ, ಕಾದಂಬರಿಗಳಿಗೆ ವಸ್ತುವಾಯಿತು. ವಿಭಜನೆಯ ನೋವು, ದುಃಖ, ಸಂಕಟದ ಸಮಯದಲ್ಲಿ ತಾತ್ಕಾಲಿಕವಾಗಿ ಡೆಹ್ರಾಡೂನ್‌ನಲ್ಲಿ ಆಶ್ರಯ ಪಡೆದಿದ್ದ ಅಮೃತಾ, ವಸತಿ ಹುಡುಕಲು ದೆಹಲಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಸಂತ್ರಸ್ತರ ದುಃಖವನ್ನು ನೋಡಿ ಅವರಿಗೆ ಚಾರಣ ಕವಿ ವಾರಿಸ್‌ಷಾನ ಹೀರಾ ರಾಂಜ್ ಕವಿತೆಯ ನೆನಪಾಗಿ ವಾರಿಸ್ ಶಾಹ್ ಸೆ ಕವಿತೆ ಬರೆದರು. ಭಾರತ ಪಾಕಿಸ್ತಾನಗಳೇ ಅಲ್ಲದೆ ವಿದೇಶಗಳಲ್ಲೂ ಈ ಕವಿತೆಯಿಂದ ಅಮೃತಾ ಪ್ರೀತಂ ಗುರುತಿಸಲ್ಪಟ್ಟರು.

"ಎದ್ದೇಳು ವಾರಿಸ್ ಶಾಹ್ ಸಮಾಧಿಯ ಯಾವ
ಮೂಲೆಯಿಂದಲಾದರೂ ಮಾತಾಡು
ಪ್ರೇಮಗಾಥೆಯ ಹೊಸ ಪುಟಗಳನ್ನು ತೆರೆದು ಹಾಡು
ಪಂಜಾಬಿನ ಪುತ್ರಿಯೊಬ್ಬಳು ಅತ್ತಳಂದು
ನೀನವಳ ದುಃಖದ ಸುದೀರ್ಘ ಕತೆ ಬರೆದೆ
ಇಂದಾದರೋ ಲಕ್ಷಾಂತರ ಪುತ್ರಿಯರು ಅಳುತ್ತಿದ್ದಾರೆ
ನಿನ್ನೊಡನೆ ಅವರು ರೋದಿಸಿ ಹೇಳುತ್ತಿದ್ದಾರೆ.

'ನೊಂದವರ ನೋವನ್ನು ನೆನೆಯಬಲ್ಲವನೇ ಎದ್ದೇಳು
ನಿನ್ನ ಪಂಜಾಬ ಹೇಗಿದೆ ಈಗ ಬಂದು ನೋಡು
ಪ್ರತಿಯೊಂದು ಲತೆಗಳಲೂ ಶವಗಳು ನೇತಾಡುತ್ತಿವೆ ಈಗ
ಚಿನಾಬ ನದಿಯಲ್ಲಿ ನೀರಲ್ಲ ರಕ್ತ ಹರಿಯುತ್ತಿದೆ ಈಗ....
ಏಳು ಎದ್ದೇಳು ವಾರಿಸ್ ಸಮಾಧಿಯಿಂದಲೇ ಉಸಿರು
ನಿನ್ನೊಡನೆ ಹೇಳುತ್ತಿರುವೆ ಒಲವಿನ ಹೊಸ ಪುಟಗಳನ್ನು ತೆರೆದು ತೋರಿಸು
(ನುಡಿಯ ನೆರಳು; ಶೈಲಜಾ ಉಡಚಣ, ೫)

ಅಮೃತಾ ತಮ್ಮ ಕವಿತೆ ಕುರಿತು ಹೀಗೆ ಹೇಳುತ್ತಾರೆ.

"ಸ್ವಂತದ ನೋವು ಇತರರ ನೋವನ್ನು ನೋಡುವ ದೃಷ್ಟಿಯನ್ನು ನೀಡುತ್ತದೆ. ಆಕೆ ತನ್ನ ನೋವಿನಲ್ಲಿ ಸಮಗ್ರ ಮಾನವ ಕುಲದ ನೋವನ್ನು ಶಾಮೀಲು ಮಾಡಿಕೊಂಡಳು. ಹಾಗೂ ತನ್ನ ನೋವನ್ನಷ್ಟೇ ಅಲ್ಲ ಜಗತ್ತಿನ ನೋವನ್ನೊಳಗೊಂಡ ಕವನಗಳನ್ನು ಬರೆದಳು. (ರಸೀದಿ ಟಿಕೆಟ್, ೪೫)

ಪಾಕಿಸ್ತಾನದಲ್ಲಿ ಉಳಿದುಹೋದ ಸ್ನೇಹಿತರೊಬ್ಬರನ್ನು ನೋಡಲು ಹಂಬಲಿಸುತ್ತಾ

ರೆಕ್ಕೆಗಳೆಲ್ಲಾದರೂ ಮಾರಾಟವಾಗುತ್ತಿದ್ದರೆ
ನನಗೆ ಕೊಟ್ಟು ಬಿಡು ಪರದೇಸೀ
ಇಲ್ಲಾ ಇದ್ದುಬಿಡು ನನ್ನ ಬಳಿ

ಎಂದು ಬರೆದಿದ್ದಾರೆ.

ಅಜರ್ ಬೈಜಾನಿನ ಕವಿಗೋಷ್ಠಿಯೊಂದರಲ್ಲಿ

ಒಮ್ಮೆ ಸಿಕ್ಕಿತ್ತು ಒಂದು ಹನಿ ಪ್ರೀತಿ ಇದರಲ್ಲಿ
ಅದಕ್ಕಾಗಿ ನಾನು ಇಡೀ ಆಯುಷ್ಯದ ಕಹಿಯನ್ನು ಕುಡಿದೆ.

**ಸುನಹೆಡೆ** (ಸಂದೇಶಗಳು) ಅಮೃತಾ ಪ್ರೀತಂಗೆ ೧೯೫೬ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟ ದೀರ್ಘ ಕವಿತೆ. ಕವಿ ಸಾಹಿರ ಲೂಧಿಯಾನ್ವಿ ನೆನಪಿನಲ್ಲಿ ಬರೆದ ಕವಿತೆ. ಇದನ್ನು ಹಸನ್‌ನಯಿಂಸುರಕೋಡ್ **ಹೂವಿನ ಹಂಬಲ** ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ.

**ಸುನೇರಿ** ಹೆಸರಿನಲ್ಲಿ ಕೆಲವು ಚಿಕ್ಕ ಕವಿತೆಗಳನ್ನು ಹಾಮಾನಾ ಕನ್ನಡಕ್ಕೆ ತಂದಿದ್ದಾರೆ.

ಕವಿ ಮತ್ತು ಕವಿತೆಯ ಸಂಬಂಧ ಕುಂತಿ ಮತ್ತು ಕರ್ಣರ ಸಂಬಂಧದಂತೆ, (**ನುಡಿಯ ನೆರಳು**, ೩೨) ಕುಂತಿಗೆ ಸೂರ್ಯನ ಗುರುತು ಗೊತ್ತು. ಆದರೆ ಕರ್ಣನಿಗೆ ತಿಳಿಸಲಾರಳು - ಕವಿಗೆ ತನ್ನ ಪ್ರಿಯ ವ್ಯಕ್ತಿಯ ಪರಿಚಯ ಇದೆ ಆದರೆ ಕವಿತೆಗೆ ಇದನ್ನು ತಿಳಿಸಲಾರ, ಪ್ರೇಮದ ಈ ಮೌನವ್ರತ ದೇವರ ದಯೆ ಕಾರುಣ್ಯದ ಕ್ಷಣಗಳು. (**ನುಡಿಯ ನೆರಳು**, ೩೯)

**ಚಿಂತನೆಯ ನೆರಳು** ಎಂಬ ಅಧ್ಯಾಯದಲ್ಲಿ ಕವಿ ವ್ಯಕ್ತಿತ್ವವನ್ನು ಅಮೃತಾ ಹೀಗೆ ವಿಶ್ಲೇಷಿಸುತ್ತಾರೆ.

ಪ್ರಾಕೃತಿಕ ಚೇತನದೊಂದಿಗೆ ಜೀವಧರ್ಮದ ಚೇತನವು ಜತೆಗೂಡಿದಾಗ ಜನಾಂಗೀಯ, ಜಾತೀಯ, ಸಾಂಸ್ಕೃತಿಕ ಚೇತನಗಳು ಒಂದು ಪಾತಳಿಯ ಮೇಲೆ ರೂಪುಗೊಂಡು ಎದುರಾಗುತ್ತವೆ. ಅವುಗಳ ಬುನಾದಿಯು ಸಹ ಮಾನವನ ಬಾಲ್ಯದಲ್ಲಿಯೇ ನಿರ್ಮಾಣವಾಗುತ್ತದೆ. ಜನ್ಮದಿಂದ ಪಡೆದ ಪರಿಸರದ ಪ್ರಭಾವ ಮತ್ತು ನೆರಳು ಗಾಢವಾಗಿ ಚೇತನದ ಮೇಲೆ ಉಂಟಾಗುತ್ತದೆ. ನೋವೇ ಕವಿತೆಯಾಗುವ ಪರಿ ಇದು.

ನನ್ನ ಪ್ರೇಮದ ಎದೆಯಲ್ಲಿ ಎಷ್ಟು ಸೂಜಿಗಳು ನೆಟ್ಟಿವೆಯೋ
ಅರಿವಿಗೆ ಬರುತ್ತಿಲ್ಲ.
ಇಂದು ಧರೆಯದಾಯಿ ಬಂದಿದ್ದಾಳೆ.

ಮುಖ ತೊಳೆಯಲು ಒಂದಿಷ್ಟು ತಂದಿದ್ದಾಳೆ
ಆ ವ್ರತದ ರಹಸ್ಯ ಹೇಳಿದ್ದಾಳೆ
ಯೌವನ ಸನ್ನಿದೆಯಲ್ಲಿ ಒಂದು ದೊಡ್ಡ ಕಂದರದಂತೆ ಮೂಡಿದೆ
ಬಾಯಾರಿಕೆಯಿಂದ ಬಳಲುತ್ತಿದೆ. ಸೂಜಿಗಳನ್ನು ತೆಗೆಯುತ್ತ ತೆಗೆಯುತ್ತ
ಸಂಜೆಯಾಗುತ್ತ ಬಂದಿತು.
ಎಲ್ಲೂ ಚಂದ್ರ ಮೂಡಿದ್ದು ಕಾಣಲಿಲ್ಲ. (ನುಡಿಯೆ ನೆರಳು, ೯೨)

ನನ್ನ ಕವಿತೆಗಳೆಂಬ ಸೂಜಿಗಳು ಪ್ರತಿಯೊಂದು ಸಮಾಜ, ಧರ್ಮ, ರಾಜಕೀಯದತ್ತ ಮಾನವನಿಗೆ ಕೊಟ್ಟ ಪ್ರಾಕೃತಿಕ, ವೈಚಾರಿಕ, ಜನಾಂಗಿಕ ದಾಸ್ಯದ ಪ್ರತೀಕಗಳಾಗಿವೆ.

ಕವಿಗೋಷ್ಠಿಗಳು ಅವರಿಗೆ ಇಷ್ಟವಾಗುತ್ತಿರಲಿಲ್ಲ.

"ನನಗೆ ಯಾವುದೇ ಕವಿ ಮೇಳದಲ್ಲಿ ಭಾಗವಹಿಸಲು ಹಿಂಜರಿಕೆ. ಅಲ್ಲದೆ ಏಕಾಂತದಲ್ಲಿ ಕಾಗದದ ಮೇಲಿಳಿಯುತ್ತಿರುವ ಅಕ್ಷರಗಳ ನೆರಳೇ ನನಗೆ ಸಾಂತ್ವನವಾಗುತ್ತದೆ."

ತಮ್ಮ ಇಪ್ಪತ್ತೊಂಬತ್ತನೇ ವಯಸ್ಸಿನಲ್ಲಿ ಲಾಹೋರ್‌ನಿಂದ ದೆಹಲಿಗೆ ಬಂದು ನೆಲೆಸಿದ ಅಮೃತಾ ಪ್ರೀತಂ ಅವರ ಬರವಣಿಗೆ ಇನ್ನೂ ಶಕ್ತವಾಗಿ ನಿರ್ಭಿಡೆಯ ಅಭಿವ್ಯಕ್ತಿಯನ್ನು ಸಾಧಿಸಿತು. ಬದುಕಿನಲ್ಲೂ ಬರಹದಲ್ಲೂ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿದ್ದಕ್ಕಾಗಿ ಅಮೃತಾ ಹಲವಾರು ಬಗೆಯ ವಿರೋಧ ನಿಂದನೆಗಳನ್ನು ಅನುಭವಿಸಬೇಕಾಯಿತು. ಐವತ್ತು ಅರುವತ್ತರ ದಶಕದಲ್ಲಿ ಅವರ ವಿರುದ್ಧ ಬರೆಯದೇ ಇರದ ಪತ್ರಿಕೆಗಳೇ ಇಲ್ಲ ಅನ್ನುವಂತೆ ವಿರೋಧ ವ್ಯಕ್ತವಾಯಿತು. ಪಂಜಾಬಿನ ಲೇಖಕರೊಬ್ಬರು ಪಿಂಜರ್ ಕಾದಂಬರಿಯ ವಿರುದ್ಧ ಪತ್ರಿಕೆಗಳಿಗೆ, ಆಕಾಶವಾಣಿಗೆ ಕಾಗದ ಬರೆದು, ಅಮೃತಾ ಅವರ ಕವನಗಳನ್ನು ಆಕಾಶವಾಣಿಯಲ್ಲಿ ಪ್ರಸಾರ ಮಾಡಬಾರದೆಂದು ಒತ್ತಾಯಿಸಿದರು.

ಆದರೆ ೧೯೬೪ರ ಸಮಯಕ್ಕಾಗಲೇ ಪಿಂಜರ್ ಇಂಗ್ಲಿಷ್‌ಗೆ ಅನುವಾದವಾಗಿ ಅಮೆರಿಕಾದಿಂದ ನ್ಯೂಜಿಲ್ಯಾಂಡ್‌ವರೆಗೆ ಹಲವು ಓದುಗ ವಿಮರ್ಶಕರು ಅದನ್ನು ಮೆಚ್ಚಿಕೊಂಡು ಲೇಖಕಿಗೆ ಕಾಗದ ಬರೆದಿದ್ದರು. ೧೯೬೮-೬೯ರಲ್ಲಿ ಅಮೆರಿಕಾದ ಮಿಚಿಗನ್ ಸ್ಟೇಟ್ ಯೂನಿವರ್ಸಿಟಿಯ 'ಮಾರ್ಲೋ ಕಪ್ರೋಲಾ' ತಮ್ಮ ಪತ್ರಿಕೆಯ ಒಂದು ಇಡೀ ಸಂಚಿಕೆಯನ್ನು ಅಮೃತಾ ಪ್ರೀತಂ ಕೃತಿಗಳಿಗಾಗಿ ಮೀಸಲಿರಿಸಿದರು. ಪ್ರಸಿದ್ಧ ಹಿಂದಿ ಲೇಖಕ ರೇವತಿ ಸರನ್ ಶರ್ಮಾ ಅವರು ಅಮೃತಾ ಕಾದಂಬರಿಗಳನ್ನು ಕುರಿತು ಆ ಸಂಚಿಕೆಯಲ್ಲಿ ದಿ ಸರ್ಚ್ ಫಾರ್ ಫೆಮಿನೈನ್ ಇಂಟೆಗ್ರಿಟಿ ಎಂಬ ವಿಸ್ತಾರವಾದ ಲೇಖನ ಬರೆದರು.

ಮೆಚ್ಚುಗೆ, ಪ್ರಶಂಸೆ ಮತ್ತು ವಿರೋಧಗಳೆರಡನ್ನು ಒಟ್ಟಿಗೆ ಅನುಭವಿಸುವಾಗ 'ಒಂದೇ ಕಾಲಕ್ಕೆ ನಾನು ತಣ್ಣನೆಯ ಹಾಗೂ ಬಿಸಿಯಾದ ನದಿಗಳಲ್ಲಿ ಸ್ನಾನ ಮಾಡುತ್ತಿದ್ದೇನೆ ಎನಿಸುತ್ತದೆ'. (ರಸೀದಿ ಟಿಕೇಟು, ೯೪) ಎಂದು ಈ ಕುರಿತು ಅಮೃತಾ ಪ್ರೀತಂ ಬರೆದಿದ್ದಾರೆ.

ಅಮೃತಾ ಪ್ರೀತಂ ಬರೆದಿರುವ ಇಪ್ಪತ್ತೆಂಟು ಕಾದಂಬರಿಗಳಲ್ಲಿ ವಸ್ತುವಿನ ಪ್ರಸ್ತುತತೆಯಿಂದಾಗಿ **ಪಿಂಜರ್** (ಅಸ್ಥಿಪಂಜರ) ಅತೀ ಪ್ರಸಿದ್ಧವಾಯಿತು. ಖುಷ್ವಂತ್ ಸಿಂಗ್ ಈ ಕಾದಂಬರಿಯನ್ನು ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ.

೧೯೪೭ರ ವಿಭಜನೆಯ ಸಂದರ್ಭ ಮತ್ತು ಅದಕ್ಕಿಂತಲೂ ಮೊದಲು ಪಂಜಾಬ್‌ನಲ್ಲಿ ಹೊತ್ತಿ ಉರಿದ ಹಿಂದೂ ಮುಸ್ಲಿಂ ದ್ವೇಷದ ದಳ್ಳುರಿಯಲ್ಲಿ ಉರಿದು ಅಸ್ಥಿಪಂಜರಗಳಾದ ಸ್ತ್ರೀಯರ ಬದುಕಿನ ಮನಕಲಕುವ ಚಿತ್ರಣ ಈ ಕೃತಿಯಲ್ಲಿದೆ. ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ ಜೊತೆಗೆ ಲಿಂಗತಾರತಮ್ಯವೂ ಸೇರಿಕೊಂಡಾಗ ಉಂಟಾಗುವ ಹೆಣ್ಣಿನ ಅಸಹಾಯಕ ನೋವಿನ ಸ್ಥಿತಿಯನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ.

ವಿವಾಹ ನಿಶ್ಚಿತವಾದ ಪೂರೋ ಎಂಬ ಮುಗ್ಧ ಹೆಣ್ಣು, ಮನೆತನದ ದ್ವೇಷದ ಹಿನ್ನೆಲೆಯಲ್ಲಿ ರಷೀದ್ ಎಂಬ ಮುಸ್ಲಿಂ ಯುವಕನಿಂದ ಅಪಹರಿಸಲ್ಪಡುತ್ತಾಳೆ. ಕೆಲವು ದಿನಗಳ ನಂತರ ತಪ್ಪಿಸಿಕೊಂಡು ಬಂದರೂ ತಂದೆ ತಾಯಿ ಅವಳನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ. ರಷೀದನ ಮನೆಯಲ್ಲಿ ಅವಳ ಸ್ಥಿತಿ "......It was a double life Hameeda by day, Pooro by night. In reality she was neither one nor the other; she was just a skeleton without a shape or a name" (Skeleton, 18)

ಸ್ವಂತಿಕೆಗೆ ಅವಕಾಶವೇ ಇಲ್ಲದ ಈ ಸ್ಥಿತಿಯನ್ನು ಕುರಿತು "A woman has to get used to every kind of water" ಎಂದು ಬರೆಯುತ್ತಾರೆ ಅಮೃತಾ. ಅನೇಕ ಹಿಂದೂ, ಸಿಖ್, ಮುಸ್ಲಿಂ ಹೆಣ್ಣುಮಕ್ಕಳ ಅಪಹರಣಕ್ಕೆ ಪೂರೋ ಸಾಕ್ಷಿಯಾಗುತ್ತಾಳೆ. ತನ್ನ ಅತ್ತಿಗೆಯನ್ನೇ ಅಪಹರಣಕಾರರಿಂದ ರಕ್ಷಿಸಿ ಮನೆಗೆ ಮರಳಿಸುವ ಸಂದರ್ಭದಲ್ಲಿ ಅವಳ ಸಹೋದರ ಮತ್ತೆ ಅವಳನ್ನು ಮನೆಗೆ ಬರಲು ಆಹ್ವಾನಿಸಿದಾಗ ಅವಳು ರಷೀದನ ಜೊತೆಗೇ ಉಳಿಯುತ್ತಾಳೆ. ಹೆಣ್ಣಿಗೆ ಆಯ್ಕೆಯೇ ಇಲ್ಲದ ಅನಿವಾರ್ಯ ನೋವಿನ ಒಂದು ಸ್ಥಿತಿಯನ್ನು **ಪಿಂಜರ್**‌ನಲ್ಲಿ ಅಮೃತಾ ಪ್ರೀತಂ ತುಂಬ ಸಮರ್ಥವಾಗಿ ತಂದಿದ್ದಾರೆ.

ಅಮೃತಾ ಅವರ ವ್ಯಕ್ತಿತ್ವದ ಬಹುಮುಖತೆಗೆ, ನವ್ಯತೆಗೆ ನಿದರ್ಶನ ಅವರ **ಜೇಬ್‌ಕತರೆ** ಕಾದಂಬರಿ. ನವ್ಯ ಶೈಲಿಯಲ್ಲಿ ಬರೆದ ಈ ಕಾದಂಬರಿ ಆಧುನಿಕ ಜೀವನ ಶೈಲಿಯನ್ನು ರೂಢಿಸಿಕೊಂಡ ಯುವಜನಾಂಗದ ದ್ವಂದ್ವವನ್ನು ಗೊಂದಲವನ್ನು ಚಿತ್ರಿಸುತ್ತದೆ. ಆಧುನಿಕ ಮತ್ತು ಪುರಾತನ ಮೌಲ್ಯಗಳ ಸಂಘರ್ಷ ಈ ಕಾದಂಬರಿಯಲ್ಲಿದೆ. ಕಾದಂಬರಿಯ ಮುಖ್ಯಪಾತ್ರ ಕಪಿಲನ ಪಾತ್ರಕ್ಕೆ ತಮ್ಮ ಮಗ ನವರೋಜನ ಕಾಲೇಜು ಮತ್ತು ಹಾಸ್ಟೆಲ್ ಜೀವನದ ಅನುಭವಗಳನ್ನು ಬಳಸಿಕೊಂಡಿರುವುದಾಗಿ ಲೇಖಕಿ ಹೇಳಿದ್ದಾರೆ.

**ಡಾ|| ದೇವ್, ಖಾಲಿ ಜಗಹ್, ಏಕ್‌ಥೀ ಅನಿತಾ, ದಿಲ್ಲೀ ಕಿ ಗಲಿಯಾಂ, ಆಕ್ ಕೆ ಪತ್ತೆ, ಯಾತ್ರಿ, ಏಕ್ ಪವಾರ್, ಧರತಿ - ಸಾಗರ್ ಔರ್ ಸಿಪಿಯಾಂ, ಅಲಿನಾ, ಚಿಕ್ ನಂ ಚತ್ತೀಸ್, ಏಕ್ ಸವಾಲ್** ಮುಂತಾದುವು ಅವರ ಪ್ರಸಿದ್ಧ ಕಾದಂಬರಿಗಳು.

ಏರಿಯಲ್ ಮತ್ತು ಬುಲಾವಾ ಕಿರು ಕಾದಂಬರಿಗಳು.

ಪಂಜಾಬಿ ಕಥಾ ಸಾಹಿತ್ಯದಲ್ಲಿ ಸಂತ ಸಿಂಹ ಸೆಖೊ, ಕರತಾರ ಸಿಂಗ್ ದುಗ್ಗಲ್‌ರಂತಹ ಪ್ರಮುಖ ಕಥೆಗಾರರ ಜೊತೆಗೆ ಅಮೃತಾ ಪ್ರೀತಂ ಹೆಸರೂ ಪರಿಗಣಿಸಲ್ಪಡುತ್ತದೆ. ಮೋಹನ್ ಸಿಂಗ್, ದೇವೇಂದ್ರ ಸತ್ಯಾರ್ಥಿ, ದಲೀಪ್ ಕಾರ್ ಟಿವಾನಾ ಅವರ ಸಮಕಾಲೀನ ಕಥೆಗಾರರು.

**ಏಕ್ ಶಹರ್ ಕೀ ಮೌತ್** ಬಹಳ ಚರ್ಚೆಗೊಳಗಾದ ಕಥೆ. ವಿಶ್ವವಿದ್ಯಾನಿಲಯವೊಂದರ ಪಠ್ಯಪುಸ್ತಕದಿಂದ ಅದನ್ನು ತೆಗೆಯಬೇಕು ಎಂದು ಸೆನೆಟ್ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಆದರೆ ಇದು ಕಥೆಯ ದೋಷವಲ್ಲ ಓದುಗರ ಮನಸ್ಸಿನ ವಕ್ರತೆ ಎಂದು ಲೇಖಕಿ ಅಮೃತಾ ಪ್ರೀತಂ ಅಭಿಪ್ರಾಯಪಟ್ಟಿದ್ದಾರೆ. **ಕಾಲೇ ಅಕ್ಷರ, ವಿರಾಸತ್, ದೋ ಔರತೇ, ವಿಘುಲತಿ ಚಟ್ಟಾನ್, ಫ್ರೀ ಜೋನ್‌ನಲ್ಲಿ ಒಂದು ರಾತ್ರಿ, ಉದ್ಗಾರ (ಆಹ್),** ಹೀರೇಕಿಬನಿ ಮುಂತಾದ ಕಥೆಗಳು ಹಲವು ಭಾಷೆಗಳಿಗೆ ಅನುವಾದವಾಗಿವೆ. ಅವರ ಕಥೆ, ಕಾದಂಬರಿಗಳಲ್ಲಿ ಭಾರತೀಯ ಸ್ತ್ರೀಯರ ಸಮಸ್ಯೆಗಳನ್ನು ಬಹಳ ಸೂಕ್ಷ್ಮವಾಗಿ ಅಷ್ಟೇ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ಕಾವ್ಯಾತ್ಮಕವಾದ ಭಾಷೆ ಮತ್ತು ನಿರೂಪಣೆ ಅವರ ಗದ್ಯಕ್ಕೆ ವಿಶಿಷ್ಟ ಸೌಂದರ್ಯವನ್ನು ನೀಡಿದೆ.

ಅಮೃತಾ ಅವರ ರಮ್ಯ ಶೈಲಿಯ ಗದ್ಯ ಓದುವಾಗ ಕಾವ್ಯಾನುಭವವನ್ನುಂಟು ಮಾಡುತ್ತದೆ. ಅಮೃತಾ ಪ್ರೀತಂ ರ ಕಥೆಗಳನ್ನು ನ್ಯಾಷನಲ್ ಬುಕ್ ಟ್ರಸ್ಟ್ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡಕ್ಕೆ ಅನುವಾದಿಸಿವೆ. ಪಂಚಾಕ್ಷರಿ ಹಿರೇಮಠ್ **ಹೆಣ್ಣೊಂದು ಮಧುಪಾತ್ರೆ** ಹೆಸರಿನಲ್ಲಿ ಕೆಲವು ಕಥೆಗಳನ್ನು ಅನುವಾದಿಸಿದ್ದಾರೆ. ಸಹಜವಾಗಿಯೇ ಈ ಎಲ್ಲ ಕತೆಗಳೂ ಹೆಣ್ಣಿನ ಬದುಕಿನತ್ತಲೇ ಕೇಂದ್ರೀಕೃತವಾಗಿವೆ.

ನಿದರ್ಶನವಾಗಿ ಒಂದೆರಡು ಕಥೆಗಳನ್ನು ನೋಡಬಹುದು. **ಒಂದು ಕರವಸ್ತ್ರ, ಒಂದು ಉಂಗುರ, ಒಂದು ಜಾಳಿಗೆ ಸೌಟು** ಎಂಬ ಕಥೆ. ತನ್ನ ಆಸೆಗಳನ್ನೆಲ್ಲ ಒಳಗೇ ಅದುಮಿಟ್ಟು ಆ ಸಮಾಧಿಯ ಮೇಲೆ ಜೀವನ ಸಾಗಿಸುವ ಭಾರತೀಯ ಸ್ತ್ರೀ ಜೀವನಕ್ಕೆ ರೂಪಕವಾಗಿದೆ.

ಬಂತಿ ಎಂಬ ಹುಡುಗಿ ಪ್ರೀತಿಸಿದವನನ್ನು ಮದುವೆಯಾಗಲಾರದೆ ಇನ್ನಾರನ್ನೋ ಮದುವೆಯಾದಾಗ, ಪ್ರೀತಿಯ ನೆನಪಾಗಿ ಇರಿಸಿಕೊಂಡ ಕರವಸ್ತ್ರದ ಮೇಲೆ ತಾನೇ ಬಿಡಿಸಿದ್ದ ಕಸೂತಿಯಲ್ಲಿದ್ದ ಅವನ ಹೆಸರನ್ನು ಸೂಜಿಯಿಂದ ಬಿಡಿಸಿ ತೆಗೆಯುತ್ತಾಳೆ. ಆ ಕರವಸ್ತ್ರವನ್ನು ನೆನಪಿಗಾಗಿರಿಸಿಕೊಳ್ಳಬೇಕೆಂದಿದ್ದರೆ ಅದರ ಮೇಲೆ ಅವನ ಹೆಸರಿರುವಂತಿಲ್ಲ. ಅವಳ ಅತ್ತೆ (ಗಂಡನ ಮಲತಾಯಿ)ಯದೂ ಅದೇ ದುಃಖ. ಅವಳ ತವರೂರಿನಲ್ಲಿ ಪ್ರೀತಿಸಿದ ಹುಡುಗನ ನೆನಪಿಗಾಗಿ ಒಂದು ಉಂಗುರ ಮತ್ತೊಂದು ಜಾಳಿಗೆ ಸೌಟನ್ನು ಇರಿಸಿಕೊಂಡಿರುತ್ತಾಳೆ. ಅವುಗಳನ್ನಿಡಲು ಅವಳಿಗೆ ಖಾಸಗಿ ಜಾಗವೊಂದಿಲ್ಲ. ಅಡಿಗೆ ಮನೆಯ ಮಣ್ಣಿನ ಒಲೆಯ ಕೆಳಭಾಗದಲ್ಲಿ ಅವುಗಳನ್ನು ಹೂತಿಟ್ಟಿರುತ್ತಾಳೆ. ತಿಂಗಳಿಗೊಮ್ಮೆ ಹೊಸ ಮಣ್ಣು ಕಲೆಸಿ ಹೊಸ ಒಲೆ ಹೂಡುವ ನೆಪದಲ್ಲಿ ಅವುಗಳನ್ನು ಹೊರತೆಗೆದು ನೋಡಿ ಅಡಿಗೆ ಮನೆಯ ಮುಚ್ಚಿದ ಬಾಗಿಲಿನ ಹಿಂದೆ ಏಕಾಂತದಲ್ಲಿ ಹಾಡುತ್ತಾ ಕಣ್ಣೀರಿಡುತ್ತಾ ಮತ್ತೆ ಮುಚ್ಚಿಟ್ಟು ಹೊಸ ಒಲೆ ಹೂಡುತ್ತಾಳೆ. "ದಿನನಿತ್ಯ ಅವಳು ಅಡಿಗೆ ಮಾಡುವ ಬೆಂಕಿ ಉರಿಸುವ ಆ ಜಾಗದಲ್ಲಿ ಅವಳ ಕನಸುಗಳೆಲ್ಲ ಹೂತುಹೋಗಿವೆ, ಆ

ಕನಸುಗಳ ಮೇಲೆ ಆ ಒಲೆ ಉರಿಯುತ್ತಿದೆ" ಎಂಬುದನ್ನು ಸುಂದರ ಕಾವ್ಯದಂತೆ ಅಮೃತಾ ನಿರೂಪಿಸಿದ್ದಾರೆ. ವಿಷಾದದ ಹನಿಗಳು ಕತೆಯುದ್ದಕ್ಕೂ ತೊಟ್ಟಿಕ್ಕುತ್ತವೆ. ನಿರೂಪಕಿ ಹೇಳುತ್ತಾಳೆ, "ನಾನೂ ಕೂಡಾ ಇಂದು ನನ್ನ ನೆನಪುಗಳನ್ನೆಲ್ಲ ಹುಡುಕಿ ನೋಡಿದ್ದೇನೆ - ಒಂದು ಕೆಂಪು ವಸ್ತ್ರವನ್ನು ಅದರ ಕೆಳಗೆ ಮುಚ್ಚಿಟ್ಟಿರುವೆ. ಯಾರೋ ಬಂತಿ ಇರಲಿ, ಯಾವಳೋ ರೂಪೋ ಇರಲಿ ಇನ್ನಾರಾದರೂ ಇರಲಿ ತಮ್ಮ ತಮ್ಮ ಮನದಾಳದಲ್ಲಿ ಯಾವುದೋ 'ಉಂಗುರ' ಮುಚ್ಚಿಟ್ಟಿಲ್ಲವೆಂದು ಹೇಗೆ ಹೇಳಲು ಸಾಧ್ಯ. ಓ ನನ್ನ ಗೆಳತಿ ನಾವು ಭಾಗ್ಯಹೀನರು. ಯಾರನ್ನೋ ಪ್ರೀತಿಸುತ್ತೀವಿ, ಹುಟ್ಟಿನಿಂದಲೇ ಭಟ್ಟಿಯವರಾಗಿರುತ್ತೀವಿ. ಹಗಲಿನಲ್ಲಿ ಒಲೆಯ ಮೇಲಿರುವ ತವೆಯಲ್ಲಿ ನಮ್ಮ ಉಸಿರನ್ನು ಕಾಳುಗಳ ತೆರದಿ ಹುರಿಯುತ್ತೇವೆ ಮತ್ತು ನೆನಪುಗಳ ಜಾಳಿಗೆಯಿಂದ ವರ್ಷಗಳ ಉಸುಗು ಸೋಸುತ್ತೇವೆ" (ಹೆಣ್ಣೊಂದು ಮಧುಪಾತ್ರೆ ೧೧೭) ಭಾರತೀಯ ಸಂಪ್ರದಾಯದ ಮುಸುಕಿನೊಳಗಿನ 'ಸ್ತ್ರೀ'ಯನ್ನು ಇದಕ್ಕಿಂತ ಸಮರ್ಥವಾಗಿ ಚಿತ್ರಿಸಲು ಹೇಗೆ ಸಾಧ್ಯ? ವಿಫಲತೆ ಚಟ್ಟಾನ್ ಕತೆ ಸ್ವಂತ ಅನುಭವ ಆಧಾರದಿಂದ ಬರೆದ ಆತ್ಮ ಕಥಾನಕದಂತಿರುವ ಕಥೆ.

ಆಹ ಎಂಬ ಕಥೆಯನ್ನು ನ್ಯಾಷನಲ್ ಬುಕ್ ಟ್ರಸ್ಟ್‌ಗಾಗಿ ಗೌರೀಶ ಕಾಯ್ಕಿಣಿಯವರು ಉದ್ಗಾರ ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಈ ಕಥೆಯಲ್ಲೂ ಅಮೃತಾ ಅವರ ಇತರ ಕಥೆಗಳಂತೆ ಮುಚ್ಚುಮರೆಯಿಲ್ಲದ ಅಭಿವ್ಯಕ್ತಿ ಇದೆ. ಭಾವುಕ ಅಭಿವ್ಯಕ್ತಿಯಿಂದ ಅಮೃತಾ ಅವರ ಕಥನಕ್ಕೆ ವಿಶಿಷ್ಟ ಆಕರ್ಷಣೆ ಇದೆ. ಎಳೆ ವಯಸ್ಸಿನ ಸ್ತ್ರೀ ಮನಸ್ಸುಗಳನ್ನು ಅಮೃತಾ ಜೀವಂತವಾಗಿ ಚಿತ್ರಿಸುತ್ತಾರೆ. ಉದ್ಗಾರ ಕಥೆಯಲ್ಲಿ ಮುದುಕನನ್ನು ಮದುವೆಯಾದ ಹುಡುಗಿಯೊಬ್ಬಳು ತನ್ನ ಮನೆಯಲ್ಲಿ 'ಮುನ್ನಿ'ಯಾಗಿ ಕೆಲಸ ನಿರ್ವಹಿಸುತ್ತಿದ್ದ ತರುಣನ ಸ್ನೇಹದಿಂದ ಮಗುವನ್ನು ಪಡೆಯುವ ಅನಿವಾರ್ಯ ಸಂದರ್ಭ ಎದುರಾಗುತ್ತದೆ. ಸಮಾಜಬಾಹಿರ ಎನ್ನಬಹುದಾದ ಅವಳ ಈ ನಡತೆಯನ್ನು ಅವಳ ಗಂಡನ ಹಿರಿಯ ಪತ್ನಿ ಸಂತಾನರಹಿತ ಸ್ತ್ರೀ ನಿಹಾಲ್ ಕೌರ್ ಒಮ್ಮನದಿಂದ ಒಪ್ಪಿಕೊಳ್ಳುತ್ತಾಳೆ. ಅವಳು ಮನೆತನದ ಮರ್ಯಾದೆ ಕಾಪಾಡಲು, ಉತ್ತರಾಧಿಕಾರಿಯೊಬ್ಬ ದೊರೆತ ಎಂಬ ಸಮಾಧಾನದಿಂದ ಮಾತ್ರವಲ್ಲದೆ 'ವೀರೋ' ಎಂಬ ತನ್ನ ಈ ಕಿರಿಯ ಸವತಿಯ ಬಗ್ಗೆ ಸಂಪೂರ್ಣ ಸಹಾನುಭೂತಿಯನ್ನೂ ಹೊಂದಿರುತ್ತಾಳೆ.

ಅಮೃತಾ ತಮ್ಮ ಬರವಣಿಗೆಯ ಕುರಿತು ಹೇಳುತ್ತಾ 'ನನಗೆ ಜೀವನ, ಒಂದು ಸುದೀರ್ಘ ಯಾತ್ರೆಯ ಹೆಸರು, ಜಡದಿಂದ ಹಿಡಿದು ಚೇತನದವರೆಗಿನ ಯಾತ್ರೆಯ ಹೆಸರು. ಅಕ್ಷರದಿಂದ ಆರಂಭಿಸಿ ಅರ್ಥದವರೆಗಿನ ಯಾತ್ರೆಯ ಹೆಸರು, ಯಾವುದು ವಾಸ್ತವವಾಗಿದೆಯೋ ಅಲ್ಲಿಂದ ಹಿಡಿದು, ಯಾವುದು ವಾಸ್ತವವಾಗಬೇಕೋ ಅದರ ಕಲ್ಪನೆ ಮತ್ತು ಅದರಲ್ಲಿಯ ಏಕತೆ ಪಡೆವ ಯಾತ್ರೆಯ ಹೆಸರು ಅಂತೆಯೇ ಹೇಳಬಯಸುತ್ತೇನೆ - ನನ್ನ ಕತೆಗಳಲ್ಲಿಯ ಆ ಎಲ್ಲ ಪಾತ್ರಗಳನ್ನು ಬದುಕಿನಿಂದಲೇ ಎತ್ತಿಕೊಂಡಿದ್ದೇನೆ. ಆ ಎಲ್ಲ ಪಾತ್ರಗಳು ಯಥಾರ್ಥದ ದೂರವನ್ನು ತಲುಪಬಲ್ಲವಾಗಿವೆ" ಎಂದು ತಮ್ಮ ಸೃಜನಶೀಲತೆಗೆ ತಮ್ಮ ಅನುಭವ ವಲಯದ ಜೀವಂತ ವ್ಯಕ್ತಿಗಳೇ ಸ್ಫೂರ್ತಿ ಎಂದು ಬರೆದಿದ್ದಾರೆ.

**ಕಾಡಿನ ಬೇರು** ಎಂಬ ಕಥಾ ಸಂಕಲನ ಅಮೃತಾ ಅವರ **ಪಾಂಚ್ ಬರಸ್ ಲಂಬಿ ಸಡಕ್** ಎಂಬ ಕಥಾಸಂಕಲನವ ಕನ್ನಡಾನುವಾದ. ಪಂಜಾಬಿ ಭಾಷೆಯಲ್ಲಿ ಅಮೃತಾ ಪ್ರೀತಂ **ಜಂಗಲೀ ಬೂಟೀ** ಎಂದು ಈ ಕೃತಿಯನ್ನು ಹೆಸರಿಸಿದ್ದಾರೆ. ಶಾಂತರಸ ಹೆಂಬೇರಾಳು ಅವರು 'ಜಂಗಲೀ ಬೂಟೀ'ಯ ಉರ್ದು ಅನುವಾದವನ್ನು ಆಧರಿಸಿ ಈ ಅನುವಾದ ಮಾಡಿದ್ದಾರೆ. ಅಮೃತಾ ಅವರ ಇತರ ಕಥಾ ಸಂಗ್ರಹಗಳೆಂದರೆ **ಬರಸ್‌ಬಾದ್, ಆಖರಿಖತ್, ಗೋಜರ ದಿಯಾಂ ಪರಿಯಾಂ ಚೌನಸದಾಹೌಕಾ.**

**ಕಾಡಿನ ಬೇರು** ಸಂಗ್ರಹದಲ್ಲಿ ಏಳು ಕಥೆಗಳಿವೆ. ಇವುಗಳಲ್ಲಿ **ಕಾಡಿನ ಬೇರು, ಗುಲ್ಯಾನಳ ಪತ್ರ** ಮತ್ತು **ಕನ್ನಡಿ ಮನೆಯಲ್ಲಿ** ಎಂಬ ಕಥೆಗಳು ಪ್ರಾತಿನಿಧಿಕವಾಗಿವೆ. **ಕಾಡಿನ ಬೇರು** ಕಥೆಯಲ್ಲಿ ಅಂಗೂರಿ ಎಂಬ ಮುಗ್ಧ ಹೆಣ್ಣು ನಿರೂಪಕಿಯ ಜೊತೆ ತನ್ನ ಅಂತರಂಗವನ್ನು ತೆರೆದಿಡುತ್ತಾಳೆ. ಪ್ರೀತಿಸುವುದು ತಪ್ಪು ಎಂಬ ಸಾಂಪ್ರದಾಯಿಕ ನಂಬಿಕೆಯುಳ್ಳ ಅಂಗೂರಿ ನಿರೂಪಕಿಗೆ ಹೀಗೆ ಹೇಳುತ್ತಾಳೆ "ಕಾಡಿನ ಬೇರು ಅಂತ ಒಂದಿರುತ್ತದೆ. ಅದನ್ನು ಎಲೆಯಲ್ಲಿ ಹಾಕಿ ಅಥವಾ ಮಿಠಾಯಿಯಲ್ಲಿ ಕಲಸಿ ತಿನ್ನಿಸಿಬಿಡುತ್ತಾನೆ. ಹುಡುಗಿ ಅವನೊಡನೆ ಪ್ರೀತಿಸಲು ತೊಡಗುತ್ತಾಳೆ. ಮತ್ತೆ ಅವಳಿಗೆ ಅದೇ ಒಂದು ಇಷ್ಟವಾಗುತ್ತದೆ. ಪ್ರಪಂಚದ ಬೇರಾವ ವಸ್ತು ಅವಳಿಗೆ ಒಳ್ಳೆಯದಾಗಿ ಕಾಣುವುದಿಲ್ಲ....." (ಕಾಡಿನ ಬೇರು, ೨೪) ಹೀಗೆ ಹೇಳುವ ಮುಗ್ಧ ಅಂಗೂರಿ (ವಿವಾಹಿತೆ) ರಾಮತಾರಾ ಎಂಬ ತರುಣನ ಪ್ರೀತಿಯಲ್ಲಿ ಸಿಲುಕುತ್ತಾಳೆ. ದುಃಖಿತಳಾದ ಅವಳನ್ನು ನಿರೂಪಕಿ "ಕಾಡಿನ ಬೇರನ್ನೇನಾದರೂ ತಿಂದಿಲ್ಲ ತಾನೆ"? ಎಂದು ಪ್ರಶ್ನಿಸಿದಾಗ ಕಣ್ಣೀರಲ್ಲಿ ತೊಯ್ದ ಧ್ವನಿಯಲ್ಲಿ ಅಂಗೂರಿ ಹೇಳುತ್ತಾಳೆ "ಆಣೆ ಮಾಡಿ ಹೇಳುತ್ತೇನೆ ಅವನ ಕೈಯಿಂದ ಎಂದೂ ಮಿಠಾಯಿಯನ್ನು ತಿಂದಿಲ್ಲ ಎಲೆಯನ್ನೂ ತಿಂದಿಲ್ಲ, ಚಹಾ ಒಂದೇ.....ಅವನು..... ಚಹಾದಲ್ಲಿ ಏನಾದರೂ...."(ಕಾಡಿನ ಬೇರು, ೩೦) ಅಂಗೂರಿಯಂತಹ ವಿಷಮದಾಂಪತ್ಯದಲ್ಲಿ ಸಿಲುಕಿ ಇನ್ನೆಲ್ಲೋ ಪ್ರೀತಿಯನ್ನು ಅರಸುವ ಹುಡುಗಿಯರು ಅಮೃತಾ ಪ್ರೀತಂರ ಕೃತಿಗಳಲ್ಲಿ ಮತ್ತೆ ಮತ್ತೆ ಬರುತ್ತಾರೆ.

ಇಂತಹ ಸನ್ನಿವೇಶಗಳನ್ನು ಪುರುಷರು ಚಿತ್ರಿಸುವುದಕ್ಕಿಂತ ಭಿನ್ನವಾಗಿ, ಆ ಸನ್ನಿವೇಶಗಳಲ್ಲಿ ಸಿಲುಕಿದ ಸ್ತ್ರೀಯರ ಒಳಗನ್ನು ತೆರೆದು ತೋರುವಂತೆ ಬರೆದಿದ್ದರಿಂದಲೇ ಅಮೃತಾ ಪ್ರೀತಮ್ ಮಹತ್ವದ ಲೇಖಕಿಯಾಗಿರುವುದು. ಪುರುಷಲೋಕದ ನಿಯಮಗಳನ್ನು ಮೀರಿ ಸ್ತ್ರೀಯರ ಮನಸ್ಸಿನಿಂದ, ಕಣ್ಣಿನಿಂದ, ಹೃದಯದಿಂದ ಅವರು ಬದುಕನ್ನು ನೋಡಿದರು. ಮೇಲಿನ ಉದಾಹರಣೆಯಲ್ಲಿ ಮಾನವ ಸಹಜ ಪ್ರೀತಿಯನ್ನೂ ಪಾಪವೆಂದು ಭಾವಿಸುವ ಮತ್ತು ಅರಿಯದೇ ಅದರಲ್ಲಿ ಸಿಲುಕುವ 'ಅಂಗೂರಿ' ಯಂಥ ಹೆಣ್ಣಿನ ಕಥೆ (ಕಾಡಿನ ಬೇರು) ಭಾರತೀಯ ಸಾಹಿತ್ಯದಲ್ಲಿ ಬಹುಶಃ ಅಮೃತಾ ಪ್ರೀತಂ ಅವರ ಬರಹಗಳಲ್ಲೇ ಮೊದಲು ಕಾಣಸಿಗುವುದು. **ಗುಲ್‌ಯಾನಾ** ಕಥೆ ಒಂದು ಸಾರ್ವಕಾಲಿಕ ಸಮಸ್ಯೆಯನ್ನು ಪ್ರಸ್ತಾಪಿಸುತ್ತದೆ. ಒಂಟಿಯಾಗಿ ವಿದೇಶಗಳಲ್ಲಿ ಪ್ರವಾಸ ಮಾಡುವ ಗುಲ್ಯಾನ ತನ್ನಿಚ್ಛೆಯನ್ನು ಈಡೇರಿಸಿಕೊಳ್ಳಲು ಹೋಗಿ ಪ್ರಾಣವನ್ನೇ ಕಳೆದುಕೊಳ್ಳುತ್ತಾಳೆ.

"…..ನನಗೆ ಗುಲ್ಯಾನಾ ಬರೆದ ಪತ್ರವಿದು. ಜೀವನದ ಮನೆಯಿಂದ ಹೋಗುವ ಕಾಲಕ್ಕೆ ಆಕೆ ಜೀವನದ ಹೆಸರಿಗೆ ಒಂದು ಪತ್ರ ಬರೆದಿದ್ದಾಳೆ. ಅದರಲ್ಲಿ ಆಕೆ ಜೀವನಕ್ಕೆ ಹಾಕಿದ ಮೊದಲ ಪ್ರಶ್ನೆಯೇ ಇದು. ಆ ಹೂವಿಗೆ - ಯಾವುದರ ಹೆಸರು ಹೆಣ್ಣೆಂದಿದೆ - ಈ ಭೂಮಿಯಲ್ಲಿ ಚಿಗಿತು ಬೆಳೆಯುವ ಅಧಿಕಾರ ಮತ್ತು ಅವಕಾಶ ಯಾಕೆ ಕೊಡುವುದಿಲ್ಲ. ಅದರ ಜೊತೆಗೆ ಹೆಣ್ಣಿನ ಮನಸ್ಸಿನ ವಿರುದ್ಧ ಯಾರೂ ಅವಳ ದೇಹವನ್ನು ಮುಟ್ಟದ ಒಂದು ಸುಸಂಸ್ಕೃತ ಕಾಲ ಎಂದು ಬರುವುದು?…. ಆಕೆಯ ಎರಡನೆಯ ಪ್ರಶ್ನೆ ಇದು. ಯಾವ ಮನೆಯನ್ನು ತೆರೆಯಲು ಅವಳು ನಕ್ಷತ್ರಗಳ ಗೊಂಚಲನ್ನು ಕೀಲಿಕೈ ಗೊಂಚಲಿನಂತೆ ತನ್ನ ನಡುವಿನಲ್ಲಿ ಇಳಿಬಿಟ್ಟಿದ್ದಳೋ ಆ ಮನೆಯ ಬಾಗಿಲು ಯಾವ ಕಡೆಗಿದೆ? 'ಜೀವನ'ಕ್ಕೆ ಬ್ರಾಹ್ಮೀ ಬೇರನ್ನು ತಿನ್ನಿಸಲು ಅವಳು ಗೀತೆಗಳ ಎಲೆಗಳನ್ನು ಆಯುತ್ತಿದ್ದಳಲ್ಲ ಅವುಗಳನ್ನು ಆಕ್ರಮಣಕಾರರು ಯಾಕೆ ಸುಟ್ಟುಬಿಟ್ಟರು ಎಂಬುದು ಆಕೆಯ ಮೂರನೆಯ ಪ್ರಶ್ನೆ….. ಆಕೆ ಕೇಳಿದ ಪ್ರಶ್ನೆಗಳಿಗೆ ಜೀವನದಿಂದ ಉತ್ತರ ಪಡೆಯುವುದು ಪ್ರತಿಯೊಬ್ಬ ಓದುಗನ ಹೊಣೆಗಾರಿಕೆಯಾಗಿದೆ. (ಕಾಡಿನ ಬೇರು, ೫೩). ಕನ್ನಡಿ ಮನೆಯಲ್ಲಿ ಎಂಬ ಕತೆ ಆತ್ಮಕಥಾತ್ಮಕವಾಗಿದೆ.

The other Dimension ೧೯೯೬ರಲ್ಲಿ ಅಮೃತಾ ಪ್ರೀತಂ ಪ್ರಕಟಿಸಿರುವ ದಿನಚರಿಯಂತೆ ದಿನಾಂಕಗಳ ಸಹಿತ ನಿರೂಪಿತವಾಗಿರುವ ಪುಸ್ತಕ. ಕನಸುಗಳಂತೆ ಇಲ್ಲಿನ ಕಾಣ್ಕೆಗಳಿವೆ. ಈ ಪುಸ್ತಕವನ್ನು ಅಮೃತಾ ತಮ್ಮ ತಂದೆಗೆ ಅರ್ಪಿಸಿ ಹೀಗೆ ಬರೆದಿದ್ದಾರೆ.

***To My Father***
***Who from birth was Nand***
***Youth made him Nand Sadhu***
***Rajbibis love made him Karthar***
***and his poetry***
***Made him first 'piyush' and then Hitkari***
***Who in some ancient time was a rishi.***

ಅಮೃತಾ ಪ್ರೀತಂ ತಂದೆ ನಂದ ಎಂಬ ಹೆಸರಿನಿಂದ ಬೆಳೆದು ತಂಗಿಯ ಮರಣವನ್ನು ಸಹಿಸಲಾರದೆ ನಂದಸಾಧುವಾದರು. ರಾಜಬೀಬಿಯ ಪ್ರೀತಿಯಿಂದ 'ಕರ್ತಾರ' ಆದರು. ಅವರ ಕಾವ್ಯ ಅವರಿಗೆ 'ಪೀಯೂಷ' ಹೆಸರನ್ನು ಕೊಟ್ಟಿತು. ಆಮೇಲೆ ಹಿತ್ಕಾರಿ. ಯಾವುದೋ ಪುರಾತನ ಕಾಲದಲ್ಲಿ ಅವರೊಬ್ಬ ಋಷಿಯಾಗಿದ್ದಿರಬೇಕು. ಅಮೃತಾ ೧೯೭೮ರಿಂದ ೧೯೮೯ರವರೆಗಿನ ಅವಧಿಯನ್ನು ತಾವು ಅನುಭವಿಸಿದ ಕನಸುಗಳನ್ನು ಇಲ್ಲಿ ದಾಖಲಿಸಿದ್ದಾರೆ. ಉದಾ: ಪುಟ ೯೮ರಲ್ಲಿರುವ 'A drop' ಎಂಬ ಉಲ್ಲೇಖ ಹೀಗಿದೆ.

A Drop - Saw there is plenty of water around, covered with lotus leaves. Transforming myself into a drop of water, I am playing on a leaf.

- Morning 12 May 1987

**Ancient Manuscripts** ಎಂಬ ಶೀರ್ಷಿಕೆಯ ಕನಸಿನ ನಿರೂಪಣೆಯಲ್ಲಿ ಅಮೃತಾ ತೀರಿಹೋದ ತಮ್ಮ, ತಂದೆ, ದೊಡ್ಡಪ್ಪ ಮೊದಲಾದವರನ್ನು ಕಂಡು ಅವರ ಜೊತೆ ಮಾತನಾಡುತ್ತಾರೆ. ಹಲವು ಅತೀಂದ್ರಿಯ ಅನುಭವಗಳನ್ನು ಅರ್ಥೈಸಲು ಈ ಪುಸ್ತಕದ ಬರಹಗಳಲ್ಲಿ ಅಮೃತಾ ಪ್ರಯತ್ನಿಸಿದ್ದಾರೆ. ಅವರ ಸೃಜನಶೀಲ ಮನಸ್ಸಿನ ಹಲವು ಮುಖಗಳು - ಒಳತೋಟಿಗಳು ಇಲ್ಲಿ ದಾಖಲಾಗಿವೆ. ಅವರ ಸುಪ್ತ ಮನಸ್ಸಿನ ಪುಟಗಳು ಇಲ್ಲಿ ತೆರೆದಿವೆ. ಲೇಖಕಿಯೇ ಹೇಳಿಕೊಂಡಿರುವಂತೆ "ಈ ಅನುಭವಗಳ ಮೂಲ ಎಲ್ಲೆಂದು ಅವರಿಗೇ ಗೊತ್ತಿಲ್ಲ. ಅವುಗಳನ್ನು ಅರ್ಥೈಸಲು ತಿಳಿದಿಲ್ಲ." ಅವರ ಸುಪ್ತ ಮನಸ್ಸಿನ ನೆರಳುಗಳನ್ನು ಹಿಡಿಯುವ ಅವರ ಹಂಬಲವನ್ನು ವ್ಯಕ್ತಪಡಿಸಲು ಪದಗಳಿಂದ, ಅಕ್ಷರಗಳಿಂದ ಸಾಧ್ಯವಿಲ್ಲ ಎಂದೂ ಹೇಳುತ್ತಾರೆ. ಅವರ ಭೂತ ಮತ್ತು ವರ್ತಮಾನಗಳನ್ನು ಬೆಸೆಯುವ ಒಂದು ಕ್ಷಣ ಈ ಸುಪ್ತ ಪ್ರಜ್ಞೆಯ 'ಅವಕಾಶ'ದಲ್ಲಿದೆ.

ಇವರು ಪಾಕಿಸ್ತಾನಿ ಕವಯಿತ್ರಿ ಸಾರಾ ಶಗುಫ್ತಾಳ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಒಂದು ನೋವಿನ ಬದುಕನ್ನು ಬದುಕಿದ ಸಾರಾ ಶಗುಫ್ತಾ ಜೂನ್ ೪ - ೧೯೮೪ರಂದು ಆತ್ಮಹತ್ಯೆಯ ಮೂಲಕ ಅಕಾಲ ಮರಣ ಹೊಂದಿದಳು.

ಏಕ್ ಥೀ ಸಾರಾ ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಈ ಪುಸ್ತಕ ಅಮೃತಾ ಪ್ರೀತಮರ ಸೃಜನಶೀಲ ನಿರೂಪಣೆಯಿಂದಾಗಿ ಕಾದಂಬರಿಯೇನೋ ಅನ್ನಿಸುತ್ತದೆ. ಮುಸ್ಲಿಂ ಸಂಪ್ರದಾಯದಲ್ಲಿ ಮುಗ್ಧ ಹೆಣ್ಣೂ ಮತ್ತು ಲೇಖಕಿಯೂ ಆಗಿರುವ ತರುಣಿಯೊಬ್ಬಳ ಜೀವನ ದುರಂತ ಕಥೆ ಇಲ್ಲಿದೆ.

ಕವಿಯೊಬ್ಬನನ್ನು ಪ್ರೀತಿಸಿ ಮದುವೆಯಾದ ಸಾರಾ ತಾನು ಮಾಡುತ್ತಿದ್ದ ನೌಕರಿಯನ್ನು ಅವನಿಗಾಗಿ ಬಿಟ್ಟುಬಿಡುತ್ತಾಳೆ. ಅವಳು ಗರ್ಭಿಣಿಯಾದಾಗ, ಹೆರಿಗೆಗಾಗಿ ಆಸ್ಪತ್ರೆಗೆ ಹೋದಾಗ ಅವಳ ಕವಿ ಪತಿ ತನ್ನ ಗೆಳೆಯರ ಜೊತೆ ಫ್ರಾಯ್ಡ್, ರಿಮ್‌ಬಾಡ್, ಸಾದಿ, ವಾರಿಸ್ ಶಹಾ ಕುರಿತು ಚರ್ಚೆ ನಡೆಸುತ್ತಿರುತ್ತಾನೆ. ಅವಳಿಗೆ ಸಹಾಯ ಮಾಡುವುದಿರಲಿ, ಅವಳ ಕಡೆ ತಿರುಗಿಯೂ ನೋಡುವುದಿಲ್ಲ. ಅವಳ ಮಗು ಆಸ್ಪತ್ರೆಯಲ್ಲಿ ತೀರಿಕೊಂಡಾಗ ಆಸ್ಪತ್ರೆ ಹಣ ಕಟ್ಟಲು ಅವಳ ಬಳಿ ಹಣ ಸಾಲದೆ ರಕ್ತ ಸಿಕ್ತ ಬಟ್ಟೆಯಲ್ಲೆ ೧೦೫° ಜ್ವರದಲ್ಲಿ ಮನೆಗೆ ಬಂದು ಈ ಸುದ್ದಿ ಹೇಳಿದಾಗ ಅವನು ಯಥಾಪ್ರಕಾರ ತನ್ನ ಗೆಳೆಯರ ಜೊತೆ ಚರ್ಚೆಯಲ್ಲಿ ಮುಳುಗಿದ್ದ. ಅವಳು ಗೆಳತಿಯೊಬ್ಬಳಿಂದ ಸಾಲ ಪಡೆದು ಆಸ್ಪತ್ರೆಗೆ ಹೋಗಿ ಮಗುವಿನ ಮೃತದೇಹವನ್ನು ಪಡೆದುಕೊಳ್ಳುತ್ತಾಳೆ. ಸಾರಾ ಜೀವನ ಮನ ಕಲಕುವಂತೆ ನಿರೂಪಿತವಾಗಿದೆ.

ಅಮೃತಾ ಪ್ರೀತಮ್ ಪರಂಪರೆಯೊಂದರ ಸೃಷ್ಟಿಕರ್ತೆ ಎಂಬುದು ೧೯೭೭ರಲ್ಲಿ ಪ್ರಕಟವಾದ ಅವರ ಆತ್ಮಚರಿತ್ರೆ ರಸೀದಿ ಟಿಕೆಟ್‌ನಿಂದ ತಿಳಿಯುತ್ತದೆ. ಹಸನ್ ನಯೀಂ ಸುರಕೋಡ ಅವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ರಸೀದಿ ಟಿಕೆಟ್‌ನ ಮೂಲದ ಕಾವ್ಯಮಯ ಭಾಷೆಯನ್ನು ಹಸನ್ ನಯೀಂ ಸಮರ್ಥವಾಗಿ ಕನ್ನಡಕ್ಕೆ ತಂದಿದ್ದಾರೆ. ಅಮೃತಾ ಅವರ ಆತ್ಮಚರಿತ್ರೆ ಹಲವು ಕಾರಣಗಳಿಂದ ಅವರ ಕಥೆ ಕಾದಂಬರಿಗಳಿಗಿಂತ ಹೆಚ್ಚು ಪ್ರಸಿದ್ಧವಾಗಿದೆ.

ಆಧುನಿಕ ಪಂಜಾಬಿ ಸಾಹಿತ್ಯ ಚರಿತ್ರೆಯ, ಸಾಂಸ್ಕೃತಿಕ ಚರಿತ್ರೆಯ ಹಲವು ಎಳೆಗಳು ಈ ಕೃತಿಯಲ್ಲಿವೆ. ಸ್ತ್ರೀ ಆಗಿರುವುದರಿಂದಾಗಿಯೇ ಬದುಕಿನಲ್ಲಿ, ಬರವಣಿಗೆಯಲ್ಲಿ ಅವರು ಎದುರಿಸಬೇಕಾದ ಸಮಸ್ಯೆಗಳು, ಅವುಗಳನ್ನು ಪರಿಹರಿಸಿಕೊಂಡ ರೀತಿ ಮೆಚ್ಚುವಂತಿವೆ. ೧೯೯೧ರಲ್ಲಿ ಈ ಕೃತಿಯ ಪರಿಷ್ಕೃತ ಎರಡನೇ ಆವೃತ್ತಿಯು ಪ್ರಕಟವಾಗಿದೆ.

"ಬದುಕಿನ ಲೇವಾದೇವಿಗೆ ಸಂಬಂಧಿಸಿದ ಕಾಗದ ಪತ್ರಗಳ ಮೇಲೆ ಒಂದು ಚಿಕ್ಕದಾದ ರಸೀದಿ ಟಿಕೇಟು ಅಂಟಿಸುತ್ತಿದ್ದೇನೇನೋ.... ಕವನಗಳು ಹಾಗೂ ಕಾದಂಬರಿಗಳ ಲೇವಾದೇವಿಯ ಕಚ್ಚಾ ರಸೀದಿಯನ್ನು ಪಕ್ಕಾ ಮಾಡಲೆಂದೇ ಈ ಸಾಲುಗಳು....(ರಸೀದಿ ಟಿಕೆಟ್, ೧) "Create an idealised image of yourself and try to resemble it" (ನಿನ್ನದೇ ಆದ ಆದರ್ಶೀಕೃತ ಪ್ರತಿಬಿಂಬವನ್ನು ರೂಪಿಸಿಕೋ ಹಾಗೂ ಅದನ್ನು ಹೋಲುವುದಕ್ಕೆ ಪ್ರಯತ್ನಿಸು) ಎಂಬ 'ಕಜಾನ್ ಜಾಕಿಸ'ರ ಮಾತು ತಮಗೆ ಜೀವನದುದ್ದಕ್ಕೂ ಸಹಾಯ ಮಾಡಿತು ಎಂದು ಅಮೃತಾ ಪ್ರೀತಂ ಹೇಳುತ್ತಾರೆ. ಜೀವನವಿಡೀ ಗಂಟುಮೂಟೆಗಳೊಂದಿಗೆ ಪ್ರಯಾಣಿಸಿದ ಮನುಷ್ಯರು ಎಲ್ಲಿದ್ದರು? (ರಸೀದಿ ಟಿಕೆಟ್, ೮೪) ಎಂದು ವಿಷಾದಿಸುವ ಅಮೃತಾ ಬದುಕಿನ ಬಟ್ಟಲಲ್ಲಿ ಮಾನವ ಪ್ರೇಮದ ಹಲವಾರು ಹನಿಗಳಿವೆ ಈ ಬಟ್ಟಲು ಮಧುರವಾಗಿದೆ (ರಸೀದಿ ಟಿಕೆಟ್, ೫೭) ಎಂದೊಮ್ಮೆ ಸಮಾಧಾನ ವ್ಯಕ್ತಪಡಿಸುತ್ತಾರೆ.

ತಮ್ಮ ಆತ್ಮ ಚರಿತ್ರೆಯ ಎರಡು ಭಾಗಗಳಲ್ಲಿ ಬರೆದುಕೊಂಡಿರುವಂತೆ ಅವರು ಪ್ರೀತಂ ಸಿಂಗ್‌ರಿಂದ ವಿಚ್ಛೇದನ ಪಡೆದ ಮೇಲೆ ತಮ್ಮ ೪೪ನೇ ವಯಸ್ಸಿನಿಂದ ಜಗತ್ಪ್ರಸಿದ್ಧ ಕಲಾವಿದ ಇಮ್ರೋಜ್ ಜೊತೆ ಸಹಜೀವನ ನಡೆಸಿದರು. ಯಾವುದೇ ಕಾನೂನು ಬಂಧನವಾಗಬಾರದು ಎಂಬುದು ಅವರ ಇಚ್ಛೆಯಾಗಿತ್ತು. 'ಇಮ್ರೋಜ್ ಜೊತೆ ಕಳೆದ ಬದುಕು ಭಾವ ಸಮಾಧಿಯ ಹಂತ ತಲುಪಿದೆ'(೯೮) 'ದೇವರು ಇಂಥ ಮನುಷ್ಯನಿಗಿಂತ ಭಿನ್ನವಾಗಿರಬಹುದೇ ಎಂದು ಯೋಚಿಸುತ್ತೇನೆ ' (ರಸೀದಿ ಟಿಕೆಟ್, ೧೦೩) ಇಮ್ರೋಜ್ ಜೊತೆಗಿನ ನಾಲ್ಕು ದಶಕಗಳ ಜೀವನ 'ಶಿವನ ಮದುವೆಯನ್ನು ನೋಡಲು ಬಂದಂತಿದೆ' ಎಂದು ಬರೆಯುತ್ತಾರೆ.

ಅಮೃತಾ ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಸಾಹಿರ್ ಅವರನ್ನು ಒಂದು ಉರ್ದು ಕವಿಗೋಷ್ಠಿಯಲ್ಲಿ ನೋಡಿದರು. ಕಾರ್ಯಕ್ರಮ ಮುಗಿದ ಮೇಲೆ ಎಲ್ಲರೂ ಕವಿಯ ಹಸ್ತಾಕ್ಷರ ಪಡೆಯುವಾಗ ಅಮೃತಾ ತಮ್ಮ ಅಂಗೈ ಮೇಲೆ ಹಸ್ತಾಕ್ಷರ ಪಡೆಯಲು ಕೈಚಾಚಿದಾಗ ಸಾಹಿರ್ ತಮ್ಮ ಹೆಬ್ಬೆರಳಿಗೆ ಮಸಿ ಹಚ್ಚಿಕೊಂಡು ಅದನ್ನು ಅಮೃತಾ ಕೈ ಮೇಲೆ ಹಸ್ತಾಕ್ಷರದಂತೆ ಮುದ್ರಿಸಿದರು. "ಅವನು ಹಸ್ತಾಕ್ಷರ ನೀಡಿದ ನನ್ನ ಈ ಅಂಗೈ ಮೇಲೆ (ಕಾಗದದ ಮೇಲೆ) ಏನು ಬರೆಯಲಾಗಿತ್ತೋ ಅವೆಲ್ಲ ಗಾಳಿಯ ಪಾಲಾಯಿತು. ಅವನು ಕೂಡಾ ಅದನ್ನೋದಲಿಲ್ಲಾ ಬದುಕು ಕೂಡಾ ಓದಲಿಲ್ಲ. ಅದಕ್ಕೆಂತಲೇ ನಾನು ಸಾಹಿರ್ ಒಂದು ಕಲ್ಪನೆಯಾಗಿದ್ದ ಎಂದು ಹೇಳಬಲ್ಲೆ. ಗಾಳಿಯಲ್ಲಿ ಹೊಳೆಯುವ ಪ್ರಾಯಃ ನನ್ನದೇ ಕಲ್ಪನೆಯ ಒಂದು ಮೋಡಿಯಾಗಿದ್ದ" (ರಶೀದಿ ಟಿಕೆಟ್. ೯೮) ಈ ನಮ್ಮ ಸಂಬಂಧಗಳ ದೀರ್ಘ ಕಾಲಾವಧಿಯಲ್ಲಿ ತನುವಿಲ್ಲ, ಕೇವಲ

ಮನೋಮಯ ವ್ಯಾಪಾರವಿದೆ. ಅದರ ನೆರಳು ಎದೆಬಡಿತ ನನ್ನ ಕವಿತೆಗಳಲ್ಲಿ ಕಾಣಬಹುದು. (ನುಡಿಯ ನೆರಳು, ೧೬)

ಅಮೃತಾ ಅವರ ಬರವಣಿಗೆಯಲ್ಲಿ ಬೆಂಕಿಯ ರೂಪಕ, ಪ್ರತಿಮೆಗಳು ಮತ್ತೆ ಮತ್ತೆ ಬಳಕೆಯಾಗಿವೆ.

'ನಿನ್ನ ಬೆಂಕಿಯ ಆಯುಷ್ಯ ನಿನ್ನ ಅಕ್ಷರಗಳಿಗೆ ದಕ್ಕಲಿ. (ರಶೀದಿ ಟಿಕೆಟ್, ೧೧೧) ನೆರಳನ್ನು ಬೇಕೆನ್ನುವವರೇ ಎದೆಯಲ್ಲಿ ಉರಿಯುವ ಬೆಂಕಿಗೆ ನೆರಳಿಲ್ಲ (ರಶೀದಿ ಟಿಕೆಟ್, ೧೧೭)

ಸಾಹಿರ್ ಲೂದಿಯಾನ್ವಿ ಕುರಿತು ಬರೆದ ಸುನಹಡೆಗೆ (ಸಂದೇಶ) ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ "ನಖಶಿಖಾಂತ ಬೆಂಕಿಯಲ್ಲಿ ಮಿಂದಂತಾಯಿತು" .... ಓ ದೇವರೇ ಈ ಸುನಹಡೆಯನ್ನು ಯಾವುದೇ ಬಹುಮಾನಕ್ಕಾಗಿ ಬರೆಯಲಿಲ್ಲ ಯಾರಿಗಾಗಿ ಬರೆದೆನೋ ಅವನೇ ಅದನ್ನು ಓದಲಿಲ್ಲ' (ರಶೀದಿ ಟಿಕೆಟ್, ೧೮)

ಸಾಹಿರ್ ಕುರಿತು ಅಮೃತಾ ಹೀಗೆ ಬರೆಯುತ್ತಾರೆ. ಮನಸ್ಸಿನಾಳದ ಮೊದಲ ನೋವನ್ನು ಒಂದು ವ್ಯಕ್ತಿತ್ವದ ಬೆಳಕಿನಲ್ಲಿ ನೋಡಿದೆ. ಯಾವ ಧರ್ಮದ ಜನರಿಗಾಗಿ ಮನೆಯಲ್ಲಿ ಪಾತ್ರೆಗಳನ್ನು ಪ್ರತ್ಯೇಕವಾಗಿರಿಸುತ್ತಿದ್ದರೋ, ಆ ಧರ್ಮದ ವ್ಯಕ್ತಿಯಾಗಿದ್ದ ಅವನು.... ಅದೇ ವ್ಯಕ್ತಿತ್ವ ನನ್ನೊಳಗಿನ ಮನುಷ್ಯಳನ್ನು ಅದೆಷ್ಟು ವಿಶಾಲ ಹೃದಯಿಯನ್ನಾಗಿ ಮಾಡಿತೆಂದರೆ ಭಾರತ ವಿಭಜನೆ ಕಾಲಕ್ಕೆ ವಿಭಜನೆಯಿಂದ ಸ್ವತಃ ನಾನೇ ಸಂತ್ರಸ್ತಳಾದರೂ ಎರಡೂ ಧರ್ಮದವರ ಅತ್ಯಾಚಾರಗಳನ್ನು ಯಾವುದೇ ರಿಯಾಯಿತಿ ಇಲ್ಲದೆ ದ್ವಂದ್ವವಿಲ್ಲದೆ ಬರೆಯುವುದು ಸಾಧ್ಯವಾಯಿತು. ಆ ಮುಖವನ್ನು ನೋಡದೆ ಇದ್ದಿದ್ದರೆ 'ಪಿಂಜರ್' ಕಾದಂಬರಿಯ ಗತಿ ಏನಾಗುತ್ತಿತ್ತೋ' (ರಶೀದಿ ಟಿಕೆಟ್,೧೮)

ಉರ್ದು ಕವಿಗೋಷ್ಠಿಯೊಂದರಲ್ಲಿ ಕಂಡ ಸಾಹಿರ್‌ನನ್ನು ಪ್ರೀತಿಸತೊಡಗಿದ ಅಮೃತಾ ಸಂಪ್ರದಾಯದ, ಸಂಸ್ಕಾರದ ಚೌಕಟ್ಟನ್ನು ಮೀರಿ ಅವನ ಕೈಯನ್ನು ಸ್ಪರ್ಶಿಸುವುದು ಸಾಧ್ಯವಿರಲಿಲ್ಲ. ಅವನು ಸೇದಿ ಬಿಸುಟ ಸಿಗರೇಟಿನ ತುಂಡುಗಳನ್ನು ಕೈಲಿ ಹಿಡಿದು ಅವನ ಸ್ಪರ್ಶವನ್ನು ಪಡೆಯುತ್ತಿದ್ದೆ..... ಎಂದು ಹೇಳುತ್ತಾರೆ. ಈ ಕುರಿತು ಇದು ಕತೆಯಲ್ಲ.... ಎಂಬ ಅಧ್ಯಾಯವನ್ನು ಬರೆದಿದ್ದಾರೆ. (ನುಡಿಯ ನೆರಳು, ೧೯)

ಲಾಹೋರ್‌ನಲ್ಲಿಯೇ ಉಳಿದ 'ಸಜ್ಜಾದ ಹೈದರ್'ರಂತಹ ಸಹೃದಯಿಗಳ ಸ್ನೇಹ ಅಮೃತಾ ಅವರಿಗೆ ಕೊನೆಯವರೆಗೂ ನೆರವಿನ ಹಸ್ತವನ್ನು ಚಾಚಿತ್ತು. ಅಮೃತಾ ಪ್ರೀತಂ ಅವರಿಗೆ ಹನ್ನೊಂದಕ್ಕೆ ತಾಯಿಯನ್ನು ಕಳೆದುಕೊಂಡ ದುಃಖ, ತಂದೆ ಹಲವರಿಂದ ಮೋಸ ಹೋದ ಕಥೆ, ದಾಂಪತ್ಯದೊಳಗಿನ ಒಂಟಿತನ, ತಾರುಣ್ಯದಲ್ಲಿಯೇ ದೇಶ ವಿಭಜನೆಯ ಸಂದರ್ಭದಲ್ಲಿ ಅನುಭವಿಸಿದ ದುಃಖ, ನೋವು, ನೋಡಿದ ಹಿಂಸೆ, ಸಹಲೇಖಕರ ಸಣ್ಣತನ, ತಮ್ಮ ವಿರುದ್ಧ ನಡೆಸಿದ ಅಪಪ್ರಚಾರ - ಹೀಗೆ ನೋವು ಅವರ ಲೇಖನಿಯನ್ನು ಜೀವಂತವಾಗಿಟ್ಟಿತು. ಆತ್ಮಚರಿತ್ರೆಯ ತುಂಬ ನೋವಿನ ಕಥೆಗಳೇ ತುಂಬಿವೆ.

ಕೊನೆಯ ಅಧ್ಯಾಯ 'ಹೋರಾಟ ಮುಂದುವರೆದಿದೆ' ; ಬೆಲೆ ತೆರಲು ನಾನು ಸಿದ್ಧವಾಗಿದ್ದೇನೆ ಎಂದು ಮುಗಿಸುತ್ತಾರೆ. ಅಮೃತಾ ಪ್ರೀತಂ ಅವರ ಅಸ್ಮಿತೆಯನ್ನು ಈ ಮಾತು ಸೂಚಿಸುತ್ತದೆ. ಆತ್ಮವಿಶ್ವಾಸದಿಂದ ಬದುಕನ್ನು ಎದುರಿಸಿದ ಅಮೃತಾ ಮುಂದಿನ ಈ ಪೀಳಿಗೆಯ ಲೇಖಕರಿಗೆ 'ಮಾದರಿ'ಯೊಂದನ್ನು ನಿರ್ಮಿಸಿದ್ದಾರೆ.

ಅಂದಿನ ಸಮಾಜ ಸಾಂಪ್ರದಾಯಿಕ ಸ್ತ್ರೀ ಹೇಗಿರಬೇಕೆಂದು ನಿರೀಕ್ಷಿಸಿತೋ ಆ ನಿರೀಕ್ಷೆಯನ್ನು ಅಮೃತಾ ಸುಳ್ಳಾಗಿಸಿದರು. ಆದರಿಂದಾಗಿ ಅವರು ನೋವು ಅನುಭವಿಸಬೇಕಾಯಿತು ಎಂಬ ಮಾತು ಅರ್ಧಸತ್ಯ ಮಾತ್ರ. ಪಿಂಜರಾದ ಪೂರೋ ಆಗಲಿ, ಅವರ ಕತೆಗಳಲ್ಲಿನ ರೂಪೋ, ಭಂತಿ ಅವರಾಗಲೀ ತಮ್ಮ ತಪ್ಪೇನೂ ಇಲ್ಲದೆ ದುಃಖವನ್ನು ಅನುಭವಿಸುತ್ತಾರೆ. ತಮ್ಮ ವಿರೋಧಿಗಳ ಕೈಗೆ ತಮ್ಮ ಆತ್ಮಚರಿತ್ರೆ ಹೋಗದಿರಲಿ ಎಂದು ಹೇಳುತ್ತಾ ತಮ್ಮ ಮಗ ಚಿಕ್ಕವನಿದ್ದಾಗ ಆಡಿದ ಮಾತೊಂದನ್ನು ನೆನಪಿಸಿಕೊಳ್ಳುತ್ತಾರೆ. ಅಮೃತಾ ದೆಹಲಿ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದರು. ಮನೆಯಲ್ಲಿ ರೇಡಿಯೋ ಇರಲಿಲ್ಲ. ಅಮ್ಮನ ದನಿಯನ್ನು ಕೇಳಲು ಮಕ್ಕಳಿಬ್ಬರೂ ಪಕ್ಕದ ಮನೆಗೆ ಹೋಗುತ್ತಿದ್ದರು. ಆ ಮನೆಯ ಮಗು ಬೋಲೂನ ಜೊತೆ ಜಗಳವಾದಾಗ ಮಗ ಹೇಳಿದ 'ಮ್‌ಮಾ ಒಂದು ಮಾತನ್ನು ಕೇಳುವಿಯಾ ನೀನು ಬೋಲೂನ ರೇಡಿಯೋದಲ್ಲಿ ಮಾತಾಡಬೇಡ' ಯಾರ ಮನೆಗೆ ಅವನು ಹೋಗಲಾರನೋ ಅಲ್ಲಿಗೆ ನನ್ನ ದನಿಯೂ ಹೋಗಬಾರದು ಎಂಬುದು ಅವನ ಗ್ರಹಿಕೆ.

ಆತ್ಮಗೌರವಕ್ಕೆ ಧಕ್ಕೆ ಆಗದಂತೆ ಅಮೃತಾ ತಮಗಾಗಿ ಜೀವಿಸಿದ ಬಗೆ ಇತರರಿಗೆ ಮಾದರಿಯದು. ಘನತೆಯಿಂದ ಕೂಡಿದ ಅವರ ಬದುಕು ಅವರ ಸಾಹಿತ್ಯಕ್ಕೂ ಘನತೆಯನ್ನು ತಂದಿದೆ. ಬರಹ ಅವರ ನಿಜವಾದ ಸಂಗಾತಿ. 'ಬದುಕಿನ ಏರಿಳಿತಗಳಲ್ಲಿ ನನ್ನ ಒಡನಾಡಿ ಯಾರಾದರೂ ಇದ್ದರೆ ಅದು ನನ್ನ ಲೇಖನಿ' (ರಸೀದಿ ಟಿಕೆಟ್, ೧೪೭) 'ನನ್ನ ಶವದ ಬಳಿ ನನ್ನ ಲೇಖನಿ ಇಡಬೇಕೆಂದು ಬಯಸುತ್ತೇನೆ (ರಸೀದಿ ಟಿಕೆಟ್, ೧೪೯) ಎಂದು ಹೇಳುವುದರ ಮೂಲಕ ತಮ್ಮ ನೋವಿಗೆ ಲೇಖನಿಯಿಂದ ಸಾಂತ್ವನ ದೊರೆಯುತ್ತಿತ್ತೆಂದು ತಿಳಿಸಿದ್ದಾರೆ.

೧೯೯೬ರಲ್ಲಿ ಪ್ರಕಟವಾದ **'Shadow of words'** (ಕನ್ನಡದಲ್ಲಿ ನುಡಿಯ ನೆರಳು. ಅನು: ಶೈಲಜಾ ಉಡಚಣ) ನಲ್ಲಿ ಅಮೃತಾ ಅವರ ಚಿಂತನೆ ಆಧ್ಯಾತ್ಮಿಕ, ಅಲೌಕಿಕವಾದ ಹಲವು ಅಂಶಗಳನ್ನು ಒಳಗೊಂಡಿದೆ. ಪರಾ -ಕಾಯದ ಅನೇಕ ಅನುಭವಗಳನ್ನು ಹೇಳಿಕೊಂಡಿದ್ದಾರೆ.

**ಕಿರಣದಿಂದ ಮುರಿದು ಬಿದ್ದ ಬೆಳಕಿನ ತುಂಡು**
**ಕೋಶದ ಕತ್ತಲೆಯೊಳಗೆ ಬೀಜ ಬಿತ್ತಿತ್ತು.**
**.........................**
**ಒಂದು ಚುಕ್ಕಿಯಾಗಿ ಆಕಾಶಕ್ಕೆ ನೆಗೆಯಿತು**
**ನಾನಾಕ್ಷಣದ ದರ್ಶಕಳಾಗಿರುವೆ**
**ಈ ತಾರೆಯ ಅಪಹರಣದ ಗಾಥೆ**

ಚಂದ್ರನಿಗರಿಯದು ಬೃಹಸ್ಪತಿಗೂ ತಿಳಿಯದು
ಕಾಯಕ್ಕೆ ನಾನು ನೋವಿನ ತಿಲಕವಿಟ್ಟೆ
ನೋವು ಎದೆಯಿಂದ ಬಂದು ಅಧರಗಳ ಮೇಲೆ
ನಿಂದು ನಾನು ಆ ಕ್ಷಣದ ದರ್ಶಕಳಾದೆ (ನುಡಿಯ ನೆರಳು, ೧೦೫)

**ಅಕ್ಷರಗಳ ತಾಪದಲ್ಲಿ** ಎಂಬ ಅಧ್ಯಾಯದಲ್ಲಿ ಅವರು ಪ್ರಾಚೀನ ಪಂಜಾಬಿನ ಕಲೆ, ಸಂಸ್ಕೃತಿ, ಸಾಹಿತ್ಯದ ಕುರಿತು ಬರೆಯುತ್ತಾ "ಇದೇ ಪಂಜಾಬದ ನೆಲದಲ್ಲಿ ಎಲ್ಲಿ ಋಗ್ವಾಣಿ, ಕೃಷ್ಣವಾಣಿ, ಗೋರಖವಾಣಿ ಮತ್ತು ನಾನಕವಾಣಿಯೊಳಗಿನ ಅಕ್ಷರಗಳು ಸೂರ್ಯನಂತೆ ಪರಿದ್ದವೋ ಮತ್ತೆ ವೃಕ್ಷಗಳಂತೆ ಬೆಳೆದು ಆಕಾಶ ಕಂಡಿದ್ದವೋ ಆ ಅಕ್ಷರಗಳ ತಾಪದಲ್ಲಿ ಜನ ಬಿಸಿಯಾಗುತ್ತಿದ್ದರೋ ಅದೇ ಅಕ್ಷರಗಳ ನೆರಳಲ್ಲಿ ಕುಳಿತೇಳುತ್ತಿದ್ದರೋ ಇಂದು ಅದೆಲ್ಲ ಎಲ್ಲಿ ಹೋಯಿತು? ನನಗೆ ತಾಪವಾಗುತ್ತಿದೆ ತಳಮಳವಾಗುತ್ತಿದೆ ಪಂಜಾಬಿನಲ್ಲಿ ಯಾವ ಗಾಳಿ ಬೀಸುತ್ತಿತ್ತೋ ಅದರಲ್ಲೀಗ ಜನರ ಉಸಿರಿನಲ್ಲಿ ಯಾರು ದ್ವೇಷದ ಗಾಳಿ ಸೇರಿಸುತ್ತಿರುವವರು?" (ನುಡಿಯ ನೆರಳು, ೯೨) ಎಂದು ಪಂಜಾಬಿನ ಇಂದಿನ ಸ್ಥಿತಿಯ ಬಗ್ಗೆ ವಿಷಾದಿಸುತ್ತಾರೆ. **'ಹುಜರೇಕಿ ಮಿಟ್ಟಿ'** (ಸಾಕ್ಷಾತ್ಕಾರದ ಭೂಮಿ) ಎಂಬ ಅಧ್ಯಾಯದಲ್ಲಿ ತಮ್ಮ ಅಲೌಕಿಕ ಚಿಂತನೆಯನ್ನು ತೆರೆದಿಟ್ಟಿದ್ದಾರೆ. **'ಶಕ್ತಿಕಣಗಳ ನೆರಳು'** ಎಂಬ ಅಧ್ಯಾಯದಲ್ಲಿ 'ಎರಡು ನದಿಗಳ' ದಡದ ಪ್ರಯಾಣವನ್ನು ಕುರಿತು ಬರೆದಿದ್ದಾರೆ.

ಅಮೃತಾ ಪ್ರೀತಂ ಪರಂಪರೆಯನ್ನು ನಿರ್ಮಿಸಿದ ಲೇಖಕಿ, ಸ್ವಾತಂತ್ರ್ಯದ ಹಿಂದು ಮುಂದಿನ ದಶಕಗಳಲ್ಲಿ ಕ್ರಾಂತಿಕಾರಕವಾಗಿ ಬರೆದು ಹೆಣ್ಣಿನ ಕುರಿತ ಗೃಹೀತ ಕಲ್ಪನೆಗಳನ್ನು ಮುರಿದಿದ್ದಕ್ಕಾಗಿ ಅವರು ನೋವು, ದುಃಖ, ಅಪಮಾನಗಳನ್ನು ಅನುಭವಿಸಬೇಕಾಯಿತು. ತಾವು ನೋವು ಅನುಭವಿಸುವ ಮೂಲಕ ಅಮೃತಾ ಮುಂದೆ ಬರೆಯುವ ಲೇಖಕಿಯರ ದಾರಿಗಳನ್ನು ಸ್ವಲ್ಪ ಮಟ್ಟಿಗಾದರೂ ಸುಗಮಗೊಳಿಸಿದರು. ಪಂಜಾಬಿ ಭಾಷೆಯಲ್ಲಿ ಐವತ್ತು, ಅರವತ್ತರ ದಶಕಗಳಲ್ಲಿ ತಮ್ಮ ವಿರುದ್ಧ ಬರೆಯದೇ ಇದ್ದ ಪತ್ರಿಕೆಗಳೇ ಇರಲಿಲ್ಲ ಎಂದು ಹೇಳುತ್ತಾರೆ. ಆದರೆ ಆ ಪತ್ರಿಕೆಗಳು ಅಮೃತಾ ಅವರ ಕಣ್ಣಿಗೆ ಬೀಳದಂತೆ ಅವರ ಪತಿ ಇಮ್ರೋಜ್ ಜಾಗ್ರತೆ ವಹಿಸುತ್ತಿದ್ದರು. ವಿದೇಶಕ್ಕೆ ಹೊರಟ ಲೇಖಕರ ನಿಯೋಗವೊಂದರಲ್ಲಿ ಅಮೃತಾ ಇದ್ದರೆ ತಮ್ಮ ಲೇಖಕ ಪತಿಯನ್ನು ಜೊತೆಗೆ ಕಳಿಸುವುದಿಲ್ಲ ಎಂದು ಲೇಖಕರೊಬ್ಬರ ಪತ್ನಿ ಹೇಳಿದರಂತೆ. ಅವರು ಇಮ್ರೋಜ್ ಜೊತೆ ವಾಸಿಸತೊಡಗಿದಾಗ ಸುತ್ತಲಿನ ಸ್ನೇಹಿತರು, ಬಂಧುಗಳ ಪ್ರತಿಕ್ರಿಯೆ ನೋವುಂಟು ಮಾಡುವಂತಹುದಾಗಿತ್ತು. ಈ ಎಲ್ಲ ನೋವಿನ ಸಾವು ಹುಟ್ಟುಗಳ ಅನುಭವ ಕುರಿತು 'The other Dimension'ಕೃತಿಯ ಪ್ರಾರಂಭದಲ್ಲಿ ಅಮೃತಾ ಬರೆದಿದ್ದಾರೆ.

Now the pheonix sings the 'Deepak Raag'
On the flames of its love it burns.
Ash is the consequence of this raag
I salute the ash of the pheonix.

ಅಮೃತಾ ಅಪಾರ ಆತ್ಮವಿಶ್ವಾಸದಿಂದ ಬರೆದಿದ್ದರಿಂದ ಪಂಜಾಬಿ ಭಾಷೆಯ ಲೇಖಕಿಯರಿಗೆ ಹೊಸ ಮಾರ್ಗವೊಂದು ಅವರ ಅಭಿವ್ಯಕ್ತಿಗೆ ತೆರೆದುಕೊಂಡಿತು. ಅಜಿತ್ ಕೌರ್, ದಲೀಪ್ ಕೌರ್ ಟಿವಾನ ಮುಂತಾದವರ ನಿರ್ಭಿಡೆಯ ಬರವಣಿಗೆಯ ಹಿಂದೆ ಅಮೃತಾ ಅವರ ಶ್ರಮ ಮತ್ತು ಸಾಧನೆಗಳಿವೆ.

ಎಂಭತ್ತಾರು ವರ್ಷಗಳ ತುಂಬು ಬಾಳಿನಲ್ಲಿ ಎಪ್ಪತ್ತೈದಕ್ಕೂ ಮಿಕ್ಕಿ ಕೃತಿ ರಚನೆ ಮಾಡಿದ ಅಮೃತಾ ಪ್ರೀತಂ ಅವರಿಗೆ 'ಕಂದಲಾ' ಎಂಬ ಮಗಳೂ 'ನವರೋಜ್' ಹೆಸರಿನ ಮಗನೂ ಇದ್ದಾರೆ. ೨೦೦೫ರ ಅಕ್ಟೋಬರ್ ೩೧ರಂದು ಅಮೃತಾ ಪ್ರೀತಂ ನಿಧನರಾದಾಗ ವಿವಿಧ ಪತ್ರಿಕೆಗಳಲ್ಲಿ ಅವರ ಬಗ್ಗೆ ಬಂದ ಲೇಖನಗಳು ಅವರ ಸಾಹಿತ್ಯಕ ಸಾಧನೆಗಳಿಗಿಂತ ಹೆಚ್ಚಾಗಿ ವ್ಯಕ್ತಿಗತ ಅಂಶಗಳಿಗೇ ಪ್ರಾಮುಖ್ಯ ನೀಡಿದವು.

ಎಂಭತ್ತರ ದಶಕದಲ್ಲಿ ಹಾ.ಮಾ. ನಾಯಕರು ಅಮೃತಾರ ಕೆಲವು ಚಿಕ್ಕ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿ 'ಸುನೇರಿ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದರು. ಕೆಲವು ಪತ್ರಿಕೆಗಳು ಅಮೃತಾ ಪ್ರೀತಂರ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ ಪಡೆದ 'ಸುನಹೆಡೆ' ಕೃತಿಯ ಕನ್ನಡಾನುವಾದ ಹಾ.ಮಾ. ನಾಯಕರ 'ಸುನೇರಿ' ಎಂಬಂತೆ ತಪ್ಪಾಗಿ ಬರೆದವು. ಸುಸಹೆಡೆ ದೀರ್ಘ ಕವಿತೆಯನ್ನು ಹಸನ್ ನಯೀಂ ಅವರು 'ಹೂವಿನ ಹಂಬಲ' ಎಂದು ಅನುವಾದಿಸಿದ್ದಾರೆ.

ಸಿಗರೇಟಿನ ರೂಪಕವಿದ್ದ ಕಿರು ಕವಿತೆಯ ಸರಿಯಾದ ಅನುವಾದವನ್ನು ಡಾ|| ಆರ್. ಲಕ್ಷ್ಮೀನಾರಾಯಣ ಅವರು ಮಾಡಿದ್ದಾರೆ.

> **ಒಂದು ನೋವಿತ್ತು**
> **ಸದ್ದಿಲ್ಲದೆ ನಾನದನು ಸಿಗರೇಟಿನ ಹಾಗೆ**
> **ಸೇದಿಬಿಟ್ಟೆ.**
> **ಒಂದಿಷ್ಟು ಕವಿತೆಗಳು ಮಾತ್ರ ಉಳಿದಿವೆ**
> **ಸಿಗರೇಟಿನಿಂದ ಹೊಮ್ಮಿದ ಬೂದಿಯನು**
> **ಕೊಡಿಸಿಡುವಂತಿವನು ಕೂಡಿಸಿಟ್ಟಿಹೆನು ನಾನು.**

ಅವರ ನೋವು ಉರಿದು ಉಳಿದ ಬೂದಿ 'ಕವಿತೆ'ಗಳ ರೂಪದಲ್ಲಿದೆ ಎಂದು ಕವಯಿತ್ರಿ ವಿಷಾದದಿಂದ ಬರೆದಿರುವ ಸಾಲುಗಳು ಇವು.

ಹಾ. ಮಾ. ನಾಯಕರು 'ಸುನೇರಿ'ಯಲ್ಲಿ ಈ ಕವಿತೆಯನ್ನು

> 'ಕೆಲವು ಹಾಡುಗಳಿವೆ
> ಸಿಗರೇಟಿನಿಂದ
> ಬೂದಿ ಕೆಡವಿದ ಹಾಗೆ
> ಕೊಡವಿದ್ದೇನೆ'

ಎಂದು ಅಸಮರ್ಪಕವಾಗಿ ಅನುವಾದಿಸಿದ್ದಾರೆ. (ಸುನೇರಿ, ೧)

ಪತ್ರಿಕೆಗಳಲ್ಲಿ ಬಂದ ಲೇಖನಗಳಲ್ಲಿ ಪ್ರಸ್ತಾಪಿತವಾದುದು ಅವರ ಕತೆ ಕಾದಂಬರಿಗಳಲ್ಲಿ, ಸಿಗರೇಟಿನ ರೂಪಕವಿದ್ದ ಚುಟುಕು ಕವಿತೆ, ಅವರ ಆತ್ಮಕಥೆ ರಶೀದಿ ಟಿಕೇಟ್‌ನ ರೋಚಕ ಅನ್ನಿಸುವ ಕೆಲವು ಉಲ್ಲೇಖಗಳನ್ನು ಮಾತ್ರ ಪ್ರಸ್ತಾಪಿಸಲಾಯ್ತು. ಮುಖ್ಯವಾಗಿ ಅವರು ಒಂದಕ್ಕಿಂತ ಹೆಚ್ಚು ಪ್ರೇಮಗಳನ್ನು ಹೊಂದಿದ್ದರೆಂಬುದನ್ನು ವರ್ಣಮಯವಾಗಿ ಚಿತ್ರಿಸಲಾಯ್ತು. ಸ್ವತಃ ಅಮೃತಾ ಅವರೇ, ಸಾಹಿರ್ ಕುರಿತು ಬರೆದಿದ್ದನ್ನು ಈ ಲೇಖನದಲ್ಲಿ ಮೊದಲೇ ಪ್ರಸ್ತಾಪಿಸಲಾಗಿದೆ. ಚಿಕ್ಕಂದಿನಲ್ಲಿ ತಾಯಿಯನ್ನು ಕಳೆದುಕೊಂಡು, ಹುಟ್ಟಿ ಬೆಳೆದ ಊರು ಪರಿಸರದಿಂದ ದೂರಾಗಿ ಬದುಕಿದ ಅಮೃತಾ ಪ್ರೀತಿಗಾಗಿ ಪರಿತಪಿಸಿದರು. ಅವರ ಈ ಹುಡುಕಾಟದಲ್ಲಿ ಸಾಹಿರ್ ಅವರ ವ್ಯಕ್ತಿತ್ವ ಆದರ್ಶವಾಗಿ ಕಂಡರೂ, ಸಾಹಿರ್ ಕೇವಲ ಕಲ್ಪನೆಯಲ್ಲಿ ಉಳಿದ ಎಂದು ನೋವಿನಿಂದ ಬರೆಯುತ್ತಾರೆ. ಉನ್ನತ ಮನ್ನಣೆ ಪಡೆದ ಹಲವು ಲೇಖಕರು ಅಮೃತಾ ಅವರಿಗಿಂತ ವರ್ಣರಂಜಿತ ಬದುಕು ಬದುಕಿದರೂ ಅಂತಹ ಪುರುಷ ಲೇಖಕರ ಖಾಸಗಿ ವ್ಯಕ್ತಿತ್ವ ಹಿನ್ನೆಲೆಯಲ್ಲೇ ಉಳಿದು ಅವರ ಸಾಹಿತ್ಯಕ ಸಾಧನೆ ಮಾತ್ರ ಪರಿಗಣಿತವಾಗುತ್ತದೆ. ಲೇಖಕಿಯೊಬ್ಬಳ ವಿಷಯ ಬಂದಾಗ ಇದು ತಿರುವು ಮುರುವಾಗಿ ಅವಳ ಸಾಧನೆ ಎರಡನೆಯದಾಗಿ ಅವಳ ಖಾಸಗಿ ಜೀವನ ಹೆಚ್ಚು ಪ್ರಚಾರ ಪಡೆಯುತ್ತದೆ. ಈ ಭೇದವನ್ನು ಅಳಿಸಿದಾಗ ಅಮೃತಾ ಪ್ರೀತಂ ಹೋರಾಟದ ಬದುಕಿಗೆ ಅರ್ಥ ಒದಗಿಸಿದಂತಾಗುತ್ತದೆ.

ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಪಂಜಾಬಿ ಲೇಖಕಿ ಅಮೃತಾ ಪ್ರೀತಮ್ ಮೊದಲನೇ ಸಲ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮಹಿಳೆಯೂ ಹೌದು. ಎರಡು ಅವಧಿಗೆ ಅವರು ರಾಜ್ಯಸಭೆಯ ಸದಸ್ಯರಾಗಿದ್ದರು. ಪದ್ಮಶ್ರೀ, ಪದ್ಮವಿಭೂಷಣ, ಐದು ವಿಶ್ವವಿದ್ಯಾನಿಲಯಗಳ ಗೌರವ ಡಿ.ಲಿಟ್.ಗಳು, ಹಲವಾರು ದೇಶಗಳ ಉನ್ನತ ಗೌರವಗಳು ಅವರಿಗೆ ದೊರೆತಿವೆ. ಇವುಗಳ ಜೊತೆಗೆ ದೆಹಲಿ ಸರಕಾರ 'ಸಹಸ್ರಮಾನದ ಕವಯತ್ರಿ' ಪ್ರಶಸ್ತಿ ನೀಡಿದೆ. ಅವರ ಬದುಕೇ ಒಂದು ಕಾವ್ಯದಂತೆ. ಕಾವ್ಯವನ್ನೇ ಬದುಕಿದವರು ಅವರು.

ಅವರ ಬದುಕಿನ ಒಂದು ಹಂತದಲ್ಲಿ ನಿಂತು ನೋಡಿದಾಗ 'ಕಾಲ'ನ ಜೊತೆ ನಡೆಸಿದ ಸಂಭಾಷಣೆಯ ಒಂದು ತುಣುಕು ಮತ್ತು ಅವರ 'ನೀನು ಬರಲಿಲ್ಲ' ಎಂಬ ಕವಿತೆ ಇವೆರಡನ್ನೂ ಒಟ್ಟಿಗೇ ಓದಿದಾಗ ಅಮೃತಾ ಅವರ ಅಂತರಂಗದ ನೋವಿನ ಅರಿವಾಗುತ್ತದೆ. 'ರಾತ್ರಿಯ ಬಟ್ಟಲನ್ನು ಬದುಕಿನ ಜೇನಿನಿಂದ ತುಂಬಲಾಗದ್ದು ದುರಂತವಲ್ಲ. ರಾತ್ರಿಯ ಬಟ್ಟಲು ಚಂದಿರನ ಕಲಾಯಿ ಕಳೆದುಕೊಳ್ಳುವುದು, ಬಟ್ಟಲಿನಲ್ಲಿ ಬಿದ್ದಿರುವ ಕಲ್ಪನೆ ರುಚಿಗೆಟ್ಟು ಹೋಗುವುದು ದುರಂತ. ನಿನ್ನ ಅದೃಷ್ಟ ನಿನ್ನ ಪ್ರಿಯತಮನ ಹೆಸರು ವಿಳಾಸಗಳನ್ನು ಓದಲಾಗದ್ದು, ನಿನ್ನ ಬದುಕಿನ ಇಡೀ ಪತ್ರ ಬರೆಯುವುದು, ನಂತರ ನಿನ್ನ ಪ್ರಿಯತಮನ ಹೆಸರು ವಿಳಾಸ ಕಳೆದು ಹೋಗುವುದು ದುರಂತ. ಬದುಕಿನ ಸುದೀರ್ಘ ದಾರಿಯಲ್ಲಿ ಸಮಾಜದ ಬಂಧನಗಳು ಮುಳ್ಳು ಚೆಲ್ಲಲಿ, ನಿನ್ನ ಕಾಲುಗಳಿಂದ ಬದುಕಿನುದ್ದಕ್ಕೂ ರಕ್ತ ಹರಿಯುತ್ತಲಿರುವುದು ದುರಂತವಲ್ಲ. ರಕ್ತ ಸೋರುವ

ಕಾಲುಗಳ ಮೇಲೆ ಸಾಗಿ ಒಂದು ಸ್ಥಳದಲ್ಲಿ ನಿಲ್ಲುವುದು ಅಲ್ಲಿಂದ ಯಾವ ದಾರಿಯೂ ಕೈ ಮಾಡಿ ಕರೆಯುವಿರುವುದು ದುರಂತ. ನೀನು ನಿನ್ನ ಪ್ರೇಮದ ನಡುಗುವ ಶರೀರದ ಸಲುವಾಗಿ ಬದುಕಿನುದ್ದಕ್ಕೂ ಕವನಗಳ ಉಡುಪನ್ನು ಹೊಲಿಯುತ್ತಿರುವುದು ದುರಂತವಲ್ಲ. ಈ ಉಡುಪುಗಳನ್ನು ಹೊಲಿಯಲು ನಿನ್ನ ಬಳಿ ವಿಚಾರಗಳ ದಾರ ಮುಗಿದು ನಿನ್ನ ಲೇಖನಿ ಎಂಬ ಸೂಜಿಯ ತೂತು ಮುರಿಯುವುದು ದುರಂತ" (ರಶೀದಿ ಟಿಕೇಟು, ೪೬)

ಇಂಥ ನಿರರ್ಥಕತೆಯ ಭಾವ ಇರುವ ಕವಿತೆ 'ನೀನು ಬರಲಿಲ್ಲ' ಎಂಬ ಚಿಕ್ಕ ಮೋಹಕ ಕವಿತೆ.

**ವಸಂತ ಎಚ್ಚರಾಗುತ್ತಿದೆ ತೋಳು ಚಾಚುತ್ತಿದೆ**
**ಬಣ್ಣಗಳ ಹಬ್ಬಕ್ಕಾಗಿ**
**ಹೂವುಗಳು ರೇಷಿಮೆ ನೇಯುತ್ತಿವೆ**
**ನೀನು ಬರಲಿಲ್ಲ**

**ಮಧ್ಯಾಹ್ನಗಳು ನೀಳವಾಗುತ್ತಿವೆ**
**ದ್ರಾಕ್ಷಿಗಳನ್ನು ಕೆಂಪು ಸ್ಪರ್ಶಿಸುತ್ತಿದೆ**
**ಕಿವಿಗೆ ಕುಯಿಲುಗತ್ತಿ ಮುತ್ತಿಡುತ್ತಿದೆ**
**ನೀನು ಬರಲಿಲ್ಲ**

**ಮುಗಿಲುಗಳು ಕೂಡುತ್ತಿವೆ**
**ಭೂಮಿ ಚಾಚಿದೆ ಎರಡೂ ಕೈಗಳನ್ನು**
**ಆಕಾಶದ ಕೊಡುಗೆಗಾಗಿ**
**ನೀನು ಬರಲಿಲ್ಲ.**

**ಮರಗಳು ಮೋಹಕತೆಯ ಉಸಿರಾಡುತ್ತಿವೆ**
**ಜೇನು ತುಂಬಿದ ತುಟಿಗಳಿಂದ**
**ಕಾಡ ಅಲೆಮಾರಿಗಳ ಗಾಳಿಗೊಡ್ಡುತ್ತಿವೆ**
**ನೀನು ಬರಲಿಲ್ಲ – (ಸುನೇರಿ, ೩೫)**

ಈ ಮೇಲಿನ ಗದ್ಯ ಮತ್ತು ಪದ್ಯ ಎರಡರಲ್ಲೂ ಕಾಲ ಮತ್ತು ಜೀವನ ಪ್ರೀತಿ ಲೇಖಕಿಯನ್ನು ಗಾಢವಾಗಿ ಕಾಡಿರುವ ಕಲಕಿರುವ ಸಂಗತಿಗಳು ಎಂಬುದರ ಜೊತೆಗೆ ಅಮೃತಾ ಪ್ರೀತಮ್‌ರ ಬರವಣಿಗೆಯ ಸೊಗಸೂ ಅರಿವಾಗುವಂತಿದೆ. (ಈ ಅನುವಾದಗಳು ಮೂಲ ಪಂಜಾಬಿಯಿಂದ ಇಂಗ್ಲಿಷ್‌ಗೆ ಆ ಮೇಲೆ ಕನ್ನಡಕ್ಕೆ ಬಂದವುಗಳು)

ಈ ಲೇಖನಕ್ಕಾಗಿ ಪರಾಮರ್ಶಿಸಿದ ಅಮೃತಾಪ್ರೀತಂ ಅವರ ಪುಸ್ತಕಗಳು

೧. ನುಡಿಯ ನೆರಳು (ಇಂಗ್ಲಿಷ್ ಮೂಲ - (Shadow of words) ಕನ್ನಡ ಅನು - ಶೈಲಜಾ ಉಡಚಣ)
೨. The other Dimension - ಅಮೃತಾ ಪ್ರೀತಂ
೩. ರಸೀದಿ ತಿಕೀಟು - ಅನು - ಹಸನ್ ನಯೀಂ ಸುರಕೋಡ - ಮೂಲ : ಅಮೃತಾ ಪ್ರೀತಂ, ಪ್ರ.: ಲೋಹಿಯಾ ಪ್ರಕಾಶನ
೪. ಜೇಬುಗಳ್ಳರು - ಮೂಲ : ಜೇಬ ಕತರೆ (ಕಾದಂಬರಿ) ಅನು - ಗುರುನಾಥ ಜೋಷಿ
೫. Skeleton - ಅನು: ಖುಷವಂತಸಿಂಗ್ (ಕಾದಂಬರಿ)
೬. ಹೆಣ್ಣೊಂದು ಮಧುಪಾತ್ರೆ - ಅನು -ಪಂಚಾಕ್ಷರಿ ಹಿರೇಮಠ
೭. ಕಾಡಿನ ಬೇರು - ಕಥೆಗಳು - ಅನು : ಶಾಂತರಸ
೮. ಸುನೇರಿ - ಕವಿತೆಗಳು ಅನುವಾದ - ಹಾ. ಮಾ. ನಾ.
೯. ಉದ್ಗಾರ (ಆಹ್) ಕಥೆ - ಅನು: ಗೌರೀಶ ಕಾಯ್ಕಿಣಿ - ಪಂಜಾಬಿ ಕಥೆಗಳು - N.B.T.
೧೦. ಪ್ರೇಮಲೋಕದ ಮಾಯಾಪಿ - ಹಸನ್ ನಯೀಂ ಸುರಕೋಡ (ಹೂವಿನ ಹಂಬಲ - ಸುನಹಡೆ ಅನುವಾದ ಪುಟ ೭೫ರಿಂದ ೯೭)
೧೧. ಅನಿಕೇತನ ಸಾಹಿತ್ಯ ಅಕ್ಯಾಡೆಮಿ ತ್ರೈಮಾಸಿಕ ಪತ್ರಿಕೆ, ಸಂ. ೫-೨, ೫-೩, ೧೯೯೨ರಲ್ಲಿ 'ಸಾರಾ ಎಂಬ ಮಹಿಳೆ' ಅನುವಾದ ಕೃಷ್ಣನ್ ಅಶಾಂತ

◆

# ಇಸ್ಮತ್ ಚುಗ್ತಾಯಿ, ಖುರ್ರತುಲ್ಐನ್ ಹೈದರ್

✍ **ಕೆ. ಶರೀಫಾ**

ಇಸ್ಮತ್ ಚುಗ್ತಾಯಿ ಮತ್ತು ಖುರ್ರತುಲ್ಐನ್ ಹೈದರ್ ಇಬ್ಬರೂ ಉರ್ದು ಮೂಲದ ಲೇಖಕಿಯರು. ಇವರಿಬ್ಬರೂ ಸ್ತ್ರೀವಾದ ಎಂಬ ಯಾವುದೇ ಸಿದ್ಧ ಮಾದರಿಗಳು ತಮ್ಮ ಮುಂದೆ ಇಲ್ಲದೇ ಇರುವಂತಹ ಚಾರಿತ್ರಿಕ ಸಂದರ್ಭದಲ್ಲಿ ಮೌನ ಸಾಹಿತ್ಯಿಕ ಕ್ರಾಂತಿಯ ಮೂಲಕ ಸ್ತ್ರೀವಾದವನ್ನು ಸ್ಥಾಪಿಸಿದವರು ಹಾಗೂ ಅನೇಕ ಮೊದಲುಗಳಿಗೆ ಅರ್ಹರಾದವರು. ಇವರಿಬ್ಬರೂ ಪಿತೃಪ್ರಧಾನ ಸಂಸ್ಕೃತಿಯ ಅಹಂ ಅನ್ನು ಮುರಿದವರು. ಸ್ತ್ರೀವಾದಿ ದೃಷ್ಟಿಕೋನದೊಂದಿಗೆ ಜಾತ್ಯಾತೀತ ತತ್ವಗಳಿಗೆ ಬದ್ಧರಾದವರು. ಇಬ್ಬರೂ ಆಗಿನ ಸಾಮಾಜಿಕ ಸ್ಥಾಪಿತ ಮೌಲ್ಯಗಳ ವಿರುದ್ಧ ಹೋರಾಡಿದಂತೆ, ಸಾಹಿತ್ಯಿಕ ಕ್ಷೇತ್ರಗಳಲ್ಲಿಯೂ ಕ್ರಾಂತಿಯ ಹೊಸ ಹೆಜ್ಜೆ ಯನ್ನು ಮೂಡಿಸಿದವರು. ಈ ಲೇಖಕಿಯರು ಬದುಕನ್ನು ಬದುಕಿದರು; ಬದುಕಿದನ್ನು ಬರೆದರು. ಆದ್ದರಿಂದಲೇ ಏನೋ ಈ ಇಬ್ಬರೂ ಲೇಖಕಿಯರ ಬರಹಗಳು ಆತ್ಮಚರಿತ್ರೆಯ ತುಣುಕುಗಳಂತಿವೆ.

ಇವರು ಉರ್ದು ಕಥಾ ಸಾಹಿತ್ಯದಲ್ಲಿ ಬಹಳಷ್ಟು ಹೆಸರು ಮಾಡಿದ ಲೇಖಕಿಯರು. ಇವರಿಬ್ಬರ ಸ್ವಂತ ಬದುಕಿನ ಅನೇಕ ಏರುಪೇರುಗಳು ಕಥೆಗೆ ವಸ್ತುಗಳಾಗಿವೆ. ಭಾರತದ ಮಧ್ಯಮ ವರ್ಗದ ಜೀವನಶೈಲಿಯಲ್ಲಿ ಈ ಇಬ್ಬರು ಲೇಖಕಿಯರೂ ಬದುಕಿದವರು. ಇವರಷ್ಟು ಪರಿಣಾಮ ಕಾರಿಯಾಗಿ ಕಥೆಗಳನ್ನು ರಚಿಸಿದ ಇನ್ನೊಬ್ಬ ಲೇಖಕಿ ಉರ್ದುವಿನಲ್ಲಿಲ್ಲವೆಂದು ಹೇಳಬಹುದು. ಖುರ್ರತುಲ್ಐನ್ ಹೈದರ್ ಕೆಲವೇ ಕಥಾಸಂಕಲನಗಳನ್ನು ಪ್ರಕಟಿಸಿದರೂ ಸಹ ಕಥಾವಸ್ತುವಿನ

ಕಾರಣಕ್ಕಾಗಿ ಬಹಳಷ್ಟು ಪ್ರಸಿದ್ಧಿಯನ್ನು ಪಡೆದವರು. ಉರ್ದು ಸಾಹಿತ್ಯಕ್ಕೆ ಇವರಿಬ್ಬರ ಕೊಡುಗೆ ಅಪಾರವಾಗಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಅನಂತರದ ಭಾರತ-ಪಾಕಿಸ್ತಾನದ ವಿಭಜನೆ ಮತ್ತು ಅದರಿಂದಾಗಿ ಭಾರತದಲ್ಲಿ ನೆಲೆಸಿದ್ದ ಕೋಟ್ಯಾಂತರ ಮುಸ್ಲಿಮರು ಪಾಕಿಸ್ತಾನಕ್ಕೂ, ಪಾಕಿಸ್ತಾನದಲ್ಲಿ ನೆಲಸಿದ್ದ ಕೋಟ್ಯಾಂತರ ಹಿಂದುಗಳು ಭಾರತಕ್ಕೂ, ತಮ್ಮ ಮನೆ-ಮಠ, ನೆಲ-ಜಲ, ಪ್ರೀತಿಪಾತ್ರರನ್ನು ಅಗಲುವ ಯಾತನೆಯ ನೋವಿನ ಹೊಗೆ ತುಂಬಿದ ಕೊಳವೆಯಿಂದ ಈ ಇಬ್ಬರೂ ಲೇಖಕಿಯರೂ ಹಾದು ಬಂದವರೇ.

ಇವರಿಬ್ಬರ ಬರಹಗಳಲ್ಲಿಯೂ ದೇಶ ಇಬ್ಭಾಗದ ನೋವಿನ ಛಾಯೆಯಿದೆ. ಇವರಿಬ್ಬರು ಉನ್ನತ ಶಿಕ್ಷಣವನ್ನು ಪಡೆದ ಮಹಿಳೆಯರು. ಇವರಿಬ್ಬರು ಆರ್ಥಿಕವಾಗಿ ಸ್ವತಂತ್ರರಾಗಿ ಪುರುಷನ ಆಶ್ರಯ ಬಯಸದೇ ತಮ್ಮ ಕಾಲ ಮೇಲೆ ತಾವು ನಿಂತವರು. ಇಬ್ಬರ ತಂದೆಯಂದಿರೂ ಸಹ ಉನ್ನತ ಹುದ್ದೆಯಲ್ಲಿದ್ದು ತಮ್ಮ ಹೆಣ್ಣು ಮಕ್ಕಳಿಗೂ ಸಹ ಸಮಾನ ಅವಕಾಶಗಳನ್ನು ನೀಡಿದವರು. ಇವರಿಬ್ಬರೂ ಕಥೆ, ಕವನ, ಲೇಖನ, ಕಾದಂಬರಿ, ನಾಟಕ, ಸಿನಿಮಾ ಕಥೆಗಳನ್ನು ಬರೆಯುತ್ತಿರುವಂತೆಯೇ ಪತ್ರಿಕೆಗಾಗಿಯೂ ದುಡಿದವರು.

ಇವರಿಬ್ಬರೂ ಉರ್ದು ಸಾಹಿತ್ಯದ ಸಭ್ಯ ಕಟ್ಟಳೆ-ಚೌಕಟ್ಟನ್ನು ಮುರಿದವರು. ಮಹಿಳೆಯರ ಬದುಕಿನ ಒಳ ತುಮುಲಗಳನ್ನು ವಾಸ್ತವದ ನೆಲೆಯಲ್ಲಿ ದಾಖಲಿಸಿದವರು. ಸ್ತ್ರೀವಾದದ ಚರ್ಚೆಯೇ ಇಲ್ಲದಿರುವಾಗ, ಸ್ತ್ರೀವಾದಿ ಎಂದು ಘೋಷಿಸಿಕೊಳ್ಳದೇ ಸ್ತ್ರೀವಾದಿಯಾಗಿ ಬರೆದವರು. ಇವರಿಬ್ಬರ ಮೇಲೆಯೂ ಕಮ್ಯುನಿಸ್ಟ್ ವಿಚಾರಧಾರೆಗಳ ಪ್ರಭಾವವಿದೆ. ಗಾಢ ಅಂಧಕಾರ ತುಂಬಿದ ಕತ್ತಲೆಯಲ್ಲಿ ಮಿಣುಕುದೀಪದ ಬೆಳಕು ಮೂಡಿಸಿದವರು ಈ ಲೇಖಕಿಯರು. ಭಾರತೀಯ ಉರ್ದು ಸಾಹಿತ್ಯ ಕ್ಷೇತ್ರದಲ್ಲಿಯೇ ವಿಶಿಷ್ಟ ಸ್ಥಾನ ಗಳಿಸಿದ ಇವರಿಬ್ಬರ ಕಥೆಗಳು ಕೇವಲ ಭಾರತೀಯ ಭಾಷೆಯಲ್ಲಿ ಮಾತ್ರವಲ್ಲ ವಿಶ್ವದ ವಿವಿಧ ಭಾಷೆಗಳಿಗೂ ಅನುವಾದಗೊಂಡಿವೆ.

## ೧. ಉರ್ದು ಭಾಷೆ

ಉರ್ದು ಭಾಷೆಯಲ್ಲಿ ಕಾವ್ಯದ ನಂತರದ ಸ್ಥಾನವನ್ನು ಸಣ್ಣ ಕಥಾ ಪ್ರಕಾರವೇ ಬಹುವಾಗಿ ಆವರಿಸಿಕೊಂಡು ಬಿಟ್ಟಿದೆ. ಉರ್ದು ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ಒಂದು ಅಮೋಘವಾದ, ಅಮೂಲ್ಯವಾದ ಸಾಹಿತ್ಯ ಭಂಡಾರವನ್ನು ಹೊಂದಿದೆ. ಉರ್ದುವಿನ ಈ ಅಮೂಲ್ಯ ಭಂಡಾರದ ಪರಿಚಯವನ್ನು ಕನ್ನಡದ ಲೋಕಕ್ಕೆ ಮಾಡಿಸಬೇಕಿದೆ. ಉರ್ದುವಿನಲ್ಲಿರುವ ಈ ಅಮೂಲ್ಯ ಸಾಹಿತ್ಯವನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕಾದ ಅವಶ್ಯಕತೆಯಿದೆ. ಇಲ್ಲವಾದರೆ ಕನ್ನಡ ಜ್ಞಾನಕ್ಕೆ ಸೇರ್ಪಡೆಯಾಗಬೇಕಾದ ಒಂದು ಮಹತ್ವದ ಅಂಶ ಇದರಿಂದ ತಪ್ಪಿ ಹೋಗುವ ಸಾಧ್ಯತೆಯಿದೆ. ವಿವಿಧ ಭಾಷೆಗಳ ಜ್ಞಾನದ ಕಿಂಡಿಗಳನ್ನು ಕನ್ನಡದ ಸಾರಸ್ವತ ಲೋಕಕ್ಕೆ ತೆರೆದು ಕೊಡಬೇಕಾಗಿದೆ.

ಉರ್ದು ಭಾಷೆ ಎಲ್ಲಿಂದಲೋ ಭಾರತಕ್ಕೆ ಎರವಲು ತಂದಿರುವ ಭಾಷೆಯಲ್ಲ. ಇದು ದಖ್ಖನ್ನಿನಲ್ಲಿ ಅಂದರೆ ದಕ್ಷಿಣ ಭಾರತದಲ್ಲಿ ಹುಟ್ಟಿದ ಭಾಷೆ. ಆಗ ಅಲ್ಲಿ ಸಿಂಹಾಸನವನ್ನಲಂಕರಿ

ಸಿದ್ದ ಮೊಗಲ ಚಕ್ರವರ್ತಿ ಷಹಜಾಸರು ಈ ಭಾಷೆಗೆ ಉರ್ದು ಎಂಬ ಪದವನ್ನು ನೀಡಿದರು. ಉರ್ದು ಪದದ ಅರ್ಥ 'ಸೈನ್ಯ' ಅಥವಾ 'ಸೈನ್ಯವಿರುವ ಠಾಣೆ' ಎಂದು ಅರ್ಥ. ಬಾಬರ್ ಅರಸರು ತಮ್ಮ ಸೈನ್ಯಕ್ಕೆ 'ಉರ್ದು ಯೇ ನುಸರತೆ ಶಾಹಿ' ಅಂದರೆ 'ವಿಜಯಶಾಲಿ ಸೈನ್ಯ' ಎಂದು ಕರೆದಿದ್ದಾರೆ. ಅಕ್ಬರ ಅರಸರ ಕಾಲದಲ್ಲಿ ರಾಜ್ಯದ ರಾಜಧಾನಿಗಳಿಗೆ ಮತ್ತು ಸೈನಿಕರ ಠಾಣೆಗಳಿಗೆ 'ಉರ್ದುಯೇ ಮು ಅಲ್ಲಾ' ಎಂದು ಕರೆಯಲಾಗುತ್ತಿತ್ತು. ಕರ್ನಾಟಕದ ಗುಲಬರ್ಗಾ, ಬಿಜಾಪುರ, ಗೋಲ್ಕೊಂಡಾ ದಲ್ಲಿ ಹಸನ್ ಗಂಗೂ ಬಹಮನಿ ಅರಸರ ಸಮಯದಲ್ಲಿ ಉರ್ದು ಒಂದು ವ್ಯವಸ್ಥಿತ ಸಾಹಿತ್ಯಿಕ ಭಾಷೆಯಾಗಿ ಬೆಳೆಯಿತು. ಉರ್ದು ಭಾಷೆಯ ಇತಿಹಾಸ ಕನ್ನಡದಷ್ಟು ಹಳೆಯದಲ್ಲವಾದರೂ ಸಾಹಿತ್ಯದಲ್ಲಿ ಅತ್ಯಂತ ಸುಕೋಮಲ ಹಾಗೂ ಶಿಷ್ಟ ಸಾಹಿತ್ಯಿಕ ಭಾಷೆಯಾಗಿ ಬೆಳೆಸಿದವರು ಉತ್ತರ ಕರ್ನಾಟಕದವರು ಎಂಬುದು ಇತಿಹಾಸ.

ಉರ್ದು ಒಂದು ಜಾತಿಯ ಭಾಷೆಯಲ್ಲ. ಭಾಷೆ ಯಾವತ್ತೂ ಪ್ರಭುತ್ವದ ಮಾಧ್ಯಮ ದಲ್ಲಿಯೇ ತನ್ನ ಜನತೆಯೊಂದಿಗೆ ಮಾತನಾಡಿದ್ದಿದೆ. ಅದು ಇಂಗ್ಲಿಷ್ ಆಗಿರಬಹುದು, ಹಿಂದಿ, ಉರ್ದು ಅಥವಾ ಕನ್ನಡವೇ ಆಗಿರಬಹುದು - ಯಾವುದೇ ಭಾಷೆಯೂ ಜಾತಿ ಮೂಲದಿಂದ ಹುಟ್ಟಿಲ್ಲ. ಕನ್ನಡ ಎಂದರೆ ಹಿಂದುಗಳ ಭಾಷೆಯಲ್ಲ; ಉರ್ದು ಎಂದರೆ ಮುಸ್ಲಿಮರ ಭಾಷೆಯಲ್ಲ. ಯಾವತ್ತೂ ಜನರು ಮಾತನಾಡುವುದು ಪ್ರಭುತ್ವದ ಭಾಷೆಯಲ್ಲಿ ಮಾತ್ರ.

ಸ್ವಾತಂತ್ರ್ಯಪೂರ್ವದ ಈ ಇಬ್ಬರೂ ಲೇಖಕಿಯರು ಆಗ ಚಾಲ್ತಿಯಲ್ಲಿದ್ದ ಪ್ರಭುತ್ವದ ಭಾಷೆ ಇಂಗ್ಲಿಷ್ ಮತ್ತು ಉರ್ದುವಿನಲ್ಲಿ ತಮ್ಮ ಸಾಹಿತ್ಯವನ್ನು ರಚಿಸಿದವರು. ಉರ್ದುವಿನ ಹೆಸರಾಂತ ಲೇಖಕರಾದ ಕೆ. ಎ. ಅಬ್ಬಾಸ್, ರಾಜೇಂದ್ರಸಿಂಗ್ ಬೇಡಿ, ಕೃಷ್ಣಚಂದರ್, ಸಾದತ್ ಹಸನ್ ಮಾಂಟೋ ಮುಂತಾದ ದಿಗ್ಗಜರ ಎತ್ತರದ ಸ್ಥಾನದಲ್ಲಿ ಇಸ್ಮತ್ ಚುಗ್ತಾಯಿ ಮತ್ತು ಖುರ್ರತುಲೈನ್ ಹೈದರ್ ಅವರು ನಿಲ್ಲುತ್ತಾರೆ.

**೨. ಇಸ್ಮತ್ ಚುಗ್ತಾಯಿ (೧೯೧೫-೧೯೯೧)**

ಇಸ್ಮತ್‌ರು ಅವರ ಕಾಲದ ಸ್ತ್ರೀ ವಿರೋಧಿ ಘಟಕಗಳ ವಿರುದ್ಧದ ಹೋರಾಟವನ್ನು ಬೆಂಬಲಿಸಿ ಬರೆದರು. ಅವರು ತಮ್ಮ ಬರಹಗಳಲ್ಲಿ ಯಾವತ್ತೂ ಸ್ತ್ರೀಯರನ್ನು ವಿರೋಧಿಸುವ, ಅವರ ವ್ಯಕ್ತಿತ್ವವನ್ನು ತುಳಿಯುವ ಸಮಾಜದ ನಡವಳಿಕೆಯನ್ನು ಟೀಕಿಸುತ್ತಿದ್ದರು. ಮುಸ್ಲಿಂ ಮಹಿಳೆಯರು ಈಗಿನ ಕಾಲದಲ್ಲಿಯೇ ಬುರ್ಖಾ ತ್ಯಜಿಸುವುದು ಕಷ್ಟವಾಗಿರುವಾಗ ಆಗಿನ ಕಾಲದಲ್ಲೇ ಅವರು ಬುರ್ಖಾ ತ್ಯಜಿಸಿದ್ದು ಒಂದು ಕ್ರಾಂತಿಕಾರಕ ಹೆಜ್ಜೆಯಾಗಿತ್ತು. ೧೯೧೫ರಲ್ಲಿ ಜನಿಸಿದ ಇಸ್ಮತ್ ಚುಗ್ತಾಯಿಯವರು (೧೯೧೧ನೇ ಆಗಸ್ಟ್, ೨೧ರಲ್ಲಿ ಉತ್ತರ ಪ್ರದೇಶದ ಬದಾಯುನ್ ಎಂಬಲ್ಲಿ ಹುಟ್ಟಿದರು ಎಂದು 'ಇಸ್ಮತ್ ಹರ್ ಲೈಫ್, ಹರ್ ಟೈಮ್ಸ್' ಕೃತಿ ಹೇಳುತ್ತದೆ) ಚಿಕ್ಕಂದಿನಲ್ಲಿಯೇ ಇಂಗ್ಲಿಷ್ ಚರಿತ್ರೆ ಮತ್ತು ಕುರಾನ್, ಹದೀಸ್‌ಗಳನ್ನು ಓದಿದ್ದರು. ಮನೆಯಲ್ಲಿ ಗಂಡುಮಕ್ಕಳೊಂದಿಗೆ ಸಮಾನ ಹಕ್ಕು ಸ್ಥಾನಮಾನ ದೊರಕಿಸಿಕೊಂಡಿದ್ದರು.

ಇಸ್ಮತ್ ಚುಗ್ತಾಯಿಯವರ ತಂದೆ ಆಗಿನ ಬ್ರಿಟಿಷ್ ಸರ್ಕಾರದಲ್ಲಿ ಡೆಪ್ಯುಟಿ ಕಲೆಕ್ಟರ್‌ರಾಗಿದ್ದರು. ತಂದೆ ಮಿರ್ಜಾ ಖಾಸಿಂ ಬೇಗ್ ತಾಯಿ ನುಸರತ್ ಖಾನಂರ ಒಂಬತ್ತನೇ ಮಗುವಾಗಿ ಇಸ್ಮತ್ ಹುಟ್ಟಿದರು.*

ಉರ್ದು ಭಾಷೆಯ ದಿಟ್ಟ, ನೇರ ನುಡಿಯ ಬರಹಗಾರ್ತಿಯಾದ ಇಸ್ಮತ್‌ರು ತಮ್ಮ ಆತ್ಮಚರಿತ್ರೆ **ಕಾಗಜೀ ಹೈ ಪೈರಹನ್**‌ಯನ್ನು ೧೯೮೧ರಲ್ಲಿ ಪ್ರಕಟಿಸಿದರು. ಈ ಆತ್ಮಚರಿತ್ರೆಯಲ್ಲಿ ಅನೇಕ ಸಂಗತಿಗಳು ಅನಾವರಣಗೊಂಡಿವೆ. ಅದರಲ್ಲಿ ಇಸ್ಮತ್‌ರು ಬಾಲ್ಯದ ನೆನಪುಗಳನ್ನು ಹೀಗೆ ಬಿಚ್ಚಿಕೊಂಡಿದ್ದಾರೆ. ಒಂದು ಸಲ ಅಣ್ಣ ತಮ್ಮಂದಿರೆಲ್ಲ ಸೇರಿ ಕುದುರೆ ಸವಾರಿ ಮಾಡುತ್ತಿದ್ದರು. ಆಗ ತಾನು 'ಕುದುರೆ ಸವಾರಿ' ಮಾಡುತ್ತೇನೆ ಎಂದು ಪುಟ್ಟ ಬಾಲಕಿ ಇಸ್ಮತ್ ಹಟ ಮಾಡಿದಾಗ ಇಸ್ಮತ್‌ರ ತಾಯಿ ಸುಸ್ರತ್ ಖಾನರು "ನೀನು ಕುದುರೆ ಹತ್ತಿದ್ದರೆ ನಿನ್ನ ಕಾಲು ಮುರಿಯುತ್ತೇನೆ" ಎಂದು ಹೇಳಿದರು. ಅದನ್ನು ಕೇಳಿ ಇಸ್ಮತ್ ಅಳುತ್ತಿದ್ದಾಗ ತಂದೆ ಮಿರ್ಜಾ ಖಾಸಿಂ ಬೇಗ್‌ರವರು ಮನೆಗೆ ಬಂದರು. ಇಸ್ಮತ್‌ರು ಅಳುತ್ತಿರುವುದನ್ನು ನೋಡಿ ಕಾರಣ ಕೇಳಿದರು. ಅವಳು ಕುದುರೆ ಏರಲು ಬಯಸಿದ್ದನ್ನು ತಿಳಿದ ತಂದೆ ಕೂಡಲೇ ಅವರಿಗೆ ಕುದುರೆಯ ಮೇಲೆ ಕೂಡಿಸಲು ತಿಳಿಸಿದಾಗ ಖುಶಿಯಿಂದ ಕುದುರೆ ಸವಾರಿ ಮಾಡಿದ ಘಟನೆಯನ್ನು ಸ್ಮರಿಸಿಕೊಂಡಿದ್ದಾರೆ.

ಇದೇ ರೀತಿಯಲ್ಲಿ ತಂದೆಯವರು ಬೇಟೆಗೆ ಹೊರಟಾಗಲೂ ಎಲ್ಲ ಗಂಡು ಮಕ್ಕಳ ಜೊತೆಗೆ ಇಸ್ಮತ್‌ರನ್ನೂ ಕರೆದುಕೊಂಡು ಹೋಗುತ್ತಿದ್ದರು. ಅವರ ಕೈಯಲ್ಲೇ ಗನ್ನು ಕೊಡುತ್ತಿದ್ದರು. ಅವರಿಗೆ ಬಂದೂಕಿನಿಂದ ಹೇಗೆ ಗುರಿಯಿಡಬೇಕೆಂಬುದನ್ನೂ ಹೇಳಿ ಕೊಟ್ಟಿದ್ದರು. ತಂದೆಯವರೇ ಇಸ್ಮತ್ ಅವರ ನಿರ್ಭೀತಿಯ ಹಾಗೂ ಸಮಾನ ಬೆಳವಣಿಗೆಗೆ ಕಾರಣರಾಗಿದ್ದರು.

ಆಗಿನ ಮುಸ್ಲಿಂ ಶ್ರೀಮಂತ ಕುಟುಂಬಗಳಲ್ಲಿರುವಂತೆ ಗಂಡಸರು ಕುಳಿತು ಮಾತಾಡುತ್ತಿದ್ದರೆ, ಹೆಣ್ಣು ಮಕ್ಕಳು ಪರದೆಯ ಹಿಂದೆ ಮರೆಯಾಗಿ ಅಥವಾ ಬಾಗಿಲ ಹಿಂಬದಿಯಲ್ಲಿ ಮರೆಯಾಗಿ ನಿಂತು ಮಾತನಾಡುವ ಪದ್ಧತಿ ರೂಢಿಯಲ್ಲಿತ್ತು. ಆದರೆ ಇಸ್ಮತ್‌ರು ಮನೆಯಲ್ಲಿ ಎಲ್ಲ ಹೆಣ್ಣು-ಗಂಡು ಮಕ್ಕಳೂ ಹಾಗೂ ತಾಯಿ ತಂದೆಯವರು ಒಟ್ಟಾಗಿ ಕುಳಿತು ಮಾತಾಡುವ ಪದ್ಧತಿ ಮನೆಯಲ್ಲಿ ಜಾರಿಯಿತ್ತು. ಮನೆಯ ಇಂತಹ ವಾತಾವರಣವೂ ಇಸ್ಮತ್‌ರ ನಿರ್ಭೀತ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಾಯಕವಾಯಿತು. ಇಸ್ಮತ್‌ರು ಬುರ್ಖಾ ಹಾಕಿಕೊಂಡ ಘಟನೆಯನ್ನು ತಮ್ಮ ಆತ್ಮಚರಿತ್ರೆಯಲ್ಲಿ ಬಹಳ ಸ್ವಾರಸ್ಯಕರವಾಗಿ ಹೇಳುತ್ತಾರೆ.

ಅವರು ಅಲಿಘಡ ಮುಸ್ಲಿಂ ಯುನಿವರ್ಸಿಟಿಯಲ್ಲಿ ಓದುತ್ತಿರುವ ಸಂದರ್ಭದಲ್ಲಿ ಅಲ್ಲಿ ಎಲ್ಲ ಹೆಣ್ಣುಮಕ್ಕಳೂ ಕಡ್ಡಾಯವಾಗಿ ಬುರ್ಖಾ ಧರಿಸಬೇಕಾಗಿತ್ತು. ಆಗ ಅವರ ತಾಯಿ

---

೧. ಇಸ್ಮತ್‌ರ ಕುರಿತು ಹೇಳುವ ತಾಹಿರಾ ನಖ್ವಿಯವರು - "ಇಸ್ಮತ್ ಅವರ ತಂದೆ ತಾಯಿಗಳಿಗೆ ಒಂಭತ್ತನೆಯ ಮಗುವಾಗಿ ಹುಟ್ಟಿದರು. ಒಟ್ಟು ೧೦ ಮಕ್ಕಳಲ್ಲಿ ೬ ಜನ ಗಂಡು ಮಕ್ಕಳೂ ೪ ಜನ ಹೆಣ್ಣು ಮಕ್ಕಳು ಮಿರ್ಜಾ ಖಾಸಿಂ ಬೇಗ್ ಹುಟ್ಟಿದರು" ಎಂದು ಹೇಳುತ್ತಾರೆ.

ಮನೆಯಲ್ಲಿಯೇ ಒಂದು ಬುರ್ಖಾ ಹೊಲಿದುಕೊಟ್ಟರು. ಅದನ್ನು ಹಾಕಿಕೊಂಡು ಹೋದ ಅವರು ಬುರ್ಖಾ ಇಲ್ಲದೆಯೇ ಮನೆಗೆ ಬಂದರು - "ಬುರ್ಖಾ ಎಲ್ಲಿ?" ಎಂದು ತಾಯಿ ಕೇಳಿದ್ದಕ್ಕೆ 'ಕಳೆದುಹೋಯಿತು' ಎಂದು ಸಬೂಬು ಹೇಳಿದರು. ತಾಯಿ ಮತ್ತೊಂದು ಬುರ್ಖಾ ಹೊಲಿದು ಕೊಟ್ಟರು. ಆಗಲೂ ಇಸ್ಮತ್‌ರು ಅದನ್ನು ಬೇಕೆಂದಲೇ ತಲೆಗೆ ಟೋಪಿ ತರಹ ಇದ್ದ ಬುರ್ಖಾವನ್ನು ತಲೆಗೆ ಸಿಕ್ಕಿಸಿ ಜೋರಾಗಿ ಎಳೆದು ಹರಿದುಬಿಟ್ಟರು. ಇದನ್ನು ನೋಡಿದ ಅವರ ತಾಯಿ "ಹರಿದಿದ್ದನ್ನು ಹಾಕಿಕೊಂಡು ಹೋಗ್ತೀಯಾ? ಬೇಡ ಬಿಡು" ಎಂದದ್ದಷ್ಟೇ ಸಾಕೆಂದು ಬುರ್ಖಾವನ್ನು ಕಿತ್ತೆಸೆದರು ಇಸ್ಮತ್. ಅಲ್ಲಿಗೆ ಅವರ ಬುರ್ಖಾಯಣ ಮುಗಿದ ಅಧ್ಯಾಯವಾಯಿತು. ಮುಂದೆ ಮತ್ತೆ ಅವರೆಂದೂ ಬುರ್ಖಾ ಧರಿಸಲಿಲ್ಲ.

ಅವರು ಜೋಧಪುರ ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಅಲ್ಲಿಯೂ ಅವರಿಗೆ ಬುರ್ಖಾ ಧರಿಸಲು ಅವರ ಚಿಕ್ಕಪ್ಪ ಒತ್ತಾಯಿಸಿದಾಗ ಅವರು ಹೇಳಿದ್ದರಂತೆ "ನೀವು ಒಂದು ಸಲ ಹೀಗೆ ಹೇಳಿದಿರಿ - ಇನ್ನೊಂದು ಸಲ ಏನಾದರೂ ಹೀಗೆ ಹೇಳಿದರೆ ನಾನು ಕೆಲಸ ಬಿಟ್ಟು ಬಿಡುತ್ತೇನೆ" ಎಂದು ಹೇಳಿದರಂತೆ. ಏಕೆಂದರೆ 'ಬುರ್ಖಾ' ಮಹಿಳೆಯ ವ್ಯಕ್ತಿತ್ವದ ಸುತ್ತ ಬೇಲಿ ಹಚ್ಚುತ್ತದೆ, ಅವಳ ಪ್ರಗತಿಪರ ಬೆಳವಣಿಗೆಗೆ ಅಡ್ಡಿಯಾಗುತ್ತದೆ, ಎಂದು ಇಸ್ಮತ್ ಭಾವಿಸಿದ್ದರು.

ಇವರ ತಂದೆಯವರು ೧೯೨೧ರಲ್ಲಿ ನಿವೃತ್ತರಾದ ನಂತರ ಬದಾಯೂನ್‌ದಿಂದ ಅಲಿಘಡಕ್ಕೆ ಮನೆಯನ್ನು ಸ್ಥಳಾಂತರಿಸಿದರು. ಇಸ್ಮತ್‌ರು ಗಂಡು ಹುಡುಗರ ಆಟಗಳಾದ ಗಿಲ್ಲಿದಾಂಡ, ಗಾಳಿಪಟ, ಫುಟ್‌ಬಾಲ್ ಆಟಗಳನ್ನೇ ಆಡುತ್ತಿದ್ದರಂತೆ. ಅದಕ್ಕಾಗಿ ಅವರ ತಾಯಿ ಸೂಜಿ-ದಾರ ಕೊಟ್ಟು ಬಟ್ಟೆ ಹೊಲಿಯಲು ಕೊಟ್ಟರೆ ಅದನ್ನೂ ಸಮರ್ಥವಾಗಿ ಇಸ್ಮತ್ ನಿಭಾಯಿಸಿದರು.

ಮತ್ತೊಂದು ಸಲ ಅವರ ತಾಯಿ ಅವರಿಗೆ ಅಡುಗೆ ಕಲಿಸಲು ಪ್ರಯತ್ನಪಟ್ಟ ಸ್ವಾರಸ್ಯಕರ ಘಟನೆಯನ್ನು ಕುರಿತು ಅವರು ಹೇಳುತ್ತಾರೆ. ಇಸ್ಮತರ ಹನ್ನೆರಡನೇ ವಯಸ್ಸಿನಲ್ಲಿ ಒಮ್ಮೆ ಅವರ ತಾಯಿ ಅಡುಗೆ ಮಾಡಲು ಅಡುಗೆ ಮನೆಗೆ ಇಸ್ಮತ್‌ರನ್ನು ಕರೆಯುತ್ತಾರೆ. ಅದನ್ನು ವಿರೋಧಿಸಿದ ಇಸ್ಮತ್‌ರು ಕೇಳುತ್ತಾರೆ "ಅಮ್ಮ ನೀನು ನನಗೇ ಏಕೆ ಕರೆಯುತ್ತಿ? ಶಾಹಭಾಜ್ ಭಾಯಿಗೆ ಯಾಕೆ ಕರೆಯುವುದಿಲ್ಲ? ಅವರಿಗೂ ಅಡುಗೆ ಕಲಿಸು" ಎಂದು ಹೇಳುತ್ತಾರೆ. ಅದಕ್ಕೆ ತಾಯಿ "ಅವನಿಗೆ ಅವನ ಹೆಂಡತಿ ಬಂದು ಅಡುಗೆ ಮಾಡಿ ಹಾಕುತ್ತಾಳೆ. ಅವನಿಗೆ ಅಡುಗೆ ಕಲಿಯುವ ಅವಶ್ಯಕತೆ ಏನಿದೆ?" ಎಂದು ಕೇಳಿದಾಗ ಇಸ್ಮತ್ ಹೇಳುತ್ತಾರೆ "ಒಂದು ವೇಳೆ ಅವನ ಹೆಂಡತಿ ಓಡಿ ಹೋದರೆ? ಅಥವಾ ಸತ್ತು ಹೋದರೆ?" ಎಂದುದಕ್ಕೆ ಅಣ್ಣ ದಿನವಿಡೀ ಅತ್ತಿದ್ದನಂತೆ. ಈ ಮಧ್ಯೆ ತಂದೆ ಬಂದು ವಿಷಯ ತಿಳಿದು ಅವರು "ಇಸ್ಮತ್ ನೀನು ಅಡುಗೆ ಕಲಿಯಬೇಕಾಗುತ್ತದೆ. ಏಕೆಂದರೆ ನಿನ್ನ ಅತ್ತೆ, ಮಾವ, ಗಂಡ ಎಲ್ಲರಿಗಾಗಿ ನೀನೇ ಅಡುಗೆ ಮಾಡಬೇಕಾಗುತ್ತದೆ" ಎಂದಾಗ ಇಸ್ಮತ್ ಹೇಳುತ್ತಾರೆ" ನಾವು ಬಡವರಾದರೆ ಏಚಡಿ ಮಾಡುತ್ತೇನೆ - ಶ್ರೀಮಂತರಾಗಿದ್ದರೆ ಒಬ್ಬ ಅಡುಗೆಯವನನ್ನು ನೇಮಿಸಿಕೊಳ್ಳುತ್ತೇವೆ" ಎಂದು ಹೇಳಿದ್ದರಂತೆ.

ಇಸ್ಮತ್ ಹವಿಮೂರು, ಪದಿನಾಲ್ಕು ವರ್ಷದ ಪುಟ್ಟ ಬಾಲೆಯಾಗಿದ್ದಾಗಲೇ ಶಿಕ್ಷಣವಿಲ್ಲದೆ ಸ್ತ್ರೀ ತನ್ನ ಸ್ವಾತಂತ್ರ್ಯ ಗಳಿಸಿಕೊಳ್ಳಲಾರಳು ಎಂಬ ಸತ್ಯವನ್ನು ಮನಗಂಡಿದ್ದರು. ಆಗ ಮುಸ್ಲಿಂ ಸಮಾಜದಲ್ಲಿ ಬಿ.ಎ., ಬಿ.ಟಿ. ಮಾಡಿದ ಮೊಟ್ಟ ಮೊದಲ ಮಹಿಳೆ ಇಸ್ಮತ್ ಆಪಾ ಆಗಿದ್ದರು. ಅವರ ಆಧುನಿಕ ದೃಷ್ಟಿಕೋನ, ಅದಕ್ಕೆ ಪೂರಕವಾದ ವಿದ್ಯಾಭ್ಯಾಸ, ಇಂಗ್ಲಿಷ್ ಸಾಹಿತ್ಯದ ಅಧ್ಯಯನ. ಅವರಲ್ಲಿ ವೈಚಾರಿಕ ನೆಲೆಗಟ್ಟೊಂದರ ಉಗಮಕ್ಕೆ ಕಾರಣವಾಯಿತು. ಅವರು ತಮ್ಮ ಮದುವೆಯ ವೃತ್ತಾಂತ ಕುರಿತು ಬಹು ಸ್ವಾರಸ್ಯಕರವಾದ ಘಟನಾವಳಿಗಳನ್ನು ತೆರೆದಿಡುತ್ತಾರೆ.

ಇಸ್ಮತ್‌ರೊಂದಿಗೆ ಮದುವೆಯಾಗಲು ಅನೇಕ ಪ್ರಸ್ತಾಪಗಳು ಬರುತ್ತಿದ್ದವು. ಅವರು ಬೇಕೆಂತಲೇ ಎಲ್ಲವನ್ನೂ ತಿರಸ್ಕರಿಸುತ್ತ ಬಂದರು. ಕೊನೆಗೆ ಈಗಾಗಲೇ ಬಂದಿದ್ದ ವರಗಳಲ್ಲಿ ಡೆಪ್ಯುಟಿ ಕಲೆಕ್ಟರನಾಗಿದ್ದ ಹುಡುಗನೊಬ್ಬನಿಗೆ ಕೊಟ್ಟು ಮದುವೆ ಮಾಡಬೇಕೆಂದು ಮನೆಯವರು ನಿರ್ಧರಿಸಿದ್ದರು. ಇದರಿಂದ ಹೇಗೆ ಬಿಡುಗಡೆ ಹೊಂದುವುದು ಎಂದು ಯೋಚಿಸಿದ ಇಸ್ಮತ್ ಮುಂಬೈಯಲ್ಲಿ ಮೆಡಿಕಲ್ ಓದುತ್ತಿದ್ದ ತಮ್ಮ ಚಿಕ್ಕಪ್ಪನ ಮಗ ಶೌಕತ್‌ನನ್ನು ಕರೆಸಿ, ತನ್ನ ಪರಿಸ್ಥಿತಿಯ ಬಗ್ಗೆ ತಿಳಿಸಿ "ನನಗಿನ್ನೂ ಮದುವೆಯಾಗುವ ಮನಸ್ಸಿಲ್ಲ. ಇದೊಂದು ಕಂಟಕ ತೊಲಗಿದರೆ ಸಾಕು" ನೀನೇ ನನ್ನನ್ನು ಮದುವೆಯಾಗುವುದಾಗಿ ಹೇಳು. ಹೇಗಾದರೂ ಮಾಡಿ ನನ್ನ ಮದುವೆ ನಿಲ್ಲಿಸು. ಕುರಾನ್ ಮೇಲೆ ಆಣೆ ಮಾಡಿ ಹೇಳುತ್ತೇನೆ. ನಾನು ನಿನ್ನನ್ನು ಮದುವೆಯಾಗುವುದಿಲ್ಲ. ದೇವರ ಹೆಸರಲ್ಲಿ ನನ್ನ ಶಿಕ್ಷಣಕ್ಕಾಗಿ ನೀನು ಈ ಕೆಲಸವನ್ನು ದಯವಿಟ್ಟು ಮಾಡು" ಎಂದು ಇಸ್ಮತರು ಗೋಗರೆದಾಗ ಅವರ ಚಿಕ್ಕಪ್ಪನವರೇ ಬಂದು "ನಮ್ಮ ಶೌಕತ್, ಇಸ್ಮತ್‌ಳನ್ನು ಇಷ್ಟಪಟ್ಟಿದ್ದಾನೆ. ಅವಳನ್ನು ಅವನೇ ಮದುವೆಯಾಗುತ್ತಾನಂತೆ." ಎಂದು ಹೇಳಿ ಆ ಮದುವೆಯನ್ನು ನಿಲ್ಲಿಸುವ ತಂತ್ರವನ್ನು ಇಸ್ಮತರು ರೂಪಿಸಿ, ಯಶಸ್ವಿಯೂ ಆಗುತ್ತಾರೆ. ಆದರೆ ನಂತರದ ದಿನಗಳಲ್ಲಿ ತಂದೆ ತಾಯಿ ಹಾಗೂ ಅಣ್ಣಂದಿರು ಶೌಕತ್‌ಗೆ ಬೇಗ ಮದುವೆಯಾಗುವಂತೆ ಒತ್ತಡ ತರಲಾರಂಭಿಸಿದರು. ಕೊನೆಗೆ ಶೌಕತ್ ಕೂಡ ಇಸ್ಮತ್‌ರನ್ನು "ಮದುವೆಯಾಗುವುದಾದರೆ ತನಗೆ ಒಪ್ಪಿಗೆಯಿದೆ" ಎಂದು ಹೇಳಿದಾಗ ಇಸ್ಮತ್‌ರು ಅದನ್ನು ತಿರಸ್ಕರಿಸಿದರು.

ನಂತರದ ದಿನಗಳಲ್ಲಿ ಇಸ್ಮತ್‌ರು ಮುಂಬೈಗೆ ಸ್ಕೂಲ್ ಇನ್ಸ್‌ಪೆಕ್ಟರ್ ಹುದ್ದೆಯ ಮೇಲೆ ಬಂದರು. ಮುಂಬೈಯ ಅಣ್ಣನ ಮನೆಯಲ್ಲಿ ವಾಸವಾಗಿದ್ದರು. ಆಗ ಮುಂಬೈಯಲ್ಲಿ ಶಾಹಿದ್ ಲತೀಫ್‌ರನ್ನು ಭೇಟಿಯಾದರು. ಆಗ ಶಾಹಿದ್‌ರು ಮುಂಬೈಯಲ್ಲಿ ಸಿನಿಮಾಕ್ಕಾಗಿ ಸ್ಕ್ರಿಪ್ಟ್ ಬರೆಯುತ್ತಿದ್ದರು. ಶಾಹಿದರು ಇಸ್ಮತ್‌ರನ್ನು ಬಹುವಾಗಿ ಮೆಚ್ಚಿ ಮದುವೆಯಾಗುವ ಇಂಗಿತ ವ್ಯಕ್ತಪಡಿಸಿದರು. ಆಗ ಇಸ್ಮತ್‌ರು ಅವರಿಗೆ ತಮ್ಮ ನೇರ ಮತ್ತು ದಿಟ್ಟ ನಿಲುವುಗಳು ತೊಂದರೆ ಉಂಟು ಮಾಡಬಹುದೆಂದು ಬಹಳ ದಿನಗಳವರೆಗೆ ಯೋಚಿಸಿ ಮದುವೆ ಬಗ್ಗೆ ವಿಚಾರ ಮಾಡಿ ಮುಂದುವರಿಯಬೇಕೆಂದು ಶಾಹಿದ್‌ರಿಗೆ ಹೇಳಿದರು. ಅಣ್ಣನ ಮನೆಯಲ್ಲಿರುವುದು ದುಸ್ತರವಾದಾಗ,

ಬಾಡಿಗೆ ಮನೆ ಕೇಳಲು ಹೋದ ಇಸ್ಮತ್‌ರಿಗೆ ಬಾಡಿಗೆ ಮನೆ ಸಿಗಲಿಲ್ಲ. ಮನೆಯ ಯಜಮಾನ "ಒಂಟಿ ಇರುವ ಮದುವೆಯಾಗದ ಮಹಿಳೆಗೆ ಬಾಡಿಗೆ ಮನೆ ಕೊಡುವದಿಲ್ಲ. "ನಮ್ಮದು ಸಂಸ್ಕಾರಸ್ಥರ ಮನೆ. ನಿನಗೆ ಮನೆ ಕೊಟ್ಟರೆ ನನ್ನ ಮನೆಯನ್ನು ವೇಶ್ಯಾವಾಟಿಕೆ ಮಾಡಿ ಬಿಡುತ್ತೀಯ. ಎಲ್ಲಾ ಹುಡುಗಿಯರೂ ಇಲ್ಲಿ ಅಧ್ಯಾಪಕಿಯರಾಗಿಯೇ ಬರುತ್ತಾರೆ. ಆದಾಯ ಕಮ್ಮಿಯೆನಿಸಿದಾಗ ದೇಹ ಮಾರಾಟದ ಕೆಲಸಕ್ಕಿಳಿಯುತ್ತಾರೆ. ನಾನು ಮದುವೆಯಾದವರಿಗೆ ಮಾತ್ರ ಮನೆ ಕೊಡುತ್ತೇನೆ" ಎಂದಾಗ ಅವರು ಮದುವೆಯಾಗಲು ಮನಸ್ಸು ಮಾಡಿದರು.

ಈ ನಡುವೆ ಶಾಹಿದ್ ಲತೀಫ್‌ರೊಂದಿಗೆ ಗಾಢ ಸ್ನೇಹ ಬೆಳೆದಿತ್ತು. ಶಾಹಿದ್‌ರು ಗಂಭೀರವಾಗಿ ಇಸ್ಮತ್‌ರ ಮುಂದೆ ಹೇಳಿದಾಗ ಇಸ್ಮತ್ ಹೇಳುವ ಮಾತುಗಳು ಬಹಳ ಮಹತ್ವದವು. "ನಾನು ನನ್ನ ಬದುಕಿನ ಎಲ್ಲ ರೀತಿಯ ಬಂಧನಗಳನ್ನು ಮುರಿದವಳು. ಬಂಧನವಲ್ಲಿ ಬದುಕಲು ನನಗೆ ಸಾಧ್ಯವಾಗಲಿಕ್ಕಿಲ್ಲ. ಒಬ್ಬ ವಿಧೇಯ ಹಾಗೂ ಅಪವಾದರಹಿತ ಹೆಂಡತಿಯ ಪಾತ್ರ ನನಗೆ ತಕ್ಕುದಾಗಲಾರದು" ಎಂದು ಅವರು ಶಾಹಿದ್‌ರ ನಿರ್ಧಾರವನ್ನು ಮತ್ತೆ ಮತ್ತೆ ಪರಿಶೀಲಿಸುವಂತೆ ಅನೇಕ ಬಾರಿ ಹೇಳುತ್ತಾರೆ. ಆದರೂ ಶಾಹಿದ್‌ರು ಕೇಳುವುದಿಲ್ಲ. ಕೊನೆಗೆ ಅವರಿಬ್ಬರೂ ಮದುವೆಯಾಗುತ್ತಾರೆ. ತಮ್ಮ ಆತ್ಮಚರಿತ್ರೆಯಲ್ಲಿ ಇಸ್ಮತ್ ಚುಗ್ತಾಯಿಯವರು ಹೇಳುತ್ತಾರೆ " ಶಾಹಿದ್ ನನ್ನನ್ನು ತನ್ನ ಸಮಾನವಾಗಿ ಭಾವಿಸುತ್ತಿದ್ದುದರಿಂದ ನಮ್ಮ ಮದುವೆಯ ಬದುಕು ಸಂತೋಷದಿಂದ ಕೂಡಿರಲು ಸಾಧ್ಯವಾಯಿತು" ಎನ್ನುತ್ತಾರೆ. ಸುಂದರ ಹೊಂದಾಣಿಕೆ ಅವರಿಬ್ಬರ ಮಧ್ಯೆಯಿತ್ತು.

**ಇಸ್ಮತ್; ಉರ್ದು ಸಾಹಿತ್ಯಲೋಕದ ಸಾಮ್ರಾಜ್ಞಿ**

ಇಸ್ಮತ್‌ರು ಆಧುನಿಕ ಉರ್ದು ಸಾಹಿತ್ಯದ ನಾಲ್ಕು ಕಂಬಗಳಲ್ಲಿ ಒಂದು ಕಂಬವಾಗಿದ್ದಾರೆ. ಬಾಕಿ ಮೂರು ಕಂಬಗಳೆಂದರೆ ಸಾದತ್ ಹಸನ್ ಮಾಂಟೋ, ಕಿಷನ್ ಚಂದರ್, ರಾಜೇಂದ್ರ ಸಿಂಗ್ ಬೇಡಿ. ಇಸ್ಮತ್‌ರು ವಿಶೇಷವಾದುದೇನನ್ನೋ ಸಾಧಿಸುತ್ತಿದ್ದೇನೆ ಎಂದು ಅಂದುಕೊಳ್ಳದೆಯೇ ವಿಶೇಷವಾದುದನ್ನು ಸಾಧಿಸಿ ತೋರಿಸುತ್ತಿದ್ದರು. ಇದೇ ಅವರ ವ್ಯಕ್ತಿತ್ವದ ವಿಶೇಷತೆಯಾಗಿತ್ತು.

ಇಸ್ಮತ್ ಚುಗ್ತಾಯಿಯವರು ಮೊಟ್ಟ ಮೊದಲು ರಚಿಸಿದ್ದು ಫಸಾದಿ ಎಂಬ ನಾಟಕ. ಈ ನಾಟಕವು ೧೯೩೮ರಲ್ಲಿ ಪ್ರಕಟವಾಯಿತು. ನಂತರ ಸಣ್ಣಕತೆ ನೀರಾ (ಮೂರ್ಖ) ಕಥೆ ಬರೆದರು. ೧೯೪೨ರಲ್ಲಿ ಲಿಹಾಫ್ (ಕೌದಿ, ರಜಾಯಿ) ಕಥೆ ಪ್ರಕಟವಾಯಿತು. ಇದರಲ್ಲಿ ಅವರು ಸ್ತ್ರೀಯರ ಸಲಿಂಗ ಕಾಮದ ವಸ್ತುವನ್ನು ಆಯ್ದುಕೊಂಡಿದ್ದರು. ಈ ಕತೆಯನ್ನು ಅವರು ಮೊದಲು ತಮ್ಮ ಒರಿಗೆಯವರೇ ಆದ ಅತ್ತಿಗೆಗೆ ಕೊಟ್ಟಾಗ ಅವರು ಅದನ್ನು ಓದಿ 'ಗಲೀಜು' ಎಂದು ಪ್ರತಿಕ್ರಿಯಿಸಿದರಂತೆ. ಇಸ್ಮತ್‌ರಿಗೆ ಲೈಂಗಿಕ ವಿಷಯಗಳನ್ನು ಯಾವ ಸಂಕೋಚವೂ ಇಲ್ಲದೆ ಚರ್ಚಿಸುವಾಗ ಅವರ ಹೆಣ್ಣುತನ ಅದಕ್ಕೆ ಅಡ್ಡಿ ಬರಲಿಲ್ಲ. ತಾನು ಹೆಣ್ಣು ಎಂಬ ಭಾವನೆಯೇ ಅಲ್ಲಿರಲಿಲ್ಲ.

ಹುಡುಗಿಯರು ಸಲಿಂಗ ಕಾಮದ ಬಗ್ಗೆ ಬರೆಯುವದಿರಲಿ ಖಾಸಗಿಯಾಗಿ ಮಾತನಾಡುವುದು ಅಥವಾ ಚರ್ಚಿಸುವದೂ ಕೂಡ 'ಪಾಪ' ಎಂದು ಭಾವಿಸಿದಂತಹ ಸಂದರ್ಭದಲ್ಲಿ ಒಬ್ಬ ಮಹಿಳೆ ಪತ್ರಿಕೆಗೆ ಇಂಥ ವಸ್ತುವನ್ನುಳ್ಳ ಕತೆಯನ್ನು ಬರೆಯುವುದೆಂದರೆ ತುಂಬಾ ಕಷ್ಟದ ಕೆಲಸವಾಗಿತ್ತು. ಹೀಗಾಗಿ ಅದು ಸಾಹಿತ್ಯಲೋಕದಲ್ಲಿ ಸ್ಫೋಟಕ ಪರಿಣಾಮವನ್ನು ಬೀರಿತು. ಲಿಹಾಫ್ ಕತೆಯು ಉರ್ದು ಸಾಹಿತ್ಯದ ಸಭ್ಯ ಕಟ್ಟಳೆಗಳನ್ನು ಮೀರಿದ ಕತೆಯಾಗಿತ್ತು. ವಾಸ್ತವದಲ್ಲಿ ಮಹಿಳೆಯರ ಬದುಕಿನ ಒಳ ತುಮುಲಗಳನ್ನು ಈ ಕತೆಯ ಮೂಲಕ ಹೊರಗೆಡವಲಾಗಿತ್ತು. ಶ್ರೀಮಂತ ನವಾಬ್‌ರು ಹೊರಗೆ ಮೆರೆವ ಪೌರುಷದ ಮುಖವಾಡದ ಮರೆಯಲ್ಲಿ ಅವರ ಜನಾನಾದ ಸ್ತ್ರೀಯರು - ರಾಣಿಯರು ಗಂಡನ ಪ್ರೀತಿಯು ದಕ್ಕದೇ ಕಾಮ-ಪ್ರೇಮ ವಂಚಿತರಾಗಿ ಹೇಗೆ ಬದುಕುತ್ತಾರೆಂಬುದು ಮತ್ತು ಪರದೆಯ ಹಿಂದೆ ಸೇವಕಿಯರೊಂದಿಗೆ ನಡೆಸುವ ಸಲಿಂಗ ಕಾಮದ ವಿಷಯವೇ ಲಿಹಾಫ್ ಕಥೆ. ಹೀಗಾಗಿ ಇದು ಬಹಳ ತೀವ್ರತರವಾದ ಸಾಮಾಜಿಕ ವಿರೋಧವನ್ನು ಎದುರಿಸಬೇಕಾಯಿತು. ಅದನ್ನು ಹೊಗಳಿದವರೆಂದರೆ ಕೃಷ್ಣಚಂದರ್, ಸಾದತ್ ಹಸನ ಮಾಂಟೋರವರು.ಲಿಹಾಫ್ ಕಥೆಯ ನಂತರವೇ ಇಸ್ಮತ್‌ರು ಸಾಹಿತ್ಯ ಲೋಕದಲ್ಲಿ ಗಂಭೀರವಾಗಿ ಪರಿಗಣಿಸಲ್ಪಟ್ಟರು. ಮುಂದೆ ಇಸ್ಮತ್‌ರ ಲೇಖನಿಯೂ ಹೆಚ್ಚು ಹೆಚ್ಚು ಪ್ರಬುದ್ಧವಾಗುತ್ತ ಹೋಯಿತು.

೧೯೪೨ರಲ್ಲಿ ಆಗಿನ ಭಾರತವನ್ನಾಳುತ್ತಿದ್ದ ಬ್ರಿಟಿಷ್ ಸರ್ಕಾರ ಇಸ್ಮತ್‌ರ ಮೇಲೆ ಅಶ್ಲೀಲ ಸಾಹಿತ್ಯದ ಆರೋಪ ಹೊರಿಸಿತು. ಮುಂದೆ ೧೯೪೪ರಲ್ಲಿ ಲಾಹೋರ್ ಕೋರ್ಟಿನಲ್ಲಿ ದಾವೆ ಹೂಡಿತು. ಅದೇ ಕಾಲಕ್ಕೆ ಸಾದತ್ ಹಸನ್ ಮಾಂಟೋರವರ ಕತೆ ಬೂ (ವಾಸನೆ) ಅಶ್ಲೀಲವೆಂಬ ಕಾರಣ ನೀಡಿ ಅವರಿಗೂ ಲಾಹೋರ್ ಕೋರ್ಟ್‌ನಲ್ಲಿ ದಾವೆ ಹೂಡಲಾಗಿತ್ತು. ಆಗಲೇ ಇಸ್ಮತ್ ಮತ್ತು ಮಾಂಟೋ ಆತ್ಮೀಯರಾದರು. ಎರಡು ವರ್ಷ ನಡೆದ ಈ ದಾವೆ ನಂತರ ಬಿದ್ದು ಹೋಯಿತು. ಅದು ಅಂತಿಮವಾಗಿ ೧೯೪೬ರಲ್ಲಿ ಕೊನೆಗೊಂಡಿತು. ಅದೇ ಕಾಲಕ್ಕೆ ಮಾಂಟೋರವರ ದಾವೆ ಕೂಡ ಕೊನೆಗೊಂಡಿತು. ಸಮಾಜದ ರೂಢಿಗತ ನಿಯಮಗಳನ್ನು ಮೀರಿದ್ದಕ್ಕಾಗಿ ಇಸ್ಮತ್‌ರು ಬಹಳ ಹಿಂಸೆ, ಕಿರುಕುಳವನ್ನನುಭವಿಸಿದರು.

ಒಂದು ಸಲ ಸಾದತ್ ಹಸನ್ ಮಾಂಟೋರವರು ಇಸ್ಮತ್‌ರ ಬಗ್ಗೆ ಹೇಳುತ್ತಾ " ಒಂದು ವೇಳೆ ಇಸ್ಮತ್ ಗಂಡಸಾಗಿದ್ದರೆ - ಅದು ನಾನಾಗುತ್ತಿದ್ದೆ. ಒಂದು ವೇಳೆ ನಾನು ಹೆಣ್ಣಾಗುತ್ತಿದ್ದರೆ ಅದು ಇಸ್ಮತ್ ಆಗಿರುತ್ತಿದ್ದೆ" ಎಂದು ಅವರು ತಮ್ಮ ಮತ್ತು ಇಸ್ಮತ್‌ರ ವೈಚಾರಿಕ ಸಾಮ್ಯತೆ, ತಾತ್ವಿಕ ಬದ್ಧತೆಗಳ ಬಗ್ಗೆ ಮಾತಾಡುತ್ತಾ ತಿಳಿಸುತ್ತಾರೆ.

ಇಸ್ಮತ್‌ರ ಬಂಡಾಯ ಮನೋಧರ್ಮ ಎಷ್ಟು ಗಟ್ಟಿಯಾಗಿತ್ತು ಎಂಬುದಕ್ಕೆ ಇನ್ನೊಂದು ನಿದರ್ಶನವನ್ನು ನೆನಪಿಸಿಕೊಳ್ಳಹುದು. ಅವರು ತೀರಿಕೊಂಡಾಗ, ತಮ್ಮ ದೇಹವನ್ನು ಇಸ್ಲಾಂ ಸಂಪ್ರದಾಯದಂತೆ ದಫನ್ ಮಾಡದೆ ಸುಟ್ಟುಬಿಡಬೇಕೆಂದು ತಮ್ಮ ಮಗಳಿಗೆ ಹೇಳಿದ್ದರು. ಅವರ ಅಂತಿಮ ಇಚ್ಛೆಯನ್ನು ಮಗಳು ಪೂರೈಸಿದಳು. ಓರ್ವ ಹೆಣ್ಣು ಮಗಳಿಗೆ ಮತ್ತು ಮುಸ್ಲಿಂ

ಹಿನ್ನೆಲೆಯಿಂದ ಬಂದ ಹೆಣ್ಣು ಮಗಳಿಗೆ ಇಂತಹ ನಿರ್ಧಾರ ಕೈಗೊಳ್ಳಲು ಬಲುದೊಡ್ಡ ಧೀಶಕ್ತಿಯು ಬೇಕು. ಅದನ್ನು ಬದುಕು ಮತ್ತು ಬರಹ ಎರಡರಲ್ಲೂ ಅವರು ತೋರಿದ್ದಾರೆ.

ಇಸ್ಮತ್‌ರ ಕಾಲ ಭಾರತದ ಸ್ವಾತಂತ್ರ್ಯ ಹೋರಾಟದ ಕಾಲವಾಗಿತ್ತು. ಅವರ ಕಣ್ಣ ಮುಂದೆಯೇ ವಿಶ್ವದ ಎರಡು ಮಹಾಯುದ್ಧಗಳು ನಡೆದವು. ಅಖಂಡ ಭಾರತ ಇಬ್ಭಾಗವಾಗುವ ಸಂಕಟ ಅನುಭವಿಸಿದರು. ರಾಷ್ಟ್ರ ಇಬ್ಭಾಗವಾಗುವಾಗಿನ ನೋವುಗಳು ಇಸ್ಮತರ ಹೃದಯವನ್ನು ಕಲಕಿತು. ಇದು ಕೇವಲ ಒಂದು ರಾಷ್ಟ್ರ ಎರಡು ಭಾಗವಾಗುವಾಗಿನ ಸಂಕಟ ಮಾತ್ರವಲ್ಲ; ಬದಲಾಗಿ ಇಲ್ಲಿಯ ಜನ ಅಲ್ಲಿಗೂ, ಅಲ್ಲಿಯ ಜನರು ಇಲ್ಲಿಗೂ ತಮ್ಮ ಮನೆ-ಮಠ, ಆಸ್ತಿ-ಪಾಸ್ತಿಗಳನ್ನು, ಪ್ರೀತಿಪಾತ್ರರನ್ನೆಲ್ಲ ಬಿಟ್ಟು, ಊರು ಕೇರಿ ಮನೆ-ಅನ್ನ-ನೀರು ನೀಡಿದ ಊರುಗಳನ್ನು ಬಿಟ್ಟು ಬರಿಗೈಯಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗಿನ ಸಂಕಟ. ನೆಲೆಯಿಲ್ಲದೆ ಬೀದಿ ಪಾಲಾದ ಜನರ ಅಸಹಾಯಕತೆಯನ್ನು ಬಂಡವಾಳ ಮಾಡಿಕೊಂಡು ಅವರನ್ನು ಶೋಷಿಸುವವರು ಎಲ್ಲರೂ ಅಲ್ಲಿದ್ದರು. ಎಷ್ಟೋ ಹೆಣ್ಣುಮಕ್ಕಳ ಶೀಲ ಹರಣವಾದವು. ಒಡವೆ ಬಂಗಾರ ಲೂಟಿಯಾದವು. ಅನೇಕರು ಜೀವವನ್ನೂ ಕಳೆದುಕೊಳ್ಳಬೇಕಾಯಿತು. ಅನೇಕರು ಆಶ್ರಯವಿಲ್ಲದೆ ಬೀದಿಪಾಲಾದರು. ಇವರೆಲ್ಲರ ನೋವು ಸಂಕಟಗಳು ಇಸ್ಮತ್‌ರ ಬರವಣಿಗೆಯಲ್ಲಿ ತಾನೆ ತಾನಾಗಿ ಮೂಡಿ ಬಂದವು.

ವಿಶ್ವದ ಮಹಾಯುದ್ಧದ ಸಮಯದಲ್ಲಿ ಬರೆದ ಸುದೀರ್ಘ ಕಾದಂಬರಿ **ತೇಡಿ ಲಕೀರೇಂ** ಅವರಿಗೆ ಬಹಳಷ್ಟು ಗೌರವವನ್ನು ಪ್ರಶಸ್ತಿಗಳನ್ನೂ ನೀಡಿದ ಕಾದಂಬರಿಯಾಗಿದೆ. ಖುರ್ರತುಲ್ಐನ್ ಹೈದರ್, ಜಿಲಾನಿ ಬಾನು ಮತ್ತು ಫರಖಂದಾ ಲೋದಿ ಇವರುಗಳೆಲ್ಲ ಹೆಚ್ಚು ಕಡಿಮೆ ಇಸ್ಮತ್‌ರವರ ವಿಚಾರಧಾರೆಯ ಮಹಿಳೆಯರೇ ಆಗಿದ್ದರು. **ಅಂಗಾರೆ** ಎಂಬ ಪ್ರಸಿದ್ಧ ಕೃತಿಯ ಕರ್ತೃವಾದ ಡಾ. ರಷಿದ್‌ಜಹಾಂ ರವರು ಇಸ್ಮತ್‌ರ ಆದರ್ಶವಾಗಿದ್ದರು. ದಿಟ್ಟ ಸ್ಫೂರ್ತಿಯ ಗಟ್ಟಿ ವಿಚಾರದ ನೇರ ನುಡಿಗಳ ಇಸ್ಮತ್ ಬಹಳಷ್ಟು ಲೇಖಕಿಯರಿಗೆ ಸ್ಫೂರ್ತಿಯಾದರು.

೧೯೯೧ರಲ್ಲಿ ಇಸ್ಮತ್ ಚುಗ್ತಾಯಿಯವರು ಅಂತ್ಯವಾದ ನಂತರ ಖುರ್ರತುಲ್ಐನ್ ಹೈದರ್‌ರವರು ಇಸ್ಮತ್‌ರ ಕುರಿತು 'ಲೇಡಿ ಚೆಂಗೇಜ್ ಖಾನ್' ಎಂದು ಭಾವುಕರಾಗಿ ಬರೆದರು. "ಸಾಹಿತ್ಯ ಕ್ಷೇತ್ರದ ಯುದ್ಧದಲ್ಲಿ ಇಸ್ಮತ್ ಓಡುವ ಕುದುರೆಯಾಗಿದ್ದರು." ಎಂದು ನುಡಿದರು. ಅವರು ಇಸ್ಮತ್‌ರನ್ನು ತುಂಬಾ ಗೌರವಿಸುತ್ತಿದ್ದರು. ಇಸ್ಮತ್‌ರವರ ಸ್ವಂತಿಕೆಯಿಂದ ಕೂಡಿದ ಸಾಹಿತ್ಯದಲ್ಲಿ **ಬಿಚ್ಚು ಫೂಫೀ** (ಚೇಳು ಚಿಕ್ಕಮ್ಮ) **ಮೊಗಲ್ ಬಚ್ಚಾ** (ಮೊಗಲ್‌ಮಗು) ಅಥವಾ ಅವರ ಸ್ವಂತ ಅನುಭವ ಕಥನವಾದ **ಕಾಗಜೀ ಹೈ ಪೈರಹನ್** ಮುಖ್ಯವಾಗಿವೆ. ಯೂನುಸ್ ಅಗಸ್ಕರ್‌ರವರು ಇಸ್ಮತ್‌ರ ಜೊತೆಗೆ ನಡೆಸಿದ ಇಂಟರ್‌ವ್ಯೂನಲ್ಲಿಯೂ ಇಸ್ಮತ್ ಹೇಳುತ್ತಾರೆ. 'ಚುಗ್ತಾಯಿ ಮತ್ತು ಉಸ್ಮಾನಿ ರಕ್ತವು ಇಸ್ಮತ್‌ರ ವ್ಯಕ್ತಿತ್ವವನ್ನು ರೂಪಿಸಿದೆ. ಅಣ್ಣ ಅಜೀಮ್ ಬೇಗ್ ಚುಗ್ತಾಯಿ ಒಬ್ಬ ಬರಹಗಾರರಾಗಿದ್ದರು. ಈ ಅಣ್ಣನ ಉಸ್ತುವಾರಿಯಲ್ಲಿಯೇ ಅವರ ಶಿಕ್ಷಣ ಮುಂದುವರಿದಿತ್ತು. ತನ್ನ ತೀಕ್ಷ್ಣಬುದ್ಧಿ ಮತ್ತು ಸಂವೇದನಾಶೀಲ ಗ್ರಹಿಕೆಯನ್ನು ರೂಢಿಸುವುದರಲ್ಲಿ ಅಣ್ಣನ ಪಾತ್ರ ಬಹಳವಾಗಿದೆ - ಎಂದು ಇಸ್ಮತ್‌ರು ಹೇಳುತ್ತಿದ್ದರು.

ಇಸ್ಮತ್‌ರು ಕೇವಲ ಕಥೆ, ಕಾದಂಬರಿಗಳನ್ನು ಮಾತ್ರ ಬರೆಯಲಿಲ್ಲ. ಬದಲಾಗಿ ಪ್ರಗತಿಪರ ಬರಹಗಾರರ ಚಳುವಳಿಯನ್ನೂ ಕಟ್ಟಿದರು. ಈ ಚಳುವಳಿಯಲ್ಲಿ ಸಾದತ್ ಹಸನ್ ಮಾಂಟೋ ಫೈಜ್ ಅಹ್ಮದ್ ಫೈಜ್, ಸಜ್ಜಾದ್ ಝಹೀರ್, ಕೈಫೀ ಆಜ್ಮಿ, ರಶೀದ್ ಜಹಾನ್, ಮುಲ್ಕ್‌ರಾಜ್ ಆನಂದ, ಜಾನಿಸಾರ ಅಖ್ತರರಿದ್ದರು. ಇಸ್ಮತ್‌ರು ೧೯೩೦ರ ಬರಹಗಾರರ ಒಕ್ಕೂಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ೧೯೪೩ರಿಂದ ಅವರು ತಮ್ಮನ್ನು ಸಂಪೂರ್ಣ ಬರವಣಿಗೆಗೆ ಅರ್ಪಿಸಿಕೊಂಡರು.

ಇಸ್ಲಾಂ ಸಮುದಾಯದಲ್ಲಿ ಹೆಣ್ಣು ಯಾವತ್ತೂ ಪತಿಗೆ ವಿಧೇಯಳಾಗಿರಬೇಕಾಗುತ್ತಿತ್ತು. ಪತಿಯ ಮೇಲೆ ಪತ್ನಿಯು ಹಕ್ಕು ಸ್ಥಾಪಿಸುವುದು ಒಪ್ಪಿತವಲ್ಲದ ವಿಷಯವಾಗಿತ್ತು. ಬ್ರಿಟಿಷ ಭಾರತದಲ್ಲಿಯೂ ಆಕೆಯ ಸ್ಥಾನ ಯಾವ ದಾಸಿಗಿಂತಲೂ ಹೆಚ್ಚಿರಲಿಲ್ಲ. ಅವರ ವಿಷ (ಜಹೆರ್) ಕತೆಯಲ್ಲಿ ಅಮ್ಮಿ ಜಿಲ್ಲಾ ಕಲೆಕ್ಟರರಾಗಿದ್ದ ಅಬ್ಬಾಸನ ಬಳಿ "ನೀವು ಆ ಇಂಗ್ಲಿಷ್ ಹೆಂಗಸರ ಜೊತೆ ಯಾಕೆ ಹಂಗೆ ಸುತ್ತುತ್ತೀರಿ?" ಎಂದು ಕೇಳಿದ್ದಕ್ಕೆ "ಒಂದು ದಿನ ನೀನೂ ನನ್ನ ಜೊತೆ ಬಾ. ಅವರ ಗಂಡಸರ ಜೊತೆ ನೀನೂ ಸುತ್ತುವಿಯಂತೆ" ಎಂದು ಹೇಳಿದರು. ಅದನ್ನು ಕೇಳಿದ ಅಮ್ಮಿ ಹಾವು ತುಳಿದವರಂತೆ ಬೆಚ್ಚಿ ಬೀಳುತ್ತಾಳೆ. ಅನಂತರ ಅಮ್ಮಿ ತನ್ನ ವೈವಾಹಿಕ ಹಕ್ಕು ಸ್ಥಾಪಿಸುವ ಗೋಜಿಗೇ ಹೋಗುವದಿಲ್ಲ. ಇದು ಸ್ತ್ರೀಯ ಹಕ್ಕುಗಳ ಬಗ್ಗೆ ಜ್ಞಾನವಿರುವ ಇಸ್ಮತ್ 'ವಿಷ' ಕಥೆಯ ಪಾತ್ರಗಳ ಮೂಲಕ ಮಾತನಾಡಿಸುತ್ತಾರೆ.

ಇವರ ಮದುವೆ ಬಟ್ಟೆ (ಚೌಥಿ ಕಾ ಜೋಢಾ) ಕತೆಯಲ್ಲಿ ಬರುವ ಕುಬ್ರಳ ಗಂಡ ಸತ್ತಾಗ ಮಗಳು ಹಮೀದಾ ಸಿಹಿರೊಟ್ಟಿಯನ್ನೂ ಕೇಳಿ ಹಟ ಮಾಡಲಿಲ್ಲ. ಆ ಕತೆಯಲ್ಲಿ ಬರುವ "ಕುಬ್ರಳ ಯೌವನ ಗೋಣಿತಟ್ಟಿನ ಪರದೆಯ ಹಿಂದೆಯೇ ಬಿಕ್ಕಳಿಸುತ್ತಾ ಕೊನೆಯುಸಿರೆಳೆಯುವಂತಾಯಿತು" ಎಂಬ ಮಾತಿಗೆ ವಿಶೇಷ ಅರ್ಥವಿದೆ. ಸಾಮಾನ್ಯವಾಗಿ ಮುಸ್ಲಿಮರ ಮನೆ ಬಾಗಿಲಿಗೆ ಕುಸುರಿ ಚಿತ್ತಾರದ ಪರದೆಗಳನ್ನು ಇಳಿಬಿಟ್ಟಿರುತ್ತಾರೆ. ಆದರೆ ಉತ್ತರದ ಕಡೆಯ ಬಡ ಮುಸ್ಲಿಮರ ಮನೆ ಬಾಗಿಲಿಗೆ ಗೋಣಿ ತಟ್ಟುಗಳೇ ಪರದೆಗಳಾಗಿರುವ ಸಾಂಸ್ಕೃತಿಕ ಲೋಕವನ್ನು ಈ ಮೂಲಕ ಇಸ್ಮತ್ ಅನಾವರಣಗೊಳಿಸಿದ್ದಾರೆ. ಮಗಳ ಮದುವೆಗಾಗಿ ಹಂಬಲಿಸಿ ನಿರಾಶೆಗೊಂಡ ತಾಯಿಯೊಬ್ಬಳ ಕಥೆಯೇ ಮದುವೆಯ ಬಟ್ಟೆ, (ಚೌಥಿ ಕಾ ಜೋಡಾ). ಇದರ ನಾಯಕಿ ಬೀಯಮ್ಮ. ಈಕೆ ಮದುವೆಯ ಬಟ್ಟೆಗಳ ಮೇಲೆ ಸುಂದರವಾದ ಕಸೂತಿಗಳನ್ನು ಹಾಕಿ, ಬಂದ ಹಣದಲ್ಲಿ ಮಗಳ ಮದುವೆಯ ಕನಸನ್ನು ಕಾಣುತ್ತಿದ್ದಾಕೆ. ಮುಸ್ಲಿಂ ಸಂಪ್ರದಾಯದಲ್ಲಿ ಮಹಿಳೆ ಮುತ್ತೈದೆಯಾಗಿ ಸತ್ತರೆ ಕೆಂಪು ಕಫನ್ ಬಟ್ಟೆಯನ್ನೂ, ಕನ್ಯೆಯಾಗಿದ್ದರೆ ಬಿಳಿ ಕಫನ್ ಬಟ್ಟೆಯನ್ನೂ ಹೊದಿಸುವುದು ಪದ್ಧತಿ. ಕಫನ್ ಬಟ್ಟೆಗಳನ್ನು ಬಳಕೆಯ ನಂತರ ಮತ್ತೆ ಉಪಯೋಗಿಸುವಂತಿಲ್ಲ. ಬೀಯಮ್ಮನ ಪ್ರಯತ್ನಗಳೆಲ್ಲ ವ್ಯರ್ಥವೆಂಬಂತೆ ಬಂದ ವರಗಳೆಲ್ಲ ಅವಳ ಮಗಳು ಹಮೀದಳನ್ನು ಒಪ್ಪದೆ ಹಿಂದಿರುಗುತ್ತಿದ್ದರು. ಒಬ್ಬ ವರ ಬಂದು, ತಿಂಗಳುಗಟ್ಟಲೆ ಮನೆಯಲ್ಲೇ ನೆಲೆನಿಂತು, ಹಮೀದಳಿಗೆ ಗೊತ್ತಾಗದಂತೆ ಅವಳ ತಂಗಿಯ ಜೊತೆ ಚಕ್ಕಂದ ಆರಂಭಿಸುತ್ತಾನೆ. ತಂಗಿಯಿಂದ ಹಮೀದಳಿಗೆ ಸುದ್ದಿ ತಿಳಿಯುತ್ತದೆ. ಅಷ್ಟರಲ್ಲಿ 'ಬರುತ್ತೇನೆಂದು' ಹೇಳಿ ಹೋದ ಆತ ಕೊನೆಗೂ

ಹಿಂದಿರುಗುವುದಿಲ್ಲ. ಮಗಳ ಭವಿಷ್ಯದ ಬಗ್ಗೆ ನೊಂದ ಬೀಯಮ್ಮ ಈಗ ಕಫನ್ ಬಟ್ಟೆ ಹೊಲಿಯುವ ಕೆಲಸವನ್ನೂ ಒಪ್ಪಿಕೊಳ್ಳುತ್ತಾಳೆ. ಮತ್ತು ಬಟ್ಟೆ ಹೊಲಿದು ತನ್ನ ಗಂಜಿಗಾಧಾರ ಮಾಡಿಕೊಂಡಿದ್ದ ಬೀಯಮ್ಮ ಕಫನ್ ಬಟ್ಟೆ ನೋಡಿ ತೃಪ್ತಿಪಡುತ್ತಾಳೆ. ಮದುವೆ ಬಟ್ಟೆಯಂತೆ ಈ ಕಫನ್‌ಗಳು ಪೆಟ್ಟಿಗೆಯಲ್ಲೇ ಕೊಳೆಯುವುದಿಲ್ಲ ಎಂಬುದೇ ಅವಳ ಸಂತೋಷಕ್ಕೆ ಕಾರಣ. ಆದಾಗ್ಯೂ ಕೆಂಪು ಬಣ್ಣದ ವಸ್ತ್ರದ ಮೇಲೆ ಎಷ್ಟು ಮುಗ್ಧ ವಧುಗಳ ಸೌಭಾಗ್ಯ ಬೆರೆತಿವೆಯೋ ಬಿಳಿ ಬಣ್ಣದಲ್ಲಿ ಅದೆಷ್ಟು ನತದೃಷ್ಟ ಕನ್ಯೆಯರ ಕಫನ್ ಶ್ವೇತ ವರ್ಣ ಸೇರಿದೆಯೋ? ಎಂದು ಬೀಯಮ್ಮ ಹಾಕುವ ಕಣ್ಣೀರು ಕಥೆಯ ಅರ್ಥವನ್ನು ಹಿಗ್ಗಿಸುತ್ತದೆ.

ಸ್ತ್ರೀಲೋಕದ ಕಷ್ಟಗಳು ಮತ್ತು ನೋವುಗಳ ಬಗ್ಗೆ ಇಸ್ಮತ್ ಚುಗ್ತಾಯಿಯಂತಹ ಸ್ತ್ರೀವಾದಿ ಲೇಖಕಿಯಿಂದ ಮಾತ್ರ ಅನನ್ಯವಾದ ರಚನೆಗಳು ಮೂಡಿಬರಲು ಸಾಧ್ಯ. ಸ್ತ್ರೀವಾದಿ ಸಾಹಿತ್ಯ ಪರಂಪರೆಯೊಂದು ಇಲ್ಲದೆ ಇರುವಾಗಲೇ ಸ್ತ್ರೀವಾದಿ ಸಾಹಿತ್ಯವನ್ನು ತಾನು ರಚನೆ ಮಾಡುತ್ತಿರುವ ಅರಿವೇ ಇಲ್ಲದಂತೆ ರಚನೆಯಾಯಿತು – ಅವರ ಸ್ತ್ರೀವಾದಿ ಸಾಹಿತ್ಯ.

ಇಸ್ಮತ್‌ರ ಬರವಣಿಗೆಯಿಂದ ಪ್ರಭಾವಿತರಾಗಿ ಉರ್ದು ಸಾಹಿತ್ಯದಲ್ಲಿ ಅನೇಕ ಲೇಖಕಿಯರು ಮುಂದೆ ಬಂದರು – ಅವರಲ್ಲಿ ಖುರ್ರತುಲೈನ್ ಹೈದರ್, ಮುಮ್ತಾಜ. ಶಿರೀನ್ ಹಾಜಿರಾ ಮಸ್ರೂರ್, ಖತೀಜಾ ಮಸ್ರೂರ್, ರಜಿಯಾ ಸಜ್ಜಾದ್, ಜಹೀರ್, ತಸ್ನೀಮ್ ಸಲೀಮ್, ಸರಲಾದೇವಿ, ಸಾದಿಖ್‌ಬೇಗಂ, ಶಕೀಲಾ ಅಖ್ತರ್ ಮುಂತಾದವರು.

ಇಸ್ಮತ್‌ರು ತಮ್ಮ ಅತ್ಯಂತ ಆತ್ಮೀಯ ಮತ್ತು ಖಾಸಗಿ ಅನುಭವಗಳನ್ನೇ ತಮ್ಮ ಕಥೆಗಳಲ್ಲಿ ಎರಕ ಹೊಯ್ಯುತ್ತಿದ್ದರು. ಅದನ್ನು ಅತ್ಯಂತ ನೈಜವಾಗಿ ಪಾತ್ರಗಳಲ್ಲಿ ಛಟ್ಟಿ ಇಳಿಸುತ್ತಿದ್ದರು. ಅವರ ಅನೇಕ ಕತೆಗಳು ಅವರದೇ ಆತ್ಮಚರಿತ್ರೆಯ ತುಣುಕುಗಳಂತಿವೆ. **ಬಿಚ್ಚುಫೂಪೀ** (ಚೇಳು ಚಿಕ್ಕಮ್ಮ), **ಕುಂವಾರಿ** (ಕನ್ಯೆ) ಮತ್ತು ಅವರ ಅತ್ಯುತ್ತಮ ಕಾದಂಬರಿ **ತೇಢೀ ಲಕೀರೇಂ**ನಲ್ಲಿ ಅವರ ಬಾಲ್ಯದ ಅನೇಕ ಘಟನೆಗಳು ಸಂಗಮಿಸಿವೆಯೇನೋ ಎಂಬಂತೆ ಭಾಸವಾಗುತ್ತದೆ. ಇಸ್ಮತ್ ಅವರು ಕೇವಲ ಕೆಲವೇ ವಿಷಯಗಳ ಬಗ್ಗೆ ಬರೆಯುತ್ತಾರೆ. ಕೇವಲ ಸೀಮಿತ ಚೌಕಟ್ಟಿನಲ್ಲಿ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆಂಬ ಆಪಾದನೆಯನ್ನು ಸಾಮಾನ್ಯವಾಗಿ ವಿಮರ್ಶಕರು ಮಾಡಿದ್ದಿದೆ.

ಸಂಕೋಚ ಪಡುವ ಪ್ರವೃತ್ತಿ ಅವರದಲ್ಲ. ಅವರ ಮಾತು, ಕೃತಿ ಹಾಗೂ ನಡತೆಗಳು ಕವಚವಿಲ್ಲದ ಖಡ್ಗದಂತೆ ತೀಕ್ಷ್ಣ ಮತ್ತು ನೇರವಾಗಿರುತ್ತಿದ್ದವು. ಅವರ ಬುದ್ಧಿ ಬ್ಲೇಡಿನಷ್ಟೇ ತೀಕ್ಷ್ಣವಾಗಿತ್ತು. ನಿರ್ಭಯವಾದ ಬರವಣಿಗೆ ಅವರಿಗೆ ಸಿದ್ಧಿಸಿತ್ತು. ಈ ಪುಟ್ಟ ಮಹಿಳೆಯಲ್ಲಿ ಅಗಾಧವಾದ ಬುದ್ಧಿಮತ್ತೆ ಇತ್ತು. ಸ್ತ್ರೀ ಲೇಖಕಿಗೆ ನಿಷಿದ್ಧವಾಗಿದ್ದ ಅನೇಕ ವಿಷಯಗಳನ್ನು ಅವರು ಅನಾವರಣಗೊಳಿಸುತ್ತಿದ್ದರು. ಆದರೆ ಅವರು ಮನೆಗೆಲಸವನ್ನು ದ್ವೇಷಿಸುತ್ತಿದ್ದರು. ಇಸ್ಮತ್‌ರ ಬರಹ, ಕಥೆ, ಕಾದಂಬರಿಗಳು ಭಾರತದ ಶಾಲೆ ಕಾಲೇಜುಗಳಷ್ಟೇ ಅಲ್ಲ - ವಿದೇಶಗಳಲ್ಲೂ ಪಠ್ಯಗಳಾಗಿವೆ. ಬ್ರಿಟನ್ನಿನ ಓಪನ್ ಯುನಿವರ್ಸಿಟಿಯಲ್ಲಿಯೂ ಪಠ್ಯಪುಸ್ತಕವಾಗಿದೆ.

ಅವರು ಯಾವತ್ತೂ ಸ್ತ್ರೀ ಪ್ರಗತಿ ವಿರೋಧಿ ಸ್ಥಾಪಿತ ಮೌಲ್ಯಗಳನ್ನು ವಿರೋಧಿಸುತ್ತಿದ್ದರು. ಸ್ತ್ರೀಯರ ಕಾರ್ಯಗಳೆಂದು ಪರಿಗಣಿಸಲ್ಪಟ್ಟ, ಅಡುಗೆ, ಹೊಲಿಯುವದು, ಹೆಣೆಯುವುದು, ನೇಯುವುದು, ಗೃಹಿಣಿಯ ಅದರಲ್ಲೂ ಬಿಚ್ಚೋಲೆ ಗೌರಮ್ಮನ ಪಾತ್ರವನ್ನು ಅವರು ಬಹುವಾಗಿ ದ್ವೇಷಿಸುತ್ತಿದ್ದರು. ಅಖಂಡ ಭಾರತ ಇಬ್ಭಾಗವಾದ ನೋವು ಅವರಿಗೆ ಬಹುವಾಗಿ ಪೀಡಿಸಿತ್ತು.

ಈ ಬರಹಗಾರ್ತಿ ಅನೇಕ ಮೊದಲುಗಳಿಗೆ ಪಾತ್ರರಾದರು. ೧೯೩೬ರಲ್ಲಿ ಬಿ.ಎ., ಬಿ.ಟಿ. ಅಧ್ಯಯನ ಮುಗಿಸಿದ ಮೊಟ್ಟ ಮೊದಲ ಮುಸ್ಲಿಂ ಮಹಿಳೆಯಾಗಿದ್ದರು. ರೂಢಿಗತ ಉರ್ದು ಕತೆ ಕಾದಂಬರಿಗಳ ದಿಕ್ಕು ಬದಲಿಸಿದ ಮೊದಲ ಮಹಿಳೆ. ಇವರು ಉರ್ದು ಸಾಹಿತ್ಯದ ಮೊಟ್ಟ ಮೊದಲ ಸ್ತ್ರೀವಾದಿ ಲೇಖಕಿಯೆನಿಸಿದರು. ಮೊಟ್ಟ ಮೊದಲ ಸ್ತ್ರೀ ಸಲಿಂಗಕಾಮದ ವಸ್ತು ಇರುವ 'ಲಿಹಾಫ್' ಕತೆಯನ್ನು ಪ್ರಕಟಿಸುವ ಎದೆಗಾರಿಕೆ ತೋರಿದ ಮೊದಲ ಮಹಿಳೆ. ಅದರಲ್ಲೂ ತನ್ನ ಆತ್ಮ ಚರಿತ್ರೆಯನ್ನು ಬರೆದುಕೊಂಡ ದಿಟ್ಟ ಮಹಿಳೆಯಾಗಿದ್ದಾರೆ.

### ಖುರ್ರತುಲ್ಶೈನ್ ಹೈದರ್

ಖುರ್ರತುಲ್ಶೈನ್ ಹೈದರ್ ೧೯೨೭ರಲ್ಲಿ[೧] ಉತ್ತರ ಪ್ರದೇಶದ ಬಿಜನೂರಿನಲ್ಲಿ ಜನಿಸಿದರು. ತಂದೆ ಸಜ್ಜಾದ್ ಹೈದರ್ ಯಲ್ದ್ರಮ್, ತಾಯಿ ನಜ್ರ ಸಜ್ಜಾದ್ ಹೈದರ್. ಖುರ್ರತ್‌ರವರ ತಾಯಿ ಕೂಡ ಆಗಿನ ಕಾಲದ ಉರ್ದು ಸಾಹಿತ್ಯದ ಲೇಖಕಿಯಾಗಿದ್ದರು. ಓರ್ವ ಲೇಖಕಿಯ ಮಗಳಾದ ಖುರ್ರತ್ ಆಗಿನ ಮಹಿಳೆಯ ಅಂಧಕಾರದ ಬದುಕಿನಲ್ಲಿ ಬೆಳಕು ಮೂಡಿಸಲು ಪ್ರಯತ್ನಿಸಿದರು. ಅಲ್ಲದೇ ಹೆಣ್ಣಿನ ಬದುಕು ದುಃಖಾಂತ್ಯವಾಗುವುದನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ತಮ್ಮ ಕೃತಿಗಳನ್ನು ರಚಿಸಿದವರು ಮತ್ತು ಮಾರ್ಕ್ಸ್‌ವಾದಿ ಸಿದ್ಧಾಂತದ ಬೆಳಕಿನಲ್ಲಿ ಕೊಳೆಗೇರಿಗಳಲ್ಲಿ ವಾಸಮಾಡಿ ಅವರಿಗಾಗಿಯೇ ಅನೇಕ ಬರಹಗಳನ್ನು ಬರೆದವರು. ಆ ಮೂಲಕ ದುಡಿಯುವ ಜನತೆಗೆ ಖುರ್ರತ್ ಹತ್ತಿರವಾದವರು.

ಭಾರತ ಪಾಕಿಸ್ತಾನಗಳ ವಿಭಜನೆಯ ಸಮಯದಲ್ಲಿ ಉಂಟಾದ ತೀವ್ರತರ ಸಂಕಟ - ಯಾತನೆಯ ಮೂಸೆಯಿಂದ ಮೂಡಿಬಂದ ಲೇಖಕಿ ಖುರ್ರತುಲ್ಶೈನ್ ಹೈದರ್. ಕಾದಂಬರಿ ಮತ್ತು ಸಣ್ಣಕಥಾ ಲೋಕದ ಅತ್ಯಂತ ವಿಶಿಷ್ಟ ಬರಹಗಾರ್ತಿ. ಇವರು ೧೯೪೭ರಲ್ಲಿ ಲಕ್ನೋ ವಿಶ್ವವಿದ್ಯಾನಿಲಯದಿಂದ ಎಂ.ಎಂ. ಪದವಿ ಪಡೆದರು. ಲಂಡನ್‌ನಲ್ಲಿ ಮಾನವಿಕಗಳನ್ನು ಅಧ್ಯಯನ ಮಾಡಿದರು. ಭಾರತ ವಿಭಜನೆಯ ನಂತರ ಕೆಲಕಾಲ ಪಾಕಿಸ್ತಾನದಲ್ಲಿ ನೆಲೆಸಿದ್ದು, ನಂತರ ಮತ್ತೆ ಭಾರತಕ್ಕೆ ಬಂದು ಭಾರತದಲ್ಲಿಯೇ ನೆಲೆಸಿದರು. ಲಂಡನ್ನಿನ 'ದಿ ಡೈಲಿ ಟೆಲಿಗ್ರಾಫ್'

---

೧. ಅನಿಕೇತನ- ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ ೬-೧, ೨, ೩, ರಲ್ಲಿ ೧೯೨೮ ಎಂದಿದೆ.

ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ದುಡಿಯುವುದರೊಂದಿಗೆ ಅವರು ಭಾರತದ ಅನೇಕ ಪ್ರತಿಷ್ಠಿತ ಪತ್ರಿಕೆಗಳಲ್ಲಿಯೂ ದುಡಿದರು. ಬಿ.ಬಿ.ಸಿ.ಯು ಚಿತ್ರಿಸಿದ ಉರ್ದು ವಿಭಾಗದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದಲ್ಲದೆ ಯುರೋಪ್, ಆಗ್ನೇಯ, ದೂರಪ್ರಾಚ್ಯ ಮತ್ತು ಪಶ್ಚಿಮ ಏಷ್ಯಾ ಖಂಡಗಳಲ್ಲಿ ಅವರು ವ್ಯಾಪಕ ಪ್ರವಾಸಗಳನ್ನು ಕೈಗೊಂಡಿದ್ದಾರೆ. ಇವರ ಮೊತ್ತಮೊದಲ ಕತೆ ೧೯೩೯ರಲ್ಲಿ ಪ್ರಕಟವಾಯಿತು. ಆಗ ಅವರಿಗೆ ಕೇವಲ ೧೨ ವರ್ಷ. ದೇಶ ವಿಭಜನೆಯ ಕಾಲದ ನೋವು ಸಂಕಟಗಳ ದಾಖಲೆ ಇವರ ಬರಹಗಳಲ್ಲಿ ವಿಪುಲವಾಗಿ ಕಾಣಬರುತ್ತವೆ. ಇವರು ಒಟ್ಟು ೧೨ ಕಾದಂಬರಿಗಳನ್ನು ನಾಲ್ಕು ಸಣ್ಣ ಕಥಾಸಂಕಲನಗಳನ್ನು ಮತ್ತು ಹಲವಾರು ಅನುವಾದ ಕೃತಿಗಳನ್ನು ರಚಿಸಿದ್ದಾರೆ. ಅನೇಕ ಸಾಕ್ಷ್ಯ ಚಿತ್ರಗಳಿಗೆ ಚಿತ್ರಕತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ **ಮಾಲ್ಪಾ** ಸಾಕ್ಷ್ಯಚಿತ್ರಕ್ಕೆ ೧೯೬೩ರ ರಾಷ್ಟ್ರೀಯ ಪ್ರಶಸ್ತಿ ಕೂಡ ದೊರೆಯಿತು.

ದೇಶ ವಿಭಜನೆಯ ಸಂದರ್ಭದ ದಟ್ಟ ಚಿತ್ರಣವನ್ನು ನೀಡುವ ಕಥಾವಸ್ತುವನ್ನೊಳಗೊಂಡ ಅವರ ಕೃತಿ **ಆಗ್ ಕಾ ದರಿಯಾ** (ಬೆಂಕಿಯ ನದಿ, ೧೯೫೯) ಪ್ರಕಟವಾಯಿತು. ಈ ಕಾದಂಬರಿಯ ಸ್ತ್ರೀ-ಪುರುಷ ಪಾತ್ರಗಳೆಲ್ಲವೂ ಚಾರಿತ್ರಿಕ ಸ್ಥಿತ್ಯಂತರ ಮತ್ತು ಅದರಿಂದುಂಟಾದ ತೀವ್ರತರ ಯಾತನೆಗಳಿಗೆ ಮೂಕ ಸಾಕ್ಷಿಯಾಗಿವೆ. ಈ ಕೃತಿಗೆ ಪ್ರಾಮುಖ್ಯತೆ ಬಂದಿರುವುದು ಅವರು ಅನುಭವಿಸುತ್ತಿರುವ ಯಾತನೆಗಳ ಪರಾಕಾಷ್ಠೆಯಿಂದ. ಈ ನೋವನ್ನು ಲೇಖಕಿಯು ಕಾಲಾತೀತವೆಂದು ಭಾವಿಸುತ್ತಾರೆ. ಇವರೂ ಸಹ ಟಾಲ್‌ಸ್ಟಾಯ್‌ರಂತೆ ಇತಿಹಾಸದ ಮಹತ್ತತೆಯನ್ನು ಒಪ್ಪುತ್ತಾರೆ. ಚರಿತ್ರೆ ನಿರ್ಮಿಸುವ ಈ ಭಯಂಕರ ಅಲೆಗಳು ಲೋಕವನ್ನು ಅಲ್ಲೋಲಕಲ್ಲೋಲಗೊಳಿಸುತ್ತವೆ. ಈ ಭಯಂಕರ ಸುನಾಮಿ ಅಲೆಗಳ ವಿರುದ್ಧ ಕೆಲವರು ಈಜಿ ಗೆಲ್ಲುತ್ತಾರೆ. ಕೆಲವರು ಕೊಚ್ಚಿ ಹೋಗುತ್ತಾರೆ. ಭಾರತ ವಿಭಜನೆಯ ನಂತರ ಎರಡು ದಿಕ್ಕಿನಿಂದಲೂ ನದಿಯಂತೆ ಹರಿದು ಬರುತ್ತಿರುವ ಅಸಂಖ್ಯಾತ ಜನರ ಬೇಗುದಿಯ ನೋವಿನ ಬೆಂಕಿಯಿಂದಾಗಿಯೇ ಆ ದೃಶ್ಯವು ಬೆಂಕಿಯ ನದಿಯೇ ಹರಿದು ಬರುತ್ತಿರುವಂತೆ ಲೇಖಕಿಗೆ ಕಾಣುತ್ತದೆ. ಈ **ಆಗ್ ಕಾ ದರಿಯಾ** ಕೃತಿಗೆ ೧೯೮೯ ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

ಅವರು ೧೯೪೯ರಲ್ಲಿ **ಮೇರೇಭಿ ಸಾನೆ ಖಾನೆ** ೧೯೫೨ರಲ್ಲಿ **ಸಫೀನಾ-ಎ-ಗಮೇದಿಲ್** ಕೃತಿಯನ್ನು ಪ್ರಕಟಿಸಿದರು. **ಆಗ್ ಕಾ ದರಿಯಾ** (ಬೆಂಕಿಯ ನದಿ, ೧೯೫೭), **ಆಖಿರಿ-ಎ-ಶಬ್‌ಕೆ ಹಂಸಫರ್** (೧೯೭೭), **ಕಾರೆ ಜಹಾಂ ದ್ರಾಜ ಹೈ** (ಬದುಕಿನ ಸಮಸ್ಯೆ ಬಲದೂರ - ಸಂಪುಟ ೧ (೧೯೭೭), ಸಂಪುಟ ೨ (೧೯೭೯), **ಗರ್ದಿಶೇ ರಂಗೇ ಚಮನ್** (೧೯೮೭)ಗಳನ್ನು ಪ್ರಕಟಿಸಿದರು.

**ದಿಲ್‌ರುಬಾ, ಸೀತಾಹರಣ, ಚಾಯ್ ಕೆ ಬಾಗ್** (ಚಹಾದ ತೋಟ), **ಅಗ್ಲೆ ಜನಮ್ ಮೊಹೆ ಬಿಟಿಯಾ ನೆ ಕಿಜೋ** (ಮುಂದಿನ ಜನ್ಮದಲ್ಲಿ ನನ್ನ ಮಗಳಾಗಿಸಬೇಡ), **ಹೌಸಿಂಗ್ ಸೊಸೈಟಿ** (ಸಣ್ಣಕತೆ) ಮುಂತಾದ ಪುಸ್ತಕಗಳನ್ನು ಬರೆದರು.

**ಫತಝ್ಹಾಡ್ ಕೀ ಆವಾಜ್** (ಉದುರುವ ಎಲೆಗಳ ಶಬ್ದ)[1] ೧೯೬೭ರಲ್ಲಿ ಪ್ರಕಟವಾಯಿತು. ಈ ಸಂಕಲನದಲ್ಲಿ ಒಟ್ಟು ಎಂಟು ಕತೆಗಳಿವೆ. ಇಲ್ಲಿಯ ಕತೆಗಳು ವಾಸ್ತವ ಬದುಕಿನ ಬಹುರೂಪಕತೆ, ವೈವಿಧ್ಯಪೂರ್ಣ ಘಟನಾವಳಿಗಳ ಪ್ರತಿರೂಪವಾಗಿವೆ. ಇಲ್ಲಿನ ಕತೆಗಳು - ಡಾಲನ್‌ವಾಲಾ, ಗಡಿಪಾರಾದವರು, ನೆನಪಿನ ಕಾಮನಬಿಲ್ಲು, ನಿರ್ಲಿಪ್ತ ಕಾರ್‌ಮನ್, ಒಂದು ಸಂವಾದ, ಹೇಮಂತ್ ಋತುವಿನ ಸ್ವರಗಳು, ಮತ್ತು ಹೌಸಿಂಗ್ ಸೊಸೈಟಿ. ಈ ಕತೆಗಳು ಅಂದಿನ ಸಮಾಜದ ಸ್ವರೂಪ, ಸಂಸ್ಕೃತಿ, ಬದಲಾಗುತ್ತಿರುವ ಜೀವನ ಮೌಲ್ಯಗಳನ್ನು ದರ್ಶಿಸುತ್ತವೆ. ಬದಲಾಗುತ್ತಿರುವ ವರ್ತಮಾನ, ಕಣ್ಮರೆಯಾಗುತ್ತಿರುವ ದೃಶ್ಯಾವಳಿಗಳು, ನಿಸರ್ಗ, ಬದುಕಿನ ವಿವಿಧ ರಂಗದ ವೈವಿಧ್ಯಪೂರ್ಣ ಘಟನಾವಳಿಗಳು - ಈ ಎಲ್ಲವೂ ವಾಸ್ತವ ಇತಿಹಾಸದ ವರ್ತುಲದಲ್ಲಿ ಸುತ್ತುವ ಬಹುಮುಖೀ ಸಂಸ್ಕೃತಿಯನ್ನು ಬಿತ್ತರಿಸುತ್ತವೆ.

**ಫತ್ ಝ್ಹಾಡ್ ಕಿ ಆವಾಜ್** ಕಥಾಸಂಕಲನವು ಉರ್ದು ಸಣ್ಣಕತೆಗಳ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು ಸೃಷ್ಟಿಸಿದ ಕೃತಿಯಾಗಿದೆ. ಈ ಕೃತಿಯಲ್ಲಿ, ತಾವೇ ಸೃಷ್ಟಿಸಿಕೊಂಡ ಮೌಲ್ಯಗಳೆಲ್ಲವೂ, ತಮ್ಮ ಕಣ್ಣೆದುರೇ ಮಾಯವಾಗುತ್ತಿರುವುದನ್ನು, ನಾಶವಾಗುತ್ತಿರುವುದನ್ನು ನೋಡಿ ಇಲ್ಲಿಯ ಪಾತ್ರಗಳು ಮರ ಮರ ಮರುಗುತ್ತವೆ. ಸಮಕಾಲೀನ ವಾಸ್ತವದ ಚಿತ್ರಣವಿರುವ ಈ ಕೃತಿಯಲ್ಲಿ ನೈಜ ಚಿತ್ರಣದ ಜೊತೆಗೆ ಶೈಲಿ ನಿರೂಪಣೆಯ ತಾಜಾತನ ಮತ್ತು ಮಾನವೀಯ ಮೌಲ್ಯಗಳ ತಾಕಲಾಟವಿದೆ. ತಮ್ಮ ಅಸ್ತಿತ್ವದ ಮೂಲ ಬೇರುಗಳನ್ನೇ ಬಿರುಗಾಳಿಗೆ ಒಡ್ಡಿರುವ ಅಸಹಾಯಕ ಮಾನವರ ಯಾತನೆಯ ಅಭಿವ್ಯಕ್ತಿಯೇ ಈ ಕೃತಿ. ಈ ಕಥಾ ಸಂಕಲನದ ಪಾತ್ರಗಳೆಲ್ಲವೂ ತಮ್ಮನ್ನು ತೀವ್ರ ಬದಲಾವಣೆಯ ಬದುಕಿಗೆ ಒಡ್ಡಿಕೊಂಡವರೇ ಆಗಿದ್ದಾರೆ. ಅದರಲ್ಲಿ ಧೈರ್ಯಶಾಲಿಗಳು ಮಾತ್ರ ಬದುಕಿನೊಂದಿಗೆ ಹೋರಾಡಿ ಜಯಿಸುತ್ತಾರೆ. ಅಥವಾ ಬದುಕಿನ ಸಂದರ್ಭಗಳಿಗೆ ತಮ್ಮನ್ನು ತಾವು ಒಪ್ಪಿಸಿಕೊಳ್ಳುತ್ತಾರೆ. ಇಲ್ಲಿ ಹರಿದಾಡುವ ಚಿಂತಾಕ್ರಾಂತತೆ, ಯೋಚನಾಲಹರಿಗಳು ವಿಚಾರಪೂರ್ಣವಾಗಿದ್ದರೂ ಸಹ ಅಲ್ಲಲ್ಲಿ ಧಾರ್ಮಿಕ, ರಾಜಕೀಯ ವಿಶ್ಲೇಷಣೆಯ ಜೊತೆಗೆ ಕೆಲವು ಕಡೆ ಅತೀಂದ್ರಿಯ ಘಟನಾವಳಿಗಳೂ ಸೇರಿಕೊಂಡಿವೆ.

ಸ್ತ್ರೀವಾದವೊಂದು ತತ್ವರೂಪ ಪಡೆಯದೇ ಇರುವಂತಹ ಕಾಲದಲ್ಲಿ ಇವರು ಒಬ್ಬ ಕ್ರಾಂತಿಕಾರಿ ಸ್ತ್ರೀವಾದಿಯಾಗಿ ಬರೆದರು. ಡಾಲನ್‌ವಾಲಾ ಕತೆಯಲ್ಲಿ ಇದು ವ್ಯಕ್ತವಾಗುತ್ತದೆ. ಈ ಕಥೆಯ ಫಾರೂಖಿ ಬೇಗಂ ಶ್ರೀಮತಿ ಜಸವಂತ್ ಸಿಂಗ್ ಮುಂದೆ ಹೀಗೆ ಹೇಳುತ್ತಾಳೆ - "ನಾವು ಮುಸಲ್ಮಾನರು. ನಮ್ಮಲ್ಲಿ ಹಾಡುವುದು, ಬಾರಿಸೋದು ಒಳ್ಳೆಯದಲ್ಲ ಎಂದು ತಿಳಿಯಲಾಗುತ್ತದೆ. ಆದರೆ ಈಗಿನ ಕಾಲವೇ ಬೇರೆಯಾಗಿದೆ. ನಾನಂತೂ ಅವರಿಗೆ ಹೇಳಿದ್ದೇನೆ. ನನ್ನ ಹಮೀದಾಳಿಗೆ ಹಾರ್ಮೋನಿಯಂ ಅವಶ್ಯ ಕಲಿಸುವೆ" ಎಂದು ಸ್ಥಾಪಿತ ಇಸ್ಲಾಂ

೧. ಈ ಕೃತಿಯು ೧೯೬೭ರಲ್ಲಿ ಭಾರತದಲ್ಲಿ ಬಿಡುಗಡೆಯಾದರೆ, ೧೯೭೭ರಲ್ಲಿ ಪಾಕಿಸ್ತಾನದಲ್ಲಿ ಬಿಡುಗಡೆಯಾಯಿತು. ಈ ಕೃತಿಯನ್ನು ಪಂಚಾಕ್ಷರಿ ಹಿರೇಮಠ 'ಹೇಮಂತ್ ಋತುವಿನ ಸ್ವರಗಳು' ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಅನುವಾದಿತ ಕೃತಿಗೆ (೨೦೦೬) ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಬಂದಿದೆ.

ಸಮುದಾಯದಲ್ಲಿನ ನಿರ್ಬಂಧಗಳನ್ನು ಮುರಿಯಲು ಪ್ರಯತ್ನಿಸುತ್ತಾರೆ. ಈ ಕತೆಯಲ್ಲಿ "ಈ ಗುಡ್ಡಗಾಡಿನ ಜನರಲ್ಲಿ ಅದೆಂತಹ ಪದ್ಧತಿಯೇ - ಒಂದು ಹೆಣ್ಣಿಗೆ ಮೂವರು ಗಂಡಂದಿರು" ಎಂದು ಜಲಧರಾಳ ಬಗ್ಗೆ ಮಾತನಾಡಿಕೊಳ್ಳುತ್ತಾರೆ. ಜಲಧರಾಳ ಇಬ್ಬರು ಪತಿಯರು ಮೃತರಾದ ನಂತರ ಮೂರನೇ ಗಂಡನನ್ನು ಮದುವೆಯಾಗಿದ್ದಳು. ಸರ್ಕಸ್ಸಿನ ಹೆಣ್ಣು ಸಾಲಿನ ಬಾಪಿಯಲ್ಲಿ ನಿರ್ಭಯವಾಗಿ ಸರ್ಕಸ್ಸಾಡುವ ಜೊಹಲಾ ಡರ್ಬಿ ನಿರ್ದಯವಾಗಿ ಸಿಗರೇಟು ಸೇದುವ ಹೆಂಗಸು. ಮುಸ್ಲಿಮೇತರನಾದ ಡಾ|| ಉಪ್ಪಲ್‌ನೊಂದಿಗೆ ಜುಬೇದಾ ಅಂತರ್ ಜಾತಿಯ ವಿವಾಹವಾಗುವುದರೊಂದಿಗೆ ಅತ್ಯಂತ ಕ್ರಾಂತಿಕಾರಿ ಹೆಜ್ಜೆಯನ್ನಿಡುತ್ತಾಳೆ. ಈ ರೀತಿ ಖುರ‍್ರತುಲ್ಐನ್ ಹೈದರ್ ಹೊಸ ಮೌಲ್ಯಗಳ ಹೊಸ ಮಾದರಿಗಳ, ಕ್ರಾಂತಿಕಾರಿ ಬದಲಾವಣೆಗೆ ನಾಂದಿ ಹಾಕಿದರು.

ಫತ್ ಝೂಡಕಿ ಆವಾಜ್ ಸಂಕಲನದ **ಹೌಸಿಂಗ್ ಸೊಸೈಟಿ** ಕತೆಯಲ್ಲಿ ಟೀಚರ್ ಆಗಿರುವ ಬಸಂತಿ ಬೇಗಂ ಈ ರೀತಿ ಹೇಳುತ್ತಾಳೆ - "ನವಾಬ್ ಭೂರೆಯ ಸಿಪಾಯಿಗಳು ಎತ್ತಿಕೊಂಡು ಹೋದ ಆ ಬಸಂತಿ ಬೇಗಂ ನಾನಲ್ಲ. ಈಗ ಇನ್ನೊಂದು ಮಾತೆಂದರೆ ನಾನೀಗ ಒಬ್ಬಂಟಿಯಾಗಿಲ್ಲ. ದೇಶದ ಸಮಸ್ತ ಜನತೆ...." ಎಂದು ತಾಯಿ ಬೂಟಾಬೇಗಂರಿಗೆ ಹೇಳುತ್ತಾಳೆ. ಬಸಂತಿ ಬೇಗಂ ಆಗಿನ ಕಾಲದಲ್ಲಿ ನಡೆಯುತ್ತಿದ್ದ ಕೈಗಾರಿಕಾ ಕ್ರಾಂತಿಯ ಕಾರಣದಿಂದ ದುಡಿಯುವ ಜನತೆ ಸಂಘಟಿತರಾಗುತ್ತಿರುವುದರ ಸಂಕೇತವಾಗಿದ್ದಾಳೆ.

ಖುರ‍್ರತುಲ್ಐನ್ ಹೈದರ್‌ರವರು ಸ್ವಾತಂತ್ರ್ಯಪೂರ್ವದ ಉರ್ದು ಶಾಲೆಗಳ ಪರಿಸ್ಥಿತಿ, ಸಾಂಸ್ಕೃತಿಕ ವಾತಾವರಣವನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. **'ಗಡಿ ಪಾರಾದವರು'** - ಕತೆಯಲ್ಲಿ ಅಂಜುಮನ್ ಇಸ್ಲಾಂ ಗರ್ಲ್ಸ್ ಹೈಸ್ಕೂಲಿನಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ವೈಭವ ಸಾಧ್ಯವಿಲ್ಲ. ಪೈಗಂಬರರ ಹುಟ್ಟು ಮತ್ತು ಅಂತ್ಯದ ಬಗ್ಗೆ ಮಿಲಾದ್ ಷರೀಫ್ ನಡೆಯುತ್ತಿತ್ತು. 'ಯಾ ನಬೀ ಸಲಾಮಲೈಕಾ' ಎಂದು ಹೇಳಿ ಬೇಸೂರನಲ್ಲಿ ಹಾಡಿದರಾಯ್ತು. ಓರ್ವ ಸುಧಾರಿತ ಹೆಡ್‌ಮಿಸ್ಟ್ರೆಸ್ ಲಕ್ನೋದಿಂದ ಬಂದಿದ್ದಳು. ಹುಡುಗಿಯರಿಂದ ಒಂದು ನಾಟಕ ಆಡಿಸಿದ್ದಕ್ಕೆ 'ಮಿಲ್ಲತೇ ಇಸ್ಲಾಮಿಯಾ ಕೀ ಸೈರತ್ ಕಾ ಜನಾಜಾ ಗರ್ಲ್ಸ್ ಹೈಸ್ಕೂಲ್ ಕೇ ಸ್ಟೇಜ್ ಪರ ನಿಕಲಾ ಗಯಾ' ಮುಂದುವರೆದು 'ಮುಸಲ್ಮಾನೋ ತುಮ್ಹೆ ಖುದಾ ಕೆ ಆಗೆ ಭೀ ಜವಾಬ್ ದೇನಾ ಹೋಗಾ... ಮುಸಲ್ಮಾನ್ ಔರತೋಂ ಕೋ ನಾಚ ಗಾನೇ ಕಿ ಶಿಕ್ಷಾ ಇಸ್ಕೂಲ ಕೋ ಬಂದ್ ಕರೋ" (ಗಡಿಪಾರಾದವರು, ಪು. ೩೩) ಎಂದು ಜನ ಪ್ರತಿಭಟಿಸಿದರು.

ಬಳೆಗಳನ್ನು ಹಾಕಿಕೊಳ್ಳುವುದು ಮುತ್ತೈದೆಯರ ಸಂಕೇತ. ಬಳೆ ಧರಿಸದ ಕಮಲ ಕುಮಾರಿಗೆ 'ಇದೇನು ಮುತ್ತೈದೆತನದ ಬಳೆಗಳನ್ನೇ ಫ್ಯಾಷನ್ನಿಗಾಗಿ ಬಲಿ ಕೊಟ್ಟಿರುವೆಯಲ್ಲ' ಎಂದು ಬೇಗಂ ಕಾಜ್ಮಿ ಹೇಳುತ್ತಾಳೆ. ಡಾ|| ಅಫ್ತಾಬ ರಾಯ್ ಸಾರ್ವಜನಿಕ ಭಾಷಣದಲ್ಲಿ - "ಶುದ್ಧ ಹಿಂದಿ, ಗೋರಕ್ಷಾ, ರಾಮರಾಜ್ಯ... ಇವೆಲ್ಲಾ ತುಂಬ ಭಯಾನಕವಾಗಿವೆ. ಈ ಅಪಾಯದಿಂದ ನೀವು ನಿಮ್ಮನ್ನು ರಕ್ಷಿಸಿಕೊಳ್ಳಿ" ಎಂದು ಹೇಳುತ್ತಾನೆ. ಈ ಕತೆಯಲ್ಲಿ ಲೇಖಕಿ ಬಹುಸೂಕ್ಷ್ಮವಾಗಿ ಹಿಂದೂ ಕೋಮುವಾದ ಮತ್ತು ಇಸ್ಲಾಂ ಮೂಲಭೂತವಾದಗಳು ಆಗಿನ ಕಾಲದಲ್ಲಿ ಜಾರಿಯಲ್ಲಿರುವ ಸ್ಥಿತಿಯನ್ನು ಪಾತ್ರಗಳ ಮೂಲಕ ದಾಖಲಿಸಿದ್ದಾರೆ.

ಮುಸ್ಲಿಂ ಸ್ಟುಡೆಂಟ್ ಫೆಡರೇಶನ್, ಹಿಂದೂ ಸ್ಟುಡೆಂಟ್ ಫೆಡರೇಶನ್ ರಾಜಕೀಯ, ಭವಿಷ್ಯದ ಚಿಂತೆ, ವಿಭಜನೆಗಳು - ಜನಮನವನ್ನು ಪೀಡಿಸಿರುವುದು ಅಲ್ಲದೇ ಶಾಲಾ ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಡಿಮೆ, ಹಿಂದೂ ವಿದ್ಯಾರ್ಥಿಗಳಿಗೆ ಹೆಚ್ಚು ನೀಡಿ ವಂಚಿಸುತ್ತಿದ್ದುದು, ವಿದ್ಯಾರ್ಥಿ ಹಾಸ್ಟೆಲುಗಳಲ್ಲಿ ಹಸಿರು ಧ್ವಜ ಹಾರಿಸುವುದು, ಶಿವಾಜಿ ಬಗ್ಗೆ ಚರ್ಚೆ ನಡೆದರೆ ಸಾಕು - ಜಾತಿ ಜಗಳವೆಂದು ಹುಯಿಲೆಬ್ಬಿಸುವುದು - ತೀರಾ ಸಾಮಾನ್ಯವಾಗಿ ಆಗ ಘಟಿಸುತ್ತಿದ್ದವು. ಇಂತಹ ದೊಂಬಿ ಗಲಭೆಗಳನ್ನು ನಾವು ಇಂದಿನವರೆಗೂ ಸಮಾಜದಲ್ಲಿ ಕಾಣುತ್ತಿದ್ದೇವೆ. **ಖುರ್ರತುಲೈನ್ ಹೈದರವರ ಆಯ್ದ ಕತೆಗಳು**[೬], ಸಂಕಲನದ ನಿರ್ಲಿಪ್ತ ಕತೆಯಲ್ಲಿ ನೌಕರಿಗೆ ಅಲೆದು ಸೋತ ಅಚ್ಚಮ್ಮ ಕೊಸೋಕುಟ್ಟಿಯಲ್ಲಿದ್ದಾಳೆ. ಲ್ಯಾಂಡ್ ಲೇಡಿ ಮಿಸೆಸ್ ವಿಂಗ್ ಫೀಲ್ಡ್ "ನಿನ್ನಲ್ಲಿ ಒಳ್ಳೊಳ್ಳೆ ಜಂಟಲ್‌ಮನ್ ಗೆಳೆಯರು ಬರುತ್ತಿರುತ್ತಾರೆ. ಅವರಲ್ಲಿ ಯಾರಿಗಾದರೂ ನನ್ನೊಂದಿಗೆ ಮದುವೆ ಮಾಡಿಸು" ಎಂದು ಕೇಳುತ್ತಾಳೆ. ಬದುಕಿನಲ್ಲಿ ನೊಂದ ಮಹಿಳೆ ಅಚ್ಚಮ್ಮ ಗಂಡನನ್ನು ಕಳೆದುಕೊಂಡು ಕುಡಿತದಲ್ಲಿ ಮುಳುಗುವ ಫ್ಲಾಟ್‌ನ ಯಜಮಾನಿ ಮಿಸೆಸ್ ವಿಂಗ್‌ಫೀಲ್ಡ್ ಹಾಗೂ ಬದುಕಿನಿಂದ ಬೇಸತ್ತು ಆತ್ಮಹತ್ಯೆಗೆ ಪ್ರಯತ್ನಿಸುವ ಕಲಾವಿದೆ ಎಡ್ವಿನಾ, ಎಲ್ಲರೂ ನೊಂದ ಮಹಿಳೆಯರು. ಸ್ತ್ರೀವಾದಿ ಖುರ್ರತ್‌ರವರ ಹೆಂಗರುಳು ಎಲ್ಲಾ ಪಾತ್ರಗಳನ್ನು ವಾಸ್ತವದ ನೆಲೆಯಲ್ಲಿ ದಿಟ್ಟವಾಗಿ ಸ್ತ್ರೀಪರವಾಗಿ ಚಿತ್ರಿಸುತ್ತವೆ.

ಅವರ ಇನ್ನೊಂದು ಕತೆ **ಪುನರ್ಜನ್ಮವಾದಲ್ಲಿ ಹೆಣ್ಣಾಗಿಸಬೇಡ** ಇದರಲ್ಲಿ ಜಮೀಲನ್ ಬಾನು ಹುಟ್ಟುತ್ತಲೇ ತಾಯಿಯನ್ನು ಕಳೆದುಕೊಂಡವಳು. ಅತ್ಯಂತ ಬಡತನಕ್ಕೆ ಬೇಸತ್ತು ಗುಳೆ ಹೊರಟಳು. ಚಿಕ್ಕಮ್ಮನೊಂದಿಗೆ ರೈಲ್ವೆ ಫ್ಲಾಟ್ ಫಾರ್ಮ್‌ನಲ್ಲಿ ಕುಳಿತಿದ್ದಾಗ, ತಿನ್ನಲು ಹಣವಿಲ್ಲದೆ ಇದ್ದಾಗ, ತಂದಿದ್ದ ಡೋಲಕ್ ಅನ್ನು ಮುಂದೆ ಮಾಡಿದಳು. ಬಿಜಿಯಾ ಹಾಡುತ್ತಾ ಕುಣಿದಿದ್ದರಿಂದ ಸ್ವಲ್ಪ ಹಣ ಸಂಗ್ರಹವಾಯಿತು, ಅಂದಿನ ಹಸಿವು ನೀಗಿತು. 'ಮನುಷ್ಯ ಹೊಟ್ಟೆ ಪಾಡಿಗಾಗಿ ಏನೆಲ್ಲಾ ಮಾಡುತ್ತಾನಲ್ಲವೇ? ಬಿಜಿಯಾ ಎರಡು ವರ್ಷದ ಮಗುವಾಗಿದ್ದಾಗಲೇ ಜಮೀಲನ ಚಿಕ್ಕಮ್ಮ ತನ್ನ ೧೭ನೇ ವಯಸ್ಸಿನ ತಾರುಣ್ಯದಲ್ಲಿಯೇ ವಿಧವೆಯಾದಳು. ಬಿಜಿಯಾಳಿಗೆ ಡೋಲಕ್ ಹಾಡುಗಳಲ್ಲಿ ಆಸಕ್ತಿಯಿದ್ದುದರಿಂದ ಅವಳಿಗೊಂದು ಡೋಲಕ್ ತರಿಸಿಕೊಟ್ಟಳು. ಉಪವಾಸ ಇದ್ದಾಗ ಡೋಲಕ್ ಊಟ ಹಾಕಿತ್ತು. ಕೆಲವು ದಿನ ಆಶ್ರಯವೇ ಇಲ್ಲದಿದ್ದಾಗ ರೇಲ್ವೆ ಸ್ಟೇಶನ್ ಆಶ್ರಯ ತಾಣವಾಗಿತ್ತು. ನಂತರ ಕ್ರಿಶ್ಚಿಯನ್ ಮಿಷನರಿಗಳು ಬಿಜಿಯಾಗೆ ಹೊಟ್ಟೆತುಂಬಾ ಅನ್ನ ಕೊಟ್ಟರು. ಇಂಗ್ಲಿಷ್ ಓದಿಸಿದರು. ಉಣ್ಣೆಯ ಬಟ್ಟೆ ಹೆಣೆಯುವುದನ್ನು ಕಲಿಸಿದರು. ಬಿಜಿಯಾಳ ಚಿಕ್ಕಮ್ಮ ಬದುಕಿಗೆ ಬೇರೆ ದಾರಿಯಿಲ್ಲದೆ ಜಮನ್ ಖಾನ್‌ನೊಂದಿಗೆ ನಿಕಾಹ್ ಮಾಡಿಕೊಡುತ್ತಾಳೆ. ಈ ಕತೆಯಲ್ಲಿಯೂ ಪಂಜಾಬದ ಭೂಮಿಯಲ್ಲಿ ದೇಶ ಇಬ್ಭಾಗವಾದಾಗ ವಲಸಿಗರನ್ನು ಇರಿಸುವ ಸ್ಥಾನವೊಂದನ್ನು ಮಾಡಲಾಗಿತ್ತು. ಮುಂದೆ ಜಮಲೀನ್ ಜಲಬಾಲಾ ಆಗಿ ಮತಾಂತರಗೊಳ್ಳುತ್ತಾಳೆ.

೬. ಈ ಕಥಾಸಂಕಲನವನ್ನು ಪಂಚಾಕ್ಷರಿ ಹಿರೇಮಠರವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದರಲ್ಲಿ ೧೨ ಕತೆಗಳಿವೆ. ೨೦೬ ಪುಟಗಳ ಈ ಪುಸ್ತಕವನ್ನು ನ್ಯಾಷನಲ್ ಬುಕ್ ಟ್ರಸ್ಟ್‌ನವರು ಪ್ರಕಟಿಸಿದ್ದಾರೆ.

"ಹೇ ಪ್ರಭು ನಾನು ನಿನ್ನಲ್ಲಿ ಬೇಡಿಕೊಳ್ಳುವೆ
ಮತ್ತೆ ಮತ್ತೆ ನಿನ್ನ ಪದತಲದಲ್ಲಿ ನತಮಸ್ತಕಳಾಗುವೆ!
ಪುನರ್ಜನ್ಮವಾದಲ್ಲಿ ಹೆಣ್ಣಾಗಿಸಬೇಡ
ಬೇಕಾದರೆ ನರಕ ದಯಪಾಲಿಸು"

ಎಂದು ಮನ ಕರಗುವಂತೆ ಜಲಬಾಲಾ ಹಾಡುತ್ತಿದ್ದಳು.

ನಮ್ಮ ಸಮಾಜದಲ್ಲಿ ಹೆಂಗಸರ ಬದುಕು ಟ್ರಾಜಿಕ್ ಆಗಿಯೇ ಇದೆ ಎನ್ನುವ ವರ್ಮಾಸಾಹೇಬ, ನಿಷ್ಠೆಯಿಂದ ಸೇವೆ ಮಾಡಿದ ಸಧಫ್‌ಳನ್ನು ಹಳೆಯ ಚಪ್ಪಲಿಯಂತೆ ಎಸೆದಿರುತ್ತಾನೆ. ನಂತರ ವಿದೇಶಿಯಾದ ಥಾಮಸನ್ ಸ್ಯಾಡಿ ಅವಳನ್ನು ಮದುವೆಯಾಗುತ್ತಾನೆ. ಈ ಮಧ್ಯೆ ಜಮೀಲಳು ಹೊಟ್ಟೆಪಾಡಿಗೆ ಬಿಜಿಯಾಳನ್ನು ವಿದೇಶಕ್ಕೆ ಕಳಿಸಿದಳು. ೧೯೭೧ರಲ್ಲಿ ಇಂಡಿಯಾ-ಪಾಕ್ ಯುದ್ಧದ ಕಾರಣ ಇವರ ಮಧ್ಯೆ ಪತ್ರಗಳಿಲ್ಲದಾಯಿತು. ಸಾಯುವವರೆಗೂ ಎರಡು ಕಾಲು ಕಳೆದುಕೊಂಡಿದ್ದರೂ ಕಸೂತಿ ಹಾಕಿ ಹೊಟ್ಟೆ ತುಂಬಿಸಿಕೊಂಡ ಜಮೀಲನ್‌ಳ ಪರದಾಟ ಯಾವ ಶತ್ರುವಿಗೂ ಬೇಡ. ಬೇಕಾದರೆ ನರಕ ದಯಪಾಲಿಸು, ಹೆಣ್ಣಾಗಿ ಮಾತ್ರ ಹುಟ್ಟಿಸಬೇಡ ಎನ್ನುತ್ತಾಳೆ ಜಮಲೀನ್.

ಖುರ್ರತುಲೈನ್ ಹೈದರ್‌ರವರ ಮತ್ತೊಂದು ಕಥೆ ನೆನಪಿನ ಕಾಮನ ಬಿಲ್ಲು ವಿನಲ್ಲಿ ಮಂದಿರ, ದರ್ಗಾ, ಚರ್ಚ್, ಗುರುದ್ವಾರಗಳಲ್ಲಿ, ಎಲ್ಲ ಕಡೆಯೂ ಹೆಣ್ಣು ಮಕ್ಕಳೇ ತುಂಬಿದ್ದಾರಲ್ಲ ಏಕೆ? ಸಮಸ್ತ ವಿಶ್ವದ ಉಪಾಸನಾ ಗೃಹಗಳಲ್ಲಿನ ಶೀತಲ ನಿರ್ಜೀವ ಕಲ್ಲುಗಳು ಹೆಣ್ಣುಮಕ್ಕಳ ಕಣ್ಣೀರಿನಿಂದ ತೊಯ್ಯುತ್ತಿರುವುದೇಕೆ? ಹೆಣ್ಣು ಮಕ್ಕಳಿಗೆ ದೇವರು ಇಷ್ಟೊಂದು ಅವಶ್ಯಕವಾಗಿರುವುದೇಕೆ? ಇಷ್ಟೊಂದು ಉಪಾಸನೆಯೇಕೆ? ಅವಳು ದುರ್ಬಲಳೇ? ಸಹಾಯದ ಅವಶ್ಯಕತೆ ಇದೆಯೇ? ಮುಂಬೈ ಸಮುದ್ರ ದಂಡೆಯ ಮಕದೂಮ್ ಷಾಹ ಬಾಬಾ ಅವರ ಸಮಾಧಿಯ ಬಳಿ ದೊಡ್ಡ ಪ್ರಮಾಣದಲ್ಲಾಗುವ ಉರೂಸಿಗೆ ಮತ್ತು ಪ್ರತಿ ಬುಧವಾರ, ಗುರುವಾರಗಳಂದು ಬುರ್ಖಾ ಹಾಕಿಕೊಂಡು ಹಿಂಡು ಹಿಂಡಾಗಿ ಬರುವ ಮಹಿಳೆಯರು, ಹಾಜಿ ಅಲಿ ದರ್ಗಾಕ್ಕೆ ಭೇಟಿ ನೀಡಿ ಮನ ಹಗುರ ಮಾಡಿಕೊಳ್ಳಲು ಮಹಿಳೆಗೆ ಆಶ್ರಯ ನೀಡಿರುವ ದರ್ಗಾಗಳ ಬಗ್ಗೆ ಖುರ್ರತ್‌ರವರು ಬಹಳ ವಾಸ್ತವವಾಗಿ ಚಿತ್ರಿಸಿದ್ದಾರೆ.

ಆದಿಯಿಂದ ಅಂತ್ಯದವರೆಗೂ
ಅವಳು ವಿಶ್ವಾಸಿನಿ
ಮಧುರ ಭಾಷಿಣಿ
ಎಲ್ಲ ಕಾಲಗಳಲ್ಲೂ

ಎಂದು ಹೆಣ್ಣಿನ ಬಗ್ಗೆ ಇರುವ ತಮ್ಮ ಭಾವವನ್ನು ಈ ಕತೆಯಲ್ಲಿ ವಿವರಿಸಿದ್ದಾರೆ.

ಇವರು ಉರ್ದು ಸಾಹಿತ್ಯಕ್ಕೆ ನೀಡಿದ ಅಸಾಧಾರಣ ಕೊಡುಗೆಯನ್ನು ಪರಿಗಣಿಸಿ ಭಾರತ ಸರ್ಕಾರವು ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿತು. ಅವರು ಉರ್ದು ಸಾಹಿತ್ಯದ

ಸಾಂಪ್ರದಾಯಿಕ ಚೌಕಟ್ಟನ್ನು ಹಿಗ್ಗಿಸಿ. ಅದಕ್ಕೆ ಆಧುನಿಕ ಸಾಹಿತ್ಯದ ಮೆರುಗು ನೀಡಿದ ಮೇರು ಮಹಿಳೆ. ಇವರ ಮೊತ್ತ ಮೊದಲ ಕಥಾ ಸಂಕಲನ ೧೯೪೭ರಲ್ಲಿ ಸಿತಾರೊಂ ಸೆ ಆಗೆ ಪ್ರಕಟವಾಗಿ ಆಧುನಿಕ ಕಥಾ ಪ್ರಕಾರಕ್ಕೆ ನಾಂದಿ ಹಾಡಿತು.

೧೯೬೭ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೬೯ರಲ್ಲಿ ಸೋವಿಯತ್ ಲ್ಯಾಂಡ್, ನೆಹರು ಪ್ರಶಸ್ತಿ, ೧೯೮೯ ಜ್ಞಾನಪೀಠ ಪ್ರಶಸ್ತಿಯನ್ನು ಇವರು ಪಡೆದರು. ಇವಲ್ಲದೇ ೧೯೮೫ರಲ್ಲಿ ಗಾಲಿಬ್ ಅವಾರ್ಡ್ ದೊರಕಿತು.

ಖುರ್ರತುಲೈನ್ ಹೈದರ್ ಅವರ ಒಟ್ಟು ಕಾದಂಬರಿ ಹನ್ನೆರಡು. ಅವರು ಅತಿಥಿ ಉಪನ್ಯಾಸಕರಾಗಿ ಕ್ಯಾಲಿಫೋರ್ನಿಯಾ;ಚಿಕಾಗೋ, ವಿಸ್ಕಾನ್‌ಸಿನ್ ಮತ್ತು ಎರಿಝೋನಾಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಖುರ್ರತುಲೈನ್ ಹೈದರ್ ಅವರದು ಕೇವಲ ಉರ್ದು ಸಾಹಿತ್ಯ ಮಾತ್ರವಲ್ಲ, ಭಾರತೀಯ ಸಾಹಿತ್ಯದಲ್ಲಿ ಒಂದು ಮಹತ್ವದ ಹೆಸರಾಗಿದೆ. ಅದ್ಭುತ ಪ್ರತಿಭೆ, ಅಗಾಧ ಜೀವನಾನುಭವವುಳ್ಳ ಇವರು ನೀಡಿರುವ ಕೃತಿಗಳು ಅಮೂಲ್ಯ. ಜಿಡ್ಡುಗಟ್ಟಿದ ಉರ್ದುಸಾಹಿತ್ಯದ ಹರಿವಿಗೆ ತಮ್ಮ ಬೌದ್ಧಿಕ ಹಾಗೂ ಉನ್ನತ ಜೀವನಾನುಭವಗಳಿಂದ ಹೊಸ ಮೆರಗು ನೀಡಿದ್ದಾರೆ. ಇವರು ಭಾರತದ 'ವರ್ಜೀನಿಯಾವೂಲ್ಫ' ಎಂದು ಕರೆಯಿಸಿಕೊಂಡ ಲೇಖಕಿಯಾಗಿದ್ದಾರೆ.

### ಖುರ್ರತುಲೈನ್ ಹೈದರ್ ಅವರ ಕೃತಿಗಳು

| | |
|---|---|
| **ಸಣ್ಣಕತೆ:** | ನೀರಾ, ದೋಹಾಥ್(೧೯೬೬), ಇಸ್ರತ್, ಆಪಾಕೆ ಸೌ ಅಫಸಾನೆ, ಶಹನಿಯಾ ಪ್ರಥಮ ಸಂಪುಟ, ೧೯೭೫, ಕಥೆಗಳು ದ್ವಿತೀಯ ಸಂಪುಟ, ೧೯೮೫. |
| **ನಾಟಕ** | ಇಂತೆಕಾಬ್, ಹಸ್ತಿ ಹಸ್ತಿ ದೋಜಕ್, 'ರೇಡಿಯೋ ನಾಟಕಗಳು' (೧೯೫೫) |
| **ಪ್ರವಾಸ ಕಥನ:** | ಬೊಂಬೆ ಸೇ ಭೂಪಾಲ ತಕ್(೧೯೪೯) |
| **ಕಾದಂಬರಿ:** | ಜಿದ್ದಿ (೧೯೬೯), ತೇಡಿ ಲಕೀರೇ(೧೯೪೫), ಏಕಬಾತ್(೧೯೫೨), ಮಾಸಾಮಾ(೧೯೭೧),ದಿಲ್ ಕಿ ದುನಿಯಾ(೧೯೬೨), ಸೌದಾಯಿ (೧೯೬೬), ಜಂಗ್ಲಿ ಕಬೂತರ್(೧೯೭೧), ಏಕ್ ಖತ್ರಾ ಖೂನ್ ಕಾ(೧೯೭೮), ಇನಸಾನ್ ಔರ ಷರಿಫ್ತಾ, ಅಜೀಬ್ ಆದಮಿ |
| **ಆತ್ಮಕಥನ** | ಕಾಗಜೀ ಹೈ ಪೈರಹನ್(೧೯೮೧) |
| **ಸಿನಿಮಾ ಕತೆ** | ಆರಜೂ(೧೯೫೦), ಬುರಖಾದಿಲ್(೧೯೫೧), ಶೀಶಾ(೧೯೫೨), ಗರಂಹವಾ, ಸೋನೆ ಕಿ ಚಿಡಿಯಾ, ಜೂನೂನ್ |
| **ಪ್ರಶಸ್ತಿಗಳು:** | ಪದ್ಮಶ್ರೀ - ೧೯೭೬<br>ಗಾಲಿಬ್ ಅವಾರ್ಡ್ - ೧೯೭೭<br>ಇಕ್ಬಾಲ್ ಸಮ್ಮಾನ್- ೧೯೮೯<br>ಮಕ್ದುಮ್ ಸಾಹಿತ್ಯ ಅವಾರ್ಡ್ - ೧೯೭೮<br>ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ - ೧೯೮೨ |

◆

# ಸಾರಾ ಜೋಸೆಫ್

✍ ಸ. ಉಷಾ

ಆ ಮಹಿಳೆ ಕೃಶಕಾಯರು, ವಯಸ್ಸು - ಅರವತ್ತು ಮೀರಿದೆ, ಕೆಂಬಣ್ಣದ ಸುಂದರಿ. ಸ್ಥಳ ದೆಹಲಿ. ಅವರೊಂದು ರಾಷ್ಟ್ರೀಯ ವೇದಿಕೆಯ ಮೇಲೆ ಭಾಷಣ ಮಾಡುತ್ತಿದ್ದಾರೆ. ಅವರಿಗೆ ಕುಡಿಯಲು ಒಳ್ಳೆಯ ನೀರು ಸಿಕ್ಕಿಲ್ಲ. ಕಲುಷಿತ ನೀರನ್ನು ಕುಡಿದು ಅವರ ಆರೋಗ್ಯ ಕೆಟ್ಟಿದೆ, ದನಿ ಕ್ಷೀಣವಾಗಿದೆ. ಮಾತಾಡುತ್ತಲೇ ಪ್ರೊಫೆಸರ್ ಸಾರಾ ಜೋಸೆಫ್ - ಮಲೆಯಾಳ ಮಹಿಳಾ ಸಾಹಿತ್ಯಾಸಕ್ತರಿಗೆ ಸಾರಾ ಮೇಡಂ, ಸಾರಾ ಚೇಚಿ - ತನ್ನೂರಾದ ಕುರಿಯ ಚೇರಾದ ತಂಪಾದ ಬಾವಿಯ ಸಿಹಿನೀರನ್ನು ನೆನಪು ಮಾಡಿಕೊಳ್ಳುತ್ತಾರೆ. ಅವರ ವೃದ್ಧಾಪ್ಯ, ಅಶಕ್ತತೆ, ಅಸ್ವಸ್ಥತೆಗಳನ್ನು ಮರೆತು ಅವರು ಮಾತಾಡತೊಡಗಿದರು. ಅವರ ಕಣ್ಣಿನಲ್ಲಿ ಹೋರಾಟದ ಬೆಳಕು ಮಿಂಚತೊಡಗಿತು, ಅವರ ದನಿ ಕಾವೇರಿತು, ತೆಳುವಾದ ಹರಿತವಾದ, ಶ್ರೇಷ್ಠವಾದ ಉಕ್ಕಿನಿಂದ ಮಾಡಿದ ಖಡ್ಗ ಧಾರೆಯ ಹಾಗೆ ಅವರ ವಿಚಾರಗಳು ಹರಿದವು.

"ಸರ್ಕಾರ ಬಹುರಾಷ್ಟ್ರೀಯ ಕಂಪನಿಗೆ ತನ್ನ ನದಿಗಳನ್ನು ಮಾರಿಕೊಳ್ಳುತ್ತಿದೆ. ತನ್ನೂರಿನ ಜಲಸಂಪನ್ಮೂಲಗಳನ್ನು ಬಹುರಾಷ್ಟ್ರೀಯ ಕಂಪನಿಗಳು ತೋಡಿದ ಕೊಳವೆ ಬಾವಿಗಳು ಖಾಲಿ ಮಾಡುತ್ತಿವೆ. ನಗರಗಳು ಬೆಳೆಯುತ್ತಿವೆ. ನಗರ ಹೊರವಲಯಗಳಲ್ಲಿ ಅನೇಕ ವರ್ಷಗಳಿಂದ ವಾಸವಾಗಿದ್ದ ದುರ್ಬಲರನ್ನು ಬಡವರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಅವರು ಅವರ ನೆಲದಲ್ಲೇ ಅತಂತ್ರರಾಗುತ್ತಿದ್ದಾರೆ."

ನಿರಂತರ ಹೋರಾಟಗಾರ್ತಿ ಪ್ರೊಫೆಸರ್ ಸಾರಾ ಜೋಸೆಫ್‌ರವರ ಕಾಳಜಿಗಳು. ಅನೇಕ ಅವು ಅನೇಕ ಕಾಳಜಿಗಳೆಂಬಂತೆ ಮೇಲು ನೋಟಕ್ಕೆ ತೋರಿದರೂ ಅಂತರಂಗದಲ್ಲಿ ಅದು ಒಂದೇ ಕಾಳಜಿ - ನಿರಂತರ ಹೋರಾಟ - ಇಡಿಯಾಗಿ ಮನುಕುಲದ ಹಿತಕ್ಕಾಗಿ.

ಮಹಿಳಾ ಸಂಬಂಧಿ ಸಮಸ್ಯೆಗಳಿಂದ ಹಿಡಿದು ಪರಿಸರ ಸಂಬಂಧಿ ಸಮಸ್ಯೆಯವರೆಗೆ, ಕಳೆದು ಹೋಗುತ್ತಿರುವ ಪ್ರಾದೇಶಿಕ ಉಪಭಾಷೆಗಳನ್ನು ಕಾಪಾಡುವುದರವರೆಗೆ ಯಾವುದೇ ವಿಷಯಕ್ಕೆ ತೊಡಗಿಕೊಂಡರೂ ತೀವ್ರವಾಗಿ ತೊಡಗಿಕೊಳ್ಳುವುದು, ನಿರಂತರವಾಗಿ ಹೋರಾಡುತ್ತಿರುವುದು ಅವರ ಸ್ವಭಾವ, ಪ್ರವೃತ್ತಿ ಎನ್ನಿ ಬೇಕಾದರೆ.

ಭಾಷೆಯ ಅಧ್ಯಯನ, ಕಳೆದು ಹೋಗುತ್ತಿರುವ ಉಪಭಾಷೆಗಳನ್ನು ಸೃಜನಾತ್ಮಕವಾಗಿ ರಕ್ಷಿಸುತ್ತಲೇ - ಸಾಹಿತ್ಯದ ಸಾಂಪ್ರದಾಯಿಕ ಭಾಷೆಯನ್ನು ರಚನಾತ್ಮಕ ಟೀಕೆಗೊಳಪಡಿಸುವುದು, ಸಾಮಾಜಿಕ ಅಸಮತೆಯ ವಿರುದ್ಧ ಹೋರಾಟ - ಇವು ಸಾರಾರ ವಿಶಿಷ್ಟತೆಗಳು. ಸರ್ಕಾರ ದಮನಕಾರಿ ಕ್ರಮಗಳನ್ನು ಕೈಗೊಂಡು ಕೆಳವರ್ಗದ ಜನರನ್ನು ಒಕ್ಕಲೆಬ್ಬಿಸಿದಾಗ ಪ್ರತಿಭಟಿಸುವ ಹೆಂಗಸರು ಮಕ್ಕಳನ್ನು ಪೋಲೀಸ್ ಸಹಾಯ ಪಡೆದು - ಮಿಲಿಟರಿ ಅವರವರ ಮನೆಗಳಿಂದ ಹೊರ ಹಾಕಿಸಿದಾಗ ಸಾರಾ - ತಮಗೆ ಸರ್ಕಾರ ಕೊಟ್ಟ ಪ್ರಶಸ್ತಿಗಳನ್ನು ಹಿಂದಿರುಗಿಸಿ ಪ್ರತಿಭಟಿಸಿದ್ದಾರೆ.

ಸಾಂಪ್ರದಾಯಿಕ ಸಿರಿಯನ್ ಕ್ರಿಶ್ಚಿಯನ್ ಕುಟುಂಬದಲ್ಲಿ ಹುಟ್ಟಿದ ಸಾರಾ ಜೋಸೆಫ್ ತಮ್ಮ ಹದಿನೈದನೇ ವಯಸ್ಸಿನಲ್ಲಿ ಮದುವೆ, ದಾಂಪತ್ಯ, ಕುಟುಂಬ ಜೀವನಗಳ ಅರ್ಥ ತಿಳಿಯುವ ಮುನ್ನವೇ ಮದುವೆಯ ಹೆಣ್ಣಾದರು. ಗೃಹಿಣಿಯೂ ಆದರು. ಆದರೆ ಅವರಿಗೆ ಕುಟುಂಬದ ಪ್ರೋತ್ಸಾಹದಿಂದ ವಿದ್ಯಾಭ್ಯಾಸವನ್ನು ಮುಂದುವರಿಸುವ ಅವಕಾಶ ಸಿಕ್ಕಿತು. ಒಂಬತ್ತನೇ ತರಗತಿ ಓದುವಾಗ ಮದುವೆಯಾದ ಸಾರಾ - ಶಿಕ್ಷಕರ ತರಬೇತಿ ಮುಗಿಸಿ, ಉದ್ಯೋಗಿಯಾಗಿ, ಓದು ಮುಂದುವರಿಸಿ ಕಾಲೇಜಿನ ಪ್ರಾಚಾರ್ಯರೂ ಆದರು.

ಸಾಹಿತ್ಯವನ್ನು ಮರು ಓದಿಗೆ ಒಳಪಡಿಸುವುದು ಸಾರಾರಿಗೆ ತುಂಬ ಪ್ರಿಯವಾದ ವಿಷಯ. ಓ. ವಿ. ವಿಜಯನ್, ಕಾಕ್ಕ ನಾಡಾನ್ ಮಲೆಯಾಳಂ ಸಾಹಿತ್ಯದ ಹಿರಿಯ ಹೆಸರುಗಳು. ಪ್ರಸಿದ್ಧಿ, ಜನಪ್ರಿಯತೆ, ವಿಮರ್ಶಕರ ಗೌರವ ಎಲ್ಲವೂ ಈ ಹಿರಿಯರಿಗೆ ಸಂದಿವೆ. ಇವರಿಗೆ ಸಲ್ಲಿಸಬೇಕಾದ ಗೌರವವನ್ನು ಸಲ್ಲಿಸುತ್ತಲೇ ಸಾರಾ ತಾನು ಕಂಡ ಕೆಲವು ಕೊರತೆಗಳತ್ತ ಬೊಟ್ಟು ಮಾಡಿ ತೋರಿಸುತ್ತಾರೆ.

**ಖಾಸಕ್ಕಿಂಟೆ ಇತಿಹಾಸಂ** ಎಂಬ ಪ್ರಸಿದ್ಧ ಮತ್ತು ಜನಪ್ರಿಯ ಕಾದಂಬರಿಯಲ್ಲಿ ನಾಯಕ ಜನಜಂಗುಳಿಯಿಂದ ದೂರವಾಗಿ ವನಪ್ರದೇಶಕ್ಕೆ ಹೋಗುತ್ತಾನೆ. ಆಯಾಸ - ದುರ್ಬಲತೆಗಳಿಂದ ಮೂರ್ಛೆಗೊಂಡು ಕುಸಿದುಬಿದ್ದ ಅವನನ್ನು ಅಲ್ಲೊಬ್ಬ ಆದಿವಾಸಿಗಳ ನಾಯಕ ತನ್ನ ಗುಡಿಸಿಲಿನಲ್ಲಿ ಉಪಚರಿಸಿ, ಅವನ ಶುಶ್ರೂಷೆಗೆ ತನ್ನ ಮಗಳನ್ನೇ ನೇಮಿಸುತ್ತಾನೆ. ಆ ಘಟನೆಯನ್ನು ನೆನೆದುಕೊಳ್ಳುತ್ತ ನಾಯಕ ಹೀಗೆಂದುಕೊಳ್ಳುತ್ತಾನೆ - "ಆಹಾರ ರುಚಿಯಾಗಿತ್ತು....ಆ ಹುಡುಗಿ ಇನ್ನೂ ರುಚಿಯಾಗಿದ್ದಳು" ಸಾರಾರ ಸ್ತ್ರೀವಾದಿ ಮನಸ್ಸು ಈ ನಿರೂಪಣೆಯನ್ನು ಇನ್ನೊಂದು ದೃಷ್ಟಿಕೋನದಿಂದ ನೋಡಿ ಪ್ರಶ್ನಿಸುತ್ತದೆ - 'ಆ ಹುಡುಗಿ' ಮನುಷ್ಯಳಲ್ಲವೆ - ಈ ಸಾಹಿತ್ಯವನ್ನು ಒಬ್ಬ ಹೆಣ್ಣು ಓದಿ ಆನಂದಪಡಲು ಹೇಗೆ ಸಾಧ್ಯ?"

ಈ ರೀತಿಯ ಮರುಓದು ಎಲ್ಲ ಭಾಷೆಗಳ ಸ್ಥಾಪಿತ ಸಾಹಿತ್ಯಕ್ಕೂ ಅವಶ್ಯಕ ಮತ್ತು ಸಾಧ್ಯ. ಮಲೆಯಾಳದ ಮಟ್ಟಿಗೆ ಸಾರಾ ಇದನ್ನು ಬಹು ಹಿಂದೆಯೇ ಪ್ರಾರಂಭಿಸಿದರು.

ಅನ್ವೇಷಣಂ ಮತ್ತು ಚಿತ್ರಕಾರ್ತಿಕ ಎಂಬ ಮಲೆಯಾಳಂ ಪತ್ರಿಕೆಗಳಲ್ಲಿ ಮೊದಲು ಕವಿತೆಗಳನ್ನು ಬರೆಯಲಾರಂಭಿಸಿದ ಸಾರಾ ತಾವು ಬರೆದ ಕವಿತೆಗಳನ್ನು ಗೆಳೆಯ ಗೆಳತಿಯರು - ಹಿರಿಯ ಬರಹಗಾರರು ಸೇರುತ್ತಿದ್ದ ಗುಂಪುಗಳಲ್ಲಿ ಓದಿ ಚರ್ಚೆಗೊಳಪಡಿಸುತ್ತಿದ್ದುದೂ ಉಂಟು. ಮಲೆಯಾಳಂ ಸಾಹಿತ್ಯದಲ್ಲಿ ಹಿರಿಯರಾದ ವೈಲೋಪಿಳ್ಳಿ ಶ್ರೀಧರ ಮೆನೋನ್ನರು ಮತ್ತು ಎಡಕ್ಕೇರಿಯವರು ಸಾರಾರಿಗೆ ಕವಿತೆಗಳನ್ನು ಮಾತ್ರ ಬರೆಯಬೇಕೆಂದು ಸಲಹೆಯಿತ್ತಿದ್ದರಂತೆ. ಆದರೆ ಹೇಗೋ ಸಾರಾ ಕಥಾಸಾಹಿತ್ಯದ ಕಡೆಗೆ ತಿರುಗಿ ಕಥೆಗಳನ್ನು ಬರೆಯಲಾರಂಭಿಸಿದರು. ೭೨ರಲ್ಲಿ ಕಥೆ ಬರೆಯಲು ಪ್ರಾರಂಭಿಸಿದ ಈ ಲೇಖಕಿ ೧೯೭೩ರಲ್ಲಿ **ಮನಸಿಲೇದಿ ಮಾತ್ರಂ** ಎಂಬ ಕಥಾಸಂಕಲನವನ್ನು ಹೊರತಂದರು. ಎರಡನೆಯದು **ಕಾಡಿಂಟೆ ಸಂಗೀತಂ** ಅನಂತರ **ಪಾಪತಾರಾ, ಒಡುವಿಲೇದಿ ಸೂರ್ಯಕಾಂತಿ, ನಿಲವು ಅರಿಯುನ್ನು, ನಾನ್‌ನುತ್ತಿನ್ ಮಕ್ಕಳುಡೆ ವೃಕ್ಷಮ್, ಕಾಡಿತ್ತು ಕಂದಯೋ ಕಥಾ, Recapture the kitchen**, **ಭಗವದ್ಗೀತೆಯುಡೆ ಅಡುಕ್ಕಳಯಿಲ್** - ಇವೂ ಸಹ ಅವರ ಬರಹಗಳು. ಅವರ **ಪಾಪತಾರಾ** ಎಂಬ ಕಥಾ ಸಂಕಲನ ಮಲೆಯಾಳಂ ಭಾಷೆಯ ಸ್ತ್ರೀವಾದಿ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲೆಂದು ಪರಿಗಣಿತವಾಗಿದೆ. **ರಾಮಾಯಣ ಕಥಾಕಳ್** - ರಾಮಾಯಣದ ಘಟನೆ ಮತ್ತು ಪಾತ್ರಗಳನ್ನು ಒಂದು ಭಿನ್ನ ದೃಷ್ಟಿಯಿಂದ ನೋಡುತ್ತದೆ.

ದೈನಂದಿನ ಜೀವನದ ಸಾಮಾನ್ಯ ಘಟನೆಗಳನ್ನು ನಿರೂಪಿಸುತ್ತಲೇ ಆ ಘಟನೆಗಳಿಗೆ ಒಂದು ಹಠಾತ್ ತಿರುವು ಕೊಟ್ಟು ಬದುಕನ್ನು ಕಾಣುವ ಒಂದು ವಿಶಿಷ್ಟ ದೃಷ್ಟಿ ತಿಳಿವಳಿಕೆ ಅವರ ಕಥೆಗಳಲ್ಲಿದೆ. ಸ್ತ್ರೀ ವಿಶಿಷ್ಟ ಸಂವೇದನೆಯ ಹೊಸ ಭಾಷೆಯನ್ನು ಸಹ ಅವರು ಕಟ್ಟಿಕೊಡುತ್ತಾರೆ.

ಭಾಷೆ, ಸ್ತ್ರೀ ಸಂವೇದನೆ, ಪ್ರಧಾನ ಸಂಸ್ಕೃತಿಯೊಡನೆ ಉಪಸಂಸ್ಕೃತಿಯ ಹೋರಾಟ ಇವೆಲ್ಲವನ್ನು ಮುಪ್ಪುರಿಗೊಳಿಸಿರುವ ಅವರ ಮೊದಲ ಕಾದಂಬರಿ **ಅಲಾಹಯುಡೆ ಪೆಣ್ಮಕ್ಕಳ್** ಒಂದು ವಿಶಿಷ್ಟ ಕೃತಿ. ಇದರೊಡನೆ ಅವರ ಹೆಸರು ಮನೆಮಾತಾಯಿತು. ಪಟ್ಟಭದ್ರ ಬದುಕನ್ನು ಬಾಳುತ್ತಿರುವ ಸುಶಿಕ್ಷಿತ ಓದುಗರ ಸುರಕ್ಷಿತ ಬದುಕು ಅವರ ಮನದಲ್ಲೊಂದು ಸಣ್ಣ ಚಳುಕು ಹುಟ್ಟುವಂತೆ ಮಾಡಿತು. ಈ ಕಾದಂಬರಿ ಈ ಮೂರು ಕಾದಂಬರಿಗಳ ಸರಣಿಯಲ್ಲಿ ಮೊದಲಿನದು. (ಇದನ್ನು Triology ಎಂದು ಕರೆಯುತ್ತಾರೆ).

ಇದರ ಎರಡನೇ ಭಾಗ **ಮಾತಾತ್ತಿ** (ಇದಕ್ಕೆ ಶತ್ರು ಎಂದರ್ಥ. ಶತ್ರುವಿನ ಸ್ತ್ರೀಲಿಂಗ ಪದವಿದು) ಮೂರನೆಯದು - **ಒತಪ್ಪು** (Scandal ಎಂದರ್ಥ)

ಈ ಕಾದಂಬರಿ (**ಅಲಾಹಯುಡೆ ಪೆಣ್ಮಕ್ಕಳ್**) ನಡೆಯುವ ಸ್ಥಳ ತ್ರಿಶ್ಶೂರಿನ ಹೊರವಲಯದಲ್ಲಿರುವ ಕುರಿಯಚೇರಾ ಪಟ್ಟಣದೊಳಗೆ ಮತ್ತು ಸುತ್ತಮುತ್ತ ಪಸರಿಸುತ್ತಿರುವ ಪ್ರಧಾನ ಸಂಸ್ಕೃತಿ ವ್ಯವಸ್ಥಿತವಾಗಿ ಬಡವರು ವಾಸಮಾಡುವ ಜಾಗವನ್ನು ಕಸಿದುಕೊಳ್ಳುತ್ತಿದೆ. ಅವರ ಭಾಷೆಯನ್ನು ನಾಶ ಮಾಡುತ್ತಿದೆ. ನಗರೀಕರಣದ ಫಲವಾಗಿ ತಮ್ಮ ನೆಲದಿಂದ ನಿರಂತರವಾಗಿ ಒಕ್ಕಲೆಬ್ಬಿಸಲ್ಪಡುತ್ತಿರುವ ಜನರ ಕಥೆಯನ್ನು **ಅಲಾಹಯುಡೆ ಪೆಣ್ಮಕ್ಕಳ್** ಹೇಳುತ್ತದೆ. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳೆರಡೂ ಪ್ರಶಸ್ತಿ ನೀಡಿ



ಸಾರಾ ಜೋಸೆಫ್

ಸನ್ಮಾನಿಸಿದವು. ಸಾರಾ ಈ ಬಹುಮಾನವು ಜಾಗತೀಕರಣದ ಶೋಷಕ ಸಂಸ್ಕೃತಿಯ ವಿರುದ್ಧ ಪ್ರಾದೇಶಿಕ ಹೋರಾಟವನ್ನು ಸರಕಾರಗಳು ಗಮನಿಸಿರುವುದರ ಕುರುಹೆಂದು ಭಾವಿಸುತ್ತಾರೆ.

ಮಲೆಯಾಳ ಭಾಷೆಯ ಸ್ತ್ರೀವಾದಿ ಸಾಹಿತ್ಯಕ್ಕೆ ಸಾರಾರ ಬರಹಗಳಿಂದ ಒಂದು ಹೊಸ ಆಯಾಮ ದೊರೆತಿದೆ. ಸಾರಾ ಒಬ್ಬ ಹೋರಾಟಗಾರ್ತಿ. ಅವರು ಮಾನವ ಹಕ್ಕುಗಳ ಹೋರಾಟದಲ್ಲೂ, ಪರಿಸರ ಹೋರಾಟದಲ್ಲೂ ಸಕ್ರಿಯರಾಗಿದ್ದಾರೆ. ಪಳೆಯುಳಿಕೆಗೆ ಜೀವ ಬಂದ ಹಾಗೆ ಸಿರಿಯನ್ ಕ್ರಿಶ್ಚಿಯನ್ನರ ಈ ಭಾಷೆಯನ್ನು ಕಾದಂಬರಿಯಲ್ಲಿ ಬಳಸಿದ್ದಾರೆ.

'ಮಾನುಷಿ' ಎಂಬ ಸಂಸ್ಥೆಯೊಂದನ್ನು ಅವರು ಮಹಿಳೆಯರ ಹೋರಾಟಕ್ಕಾಗಿ ಹುಟ್ಟು ಹಾಕಿದರು. ಅವರು ಕಲಿಸುತ್ತಿದ್ದ ಪಟ್ಟಾಂಬಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯೊಬ್ಬಳು ಲೈಂಗಿಕ ಶೋಷಣೆಗೀಡಾಗಿ ಆತ್ಮಹತ್ಯೆ ಮಾಡಿಕೊಂಡಳು. ಇಂಥ ಘಟನೆಗಳನ್ನು ಪ್ರತಿಭಟಿಸಲು ಆ ಕ್ಷಣದಲ್ಲಿ ಹುಟ್ಟಿದ ಮಾನುಷಿ ಮುಂದೆ ಹಲವು ಪ್ರತಿಭಟನೆಗಳ ತವರಾಗಿ, ಮಹಿಳೆಯರ ಸಂಘಟನೆಯಾಗಿ ಅಧ್ಯಯನದ ಮೊನಚನ್ನು ಸಹ ಮೈಗೂಡಿಸಿಕೊಂಡು ಬೆಳೆಯಿತು, ಎಂಬತ್ತರ ದಶಕದಲ್ಲಿ ತನ್ನ ರಾಜಕೀಯಾತೀತ ವ್ಯಕ್ತಿತ್ವವನ್ನು ಉಳಿಸಿಕೊಂಡು ಮಹಿಳೆಯ ಸಬಲೀಕರಣದಲ್ಲಿ ಒಂದು ಮಹತ್ವದ ಪಾತ್ರ ವಹಿಸಿತು. ಭಾಷಾವಿಜ್ಞಾನದ ಅಭ್ಯಾಸಿಯೂ ಆದ ಸಾರಾ, ಭಾಷೆ-ಸೃಜನಶೀಲತೆ ಮತ್ತು ಶೋಷಣೆಗಳ ಬಗ್ಗೆ ೧೯೯೪ರ ಅಕ್ಟೋಬರ್‌ನಲ್ಲಿ 'ಮಲೆಯಾಳ ಮನೋರಮಾ' ಪತ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ -

"ಅಧಿಕಾರದ ಕೇಂದ್ರ ಸ್ಥಾನದಲ್ಲಿ ಪುರುಷನೂ ಅಂಚಿನಲ್ಲಿ ಸ್ತ್ರೀಯರೂ ಇದ್ದಾರೆ. ಒಗ್ಗಿರುವ ಒಂದು ವ್ಯವಸ್ಥೆಯಲ್ಲಿ ಭಾಷೆಯಲ್ಲಿಯೂ ಸಹ ಇದೇ ರೀತಿಯ ನಿಲುವುಗಳ ಕೆಲವು ದ್ವಂದ್ವಗಳಿವೆ. ಅಧಿಕಾರದ ಕೇಂದ್ರದಲ್ಲಿ ಸವರ್ಣರು, ಅಂಚಿನಲ್ಲಿ ದಲಿತರು; ಕೇಂದ್ರದಲ್ಲಿ ಸಿರಿವಂತರು ಅಂಚಿನಲ್ಲಿ ಬಡವರು; ಕೇಂದ್ರದಲ್ಲಿ ಬಿಳಿಕಾಲರ್ ಜನಗಳು - ಅಂಚಿನಲ್ಲಿ ಕಪ್ಪು ಜನ - ಈ ದ್ವಂದ್ವಗಳು ಭಾಷೆಯ ವಿಷಯದಲ್ಲೂ ಇವೆ. ನಂಬೂದಿರಿಗಳ ಭಾಷೆ ಶ್ರೇಷ್ಠ - ಪುಲಯ ಭಾಷೆ ಅಧಮ ಎಂಬ ಗ್ರಹಿಕೆಯಲ್ಲಿಯೂ ಅಶಾಸ್ತ್ರೀಯತೆ ಇದೆ. ಭಾಷಾ ಶಾಸ್ತ್ರವನ್ನು ಅಭ್ಯಾಸ ಮಾಡಿದವರು ಈ ಭೇದಗಳೆಲ್ಲ ಅರ್ಥಶೂನ್ಯವೆಂದು ಅಂಗೀಕರಿಸುತ್ತಾರೆ.

ಸ್ಥಾಪಿತವಾಗಿರುವ ಭಾಷೆ-ಸಾಹಿತ್ಯಗಳಲ್ಲಿ ಸ್ತ್ರೀಗೆ ಮಾತ್ರವಲ್ಲ, ದಲಿತರಿಗೆ, ದರಿದ್ರರಿಗೆ, ಕಪ್ಪು ಜನಗಳಿಗೆ - ಒಂದು ಸ್ಥಳವೂ ಇಲ್ಲ ಎಂದು ನಮಗೆ ಕಾಣುತ್ತದೆ"

ಈ ಮಾತು ನಮ್ಮನ್ನು ಅಲುಗಾಡಿಸಬಹುದು ನಾವಿದನ್ನು ಒಪ್ಪದಿರಬಹುದು. ಯಾಕೆಂದರೆ ನಾವೆಲ್ಲ ನಾಗರೀಕತೆಯೂ, ಕೇಂದ್ರೀಕರಣವೂ ಒದಗಿಸಿರುವ ಸೌಲಭ್ಯವನ್ನು; ಸ್ವಲ್ಪ ಸ್ವಲ್ಪ ಅನುಭವಿಸುತ್ತ ಹೇಗಾದರೂ ಕೇಂದ್ರಕ್ಕೆ ನುಗ್ಗಿ ಸುಖವಾದ ಬಾಳನ್ನು ಬಾಳುತ್ತಿದ್ದೇವೆ. ಆದರೆ ಇದು ಸತ್ಯ - ನಾವು ಇದರಿಂದ ತಪ್ಪಿಸಿಕೊಳ್ಳಲಾಗದು.

# ಮಲೆಯಾಳಂ ಕವಯಿತ್ರಿಯರು

✍ ಸ. ಉಷಾ

ಕೇರಳ ವರ್ಣವೈವಿಧ್ಯದ ನಾಡು ಹಸಿರು ವೈನಾಡು, ನೀಲಸಮುದ್ರ ತೀರ, ತೆಂಗುಗರಿಗಳ ಮರ್ಮರ, ತರವಾಡು ಮನೆಗಳು, ಮನೆಯದೇ ಆದ ಶತಮಾನಗಳ ಆಭ್ಯಂಜನದ ತೆಂಗಿನೆಣ್ಣೆ ತೇಲುವ ಕೆರೆಗಳು, ಕೇರಳವರ್ಮ ರಾಮಾಯಣ, ಅವನ ಮರದ ಅರಮನೆ, ತೈಲಚಿತ್ರಗಳು, ಮನೆಯ ಕೆರೆಯಲ್ಲಿ ಮೀಯಲೂ ಓಲೆಗರಿಯ ಕೊಡೆಯ ಕಾಪನ್ನು ಜಾಹೀರು ಮಾಡುತ್ತ ಹೋಗಬೇಕಾದ ನಂಬೂದಿರಿ ಹೆಣ್ಣುಮಕ್ಕಳು, ಪುಲಪೇಡಿ ಎಂಬ ವಿಚಿತ್ರ ಪದ್ಧತಿ, ಆಸ್ತಿ ಹಕ್ಕು ಹೆಣ್ಣು ಮಕ್ಕಳಿಗೆ ಇದ್ದರೂ, ಅತಿ ಹೆಚ್ಚಿನ ಸಾಕ್ಷರತಾ ಪ್ರಮಾಣವಿದ್ದರೂ ಕೇರಳದಲ್ಲಿ ಮಹಿಳಾ ಸಾಹಿತ್ಯ ಒಂದು ಚಳುವಳಿಯಾಗಿ ಕಾಣುವಂತೆ ಕೇಳುವಂತೆ ಆದುದು ಕಳೆದ ಶತಮಾನದ ಮೊದಲ ದಶಕದಲ್ಲಿ ಎಂಬ ಅಭಿಪ್ರಾಯವಿದೆ.

ಆವರೆಗೆ ಒಬ್ಬರು ಲಲಿತಾಂಬಿಕಾ ಅಂತರ್ಜನಂ, ಒಬ್ಬರು ಬಾಲಾಮಣಿ ಅಮ್ಮ, ಒಬ್ಬರು ಸುಗತಕುಮಾರಿ, ಒಬ್ಬರೋ ಒಬ್ಬರೊಳಗೆ ಮೂವರೋ ಆದ ಕಮಲಾ -ಮಾಧವಿ- ಸುರೈಯಾ ಅಚ್ಚರಿ ಹುಟ್ಟಿಸುವ ದ್ವೀಪಗಳಾಗಿಯೋ ಎಚ್ಚರ ಹುಟ್ಟಿಸುವ ಶಿಖರಗಳಾಗಿಯೋ ಇದ್ದರು ಎನ್ನಬೇಕಾಗುತ್ತದೆ.

೧೯೦೯ರಲ್ಲಿ ಹುಟ್ಟಿದ ಲಲಿತಾಂಬಿಕಾ ಅಂತರ್ಜನಂ ಕುಟುಂಬ ಮತ್ತು ಸ್ತ್ರೀಯ ಮಧ್ಯೆ ಹುಟ್ಟುವ ಘರ್ಷಣೆಗಳೂ ಸೇರಿದಂತೆ ಬಿಚ್ಚುಮನದಿಂದ ಎಲ್ಲ ವಿಷಯಗಳನ್ನು ತಮ್ಮ ಕಥಾಸಾಹಿತ್ಯದಲ್ಲಿ ಚರ್ಚಿಸಿದ್ದಾರೆ. ಅವರ ಕಾದಂಬರಿ ಅಗ್ನಿಸಾಕ್ಷಿಯಲ್ಲಿ ಬರುವ ಪಾತ್ರಗಳನ್ನು

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಕ್ಷರಶಃ ಐತಿಹಾಸಿಕ ವ್ಯಕ್ತಿಗಳೊಡನೆ ಸಮೀಕರಿಸಬಹುದು. ಅವರ ಪ್ರಕಾರ ಕೇರಳದ ಮಹಿಳೆಯರು ಭಾರತದ ಇತರ ಭಾಗದಲ್ಲಿರುವ ಮಹಿಳೆಯರಿಗಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ೧೯೬೦ರ ಸುಮಾರಿನಲ್ಲಿ 'ಅನುಭವದ ನುಡಿಗಳು' ಎಂಬ ಲೇಖನವೊಂದರಲ್ಲಿ ಅವರು ಇಂದು ಬರೆಯುತ್ತಿರುವ ಮಹಿಳೆಯರು ಸಂಖ್ಯೆ ಮತ್ತು ಗುಣಮಟ್ಟ ಎರಡರಲ್ಲೂ ಪುರುಷರಿಗೆ ಸಮಾನರಾಗಿದ್ದಾರೆ ಎಂದು ಅಭಿಮಾನದಿಂದ ನುಡಿಯುತ್ತಾರೆ.

ಕಲ್ಕತ್ತಾದ 'ಕಾಲಿ ಫಾರ್ ವುಮನ್' ಎಂಬ ಪ್ರಕಾಶನದ ಸಂಸ್ಥೆಯೊಂದು ೧೯೯೩ರಲ್ಲಿ "Inner spaces : New writing by women from Kerala" ಎಂಬ ಪುಸ್ತಕವನ್ನು ಹೊರತಂದಿದೆ. ಆ ಪುಸ್ತಕದ ಮುನ್ನುಡಿಯಲ್ಲಿ ಡಾ.ಕೆ. ಎಂ. ಜಾರ್ಜ್ ಹೀಗೆ ಹೇಳುತ್ತಾರೆ.

"Male domination is conspicious in every branch of every literature - including Malayalam - not only in the production of literary works but even in the approach to literature and literary theories and perceptions. Certain aspects of grammar, idiomatic expression and symbols are so male oriented that women find it difficult to use them appropriately. However, there have been some significant literary efforts by Malayali women in the 19th and 20 centuries, both in discursive and creative writing. Bot h categories received afillip with an emergence of Malayalam periodicals (although many of these were edited by men) Some general Magazines in Malayalam, too reserved space for women's writing."

ಡಾ. ಜಾರ್ಜ್‌ರವರು ಸರಿಯಾಗಿ ಗುರ್ತಿಸಿರುವಂತೆ ಅಂದಿನ ಮಲೆಯಾಳಂ ನಿಯತಕಾಲಿಕೆಗಳು ಮಹಿಳಾ ಬರಹಗಾರರಿಗೆ ಸ್ಥಳವನ್ನು ಮೀಸಲಿಟ್ಟು ಪ್ರೋತ್ಸಾಹಿಸಿದವು. ಆ ಕಾಲದಲ್ಲಿ ಅನ್ವೇಷಣಂ, ಚಿತ್ರಕಾರ್ತಿಕ, ಕೆಲಕಾಲಾನಂತರ ಕೌಮುದಿ, ಇತ್ತೀಚಿನವರೆಗೂ ಮಲೆಯಾಳ ಕವಿತ ಎಂಬ ನಿಯತಕಾಲಿಕಗಳು ಮಹಿಳೆಯರ ಬರಹಗಳನ್ನು ಓದುಗರಿಗೆ ಪರಿಚಯಿಸಿವೆ.

ಸಂಸ್ಕೃತಭೂಯಿಷ್ಠವಾದ ಸಾಂಪ್ರದಾಯಿಕ ಮಲೆಯಾಳ ಕವಿತೆಯ ರೂಪಕ್ಕೆ ಒಲಿದು 'ಕೊಡಲಿಯ ಕಥೆ' ಯನ್ನು ಕಟ್ಟಿ, ಹಾಡಿರುವ ಬಾಲಾಮಣಿ ಅಮ್ಮ - ಆ ರೂಪದೊಳಗೆ ಸ್ತ್ರೀ ಸಂವೇದನೆಯನ್ನು ಕಟ್ಟಿದ್ದಾರೆ..

ಮೂಕಶಾಂತವಾದ ಮಹೇಂದ್ರಾಚಲ ಶಿಖರದ ಮೇಲೆ ತಂಗಾಳಿ ಬೀಸಿ ಬರುತ್ತಿದೆ. ಜಮದಗ್ನಿ ಪುತ್ರ ಪರಶುರಾಮ ಆ ಗಾಳಿಯ ಮೊರೆತವನ್ನು ಕೇಳುತ್ತ ತನ್ನ ತಾಯಿ ರೇಣುಕೆಯ ಕಥೆಯನ್ನು ನೆನಪು ಮಾಡಿಕೊಳ್ಳುತ್ತಾನೆ. ತಂದೆಯ ಅಪ್ಪಣೆಯಂತೆ ತಾಯಿಯ ತಲೆ ತರಿದ ಕುವರನ ಈ ನೆನಪುಗಳು - ತಾಯಿಯ ಕಥೆಯನ್ನೂ ಕಟ್ಟಿಕೊಡುತ್ತವೆ. ಇಲ್ಲಿ ಕವಿತೆಯ ಕಟ್ಟಡ ಸಾಂಪ್ರದಾಯಿಕ ಕವಿತೆಯದು ಕವಯಿತ್ರಿಯ ಒಲವು ಆ ಸಾಂಪ್ರದಾಯಿಕತೆಯ ಕಡೆಗಿಲ್ಲ. ಕುವೆಂಪು ಸಂಸ್ಕೃತ ಭೂಯಿಷ್ಠವಾದ ಹಳಗನ್ನಡವನ್ನು ಹೋಲುವ ಭಾಷೆಯಲ್ಲಿ ಬೆರಳ್ಗೆ ಕೊರಳ್, ಶೂದ್ರತಪಸ್ವಿ ನಾಟಕಗಳನ್ನು ಬರೆದ ಐತಿಹಾಸಿಕ ಪ್ರಕ್ರಿಯೆಗೆ ಇದನ್ನು ಹೋಲಿಸಬಹುದು. ಬಹು ಸಹಿರಾಗಿ ಹಾಡ್ದೋ ಅಲ್ಲವೋ ಎಂಬಂತೆ ಇಲ್ಲಿ ಪ್ರತಿಭಟನೆಯ ದನಿಯಿದೆ.

ಮಲೆಯಾಳಂ ಬರಹಗಾರ್ತಿಯರಲ್ಲಿ ಪ್ರಸಿದ್ಧಿಯ ಲಿಂಬೆ ಬೆಳಕು (limelight) ಹೆಚ್ಚಾಗಿ ಕಮಲಾದಾಸ್‌ರ ಮೇಲೆ ಬಿದ್ದಿದೆ. ಹದಿನೈದನೇ ವಯಸ್ಸಿಗೆ ವಿವಾಹವಾಗಿ, ಹದಿನಾರನೇ ವಯಸ್ಸಿಗೇ ತಾಯಿಯಾಗಿ ಜಗತ್ತನ್ನು ಬೆಚ್ಚಿ ಬೀಳಿಸುವಂತೆ ಬರೆಯತೊಡಗಿದ ಈ ಕವಯಿತ್ರಿ ಕಮಲಾ-ಮಾಧವಿ-ಸುರೈಯ - ಈ ಮೂರು ರೂಪಗಳಲ್ಲಿ ಓದುಗರಿಗೆ ಕಾಣಿಸಿಕೊಂಡಿದ್ದಾರೆ. ಅದರ My story ಒಂದು ಬಿರುಗಾಳಿಯನ್ನೇ ಎಬ್ಬಿಸಿತು. ಈಗಲೂ ಪತ್ರಿಕೆಗಳಿಗೆ ಅಂಕಣ ಬರೆಯುವ ಕಮಲಾದಾಸ್ ಮಲೆಯಾಳಂ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಬರೆಯುವರು. ಕಥೆ, ಕವಿತೆ, ಅಂಕಣ ಚಿತ್ರ ಕಲೆಗಳಲ್ಲಿ ಸುರಿತ ಹರಿತ ರಾಜಕೀಯ ಪ್ರಜ್ಞೆಯ ಕಮಲಾದಾಸ್ ಬದುಕನ್ನು ತೀವ್ರವಾಗಿ ಸವಿದವರು, ತಾನು ಮತ್ತೊಮ್ಮೆ ಹುಟ್ಟುವುದಿಲ್ಲ ಎಂಬ ತಿಳುವಳಿಕೆಯೊಡನೆ ಕವಿತೆಗಳು ಅವರ ವ್ಯಕ್ತಿತ್ವದ ಒಂದು ಮುಖ ಮಾತ್ರ.

ತನ್ನ ಕಾವ್ಯದಲ್ಲಿ ಸ್ತ್ರೀತ್ವ ಮತ್ತು ಒಲವಿನ ಶೋಧವನ್ನೂ ಕಮಲಾದಾಸ್ ಮಾಡಿದ್ದಾರೆ. ತಾನು ವ್ಯಕ್ತಿಯಾಗಿ ಮತ್ತು ಒಬ್ಬ 'ಸ್ತ್ರೀ'ಯಾಗಿ ಜಗತ್ತಿನ ಹೆಣ್ಣಿನ ಕುರಿತು ಸಂವೇದಿಸಿದ್ದಾರೆ ಮತ್ತು ಬರೆದಿದ್ದಾರೆ ಹಾಗೇ ತೀವ್ರ ಟೀಕೆಗೂ ಒಳಗಾಗಿದ್ದಾರೆ. ಪ್ರೇಮವಿಲ್ಲದ ದಾಂಪತ್ಯವನ್ನು ಒಬ್ಬ ಸ್ತ್ರೀ ಹೇಗೆ ಪರಿಭಾವಿಸಬಹುದು ಎಂಬುದರ ಚಿತ್ರ ಒಂದು ಪುಟ್ಟ ಪದ್ಯದಲ್ಲಿದೆ. ಇಲ್ಲೊಬ್ಬಳು ರಾಧೆಯಿದ್ದಾಳೆ. ಅವಳು ಒಲಿದ ನಲ್ಲ ಕೃಷ್ಣನು ಅವಳ ಪತಿಯಲ್ಲ. ಕೃಷ್ಣ ರಾಧೆಯರ ಅಗಲಿಕೆಯ ನಂತರ ಒಂದು ರಾತ್ರಿ ಅವಳ ಪತಿ - ರಾಧೆಯನ್ನು ಕೇಳುತ್ತಾನೆ.

"ನನ್ನ ಮುತ್ತುಗಳು ನಿನಗೆ ಕಷ್ಟ ಕೊಡುವುವೇ" ಎಂದು. ಅದಕ್ಕೆ ರಾಧೆಯ ಉತ್ತರ ಹೀಗಿದೆ.

"ಕ್ರಿಮಿಗಳು ಮೃತದೇಹವನ್ನು ಭುಜಿಸಿದರೆ ಅದಕ್ಕೇನು ತೊಂದರೆ?"

ಜಗತ್ತೆಲ್ಲ ವಿವಾಹವಿಲ್ಲದ ಪ್ರೇಮದ ಮೇಲೆ ಕಲ್ಲು ತೂರುವಾಗ ಇಲ್ಲಿ ಲೇಖಕಿ ಪ್ರೇಮವಿಲ್ಲದ ದಾಂಪತ್ಯದ ಮೇಲೆ ಒಂದು ಅಗ್ನಿಬಾಣ ತೂರಿದ್ದಾರೆ.

"ತಾನು ಒಲಿದವನೊಡನೆ ಏನನ್ನೂ ಮುಚ್ಚಿಡುವುದಿಲ್ಲ. ಎದೆ ಸೀಳಿನ ನಡುವಿನ ಸ್ವೇದಗಂಧ ಬೆಚ್ಚನೆಯ ರಜೋಸ್ರಾವದ ಆಘಾತ"

ಯಾವುದನ್ನೂ ಮುಚ್ಚಿಡಬಾರದು - ಎಂಬ ನಿಲುವು ಈ ಕವಿಯದು. ಗೂಢ ಸಾಧನೆಯ ತಂತ್ರಜ್ಞರಂತೆ ಮನುಷ್ಯ ದೇಹದ ಸುಖಗಳನ್ನು ಅನ್ವೇಷಿಸಿ ಅದನ್ನು ಬರಹದಲ್ಲಿ ದಾಖಲಿಸುತ್ತಾರೆ.

'ಕಲಕತ್ತೆಯ ಬೇಸಿಗೆ', 'ಹಳೇ ಆಟದ ಮನೆ ಮತ್ತು ಇತರ ಕವಿತೆಗಳು', 'ಅಣ್ಣಾಮಲೈ ಕವಿತೆಗಳು', 'ಹಾಡುವುದು ಹೇಗೆಂದು ಆತ್ಮಕ್ಕೆ ಮಾತ್ರ ಗೊತ್ತು' ಎಂಬುವು ಇವರ ಕವನ ಸಂಕಲನಗಳು.

ಈ ಕಮಲಾದಾಸ್ - ಮಲೆಯಾಳಂ ಕಾವ್ಯದ ಒಂದು ವಿಭಿನ್ನ ದನಿ. ಭಾರತೀಯ ಮಹಿಳಾ ಕಾವ್ಯದಲ್ಲಿ ಸಹ ಅವರು ಒಂದು ವಿಭಿನ್ನ ದನಿಯಾಗಿಯೇ ಇದ್ದಾರೆ.

ಮಲೆಯಾಳ ಮನೋರಮೆಯರ ಕಾವ್ಯದಲ್ಲಿ ಕೆಲವು ಅಲಕ್ಷಿಸಲಾರದ ಪುಟಗಳಿವೆ. ಇತಿಹಾಸದ ನಗೆಹನಿಗಳನ್ನು ಕಾವ್ಯದಲ್ಲಿ ದಾಖಲಿಸಿರುವ ಲಲಿತಾ ಲೆನಿನ್. ಸಮುದ್ರದ ಅಲೆಗಳನ್ನೂ ಚಂಡೆಮದ್ದಳೆಯ ಲಯವನ್ನು ತನ್ನ ಕಾವ್ಯದಲ್ಲಿ ಹಿಡಿಯಲೆತ್ನಿಸಿರುವ ವಿ.ಕೆ. ಹೇಮಾ.

ಕಾಯಿಲೆಯಾಗಿ ಆಸ್ಪತ್ರೆಯಲ್ಲಿರುವಾಗ ಬಂದ ರಾತ್ರಿ ಮಳೆಯ ಸ್ವರೂಪವನ್ನು ಕಲಾತ್ಮಕವಾಗಿ ಹಿಡಿದಿಟ್ಟಿರುವ ಸುಗತಕುಮಾರಿ ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ.

ಕಸವ ತೊಟ್ಟಿಯಲ್ಲಿ ಸಿಗುವ ಒಂದು ಹೆಣ್ಣು ಮಗು - ಇದೊಂದು ಚಿತ್ರ - ಯಾವುದೇ ಊರಿನಲ್ಲಿ ಘಟಿಸಬಹುದಾದ ಘಟನೆ - 'ಷೇಣ್‌ಕುಞ್ಞಿ' ಎಂಬ ಹೆಸರಿನ ಈ ದೀರ್ಘ ಪದ್ಯದಲ್ಲಿ ಈ ಘಟನೆ ಕೆರಳಿಸಿದ ಭಾವನೆಗಳನ್ನು ಸುಗತ ಕುಮಾರಿ ಹಿಡಿದಿಟ್ಟಿದ್ದಾರೆ.

ಕಮಲಾದಾಸ್ ನಂತರದ ತಲೆಮಾರಿನಲ್ಲಿ ಆಧುನಿಕ ವಿದ್ಯಾಭ್ಯಾಸ ಪಡೆದ, ವೃತ್ತಿಪರರಾದ, ಆತ್ಮವಿಶ್ವಾಸದ ಕವಯಿತ್ರಿಯರು ಹಲವರು ಬಂದಿದ್ದಾರೆ. ಇವರ ದನಿ ಕಮಲಾದಾಸ್ ದನಿಗಿಂತ ಸ್ವಲ್ಪ ಭಿನ್ನವೇ ಆಗಿದೆ. ಇವರಿಗೆ ಕುಟುಂಬವ್ಯವಸ್ಥೆ ಮತ್ತು ಸಮಾಜ ತಮಗೆ ಹಾಕಿರುವ ಮಿತಿಗಳ ಅರಿವಿದೆ. ಆದರೆ ಇವರು ಕುಟುಂಬವೆಂಬ ರಕ್ಷಣಾ ವ್ಯವಸ್ಥೆಯನ್ನು ಪ್ರೀತಿಸುತ್ತಲೇ ತಮ್ಮ ವ್ಯಕ್ತಿತ್ವದ ವಿಶಿಷ್ಟತೆಯನ್ನು ಕಾಪಾಡಿಕೊಳ್ಳುವ ಅಭಿವ್ಯಕ್ತಿಸುವ ಕವಿತೆಯ ಮಾದರಿಗಳನ್ನು ಬರೆದಿದ್ದಾರೆ. ಪ್ರಾತಿನಿಧಿಕವಾಗಿ ಗೀತಾ ಹಿರಣ್ಯನ್ ಮತ್ತು ಸಾವಿತ್ರಿ ರಾಜೀವನ್ ಇವರ ಕವಿತೆಗಳನ್ನು ನೋಡಬಹುದು. ಇವರಿಬ್ಬರೂ ಆಧುನಿಕ ವಿದ್ಯಾಭ್ಯಾಸ ಪಡೆದ ವೃತ್ತಿಪರರು. ಆತ್ಮವಿಶ್ವಾಸದ ಮಹಿಳೆಯರು. ಕಮಲಾದಾಸ್ ನಂತರದ ತಲೆಮಾರಿನವರು.

ಅಲೆಗಳು ಎಂಬ ಪದ್ಯದಲ್ಲಿ ಗೀತಾ ಹಿರಣ್ಯನ್ ಹೇಳುತ್ತಾರೆ,

'ಬದುಕು ನನ್ನ ಪಾಲಿಗೆ ನಿರಂತರ ಕಡಲ ಅಲೆಗಳು"

ಇವರ ಕವಿತೆಗಳಲ್ಲಿ ದೈನಂದಿನ ಬದುಕಿನ ಅತಿ ಸಾಮಾನ್ಯ ಸಂಗತಿಗಳು ಶ್ರೀಮಂತವಾದ ಧ್ವನಿಯುಕ್ತವಾದ ಸಂಕೇತಗಳಾಗಿ ಹೊರಹೊಮ್ಮುತ್ತವೆ. ಸೂಜಿ-ದಾರ, ಹೊಲಿಗೆ, ಒಂದು ಗಿಡ್ಡ ಗಿಡ, ಒಳಾಲಂಕರಣ ಇವೆಲ್ಲ ಅವರ ಕವಿತೆಗೆ ವಸ್ತುಗಳಾಗಿವೆ. "ನಿಮ್ಮ ಕಥೆಗಳಿಗೆ ಕವಿತೆಗಳಿಗೆ ಹೇಗೆ ವಸ್ತುವನ್ನು ಆರಿಸುತ್ತೀರಿ ಎಂದು ಕೇಳುವವರಿಗೆ ಅವರ ಉತ್ತರವಿದು.

"ನನಗೆ ತಿಳಿಯದು. ಎಲೆಗಳಲ್ಲಿ ಹಸಿರಿದ್ದು ನೀರು ಸಾಕಷ್ಟು ಸಿಕ್ಕರೆ, ಬಿಸಿಲು ಸಿಕ್ಕರೆ ಗಿಡವೊಂದು ಮಣ್ಣಿನಲ್ಲಿ ಬೇರು ಬಿಟ್ಟು ಹೂಬಿಡುವುದಲ್ಲವೆ. ಹಾಗೆ ಒಂದು ಸಣ್ಣ ಹರಿತ್ತಿನ ಎಳೆ ನನ್ನಲ್ಲಿರಬಹುದು. ಅದು ಹೇಗೆ ಈ ಜಗತ್ತಿನ ವಿಷಯಗಳನ್ನು ಕಥೆಯಾಗಿ ಕವಿತೆಯಾಗಿ ಪರಿವರ್ತಿಸುವುದೋ ನನಗೆ ತಿಳಿಯದು."

ಒಳಾಲಂಕರಣ ಎಂಬ ಕವಿತೆಯಲ್ಲಿ ಅವರು ತಮ್ಮನ್ನು ತಾವು ಒಂದು ಬಾನ್‌ಸಾಯ್ ಕ್ರಿಯೆಗೆ ಗುರಿಯಾದ ಗಿಡಕ್ಕೆ ಹೋಲಿಸಿಕೊಳ್ಳುತ್ತಾರೆ. ತಾನೊಂದು ಬೆಳವಣಿಗೆ ಸ್ಥಗಿತಗೊಂಡ ಬಾನ್ಸಾಯ್ ವೃಕ್ಷ ಎಂದು ಹೇಳುವಾಗ ತನ್ನ ಬೆಳವಣಿಗೆಯ ಅದ್ಭುತ ಸಾಧ್ಯತೆಗಳ ಅರಿವು ಮತ್ತು ತಾನು ಒಳಗಾದ ನಿಯಂತ್ರಣ ಶಕ್ತಿಯ ಅರಿವು ಎರಡೂ ಅವರಿಗಿದೆ. ಮತ್ತು ಅವೆರಡೂ ಅತಿ ಪ್ರಬಲ ಶಕ್ತಿಗಳಾಗಿ ಮುಖಾಮುಖಿಯಾಗಿವೆ. ಆ ಗಿಡ ಮನೆಯೊಳಗಿರುವಂಥದು. ಅದಕ್ಕೆ ನೀರೆಷ್ಟು ಬಿಸಿಲೆಷ್ಟು, ಸೂರ್ಯ ಕಿರಣಗಳೆಷ್ಟು ಅಂತ ವ್ಯವಸ್ಥೆ ಮೊದಲೇ ನಿಗದಿಪಡಿಸಿದೆ. ವಿಷಾದ ಮತ್ತು ವ್ಯಂಗ್ಯ ತುಂಬಿದ ಹರಿತ ಕವಿತೆ 'ಒಳಾಲಂಕರಣ!'

ಕೊನೆಯಿಲ್ಲದ ಕನಸುಗಳ ಪಾತಾಳಕ್ಕೆ
ಬೇರಬಲೆ ಹರಡುವುದಿಲ್ಲ.
ನೀತಿಯು ಹರಿತ ಖಡ್ಗ
ಆಗಾಗ ತಾಯಿಬೇರನ್ನು ಒಪ್ಪಗೊಳಿಸುತ್ತದೆ.
ದೇಹದ ಆನಂದ ಕಾಮಪ್ರೇಮಗಳಲ್ಲಿ
ಪುಷ್ಪಿಸುವುದಿಲ್ಲ"

ಅರ್ಧನಾರೀಶ್ವರ ಎಂಬ ಕವಿತೆಯಲ್ಲಿ ಪುರಾಣದ ಶಿವನ ಅರ್ಧನಾರೀಶ್ವರ ಕಲ್ಪನೆಯನ್ನು ತನ್ನ ತಾಯಿಯ ಮತ್ತು ತನ್ನ ಬಾಳಿನ ಚಿತ್ರದ ಹಿನ್ನೆಲೆಯಲ್ಲಿ ಒಬ್ಬ ನಾಯಕಿ ಪರೀಕ್ಷೆಗೊಳಪಡಿಸುತ್ತಾಳೆ.

ತ್ರಿಶ್ಶೂರಿನ ಪ್ರಸಿದ್ಧ ಅರ್ಧನಾರೀಶ್ವರ ದೇವಸ್ಥಾನದಲ್ಲಿ ದೀಪದ ನೆರಳುಗಳು ಗೋಡೆಯ ಮೇಲೆ ನರ್ತಿಸುತ್ತಿವೆ. ಅಲ್ಲಿಯ ಈಶ್ವರನನ್ನು ವಡಕ್ಕುನಾಥ ಎಂದು ಕರೆಯುತ್ತಾರೆ. ತಾಯಿಯ ತುಟಿಯಿಂದ ಸ್ತೋತ್ರಗಳು, ಮಾಂಗಲ್ಯ ಸೌಖ್ಯದಾಸೆಯ ಹರಕೆಗಳು ಹೊಮ್ಮುತ್ತಿವೆ. ತಾಯಿಯ ಕೈಗಳು ಚೆರುತಾಳಿಯಲ್ಲಿ ತಡೆದು ನಿಲ್ಲುತ್ತವೆ. ಆ ಪವಿತ್ರವಾದ ಚಿಕ್ಕತಾಲಿ ಮಲಿನ ದಾರದಲ್ಲಿ ಪೋಣಿಸಲ್ಪಟ್ಟಿದೆ. ಕಣ್ಣೀರು ಅಡುಗೆ ಕಲೆಗಳು ಸೇರಿವೆ. ತಾಳಿಯೂ ಮಣಿಗಳೂ ಕಣ್ಮಣಿ ತಿಲಕದ ಹಾಗೆ ಹೊಳೆಯುತ್ತಿವೆ.

ಗರ್ಭಗುಡಿಯಲ್ಲಿರುವ ದೇವರ ತೊಡೆಯ ಮೇಲೆ ಭಗವತಿ ಪಾರ್ವತಿಯೂ ಜಡೆಯಲ್ಲಿ ಒಳಸೇರಿದ ಗಂಗೆಯೂ ಶೋಭಿಸುತ್ತಿದ್ದಾರೆ.

ಏಕಪತ್ನೀವ್ರತವು ದೇವಲೋಕದಲ್ಲಿಲ್ಲವಲ್ಲಾ ಎಂದು ಕವಿ ಉದ್ಗರಿಸುತ್ತಾರೆ.

ವಿದ್ಯಾವಂತಳೂ ಆಧುನಿಕಳೂ ಆದ ಕವಿಗೆ/ನಿರೂಪಕಿಗೆ ಮಲಿನದಾರದ ಬಾಂಧವ್ಯ ಬೇಡ, ಅವರು ಬಹು ಪ್ರಬಲವಾಗಿ ಅದನ್ನು ನಿರಾಕರಿಸುತ್ತಾರೆ.

ತನ್ನ ಕನಸುಗಳ ಚಿನ್ನದ ಬೆಳದಿಂಗಳ ತಟ್ಟೆಯಲ್ಲಿ ಪ್ರಣಯದ ಸವಿ ವಿಶ್ವಾಸದ ಉಪ್ಪು ಎಂದು ಅವರ ಸೂರ್ಯ ಅವರಿಗೆ ಹೇಳುತ್ತಾನೆ. ಈ ಭೂಮಿಯಲ್ಲಿ ನನಗೆ ಬೆಳದಿಂಗಳೂ ವಸಂತಕಾಲವೂ ಮಾತ್ರ ಎಂದು ಅವರ ನಂಬಿಕೆ.

ಆದರೆ ಭೂಮಿ ತಿರುತಿರುಗಿ ಪಕ್ಷ ಕಳೆದು ಅಮಾವಾಸ್ಯೆಯ ರಾತ್ರಿಗಳನ್ನು ತರುತ್ತದೆ. ಈಗ ನಿರೂಪಕಿಯ ಪಾಲಿಗೆ ಅಳಲಿನೊಗರು ರುಚಿ ಕಣ್ಣೀರಿನುಪ್ಪು - ಎಲ್ಲಿ ಹೋಯಿತು ಆ ಸ್ನೇಹ-ಪ್ರೇಮದ ನರುಗೆಂಪು ಎಂದು ಯಾರೋ ಅವರನ್ನು ಪರಿಹಾಸ ಮಾಡುತ್ತಾರೆ. ಅವರಿಗೆ ಉತ್ತರವಿಲ್ಲ. ಬದಲಾಗಿ ಅವರು 'ವಡಕ್ಕಿನಿ'ಯಲ್ಲಿ ಅಂದರೆ ದೇವರ ಮನೆಯಲ್ಲಿ ಮೂವತ್ತಾರು ನಮಸ್ಕಾರ ಮಾಡಿಕೊಳ್ಳುತ್ತಾರೆ.

"ಅಮ್ಮಾ ಶ್ರೀಪಾರ್ವತಿ
ಗಂಗೆ ಇಂದೂ ಶಿವನ
ತಲೆಯ ಮೇಲಿದ್ದಾಳೆಯೇ?' ಎಂದು.

ಗದ್ಯಸಾಹಿತ್ಯವನ್ನೇ ಹೆಚ್ಚು ಬರೆದಿರುವ ಗೀತಾರ ಕವಿತೆಗಳು ಸಂಖ್ಯೆಯಲ್ಲಿ ಕಡಿಮೆ. ಆದರೆ ಹರಿತ ಚಿತ್ರವತ್ ತೀವ್ರ ಮತ್ತು ತಾತ್ವಿಕತೆಯನ್ನು ಒಳಗೊಂಡದ್ದು.

ಇಲ್ಲಿ ಗೀತಾ ತನ್ನ ಹಿಂದಿನ ತಲೆಮಾರಿನ ಹೆಣ್ಣಿನ ಪರಿಸ್ಥಿತಿಯನ್ನು ತನ್ನ ಪರಿಸ್ಥಿತಿಯನ್ನು ಕಾವ್ಯಾತ್ಮಕ ಪರಿಶೀಲನೆಗೆ ಒಳಪಡಿಸಿದ್ದಾರೆ.

ಕ್ರಾಸ್ ಸ್ಟಿಚ್ ಎಂಬ ಪ್ರಸಿದ್ಧ ಕವಿತೆ ಹೊಲಿಗೆಯನ್ನು ಒಂದು ಅಭಿವ್ಯಕ್ತಿಯ ಮಾದರಿಯನ್ನಾಗಿ ಬಳಸಿಕೊಳ್ಳುತ್ತದೆ.

ಗೃಹಿಣಿಯ ಬದುಕು ಮನೆಯೊಳಗಿನ ಮಹಾಪ್ರಸ್ಥಾನ - ಮನೆಯಿಂದ ಹೊರ ಹೋಗದ ಮನೆಗೆಲಸಗಳಿಗೆ ಸೀಮಿತವಾದ ಅವಳ ಬದುಕಿಗಿರುವ ಮಿತಿಗಳೇ ಅವಳ ಕಲೆಗೆ ಅದ್ಭುತ ವಾದ್ಯಮಯ ಸಾಧ್ಯತೆಗಳನ್ನು ದೊರಕಿಸಿಕೊಟ್ಟಿವೆ. ಗ್ರೀಕ್ ನಾಟಕದ ಹಾಗೆ!

ಗೃಹಿಣಿಯ ಕಲೆ ಅವಳಿಗೆ ಬಿಡುವಿರುವ ನಿಶ್ಶಬ್ದ ಮಧ್ಯಾನ್ಹಗಳಲ್ಲಿ ಅರಳುತ್ತದೆ.

**"ಹೂ ಹೊಲಿಗೆಗಳ ನಡುಹಗಲುಗಳು**
**ಭೂಮಿಯನ್ನು ಮುಚ್ಚಲು**
**ಹೊದಿಕೆ ನೇಯುವ ಹೊತ್ತು**
**ಕ್ರಾಸ್ ಸ್ಟಿಚ್ ಸಾಲುಗಳ ನಡುವೆ**
**ಒಂದು ಅಂತರ್ವೀಕ್ಷಣೆ**
**ಯಾರೆಲ್ಲ ಹುಟ್ಟಿದರು ಆ ನಡುಹಗಲುಗಳಲ್ಲಿ**
**ಮಗಳಿಗೋ ಕಿನ್ನರ ಕಥೆಗಳ ಅಪ್ಪ ಕರಡಿ**
**ಗಂಡನಿಗೆ**
**ಪ್ರೀತಿ ಹೊಳೆಯಲ್ಲಿ ನೋವುಣ್ಣುತ್ತಾ**
**ಹರಿಹರಿದು ಬರುವ ಹೂ ಹುಡುಗಿ**
**ಹೆಚ್ಚುತ್ತ ಹೋಗುವ ಹೊಲಿಗೆಯದ್ಭುತ ಚಿತ್ರಗಳು"**

ಇಲ್ಲಿ ಅವಳು ತನ್ನ ಸೀಮಿತ ಬದುಕನ್ನು ಒಂದು ಕಸೂತಿಯ ಮಾದರಿಯಾಗಿಸಿದ್ದಾಳೆ. ಕಲೆಯಾಗಿಸಿದ್ದಾಳೆ. ಅದು ಒಂದು ಹೊದಿಕೆ - ಚೀಲ - ದಿಂಬಿನ ಕವರು. ಹೀಗೆ ದೈನಂದಿನ ಬದುಕಿಗೆ ಉಪಯುಕ್ತವಾದ ಯಾವುದೇ ವಸ್ತು ಆಗಬಹುದು.

ಗೀತಾರ ಈ ಎರಡು ಕವಿತೆಗಳು. ಅರ್ಧನಾರೀಶ್ವರ ಮತ್ತು ಕ್ರಾಸ್‌ಸ್ಟಿಚ್. ಮಲೆಯಾಳಂ ಮಹಿಳಾಕಾವ್ಯದ ಇನ್ನೊಂದು ದನಿ. ಇಲ್ಲಿಯ ಕವಿ, ಉದ್ಯೋಗ ಮತ್ತು ವಿದ್ಯಾಭ್ಯಾಸ ಹೊರಜಗತ್ತಿನ ಪರಿಚಯ, ಈ ಎಲ್ಲ ಬೆಳಕಿಗೆ ತೆರೆದುಕೊಂಡರೂ ಹೆಣ್ಣಿನ ಬದುಕಿನ ಕತ್ತಲ ಮೂಲೆಗಳನ್ನು ಅನಾವರಣ ಮಾಡುವವಳು ಮತ್ತು ಕುಟುಂಬ ವ್ಯವಸ್ಥೆಯನ್ನು ಪೂರ್ಣ ಧಿಕ್ಕರಿಸಿ ಹೋಗುವವಳಲ್ಲ.

ನಾನು ಈ ಮಾತಿಗೆ ಪುಷ್ಟಿಯಾಗಿ ಚರ್ಚಿಸಲು ಆರಿಸಿಕೊಂಡಿರುವ ಇನ್ನೊಬ್ಬ ಕವಯಿತ್ರಿ ಸಾವಿತ್ರಿ ರಾಜೀವನ್. ಕವಿ, ಕಥೆಗಾರ್ತಿ, ಚಿತ್ರಗಾರ್ತಿ. ತಾನು ಆ್ಯಕ್ಟಿವಿಸ್ಟ್ ಅಲ್ಲ ಎಂದು ದೃಢವಾಗಿ

ಹೇಳುವ ಸಾವಿತ್ರಿಯವರು ಆಧುನಿಕ ಜಗತ್ತಿನ ಕುಟುಂಬವನ್ನು ಪ್ರೀತಿಸುವ ದೆಹಲಿ, ಬರೋಡಾ ಮತ್ತು ಪಾಲಕ್ಕಾಡ್‌ಗಳ ನಡುವೆ ಮೂರು ಪಾದಗಳನ್ನಿಟ್ಟು ನರ್ತಿಸುತ್ತಾ ಇರುವ ಹಳೆ ತಲೆಮಾರಿನ ಗಟ್ಟಿ ತಿಳುವಳಿಕೆಗಳನ್ನೂ, ಹೊಸ ತಲೆಮಾರಿನ ತ್ರಿವಿಕ್ರಮ ಆತ್ಮವಿಶ್ವಾಸವನ್ನೂ ಹೊಂದಿರುವ ಪ್ರಸನ್ನ ಹಾಸ್ಯಪ್ರಜ್ಞೆಯ ಮಹಿಳೆ.

ಪ್ರತಿಷ್ಠಾ ಎಂಬ ಕವಿತೆ ಬಹು ಶಕ್ತಿಯುತವಾಗಿ ಕುಟುಂಬದಲ್ಲಿ ಸ್ತ್ರೀಯ ಪಾತ್ರವನ್ನು, ಆ ಪಾತ್ರವನ್ನು ನಿರ್ವಹಿಸುವಲ್ಲಿ ಅವಳ ಅಸ್ತಿತ್ವವೇ ಸಂಪೂರ್ಣ ಇಲ್ಲದಂತಾಗುವ ಸತ್ಯವನ್ನು, ಆ ಸವಾಲನ್ನೆದುರಿಸಿ ಅವಳು ತನ್ನ ಇರುವಿಕೆಯನ್ನು ಗಟ್ಟಿಗೊಳಿಸಿಕೊಳ್ಳುವ ಚಿತ್ರವನ್ನು ಕೊಡುತ್ತದೆ. ಈ ಅನುಭವ-ತೊಳಲಾಟ ಕುಟುಂಬದ ಜೊತೆಗೆ ತನ್ನನ್ನು ತಾನು ಗುರ್ತಿಸಿಕೊಳ್ಳುವ ಎಲ್ಲ ಮಹಿಳೆಯರಿಗೂ ಆಗುವ ಸರ್ವೇಸಾಮಾನ್ಯವಾದ ಅನುಭವ ಅದು. ಸಾವಿತ್ರಿಯವರಲ್ಲಿ ಕವಿತೆಯಾಗುತ್ತದೆ.

ಅಡುಗೆ ಮಾಡುತ್ತ, ಮಾಡಿದ ಅಡುಗೆಗಳನ್ನು ಒಳ್ಳೆ ಮಾತಾಡಿ ಬಡಿಸುತ್ತ, ಗೃಹಿಣಿಯ ಬದುಕು ಸಹ ಒಂದು ಸವೆದು ಹೋದ ಅಡುಗೆ ಮನೆಯುಪಕರಣದಂತೆ ಆಗಿದೆ.

ಮಕ್ಕಳು ಸಹ ಆಕೆಯ ಮೇಲೆ ಆವೇಶದಲ್ಲೆಗರಿ ಬೀಳುವರು, ಮೆಚ್ಚಿನ ಆಟದ ಬೊಂಬೆಗೆ ಹೇಳುವಂತೆ ಆಕೆಗೆ ಆಜ್ಞಾಪಿಸುವರು. ಅವಳ ಚಟುವಟಿಕೆಗಳನ್ನು ಜಗತ್ತು ಮೃಗಶಾಲೆಯ ಪ್ರಾಣಿಗಳನ್ನೋ ಕಂಬಿಯ ಮೇಲಾಡುವ ಗಿಳಿಯನ್ನೋ ನೋಡುವಂತೆ ಕಂಬಿಗಳಾಚೆಯಿಂದ ನೋಡುತ್ತದೆ. ಅವಳ ವ್ಯಕ್ತಿತ್ವಕ್ಕೆ ಅನೇಕ ಆಯಾಮಗಳಿವೆ. ಕೆಡುಕನ್ನು ನಾಶ ಮಾಡುವ ಚಾಮುಂಡಿ, ಕಾವ್ಯಗಳಲ್ಲಿ ಗಾಳಿಗೆ ಒಲೆಯುವ ಬಿಳಿದಾವರೆ, ಕಪ್ಪು ಕೂದಲಲ್ಲಿ ತುಳಸಿಯ ತೆನೆ ಮುಡಿದು ಹಣೆಗೆ ಚಂದನ ಹಚ್ಚಿದ ದೇವತೆ -

"ಇದೆಲ್ಲಾ ಕೆಲವೊಮ್ಮೆ
ಆದರೆ ನಾ ಬಲ್ಲೆ
ನಾನು ಗುಡಿಯಲ್ಲಿ ಪ್ರತಿಷ್ಠೆಗೊಂಡ
ಒಂದು ಮನೆಯುಪಕರಣ.
ಅಡಿಗೆ ಮನೆಯಲ್ಲಿ
ಸವೆದು ಹೋಗುತ್ತಿರುವ ಒಂದು ಉಪಕರಣ ನಾನು"

ಸಾಂಪ್ರದಾಯಿಕ ಜಗತ್ತು ಕೃಷ್ಣನ ಮಾದರಿಯೊಂದನ್ನು ಪೂಜಿಸುವಾಗ ಹಾಡಿ ಹೊಗಳುವಾಗ ಅದಕ್ಕಿಂತ ಭಿನ್ನವಾಗಿ ಕೃಷ್ಣನನ್ನು ನೋಡುವ ಈ ದನಿ ವಿಶಿಷ್ಟವಾದದ್ದು.

ಅವನಿಗೆ ಅನೇಕ ತಾಯಿಯರು, ಅನೇಕ ತಂದೆಯರು. ಅವನು ಕೋಮಲ ಮಲಯ ಸಮೀರ, ಆಲದೆಲೆಯ ಮೇಲೆ ತೇಲುವ ಶಿಶು, ದಧಿಭಾಂಡ ಖಂಡನ ಚತುರ, ಅಸ್ಖಲಿತವ ಗೀತಾ ಕವಿ. ಅರಿ, ವೀರ - ಕೆಳೆ ಸಾರಥಿ. ಇಂಥ ಕೃಷ್ಣನನ್ನು ಹೇಗೆ ಪ್ರೀತಿಸಲಿ ಎಂದು ಹೆಜ್ಜೆ ಹೆಜ್ಜೆಗೂ ಕೇಳುತ್ತಾ ಕೊನೆಗೆ ಕವಿ 'ನಾನೇಕೆ ಅವನನ್ನು ಪ್ರೀತಿಸಲಿ' ಎಂದು ಪ್ರಶ್ನಿಸುತ್ತಾರೆ.

ಬಾಲಾಮಣಿ ಅಮ್ಮರವರಲ್ಲಿ ಸಾಂಪ್ರದಾಯಿಕವಾದ ಕೊಡಲಿಯ ಕಥೆಯೊಳಗೇ ಹುದುಗಿರುವ ರೇಣುಕೆಯ ಕಥೆ, ಕಮಲಾದಾಸ್‌ರವರಲ್ಲಿ ಪ್ರಿಯತಮ ಕೃಷ್ಣ ಮತ್ತು ಪತಿ ಅನಯ - ಅಥವಾ ಅನ್ಯ ಇದು. ಮಲೆಯಾಳಂ ಮಹಿಳಾ ಕಾವ್ಯದ ಒಂದು ದನಿ.

ಗೀತಾ ಮತ್ತು ಸಾವಿತ್ರಿಯರಲ್ಲಿ ಗೃಹಿಣೀ ಪಟ್ಟ ಮತ್ತು ಸ್ತ್ರೀತ್ವ ಯಾವುದನ್ನೂ ನಿರಾಕರಿಸದೆ ಕುಟುಂಬವ್ಯವಸ್ಥೆಯನ್ನು ಒಡೆಯದೇ, ನಾಶ ಮಾಡದೇ ಅದನ್ನು ಪ್ರೀತಿಸುತ್ತ, ಛೇಡಿಸುತ್ತ ವಿಡಂಬಿಸುತ್ತ ಗಟ್ಟಿಯಾಗುವ ಆಧುನಿಕ ಸ್ತ್ರೀಯ ದನಿ.

ಈ ಎರಡು ದನಿಗಳು ಮಲೆಯಾಳಂ ಮಹಿಳಾ ಕಾವ್ಯದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

ಹೀಗೆ ಮಲೆಯಾಳಂ ಮಹಿಳಾಕಾವ್ಯ ನಡೆದು ಬಂದ ಹಾದಿಯಲ್ಲಿ ಕೆಲವು ಮೈಲಿಗಲ್ಲುಗಳು ಇವೆ. ಇಂಥ ಮೈಲಿಗಲ್ಲುಗಳನ್ನು ನಾವು ಕನ್ನಡ ಮಹಿಳಾಕಾವ್ಯದಲ್ಲೂ ಕಾಣಬಹುದು. ನಮಗೆ ಫ್ರೆಂಚ್ ಸಾಹಿತ್ಯ, ಕಪ್ಪು ಲೇಖಕಿಯರ ಬರಹಗಳು, ಸ್ವಾಹಿಲಿ ಜನಪದ ಕಥೆಗಳು, ಮಾಷಾ ಸಾರ್ಮನ್ ಇವರೆಲ್ಲ ಗೊತ್ತಾಗಿದ್ದಾರೆ. ಇಂಗ್ಲಿಷೆಂಬ 'ಮಿಸ್ಸಿನ' ಮೂಲಕ. ಹಾಗೇ ನೆರೆಮನೆಯಾಕೆಯ ಹಾಡನ್ನು ಅರಿಯುವುದು ಈ ಕಾಲದ ಅಗತ್ಯವೂ ಹೌದು. ನೆರೆಮನೆಯ ಮಾಮಿಯನ್ನು ಮಾತಾಡಿಸಿ ಸ್ವಲ್ಪ ಪರಿಚಯ ಮಾಡಿಕೊಂಡರೆ ನೆರೆಮನೆಯಾಕೆಯ ಹಾಡು-ಪಾಡು ಸ್ವಲ್ಪವಾದರೂ ಅರಿವಾಗುತ್ತದೆ. ಅದು ನಮ್ಮ ಕಾವ್ಯಸೃಷ್ಟಿಗೆ - ಸಾಮಾಜಿಕ ಹೋರಾಟಕ್ಕೆ ಒಂದು ಹೊಸ ಆಯಾಮವನ್ನು ಕೊಡಬಹುದು. ಪ್ರತಿಯೊಂದು ಭಾಷೆಗೂ ಅವರದೇ ಒಂದು ಗೂಢಸ್ಪರ್ಶವಿರುತ್ತದೆ. ಯಾವ ಭಾಷೆಯೂ ತನ್ನೆಲ್ಲ ಒಳಗುಟ್ಟುಗಳನ್ನು ಒಂದೇ ಸಾರಿಗೆ ಬಿಟ್ಟುಕೊಡುವುದಿಲ್ಲ. ಹಾಗೆ ಈ ಲೇಖನ - ನಾನು ಹೊಸ ಓದುಗಳಾಗಿ ಕಲಿತದ್ದನ್ನು. ನಾನೂ ಒಬ್ಬ ಶಿಬಿರಾರ್ಥಿಯಾಗಿ, ಸಾಹಿತ್ಯದ ವಿದ್ಯಾರ್ಥಿಯಾಗಿ ನನ್ನ ಸಹ ಶಿಬಿರಾರ್ಥಿಗಳೊಡನೆ ಹಂಚಿಕೊಳ್ಳುವ ಒಂದು ನಮ್ರ ಪ್ರಯತ್ನವಷ್ಟೆ. ಕುತೂಹಲಿಗಳಿಗೆ ಉಪಯುಕ್ತವಾಗಬಹುದಾದ ಕೆಲವು ಪುಸ್ತಕಗಳ ಪಟ್ಟಿಯನ್ನು ಈ ಕೆಳಗೆ ಕೊಟ್ಟಿದ್ದೇನೆ. ನಾನು ಸಹ ಈ ಪುಸ್ತಕಗಳಿಂದ ಉಪಕೃತಳಾಗಿದ್ದೇನೆ. ನೇರವಾಗಿ ಉದ್ಧರಣಗಳನ್ನು ನಾನು ಕೊಡದಿದ್ದರೂ ಈ ಪುಸ್ತಕಗಳು ನನ್ನ ಅರಿವನ್ನು ಹೆಚ್ಚಿಸಿವೆ ಎಂಬುದನ್ನು ಅವಗಣಿಸುವಂತಿಲ್ಲ.

೧. 'ಪೆಣ್‌ಪಟಿಕ್ಕಳ್' - ಮಲೆಯಾಳ ಕವಿತೆ. ಪತ್ರಿಕೆಯ ವಿಶೇಷ ಮಹಿಳಾ ಸಂಚಿಕೆ - ಸಂ. ಕೆ. ಜಿ. ಶಂಕರಪಿಳ್ಳೈ

೨. In their own voice : Ed. Arlene A.K.Zide
The Penguin Anthology of contemporary Indian women poets

೩. The guarded Tongue, Womens writing and sensorship in India - Women's world and Asmita 2001 (Edited by a core group of women)

೪. Just between us - Women's world and Asmita, 2004 (Edited by a core group of women)

೫. ಅಭಿನವ ಚಾತುರ್ಮಾಸಿಕ - ಮಲೆಯಾಳಂ ಕವಿತೆಗಳ ವಿಶೇಷ ಸಂಚಿಕೆ.

# ಹೆಣ್ಣಾಗಿ ಹುಟ್ಟಿದ ತಪ್ಪಿಗಾಗಿ : ಅಜಿತ್ ಕೌರ್

✍ ಡಾ. ಮಲ್ಲಿಕಾ ಘಂಟಿ

ಮೊದಲ ತಪ್ಪು - ಹೆಣ್ಣಾಗಿ ಹುಟ್ಟಿದ್ದು
ಎರಡನೆಯ ತಪ್ಪು - ಒಂಟಿಯಾಗಿರುವುದು
ಮೂರನೆಯ ತಪ್ಪು - ಆರ್ಥಿಕವಾಗಿ ಸ್ವತಂತ್ರಳಾಗಿರುವುದು.

ಎಲ್ಲ ಮಹಿಳೆಯರು ಈ ಮೂರು ತಪ್ಪುಗಳನ್ನು ಮಾಡುವುದಾಗಿದ್ದರೆ ಬದುಕಿನ ಬಣ್ಣವೇ ಬದಲಾಗುತ್ತಿತ್ತು. ಇಂತಹ ತಪ್ಪುಗಳನ್ನು ಮಾಡಿದವರು ಚರಿತ್ರೆಯಲ್ಲಿ ಕ್ವಚಿತ್ತಾಗಿ ಸಿಗುತ್ತಾರೆ. ಹೆಣ್ಣಾಗಿ ಹುಟ್ಟಿಯೂ ಹೆಣ್ಣಾಗದವರು ಗಂಡಸಿನ ಹಿಡಿತಕ್ಕೆ ಸಿಕ್ಕು ಹಣ್ಣಾಗಿರುವರು. ಹಿಡಿತಕ್ಕೆ ಸಿಗದಾಗ ಹುಣ್ಣಾಗಿಯೂ, ಕೊಳೆತ ಹಣ್ಣಾಗಿಯೂ ತಿಪ್ಪೆಗೆಸೆಯಲ್ಪಟ್ಟಿರುವರು. ಯಾವುದೇ ಜೀವವೊಂದು ತನ್ನ ಹುಟ್ಟನ್ನು ಶಪಿಸುವುದು ಸಂಕಟದಿಂದ. ಈ ಸಂಕಟ ಅಕ್ಕನಿಂದ ಪ್ರಾರಂಭಿಸಿ ನಮ್ಮನ್ನು ಕಾಡುತ್ತಿದೆ. ದೇಹ ಮಾತ್ರದಿಂದಲೇ ಅಪಮಾನ, ನೋವು, ಹಿಂಸೆ, ನಿಂದೆ, ಪರೀಕ್ಷೆಗೆ ಒಳಗಾದ ಅಕ್ಕ ನೊಂದು ತನ್ನ ದೇಹವನ್ನೇ 'ಸುಡಲಿ ದೇಹವ' ಎಂದು ಜರಿದುಕೊಳ್ಳುವುದು. ಸ್ವನಿಂದನೆಗೊಳಗಾಗುವುದು, ಕೀಳರಿಮೆಯಿಂದ ಕುಗ್ಗಿ ಹೋಗಿರುವುದೆಲ್ಲ ಸಮಾಜ, ಸಂಸ್ಕೃತಿ ಕಾರಣದಿಂದಲೇ. ಅದೇ ಅಳಲು - ಆತಂಕ ಆಧುನಿಕ ಮಹಿಳೆಯರನ್ನು ಕಾಡುತ್ತಿದೆ.

ಪಂಜಾಬಿ ಲೇಖಕಿ ಅಜಿತ್‌ಕೌರ್‌ರ 'ಖಾನಾಬದೋಷ್' ಎಂಬ ಆತ್ಮಕಥೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ಇದನ್ನು 'ಅಲೆಮಾರಿ' ಎಂಬ ಹೆಸರಿನಲ್ಲಿ ವಿಜಯಲಕ್ಷ್ಮಿ ಅರಸ್ ಮತ್ತು ಲವ್ ಲೀನ್ ಜಾಲಿ ಕನ್ನಡಕ್ಕೆ ಅನುವಾದ ಮಾಡಿರುವರು. ಆತ್ಮಕಥೆಯೆಂಬುದು ಸಾಮಾಜಿಕ ಶೋಧವೂ ಹೌದು ಚರಿತ್ರೆಯ ಭಾಗವೂ ಹೌದು. ಚರಿತ್ರೆಯ ಭಾಗವಾದಾಗ ಮಾತ್ರ ಆತ್ಮಕಥೆ ಸಾರ್ವತ್ರಿಕತೆ, ಸಾರ್ವಕಾಲಿಕತೆಯನ್ನು ಪಡೆದುಕೊಳ್ಳಲು ಸಾಧ್ಯ.

ಜಗತ್ತಿನ ಮಹಿಳೆಯರೆಲ್ಲ ಒಂದೇ ಭಾಷೆಯಲ್ಲಿ ನಿರಂತರ ಮಾತನಾಡುತ್ತಾರೆ. ಆ ಭಾಷೆಗೆ ವ್ಯಾಕರಣ, ಲಿಪಿ ಎಂಬುದಿಲ್ಲ. ಆ ಭಾಷೆ ಕಂಡುಹಿಡಿದವರು ಮತ್ತು ಪ್ರಸಾರ - ಪ್ರಯೋಗ ಮಾಡುವವರು ಮಾತ್ರ ಪುರುಷರು ಮತ್ತು ಪುರುಷರ ಹಾಗೇ ಇರುವ ಹೆಂಗಸರು. ಆ ಭಾಷೆಯ ಹೆಸರು ನೋವು ಬರೀ ನೋವು. ಹೆಣ್ಣಿನ ನೋವಿಗೆ ವರ್ಗ-ಜಾತಿ, ದೇಶ-ವಿದೇಶಗಳೆಂಬ ವ್ಯತ್ಯಾಸವಿಲ್ಲ. ನೋವಿಗೂ ಹೆಣ್ಣಿಗೂ ಅವಿನಾಭಾವ ಸಂಬಂಧ. ಪ್ರಪಂಚಕ್ಕೆ ಕಾಲಿಡದೆಯೂ ಹೆಣ್ಣು ಎಂಬ ಕಾರಣದಿಂದ ಗರ್ಭದಲ್ಲಿಯೇ ಆತಂಕದಿಂದ ಬದುಕುವ ಸ್ಥಿತಿ ಹೆಣ್ಣಿನದು. ಈ ಆತಂಕ ನಿಸರ್ಗ, ಪ್ರಕೃತಿ ಮೂಲದ್ದಲ್ಲ. ಪುರುಷ ಮೂಲದ್ದು. ಮಾತು ಗಂಡಿಗೆ ವರವಾದರೆ ಹೆಣ್ಣಿಗೆ ಶಾಪವಾಗಿದೆ. ಅದಕ್ಕೆಂದೆ ಮೌನಗೌರಿಯ ರೂಪಕಗಳು ಹುಟ್ಟಿಕೊಂಡಿವೆ. ಮೌನಗೌರಿಯೆಂದು ಬಿರುದಾಂಕಿತ ಮಹಿಳೆಯರು ವೈಯಕ್ತಿಕ ನೆಲೆಯಲ್ಲಿ ಆಗಾಗ ಸ್ಫೋಟಿಸಿರುವರು. ಈ ಸ್ಫೋಟ ಕಾಣಿಸಿಕೊಳ್ಳುವುದು ಮೊದಲಿಗೆ ಸಮಾಜದ ಹುಟ್ಟು ಮತ್ತು ಬೆಳವಣಿಗೆಗೆ ಸಮರ್ಥ ಘಟಕವೆಂದು ಕರೆಯಲ್ಪಡುವ ಕುಟುಂಬದಲ್ಲಿ. ಕುಟುಂಬ ನೆಲೆಯಲ್ಲಿ ಕಾಣಿಸಿಕೊಳ್ಳುವ ಈ ಸ್ಫೋಟ ಸಮಾಜದ ಭಾಗವಾಗಿರುತ್ತದೆ ಎಂಬುದನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಗ್ರಹಿಸಬೇಕು. ಯಾವ ದೇಶ, ಸಮಾಜ, ಕುಟುಂಬ ಹೆಣ್ಣನ್ನು ಪ್ರಧಾನವೆಂದು, ಸಮಾನವೆಂದು ಭಾವಿಸುವುದಿಲ್ಲವೋ ಆ ಸಮಾಜ, ದೇಶ ರೋಗಗ್ರಸ್ಥಗೊಂಡಿರುತ್ತದೆ. ಇದು ಒಳರೋಗ, ಪ್ರಧಾನ ಸಂಸ್ಕೃತಿಯಿಂದ ಹೊರಗಿಡಲ್ಪಟ್ಟ ವ್ಯಕ್ತಿ ಮತ್ತು ಸಮುದಾಯಗಳು ಕೂಡ ಹೆಣ್ಣನ್ನು ಅನ್ಯಾಶ್ರಯದಲ್ಲಿರಬೇಕೆಂಬ ಸಾಮಾಜಿಕ ಅನುಶಾಸನವನ್ನು ಧರ್ಮಸೂಕ್ಷ್ಮಗಳ ಮೂಲಕ ಪಾಲಿಸುತ್ತಿವೆ. ಈ ಧರ್ಮಸೂಕ್ಷ್ಮತೆಯನ್ನೆಲ್ಲ ಗಂಡಸೇ ಕಂಡು ಹಿಡಿದ ಕಾರಣ ಹೆಣ್ಣನ್ನು ದೇಹ ಮೂಲದಿಂದಲೇ ಗುಲಾಮಗಿರಿಗೆ ಒಳಪಡಿಸಲಾಗಿದೆ.

ಸ್ವತಂತ್ರ್ಯ ಅಸ್ತಿತ್ವವಿಲ್ಲದೆ, ಅನ್ಯಾಶ್ರಯದ ಹಂಗಿನರಮನೆಯ, ಒಡೆಯನ ಸಂತತಿಯನ್ನು ಹೆತ್ತು ಕೊಡುವ ತೊಗಲು ಚೀಲವಾದ ಹೆಣ್ಣನ್ನು ನಿರಂತರ ಕಾಲ್ಚೆಂಡಿನಂತೆ ಒದೆಯಲಾಗುತ್ತದೆ. ಹುಟ್ಟಿದ ಮನೆಯಿಂದ ಕೊಟ್ಟ ಮನೆಗೆ, ಕೊಟ್ಟ ಮನೆಯಿಂದ ಹುಟ್ಟಿದ ಮನೆಗೆ ಅಟ್ಟಲ್ಪಡುವ ಈ ಕಾಲ್ಚೆಂಡನ್ನೇ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆಂದು ಕರೆಯಲಾಗಿದೆ. ಹೆಣ್ಣನ್ನು ಸಂಪತ್ತಿನ ಭಾಗವಾಗಿಸಿರುವ ಸಮಾಜ ನಿರಂತರ ಅದನ್ನು ಕಾಯುವ ಭಯದಿಂದ ಸುರಕ್ಷಿತವೆಂದು ಭಾವಿಸಿರುವ ಜಾಗಗಳಿಗೆ ರವಾನಿಸುತ್ತಲೇ ಇರುತ್ತದೆ. ಹೀಗಾಗಿಯೇ ಹೆತ್ತ ಮಗಳನ್ನು ತಂದೆ ತಾಯಿಗಳು ಬಹಳ ದಿವಸ ಮನೆಯಲ್ಲಿಟ್ಟುಕೊಳ್ಳಲು ಸಿದ್ಧರಿಲ್ಲದೆ ಕನ್ಯಾದಾನಕ್ಕಾಗಿ ಹಂಬಲಿಸುವರು. ಬೆಳೆದ ಮಗಳನ್ನು ಮನೆಯಲ್ಲಿಟ್ಟುಕೊಳ್ಳುವುದೆಂದರೆ ಉಡಿಯಲ್ಲಿ ಬೆಂಕಿ ಕಟ್ಟಿಕೊಂಡಂತೆ ಎಂದು ಭಾವಿಸಲಾಗಿದೆ. ಉಡಿಯಲ್ಲಿಯ ಬೆಂಕಿ ನಂದಿಸಲು ಅಗ್ನಿಶಾಮಕ ಕೇಂದ್ರಗಳಂತೆ ಗಂಡನ ಮನೆ, ಅಗ್ನಿರಕ್ಷಕರಾಗಿ ಗಂಡ, ಗಂಡಸರು ಸಿದ್ಧರಾಗಿಯೇ ಇರುವರು. ಉಡಿಯಲ್ಲಿಯ ಬೆಂಕಿಯೆಂದು ಭಾವಿಸಿದ ಹೆತ್ತ ಮಗಳನ್ನು ಗಂಡನ ಮನೆಗೆ ಹೊತ್ತು ಹಾಕುವುದರ ಮೂಲಕ ತಂದೆ ತಾಯಿಗಳು ಜವಾಬ್ದಾರಿಯಿಂದ, ಕಾಯುವ ಭಯದಿಂದ ಬಿಡುಗಡೆ ಹೊಂದಿದರೆ ಪಡೆದುಕೊಂಡವರು, ಮನೆ ತುಂಬಿಸಿಕೊಂಡವರು, ಸಂಬಳ ರಹಿತ ಜೀತದಾಳೊಂದು ಸಿಕ್ಕಿದ

ಸಂಭ್ರಮ ಆಚರಿಸುವರು. ಇದು ನಮ್ಮ ಸಮಾಜದ ಚಿತ್ರಣ. ಈ ಚಿತ್ರಣ ಯಾವುದೇ ಮಾಂತ್ರಿಕನ ಮಂತ್ರದಂಡದಿಂದಲೂ ಇಲ್ಲಿಯವರೆಗೂ ಬದಲಾಗಿಲ್ಲ. ಬದಲಾಗಬೇಕೆಂದರೆ ಸೀತೆ ಸಾವಿತ್ರಿಯರ ಹಾದಿಯನ್ನು ಹಿಡಿಯಬೇಕಾಗಿಲ್ಲ. ಚಂಡಿ-ಚಾಮುಂಡಿಯರ ಅವತಾರವನ್ನು ಎತ್ತಬೇಕಾಗಿಲ್ಲ. ಮಹಿಳೆಯರ ಬದುಕು ಬದಲಾಗಬೇಕೆಂದರೆ ಸ್ವತಃ ಮಹಿಳೆಯರೇ ತಮ್ಮ ತಮ್ಮ ವಿವೇಕವನ್ನೇ ಮಂತ್ರದಂಡವಾಗಿಸಿಕೊಳ್ಳಬೇಕು. ವಿವೇಕದ ಮಂತ್ರದಂಡ ಬಳಕೆ ಮಾಡಿದ ಮಹಿಳೆಯರೆಲ್ಲ ಚರಿತ್ರೆಯಲ್ಲಿ ಬುದ್ಧಿ ಭ್ರಮಿತರೆಂದೊ, ಉನ್ಮತ್ತೆಯರೆಂದೋ, ಗಯ್ಯಾಳಿ, ಕುಲಟೆಯರೆಂದೋ, ಮನೆಹಾಳಿ, ಮನೆಮುರಕಿ, ಲಜ್ಜೆಗೆಟ್ಟವಳು, ಜಗಳಗಂಟಿಯರೆಂದೋ ಬಿರುದಾಂಕಿತೆಯರಾಗಿರುವರು. ಇಲ್ಲವೇ ದೇವತೆ, ತ್ಯಾಗಮಯಿ, ಸಹನಾಮಯಿ, ಭೂಮಿ ತೂಕದವಳೆಂದು ಕರೆಯಿಸಿಕೊಂಡು ದೈವತ್ವಕ್ಕೇರಿ ಮುಟ್ಟಿಸಿಕೊಳ್ಳದ ಹಾಗೆ, ಮುಟ್ಟದ ಹಾಗೆ ದೂರವಿಡಲಾಗಿದೆ. ಈ ಉಚ್ಚ, ನೀಚ ನೆಲೆಯಲ್ಲಿಡಲ್ಪಟ್ಟ ಆಧುನಿಕ ಮಹಿಳೆಯರ ಬಿಡುಗಡೆ, ಕತ್ತಲೆಯ ಬದುಕಿಗೆ ಬೆಳಕು ತೋರುವ ದಾರಿದೀಪಗಳಾಗಿ ಆತ್ಮಕಥೆಗಳು ನಿಲ್ಲಬಲ್ಲವು.

ಈ ಶತಮಾನದ ಅಂತ್ಯ ದಮನಿಸಲ್ಪಟ್ಟ ಹೆಣ್ಣು ಸ್ಫೋಟಿಸುವ ಅಗಾಧ ಶಕ್ತಿಯನ್ನು ಹಲವು ಮೂಲಗಳಿಂದ ಒದಗಿಸಿದೆ. ಅಕ್ಷರ, ಅರಿವು, ಅರ್ಥಮೂಲದಲ್ಲಿ ಸಬಲಳಾದ ಹೆಣ್ಣು ತನ್ನ ಬಂಧನದ ಕಾರಣಗಳನ್ನು ಕಂಡುಹಿಡಿದಿರುವಳು. ಅವುಗಳಿಂದ ಬಿಡುಗಡೆ ಹೊಂದಲು ಕುಟುಂಬದೊಳಗೆ ಹೊರಗೆ ಶೀತಲ ಸಮರಕ್ಕೆ ಸಿದ್ಧಳಾಗಿರುವುದೆಲ್ಲ ಚರಿತ್ರೆಯ ಒತ್ತಡದಿಂದ. ಬದುಕುವ ಹಕ್ಕಿಗಾಗಿ, ಬೆಳೆಯುವ ಅವಕಾಶಗಳಿಗಾಗಿ, ಸಮಾನತೆಗಾಗಿ ಸ್ವಾತಂತ್ರ್ಯವನ್ನು ಬಳಸಿಕೊಳ್ಳಲು ಮುಂದಾದ ಮಹಿಳೆಯರಿಗೆ ಮತೀಯವಾದಿಗಳು, ಪುರುಷ ಅಹಂಕಾರ, ಕ್ರೌರ್ಯ ಗಡಿಪಾರಿನಂತಹ ಶಿಕ್ಷೆ, ಕೊಲ್ಲಲು ಫತ್ವಾ ಹೊರಡಿಸುವಷ್ಟರ ಮಟ್ಟಿಗೆ ಅಸಹಾಯಕರಾಗಿರುವುದೇ ಮಹಿಳೆಯರಿಗೆ ದೊರೆತ ಮೊದಲ ಜಯ. ಸನಾತನವಾದಿಗಳು, ಕೋಮುವಾದಿಗಳು ಹೆಣ್ಣಿನ ಮೇಲಿನ ತಮ್ಮ ಹಿಡಿತ ಸಡಿಲಗೊಳ್ಳುವ ಭಯದಿಂದಲೇ ಅಕ್ಷರ ಮತ್ತು ಹಣದಿಂದ ಆಕೆಯನ್ನು ದೂರವಿಟ್ಟಿರುವರು. ಇವು ವ್ಯಕ್ತಿಯೊಬ್ಬನ ಬಾಯಿ ತೆಗೆಸುವ ಬೀಗದ ಕೈಗಳು. ಈ ಬೀಗದ ಕೈಗಳೆಲ್ಲ ಮೇಲ್‌ಜಾತಿ ಮತ್ತು ಸಬಲ ಗಂಡಸರ ಜೇಬುಗಳಲ್ಲಿರುವುದರಿಂದ ಅಸಹಾಯಕರು ಒಂದು ಹಂತದವರೆಗೂ ಲಿಂಗಭೇದವಿಲ್ಲದ ಹಾಗೇ ದಮನಿಸಲ್ಪಟ್ಟಿರುವರು. ವಿದ್ಯೆ ಮತ್ತು ಸಂಪತ್ತಿನಿಂದ ಹೆಣ್ಣನ್ನು ಮತ್ತು ಶೂದ್ರನನ್ನು ದೂರವಿಡಬೇಕೆಂದು ನಿರೂಪ ಹೊರಡಿಸಿದ ವ್ಯಕ್ತಿ ಮನು. ಈ ಮನು ಸಂಜಾತರು ಇಂದು ಭೂಗೋಲದ ತುಂಬ ಹೆಣ್ಣು ಬೇಟೆಗೆ ಮತ್ತು ಸಲ್ಮಾನ್ ರಶ್ದಿಯಂಥವರ ಬೇಟೆಗೆ ತೊಡಗಿರುವರು. ಇವರೆಲ್ಲ ಖೋಮೇನಿಯ ಆಕಾರದಲ್ಲಿರುವರು. ತಸ್ಲೀಮಾ ನಸ್ರೀನಳಂಥವಳು ದೇಶದಿಂದ ದೇಶಕ್ಕೆ ಜೀವಭಯದಿಂದ ಅಲೆಯುವಂತಾಗಿದೆ. ಗಂಡಸಿನ ಖಾಸಗಿ ಅನುಭವಗಳ ಸಂಗ್ರಹಕಾರಳಾದ ಹೆಣ್ಣಿನ ನೆತ್ತಿಯ ಮೇಲೆ ಗಂಡಸರು ತೂಗುಕತ್ತಿಯಂತೆ ತೂಗುತ್ತಲೇ ಇರುವರು. ಕುಟುಂಬ ಗೌರವ, ಮರ್ಯಾದೆ, ಮಕ್ಕಳ ಭವಿಷ್ಯ, ಸಾಮಾಜಿಕ ಸ್ಥಾನಮಾನ ಮುಂತಾದ ಭಾವನಾತ್ಮಕ ಒತ್ತಡಗಳಿಂದ ಹೆಣ್ಣು ನಿರಂತರ ಗಂಡಸಿನ ಖಾಸಗಿ ಬದುಕಿಗೆ ಸರ್ಪಗಾವಲುಗಾರಳಾಗಿರುತ್ತಾಳೆ. ಯಾವಾಗ ಈ ಖಾಸಗಿ ಲೋಕದ

ಅನಾವರಣಕ್ಕೆ ಸಿದ್ಧಳಾಗುತ್ತಾಳೋ ಆಗ ಗಂಡಸಿನ ಪೌರುಷವೆಲ್ಲ ಹೆಣ್ಣಿನ ದಮನಕ್ಕೆ ಎಲ್ಲ ಅಸ್ತ್ರಗಳನ್ನು ಬಳಸಿ ಆಕೆಯನ್ನು ಸಾಮಾಜಿಕ ಅಸಹನೆ, ಅಸಡ್ಡೆಗೊಳಗಾಗಿಸುತ್ತದೆ. ಛಿದ್ರವೆಂದುಕೊಂಡ ಕುಟುಂಬ ಆಕೆಯನ್ನು ನಿರಾಶ್ರಿತಳನ್ನಾಗಿಸುತ್ತದೆ. ಸಮಾಜ ಆಕೆಯನ್ನು ಹಾದಿಬೀದಿಯಲ್ಲಿಯ ಕಟಕಟೆಯಲ್ಲಿ ನಿಲ್ಲಿಸಿ ನಿಂದಿಸಿ ಅಪರಾಧಿಯಾಗಿಸುತ್ತದೆ. ಇದಕ್ಕೂ ಬಗ್ಗದೆ ಸತ್ಯವನ್ನು ಒತ್ತಿ ಹೇಳುವ ಹಟಕ್ಕೆ ಬಿದ್ದರೆ ಫತ್ವಾ ಹೊರಡಿಸುವ ಗಂಡಸಿನ ಅಂತಿಮ ಅಸ್ತ್ರದಿಂದ ಜೀವಭಯದಿಂದ ಕಂಗೆಡಬೇಕಾಗುತ್ತದೆ.

ಚರಿತ್ರೆಯುದ್ದಕ್ಕೂ ತಮ್ಮ ಬದುಕಿನ ಬಗ್ಗೆ ನೇರವಾಗಿ ಮಾತನಾಡುವ ಅವಕಾಶ ಮತ್ತು ಶಕ್ತಿಯಿಂದ ಮಹಿಳೆಯರು (ಜನಪದ -ಶಿಷ್ಟ) ಸಾಹಿತ್ಯವೆಂಬ ಈಜು ಬುರುಡೆ(ಕಾಯಿ)ಯನ್ನು ಎಚ್ಚರದಿಂದ ಬೆನ್ನಿಗೆ ಕಟ್ಟಿಕೊಂಡು ಸಾಮಾಜಿಕ ಧಾರ್ಮಿಕ ಸಾಗರದಲ್ಲಿ ಈಸು ಬಿದ್ದಿರುವರು. ಆದರೆ ಆತ್ಮಕಥೆ ಬರೆಯುವುದರ ಮೂಲಕ ಕೆಲವು ಜನ ಮಹಿಳೆಯರು ವ್ಯವಸ್ಥೆಗೆ ನಿದ್ರಾಭಂಗವನ್ನುಂಟು ಮಾಡಿರುವರು. ಈ ನಿದ್ದೆಗೆಟ್ಟ ಸಮಾಜ ನಿದ್ದೆಗೆಡಿಸಿದ ಮಹಿಳೆಯರ ವಿರುದ್ಧ ಮತೀಯ, ಸಾಮಾಜಿಕ, ವ್ಯಕ್ತಿ ಮೂಲದ ಕಾನೂನುಗಳೆಲ್ಲ ಏಕಕಾಲದಲ್ಲಿ ಝಳಪಿಸುತ್ತವೆ. ಇದಕ್ಕೊಂದು ನಿದರ್ಶನವಾಗಿ ತಸ್ಲೀಮಾ ನಸ್ರೀನ್ ನಮ್ಮೆದುರಿರುವಳು. ಆಕೆಯ 'ಶೋಕೊಲ್ ಗೃಹ ಹರಾಲವೊಜರ್' (ಎಲ್ಲಿಯೂ ಮನೆಯಿಲ್ಲದವಳು) ಕೃತಿಯುಂಟು ಮಾಡಿರುವ ಪರಿಣಾಮವೆಂದರೆ ಕೋಟ್ಯಾನುಕೋಟಿ ಜೀವಜಂತುಗಳಿಗೆ ಬದುಕುವ ಅವಕಾಶ ನೀಡಿದ ಈ ಪುಣ್ಯಭೂಮಿಯ ಮೇಲೆ ಸತ್ಯ ಹೇಳಿದ ಅಪರಾಧಕ್ಕಾಗಿ ಹೆಣ್ಣು ಅಂಗೈಯಗಲದ ಜಾಗವಿಲ್ಲದ ಹಾಗೇ ಜೀವಭಯದಿಂದ ಅಲೆಯುವಂತಾಗಿದೆ. ಅದರ ಪರಿಣಾಮವೇ ಆಕೆಯ, ಆಕೆಯಂಥವರ ಬಾಯಿಯಿಂದ 'ಹೆಣ್ಣಾಗಿ ಹುಟ್ಟಿರುವುದೆ ಪಾಪ, ತಪ್ಪು, ಅಪರಾಧವೆಂದು ಹೇಳಿಸುತ್ತಿದೆ.

ಇಂದು ಮಹಿಳೆಯರು ಆತ್ಮಕಥೆಗಳನ್ನು ಬರೆಯುವುದರ ಮೂಲಕ ಜಗತ್ತು, ಸಮಾಜ, ಕುಟುಂಬಗಳನ್ನೆಲ್ಲ ಜಾಲಾಡುತ್ತಿರುವರು. ಇದು ಯಾರದೋ ಒಬ್ಬರ ಕುಟುಂಬದ್ದಲ್ಲ, ಸಮಾಜದ್ದಲ್ಲ. ಸಾರ್ವತ್ರಿಕವಾದ, ಸಾರ್ವಕಾಲಿಕವಾದ ಮದ್ದಿಲ್ಲದ ಗುಪ್ತ ರೋಗವಿದು. ಇದಕ್ಕೆ ಮದ್ದು, ಉಪಶಮನವೆಂದರೆ ಕಿತ್ತುಕೊಂಡಿರುವ ಮಹಿಳೆಯರ ಬದುಕಿನ ಹಕ್ಕುಗಳನ್ನೆಲ್ಲ ಆಕೆಗೆ ನೀಡುವುದು. ಆಕೆಯ ಬದುಕನ್ನು ಆಕೆಯಾಗಿ ಅನುಭವಿಸಲು ಅವಕಾಶ ಕಲ್ಪಿಸುವುದು. ಈ ಭಯಾನಕ ರೋಗ ಮತ್ತು ಮದ್ದಿನ ಬಗ್ಗೆ ಮಹಿಳೆಯರು ಆತಂಕದಿಂದಲೇ ಮಾತನಾಡುತ್ತಿರುವರು. ಸತ್ಯ, ನ್ಯಾಯ. ಬೆಳಕಿಗೆ ಹೆದರುವ ಗಂಡಸರು ಇವುಗಳನ್ನು ಹೇಳಲು ಮುಂದಾಗುವ ಹೆಂಗಸರನ್ನು ದಮನಕ್ಕೊಳಪಡಿಸಲು ನಿರಂತರ ಪ್ರಭುತ್ವದ ನೆರವನ್ನು ಪಡೆಯುತ್ತಲೇ ಇರುತ್ತಾರೆ. ಅದು ರಾಜಪ್ರಭುತ್ವವಾಗಿರಬಹುದು ಅಥವಾ ಧರ್ಮ ಪ್ರಭುತ್ವವಾದರೂ ಆಗಿರಬಹುದು. ಪಶ್ಚಿಮ ಬಂಗಾಳದಂತಹ ಕಮ್ಯುನಿಸ್ಟ್ ಸರಕಾರವಿರುವ ರಾಜ್ಯ ಕೂಡಾ 'ದ್ವಿಖಂಡಿತೊ' ಎಂಬ ಕೃತಿ (ತಸ್ಲೀಮಾ ನಸ್ರೀನ್‌ಳದ್ದು)ಯ ಮೇಲೆ ನಿಷೇಧ ಹೇರುವುದಾದರೆ ಪಾಕಿಸ್ತಾನದ ಬಗ್ಗೆ ಮಾತೇ

ಆಡುವಂತಿಲ್ಲ.

ಸ್ತ್ರೀಯರ ಆತ್ಮಕಥೆಗಳು ಸ್ಥಾಪರಗೊಂಡಿರುವ ಗಂಡು ಪ್ರಧಾನ ಸಂಸ್ಕೃತಿ, ಬದುಕನ್ನು ಸಿಡಿಸಲು ಬೇಕಾದ ಸಾಮಾಜಿಕ ಮತ್ತು ಕೌಟುಂಬಿಕ ನೆಲವನ್ನು ಹದಗೊಳಿಸುವ ಪ್ರಯತ್ನ ಮಾಡುತ್ತಿವೆ. ಕುಟುಂಬದಾಚೆಗೆ ಚಾಚಿಕೊಂಡಿರುವ ಗಂಡಸಿನ ಸುಖದ, ಭೋಗದ ಲೋಕದಲ್ಲಿ ನರಳುವ ಹೆಣ್ಣಿನ ಆರ್ತನಾದ ಮತ್ತು ಕುಟುಂಬದೊಳಗೆ ಹೊರಜಗತ್ತಿನ ಸಂಪರ್ಕದಿಂದ ದೂರ ಮಾಡಲ್ಪಟ್ಟ ಗೃಹಿಣಿ ಸ್ಥಾನದಲ್ಲಿರುವ ಹೆಣ್ಣಿನ ಅಸಹಾಯಕತೆಯನ್ನು ಹುರಿಗೊಳಿಸಿ ಸಾಮಾಜಿಕವಾಗಿ ನ್ಯಾಯ ಬೇಡುವ ಆತ್ಮಕಥೆಗಳ ಮೌನಕ್ರಾಂತಿಯ ನೆಲೆಗಟ್ಟು ಎಂದು ಕರೆಯಬಹುದು. ಆತ್ಮಕಥೆ ಎಂಬುದು ಕೇವಲ ಸಾಹಿತ್ಯ ಪ್ರಕಾರವೂ ಅಲ್ಲ. ವ್ಯಕ್ತಿಯೊಬ್ಬನ ಆತ್ಮಕಥೆಯ ಪ್ರಲಾಪವಲ್ಲ. ಇದೊಂದು ಸಾಮಾಜಿಕ ಶೋಧ, ಅನ್ವೇಷಣೆ. ಅಗಸ್ಟಿನ್, ರೂಸೋ, ರಸೆಲ್, ಟಾಲ್‌ಸ್ಟಾಯ್, ಗಾಂಧಿ ಮುಂತಾದ ಮಹಾತ್ಮರೆನಿಸಿಕೊಂಡವರು ತಮ್ಮ ಬದುಕಿನ ಪ್ರತಿಯೊಂದು ಘಳಿಗೆ, ಘಟನೆಯನ್ನು ಪ್ರಾಮಾಣಿಕವಾಗಿಯೇ ಜನತಾ ನ್ಯಾಯಾಲಯದ ಮುಂದೆ ಬರೆದಿಟ್ಟಿರುವರು. ಮನುಷ್ಯ ದೌರ್ಬಲ್ಯಗಳ ಮಧ್ಯದಲ್ಲಿಯೇ ಮಹಾತ್ಮನಾಗುವ ಹಾದಿ ಕಂಡುಕೊಳ್ಳಬೇಕು. ತನ್ನೊಂದಿಗೆ ತನ್ನ ಸಂಘರ್ಷವೇ ಅವನನ್ನು ಎತ್ತರದಲ್ಲಿ ನಿಲ್ಲಿಸುವುದು. ತಪ್ಪುಗಳನ್ನು ತಿದ್ದಿಕೊಳ್ಳುವುದು, ದೌರ್ಬಲ್ಯಗಳನ್ನು ಮೀರುವುದು, ಸಣ್ಣತನಗಳನ್ನು ಸಾರ್ವಜನಿಕವಾಗಿ ಹೊರಹಾಕಿ - ಶುದ್ಧಗೊಳ್ಳುವ ಔದಾರ್ಯತೆಯಿದ್ದರೆ ಸಾಮಾನ್ಯರು ಅಸಾಮಾನ್ಯರು, ಮಹಾತ್ಮರು ಆಗಲು ಸಾಧ್ಯ. ಸತ್ಯ ಹೇಳುವ, ತನ್ನನ್ನು ತಾನು ಬಯಲುಗೊಳಿಸಿಕೊಳ್ಳಲು ಎದೆಗಾರಿಕೆಯಿರಬೇಕು. ಸತ್ಯ ಹೇಳುವ ಕೇಳುವ ಕ್ರಿಯೆಗಳೆರಡು ಮನುಷ್ಯನ ಸಾಕ್ಷಿಪ್ರಜ್ಞೆಯನ್ನು ಸಾಕಾರಗೊಳಿಸುತ್ತವೆ. ಗಂಡಸಿನ ಆತ್ಮಕಥೆಗಳನ್ನು ಬೆರಗು - ವಿಸ್ಮಯ, ರೋಮಾಂಚನಗೊಂಡು ಬೈಬಲಿನ ಹಾಗೇ ಉದ್ಧರಿಸುತ್ತಲೇ ಇರುತ್ತೇವೆ. ಆದರೆ ಅದೇ ಹೆಂಗಸು ಸತ್ಯ ಹೇಳಿದರೆ ಕೇಳಿದರೆ ಜಗತ್ತು ಬೆಚ್ಚಿ ಬೀಳುತ್ತದೆ. ಮಚ್ಚು ಕೈಗೆತ್ತಿಕೊಂಡು ಕೊಲ್ಲುವ ಮಾತನಾಡುತ್ತದೆ. ಗಂಡಸರು ತಮ್ಮ ಸಾಧನ ಪಥದಲ್ಲಿಯ ಅಡಚಣೆಯಂತೆ ಹೆಣ್ಣನ್ನು ಕಾಣುವರು. ಇಂತಹ ಅಡಚಣೆಯನ್ನು ನಿವಾರಿಸಿಕೊಳ್ಳಲು ಅವನ್ನು ಬೆನ್ನಟ್ಟಿ ಬೆದರಿಸಿ ಓಡಿಸುವ, ಅಪಮಾನಿಸುವ, ದಂಡಿಸುವುದನ್ನೆಲ್ಲ ಧರ್ಮಸಮ್ಮತವಾದದ್ದೆ ಎಂದು ಹೇಳಲಾಗಿದೆ. ಆದರೆ ಹೆಣ್ಣೊಬ್ಬಳು ತನ್ನ ಸಾಧನೆಗಾಗಿ, ಗುರಿ ಮುಟ್ಟುವುದಕ್ಕಾಗಿ ಗಂಡ, ಮಕ್ಕಳು, ಕುಟುಂಬವೆಂಬುದನ್ನು ಕಟ್ಟಿಕೊಂಡೆ ಇರಬೇಕೆಂದು ಒತ್ತಾಯಿಸುತ್ತದೆ. ಹೆಣ್ಣಿನ ಸಾಧನೆಗೆ, ಬದುಕಿಗೆ ಗಂಡು ಅಡ್ಡಿಯೆಂಬುದನ್ನು ಪಿಸುನುಡಿಯದ ಹಾಗೇ ಹೆಣ್ಣಿನ ಗಂಟಲನ್ನು ಒತ್ತಿಹಿಡಿಯಲಾಗಿದೆ.

ತಸ್ಲೀಮಾ ನಸ್ರೀನ್ 'ಬಯಲಾಗುವುದೇ ಆತ್ಮಕಥೆಯನ್ನು ಬರೆಯುವ ಮೂಲ ಉದ್ದೇಶವೆನ್ನುತ್ತಾಳೆ. ಈ ಬಯಲ ಕತ್ತಲೆಯಲ್ಲಿ ತಡಕಾಡಿದ ಕೈಕಾಲುಗಳ ಗುರುತನ್ನು ಸತ್ಯದ ಬೆಳಕಿಗೆ ಹಿಡಿದು ಜಗತ್ತಿಗೆ ತೋರಿಸಬೇಕೆಂಬುದಕ್ಕೆ ಒಂದು ಉದ್ದೇಶವಿದೆ. ಆ ಉದ್ದೇಶ ಸಾಮಾಜಿಕ, ನೈತಿಕ ಹೊಣೆಗಾರಿಕೆಯದಾಗಿದೆ. ಹೆಣ್ಣಿನ ಬದುಕುವ ಹಕ್ಕನ್ನು ಕಿತ್ತುಕೊಂಡವರ

ಒಳಹೊರಗನ್ನು ಅರಿಯುವ ಎಚ್ಚರವು ಅಡಗಿದೆ. ಹೆಣ್ಣಿಗಾಗಲಿ ಗಂಡಿಗಾಗಲಿ ಬಯಲಾಗುವುದರ ಮೂಲಕ ಕಳೆದುಕೊಂಡದ್ದನ್ನು ಪಡೆಯುವ ಮಹತ್ವಾಕಾಂಕ್ಷೆ ಇರಬೇಕು. ಗಂಡಸಿನ ಕೊಟ್ಟೆ, ಬಿಟ್ಟೆ, ಇಟ್ಟೆನೆಂಬ ಅಹಂಕಾರ ನೀಗಿ ಪಡೆಯುವ ಧನ್ಯತೆ, ವಿಧೇಯತೆ, ವಿನಯವಂತಿಕೆ ಕಾಣಿಸಿಕೊಂಡಾಗ ಸಾಮಾಜಿಕ ಕ್ರೌರ್ಯ ಕರಗಲು ಸಾಧ್ಯ. ಕೊಡುವುದು, ಪಡೆಯವುದೆಲ್ಲ ಸಹಜವಾದಾಗ ಸ್ವಾತಂತ್ರ್ಯ, ಸಮತೆಗೆ ಅರ್ಥ ಬರಲು ಸಾಧ್ಯ.

ಸಿಂಹಾವಲೋಕನದ ಮೂಲಕ ಅಜಿತ್ ಕೌರ್ ಅವರ ಅಲೆಮಾರಿ ಪ್ರಾರಂಭವಾಗುತ್ತದೆ. ಗಂಡನಿಂದ ದೂರವಾಗಿ ಎರಡು ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಹೊರ ಪ್ರಪಂಚಕ್ಕೆ ಕಾಲಿಟ್ಟವಳು ಮತ್ತೆ ಮತ್ತೆ ಎಡವಿದ ಕಲ್ಲಿಗೆ ಹಾಯುತ್ತಾಳೆ. ಹೀಗೆ ಹಾಯುವುದರಿಂದ ಕಲ್ಲು ಸವೆದಿಲ್ಲವೆಂಬ ವಾಸ್ತವದ ಅರಿವು ಪಡೆಯದ ಸ್ತ್ರೀ ಸಂಕುಲ ಮತ್ತೆ ಮತ್ತೆ ಹಳೆಯ ಗಾಯಗಳನ್ನು ನೀವುತ್ತಿವೆ. ಹೆಣ್ಣಿನ ಮುಗ್ಧತೆ, ಅಸಹಾಯಕತೆ, ಭಾವುಕತೆಯನ್ನೆಲ್ಲ ಸಮಾಜ ದುರುಪಯೋಗಪಡಿಸಿಕೊಳ್ಳುವ ಎಲ್ಲ ಸಿದ್ಧತೆಯನ್ನು ಮಾಡಿಕೊಂಡಿರುತ್ತದೆ. ಬೆಣ್ಣೆ ತಿಂದ ಮಂಗನ ಕಥೆಯ ಹಾಗೆ ಹೆಣ್ಣಿನ ಬದುಕಿದೆ. ಅಲೆಮಾರಿ ವ್ಯವಹಾರಿಕತೆ, ಲೋಕಜ್ಞಾನವಿಲ್ಲದ ಭಾವುಕ ಮನಸ್ಸಿನವಳ ತಪ್ಪೊಪ್ಪಿಗೆಯಂತೆ ಬರೆದುಕೊಂಡಿರುವುದೆಲ್ಲ ಮಹಿಳೆಯರಿಗೆ ಗಂಡುಲೋಕದಿಂದ ಎಚ್ಚರದಿಂದಿರಬೇಕೆಂಬ ಸಂದೇಶವನ್ನು ರವಾನಿಸುತ್ತದೆ. ಎಲ್ಲ ಹೆಂಗಸರೂ ಮುಗ್ಧರಲ್ಲ. ಹಾಗೇನೇ ಎಲ್ಲ ಗಂಡಸರೂ ಕ್ರೂರಿಗಳು, ವಿವೇಕವಂತರೂ ಅಲ್ಲ. ಮನುಷ್ಯನ ದೌರ್ಬಲ್ಯಗಳಿಗೆ ಲಿಂಗ ಅಸಮಾನತೆಯ ಸಾಮಾಜಿಕ ಪಕ್ಷಪಾತದ ಕಾರಣದಿಂದಲೇ ಗಂಡಸಿನ ಸ್ವಾರ್ಥ ನ್ಯಾಯಸಮ್ಮತ ಗೊಂಡಿದೆ. ಮನುಷ್ಯನ ಸ್ವಾರ್ಥ, ದುರಾಸೆಗೆ ಲಿಂಗತಾರತಮ್ಯತೆ ಹಲವು ಅನುಕೂಲಗಳನ್ನು ಒದಗಿಸಿದೆ. ಈ ಅನುಕೂಲಸಿಂಧು ಪ್ರವೃತ್ತಿ ಗಂಡಸಿನ ಮೂಲಕವೇ ಗಟ್ಟಿಗೊಂಡಿರುವುದರಿಂದ ಹೆಣ್ಣಿನ ಸಂಕಷ್ಟಗಳಿಗೆ ಗಂಡಸೇ ಹೊಣೆಗಾರನಾಗಿರುವನು. ಮದುವೆಯೆಂಬುದು ಹೆಣ್ಣಿಗೆ ಆಯ್ಕೆಯಲ್ಲ. ಪ್ರೀತಿ, ಪ್ರೇಮ, ಶೀಲ, ಮನೆತನದ ಗೌರವದ ಬಗ್ಗೆ ತಲೆಕೆಡಿಸಿಕೊಳ್ಳದ ಗಂಡಸು ರಾಜಿಸೂತ್ರದ ಮೂಲಕ ಬದುಕಿನ ವಾಸ್ತವವನ್ನು ಭೌತಿಕ ಮೂಲದಲ್ಲಿಯೇ ಅರ್ಥೈಸಿಕೊಂಡಿರುವನು. ಆದರೆ ಹೆಣ್ಣಿಗೆ ಭಾವನಾತ್ಮಕ ಒತ್ತಡಗಳು, ತಪ್ಪು ಆಯ್ಕೆಗೆ ಒತ್ತಾಯಿಸುತ್ತಿರುತ್ತವೆ. ಲೆನಿನ್‌ರು ಹೇಳುವಂತೆ ಈ ನೈತಿಕತೆಯೆಂಬುದು 'ಬೂರ್ಜ್ವಾ ತಿಪ್ಪೆಯ ಮೇಲೆ ಬೆಳೆದ ಅಣಬೆ. ಈ ಅಣಬೆಯನ್ನು ನಿರಂತರ ಕಾಪಿಟ್ಟುಕೊಂಡ ಜೀವವೆಂದರೆ ಹೆಣ್ಣುಜೀವ. ಗಂಡಸು ಮಾತ್ರ ತನ್ನ ಅನುಕೂಲಕ್ಕೆ ಅನುಗುಣವಾಗಿ ಸಾಮಾಜಿಕ ನೀತಿಸಂಹಿತೆಯನ್ನು ತಿದ್ದುತ್ತಲೇ ಇರುವನು. ತಿದ್ದುವ, ಬರೆಯುವ ಅವಕಾಶವಿಲ್ಲದ ಹೆಣ್ಣು ಯಾವುದೇ ಆಯ್ಕೆಯನ್ನು ಮಾಡಿಕೊಳ್ಳುವ ಸಾಮಾಜಿಕ ಎಚ್ಚರವನ್ನಿಟ್ಟುಕೊಂಡಿಲ್ಲ.

ಮಧ್ಯಮ ಮತ್ತು ಮೇಲ್ ಮಧ್ಯಮ ವರ್ಗದವರಿಂದಲೇ ಈ ಬೂರ್ಜ್ವಾ ನೀತಿ ನಿರೂಪಣೆಗಳು ಜೀವಂತವಾಗಿವೆ. ಅಜಿತ್‌ಳು ಇದಕ್ಕೆ ಬಲಿಯಾದವಳೆ. ಮುದ್ದಾದ ಬೆಳೆದ ಮಗಳು ಬೆಂಕಿಯುಂಡೆಯಂತೆ ಉರಿದುಹೋಗುವ ಹೃದಯ ವಿದ್ರಾವಕ ಘಟನೆಯನ್ನು ನೆನಪಿಸುತ್ತಲೇ

ತನ್ನ ಭೂತದ ನಡಿಗೆಯನ್ನು ಮೆಲುಕು ಹಾಕುವಳು. ಹೆಣ್ಣಾದ ಕಾರಣಕ್ಕಾಗಿ ಬಾಲ್ಯವೆಂಬುದು ಮನೆಯ ಮುತ್ತೈದೆಯರ (ತಾಯಿಯನ್ನು ಒಳಗೊಂಡ ಹಾಗೆ) ಪ್ರಾಯೋಜಕದ ಪಾಠಗಳ ಮೂಲಕ ಕಣ್ಣು ನೆಲಬರೆಯುವುದನ್ನು ಓದುವುದನ್ನು ರೂಢಿಸಿಕೊಳ್ಳುತ್ತದೆ. ಯಾವುದೇ ಜಾತಿ, ಪ್ರದೇಶದ ಮಧ್ಯಮ ವರ್ಗದ ಕುಟುಂಬದೊಳಗಿನ ಹುದುಲಿದೆಯಲ್ಲ ಅದು ಮನುಷ್ಯನನ್ನು ಮನುಷ್ಯನಾಗಿ ಇರಲು ಬಿಡುವುದಿಲ್ಲ. ಗೊಂದಲದ ಗೂಡುಗಳಾದ ಈ ಕುಟುಂಬಗಳು ಅಗತ್ಯಕ್ಕಿಂತಲೂ ಹೆಚ್ಚು ಒತ್ತಡಗಳಿಗೆ ಒಳಗಾಗಿರುತ್ತವೆ. ಊಳಿಗಮಾನ್ಯ ವ್ಯವಸ್ಥೆಯ ಸ್ತ್ರೀ ನಿಷೇಧಿತ ಸಂಗತಿಗಳು ಯಂತ್ರನಾಗರಿಕತೆಯ ಕೈಗೂ ಸಿಗದ ಹಾಗೇ ಸೂಕ್ಷ್ಮವಾಗಿವೆ. ತಾಯಿಯ ತವರುಮನೆಯಲ್ಲಿ ಕಣ್ಣುಬಿಡುವ ಮಗು ತಂದೆಯ ಮನೆಯಲ್ಲಿ ಅಂಬೆಗಾಲಿಟ್ಟು, ನಡೆಯಲು ಪ್ರಾರಂಭಿಸುವ ಹೆಣ್ಣು ಮಗುವಿಗೆ ಲೋಕಾಚಾರದ ನೀತಿ ನಿರೂಪಣೆಯನ್ನು ಕಡ್ಡಾಯವಾಗಿ ಬೋಧಿಸಲಾಗುತ್ತದೆ. ಸರಕಾರಿ ಅಥವಾ ವೃತ್ತಿನಿರತ ಉದ್ಯೋಗದ ಮಧ್ಯಮವರ್ಗದ ಕುಟುಂಬಗಳೆಲ್ಲ ಒಂದರ್ಥದಲ್ಲಿ ಅಲೆಮಾರಿಗಳೆ. ಆದರೆ ಹುಟ್ಟಾ ಅಲೆಮಾರಿತನವನ್ನು ಹೊತ್ತವರು ಹೆಣ್ಣು ಮಕ್ಕಳು ಮಾತ್ರ. ಈ ಅಲೆಮಾರಿತನಕ್ಕೆ ಶಾಸ್ತ್ರಗಳು ಕಾರಣ. ಮನುಸ್ಮೃತಿಯಲ್ಲಿಯೇ ಇದರ ಬೀಜಗಳಿವೆ. ಬೇರುಗಳಿವೆ. ಉದ್ಯೋಗ ಮೂಲದ ಅಲೆಮಾರಿತನದ ಸ್ವರೂಪಕ್ಕೂ ಸಾಂಸ್ಕೃತಿಕ ಮೂಲದ ಅಲೆಮಾರಿತನಕ್ಕೂ ವ್ಯತ್ಯಾಸಗಳಿವೆ. ಸಾಂಸ್ಕೃತಿಕ ಮೂಲದಿಂದ ಹೆಣ್ಣಿನ ಅಲೆಮಾರಿ ಬದುಕು ಪ್ರಾರಂಭವಾಗುತ್ತದೆ. ಇಡೀ ಬದುಕನ್ನೆ ಮನೆಯಲ್ಲಿ ಕಳೆಯುವ ಹೆಣ್ಣಿಗೆ ಮನೆಯೆಂಬುದೇ ಇಲ್ಲ. ಮನೆಗಳೇನಿದ್ದರೂ ಗಂಡಸರವೇ. ಗಂಡಸರ ಹೆಸರಿನಲ್ಲಿರುವ ಮನೆಯಲ್ಲಿ ಗಂಡಸರ ಉಪಸ್ಥಿತಿಯಷ್ಟಿರುತ್ತದೆ ಎಂದರೆ ಅವನ ದುಡಿಮೆಯನ್ನು ಜವಾಬ್ದಾರಿಯನ್ನು ಪರಿಗಣಿಸಿರುತ್ತದೆ. ಹೆಣ್ಣಿಗೆ ಉದ್ಯೋಗವೆಂಬುದಿಲ್ಲ. ಆದರೆ ದಿನವಿಡಿ ಕೈ ಬಿಡುವಿಲ್ಲದ ಹಾಗೇ ಕೆಲಸದಲ್ಲಿ ತೊಡಗಿರುತ್ತಾಳೆ. ಈ ದುಡಿಮೆಗೆ ಕೂಲಿಯೆಂಬುದಿಲ್ಲ. ಹಾಗೊಮ್ಮೆ ಸಂಬಳಸಹಿತ ಉದ್ಯೋಗಗಳಿದ್ದರೂ ಅದನ್ನು ಸಮಾಜ, ಕುಟುಂಬ ಗೌರವಿಸಿಲ್ಲ. ಮನೆಯಲ್ಲಿದ್ದು ಮನೆಯಿಲ್ಲದ ಹೆಣ್ಣುಗಳು ಬದುಕಿನುದ್ದಕ್ಕೂ ತಂದೆ-ಮನೆ, ಗಂಡನ ಮನೆಗೆ ಅಲೆಮಾರಿಗಳಂತೆ ಅಲೆಯುತ್ತಿರುತ್ತಾರೆ. ಅಂಗೈಯಗಲದ ಜಾಗದ ಹಕ್ಕಿಲ್ಲದ ಹೆಣ್ಣನ್ನು ಮನೆಯ ಯಜಮಾನಿಯೆಂದು ಧಾರಾಳವಾಗಿ ಕರೆಯುತ್ತವೆ.

ಲೇಖಕಿ ಬಾಲ್ಯ ಮತ್ತು ಯೌವನದ ದಿನಗಳನ್ನು ಅಲೆಮಾರಿ, ತಬ್ಬಲಿತನದಲ್ಲಿಯೇ ಕಳೆಯುತ್ತಾಳೆ. ಗಂಡನ ಹಿಂಸೆ, ಕ್ರೌರ್ಯವನ್ನು ಸಹಿಸದೆ ತಂದೆಯ ಮನೆಗೆ ಬಂದರೆ ಅಲ್ಲಿರುವ ಅಸಡ್ಡೆ, ಉದಾಸೀನತೆಗಳು ಉಸಿರುಗಟ್ಟಿಸುತ್ತವೆ. ಇವುಗಳಿಂದ ಬಿಡುಗಡೆ ಹೊಂದುವ ಸಲುವಾಗಿ, ನೆಲೆಯೂರಿ ತನ್ನದೆ ಮನೆಯಲ್ಲಿ ಬದುಕುವ ಹಟದಿಂದ ಒಂದು ದಿನ ಹೆತ್ತ ಮಕ್ಕಳನ್ನು ಕರೆದುಕೊಂಡು ಉದ್ಯೋಗಸ್ಥ ಮಹಿಳೆಯರಿಗಾಗಿರುವ ವಸತಿ ನಿಲಯಕ್ಕೆ ಬಂದು ಬಿಡುತ್ತಾಳೆ. ಸ್ವತಂತ್ರವಾಗಿ ಹೆಣ್ಣೊಂದು ಬದುಕುವುದೆಂದರೆ ಉಗುಳು ಹಚ್ಚಿಯಾಗುವುದೆಂದೇ ಭಾವಿಸಲಾಗಿದೆ. ಮನೆಯ ಒಳಗಿನ ಹಿಂಸೆ, ನೋವಿಗಿಂತಲೂ ಭಿನ್ನವಾಗಿ ಸಮಾಜದಲ್ಲಿರುವ ನೋವು, ಹಿಂಸೆಗಳಿಲ್ಲ. ಬದುಕು ಕಟ್ಟಿಕೊಳ್ಳುವ ಉತ್ಸಾಹದಲ್ಲಿ ಲೇಖಕಿ ವಯೋಸಹಜ ಕನಸುಗಳನ್ನು ಹೆಣೆಯುತ್ತಾಳೆ.

ಬಲದೇವನೆಂಬ ವ್ಯಕ್ತಿಯನ್ನು ಪ್ರೀತಿಸುತ್ತಾಳೆ. ಮದುವೆ ಆಗುವುದು ಮುರಿದು ಬೀಳುತ್ತದೆ. ಕುಟುಂಬ ಸಮಸ್ಯೆಗಳಿಂದ ಬೇರೆ ಗಂಡಸಿನೊಡನೆ ಮದುವೆಯಾಗುತ್ತದೆ. ಹರಕೆಯ ಕುರಿಯಂತೆ ಓಂಬಾಲಿಸಿದ ಹೆಂಡತಿಯನ್ನು ಗಂಡನಾದವನು ನಂಬುಗೆಯಿಂದ ಪ್ರೀತಿಯಿಂದ ಕಾಣಬೇಕು. ಮೊದಲ ದಿನವೆ ಗಂಡನಾದವನು ತನ್ನ ಪೂರ್ವಾರ್ಧದ ಪ್ರಥಮವನ್ನೆಲ್ಲ ಹೇಳಿಕೊಂಡು ನಿನ್ನನ್ನು ಕೈ ಹಿಡಿದಿರುವುದು ಕನಿಕರದಿಂದ ಎನ್ನುವಂತೆ ನಡೆದುಕೊಳ್ಳುತ್ತಾನೆ. ಹೆಣ್ಣಿಗೆ ತನ್ನ ಪ್ರೀತಿ ಪ್ರೇಮವನ್ನು ಹೇಳಿಕೊಳ್ಳಲು ಅವಕಾಶ ನೀಡದ ಸಮಾಜ, ವ್ಯಕ್ತಿಗಳು ಆಕೆಯ ಪ್ರಾಮಾಣಿಕತೆಯನ್ನು ಕೊಂದು ಹಾಕುತ್ತಾರೆ. ಎಲ್ಲ ಮರೆತು ಕೈ ಹಿಡಿದವನ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಹೆಣ್ಣನ್ನು ಗಂಡನಾದವನು ನಡೆಸಿಕೊಳ್ಳುವ ರೀತಿಯಿದೆಯಲ್ಲ ಅದರ ಬಗ್ಗೆ ಸಾರ್ವಜನಿಕ ಚರ್ಚೆಗಳಾಗಬೇಕು. ದುಡಿಯುವ ಯೋಗ್ಯತೆಯಿಲ್ಲದ ಗಂಡ ಕೂಡ ಹೆಣ್ಣನ್ನು ಊಳಿಗಮಾನ್ಯದ ಹಳೆಯ ಅಸ್ತ್ರಗಳಿಂದಲೇ ಇರಿಯುತ್ತಿರುತ್ತಾನೆ. ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದುಕೊಂಡವಳು ಪ್ಲ್ಯಾನಿಂಗ್ ಕಮಿಷನ್ನಿನಲ್ಲಿ ಕೆಲಸಕ್ಕೆ ಹೋಗುವಂತಿಲ್ಲ. ಅದಕ್ಕೆ ಕಾರಣವೆಂದರೆ ಅಲ್ಲಿರುವವರೆಲ್ಲ ಗಂಡಸರು. ಗಂಡಸರ ಮಧ್ಯದಲ್ಲಿ ಹೆಂಡತಿ ಕೆಲಸಕ್ಕೆ ಹೋಗುವುದರ ಬಗ್ಗೆ ಸಂಶಯವಿದೆ. ದಾಂಪತ್ಯ, ಸಂಸಾರವೆಂಬುದು ನಂಬುಗೆಯ ಮೇಲೆ ನಿಂತಿರುವಂತಹುದು. ಪರಸ್ಪರ ನಂಬುಗೆ, ಗೌರವಗಳಿದ್ದಾಗ ಸಂಸಾರದಲ್ಲಿ ಬಿರುಕು ಮೂಡಲು ಸಾಧ್ಯವಿಲ್ಲ. ಆದರೆ ನಮ್ಮೆಲ್ಲ ಕುಟುಂಬಗಳು ಹಿಟ್ಲರನ ಕಾನ್‌ಸನ್‌ಟ್ರೇಶನ್ ಕ್ಯಾಂಪ್‌ಗಳಿದ್ದಂತೆ. ಉಸಿರುಗಟ್ಟಿಸಿ ಮರ್ಯಾದೆ, ಗೌರವದ ಹೆಸರಿನಲ್ಲಿ ಕೊಲ್ಲುವ ಸಂಸಾರವೆಂಬ ಕಾರಾಗ್ರಹದಿಂದ ತಪ್ಪಿಸಿಕೊಂಡು ಬಂದ ಮಹಿಳೆಯರನ್ನು ಸಮಾಜ ಮತ್ತಷ್ಟು ಗುಮಾನಿಯಿಂದ ಕಾಣುತ್ತದೆ. ಬದುಕುವ ಎಲ್ಲ ಮೂಲಗಳನ್ನು ಮುಚ್ಚುವ ವ್ಯವಸ್ಥಿತ ಸಂಚನ್ನು ಹೆಣೆಯುತ್ತದೆ.

ಕುಟುಂಬ, ಸಂಸಾರವನ್ನು ಆರ್ಥಿಕವಾಗಿ ಮುನ್ನಡೆಸುವ ಚೈತನ್ಯವಿಲ್ಲದ ಗಂಡನೆಂಬ ಸರದಾರ ಹಿಡಿಯುವ ಹಾದಿಯೆಂದರೆ ಹೆಂಡತಿಯ ತವರುಮನೆ. ಅದು ಶಾಶ್ವತವಾದ ಪರಿಹಾರವಲ್ಲವೆಂಬುದು ಹೆಂಗಸಿಗೆ ಅರ್ಥವಾದ ಹಾಗೇ ಗಂಡಸಿಗೆ ಆಗುವುದಿಲ್ಲ. ಹೀಗಾಗಿ ಅಜಿತ್ ದುಡಿಯುವ ಸಲುವಾಗಿ ಅದೂ ಹೆಣ್ಣುಮಕ್ಕಳ ಶಾಲೆಯಲ್ಲಿ ದುಡಿಯುವುದಕ್ಕಾಗಿ ಬಿ.ಎಡ್. ಪದವಿಯನ್ನು ಪಡೆದುಕೊಳ್ಳುವ ಒತ್ತಡದಿಂದಲೂ ಹಣ್ಣಾಗುತ್ತಾಳೆ. ದುಡಿದು ತಂದದ್ದನ್ನು ಆಕೆ ಬಳಸುವ ಸ್ವಾತಂತ್ರ್ಯವಿಲ್ಲ. ಎಲ್ಲದಕ್ಕೂ ಲೆಕ್ಕ ನೀಡಬೇಕು. ಎಲ್ಲದರಲ್ಲೂ ತಪ್ಪು ಕಂಡು ಹಿಡಿಯುವ ಗಂಡನಿಂದ ಬಿಡುಗಡೆ ಹೊಂದಲೆಂದೇ ಎರಡೂ ಮನೆಗಳಿಂದ ಹೊರಬೀಳುತ್ತಾಳೆ. ಒಂದು ಆಶ್ಚರ್ಯದ ಸಂಗತಿಯೆಂದರೆ ಹೀಗೆ ಹೊರಬಿದ್ದ ಹೆಂಗಸರಾರು ಕುಟುಂಬದ ಡಬ್ಬಿಗಳನ್ನು ಕಳಚಿಕೊಂಡು ಹೊರಬಂದವರಲ್ಲ. ಇಂಧನವಿಲ್ಲದ ಗಂಡನೆಂಬ ಸಂಸಾರದ ಇಂಜಿನನ್ನು ಮಾತ್ರ ಕಳಚಿಕೊಡು ಹೊರಬಂದು ಅದೇ ಹಳೆಯ ಹಳಿಗಳ ಗುಂಟವೇ ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಪ್ರಯಾಣ ಬೆಳೆಸುವಳು. ಗಂಡನಿಗೆ ಮಕ್ಕಳ ಜವಾಬ್ದಾರಿಯನ್ನು ಸಮಾಜ ಕಡ್ಡಾಯವಾಗಿ ಹೊರಿಸಿಲ್ಲ. ಅದೇ ಹೆಣ್ಣಿಗೆ ಮಾತ್ರ ಕಡ್ಡಾಯವೆಂದಿದೆ. ಸಮಾಜ ಹೇಳದಿದ್ದರೂ ಹೆಣ್ಣು ಸ್ವ ಇಚ್ಛೆಯಿಂದ ಹೇರಿಕೊಂಡಿರುವಳು.

ಬೌದ್ಧಿಕ ಸಾಮರ್ಥ್ಯದ ಬಲದಿಂದ ಲೇಖಿಕಿ ತನ್ನದೇ ಆದ ಕುಟುಂಬ ಕಟ್ಟಿಕೊಂಡು ಬದುಕುವ ಹಂತದಲ್ಲಿ ಎದುರಾಗುವ ಸಮಸ್ಯೆಗಳನ್ನೆಲ್ಲ ಹೇಳಿಕೊಂಡಿರುವಳು. ಈ ಹಂತದಲ್ಲಿಯೇ ಲೇಖಿಕಿಗೆ ತನ್ನ ಅಪರಾಧಗಳ ಪಟ್ಟಿ ಮಾಡುವಂತಾಗಿದೆ. ಬೌದ್ಧಿಕವಾಗಿ ಬೆಳೆದ ಮಹಿಳೆಯರು ಭಾವುಕ ಲೋಕದಲ್ಲಿ ತುಂಬಾ ಅಸಹಾಯಕರಾಗಿರುತ್ತಾರೆ. ವಂಚಕರು ಯಾವುದೇ ಹೆಸರು, ಸಂಬಂಧ, ಆಕಾರದಲ್ಲಿದ್ದರೂ ಅವರು ವಂಚಕರೆ ಆಗಿರುತ್ತಾರೆ. ಗಂಡಸರು ಗಂಡನಾಗಿರುವ ಕಾರಣಕ್ಕಾಗಿ ವಂಚಕರು, ಕ್ರೂರಿಗಳಲ್ಲ. ಅವರು ಸ್ನೇಹಿತರು, ಹಿತೈಷಿಗಳ ರೂಪದಲ್ಲಿಯು ನಮ್ಮೊಡನಿರುತ್ತಾರೆ. ಹೆಣ್ಣು ಜೀವ ನಿರಂತರ ಬೇಟೆಗಾರನ ಕೈ ಹಿಡಿದೇ ನಡೆಯುತ್ತಿರುತ್ತದೆ. ಅಜಿತ್‌ಳ ಬದುಕಿನಲ್ಲಿಯೂ ಆಘಾತಗಳು ಇದೇ ಕಾರಣದಿಂದ ಮರುಕಳಿಸುತ್ತವೆ. ಗಂಡಸು ಶಾಸ್ತ್ರೋಕ್ತ, ಸಾಮಾಜಿಕ ಮುದ್ರಾಂಕಿತ ಕುಟುಂಬದಲ್ಲಿ ಬೆಚ್ಚನೆಯ ಸ್ಥಾನವನ್ನು ಯಾವತ್ತೂ ಕಳೆದುಕೊಳ್ಳುವುದಿಲ್ಲ. ಜೊತೆಗೆ ಕುಟುಂಬದಾಚೆಗೆ ತನ್ನ ಸುಖದ ಗುಪ್ತ ನೆಲೆಗಳನ್ನು ಅನ್ವೇಷಿಸುತ್ತಲೇ ಇರುತ್ತಾನೆ. ಇಂತಹ ಸಂಬಂಧಗಳನ್ನು ಎರಡು ಕೈತೊಳೆದುಕೊಂಡಷ್ಟೇ ಸಲೀಸಾಗಿ ದೂರಕ್ಕಿಟ್ಟು ಮುಂದಕ್ಕೆ ಹೋಗುವ ವ್ಯವಹಾರಿಕತೆಯನ್ನು ರೂಢಿಸಿಕೊಂಡಿರುತ್ತಾನೆ. ಆದರೆ ಅದೇ ಹೆಣ್ಣು ಇಂತಹ ಗಂಡಸರನ್ನು ಬದುಕಿನುದ್ದಕ್ಕೂ ಆರಾಧಿಸುವ ನಿಷ್ಠೆಗೊಳಗಾಗಿರುತ್ತಾಳೆ. ತನ್ನ ಬುದ್ಧಿ, ದುಡಿಮೆ, ವಿದ್ಯೆ, ಸಾಮರ್ಥ್ಯಕ್ಕೆ ಸಮನಲ್ಲದ ಗಂಡಸನ್ನು ಪ್ರೀತಿ ಕಾರಣಕ್ಕಾಗಿ ಕೇವಲ ಪ್ರೀತಿ ಕಾರಣಕ್ಕಾಗಿ ದೆಹಲಿಯಿಂದ ಬೆಂಗಳೂರಿನವರೆಗೂ ಹುಚ್ಚಿಯ ಹಾಗೆ ಓಡೋಡಿ ಬಂದ / ಬರುವ ಹೆಣ್ಣುಗಳಿಗೆ, ಯಾರನ್ನು, ಯಾವುದನ್ನು ಹೊಣೆಯಾಗಿಸಬೇಕು. ಇದು ಸ್ವಯಂಕೃತ ಅಪರಾಧವೆಂದು ಹೇಳಬಹುದೆ? ಇದು ಅಜಿತಳ ಅಪರಾಧವಲ್ಲ. ಇಂತಹ ಅಪರಾಧಕ್ಕೆ ಅಪರಾಧಿಗಳ ಪರಂಪರೆಯೇ ನಮ್ಮಲ್ಲಿದೆ. ಅಮೃತಮತಿಯ ದುರಂತ ನಮ್ಮ ಸಾಕ್ಷಿ ಪ್ರಜ್ಞೆಗೆ ನಿಲುಕದೆ ಇರುವುದರಿಂದ ಆಧುನಿಕ ಕಾಲದಲ್ಲಿಯು ಸಬಲ ಮಹಿಳೆಯರೆಂದು ಕರೆಯಬಹುದಾದವರು ಕೂಡ ಈ ಭಾವನಾತ್ಮಕ ಸಂಬಂಧಗಳ ಚಿತೆಯ ಮೇಲೆ ದಹಿಸುತ್ತಿರುವರು. ಈ ಭಾವುಕಲೋಕದ ಅಸಂಗತ ಬದುಕಿನಿಂದ ಬಿಡುಗಡೆ ಹೊಂದದೆ ಮಹಿಳೆ ಸಾಧಿಸುವುದೆಲ್ಲ ನಿರರ್ಥಕವಾಗುತ್ತದೆ.

ಕುಟುಂಬದಾಚೆಗೆ ಚಾಚಿಕೊಂಡಿರುವ ಗಂಡಸಿನ ಲಂಪಟತನಕ್ಕೆ ಬಲಿಯಾಗುವ ಹೆಂಗಸರು ಅದನ್ನು ಹೇಳಿಕೊಂಡರೆ ಸಮಾಜ ಸಹಾನುಭೂತಿಯಿಂದ ಕಾಣುವ ಔದಾರ್ಯವನ್ನು ಉಳಿಸಿಕೊಂಡಿಲ್ಲ. ಸಮಾಜವೆಂದರೆ ಪುರುಷಾಕಾರದ ಮೇಲೆ ನಿಂತಿರುವುದರಿಂದ ಮಹಿಳೆಯನ್ನು ನಿರಂತರ ಕಟಕಟೆಯಲ್ಲಿ ನಿಲ್ಲಿಸಿ ಅಪರಾಧಿಯೆಂದು ಕರೆದು ಸಾಮಾಜಿಕ ಗೌರವದಿಂದ ವಂಚಿತಳನ್ನಾಗಿಸುವ ಶಿಕ್ಷೆಯನ್ನು ನೀಡುತ್ತೇವೆ. ಗಂಡಸಿನ ಹಲವು ಮುಖ, ಮುಖವಾಡಗಳನ್ನು ಅನಾವರಣಗೊಳಿಸುವ ಒತ್ತಡ ಯಾಕೆ ಇದೆಯೆಂದರೆ ಹಳೆಯ ಕಲ್ಲಿಗೆ ಮುಂದಿನ ಎಳೆಯ ಕಾಲುಗಳು ಎಡವಬಾರದೆಂಬ ಕಾರಣಕ್ಕಾಗಿ. ಬಯಲಾಗುವ, ಬಯಲುಗೊಳಿಸುವ ಪ್ರಾಮಾಣಿಕತೆಯಿಂದ ಬರುತ್ತಿರುವ ಮಹಿಳೆಯರ ಆತ್ಮಕಥೆಗಳು ಸಮಾಜ ಶಾಸ್ತ್ರಕ್ಕೆ ಆಕರ ಸಾಮಗ್ರಿಯಾಗಬಲ್ಲವು.

◆

ಅಜಿತ್ ಕೌರ್

# ಕನ್ನಡ ಕವಿತೆಯ ಭಿನ್ನ ನೆಲೆಗಳು

✍ ಆ. ನಾ. ಪೂರ್ಣಿಮಾ

ಇತ್ತೀಚಿನ ಮೂವತ್ತು, ಮೂವತ್ತೈದು ವರ್ಷಗಳಲ್ಲಿ ಮಹಿಳೆಯರು ತಮ್ಮನ್ನು ಕಾವ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ರೀತಿ ಬೆರಗು ಹುಟ್ಟಿಸುವಂತಿದೆ. ನವ್ಯದ ಪ್ರಭಾವಕ್ಕೊಳಗಾಗಿ ಕವಿತೆ ರಚನೆಯತ್ತ ಆಕರ್ಷಿತರಾದವರ ಸಂಖ್ಯೆ ಸಾಕಷ್ಟು. ಬಂಡಾಯ - ದಲಿತಸಾಹಿತ್ಯದ ಆಗಮನ, ಸ್ತ್ರೀಪರ ಚಳುವಳಿಗಳು ಸಹ ಇದಕ್ಕೆ ಕಾರಣವಾಗಿವೆ. ಕಳೆದ ಶತಮಾನದ ಎಂಬತ್ತರ ದಶಕ, ಕವಯಿತ್ರಿಯರ ದಶಕ ಎನ್ನುವಷ್ಟರ ಮಟ್ಟಿಗೆ ಮಹಿಳೆಯರು ಆಗಲೇ ಕಾವ್ಯಕೃಷಿ ಮಾಡಿದ್ದಾರೆ. ಇನ್ನು ಈ ಹದಿನೈದು ವರ್ಷಗಳಲ್ಲಂತೂ ಕವಯಿತ್ರಿಯರು ಅಧಿಕ ಸಂಖ್ಯೆಯಲ್ಲಷ್ಟೇ ಅಲ್ಲ, ಭಿನ್ನ ನೆಲೆಗಳಲ್ಲೂ ತಮ್ಮ ಧ್ವನಿಯನ್ನು ಓದುಗರ ಮುಂದಿಟ್ಟಿದ್ದಾರೆ. ಸ್ತ್ರೀ ಸಂವೇದನೆಯ ಸೂಕ್ಷ್ಮಗಳನ್ನು ಸಂಕೇತಗಳ ಮೂಲಕ ಪ್ರಕಟಿಸುವುದಕ್ಕೆ ಮಹಿಳೆಯರಿಗೆ ಕವಿತೆಯೇ ಹೆಚ್ಚು ಸೂಕ್ತವಾದ ಮಾಧ್ಯಮವೆನಿಸಿರಬೇಕು.

ಮಹಿಳೆಯರು ಕಾವ್ಯಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದರೂ ವಿಮರ್ಶಕರಿಂದ ಹೆಚ್ಚು ಗುರುತಿಸಲ್ಪಡದ ಹಿನ್ನೆಲೆಯಲ್ಲಿ ಮತ್ತು ಇತ್ತೀಚೆಗಿನ ಮಹಿಳಾ ಕಾವ್ಯ ರಚನೆ ಕುರಿತಂತೆ ಈ ಅವಲೋಕನ ಅಗತ್ಯವೆನಿಸುತ್ತದೆ.

ಮೊದಲಿಗೆ 'ಕಾವ್ಯ'ದ ಕುರಿತು ಒಮ್ಮೆ ಚಿಂತಿಸೋಣ. ಏನು ಈ ಕಾವ್ಯವೆಂದರೆ? 'ಪ್ರತಿಭೆಯೇ ಕಾವ್ಯಕ್ಕೆ ಬೀಜ, ಅದಿಲ್ಲದೆ ಕಾವ್ಯ ಹುಟ್ಟದು' ಅಂದಿದ್ದಾನೆ ಮುಮ್ಮಟ. 'ಕವಿತೆ ಏಕಾಂತ ಧ್ಯಾನದಿಂದ ಹೊರಸೂಸುವ ಗಾನ' ಎಂದು ಕುವೆಂಪು ಹೇಳುತ್ತಾರೆ. 'ಹೃದಯದ ಕಾಪಿನಿಂದ ಕಾವ್ಯ' ಎನ್ನುತ್ತಾರೆ ಡಿ.ವಿ.ಜಿ.ಯವರು. 'ಕವಿತೆ ರಚಿಸಲು ಒಂದು ಅಳತೆ ಪಟ್ಟಿ,

ಕತ್ತರಿ ಮತ್ತು ಗದ್ಯ ಇದ್ದರೆ ಸಾಕೇ ಸಾಕು' ಎನ್ನುವುದು ಜೀಜಿಯವರ ಮಾತು. ಗೋಪಾಲಕೃಷ್ಣ ಅಡಿಗರ ಪ್ರಕಾರ, 'ಕಾವ್ಯವೆಂದರೆ ಪ್ರಶಾಂತ ಸ್ಥಿತಿಯಲ್ಲಿ ಮರುಕಳಿಸುವ ಭಾವ' 'ಶಬ್ದದ ಸೊಗಸಿನ ಮೂಲಕ ವಿಚಾರದ ಗಾಢತೆಯನ್ನು ತೋರುವ ಕಾವ್ಯ ಇಂದಿನ ಅಗತ್ಯಗಳಲ್ಲಿ ಒಂದು' ಎಂಬುದು ಯು.ಆರ್. ಅನಂತಮೂರ್ತಿಯವರ ಅಭಿಪ್ರಾಯ.

ಹೀಗೆ, ಕಾವ್ಯದ ಪರಿಭಾಷೆಯನ್ನು ಒಬ್ಬೊಬ್ಬ ವಿದ್ವಾಂಸರೂ ತಮ್ಮ ಅನುಭವಕ್ಕೆ ದಕ್ಕಿದಂತೆ ಅರ್ಥೈಸಿದ್ದಾರೆ. ಆಶ್ಚರ್ಯವೆಂದರೆ, ಕಾವ್ಯದ ಕುರಿತಾದ ಮಹಿಳೆಯರ ವ್ಯಾಖ್ಯಾನವೆಲ್ಲೂ ಕಂಡುಬರದಿರುವುದು. ಅಂದರೆ, ಮಹಿಳೆಯರು ಕಾವ್ಯವನ್ನು ಗಂಭೀರವಾಗಿ ಪರಿಗಣಿಸಿಲ್ಲವೇ? ಅಥವಾ ಈ ವಿಷಯದಲ್ಲಿ ಮಹಿಳೆಯರ ಚಿಂತನೆ ಗುರುತಿಸಲ್ಪಟ್ಟಿಲ್ಲವೇ?

ಕವನ ರಚನೆಯ ಮೂಲಕ ವೈಚಾರಿಕ ಅಲೆಗಳನ್ನು ಬಡಿದೆಬ್ಬಿಸಿದ ನಮ್ಮ ಹಿಂದಿನ ಕವಯಿತ್ರಿಯರ ವಿಚಾರಗಳನ್ನು ತಮ್ಮ ಅನುಭವಗಳಿಗೆ ಜೋಡಿಸಿಕೊಂಡು ಮಹಿಳೆಯರು ಕಾವ್ಯಕ್ಕೊಂದು ಹೊಸ ತಿರುವು ಕೊಡುವ ಪ್ರಯತ್ನ ಮಾಡಿದ್ದಾರೆ. ಜ. ಸರ್ವಮಂಗಳಾ, ಸ. ಉಷಾ, ಎಚ್.ಎಸ್. ಮುಕ್ತಾಯಕ್ಕ, ವೇದಾವತಿ, ಮಾಲತಿ ಪಟ್ಟಣಶೆಟ್ಟಿ. ಬಿ.ಟಿ. ಲಲಿತಾನಾಯಕ್, ಶಶಿಕಲಾ ವಸ್ತ್ರದ, ವಿಜಯಾ ದಬ್ಬೆ, ಕಮಲಾ ಹೆಮ್ಮಿಗೆ. ಹೇಮಾ ಪಟ್ಟಣಶೆಟ್ಟಿ, ಶೈಲಜಾ ಉಡುಚಣ, ಸುಕನ್ಯಾ ಮಾರುತಿ, ಎಚ್. ಎಲ್. ಪುಷ್ಪಾ. ಪ್ರತಿಭಾ ನಂದಕುಮಾರ್. ಎಂ.ಆರ್. ಕಮಲ... ಪಟ್ಟಿ ಇನ್ನೂ ಉದ್ದವೇ ಇದೆ. ಇವರಲ್ಲಿ ಹೆಚ್ಚಿನವರು ಇಂದಿಗೂ ಕವನ ರಚನೆಯನ್ನು ಕೈಬಿಡದೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಇಂದಿನವರ ಕಾವ್ಯ ರಚನೆಗೆ ಪೂರಕವಾದ ಹಿಂದಿನ ಕವಯಿತ್ರಿಯರ ವೈಚಾರಿಕ ನಿಲುವನ್ನೊಮ್ಮೆ ಗೌರವದಿಂದಲೂ, ಕಾವ್ಯಪ್ರೀತಿಯಿಂದಲೂ ನೆನಪು ಮಾಡಿಕೊಳ್ಳುತ್ತೇನೆ.

'ಕಸಕಿಂತ ಕಡೆಯಾಯ್ತೆ | ಹೆಣ್ಣು ಜನ್ಮವು ನಿನಗೆ | ಈ ಭಾರ ಹೊರಿಸುವುದಕೆ'
(ನವೋದಯ ಸಾಹಿತ್ಯದ ಮೊದಲ ಕವಯಿತ್ರಿಯೆಂದು ಗುರುತಿಸಲ್ಪಟ್ಟಿರುವ ಬೆಳಗೆರೆ ಜಾನಕಮ್ಮ)

ನಿಮ್ಮೆಲ್ಲರ ದೃಢತೆ | ಕಣ್ಣು ಬೆಳಕಾಗಿ ಬಂದು | ಈ ಮನದ ಮಲ್ಲಿಗೆಗೆ | ವಜ್ರಲೇಪವ ಬಳಿದು | ಉಳಿಸಬೇಕು | ಇಲ್ಲ, ದಿನ ದಿನದ ಗರಗಸಕ್ಕೆ | ಕತ್ತೊಡ್ಡಿ ಸಾಕೆನಿಸಿದಾಗ ನಿಮ್ಮಲ್ಲಿಗೆ ಬರುವೆ' (ಪರಂಪರೆ - ವಿಜಯಾ ದಬ್ಬೆ)

ರಕ್ತಮಾಂಸದ ಪಿಂಡವಾಗಿ ಹುಟ್ಟಿ ಬೆಳೆದು | ಅದಕೆ ಬೆಲೆ ಕೊಡಬೇಡ ಎನ್ನುವ ಇವರಾರೂ| ನನಗೆ ಬೇಡವೇ ಬೇಡವಯ್ಯ (ಅಮ್ಮನ ಗುಡ್ಡ - ನಾನು ನಾನೇ - ಜ. ಸರ್ವಮಂಗಳಾ)

ನೀ ಹಾಕಿರುವ ಅಣೆಕಟ್ಟು | ಒಡೆದು ಬಿರುಮಳೆಗೆ ಸೊಕ್ಕಿ | ಘೋರ್ಗರೆದು ನುಗ್ಗಿ| ನಿಶ್ಚಿಂತಾಗದೆ ಬದುಕುತ್ತೇನೆ | ನನಗೆ ದಾರಿ ಬಿಡು' (ತೊಗಲು ಗೊಂಬೆಯ ಆತ್ಮಕಥೆ - ಅಮ್ಮನಿಗೆ - ಸ. ಉಷಾ)

ನನ್ನ ಕನಸು ಕಲ್ಪನೆಗಾಗಿ | ಬುದ್ಧಿ ಭಾವನೆಗಾಗಿ | ಆತ್ಮ ಗೌರವಕ್ಕಾಗಿ ನನಗಾಗಿ ನಾನಾಗಿ| ಇರಲೇಬೇಕು (ಬಣ್ಣದ ಗರಿ - ಮಾಲತಿ ಪಟ್ಟಣಶೆಟ್ಟಿ)

ಮೂರನೆಯ ಮದುವೆಯಲ್ಲಿ | ಮುದುಕಪ್ಪ ನಲಿವಾಗ | ವಿಧವೆಯ ಕಣ್ಣೀರಲ್ಲಿ | ನರಳುತ್ತಿತ್ತು ಬದುಕು (**ಬದುಕು - ಶಶಿಕಲಾ ವಸ್ತ್ರದ**)

ನಂತರದಲ್ಲಿ ಬಂದ ಕವಯಿತ್ರಿಯರು ಹೊಸ ಸಂಕೇತಗಳು, ಪ್ರತಿಮೆಗಳು, ರೂಪಕಗಳ ಮೂಲಕ ಕವಿತೆ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಅಲ್ಲೋ ಇಲ್ಲೋ ಒಬ್ಬರು, ಅದೇ ಅದೇ ಚಿಂತನೆಯನ್ನು ಹೊಸ ದಾರಿಗೆ ಸಾಗಿಸುವ ಪ್ರಯತ್ನದಲ್ಲಿದ್ದಾರೆ.

೧೯೯೧ರಲ್ಲಿ ಪ್ರತಿಭಾ ತ್ರೈಮಾಸಿಕ ಪುಸ್ತಕ ಯೋಜನೆಯಡಿ ಹೊರಬಂದ ಕವನ ಸಂಕಲನ - **ಅತ್ತು ಬಿಡೇ ಗೆಳತಿ**. ಮೂವರು ಕವಯಿತ್ರಿಯರಾದ ಸಿ.ಎಸ್. ಸವಿತ, ಎಂ. ಆರ್. ಭಗವತಿ, ಸುಧಾಶರ್ಮ ಚವತ್ತಿ ಇವರ ಒಟ್ಟು ಹತ್ತೊಂಬತ್ತು ಕವನಗಳನ್ನೊಳಗೊಂಡ ಸಂಕಲನವಿದು. ಸುಧಾ ಶರ್ಮ ಚವತ್ತಿಯವರ ಪ್ರೀತಿ ಕವನದಲ್ಲಿ, ಪ್ರೀತಿಯ ಹಂಬಲಿಕೆ ವ್ಯಕ್ತವಾಗುವ ರೀತಿ ಹೇಗಿದೆ ನೋಡಿ. 'ನಿನ್ನ ಬೆರಳ ಸಂದಿಯ ನಡುವೆ | ಮುಗಿಯುತ್ತ ಬಂದ ಸಿಗರೇಟಿನ ಹಾಗೆ | ಸೇದಿ ಬಿಡು ನನ್ನ | ನಿನ್ನ ಗ್ಲಾಸಿನ ತಳದಲ್ಲಿದ್ದ | ಕೊನೆಯ ಪೆಗ್ಗಿನ ಹಾಗೆ | ಮುಗಿಸಿ ಬಿಡು ನನ್ನ'. ಈ ಪ್ರೀತಿ 'ಶಬ್ದಸೀಮೆ'ಯನ್ನು ದಾಟಿ ಸಾಗುತ್ತದೆ. 'ಸ್ತಬ್ಧ ಮೌನದ, ಶೀತ ಗಾಳಿಯ, ಒದ್ದೆ ಎದೆಯಲ್ಲಿ| ಮೊಳಕೆಯೊಡೆದು | ಹಲ್ಲು ಕಿರಿದದ್ದರ ಹೆಸರು | ಪ್ರೀತಿಯಲ್ಲವೇ?" ಈ ಪ್ರೀತಿ ಮುಂದಕ್ಕೆ ಅಮ್ಮ, ಸೀರೆ, ನೆನಪುಗಳಲ್ಲಿ ಬೆಚ್ಚಗೆ ಹುದುಗಿಕೊಂಡು ಮುದ ನೀಡುತ್ತವೆ. ಬದುಕಿನುದ್ದಕ್ಕೂ ಮರೆಯಲ್ಲೇ ಉಳಿಯುವ ಕರ್ಣನ ಅವಸಾನಾನಂತರ ದುಃಖಿಸುವ ದ್ರೌಪದಿಗೆ 'ಶ್, ಸುಮ್ಮನಿರು| ನಿನ್ನ ಕಣ್ಣ ಹರಳುಗಟ್ಟಿದ ನೀರಲ್ಲಿ ಅವತ್ತು ಸ್ವಯಂವರದಲ್ಲಿ | ಬಿಲ್ಲನೆತ್ತಲು ಬಂದ ಕರ್ಣನ ನಗು | ಪಕಪಕನೆ ಮಿಂಚುವುದು | ಜಗತ್ತಿಗೆ ಗೊತ್ತಾಗಬಾರದು ಎನ್ನುವಲ್ಲಿ ದ್ರೌಪದಿಯ 'ಅಂತರಂಗದ ವಜ್ರ' ಪ್ರಕಟವಾಗುತ್ತದೆ.

ಸಿ.ಎಸ್. ಸವಿತರ **ಧಾರಾವಾಹಿ** ಆಪ್ತವಾಗುವ ಕವಿತೆ. ಮುಟ್ಟಿನ ಮೂರು ದಿನಗಳ ಜೊತೆಗೆ ಭ್ರಮೆ ಸೋರಿ ಹೋಗುವ ಹೆಣ್ಣಿನ ವರ್ಣನೆ ಇಲ್ಲಿದೆ. ಹೂವಾಡಗಿತ್ತಿ, ಭೂಮಿ, ಅರಳು ಇವು ಸರಳ ಓದಿಗೆ ಒದಗುವ ಕವಿತೆಗಳು. ಎಂ.ಆರ್. ಭಗವತಿಯವರದು ಬೇರೊಂದು ಹಾದಿ. 'ಮಾಡದ ತಪ್ಪನ್ನೆ ಹೆಕ್ಕುವ| ಸಮಾಜ ಹುಟ್ಟು ಹಾಕುತ್ತದೆ| ಇನ್ನಷ್ಟು, ಬೇಕಾದಷ್ಟು| ನೇಪಥ್ಯದಲ್ಲಿ ಬಿಕ್ಕು ತಾನೇಕೆ| ಆತ್ಮೀಯರಿಗೆ ಕೇಳಿಸದಷ್ಟು' ಇಲ್ಲಿ ಯಾವುದೋ ಒಂದು ನೋವಿದೆ. ಅದನ್ನು ಧೈರ್ಯವಾಗಿ ಹೇಳಲಾಗದ ಸ್ಥಿತಿ ಕವಯಿತ್ರಿಯದು. ಕವಯಿತ್ರಿಯ ಸಂವೇದನೆ ನೇಪಥ್ಯದಲ್ಲೇ ಉಳಿದುಕೊಂಡು ಬಿಡುತ್ತದೆ. ನಡಿಗೆ, ನೇಪಥ್ಯ, ಮೂಕದಾರಿಯ ನೆನಪು, ಪ್ರೀತಿ - ನಿರಂತರ, ನಗುವ ಮುಖದಿಂದ ಕವಿತೆಗಳು ಓದಿಸಿಕೊಳ್ಳುತ್ತವೆ. ಇಲ್ಲಿನ ಕವಿತೆಗಳಿಂದ ಈ ಮೂವರು ಭರವಸೆಯ ಕವಯಿತ್ರಿಯರೆಂದು ನಿಶ್ಚಯವಾಗಿ ಹೇಳಬಹುದು. ಕಾವ್ಯ ದಾರಿಯಲ್ಲಿ ಇವರ ಮುಂದಿನ ಹೆಜ್ಜೆಗಳು ಸ್ಪಷ್ಟವಾಗಬೇಕಿದ್ದರೆ, ಇವರ ಇತ್ತೀಚಿನ ಕೃತಿಗಳನ್ನು ಗಮನಿಸಬೇಕಾಗುತ್ತದೆ.

ನಿಜವಾದ ಕವಿಗೆ ಕಾವ್ಯ ಅರಸುವಿಕೆಯಾಗುತ್ತದೆ. ಹಾಗೆ ಅರಸುತ್ತಾ ತನ್ನನ್ನು ತಾನು ಗುರುತಿಸಿಕೊಳ್ಳುವ ಯತ್ನ ನಡೆಸಿದವರು ಮಮತಾ ಜಿ. ಸಾಗರ. **ಕಾಡ ನವಿಲಿನ ಹೆಜ್ಜೆ** -

ಕವಯಿತ್ರಿಯ ಈ ಪ್ರಥಮ ಸಂಕಲನ ೧೯೯೨ರಲ್ಲಿ ತನ್ನ ಹೆಜ್ಜೆ ಗುರುತುಗಳನ್ನು ಗುರುತಿಸಲು ಓದುಗರಿಗೆ ಬಿಟ್ಟುಕೊಟ್ಟಿದೆ. ಶೀರ್ಷಿಕೆಯ ಸೌಂದರ್ಯ, ಓನ್ನೆಲೆ, ಕವಿತೆಗಳ ಒಳ ಪ್ರವೇಶಿಸುತ್ತಾ ಅನಾವರಣಗೊಳ್ಳುತ್ತವೆ. ಈ ಕವಿತೆಗಳು ಓದಿಗೆ ಪ್ರೇರೇಪಿಸುವುದು ಅವುಗಳ ಲಯುಗಾರಿಕೆಯಿಂದ. ಮರು ಓದಿನಲ್ಲಿ ಅರ್ಥ ಹೊಳೆಯಿಸುವುದು ಇಲ್ಲಿನ ಕಾವ್ಯಪ್ರತಿಭೆ.

'ಬಿಚ್ಚಿ ಬಿದ್ದಿದೆ ಬಯಲು| ಮಳೆಯಿಲ್ಲ ಬೆಳೆಯಿಲ್ಲ| ನಾಲ್ಕು ಜೋಜಿನ ಕೆಳಗೆ ರಂಗಮಂಚ| ಬಯಲಾಟಕೆಂದೇ ಹರಕು ಟೆಂಟು' (ಬಯಲಾಟ) ಎಂಬಂತಹ ಸಾಲುಗಳು ಅಡಿಗರ 'ಭೂಮಿಗೀತ'ದ ಸಾಲುಗಳನ್ನು ನೆನಪು ಮಾಡಿಕೊಡುತ್ತವೆ.

'ಕವಿತೆಯೆಂದರೆ' ಒಂದು ತೆವಲು. ಕವಿತೆ, 'ದುಷ್ಟ, ಪುಷ್ಟ, ಮೈಕಟ್ಟಿನ| ಪ್ರಿಯತಮನ ಹಾಗೆ| ಶಬ್ದಗಳ ತೂಕ ಅವನ ಒಂದೊಂದು | ಸ್ನಾಯು ಬಲವಿದ್ದ ಹಾಗೆ| ಓದುತ್ತಲೇ ಗಕ್ಕನೆ ಅಪ್ಪಿ ಬಿಡಬೇಕು| ಅವನಪ್ಪುಗೆಯ ಹಾಗೆ| ಕವಿತೆ ಸಿದ್ಧವಾದ ಮೇಲೆ ಹಿತವಾಗಿರಬೇಕು| ಅವನ ಜತೆ ಕಳೆದ ರಾತ್ರಿಯ | ನೆನಪಿನ ಹಾಗೆ'. ಇಲ್ಲಿ ಬಳಕೆಯಾಗಿರುವ 'ದುಷ್ಟ, ಪುಷ್ಟ,' ಶಬ್ದ ಪ್ರಯೋಗ ಕುತೂಹಲಕಾರಿಯೆನಿಸುತ್ತದೆ. 'ದಷ್ಟ' ಎನ್ನುವುದು 'ದುಷ್ಟ' ಆದದ್ದು ಪ್ರಿಯತಮನ ಅತಿ ಚೇಷ್ಟೆಗಳ ಸಂಕೇತವೇ? ಈ ಪದಪ್ರಯೋಗ ಇವರ 'ಏಪ್ರಿಲ್ ಹೇಳಿಕೊಟ್ಟದ್ದು' ಕವಿತೆಯಲ್ಲೂ ಕಾಣಿಸಿಕೊಳ್ಳುತ್ತದೆ. 'ಸಮ, ಅಸಮಕಾಲೀನ, ಪಾಶ್ಚಾತ್ಯ, ಪೌರಾತ್ಯ| ಪರಂಪರೆಯ ಗಂಟು ಹಾಸಿಗೆಯಲ್ಲಿ ಮಲಗಬೇಕು | ಬಿಚ್ಚಿ ಬಿಡಬೇಕು ಮೈ ಛಳಿ ಬಿಟ್ಟು ಹೋಗುವ ತನಕ | ಮೃದುವಾದ ಮಸ್ಲಿನ್ ಮೈ ಹರಿದು ಹೋಗುವ ತನಕ | ಹೊಸ ಭ್ರೂಣ ಕಟ್ಟಿ ನಮ್ಮ ರಕ್ತದ್ದೇ| ದುಷ್ಟಪುಷ್ಟ ಕೂಸು ಹುಟ್ಟುವ ತನಕ ಕಾಯಬೇಕು.'

ಆರು ವರ್ಷಗಳ ಬಳಿಕ ನದಿಯ ನೀರಿನ ತೇವ (೧೯೯೮) ದಲ್ಲಿ ಮಮತಾ ಹೊಸ ಪ್ರಯೋಗಗಳ ಮೂಲಕ ಕವಿತೆಯ ಸಾಧ್ಯತೆಯನ್ನು ತೋರಿಸಿಕೊಟ್ಟಿದ್ದಾರೆ. ಅವರೇ ಹೇಳಿಕೊಂಡಂತೆ ಈ ಅವಧಿ ಅವರಿಗೆ ಅಡಿಗರ ಕಾವ್ಯಪ್ರಯೋಗದಿಂದ ಹೊರಬರುವ ಪ್ರಯತ್ನ. ಈ ಸಂಕಲನದ ಕವಿತೆಗಳು ವೈವಿಧ್ಯವಾಗಿವೆ. ಇವುಗಳ ಆಳ, ಅಗಲವೂ ಹಾಗೆಯೇ.

ಮಮತಾ ಅಕ್ಷರಗಳನ್ನು ಚಿತ್ರದೊಂದಿಗೆ ಜೋಡಿಸಿ ಕವಿತೆಯಾಗಿಸಿದ್ದಾರೆ ಮತ್ತು ಆಗ ಕವಿತೆ ಧ್ವನಿಸುವತ್ತ ಗಮನ ಸೆಳೆಯುತ್ತಾರೆ. ಉದಾಹರಣೆಗೆ, ಇಲ್ಲೊಂದು ದೃಶ್ಯವಿದೆ. ಒಂದು ಜಗ್‌ನಿಂದ ಕಪ್‌ಗೆ ಕಾಫಿ ಸುರಿಯುತ್ತಿರುತ್ತದೆ. ಆ ಮಧ್ಯೆ 'ಕವಿತೆ ಮಾತನಾಡುತ್ತದೆ. 'ಕವಿತೆ – ಒಂದು ಕಪ್ಪು ಕಾಫಿಯ ಹಾಗೆ'. ಇಲ್ಲಿ 'ಕಪ್ಪು' ಎರಡು ರೀತಿಯಲ್ಲಿ ಕವಿತೆಗೆ ಧ್ವನಿ ಮೂಡಿಸುವುದನ್ನು ಯೋಚಿಸಬೇಕಾಗುತ್ತದೆ. ದೃಶ್ಯದೊಳಗೆ ಶಬ್ದಗಳು ಸೇರಿಕೊಂಡು ಏನನ್ನು ಹೇಳಬಲ್ಲವು? ಏನನ್ನು ತಾನೇ ಹೇಳಲಾರವು? ಅದನ್ನಿಲ್ಲಿ ಕವಿತೆ ಸಾಧಿಸುತ್ತದೆ.

ಕಾಡ ನವಿಲಿನ ಹೆಜ್ಜೆಗೆ ಕವಿ ಗೋಪಾಲಕೃಷ್ಣ ಅಡಿಗರ ಮುನ್ನುಡಿ ಮತ್ತು ವಿಮರ್ಶಕ ಕಿ.ರಂ. ನಾಗರಾಜರ ಹಿನ್ನುಡಿ. ನದಿಯ ನೀರಿನ ತೇವಕ್ಕೆ ಕೆ.ವಿ. ತಿರುಮಲೇಶರ ಮುನ್ನುಡಿ.

ಮಮತಾರ ಕಾವ್ಯದ ಕುರಿತಂತೆ ಈ ಮೂವರ ಅಭಿಪ್ರಾಯಗಳು ಒಟ್ಟು ಕಾವ್ಯದ, ಮಹಿಳಾ ಕಾವ್ಯದ ಬಗ್ಗೆ ಒಂದು ಆಳ ಚಿಂತನೆಯನ್ನು ಹುಟ್ಟು ಹಾಕುತ್ತವೆ.

ತಾನು ಬಹಳ ವರ್ಷಗಳಿಂದ ಬರೆಯುತ್ತಾ ಬಂದ ಕವನಗಳನ್ನು ಶಾರದಾ ಎಸ್. ಶೆಟ್ಟಿಯವರು ಸಂಕಲನವಾಗಿಸಿದ್ದಾರೆ. **ಮಳೆಗೆ ಮಿಂದ ಬಿಸಿಲು** (೧೯೯೪) ಕೆಲವು ದೀರ್ಘ, ಹಲವು ಪುಟ್ಟ ಕವನಗಳು, ಹಾಯ್ಕುಗಳು, ಭಾವಾನುವಾದಗಳನ್ನು ಒಳಗೊಂಡಿವೆ. 'ನೀವು ಓದಿದರೆ ಕವಿತೆ ನಿಮ್ಮದು| ಬರೆದಾಗ ನನ್ನ ಕವಿತೆ' ಎಂದು ಮುಗ್ಧವಾಗಿ ಹೇಳುತ್ತಾ ಸ್ವೀಕರಿಸುವ ಆಯ್ಕೆಯನ್ನು ಓದುಗರಿಗೆ ಬಿಟ್ಟುಕೊಡುತ್ತಾರೆ. ದೂರ ಬಾನಿನ ನೂರು ತಾರೆಗಳು 'ಕಣ್ಣು ಕೋರೈಸಬಹುದು| ಕವನ ಕಟ್ಟಬಹುದು | ನಂಬಬಹುದೇ | ಮನೆಯ ಕತ್ತಲ | ಕಳೆದಾವು ಎಂದು?' ವಾಸ್ತವದ ಅರಿವಿನಲ್ಲೇ ಕವಿತೆಗಳಿಗೆ ಭಾವ ತುಂಬುವವರು ಈ ಕವಯಿತ್ರಿ.

ಶಾರದಾ ಅವರು, ನಿಸರ್ಗದ ಚೆಲುವನ್ನು ಬಹಳ ಸಹಜವಾಗಿ ಸೆರೆಹಿಡಿಯಬಲ್ಲರು. 'ಮಳೆಗೆ ಮಿಂದ ಬಿಸಿಲು ಇಂದು | ಹೊರಗೆ ಓಡಿ ಬಂದಿದೆ | ತಾಯ ಹಿಡಿತ ತಪ್ಪಿ ಬಂದ | ಮಗುವಿನಂತೆ ನಲಿದಿದೆ', 'ತೇರು ಹೂವಿನ ರಥದ ಸಿಂಗರದ ಬೆಂಗಡೆಗೆ | ದುಂಡು ಮಲ್ಲಿಗೆ ಹೂವು| ತಿರಿಯುತ್ತಿದ್ದಂತೆ', 'ರವಿ ನೋಡಿ, ಬಲು ತುಂಟು ಹುಡುಗ| ಮೂಡಣದ ಹೊಸಿತಿಲಲಿ| ಎಡವಿ ಬಿದ್ದು | ಚೆಲ್ಲಾಡಿ ಬಿಟ್ಟಿರುವ ವಜ್ರಗಳ (ಮಂಜು ಹನಿ) ಎನ್ನುವಂತಹ ಸಮರ್ಥ ರೂಪಕಗಳನ್ನು ನೀಡುತ್ತಾರೆ. ಇಲ್ಲಿನ ಕವಿತೆಗಳು ದೀರ್ಘ ಕಾಲದಲ್ಲಿ ವರ್ಷಗಳ ಅಂತರದಲ್ಲಿ ರೂಪುಗೊಂಡಂಥವು. ಶಾರದಾ ಶೆಟ್ಟಿಯವರು ಈ ಹಾದಿಯಲ್ಲಿ ಗಟ್ಟಿ ಹೆಜ್ಜೆಗಳನ್ನೂರಲು ಪ್ರಯತ್ನಿಸಿದರೆ ಕಾವ್ಯಲೋಕಕ್ಕೊಂದು ಉತ್ತಮ ಕೊಡುಗೆಯನ್ನು ನಿರೀಕ್ಷಿಸಬಹುದು.

**ಗಂಧದ ಕಡ್ಡಿ** ಶಶಿಲೇಖಾ ಬಿ. ಇವರ ಮೊದಲನೆಯ ಸಂಕಲನ (೧೯೯೪). ಎಲ್ಲಿ ಅರಸಲಿ ನಿನ್ನ ಕವನದಲ್ಲಿ ತಾಯಿಯನ್ನು ನೆನೆಯುತ್ತಾ 'ನನ್ನ ದೀಪವ ಉರಿಸೆ ಉರಿದುರಿದು ಆರಿತ್ತು | ನಿನ್ನ ಹೃದಯದ ಹೂಬತ್ತಿ | ನನ್ನ ರಾಗವ ಮಿಡಿಸೆ ಮಿಡಿ ಮಿಡಿದು ಕಡಿದಿತ್ತು| ನಿನ್ನ ಜೀವದ ತಂತಿ' ಎನ್ನುವ ಸಾಲುಗಳಲ್ಲಿ ಸೊಗಸಾದ ಭಾವಶಿಲ್ಪವಿದೆ. ಇದೇ ಭಾವನೆಯನ್ನು **ಗಂಧದ ಕಡ್ಡಿ**ಯಲ್ಲೂ ಕಾಣಬಹುದು. ಇಲ್ಲಿನ ಬಹುಪಾಲು ಕವಿತೆಗಳು ಆತ್ಮವಿಶ್ವಾಸದ ಪ್ರತೀಕವಾಗಿ ರೂಪುಗೊಂಡಿವೆ.

'ಅಮಾವಾಸ್ಯೆಯ ಕರಿಛಾಯೆಯಲ್ಲಿ| ಆತ್ಮಗಳು ಕುದಿಯುವುವು' ಎನ್ನುವ ಮಾತಿನಲ್ಲಿ ದುಗುಡ ತುಂಬಿದರೂ ಕೊನೆಯ ಸಾಲುಗಳು' ಬರಬಹುದು ನನಗೂ ಅಮಾವಾಸ್ಯೆಯ ಮುಂದು', '..... ಒಂದು ದಿನ | ತೂರಬಹುದು ಬೆಳ್ಳಿ ಕಿರಣಗಳು ನನ್ನ ಕಿಟಕಿಯೆಡೆಯಿಂದ' ಎಂದು ಭರವಸೆ ತಾಳುತ್ತಾರೆ. **ನನ್ನನ್ನು ಕಳೆದುಕೊಂಡಿದ್ದು, ಕಾಲಯಂತ್ರ ಹುಡುಕೋಣವೇ?** ಕವಿತೆಗಳಲ್ಲಿ ಆಶಯ ಪುನರಾವರ್ತನೆಯಾಗುತ್ತದೆ. 'ಅವಳ ಸಿರಿ ಮುಡಿಗೆ| ಹರಿವ ನದಿಗಳು ಚೈತಲೆ ಎಳೆದಾಗ| ಇಳಿವ ಸೂರ್ಯ ಸಿಂಧೂರ ಹಚ್ಚುತ್ತಾನೆ' (ಪ್ರಕೃತಿ) ಎನ್ನುವ ವರ್ಣನೆ ಕವಿತೆಯನ್ನು ಪರಿಣಾಮಕಾರಿಯಾಗಿಸಿದೆ.

ಇವರ ಎರಡನೆ ಸಂಕಲನ **ಒಂದು ಹಿಡಿ ಬೆಳಕು** (೨೦೦೧). ಹೆಣ್ಣು, ಸಂಪ್ರದಾಯದ ಕಟ್ಟುಪಾಡುಗಳಿಂದ ಹೊರಬರುವ ಚಿತ್ರಣ ಶಿಲುಬೆಯಲ್ಲಿದೆ. ಏಸುವನ್ನು ಶಿಲುಬೆಗೇರಿಸಿದ್ದು

ಅವರ ಕಡೆಯವರೇ. ಹಾಗೆಯೇ ಸಂಪ್ರದಾಯಗಳನ್ನು, ಸ್ತ್ರೀತ್ವವನ್ನು ಹೆಣ್ಣಿನ ಮೇಲೆ ಅವಳ ಕಡೆಯವರೇ ಹೇರುತ್ತಾರೆ. ಅವಳೂ ಅದನ್ನು ಹೊರುತ್ತಾಳೆ. 'ಮೊಳೆ ಜಡಿದರು ಅವರವರ ಅಳತೆಗೆ ತಕ್ಕಂತೆ' ಎನ್ನುತ್ತಾ, 'ಹೀಗೆ ನನ್ನ ಶಿಲುಬೆಗೇರಿಸಿದ್ದಾಯ್ತು ಅಥವಾ...| ನಾನೇ ಹೇರಿಕೊಂಡೆನೆ ಶಿಲುಬೆ ಅವರಿವರ ಹೆಸರಲ್ಲಿ?' ಎಂದು ಅನುಮಾನಕ್ಕೊಳಗಾಗುತ್ತಾರೆ. ಇಷ್ಟಕ್ಕೇ ನಿಲ್ಲಿಸದೆ ಮುಂದುವರಿದು 'ಯಾವುದಿದು ವಿಸ್ಮೃತಿ? ಏನಿದೆಲ್ಲ?' ಎನ್ನುವ ಸಾಲುಗಳು ವಾಚ್ಯಕ್ಕೆ ಎಡೆ ಮಾಡಿಕೊಟ್ಟಿವೆ. ಎರಡನೆಯ ಭಾಗದಲ್ಲಿ ಹೊತ್ತ ಶಿಲುಬೆಯನ್ನು ಅಂಗಿ ಕಳಚುವಂತೆ ಜಾರಿಸಿಕೊಂಡು ಸೆಟೆದು ನಿಲ್ಲುವಿಕೆ ಕವನದ ಆಶಯ. 'ಇನ್ನು ಹೆದರಬೇಕಿಲ್ಲ ನಾನು| ಯಾವ ಮೊಳೆಗಳಿಗೂ, ಮೊಳೆ ಜಡಿದ ಯಾರಿಗೂ| ಮತ್ತು ಎಂಥಾ ದೊಡ್ಡ ಶಿಲುಬೆಗೂ' ನಿರಾಸೆ, ವ್ಯಂಗ್ಯ, ಮೊನಚು ಇವೆಲ್ಲ ಇದ್ದರೂ ಕವಯಿತ್ರಿ ಅವುಗಳಿಗೇ ಅಂಟಿಕೊಂಡಿಲ್ಲ. ಇನ್ನಷ್ಟು ಎಚ್ಚರಿಕೆ ವಹಿಸಿದರೆ ಕೆಲವು ಕವನಗಳು ವಾಚ್ಯವಾಗುವುದನ್ನು ತಪ್ಪಿಸಬಹುದಿತ್ತೇನೋ.

ವೈದೇಹಿಯವರ ಕಾವ್ಯಾಭಿವ್ಯಕ್ತಿ ವಿಶಿಷ್ಟ ರೀತಿಯದ್ದು. ಕತೆ, ಕಾದಂಬರಿಗಳ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿರುವ ಇವರು ಉತ್ತಮ ಕವಯಿತ್ರಿ ಕೂಡಾ. ಇವರ ಕವಿತೆಗಳು ಸೂಕ್ಷ್ಮ, **ಪಾರಿಜಾತ** (೧೯೯೬)ದ ಹಾಗೆ. ವಿಶೇಷವೆಂದರೆ, ಇವರ ಕವಿತೆಗಳು ಮೌನದಲ್ಲಿ ಮಾತನಾಡುತ್ತವೆ. ಆ ಮಾತಿಗೆ ನಾವು ಪೂರ್ತಿ ತೆರೆದಿರಬೇಕು. ಆಗ ಅವು ಒಂದಲ್ಲ, ನೂರು ಮಾತು ಹೇಳುತ್ತವೆ ಸ್ಪಷ್ಟವಾಗಿ ಖಂಡಿತವಾಗಿ.

ಹೆಚ್ಚಿನ ಕವಯಿತ್ರಿಯರಂತೆ ಚುಕ್ಕಿ, ರಂಗೋಲಿ, ಅಮ್ಮ, ಅಡುಗೆ, ದೇವರು, ಕಡಲು, ಮೋಡ ಇವು ವೈದೇಹಿಯವರನ್ನೂ ಕಾಡಿವೆ. ಇವು ಅವರ ಕವಿತೆಗಳ ಮೂಲಕ ಓದುಗರನ್ನು ಕಾಡುವ ರೀತಿಯೇ ಬೇರೆ. ಇವರ ಒಂದು ಕವನ **ಮನೆವಾರ್ತೆ**. ಈ ಒಂದೇ ಕವನದ ಮೂರು ಭಾಗಗಳನ್ನು ಗಮನಿಸೋಣ:

'ನಿಂತಿದೆ ಮನೆ| ನಿಂತ ಮನೆಯೊಳಗೊಂದು| ಸ್ವಂತ ಮಾಟದ ಬದುಕು| ನಿಂತೆ ಬಿಟ್ಟಿದೆ ಮುನಿಸಿ| ಪಾಲಿಟಿ ನೀರು| ಇನ್ನಾದರೂ ಒಟ್ಟು ಸಹಿ| ದೂರು ಕೊಡಬೇಕು'

'ಇದೇ ಮಸಾಲೆ ದಿನವೂ ಇದೇ| ಬೇಳೆ ತರಕಾರಿ| ತುರಿ ಹುರಿ ಅರೆ ಕಾಯಿ ಸುಳಿ| ಸಾರು ಹುಳಿ ಉಪಕರಿ| ನಡು-ನಡುವೆ ತಾಂಡವ ನೃತ್ಯ ಕರೀ| ಗುಣು ಗುಣು - ಮಗುಚಿ ಮುಚ್ಚಿ| ಪಟ್ಟಾಂಗ ವರದಿ ನಗೆ ಸತ್ಸಂಗ ಅಭಿರುಚಿ | ಸ್ವಾದ ವಾದ ವಿಮರ್ಶೆ ಓದು ನಂಚಿ| ಎಲ್ಲ ಒಟ್ಟಿಗೆ ಊಟ!| ರೆಡಿ!|

'ಮಂಜು ಸಂಜೆ ಇದು ಬೇಸರದ ಮನಸು| ಬೇಸರದ ಮನಸಿಗೆ ಸೂಜಿ ಮೊನೆ ನೆಲವುಂಟೆ ವಿಶ್ರಮಿಸಲು?| ಬೇಸರದ ಮನಸಿಗೆ ಸೂಜಿಮೊನೆ ಶಾಂತ ನೆಲವುಂಟೆ? ವಿಶ್ರಮಿಸಬೇಕು| ನಾಳೆಗೆ| ಹೊಸ ಅಡುಗೆ ಸಾಹಿತ್ಯ| ಯೋಜಿಸಬೇಕು'

ಶಬ್ದ, ಚಮತ್ಕಾರ, ಹದವಾದ ಹೆಣಿಗೆ, ಭಾಷಾ ಸಾಮರ್ಥ್ಯ, ಕಾವ್ಯಾಸಕ್ತರನ್ನು ಒಲಿಸಿಕೊಳ್ಳುವುದರೊಂದಿಗೆ ಬೌದ್ಧಿಕ ಕಸರತ್ತಿಗೆ ಒಳಪಡಿಸುತ್ತದೆ.

ಈ ರೀತಿ, ವೈದೇಹಿಯವರ ಮೌನದಲ್ಲಿನ ಮಾತು 'ತುಂಬಿ ತುಂಬಿ ತುಂಬಿ ಬಂತು| ಹೃದಯದೊಳಗೆ ಸೀದ' **(ಕೋಗಿಲೆಯೊಡನೆ)** ಕವಿತೆಗೆ ನಾಲ್ಕು ಚುಕ್ಕಿಗಳನ್ನೇ ಶೀರ್ಷಿಕೆ ಇಟ್ಟು 'ತೆರೆದ ಕಿಟಕಿಯಾಚೆ|ಸಾಗುತ್ತಿದೆ ಇರುಳು| ಬೆಳಕು ತರಲು' ಎಂದು ಬಿಡುತ್ತಾರೆ. 'ನಾ ಹಾಡುವುದನು ಮಾತ್ರ| ನಿಲ್ಲಿಸುವುದಿಲ್ಲ' ಎಂದೂ ಹೇಳುತ್ತಾರೆ.

ಅಡುಗೆ ಸಾಹಿತ್ಯ, ಯು. ಮಹೇಶ್ವರಿಯವರನ್ನು ಇನ್ನೊಂದು ದಿಕ್ಕಿನಲ್ಲಿ ಸೆರೆ ಹಿಡಿದಿದೆ. ಇವರು ತಮ್ಮ ಕವಿತೆಯನ್ನು ಸೋಮಾರಿ ಎನ್ನುತ್ತಾರೆ. ಅದಕ್ಕಾಗಿ ಅದನ್ನು ಅಡುಗೆ ಮನೆಗೆ ನೂಕಿ ದುಡಿಮೆಗೆ ಹಚ್ಚುತ್ತಾರೆ. ಚಟಪಟನೆ ಸಿಡಿವ ಒಗ್ಗರಣೆ, ಶುಂಠಿ ಮೆಣಸಿನ ಕಷಾಯ, ಈರುಳ್ಳಿ, ಕಣ್ಣೀರು, ಬೆಂದ ಆಲು ಎಲ್ಲವೂ ಕವಿತೆಯಾಗುತ್ತವೆ. ಕೊನೆಗೊಮ್ಮೆ ಹಲ್ವವಾಗುವ ತವಕದಲಿ ಒಲೆಯೇರಿದ ಬಾಣಲೆಯಲಿ ಕವಿತೆ 'ಸತಿ'ಯಾಗುತ್ತದೆ.

ಇವರ **'ಮುಗಿಲ ಹಕ್ಕಿ'**(೧೯೯೬)ಯ ಹಾಡುಗಳಲ್ಲಿ ಪ್ರಾದೇಶಿಕತೆಯ ಸೊಗಸಿದೆ. ಲಯಗಾರಿಕೆ ಮತ್ತು ಭಾವತೀವ್ರತೆಯಲ್ಲೂ ಬಿಟ್ಟುಕೊಡದ ಬೌದ್ಧಿಕತೆ ಇವರ ಕವಿತೆಗಳಲ್ಲಿ ಎದ್ದು ಕಾಣುವ ಗುಣ. 'ಎಲ್ಲಿ ದಿವದ ದಿವ್ಯ ಹೂವು| ಬಾಲೆಯ ಬಡಲಂಗವೆಲ್ಲಿ| ಪಾತಕ್ಕನ ಕನಸು ಕೊಟ್ಟ| ಬೊಗಸೆ ಬೊಗಸೆ ಹೂಗಳ| ಕೊಂಡಾಟ ಮಾಡಿ ನಲಿಯಿತು| ಮುಟ್ಟಿ ಮುಟ್ಟಿ ತಣಿಯಿತು| ಪರಿಮಳವನೆ ಕದಿಯಿತು **(ರಂಜೆ ಹೂಗಳು ಮತ್ತು ಪಾತಕ್ಕನ ಲಂಗ)**

'ಅಪ್ಪನೆನ್ನಲೆ ಇವರ | ಮೈಯ ತೀಟೆಗೆ ಹುಟ್ಟಿಕೊಂಡ ಪ್ರಾರಬ್ಧಕ್ಕೆ' ಎನ್ನುವ ಸಾಲುಗಳಲ್ಲಿ ಬೆಚ್ಚಿಸುವ ಆವೇಶವಿದೆ. ಅದರ ಹಿಂದೆಯೇ ಮಗಳ ಕಣ್ಣಿನಾಳದ ಭಾವನೆಗಳು, ಅವಕ್ಕೆಂದೂ ಸ್ಪಂದಿಸದ ಭಾವನಾರಹಿತ, ಬೇಜವಾಬ್ದಾರಿ ತಂದೆಯ ಚಿತ್ರ. ಇದು, ವಾಸ್ತವ.

'ಅಜ್ಜನ ಮನೆಯ ಪಡಸಾಲೆಯಲ್ಲೊಂದು ದಿನ'ದಲ್ಲಿ ತಾಯಿಯೊಬ್ಬಳ ಅಸಹಾಯಕ ಸ್ಥಿತಿ. 'ಅವ್ವಾ ಹಸಿವು' ಎಂದದ್ದಕ್ಕೇ| ಪಾರಾದವಳಂತೆ ದರದರ ಎಳೆದು| ಕೊಂಡೋಗಿ ಬಡಿಸಿದಳು| ಕಣ್ಣೀರ...' ಎನ್ನುವಲ್ಲಿಗೆ ಕವಿತೆ ಮುಗಿಯುತ್ತದೆ. ಆದರೆ ಅದಕ್ಕೂ ಮುಂದಿನ ಚಿತ್ರಗಳು ಕಣ್ಣ ಮುಂದೆ ಬಿಡಿಸಿಕೊಳ್ಳುತ್ತಾ ಹೋಗುತ್ತವೆ. ಈ ಮುಗಿಲ ಹಕ್ಕಿ 'ಮುಳ್ಳಬೇಲಿ ಕಲ್ಲ ಸೀಮೆ ಮರಳುಗಾಡು ಸುಡುವ ಭೂಮಿಯಲ್ಲೂ' ಹಾಡಬಲ್ಲುದು. ಸ್ವರವೆತ್ತಿ ಕೇಳುಗರೆದೆಯನ್ನು ಮಿಡಿಯುವಂತೆ ಹಾಡಬಲ್ಲುದು.

ಭಿನ್ನ ರೀತಿಯ ಕವನ ರಚನೆಯೊಂದಿಗೆ, ವಿಶಿಷ್ಟತೆಯನ್ನು ಕಾಯ್ದುಕೊಳ್ಳಲು ಕವಿತಾ ರೈ ಇಚ್ಛಿಸಿದ್ದಾರೆ. ಇವರ ಹೆಚ್ಚಿನ ಕವಿತೆಗಳು ನಾನು-ನೀನು ಎಂದೇ ಮಾತನಾಡುತ್ತವೆ. ಥಟ್ಟನೆ ಸೆಳೆದು ಬಿಡುವಂತಹ ಸಾಲುಗಳಿಂದಾಗಿ ಕವಿತೆಯನ್ನು ಮತ್ತೊಮ್ಮೆ ಆಸ್ವಾದಿಸುವಂತಾಗುತ್ತದೆ. 'ಗೋಡೆಗಳ ತುಂಬಾ ತೂಗುಬಿಟ್ಟ | ನನ್ನ ಚಿತ್ರಕ್ಕೆ ಅತ್ತಲಿತ್ತ| ಸುಳಿವ ಅಪ್ಪ ಅಮ್ಮನ | ನೆರಳುಗಳ ನಿಟ್ಟುಸಿರ ಕಟ್ಟು' (ನನ್ನ ಚಿತ್ರ), ಒಲೆ ಬದಲಾದರೇನು ಉರಿ ಬದಲಾಗಿದೆಯೆ' (ಒಲೆ), 'ಎಲ್ಲ ಮನೆಗಳಲ್ಲೂ ಒಂದೊಂದು ಬಾವಿ ಕಟ್ಟೆ| ಬಾವಿ ಕಟ್ಟೆಯ ಬದುಕು ತಳಕ್ಕೆ' (ಬಾವಿ ಕಟ್ಟೆ) ಇವುಗಳ

ಅರ್ಥವೈಶಾಲ್ಯ ನಮ್ಮನ್ನು ಒಮ್ಮೆ ತಡೆದು ಚಿಂತಿಸುವಂತೆ ಮಾಡುತ್ತವೆ. 'ರುಬ್ಬುಗಲ್ಲು' ಶೋಷಿತ ಹೆಣ್ಣಿನ ಒಂದು ಆಕ್ರೋಶಪೂರ್ಣ ಧ್ವನಿ. ಹಲವೆಡೆ ಕವಿತೆಗಳು ಅನಗತ್ಯ ಹಿಗ್ಗಿವೆ. ಜೊತೆಗೇ, ಇಲ್ಲಿ ಹಕ್ಕಿಯ ಹಾಡಿದೆ, ನೀರಿನ ಹರಿಯುವಿಕೆ ಇದೆ. ಈ ನಿನಾದ 'ನೀರತೇರು' (೨೦೦೫)ವಿನಲ್ಲಿ ಹೊಸ ಅಲೆಗಳೊಂದಿಗೆ ರೂಪುಗೊಂಡಿದೆ. ಇದೊಂದು ಸೊಗಸಾದ ರೂಪಕ. 'ಮುಗಿಲೊಳಗಿನ ಮುಗಿಲ| ಬಾನೊಳಗಿನ ಬಾನ| ಹೊತ್ತು ಸಾಗುವ| ನೀರ ತೇರು...' ಹಸಿರೊಳಗಿನ ಹಸಿರ, ಉಸಿರೊಳಗಿನ ಉಸಿರ ಹೊತ್ತು ಸಾಗುತ್ತದೆ. ನೀರು ತಾನು ಆಗಬಹುದಾದ ಸಾಧ್ಯತೆಗಳನ್ನು ಕಟ್ಟಿಕೊಡುತ್ತದೆ. ಮೊದಲ ಸಂಕಲನದಲ್ಲಿನ ಏಕತಾನತೆ ಇಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ಇನ್ನಷ್ಟು ಶ್ರದ್ಧೆಯಿಂದ ಕಾವ್ಯದಲ್ಲಿ ತೊಡಗಿಕೊಂಡು 'ಕವಿ' ತಾ ಬೆಳೆಯಬೇಕಿದೆ.

**'ಮೊದಲ ಸಿರಿ'** (೨೦೦೧)ಯಲ್ಲೇ ಕಾವ್ಯಾಸಕ್ತರಿಗೆ ಹತ್ತಿರವಾದವರು ಲಲಿತಾ ಸಿದ್ಧಬಸಯ್ಯ. ನಿಜಕ್ಕೂ ಇದು ಸಿರಿಯೇ. ಇಲ್ಲಿನ ಕವಿತೆಗಳಲ್ಲಿ ಜೀವಂತಿಕೆಯಿದೆ. ಕೆಲವೆಡೆ ವಿಷಯ ವಿಸ್ತಾರ ಹೆಚ್ಚೆನಿಸಿದರೂ ಖುಷಿ ಕೊಡುವ, ಬಹುಕಾಲ ನೆನಪಿನಲ್ಲುಳಿಯುವ ಕವಿತೆಗಳು. ಶಯನ ಕಕ್ಷೆಯ ಭಗವದ್ಗೀತೆ, ಎಲ್ಲೋ ಜೋಗಪ್ಪ ನಿನ್ನರಮನೆ, ಕೈಕೊಟ್ಟ ಹುಡುಗಿಯ ಸಕಾರಣ ಕಾವ್ಯ, ಇಪ್ಪತ್ತೈದನೇ ಆ್ಯನಿವರ್ಸರಿಯ ಸಂಜೆ, ನಾಗವಲ್ಲಿ ಸ್ವಯಂವರವೆಂಬೋ ನಾಟ್ಯಗೀತೆ, ಬಂದಿದ್ದಾಳೆ ಗೊಲ್ಲರ ಹುಡುಗಿ, ಮಗಳು ಮುಂತಾದ ಕವನಗಳು ಭಾಷಾ ಶೈಲಿ, ಹಾಗೂ ಹಾಸ್ಯಪ್ರಧಾನ ಗುಣದಿಂದಾಗಿ ರಂಜಿಸುತ್ತವೆ. ಬರಹಗಾರ್ತಿಯ ಬವಣೆಯನ್ನು ಬಣ್ಣಿಸುವ 'ಪುಷ್ಪರಗಳೆ' ಹೆಚ್ಚಿನ ಬರಹಗಾರ್ತಿಯರ ಮನದಳಲು.

ಬಹು ಶೀಘ್ರದಲ್ಲೇ ಇವರ ಹನಿಗವನ ಸಂಗ್ರಹ **'ಬಿಡಿ ಹರಳು'** (೨೦೦೨), ಕವನ ಸಂಕಲನ **'ಇಹದ ಸ್ವರ'** (೨೦೦೨) ಪ್ರಕಟಣೆ ಕಂಡಿವೆ. ಇವುಗಳ ಹಿಂದೆಯೇ ೨೦೦೪ರಲ್ಲಿ ಬಂದ ಕವನ ಸಂಕಲನ, **'ಕೆಚ್ಚೆನೆಲ'**. ಈ 'ವೇಗ' ಅಚ್ಚರಿ, ಅನುಮಾನಗಳನ್ನು ಮೂಡಿಸಿದರೂ, ಇವರ ಕವನಗಳು ತಮ್ಮ ಗುಣಮಟ್ಟವನ್ನು ಕಾಯ್ದುಕೊಂಡಿರುವುದನ್ನು ಗಮನಿಸಬೇಕು. 'ಇಹದ ಸ್ವರ'ವನ್ನು ಜಿ.ಎಸ್. ಶಿವರುದ್ರಪ್ಪನವರು ಸರಿಯಾಗಿಯೇ ಗುರುತಿಸಿದ್ದಾರೆ. ಲಲಿತಾರ ಕಾವ್ಯಸಮೃದ್ಧಿಯನ್ನು 'ಮುಂಗಾರಿನ ಮಳೆಗೆ ತುಂಬಿ ತುಳುಕಿ ಕೋಡಿ ಬಿದ್ದ ಕೆರೆಯಂತೆ' ಎಂದಿದ್ದಾರೆ. ಎಲ್ಲರಂತೆ ಲಲಿತಾ, ಕನಸುಗಳನ್ನು ಇಷ್ಟಪಡುತ್ತಾರೆ. ಆದರೆ ಕನಸುಗಳಲ್ಲಿ ಮುಳುಗುವುದಿಲ್ಲ. 'ಇಹ' ದ ಸ್ವರವೇ ಆಗಿ ಬದುಕುವ ಇಚ್ಛೆ ಕವಯಿತ್ರಿಯದು.

'ರಾಮು, ಧಾನ್ಯ, ಚರಿತೆ'ಯಲ್ಲಿ ರಾಗಿ ಮೂರು ತಲೆಮಾರುಗಳಲ್ಲಿ ಸ್ಥಿತ್ಯಂತರ ಹೊಂದುತ್ತದೆ. 'ಅಸೆಕಲ್ಲಿಗೆ ಬಿಸಿಬಿಸೇದೇ ಬೊಗ್ಗಿಸಿಕೊಂಡು| ರಟ್ಟೆ ಅಳ್ಳಾಡುವಂಗೆ ಮಿದ್ದೂ ಮಿದ್ದೂ ಕಟ್ಟಿದರೆ| ಆ ಹಿಟ್ಟೆಂಬುದು ಬಿರಾಣಿ ಗುಂಡು; ಎದುರುಗ್ಯಾಡಗೆಸೆದರೆ| ಅಂಗೇ ತಿರುಗಿ ಅಂಗೈಯೊಳಕ್ಕೆ ಪುಟನೆಗೆವ ಚೆಂಡು'

ಬಯಲ ಸೀಮೆಯ ಮಾತು, ಆ ಮಾತಿನ ಕಸುವಾದ ರಾಗಿ, ಸಮರ್ಥವಾಗಿ ರೂಪುಗೊಂಡಿದೆ.

ಇದೇ ರೀತಿ 'ಲವಾಜಮೆ' (ಕೆಬ್ಬೆಸೆಲ)ಯಲ್ಲಿ ಹಿದುಕವರ ಪದಾರ್ಥದ ವರ್ಣನೆ. ಭಾರೀ ಪೂರ್ವತಯಾರಿಯೊಂದಿಗೆ ಮಾಡಿದರೂ, 'ಒಂದೊಂದು ಸಾರಿ ಪದಾರ್ಥವೆಂಬುದು ಕೆಟ್ಟು, ಕೇರು| ರೇಗುವುದು ಯಾರ ಮೇಲೆ| ಎಷಪಿದ್ದು ಯಾವ ಮೆಟ್ಟಿಲ ಮೇಲೆ| ಪದ್ಯ ಬರೆಯುವಾಗಲೂ ಅಷ್ಟೇ, ಇದೇ ಅನುವರಲು'ಕವಿತೆ ಬರೆಯುವುದು ಸುಲಭದ ಕೆಲಸವಲ್ಲ ಎನ್ನುವ ಎಚ್ಚರಿಕೆ ಕವಯಿತ್ರಿಗಿದೆ.

ತನ್ನೊಳಗಿನ ಸಂವೇದನೆಗಳು ಹೀಗೆ ಕಾವ್ಯ ರೂಪದಲ್ಲಿ ಪುಂಖಾನುಪುಂಖವಾಗಿ ಹೊರಬಿದ್ದ ಬಗೆಗೆ ಸ್ವತಃ ಕವಯಿತ್ರಿಗೇ 'ಅಚ್ಚರಿ'.

'ರಾತ್ರಿ ಸರು ಹೊತ್ತಾಗಿತ್ತು| ಸರಬರ ಕಸಮುಸುರೆ ಮುಗಿಸಿ| ಅಗುಳಿ ಹಾಕುವ ಮೊದಲು| ಕೈಗೆ ಸಿಕ್ಕೆರಡು ಪದವೂರಿದೆ ಹಿತ್ತಲಲ್ಲಿ| ಮೊದಲ ಮಳೆಗನುನಯಿಸಿ ಮೆದುಗೊಂಡ| ಮಣ್ಣಿನಲ್ಲಿ ಬೆಳಗೆದ್ದು| ಕದರು ನೀರೆರೆದು ಚುಕ್ಕೆ ಪೋಣಿಸುವಾಗ | ನೆಪ್ಪಾಗಿ ನೋಡಿದೆ| ಹಿತ್ತಲಿನ ತುಂಬಾ ಗುತಿ ಗುತಿ ಕವಿತೆ| ತೊನೆಯುತ್ತಿದೆ ತೂಗಿ| ಯಾರದಿದು ಈ ಹಿತ್ತಲೆಂಬನುಮಾನ| ಮೂಡಿಸಿ ಅಚ್ಚರಿಯೆಂದರೆ| ಇದೇನಾ....

ಸ್ತ್ರೀಸಂವೇದನೆಯ ಒಂದು ಸಾರ್ಥಕ ಕವನ '**ಧನ್ಯವಾದಗಳು**'. 'ದೇವರೇ| ನಾವು ನಿನ್ನನ್ನು ಅನುವಾದಿಸುತ್ತಿದ್ದೇವೆ| ಕ್ಷಣ ಕ್ಷಣಕೂ ನೀನು ಅನುವಾದಗೊಳ್ಳುತ್ತೀಯ| ಭೂಮಂಡಲದ ಮೇಲಿರುವ ಅಷ್ಟೂ ಭಾಷೆಗಳಲ್ಲಿ| ಏಕಕಾಲಕ್ಕೆ ಎಲ್ಲೆಡೆಯಲ್ಲಿ|...... ದೇವರೇ | ಧನ್ಯವಾದಗಳು| ನಮ್ಮನ್ನು ಮಾತ್ರ ನಿನ್ನ ಅನುವಾದಕರಾಗಿ | ಆಯ್ದುಕೊಂಡಿದ್ದಕ್ಕೆ'

ಲಲಿತಾರ ಕವಿತೆಗಳಲ್ಲಿ ವೈವಿಧ್ಯವಿದೆ. ಭಾಷಾ ಪ್ರಯೋಗದಿಂದ, ಹಾಸ್ಯ ಶೈಲಿಯಿಂದ ಸಾಮಾನ್ಯ ಓದುಗರಿಗೂ ಇಷ್ಟವಾಗುತ್ತವೆ. ಕವಿತೆ, ಓದಿದಾಕ್ಷಣ ಖುಷಿ ಕೊಡುವ ಮಾತ್ರಕ್ಕೇ, ಅದೊಂದು ಯಶಸ್ವೀ ಕವನವೆಂದು ಭಾವಿಸಲಾಗದು. ಪ್ರತಿಯೊಬ್ಬ ಕವಿಗೂ ಈ ಅರಿವು ಇರಬೇಕಾಗುತ್ತದೆ.

ತಮ್ಮ ನೆನಪುಗಳನ್ನು, ಅನುಭವಗಳನ್ನು ಇದೀಗ ಸಬಿಹಾ ಭೂಮಿಗೌಡ ಇವರು ಕಾವ್ಯ ಮುಖೇನ ಚಿತ್ತಾರವಾಗಿಸಿದ್ದಾರೆ. ಇಲ್ಲಿ ಕವಯಿತ್ರಿಯದು ಆಪ್ತ ಸಮಾಲೋಚನೆ. ಇವರ ಸ್ತ್ರೀಪರ ಕಾಳಜಿ ತಾರಕಕ್ಕೇರುವುದಿಲ್ಲ. ನಿರ್ಬಂಧಿಸಿರುವ ನಿಯಮಗಳನ್ನು ಪ್ರತಿಭಟಿಸುವ ರೀತಿ, ಅವುಗಳನ್ನು ಮುರಿಯುವ ಮೂಲಕ. 'ಹಿಂದಿನ ಗುಮ್ಮ ಸೊರಗಿದ್ದಾನೆ| ಕರಗಿಲ್ಲ ಪೂರ್ಣ| ತಂಗಾಳಿಯೊಂದಿಗೆ ಒಮ್ಮೊಮ್ಮೆ| ಸುಳಿವ ಬಿರುಗಾಳಿ| ಗಂಟೆಯ ಸದ್ದು ಮನದಲ್ಲಿ| ಕತ್ತಲಾವರಿಸಿದಂತೆ ಮನದೊಳಗೂ| ಆತಂಕದ ಕರಿಮೋಡಗಳು| ಮನೆ ಹತ್ತಿರವಾದಂತೆ ಓಡು| ನಡಿಗೆಯಲ್ಲಿ ಸಾಗಿ ಏದುಸಿರು| ಬಿಟ್ಟರೂ ಬೇಕೆನಿಸಿಲ್ಲ| ಇಂದು ಮನೆಗೆ ಹಿಂಬಾಗಿಲು' (ಬೇಲಿ)

'ಇಂದು ಅವೇ ಗೆರೆಗಳು| ನಾವು ಬೆಳೆದಂತೆ ಕುಬ್ಜ| ಅವುಗಳ ಸೃಷ್ಟಿಬ್ರಹ್ಮರು| ಕಡೆಗಣ್ಣಿಗೆರೆಗಳಾಗಿ| ಪುರಾಣ ಕತೆ ಕಂತೆ ಸೇರಿ| ಅಯೋಮಯ ಭಿತ್ತಿ| ಮೇಣಕ್ಕೆ ತಿರುಗಿ| ಒಂದಿಷ್ಟು ಕಾಸಿದರೆ| ನಮ್ಮ ಎರಕಕ್ಕೂ ಸಿದ್ಧ' (ಲಕ್ಷ್ಮಣ ರೇಖೆಗಳು) ಎನ್ನುವ ಕವಯಿತ್ರಿ, ಅಶಕ್ತ ಧ್ವನಿಗಳಿಗೆ ಧ್ವನಿಯಾಗುತ್ತಾರೆ. **ಅಡುಗೆ, ಸಂಬಂಧ, ಕಳಕೊಂಡದ್ದು, ಮನದ ಕಿಟಕಿ,ಕರವಸ್ತ್ರ, ಆಟದ ಲೆಕ್ಕ, ಆಫೀಮು, ಅಂತರಂಗದ** ಕವನಗಳು ಮೆಲುಕು ಹಾಕುವಂತಿವೆ. ಸಬಿಹಾರ ಕವಿತೆಗಳಲ್ಲಿ

ತಂತ್ರಗಾರಿಕೆಯಿಲ್ಲ. ಸರಳ ಮತ್ತು ಆಪ್ತ ನಿರೂಪಣೆಯಿದೆ. 'ಹೂವು ಕಾಯಾಗುವ| ಕಾಯಿ ಹಣ್ಣಾಗುವ| ನಯ ನಾಜೂಕು ಇತಿಮಿತಿ' (**ಅಡುಗೆ**), ಕವನ ರಚನೆ ಸಂದರ್ಭ ಗಮನದಲ್ಲಿರಿಸಿ ಕೊಳ್ಳಬೇಕಾದ ಅಂಶಗಳು.

ಉದ್ದಸೀಮೆ ಸುಣ್ಣದಿಂದ ಹಲವು **ಚುಕ್ಕಿ** (೨೦೦೩) ಗಳನಿಟ್ಟುಕೊಂಡ ರಂಗೋಲಿಯನ್ನು ಬಿಡಿಸುವ ಕವಯಿತ್ರಿ ಜ್ಯೋತಿ ಗುರುಪ್ರಸಾದ್, ಅದೇ ಸೀಮೆಸುಣ್ಣ ಚಿಕ್ಕದಾದಾಗ ಒಂದೇ ಗೆರೆಯಲ್ಲಿ ಪುಟ್ಟ ನಕ್ಷತ್ರವನ್ನು ಬಿಡಿಸಿಡಬಲ್ಲರು. ಆ ಮಿತಿಯಲ್ಲೇ ಬದುಕಿನ ಅಗಾಧ ಪ್ರೀತಿಯನ್ನು ಕಂಡುಕೊಳ್ಳಬಲ್ಲರು. ಈ ಒಲವು ಅವರ ಉಳಿದ ಕವಿತೆಗಳಲ್ಲೂ ಕಂಡು ಬರುತ್ತದೆ.

ಹೆಚ್ಚಿನ ವಾಚ್ಯಕ್ಕಿಳಿಯದೆ ಕೆಲವೇ ಸಾಲುಗಳಲ್ಲಿ ಬಹಳಷ್ಟನ್ನು ತಿಳಿಸುವುದು ಕವಯಿತ್ರಿಗೆ ತಿಳಿದಿದೆ. 'ಇಲ್ಲಿ | ಜ್ಯೋತಿಯಿದೆ | ಉರಿಸಲು| ಹಣತೆಯೇ ಇಲ್ಲ', 'ಇಷ್ಟರ ಮಧ್ಯೆಯೇ| ಹೊಸ ವರ್ಷ ನುಸುಳಿದೆ| ಕವಿತೆಯ ಕೂದಲೊಂದು ಬೆಳ್ಳಗಾದಂತೆ', 'ನನ್ನ ಧ್ವನಿಯೊಂದೇ | ನನ್ನ ರುಜುವಾತು' ಇಂತಹ ಸಾಲುಗಳು ಕವಿತೆಯ ಆಳಕ್ಕಿಳಿಯಲು ಪ್ರೇರೇಪಿಸುತ್ತವೆ. ಇವರ ಕವಿತೆಗಳು ಹೊಸ ದಿಕ್ಕಿನಲ್ಲಿ ದಾರಿ ಕಂಡುಕೊಳ್ಳುತ್ತವೆ. 'ದ್ರೌಪದಿಯನ್ನು ಕನ್ನಡಿಯಾಗಿ ಮಾಡಿಕೊಂಡು ಅದರಲ್ಲಿ ಕವಯಿತ್ರಿ ತನ್ನನ್ನು ರೂಪುಗೊಳಿಸಿಕೊಳ್ಳುವ ರೀತಿ ಹೇಗಿದೆ ನೋಡಿ, 'ನಿನ್ನ ಅಕ್ಷಯವಸ್ತ್ರ ಸ್ವಾಭಿಮಾನವೆನಗೆ| ನಿನ್ನ ಸೌಗಂಧಿಕಾ ಪುಷ್ಪದ ಬಯಕೆ ವ್ಯಕ್ತಿತ್ವವೆನಗೆ| ನಿನ್ನ ಸಿರಿಮುಡಿ ಋಜುತ್ವವೆನಗೆ' ಕವಿತೆ ಎಂದರೆ ತನಗೆ ಪ್ರಿಯವೆನ್ನುವ ಜ್ಯೋತಿ, 'ಪ್ರೇಮಿಯಾಗದೆ| ಇದು ಹುಟ್ಟುವುದೇ ಇಲ್ಲ' ಎನ್ನುತ್ತಾರೆ. ಈ ಕಾವ್ಯಪ್ರೇಮಿಯ ಕವಿತೆಗಳು, 'ನಿಶ್ಶಬ್ದದಲ್ಲಿ| ಪ್ರೀತಿಸುವ| ಅಕ್ಷರದ ಸಾಲುಗಳು'.

ಇಂತಹ ಜೀವನಪ್ರೀತಿಯನ್ನು ರೂಪ ಹಾಸನ ಇವರ '**ಒಂದಿಷ್ಟು ಹಸಿಮಣ್ಣು**'(೨೦೦೦) ಕವಿತೆಗಳಲ್ಲೂ ಕಾಣ ಬಹುದು. ಇಲ್ಲಿ ಹಸಿಮಣ್ಣು ಬದುಕಿನತ್ತ ತುಡಿಯುವ ಸಂಕೇತ. ಒಂದಿಷ್ಟೇ ಇಷ್ಟು ಹಸಿಮಣ್ಣಿನಿಂದ 'ಸುಂದರ ಮನೆಯಾಗುತ್ತೇನೆ| ಮಡಿಕೆ, ಕುಡಿಕೆ, ಕುಂಡವಾಗುತ್ತೇನೆ' ಎನ್ನುವಲ್ಲಿ ಮಹತ್ವಾಕಾಂಕ್ಷೆಯಿದೆ. ರೂಪ ಅವರದು ಭಾವೋತ್ಕರ್ಷವಲ್ಲ; ಸಮಾಧಾನದ ಧಾಟಿ, ಗೆಲುವಿನತ್ತಲೇ ನೋಟ.

'ಇಲ್ಲಗಳ ಬದಿಗೊತ್ತಿ| ಎಲ್ಲವಾಗುವ ಛಲ| ನಮ್ಮಲೇಕಿಲ್ಲ?|' ಎಂದು ಕೇಳುತ್ತಲೇ 'ಮೀರಿ ನಿಲ್ಲಲು| ತಕ್ಕ ಅವಕಾಶಕೆ ಕಾಯಬೇಕು' ಎನ್ನುವ ತಿಳುವಳಿಕೆ ಕವಯಿತ್ರಿಯದು.

ಮಹಿಳಾ ಸಾಹಿತ್ಯ ಅಡುಗೆ ಮನೆ ಸಾಹಿತ್ಯ ಎನ್ನುವ ಮಾತಿಗೆ ಕವಯಿತ್ರಿ ರೇಗುವುದಿಲ್ಲ. ನಿರಾತಂಕವಾಗಿ ಒಪ್ಪಿಕೊಳ್ಳುತ್ತಾರೆ. ಹಾಗೆ ಹೇಳುವವರನ್ನು ಮುಖಾಮುಖಿಯಾಗಿಸಿಕೊಂಡು, 'ಹೌದು ಗೆಳೆಯಾ ಇದು| ಅಡುಗೆ ಮನೆ ಸಾಹಿತ್ಯವೇ....' ಎನ್ನುತ್ತಾ,'ಅಲ್ಲಿಷ್ಟು ಇಲ್ಲಿಷ್ಟು ಭಾವೋನ್ಮಾದ| ಹರಿದು ಬಿದ್ದು | ಕಲಸು ಮೇಲೋಗರವಾದ ಇದು| ಹೌದು ಗೆಳೆಯ| ಅಡುಗೆ ಮನೆ ಸೇರಿದ ಮನದ ಸಾಹಿತ್ಯವೇ' ಎಂದು ಹಿತವಾದ ಏಟು ಕೊಡುತ್ತಾರೆ. **ಎಚ್ಚರ, ಗರವಿ ಗಮ್ಮತ್ತಿನ ಪೆಟ್ಟಿಗೆ, ರಸಿಕ ಕವಿಗೆ... ಅಮ್ಮ ಹೇಳಿದ್ದು** ಮೆಚ್ಚುಗೆಯಾಗುವ ಕವಿತೆಗಳು.

ಹಸಿಮಣ್ಣಿನ ಕಂಪು ರೂಪಾರನ್ನು 'ಬಾಗಿಲಾಚೆಯ ಮೌನ'(೨೦೦೫)ದಲ್ಲೂ ಕಾಡಿದೆ. ಕಡಲು-ದಡ, ಬಾಗಿಲು-ಹೊಸ್ತಿಲು, ಮಾತು- ಮೌನ, ಸಂತೆ-ಸಂತ ಪ್ರತಿಮೆಗಳ ಜೊತೆಗೇ ಕವಯಿತ್ರಿ ಮುಂದುವರಿಯುತ್ತಾರೆ. ಕೆಲವೆಡೆ ವಿನೋದ, ಕೆಲವೆಡೆ ತಾತ್ವಿಕ ಚಿಂತನೆ, ಇನ್ನು ಕೆಲವೆಡೆ ತರ್ಕ, ಮತ್ತೆ 'ಎಂದಿಗೂ ಯಾರಿಗೂ| ಸೋಲದ ಕಣ್ಣಂಚಿನ ಹನಿ| ಪ್ರೀತಿಗೇಕೆ ಸೋಲುತ್ತದೆ?' ಎನ್ನುವ ಸೋಜಿಗ. ರೂಪ ಅವರ ಬರವಣಿಗೆಯಲ್ಲಿ ಉತ್ಸಾಹವಿದೆ; ಸ್ವತಂತ್ರ ಚಿಂತನೆಯಿದೆ.

ತನ್ನ ಮೇಲಿನ ಶೋಷಣೆಯನ್ನು ಪ್ರತಿಭಟಿಸುತ್ತಲೇ, ನಿಧಾನವಾಗಿ ಅದನ್ನು ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ ಸ್ತ್ರೀ ಮನೋಧರ್ಮವನ್ನು ಮಲ್ಲಿಕಾ ಘಂಟಿಯವರು ವಿಭಿನ್ನ ಕೋನಗಳಲ್ಲಿ ಸೆರೆ ಹಿಡಿದಿದ್ದಾರೆ. ಇವರ ಮೊದಲ ಕವನ ಸಂಕಲನ **ತುಳಿಯದಿರಿ ನನ್ನ** (೧೯೮೬). ಮೂರು ವರ್ಷಗಳ ನಂತರ **ಈ ಹೆಣ್ಣುಗಳೆ ಹೀಗೆ** (೧೯೮೯) ಸಂಕಲನ ಹೊರ ಬಂದಿದೆ. ಇದರಲ್ಲಿ, ಹೆಣ್ಣಿನ ಅಂತರಂಗದ ವಿಷಯಗಳತ್ತ ಮರುಕ, ಅಚ್ಚರಿಗಳ ನೋಟ ಹರಿಸುತ್ತಾ ಕವಯಿತ್ರಿ ಕೆಲವೆಡೆ ಎಚ್ಚರಿಕೆಯನ್ನೂ ನೀಡುತ್ತಾರೆ.

'..... ನಿನ್ನ ಭಾವನೆಗಳಿಗೆ ಕೊಳ್ಳಿಯಿಡುವ ಪ್ರಸಂಗಗಳೆದುರಾದಾಗ| ಬದುಕುವುದು ಅನಿವಾರ್ಯವೆಂದು| ನನ್ನಂತೆ ನೀ ಒಪ್ಪಂದ ಮಾಡಿಕೊಳ್ಳದಿರು| ನನ್ನಿತಿಹಾಸವ ನೀ ಮರೆತರೆ| ಹೊಸ ಇತಿಹಾಸವ ನೀ ಬರೆಯುವುದೆಂತು?' (**ಮಗಳಿಗೊಂದು ಕಿವಿಮಾತು**)

ಹೆಣ್ಣು ಶೋಷಿಸಲ್ಪಡುವ, ವ್ಯವಸ್ಥೆಗೆ ತನ್ನನ್ನು ತಾನು ಒಡ್ಡಿಕೊಳ್ಳುವ ಹಲವು ಸಂದರ್ಭಗಳು ಮಲ್ಲಿಕಾರ ಇತರ ಕಾವ್ಯಗಳಲ್ಲೂ ಕಾಣಿಸಿಕೊಂಡಿವೆ. '**ಈ ಹೆಣ್ಣುಗಳೆ ಹೀಗೆ, ಇರುವಿಕೆ, ಹೀಗೇಕೆ, ಕೈದಿ, ಸೀತವ್ವ**' ಮುಂತಾದ ಕವಿತೆಗಳಲ್ಲಿ ಮತ್ತೆ ಮತ್ತೆ ಕಂಡು ಬರುವಾಗ 'ಅತಿ' ಎನಿಸಿಬಿಡುತ್ತದೆ. ಮುಂದೆ ಹತ್ತು ವರ್ಷಗಳ ಬಳಿಕ ಬಂದ '**ರೊಟ್ಟಿ ಮತ್ತು ಹುಡುಗಿ**'(೧೯೯೯) ಭರವಸೆಯ ಕವಿತೆಗಳನ್ನೊಳಗೊಂಡಿವೆ. ಕಾವ್ಯಕ್ಷೇತ್ರದಲ್ಲಿ ಒಂದು 'ಕಾಯುವಿಕೆ' ಯಶಸ್ಸಿನ ಹಾದಿಗೆ ಕೊಂಡೊಯ್ಯಬಹುದಾದ ಸಾಧ್ಯತೆಯೆಂದರೆ ಇದು. 'ಬಂಧನದ ಸುಖದಲ್ಲಿ ಮೈಮರೆತವರನ್ನು| ಎಚ್ಚರಿಸುವ; ಎದ್ದು ನಿಲ್ಲಿಸುವ| ನನ್ನಂತೆ ಕೈ ಕಾಲುಗಳ ಗಾಳಿಯಲ್ಲಿ ಬೀಸಲು ಕಲಿಸುವ ಹೊಣೆಗಾರಿಕೆಯಿದೆ ನನಗೀಗ'(**ಹೊಣೆಗಾರಿಕೆ**), ಎನ್ನುವ ಸಾಲುಗಳಲ್ಲಿ ಎದ್ದು ಕಾಣುವುದು ಕವಯಿತ್ರಿಯ ಸಮಾಜಮುಖೀ ಚಿಂತನೆ. ಸ್ವಚಿಂತನೆಯಿಂದ ಹೊರಳಿ ನೋಡಿದಾಗಷ್ಟೇ ಇಂತಹ ಹೊಣೆಗಾರಿಕೆಯನ್ನು ಕೈಗೆತ್ತಿಕೊಳ್ಳುವುದು ಸಾಧ್ಯವಾಗುವುದು. ವಿಷಾದ, ಬೇಸರಗಳನ್ನು ಮುಂದಿಡುತ್ತಲೇ '... ಸಹಬಾಳ್ವೆಯ ಪಥದಲ್ಲಿ ಹೊರಟ ನಮ್ಮಗಳ| ಎದೆಯಲ್ಲಿ ಪ್ರೀತಿ ಒರತೆಯಿರುವಾಗ | ಮರೆತುಬಿಡು ಹೆಣ್ಣಾಗಿರುವುದು' (**ಹೆಮ್ಮೆ ಪಡುತ್ತೇನೆ ಹೆಣ್ಣಾಗಿ ಹುಟ್ಟಿದ್ದಕ್ಕೆ**) ಎಂದಿರುವುದು ನಿಜಕ್ಕೂ ಆರೋಗ್ಯಕರ ಚಿಂತನೆಗೆ ದಾರಿಮಾಡಿಕೊಟ್ಟಿದೆ.

ವಿದ್ಯಾರ್ಥಿ ದೆಸೆಯಿಂದ ತೊಡಗಿ, ಪ್ರೌಢಾವಸ್ಥೆಯಲ್ಲಿ ರಚಿಸಿದ ಕವನಗಳ ಗೊಂಚಲು, ಎಚ್.ಎಸ್. ಸುಜಾತಾರ ಮಜಲುಗಳು (೧೯೯೮). ಇವರ ಕವಿತೆಗಳಲ್ಲಿ ಧನಾತ್ಮಕ ಚಿಂತನೆಯೇ ಹೆಚ್ಚು. ಬದುಕಿನ ಕಾಯುವಿಕೆ, ಮಾಗುವಿಕೆ, ಸಾರ್ಥಕದ ಕ್ಷಣಗಳಿಗೆ ಕವಯಿತ್ರಿ ಹಂತಹಂತವಾಗಿ

ತನ್ನನ್ನು ಒಡ್ಡಿಕೊಳ್ಳುತ್ತಾರೆ. 'ನಿನಗಾಗಿ ಕಾದ ವರುಷಗಳು| ವ್ಯರ್ಥವಾಗಲಿಲ್ಲ| ನಿನ್ನ ಹಂಬಲದಲ್ಲಿ| ಯಾತನೆಯ ಕ್ಷಣಗಳಲ್ಲಿ| ನನ್ನನ್ನೇ ಅರಿತೆ| ಬೆಳೆದೆ' ಹಾಗೆಯೇ, 'ದೈಹಿಕ ಚೈತನ್ಯ| ಮಾನಸಿಕ ಲವಲವಿಕೆಗಳು ಇದ್ದಾಗ| ಮನೆಯ ಸುತ್ತ ನಂದನವನ್ನು ನಿರ್ಮಿಸಿದೆ' ಮುಪ್ಪಾದಗಿದಾಗ, ಚೈತನ್ಯ ಕುಸಿದಿದ್ದರೂ ಲವಲವಿಕೆ ಕಳೆದು ಹೋಗಿದ್ದರೂ 'ಕುರುಚಲು ಪೊದೆ ಹರಡದಂತೆ| ಪಾರ್ಥೇನಿಯಂ ನೆಲೆಯೂರದಂತೆ| ಶ್ರಮಿಸುತ್ತಿದ್ದೇನೆ' ಎನ್ನುವಲ್ಲಿ ಸೋಲಿನಲ್ಲೂ ಚೈತನ್ಯವನ್ನು ಕಂಡುಕೊಳ್ಳುವ ಬಗೆ ಇಷ್ಟವಾಗುತ್ತದೆ. ಒಂದು ಪುಟ್ಟ ಕವನದಲ್ಲೂ ಅವರಿದನ್ನು ತಿಳಿಸುತ್ತಾರೆ, 'ನಾನು ಕುಂಟಿ| ಆದರೂ | ನನಗೆ ಹಿಮಾಲಯದ್ದೇ ಮೋಹ' ಹೆನ್ರಿಮೂರ್, ಫುಕುವೋಕಾ, ಹೋರಾಟಕ್ಕೆ ನಿಲುಗಡೆ ಇಲ್ಲ, ಎಲೆಮರೆಯ ಪಕ್ವಫಲ ಮುಂತಾದವು ಪ್ರಾಸಂಗಿಕ ಕವಿತೆಗಳು. ಪ್ರೀತಿ, ಆಶಯ, ಪ್ರಾಸಂಗಿಕತೆ ಇಲ್ಲಿ ಪುನರುಕ್ತಿಯಾಗಿವೆ.

ತುಳಸೀ ವೇಣುಗೋಪಾಲರ ಪುಟಗಳ ಮಧ್ಯದಲ್ಲೊಂದು ನವಿಲುಗರಿ (೧೯೯೯) ಬದುಕಿನ ವಿವಿಧ ಮಗ್ಗುಲುಗಳನ್ನು ಸ್ಪರ್ಶಿಸುತ್ತಾ ಸಾಗುತ್ತದೆ. ನವಿಲು ಗರಿಯೆಂದರೆ ಸೂಕ್ಷ್ಮ. ನವಿರು, ನವಿಲುಗರಿಯೆಂದರೆ ಬಾಲ್ಯ, ಖುಷಿ. ಆದ್ದರಿಂದಲೇ, 'ಪುಟಗಳನ್ನು ತೆರೆಯುತ್ತೀರಾ ಒಂದಿಷ್ಟು| ಸಾವಕಾಶ| ಇರಬಹುದು ಅಲ್ಲೊಂದು ನವಿಲುಗರಿ' ಎಂದು ಮುಂಜಾಗ್ರತೆ ನೀಡುತ್ತಲೇ ಕವಯಿತ್ರಿ ಒಳಪುಟಗಳತ್ತ ಬರಮಾಡಿಕೊಳ್ಳುತ್ತಾರೆ.

ಬದುಕಿನ ಸಂತೆಯಲ್ಲಿ ಬೇಕೆನಿಸಿದ್ದನ್ನು ಪಡೆಯುವುದು ಅಷ್ಟೇನೂ ಸುಲಭವಲ್ಲ. 'ಯಾವುದೋ ಕಣ್ಣಿಗೆ ಯಾರದೋ ಕಂಬನಿ| ಯಾವುದೋ ತುಟಿಗೆ ಯಾರದೋ ಹಾಡು'(ಸಿಗಲೇ ಇಲ್ಲ). ನಾಲ್ಕು ಹನಿಗಳು, ಎಲ್ಲಿಂದಲೋ ಬಂದವರು, ಹೇಮಂತದ ಹಕ್ಕಿ, ಕಡಲಿನ ಕರೆ, ಪ್ರಾರ್ಥನೆ ಕವಿತೆಗಳಲ್ಲಿ ತನ್ನದಲ್ಲದ ಜಗತ್ತಿನ ಕಾಳಜಿಯಿದೆ. ಕಣ್ಣೀರು, ಕಂಬನಿ. ಕಣ್ಣಂಚಿನ ಹನಿ, ಒದ್ದೆ ಎವೆ ಪುನರಾವರ್ತನೆಗೊಳ್ಳುತ್ತವೆ. ನೋವಿನ ಹಾಳೆಗಳನ್ನು ಮಗುಚಿ ಹಾಕುತ್ತಾ, 'ಕೊನೆಗೆ ಇಷ್ಟೇ' ಆದರೂ'ಗಳಿಗೆ ಬಟ್ಟಲು ತುಂಬುವಾಗ | ಬದುಕು ಧ್ವನಿ ಕೊಡುತ್ತದೆ'; ಎಲ್ಲೋ ಹಾಳೆಗಳ ಮಧ್ಯೆ ಅವಿತ ನವಿಲುಗರಿ ರೆಕ್ಕೆ ಹರಡಿ ಲಯಬದ್ಧ ಕುಣಿಯುತ್ತದೆ.

ಡಿ. ಮೀನಾಕ್ಷಿಯವರ ಮೊದಲ ಸಂಕಲನ, 'ಪ್ರೀತಿಯ ಪೋನೆ' (೨೦೦೧)

'ನಿನ್ನ ಹೃದಯದ ಬ್ಯಾಂಕಿನಾಗ| ನನದೊಂದು ಖಾತೆ ತೆರದೀನಿ| ನಿನಗೂ ಗೊತ್ತೈತಿ| ಆ ಖಾತೇನ ನೋಡಿಕೊಳ್ಳೋದೂ| ನಮ್ಮಿಬ್ಬರಿಗೂ ಸೇರತೈತಿ' (ಪ್ರೀತಿ-ಖಾತೆ)

ಪ್ರೀತಿ ಏಕಮುಖವಾಗಬಾರದು. ಅದು ಎರಡು ಹೃದಯಗಳಿಗೆ ಸಂಬಂಧಿಸಿದ್ದು. ಅದನ್ನು ಜತನದಿಂದ ನೋಡಿಕೊಳ್ಳಬೇಕು. ಆ ಜವಾಬ್ದಾರಿ ಹೆಣ್ಣಿನದಷ್ಟೇ ಅಲ್ಲ, ಗಂಡಿನದೂ ಕೂಡಾ.

ಪ್ರೀತಿ, ಪ್ರಕೃತಿ ವರ್ಣನೆ ಇವುಗಳೇ ಇಲ್ಲಿ ಪ್ರಧಾನವಾದರೂ, ಮನ ಸೆಳೆಯುವ ರೂಪಕಗಳಿವೆ. 'ನಿನ್ನ ನೆನಪಿನ ದೋಣಿಯಾಗ ಕುಂತು| ಕಳೆದ ವ್ಯಾಳೀನ ಹಿಡಿಯಾಕ ಹೊಂಟೀನಿ'(ನೆನಪು ನಿರೀಕ್ಷೆ), 'ವರುಷ ಹೋದರೂ| ವರುಷ ಬಂದರೂ | ಸಾಗುವ ಬನ್ನಿ| ಬರೀ ಹಳೆಯದರ| ಹೊಸಗಾಳಿಗೆ ಎದೆಯೊಡ್ಡಿ (ಹೊಸವರ್ಷ)

ಉತ್ತರ ಕರ್ನಾಟಕದ ಭಾಷೆಯನ್ನು ಕವಯಿತ್ರಿ ಇನ್ನೂ ಚೆನ್ನಾಗಿ ಬಳಸಿಕೊಳ್ಳಬಹುದಿತ್ತೇನೋ. ಸ್ವಾತಂತ್ರ್ಯ, ರಾಜಕೀಯ, ಬರ-ಬವಣೆ ಮೊದಲಾದ ಕವಿತೆಗಳು ಭಿನ್ನ ವಿಷಯದತ್ತ ಹೊರಳುತ್ತವಾದರೂ, ಭಾವುಕತೆಯಿಂದ ಹೊರ ಬರುವುದಿಲ್ಲ.

ಸ್ತ್ರೀ ಶೋಷಣೆಯ ವಿರುದ್ಧ ಕೆ. ಷರೀಫಾ ಗಟ್ಟಿ ಸ್ವರವನ್ನೆತ್ತಿದ್ದಾರೆ. ಅದು ಅವರ ಹನಿಗವನಗಳಲ್ಲೂ (**ಪಾಂಚಾಲಿ** - ೨೦೦೦), ದೀರ್ಘ ಕವನಗಳಲ್ಲೂ (**ಮುಮ್ತಾಜಳ ಮಹಲು**- ೨೦೦೧) ವ್ಯಕ್ತವಾಗಿವೆ. ಹೆಣ್ಣನ್ನು ಎರಡನೆ ದರ್ಜೆಯ ಪ್ರಜೆಯನ್ನಾಗಿ ಕಂಡಿರುವ ವ್ಯವಸ್ಥೆಯ ಬಗ್ಗೆ ತನಗೆ ಸಹಜವಾಗಿಯೇ ಸಿಟ್ಟಿದೆಯೆಂದು ಷರೀಫಾ ಅವರು, ಮೊದಲಿಗೇ ಹೇಳಿಕೊಂಡಿದ್ದಾರೆ.

ಸ್ತ್ರೀ ಹತ್ಯೆಯ ಬೇರೆ ಬೇರೆ ಸಂದರ್ಭಗಳನ್ನು ಹೇಳುತ್ತಾ, 'ಅವಳ ಬದುಕಿನ ಹಕ್ಕು| ಕಸಿಯುವ ಪಶುವಾಗದೇ| ಕ್ಷಣಕಾಲ ಬದುಕಲು ಬದುಕಿಸಲು| ನಿಜವಾದ ಮಾನವರಾಗಿ' ಎಂದು ಶೋಷಿಸುವವರನ್ನು ಕೇಳಿಕೊಳ್ಳುತ್ತಾರೆ. '**ಹೆಣ್ಣು ; ಗತಿಸಿದ ಸಹಸ್ರಮಾನ, ಆದರ್ಶದ ಕೈಪಿಡಿ, ದ್ರೌಪದಿಯ ಪ್ರಶ್ನೆ, ಅಕ್ಕನಿಗೊಂದು ಪ್ರಶ್ನೆ**, ಕವಿತೆಗಳಲ್ಲಿ ಕವಯಿತ್ರಿ ಹೆಣ್ಣಿನ ನೋವುಗಳಿಗೆ, ಅವಳ ಅಸಹಾಯಕತೆಗೆ ತೀವ್ರವಾಗಿ ಸ್ಪಂದಿಸುತ್ತಾರೆ. ಆದರ್ಶಗಳ ಭ್ರಮೆಯಲ್ಲಿ ನಲುಗಿದ ಹೆಣ್ಣುಗಳನ್ನು 'ಯಜಮಾನರ ಮರ್ಜಿ ಹಿಡಿದು| ದಾಸಿಯಂತೆ ದುಡಿದುದಕ್ಕೆ ಕೊನೆಗೆ| ಗರತಿಯ ಪಟ್ಟ ದಕ್ಕಿತೇನೇ?' ಎಂದು ಕೇಳುತ್ತಾರೆ. ವ್ಯವಸ್ಥೆಯ ವಿರುದ್ಧ ಸಿಡಿಮಿಡಿಗುಟ್ಟುತ್ತಲೇ ಒಂದೆಡೆ ಕವಯಿತ್ರಿ, 'ಕನ್ನಡತಿ ಕಾವೇರಿ| ಮೈತುಂಬಿ ಹರಿವಾಗ| ಕಾಳು ತುಂಬಿದ ತೆನೆಗಳು| ಬಗ್ಗಿ ಬಗ್ಗಿ ನಮಿಸುತ್ತಾವೆ' ಎನ್ನುವ ಮಾರ್ದವತೆಗೂ ಕವಿತೆಯನ್ನು ಒಗ್ಗಿಸಿಕೊಂಡಿರುವುದು ಸಮಾಧಾನಕರ. 'ಮೌನವಾದ ಮುಖದಲಿ| ಸಪ್ಪೆಯಾದ ಕಣ್ಣುಗಳು| ಯಾವುದೋ ರಹಸ್ಯವನು| ಮುಚ್ಚಿಡಲಾಗದೇ ಸೋತವು' ಎನ್ನುವ ಸೂಚ್ಯಾರ್ಥದ ಹನಿಗವನಗಳೂ ಇಲ್ಲಿವೆ. ಶೋಷಿತ ವರ್ಗದ ನಿಷ್ಠುರದ ಧ್ವನಿ ಷರೀಫಾರದ್ದು.

ಕವಯಿತ್ರಿ ಸ. ಉಷಾ ಅವರ ಕವಿತೆಗಳನ್ನು ಎರಡು ಕಾರಣಗಳಿಗಾಗಿ ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ. ಮೊದಲನೆಯದಾಗಿ ಇವರ ಮೂರು ಸಂಕಲನಗಳು, **ತೊಗಲು ಗೊಂಬೆಯ ಆತ್ಮಕಥೆ**(**೧೯೮೧**), **ಈ ನೆಲದ ಹಾಡು** (೧೯೯೦), ಹಾಗೂ ಇತ್ತೀಚಿನ '**ಹವಳ ಹಾರಿದ ಹೊತ್ತು**'(೨೦೦೫). ಇವು ದೀರ್ಘ ಅಂತರದಲ್ಲಿ ಹೊರಬಂದಿರುವ ಸಂಕಲನಗಳು. 'ಮೌನ ಸಮಾಧಿಯಿಂದೆದ್ದ' (ಧ್ಯಾನ) ಕವಿತೆಗಳು.

ಎರಡನೆಯದಾಗಿ, ಈ ಮೂಲಕ ಪ್ರಕಟಗೊಂಡಿರುವ ಕಾವ್ಯಪ್ರತಿಭೆ ಅಧ್ಯಯನದ ದೃಷ್ಟಿಯಿಂದ ಬಹುಮುಖ್ಯವಾಗಿವೆ ಎಂಬ ಕಾರಣಕ್ಕಾಗಿ. ಕಾವ್ಯವನ್ನು ಓದುವುದಲ್ಲ, ಅನುಭವಿಸಬೇಕು. ಹಾಗೆ ಅನುಭವಕ್ಕೆ ಪಕ್ಕಾಗಿಸುವ ಕೌಶಲ್ಯ ಇಲ್ಲಿನ ಕವಿತೆಗಳಿಗಿವೆ. ಇಲ್ಲಿ ಕವಿತೆ, ಒಂದು ಧ್ಯಾನದಲ್ಲಿ 'ಗೂಡು' ಕಟ್ಟುತ್ತದೆ.

ಗೂಡು ಕಟ್ಟುವ ಗೆಳೆಯಾ| ಗೂಡು ಕಟ್ಟು| ಕಾಳು ತುಂಬಿದ ಗದ್ದೆ ಬಯಲಂಚಲ್ಲಿ| ಕಾಲುವೆ ಮುಖ ತಿರುವಿ ನಡೆದಲ್ಲಿ| ಒಂಟಿ ಮರವೊಂದು| ಬಾನಿಗೆತ್ತಿತಲೆ| ಕೈ ಚಾಚಿದಲ್ಲಿ |

ಹಾವು ಹುಪ್ಪಟೆ| ಮೊಟ್ಟೆಕದಿಯದಲ್ಲಿ| ಗೂಡು ಕಟ್ಟುವ ಗೆಳೆಯಾ| ಗೂಡು ಕಟ್ಟು...

ಕಾಲುವೆಗೆ ಬಿದ್ದು| ಕುಪ್ಪಳಿಸಿ ದಡಕ್ಕೆ| ಸುಟ್ಟ ರೆಕ್ಕೆಗಳ ಕೊಕ್ಕಿನಲಿ ತಿದ್ದಿಕೊಳುತ| ಹಾರಲಾರದೆ ನಡೆಯಲಾರದೆ| ಚಂಚುಗಳ ಬೆಸೆದು | ಗೂಡು ಮುಟ್ಟುವ ಗೆಳೆಯಾ| ಗೂಡು ಬಿಟ್ಟು

ಕಥಾನಕದಂತೆ ಸಾಗುವ ಪುಟ್ಟ ಹುಡುಗ ಮತ್ತು ಪಾಷಾಣ ಮೋಹಿನಿ, ಅರಸಿಯ ಕೆರೆಗೆ ನೀರು ಕವಿತೆಗಳು ರಮ್ಯಲೋಕಕ್ಕೆ ಕೊಂಡೊಯ್ಯುತ್ತವೆ. ಕವಯಿತ್ರಿಯರು ಪ್ರಣಯ ಕಾವ್ಯ ಬರೆಯದಿರುವ ಬಗ್ಗೆ ಎಲ್ಲರಂತೆ ನನಗೂ ಕುತೂಹಲವಿತ್ತು. ಪ್ರೇಮ, ಪ್ರಣಯ ಅವರನ್ನು ಉತ್ಕಂಠತೆಗೆ ಕೊಂಡೊಯ್ಯುತ್ತದೆ. ಬೇರೆ ಬೇರೆ ಸಂಕೇತಗಳಲ್ಲಿ ಅವರದನ್ನು ವ್ಯಕ್ತಪಡಿಸುತ್ತಾರೆ. ಹೆಚ್ಚಿನವು ನಿರಾಶೆ, ಅತೃಪ್ತಿಯಿಂದ ಕೂಡಿರುತ್ತದೆ. ಚೇತೋಹಾರಿಯಾಗಿ ಕಾಣಿಸಿಕೊಳ್ಳುವುದು ವಿರಳ. ಅಂತಹ ಪ್ರಯತ್ನ ಇಲ್ಲಿನ **ರುರು ಪ್ರಮದಾ ಪ್ರೀತಿ, ಹವಳ ಹಾರಿದ ಹೊತ್ತು** ಕವಿತೆಗಳು.

ಕಡಲಾಳದ ರಹಸ್ಯ ಲೋಕಕ್ಕೆ| ಅದರವೇ ನಿಯಮಗಳು| ಇದ್ದರೂ ಧೀರ ಸಾಲ್ಮನ್‌ನೊಂದಿಗೆ ಹವಳ ಆತನೊಂದಿಗೆ ಕಡಲ ವಿಸ್ತಾರದಲ್ಲಿ ವಿಹರಿಸುತ್ತದೆ. 'ಸಾಲ್ಮನ್ ತಂಗಿತು| ಹವಳ ವಕ್ಷದಲ್ಲಿ| ಹವಳ ಹಾರಿತು| ಸಾಲ್ಮನ್ ರೆಕ್ಕೆ ಬಳಸಿ|(**ಹವಳ ಹಾರಿದ ಹೊತ್ತು**), ಹೌದು, ಹವಳ ಹಾರಿದ ಹೊತ್ತು| ಯಾರಿಗೆ ಗೊತ್ತು? ಒಂದು ಧ್ಯಾನದಲ್ಲಿ ಹುಟ್ಟಿದ ಕವಿತೆ ಓದಿಸಿಕೊಳ್ಳುತ್ತಾ, ಇನ್ನೊಂದು ಧ್ಯಾನಕ್ಕೆ ಕೊಂಡೊಯ್ದು ನಿಲ್ಲಿಸುವ ಬಗೆ ಇದು.

ಒಟ್ಟು ಕಾವ್ಯಕ್ಷೇತ್ರದಲ್ಲಿ ಇಂದಿನವರ ತೊಡಗಿಸುವಿಕೆಯ ಕುರಿತು ಎಚ್.ಎಸ್. ಶಿವಪ್ರಕಾಶ್ (ಸ. ಉಪಾರ **ಹವಳ ಹಾರಿದ ಹೊತ್ತು** ಸಂಕಲನದ ಮುನ್ನುಡಿಯಿಂದ) ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. 'ಕೆಲವರು ಅವರಿವರೊರೆದುದನ್ನೆ ಮರಮರಳಿ ರಿಸೈಕಲ್ ಮಾಡುತ್ತಾ ಯಾಂತ್ರಿಕ ಕಾವ್ಯ ನಿರ್ಮಿತಿಯಲ್ಲಿ ತೃಪ್ತರಾಗಿದ್ದಾರೆ. ಇನ್ನೂ ಕೆಲವರು ಈಗ ಸವಕಲಾಗಿರುವ ನವೋದಯ ನವ್ಯ –ಬಂಡಾಯಗಳ ಗೊಡ್ಡೆಮ್ಮೆಯ ಹಾಲನ್ನೇ ಹಿಂಡುತ್ತಿದ್ದಾರೆ.' ಮಹಿಳಾ ಕಾವ್ಯದ ಬಗ್ಗೆ ಹೇಳುವಾಗ, 'ಮಹಿಳಾ ಕಾವ್ಯದ ಪ್ರಾರಂಭದಲ್ಲಿ ಮೈ ಬೆಚ್ಚುವಂತೆ ಕಾಣುತ್ತಿದ್ದ ಸಾಲುಗಳು ಈಗ ಹೆಚ್ಚಿನವಾಗಿ ಕಾಣುವುದಿಲ್ಲ' ಎನ್ನುತ್ತಾರೆ.

ಒಟ್ಟಾರೆ ವಿಮರ್ಶಕರ ಅಭಿಪ್ರಾಯವೆಂದರೆ, 'ಮಹಿಳೆಯರ ಕಾವ್ಯ ಸ್ವಾನುಭವದ ಕೇಂದ್ರದಲ್ಲೇ ಗಿರಕಿ ಹೊಡೆಯುತ್ತಿರುತ್ತವೆ; ಅಲ್ಲಿದ್ದುಕೊಂಡೇ ಹೊರಜಗತ್ತಿಗೆ ಅವರು ತೆರೆದುಕೊಳ್ಳಬೇಕಿದೆ' ಎನ್ನುವುದು.

ಮಹಿಳಾ ಕಾವ್ಯ ಸಮೀಕ್ಷೆ ಕುರಿತಂತೆ ಡಾ. ಡಿ. ಮಂಗಳಾ ಪ್ರಿಯದರ್ಶಿನಿ (ಲೇಖಕಿಯರ ಸಾಹಿತ್ಯ ೭೫ ವರ್ಷಗಳಲ್ಲಿ), ಎಂಬ ದಶಕದಲ್ಲಿ ನಿಂತು ಮಹಿಳೆಯರ ಕಾವ್ಯವನ್ನು ಪ್ರತ್ಯೇಕವಾಗಿ ಗಮನಿಸಬೇಕಾದ ಔಚಿತ್ಯವನ್ನು ಹೀಗೆ ಸಮರ್ಥಿಸಿದ್ದಾರೆ. "ವಿದ್ಯೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಯಾವ ರೀತಿಯೂ ಸಕ್ರಿಯವಾಗಿ, ಕ್ರಿಯಾತ್ಮಕವಾಗಿ ಭಾಗವಹಿಸಲು ಆಕೆ ಸಾವಿರಾರು ವರ್ಷಗಳಿಂದ ವಂಚಿತಳಾಗಿದ್ದಾಳೆಂಬುದನ್ನು ಅವಳ ಕಾವ್ಯ ಸಮೀಕ್ಷೆಗೆ ಹೊರಡುವವರು ಮರೆಯಬಾರದು. ಆ ಕಾರಣದಿಂದಲೇ ಬಹುಶಃ ಅವಳ ಕಾವ್ಯದಲ್ಲಿನ ಅಭಿವ್ಯಕ್ತಿ ವಿಧಾನದಲ್ಲಿ ಸೂಕ್ಷ್ಮ ಸಂಕೀರ್ಣ

ಶೈಲಿ, ನಿರೂಪಣಾ ತಂತ್ರದಲ್ಲಿ ಕೊರತೆಯಿರಬಹುದೇನೋ..." ಈ ಮಾತು ಇಂದಿಗೂ ಅನ್ವಯಿಸುತ್ತದೆ. ಬದುಕಿನ ಹಲವು ಒತ್ತಡಗಳು, ಹೋರಾಟಗಳ ಜೊತೆಗೇ ಕಾವ್ಯದ ಕೆಲವು ಸಾಲುಗಳನ್ನು ಆಕೆ ಎದುರಿಸಬೇಕಿದೆ. ಆದರೂ, ಪ್ರತ್ಯೇಕವಾಗಿ ಗಮನಿಸಬೇಕಾದ ಅಗತ್ಯವನ್ನು ಆಕೆ ನಿವಾರಿಸಿಕೊಳ್ಳುವುದೇ ಮೇಲು.

ಈ ಕಾವ್ಯಾವಲೋಕನ ಸಂದರ್ಭ ನನ್ನ ಗಮನಕ್ಕೆ ಬಂದ ಎರಡು ಅಂಶಗಳೆಂದರೆ, ಮೊದಲನೆಯದಾಗಿ ಮಕ್ಕಳ ಕವಿತೆ ರಚಿಸುವ ಕವಯಿತ್ರಿಯರು ತುಂಬಾ ಕಡಿಮೆ. ಎರಡನೆಯದಾಗಿ, 'ಕವಿ'ಗಳಿಗೆ 'ಮಗಳು' ಕವಿತೆಯಾಗುತ್ತಾಳೆ. 'ಮಗ' ಯಾಕೆ ಆಗುವುದಿಲ್ಲ?

ಸ್ವಾನುಭವ ಕೇಂದ್ರದಲ್ಲಿದ್ದುಕೊಂಡೂ ಹೊರಪ್ರಪಂಚಕ್ಕೆ ತೆರೆದುಕೊಳ್ಳುವುದಕ್ಕೆ ಕವಯಿತ್ರಿಯರಿಗೆ ಸಾಧ್ಯವಿದೆ. ವಿರಳ ಸಂಖ್ಯೆಯಲ್ಲಾದರೂ ಕೆಲವರದನ್ನು ಸಾಬೀತುಪಡಿಸಿದ್ದಾರೆ ಕೂಡಾ. ಕಾವ್ಯಕ್ಷೇತ್ರದಲ್ಲಿ ಮಹಿಳೆಯರು ತಮ್ಮ ನೆಲೆಯನ್ನು ಭದ್ರ ಮಾಡಿಕೊಳ್ಳಬೇಕಿದ್ದರೆ, ಮಹಿಳಾ ಕಾವ್ಯ ಸಮಗ್ರ ಅವಲೋಕನಕ್ಕೆ ಒಳಗಾಗಬೇಕು. ಇದು ಸಾಧ್ಯವಾಗುವುದು ಇಂತಹ ಅಧ್ಯಯನ ಶಿಬಿರಗಳಿಂದ. ಇವು ಮೊದಲು ತಾಲೂಕು, ಜಿಲ್ಲಾ ಮಟ್ಟಗಳಲ್ಲಿ ನಡೆಯಬೇಕು. ಈ ಮೂಲಕ ಮಹಿಳಾ ಕಾವ್ಯ ವಸ್ತುನಿಷ್ಠ ಚರ್ಚೆಗೊಳಗಾಗಬೇಕು. ಅಂತೆಯೇ, ಕವನ ರಚನೆ ಒಂದು 'ತುರ್ತು' ಕೆಲಸವಾಗಬಾರದು. ಇದರಲ್ಲಿ ಶ್ರದ್ಧೆಯಿಂದ ತೊಡಗಿಕೊಂಡಾಗಲಷ್ಟೇ 'ಕಟ್ಟುವ ಕ್ರಿಯೆ' ಚೆನ್ನಾಗಿ ನಡೆದೀತು. ಆಗಲೇ ಮಹಿಳಾ ಕಾವ್ಯ ವಿಮರ್ಶಕರನ್ನು ತಲುಪುವುದು, ತಟ್ಟುವುದು, ಕಾಡುವುದು ಸಾಧ್ಯವಾಗುವುದು.

### ಆಕರಗ್ರಂಥಗಳು


ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ (*ದಲಿತ-ಬಂಡಾಯ ಸಾಹಿತ್ಯದಲ್ಲಿ ಬದಲಾವಣೆಯ ಆಶಯ* – ಮಲ್ಲಿಕಾ ಘಂಟಿ, ನವೋದಯ ಸಾಹಿತ್ಯದಲ್ಲಿ ಸಂಸ್ಕೃತಿಯ ವಿಕಾಸ ಮತ್ತು ಸ್ತ್ರೀ- ಎನ್. ಗಾಯತ್ರಿ)

ಲೇಖಕಿಯರ ಸಾಹಿತ್ಯ ೭೫ ವರ್ಷಗಳಲ್ಲಿ – ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ – ಆರ್ಕೆ

ಕವಿ ಕಾವ್ಯ ವಿಮರ್ಶೆ (ಸೂಕ್ತಿ ಸಂಗ್ರಹ) – ಟಿ. ವಿ. ವೆಂಕಟರಮಣಯ್ಯ


◆

# ಮಲಯಾಳ ಸಾಹಿತ್ಯದಲ್ಲಿ ಮಹಿಳೆ

✍ ಪಾರ್ವತಿ ಜಿ. ಐತಾಳ್

ಹಿಂದೆ ಕೇರಳದಲ್ಲಿ ಮಾತೃಪ್ರಧಾನ ಸಂಸ್ಕೃತಿ ರೂಢಿಯಲ್ಲಿತ್ತು ಎನ್ನುವ ಕಾರಣಕ್ಕೆ ಆ ನಾಡನ್ನು 'ಸ್ತ್ರೀ ಮಲಯಾಳ ದೇಶ' ಎಂಬುದಾಗಿ ಕನ್ನಡಿಗರು ಕರೆಯುತ್ತಿದ್ದದ್ದಿದೆ. ಅಲ್ಲಿ ಸ್ತ್ರೀಯರಿಗೆ ಬೇಕು ಬೇಕಾದ ಸ್ವಾತಂತ್ರ್ಯವಿತ್ತು ಮತ್ತು ಸ್ತ್ರೀ ಶೋಷಣೆ ನಡೆಯುತ್ತಿರಲಿಲ್ಲವೆಂದು ಎಲ್ಲರ ಭಾವನೆಯಾಗಿತ್ತು. ಆದರೆ ವಾಸ್ತವವು ಇದಕ್ಕಿಂತ ಪೂರ್ತಿ ಭಿನ್ನವಾಗಿತ್ತೆಂಬ ಸತ್ಯವು ಎಲ್ಲರ ಅರಿವಿಗೆ ಬಂದದ್ದು ಅಲ್ಲಿ ಮಹಿಳೆಯರ ಕುರಿತಾದ ಸಾಹಿತ್ಯಕೃತಿಗಳು ಒಂದಾದ ಮೇಲೊಂದರಂತೆ ಬರಲಾರಂಭಿಸಿದಾಗ ಮತ್ತು ಅವುಗಳಲ್ಲಿ ಕೆಲವು ಇತರ ಭಾಷೆಗಳಿಗೆ ಅನುವಾದಗೊಂಡಾಗ. ಮೊದಲಿಗೆ ರಚಿತಗೊಂಡ ಕೃತಿಗಳು ಕೇರಳದ ನಾಯರ್ ಮತ್ತು ನಂಬೂದಿರಿ ಜನಾಂಗದಲ್ಲಿ ನಡೆಯುತ್ತಿದ್ದ ಸ್ತ್ರೀ ಶೋಷಣೆಯ ಮೇಲೆ ಬೆಳಕು ಚೆಲ್ಲುತ್ತವೆ.

ಉತ್ತರಭಾರತದಿಂದ ಕೇರಳಕ್ಕೆ ವಲಸೆ ಬಂದವರು ನಂಬೂದಿರಿ ಬ್ರಾಹ್ಮಣರು. ತಮ್ಮ ಅಪಾರ ಜ್ಞಾನ ಮತ್ತು ಬುದ್ಧಿವಂತಿಕೆಗಳಿಂದ ಇವರು ಇಲ್ಲಿನ ಭೂಮಿಯನ್ನು ವಶ ಪಡಿಸಿಕೊಂಡು ಜಮೀನ್ದಾರರಾಗಿ ಬಡವರನ್ನು ಮತ್ತು ಕೆಳವರ್ಗದವರನ್ನು ತಮ್ಮ ಮುಷ್ಟಿಯೊಳಗಿಟ್ಟುಕೊಂಡು ಮೆರೆದರು. ತಾವು ಗಳಿಸಿದ್ದ ಆಸ್ತಿಪಾಸ್ತಿಗಳು ಹೋಳಾಗುವುದನ್ನು ತಡೆಯಲು ಅವರು ಒಂದು ಪದ್ಧತಿಯನ್ನು ರೂಪಿಸಿಕೊಂಡರು. ಅದರ ಪ್ರಕಾರ ಒಂದು ಕುಟುಂಬದ ಪೂರ್ತಿ ಆಸ್ತಿಯ ಮೇಲೆ ಹಿರಿಯ ಮಗನಿಗೆ ಮಾತ್ರ ಹಕ್ಕಿರುತ್ತದೆ. ಬ್ರಾಹ್ಮಣ ಕನ್ಯೆಯನ್ನು ವಿವಾಹವಾಗುವ ಹಕ್ಕು ಕೂಡಾ ಆತನದೊಬ್ಬನದೇ ಆಗಿರುತ್ತದೆ. ಆತನ ತಮ್ಮಂದಿರು ನಾಯರ್ ಸ್ತ್ರೀಯರೊಂದಿಗೆ ಮಾತ್ರ ಸಂಬಂಧವನ್ನಿರಿಸಿಕೊಳ್ಳಬಹುದು. ಹಿರಿಯ ಮಗ ಎಷ್ಟು ಬೇಕಾದರೂ ಮದುವೆ ಮಾಡಿಕೊಳ್ಳಬಹುದು ಮತ್ತು ನಾಯರ್ ಸ್ತ್ರೀಯರೊಂದಿಗೆ ಸಂಬಂಧವನ್ನಿಟ್ಟುಕೊಳ್ಳಬಹುದು. ಈ

ಪದ್ಧತಿಯಿಂದ ಕಷ್ಟ-ನಷ್ಟಗಳನ್ನು ಅನುಭವಿಸುತ್ತಿದ್ದವರು ನಂಬೂದಿರಿ ಸ್ತ್ರೀಯರೇ ಆಗಿದ್ದರು. ಅವರು ವಯಸ್ಸಿನ ಅಂತರವನ್ನು ಲೆಕ್ಕಿಸದೆ ಕೆಲವೊಮ್ಮೆ ವಯೋವೃದ್ಧರನ್ನು ಎರಡನೇ, ಮೂರನೇ ಅಥವಾ ನಾಲ್ಕನೇ ವಿವಾಹವಾಗಬೇಕಿತ್ತು. ನಂಬೂದಿರಿ ಸಮುದಾಯದಲ್ಲಿ ಸ್ತ್ರೀಯರು ಅನುಭವಿಸುತ್ತಿದ್ದ ಬವಣೆಗಳ ಬಗ್ಗೆ ಮಲಯಾಳದ ಪ್ರಸಿದ್ಧ ಲೇಖಕಿ ಲಲಿತಾಂಬಿಕಾ ಅಂತರ್ಜನಂ ತಮ್ಮ ಆತ್ಮಕಥೆಗೊಂದು ಮುನ್ನುಡಿ ಎಂಬ ಕೃತಿಯಲ್ಲಿ ಹೀಗೆ ಹೇಳುತ್ತಾರೆ.

'ಜಾತಿ ವೈಷಮ್ಯದ ಕರಾಳ ಕತ್ತಲು ಎಲ್ಲೆಲ್ಲೂ ತುಂಬಿಕೊಂಡಿದ್ದ ಕಾಲವದು. ನಂಬೂದಿರಿಗಳು ಕೇರಳದ ಅತ್ಯುಚ್ಚ ಸ್ಥಾನದಲ್ಲಿದ್ದರು. ಆದರೆ ನಂಬೂದಿರಿ ಕುಟುಂಬಗಳಲ್ಲಿ ಜೀವಿಸುತ್ತಿದ್ದ ಸ್ತ್ರೀಯರ ಬದುಕು ನರಕಸದೃಶವಾಗಿತ್ತು. ಶಿಕ್ಷಣ ಪಡೆಯುವ ಅವಕಾಶ ಅವರಿಗಿರಲಿಲ್ಲ. ಪ್ರೌಢವಯಸ್ಸಿಗೆ ಬಂದನಂತರ ಅವರು ಮನೆಯೊಳಗಿನ ಕತ್ತಲೆ ಕೋಣೆಗಳೊಳಗೆ ಅರೆಬೆತ್ತಲೆಯಾಗಿ ಸೂರ್ಯರಶ್ಮಿಗಳ ಸ್ಪರ್ಶವಿಲ್ಲದೆ ಕಳೆಯಬೇಕಾಗಿತ್ತು. ಹೊರಗೆ ಬಂದರೂ ಮೈ-ಮುಖಗಳನ್ನು ಪೂರ್ತಿಯಾಗಿ ಮುಚ್ಚಿಕೊಂಡು, ಅಂಗರಕ್ಷಕಿಯರೊಂದಿಗೆ ತಾಳೆಯೋಲೆಯ ಛತ್ರಿಯಿಂದ ಮರೆ ಮಾಡಿಕೊಂಡು ನಡೆದಾಡಬೇಕಿತ್ತು. ಗಂಡಸರ ಮುಖ ನೋಡುವುದೂ ನಿಷಿದ್ಧವಾಗಿತ್ತು. ಅತ್ಯಂತ ಚಿಕ್ಕ ತಪ್ಪು ಮಾಡಿದರೂ ಬಹಿಷ್ಕಾರದಂತಹ ಘೋರ ಶಿಕ್ಷೆಗೆ ಅವರನ್ನು ಗುರಿಪಡಿಸಲಾಗುತ್ತಿತ್ತು. ಭಯವೊಂದನ್ನು ಬಿಟ್ಟರೆ ಬೇರಾವ ಭಾವನೆಯೂ ಅವರಲ್ಲಿರಲಿಲ್ಲ. ಕನ್ಯೆಯರು, ವಿಧವೆಯರು ಮತ್ತು ಒಬ್ಬ ಗಂಡನ ಹಲವು ಪತ್ನಿಯರು ಜೊತೆಯಾಗಿ 'ಅಂತಃ ಪುರ'ಗಳ ನಾಲ್ಕು ಗೋಡೆಗಳ ನಡುವೆ ಕಣ್ಣೀರು ಹರಿಸುತ್ತ ಇರಬೇಕಿತ್ತು. ಈ ಅಂತಃಪುರದ ದುಸ್ಥಿತಿಯು ಹಿಟ್ಲರನ ಯಾತನಾಶಿಬಿರಕ್ಕಿಂತಲೂ ಭಯಂಕರವಾಗಿತ್ತು.'

ನಾಯರ್ ಸಮುದಾಯದ ಸ್ತ್ರೀಯರ ಸ್ಥಿತಿಯೂ ಇದೇ ರೀತಿ ಅತ್ಯಂತ ದಯನೀಯವಾಗಿತ್ತು. ಅವರದ್ದು ಹೊರನೋಟಕ್ಕೆ ಮಾತೃಪ್ರಧಾನ ಪದ್ಧತಿಯಾದರೂ ಅಲ್ಲಿ ಸ್ತ್ರೀಯರಿಗೆ ಯಾವ ಪ್ರಾಧಾನ್ಯವೂ ಇರಲಿಲ್ಲ. ನಾಯರ್‌ಗಳು 'ತರವಾಡು' ಎಂಬ ಕೂಡು ಕುಟುಂಬಗಳಲ್ಲಿ ವಾಸಿಸುತ್ತಿದ್ದರು. ತರವಾಡಿನ ಹಿರಿಯ ಗಂಡಸು ಕುಟುಂಬದ ಯಜಮಾನ ಹಾಗೂ ರಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದು ಆತನನ್ನು 'ಕಾರಣವರ್' ಎಂದು ಕರೆಯುತ್ತಿದ್ದರು. ಅವರಲ್ಲಿ ಕಾನೂನು ರೀತ್ಯಾ ವಿವಾಹಗಳು ನಡೆಯುತ್ತಿರಲಿಲ್ಲ. ಬದಲಾಗಿ ಸ್ತ್ರೀಪುರುಷರ ನಡುವೆ 'ಸಂಬಂಧಂ' ಎಂಬ ಸಾಮಾಜಿಕ ಪದ್ಧತಿ ಇರುವ ಸಹ ಜೀವನಕ್ಕೆ ಮಾತ್ರ ಅವಕಾಶವಿತ್ತು. ಸ್ತ್ರೀಯರು ಈ 'ಸಂಬಂಧಂ' ಏರ್ಪಟ್ಟ ನಂತರವೂ ತಾವು ಹುಟ್ಟಿ ಬೆಳೆದ ಮನೆಗಳಲ್ಲೇ ಉಳಿಯುತ್ತಿದ್ದು ಅವರ ಮಕ್ಕಳು ತಾಯಿಯ ಹೆಸರು ಮತ್ತು ಆಸ್ತಿಗಳಿಗೆ ವಾರಸುದಾರರಾಗಿರುತ್ತಿದ್ದರು. ಪುರುಷರೂ ಕೂಡಾ ತಮ್ಮ ತಮ್ಮ ಮನೆಗಳಲ್ಲೇ ವಾಸಿಸುತ್ತಿದ್ದು ತಮ್ಮ ಪತ್ನಿಯರನ್ನು ಸಂಜೆ ಹೊತ್ತಿಗೆ ಮಾತ್ರ ಕೂಡಲು ಹೋಗುತ್ತಿದ್ದರು. 'ಸಂಬಂಧಂ' ಎಂಬುದು ತೀರಾ ಸರಳವಾದ ಒಂದು ಸಮಾರಂಭವಾಗಿರುತ್ತಿದ್ದು ಅದನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಬೇಡವೆನಿಸಿದಾಗ ಬಹಳ ಸುಲಭವಾಗಿ ಈ ಸಂಬಂಧವಿಂದ ಕಳಚಿಕೊಳ್ಳಬಹುದಾಗಿತ್ತು. ಅಲ್ಲದೆ ಒಬ್ಬ ಪುರುಷ ಅಥವಾ ಸ್ತ್ರೀಯು

ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಸಂಬಂಧಗಳನ್ನು ಇಟ್ಟುಕೊಳ್ಳಬಹುದಾಗಿತ್ತು. ಹೊರನೋಟಕ್ಕೆ ಈ ಸ್ವಾತಂತ್ರ್ಯವು ಆಕರ್ಷಕವಾಗಿ ಕಂಡರೂ ಇದರೊಳಗಿನ ನಾಯರ್ ಸ್ತ್ರೀಯರ ಅಸಹಾಯಕತೆ ಬೂದಿಮುಚ್ಚಿದ ಕೆಂಡದಂತಿತ್ತು. ಕುಟುಂಬದ ಯಜಮಾನಿಕೆಯು ಪುರುಷನ ಕೈಯಲ್ಲಿದ್ದುದರಿಂದ ಆತ ಸ್ತ್ರೀಯರನ್ನು ಶ್ರೀಮಂತ ಗಂಡಸರೊಂದಿಗೆ ಕೂಡುವಂತೆ ಅವರ ಇಚ್ಛೆಯ ವಿರುದ್ಧ ಬಲಾತ್ಕರಿಸುವ ಮೂಲಕ ಸ್ವಾರ್ಥಸಾಧನೆ ಮಾಡಿಕೊಳ್ಳುತ್ತಿದ್ದುದೂ ಇತ್ತು. ವೇಶ್ಯಾಪದ್ಧತಿಯಂತೆ ಅಲ್ಲಿ ಸ್ತ್ರೀಯರು ಪುರುಷರ ಭೋಗದ ವಸ್ತುಗಳಾಗಿರುತ್ತಿದ್ದರು.

ಪ್ರಜ್ಞಾವಂತ ಯುವಕರ ಸಂಘವೊಂದು ವಿ.ಟಿ. ಭಟ್ಟಾತಿರಿಪ್ಪಾಡರ ನೇತೃತ್ವದಲ್ಲಿ ನಂಬೂದಿರಿ ಸಮಾಜದಲ್ಲಿ ಸ್ತ್ರೀಯರಿಗಾಗುವ ಅನ್ಯಾಯವನ್ನು ಪ್ರತಿಭಟಿಸಿ ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಚಳುವಳಿಯನ್ನು ಆರಂಭಿಸಿ, ಅಂತಃಪುರದೊಳಗಿನ ಸ್ತ್ರೀಯರ ಕಷ್ಟಗಳ ವಿರುದ್ಧ ಧ್ವನಿಯೆತ್ತಿತು. ವಿ.ಟಿ.ಯವರು **ಅಡುಗೆ ಮನೆಯಿಂದ ವೇದಿಕೆಗೆ** ಎಂಬ ನಾಟಕವನ್ನು (೧೯೩೦ರಲ್ಲಿ) ಬರೆದು ಪ್ರದರ್ಶಿಸಿದರು. ಅಡುಗೆ ಮನೆಯಲ್ಲಿ ಬಂಧಿಯಾದ ಸ್ತ್ರೀಯರು ಹೊರಗೆ ಬರಲು ನಡೆಸಿದ ಹೋರಾಟವನ್ನು ನಾಟಕವು ಸಮರ್ಥವಾಗಿ ಚಿತ್ರಿಸಿತು. **ಮರದ ಕೊಡೆಗಳೊಳಗಿನ ಮಹಾನರಕ** (೧೯೩೧) ಎಂಬುದು ಅವರು ಬರೆದ ಇನ್ನೊಂದು ನಾಟಕ. ಇದರಲ್ಲಿ ನಂಬೂದಿರಿ ಸ್ತ್ರೀಯರು ಎಷ್ಟು ಕಟ್ಟುನಿಟ್ಟಾಗಿ ಘೋಷಾಪದ್ಧತಿಯನ್ನು ಅನುಸರಿಸಬೇಕಾಗಿತ್ತು ಮತ್ತು ಅದು ಅವರ ಪಾಲಿಗೆ ಎಂತಹ ಹಿಂಸೆಯಾಗಿತ್ತು ಎಂಬುದನ್ನು ಚಿತ್ರಿಸಲಾಗಿದೆ. **ಋತುಮತಿ** ಎಂಬ ಇನ್ನೊಂದು ನಾಟಕದಲ್ಲಿ ಎಂ.ಪಿ. ಭಟ್ಟಾತಿರಿಪ್ಪಾಡ್ ಋತುಮತಿಯಾದ ನಂಬೂದಿರಿ ಯುವತಿಗೆ ವಿಧಿಸುತ್ತಿದ್ದ ಕಟ್ಟುಪಾಡುಗಳನ್ನು ಟೀಕಿಸಿದ್ದಾರೆ. ಹೀಗೆ ನಂಬೂದಿರಿ ಸ್ತ್ರೀಯರ ವಿಮೋಚನೆಗೆ ಅದೇ ಸಮಾಜದ ಯುವಕರು ಮುಂದಾದದ್ದು ಸಂಬಂಧಪಟ್ಟ ಎಲ್ಲರ ಕಣ್ಣು ತೆರೆಯಿಸಿತು. ಹೊರಪ್ರಪಂಚದ ಧ್ವನಿಗಳು ಅಂತಃಪುರದೊಳಗೂ ಪ್ರತಿಧ್ವನಿಸಿದವು. ಕೆಲವು ಮಂದಿ ನಂಬೂದಿರಿ ಸ್ತ್ರೀಯರು ಧೈರ್ಯ ಮಾಡಿ ಮುನ್ನುಗ್ಗಿ ಹೊರಬಂದು ಸಭೆಗಳಲ್ಲಿ ಭಾಗವಹಿಸಿದರು. ಘೋಷಾ ಪದ್ಧತಿಯ ವಿರುದ್ಧ ಘೋಷಣೆಗಳನ್ನು ಕೂಗಿ ಮರದ ಕೊಡೆಗಳನ್ನು ದೂರ ಎಸೆದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಬ್ರಿಟಿಷರು ಭಾರತದಲ್ಲಿ ತಮ್ಮ ಚಕ್ರಾಧಿಪತ್ಯವನ್ನು ಗಟ್ಟಿಗೊಳಿಸಿದ ನಂತರ ನಾಯರ್ ಸಮುದಾಯದಲ್ಲಿದ್ದ 'ಸಂಬಂಧಂ' ಕೂಡಾ ಕಟುವಾದ ಟೀಕೆಗೊಳಗಾಯಿತು. ವಸಾಹತುಶಾಹಿಯ ಒಂದು ಭಾಗವಾಗಿ ಬಂದ ಈವಾಂಜಲಿಕಲ್ ಮತಪ್ರವರ್ತಕರು ಅನೇಕ ಇಂಗ್ಲಿಷ್ ಶಾಲೆಗಳನ್ನು ತೆರೆದು ಈ ಪ್ರದೇಶದ ಶೈಕ್ಷಣಿಕ ಪದ್ಧತಿಯನ್ನು ಬದಲಾಯಿಸುವುದರೊಂದಿಗೆ ಮರುಚಿಂತನೆ ಪ್ರಾರಂಭವಾಯಿತು. ರಾಷ್ಟ್ರೀಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಲಯಾಳಿ ಯುವಕ ಯುವತಿಯರಿಗೆ ತಮ್ಮ ಪೂರ್ವಜರ ಅನೈತಿಕತೆಯ ಬಗ್ಗೆ ನಾಚಿಕೆ ಎನ್ನಿಸಿತು. ಹೊಸ ತಲೆಮಾರಿನವರು ಬರೆದ ಕಥೆ-ಕಾದಂಬರಿಗಳಲ್ಲಿ 'ಸಂಬಂಧಂ' ಪದ್ಧತಿಯನ್ನು ಅನಾಗರಿಕವೆಂದು ಹೇಳಲಾಗಿದೆ. ಅದನ್ನು ತೊಡೆದು ಹಾಕುವ ಉದ್ದೇಶದಿಂದ ಅನೇಕ ಸಾಮಾಜಿಕ ಸಂಘಟನೆಗಳು ಶ್ರಮವಹಿಸಿ ವಸಾಹತುಶಾಹಿ ಅಧಿಕಾರ

ಶಕ್ತಿಗಳ ಸಹಕಾರದಿಂದ ೧೯೩೬ರಲ್ಲಿ ಮಲಬಾರ್ ವಿವಾಹ ಕಾಯಿದೆಯನ್ನು ಜ್ಯಾರಿಗೆ ತಂದು ನಾಯರ್ ಜನಾಂಗದಲ್ಲೂ ಪಿತೃಪ್ರಧಾನ ವ್ಯವಸ್ಥೆಯನ್ನು ತಂದವು. ಅದೃಷ್ಟವಶಾತ್, ಸ್ತ್ರೀಯರ ಹಕ್ಕು ಮತ್ತು ಕುಟುಂಬದ ಹೆಸರಿನ ಮೇಲಿನ ಹಕ್ಕುಗಳು ಹಾಗೆಯೇ ಉಳಿದವು.

ಮಲಯಾಳದಲ್ಲಿ ಬಂದ ಮೊದಲ ಕಾದಂಬರಿಕಾರರಾದ ಚಂದು ಮೆನೋನರು ಸ್ತ್ರೀಪರ ಕಾಳಜಿಯುಳ್ಳ, ನಾಯಕಿಕೇಂದ್ರಿತವಾದ **ಇಂದುಲೇಖ ಮತ್ತು ಶಾರದ** ಎಂಬ ಎರಡು ಕಾದಂಬರಿಗಳನ್ನು ಬರೆದರು - ಎರಡನೆಯದನ್ನು ಪೂರ್ತಿಗೊಳಿಸಲು ಅವರಿಂದಾಗಲಿಲ್ಲ. ನಂಬೂದಿರಿ ಪುರುಷ ಮತ್ತು ನಾಯರ್ ಸ್ತ್ರೀಯರ ಸಂಬಂಧದಿಂದ ನಾಯರ್ ಮಹಿಳೆ ಯಾವ ರೀತಿಯಲ್ಲಿ ಧರ್ಮಸಂಕಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾಳೆಂಬುದನ್ನು **ಇಂದುಲೇಖ** ಚಿತ್ರಿಸುತ್ತದೆ. ಇಂಗ್ಲಿಷ್ ಕಲಿತ, ಪ್ರಗತಿಪರ ಮನೋಭಾವದ ನಾಯಕಿ ಇಂದುಲೇಖ ಇಲ್ಲಿ ತನ್ನ ಗಂಡನನ್ನು ತಾನೇ ಆಯ್ಕೆ ಮಾಡಿಕೊಳ್ಳುವುದರ ಮೂಲಕ 'ಸಂಬಂಧ' ಪದ್ಧತಿಯನ್ನು ವಿರೋಧಿಸುತ್ತಾಳೆ. **ಶಾರದ** ಕಾದಂಬರಿ ಅಪೂರ್ಣವಾದರೂ ಕಾದಂಬರಿಕಾರರು ಮಹಿಳೆಯ ಶೋಷಣೆಯನ್ನು ಯಾವ ರೀತಿಯಲ್ಲಿ ಚಿತ್ರಿಸಬೇಕೆಂದು ಎಣಿಸಿದ್ದರೆಂಬುದು ಮೊದಲ ಭಾಗದಲ್ಲೇ ಓದುಗರಿಗೆ ತಿಳಿಯುತ್ತದೆ. ವೃದ್ಧನೊಂದಿಗೆ ತನ್ನ ಇಷ್ಟದ ವಿರುದ್ಧ 'ಸಂಬಂಧ'ಕ್ಕೊಳಗಾಗುವ ಕಲ್ಯಾಣಿ, ತಾನು ಪ್ರೀತಿಸುವ ಒಬ್ಬ ಕಲಾವಿದನೊಂದಿಗೆ ಊರು ಬಿಟ್ಟು ಓಡಿಹೋಗಿ ಆತನನ್ನು ವರಿಸಿ 'ಶಾರದ'ಳಿಗೆ ಜನ್ಮವೀಯುತ್ತಾಳೆ. ಆ ನಂತರ ಆ ಸಂಸಾರ ಎದುರಿಸುವ ಕಷ್ಟನಷ್ಟಗಳು ಕಾದಂಬರಿಯಲ್ಲಿ ಮನಮುಟ್ಟುವಂತೆ ಚಿತ್ರಿತವಾಗಿವೆ.

ಚಂದು ಮೆನೋನರ ನಂತರ ಬಂದ ಅನೇಕ ಲೇಖಕರು ತಮ್ಮ ಕೃತಿಗಳಲ್ಲಿ ಸ್ತ್ರೀಯರ ಬಗೆಗಿನ ಕಾಳಜಿ ಮತ್ತು ಸಹಾನುಭೂತಿಗಳನ್ನು ವ್ಯಕ್ತಪಡಿಸಿದ್ದಾರೆ. ನಾಯಕಿಗೆ ಹೆಚ್ಚು ಪ್ರಾಮುಖ್ಯ ನೀಡಿದ್ದಾರೆ. ವೈಕ್ಕಂ ಮಹಮ್ಮದ್ ಬಶೀರರ **ಪಾತುಮ್ಮನ ಆಡು, ಬಾಲ್ಯಕಾಲಸಖಿ, ನನ್ನಜ್ಜನಿಗೊಂದಾನೆಯಿತ್ತು** ಮೊದಲಾದ ಕಾದಂಬರಿಗಳಲ್ಲಿ ಮುಸ್ಲಿಂ ಹೆಣ್ಣುಮಕ್ಕಳ ಸ್ಥಿತಿಗತಿಗಳ ನೈಜ ಚಿತ್ರಣವಿದೆ ಮತ್ತು ಬದಲಾವಣೆಯ ತುಡಿತವಿದೆ. ತಕಳಿ ಶಿವಶಂಕರ ಪಿಳ್ಳೆಯವರ ಅಗಾಧ ಪ್ರಮಾಣದ ಸಾಹಿತ್ಯ ಸೃಷ್ಟಿಯಲ್ಲಿ ಪ್ರಾಯಶಃ ಬಹುಪಾಲು ಸ್ತ್ರೀಯರಿಗೆ ಮೀಸಲಾಗಿಟ್ಟಂತಿದೆ. ಸಮಾಜದಲ್ಲಿ ಹೆಣ್ಣುಮಕ್ಕಳಿಗಾಗುವ ಅನ್ಯಾಯದ ಕಡೆಗೆ ಬೊಟ್ಟು ಮಾಡಿ ತೋರಿಸುವ ಅವರ **ಏಣಿಯ ಮೆಟ್ಟಲುಗಳು, ಪಾಪಿಯಮ್ಮ ಮತ್ತು ಮಕ್ಕಳು, ಧರ್ಮನೀತಿಯೇ, ಅಲ್ಲ ಬದುಕು, ಎರಡು ಬಳ್ಳ, ಚೆಮ್ಮೀನ್** ಮೊದಲಾದ ಕಾದಂಬರಿಗಳು ಮತ್ತು ಹಲವಾರು ಸಣ್ಣಕಥೆಗಳು ತಕಳಿಯವರಲ್ಲಿರುವ ಸ್ತ್ರೀಸಂವೇದನೆಯನ್ನು ಪ್ರಕಟಪಡಿಸುತ್ತವೆ. ಎಂ.ಟಿ. ವಾಸುದೇವನ್ ನಾಯರರ **ಚೌಕಟ್ಟಿನ ಮನೆ, ಕಾಲ, ದುರ್ಬೀಜ** ಮೊದಲಾದ ಕಾದಂಬರಿಗಳು ನಾಯರ್ ತರವಾಡುಗಳಲ್ಲಿ ನಡೆಯುತ್ತಿದ್ದ ಸ್ತ್ರೀ ಶೋಷಣೆಯ ಮೇಲೆ ಬೆಳಕು ಚೆಲ್ಲುತ್ತವೆ.

ಭಾರತದ ಇತರ ಎಲ್ಲ ಭಾಷೆಗಳಂತೆ ಮಲಯಾಳದಲ್ಲೂ ಸಾಹಿತ್ಯಕ್ಷೇತ್ರದೊಳಗೆ ಸ್ತ್ರೀಯರ ಪ್ರವೇಶವಾದದ್ದು ಬಹಳ ತಡವಾಗಿ. ಸ್ತ್ರೀಯರ ಸಾಮಾಜಿಕ ಬದುಕಿನಲ್ಲಿ ಮಹತ್ವದ

ತಿರುವುಗಳು ರೂಪುಗೊಳ್ಳುತ್ತಿದ್ದ ಇಪ್ಪತ್ತನೇ ಶತಮಾನದ ಮೂರು-ನಾಲ್ಕನೇ ದಶಕದಲ್ಲಿ ಲೇಖಕಿಯರಾಗಿ ಬಂದವರು ಲಲಿತಾಂಬಿಕಾ ಅಂತರ್ಜನಂ, ಕೆ. ಸರಸ್ವತಿಯಮ್ಮ ಮತ್ತು ರಾಜಲಕ್ಷ್ಮಿಯವರು. ಲಲಿತಾಂಬಿಕಾ ಅಂತರ್ಜನಂ ಅವರ ಪ್ರಸಿದ್ಧ ಕಾದಂಬರಿ **ಅಗ್ನಿಸಾಕ್ಷಿ** ಕೇವಲ ಸ್ತ್ರೀ ಶೋಷಣೆಯ ಚಿತ್ರಣವಷ್ಟಲ್ಲದೆ ಸ್ತ್ರೀಯ ಸ್ವತಂತ್ರ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವ ದಿಟ್ಟ ಕೆಲಸವನ್ನು ಮಾಡುತ್ತದೆ. ಗಂಡನ ಮನೆಯಲ್ಲಿ ಹಿಂಸೆಯನ್ನು ತಾಳಲಾರದೆ ಕಾದಂಬರಿಯ ನಾಯಕಿಯು ಆ ವಾತಾವರಣವನ್ನು ಬಿಟ್ಟು ಹೊರಗೆ ಬಂದು ಸಮಾಜಸೇವೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಹಲವು ವರ್ಷಗಳ ಸಾರ್ಥಕ ಸೇವೆಯನ್ನು ಮುಗಿಸಿ ಕೊನೆಗೆ ಸನ್ಯಾಸಿನಿಯಾಗುತ್ತಾಳೆ.

ನಂಬೂದಿರಿ ಕುಟುಂಬದಲ್ಲಿ ಹುಟ್ಟಿ ಬೆಳೆದ (೧೯೦೯-'೮೭) ಲಲಿತಾಂಬಿಕಾ ಅಂತರ್ಜನಂ ತಮ್ಮ ಎಲ್ಲ ಕಥೆಗಳಲ್ಲೂ ವ್ಯವಸ್ಥೆಯ ವಿರುದ್ಧ ದನಿ ಎತ್ತುತ್ತಾರೆ. ಹೆಣ್ಣು ಗಂಡಿನ ತಾಳಕ್ಕೆ ತಕ್ಕಂತೆ ಕುಣಿಯುವ ಕೀಲುಗೊಂಬೆಯಲ್ಲ, ಬದಲಾಗಿ ಸ್ವತಂತ್ರವಾಗಿ ಯೋಚಿಸುವ ಶಕ್ತಿಯಿರುವ ಮತ್ತು ಕನಸು ಕಾಣುವ ಮನಸ್ಸುಗಳಿರುವ ವ್ಯಕ್ತಿತ್ವವುಳ್ಳವಳೆಂಬ ಸತ್ಯವನ್ನು ಅವರು ಸಮಾಜದ ಮುಂದಿಟ್ಟರು. ಸಂಪ್ರದಾಯಸ್ಥ ಹಿರಿಯರ ವಿರೋಧಗಳನ್ನು ಎದುರಿಸಬೇಕಾಗಿ ಬಂದರೂ ಹಿಂಜರಿಯದೆ ಸ್ತ್ರೀಪರ ಚಳುವಳಿಗಳಲ್ಲೂ ಅವರು ಸಕ್ರಿಯವಾಗಿ ಭಾಗವಹಿಸಿದರು. ಬರಹಗಾರ್ತಿಯಾಗಿ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಓರ್ವ ಸ್ತ್ರೀಯು ಎದುರಿಸಬೇಕಾಗಿ ಬರುವ ಸಮಸ್ಯೆಗಳು ಮತ್ತು ಸವಾಲುಗಳು ಅವರ ಕಥೆಗಳ ವಸ್ತುಗಳಾದವು. ಮನೆಯೊಳಗಿನ ಕೆಲಸಗಳನ್ನು ನಿಭಾಯಿಸಿಕೊಂಡು, ಮನೆಗೆ ಬರುವ ಅತಿಥಿಗಳನ್ನು ಸತ್ಕರಿಸಿ, ನಂತರ ಸಿಗುವ ಅತ್ಯಲ್ಪ ಸಮಯವನ್ನು ಸಾಹಿತ್ಯ ರಚನೆಗಾಗಿ ವಿನಿಯೋಗಿಸಬೇಕಾದ ಅಸಹಾಯಕತೆಯನ್ನು ಅವರು ತಮ್ಮ ಕತೆಗಳಲ್ಲಿ ತೋಡಿಕೊಂಡರು. **ಇದು ತರವೇ?** ಎಂಬ ಅವರ ಸಣ್ಣ ಕತೆಯು ಮುಖ್ಯವಾಗಿ ಈ ಸಮಸ್ಯೆಯನ್ನು ಮನ ಮುಟ್ಟುವಂತೆ ಚಿತ್ರಿಸುತ್ತದೆ. ಸ್ತ್ರೀಯರ ಸಾಹಿತ್ಯ ರಚನೆಯ ಹಾದಿಯಲ್ಲಿ ತೊಡಕಾಗಿ ನಿಲ್ಲುವ ಮೂಲಭೂತ ಸಮಸ್ಯೆಗಳ ಬಗ್ಗೆ ಮೊದಲ ಬಾರಿಗೆ ದನಿಯೆತ್ತಿದ ಲೇಖಕಿಯಾಗಿ ಲಲಿತಾಂಬಿಕಾ ಅಂತರ್ಜನಂ ಅವರಿಗೆ ಅಗ್ರಸ್ಥಾನ ಸಲ್ಲುತ್ತದೆ.

ಸರಿಸುಮಾರು ಅದೇ ಕಾಲದಲ್ಲಿ ಜಾತಿ, ಮತ, ವರ್ಗಗಳ ಸಮಸ್ಯೆಗಳನ್ನು ಮೀರಿ ನಿಂತಿರುವ ಲಿಂಗಾಧಾರಿತ ಅಸಮಾನತೆಯನ್ನು ಪ್ರತಿಭಟಿಸಿದ ಇನ್ನೋರ್ವ ಸಶಕ್ತ ಲೇಖಕಿ ಕೆ. ಸರಸ್ವತಿಯಮ್ಮ. ಸ್ವತಂತ್ರ ವ್ಯಕ್ತಿತ್ವವನ್ನು ಸ್ಥಾಪಿಸಲು ಹೆಣ್ಣು ನಡೆಸಿದ ಹೋರಾಟದ ಕಥೆ ಆರಂಭವಾಗಿದ್ದು ಇವರ ಕಥೆಗಳಲ್ಲಿ. ಭಾವುಕ ಉದ್ವೇಗಕ್ಕಿಂತ ಹೆಚ್ಚು ಬೌದ್ಧಿಕವಾದ, ಸ್ತ್ರೀಪರವಾದ ಸೈದ್ಧಾಂತಿಕ ನಿಲುವುಗಳು ಇವರದ್ದು. ತಮಗಾಗುತ್ತಿರುವ ಅನ್ಯಾಯದ ಬಗ್ಗೆ ಕಿಂಚಿತ್ತೂ ಚಿಂತಿಸದೆ, ತಮ್ಮ ಪರಿಸ್ಥಿತಿಯಲ್ಲಿ ಬದಲಾವಣೆ ಬೇಕೆಂದು ಬಯಸದೇ ಇರುವ ಸ್ತ್ರೀಯರ ಗುಲಾಮೀ ಮನೋಭಾವವನ್ನು ಸರಸ್ವತಿಯಮ್ಮ ತಮ್ಮ ಕತೆಗಳಲ್ಲಿ ನೇರವಾಗಿ ಖಂಡಿಸುತ್ತಾರೆ. ಅಂತಹ ಸ್ತ್ರೀಯರನ್ನು ಪ್ರತಿವಾದಿಯ ಸ್ಥಾನದಲ್ಲಿ ನಿಲ್ಲಿಸಿ ವಿಚಾರಣೆ ನಡೆಸುತ್ತಾರೆ. **ರಮಣಿ, ಮಧುರ ಫಲಾಹಾರಂ**

ಮೊದಲಾದ ಕಥೆಗಳಲ್ಲಿ ಆಕೆಯ ಈ ವಿಚಾರಣಾ ಶೈಲಿಯನ್ನು ನೋಡಬಹುದು. ಪಾಶ್ಚಾತ್ಯರಿಂದ ಬಂದ ಉಗ್ರ ಸ್ತ್ರೀವಾದದ ಬೇರುಗಳನ್ನು ನಾವು ಇವರ ಕತೆಗಳಲ್ಲಿ ಕಾಣಬಹುದು. ೧೯೪೦ರ ದಶಕದಷ್ಟು ಹಿಂದೆಯೇ ಈಕೆ ಬರೆದ ಇಂತಹ ಕತೆಗಳು ಈ ಕಾರಣದಿಂದಾಗಿ ವಿಶಿಷ್ಟವೆನ್ನಿಸಿಕೊಂಡಿವೆ. ಪುರುಷರಿಲ್ಲದ ಜಗತ್ತಿನಲ್ಲಿ.... ಮತ್ತು ನಾನೊಬ್ಬ ಗಂಡನಾಗಿದ್ದಿದ್ದರೆ ಎಂಬ ಕತೆಗಳು ಈಕೆ ಕಂಡಂತಹ, ಸ್ತ್ರೀಯರ ಶೋಷಣೆಗೆ ಆಸ್ಪದವೇ ಇಲ್ಲದಂತಹ ಒಂದು ಆದರ್ಶ ಜಗತ್ತನ್ನು ತೋರಿಸುತ್ತವೆ. ಸಾಮಾನ್ಯವಾಗಿ ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳುವ ಸ್ವಭಾವ ಭಾರತೀಯ ಸ್ತ್ರೀಯರದ್ದು. ಸ್ವಾತಂತ್ರ್ಯಕ್ಕಾಗಿ ಹೋರಾಡುವುದರ ಜತೆಜತೆಗೆ ಕುಟುಂಬದೊಳಗಿನ ಸೌಹಾರ್ದಮಯ ವಾತಾವರಣವನ್ನು ಸದಾ ಸಮತೋಲನದಲ್ಲಿಟ್ಟುಕೊಳ್ಳುವ ಆತಂಕ ಅವರಲ್ಲಿರುತ್ತದೆ. ವಿವಾಹ ಮತ್ತು ದಾಂಪತ್ಯಗಳಿಂದ ದೂರ ಉಳಿದಾಗ ಪ್ರಾಯಶಃ ಇದರ ಅಗತ್ಯ ಇರಲಾರದು. ಸರಸ್ವತಿಯಮ್ಮ ಅವಿವಾಹಿತೆಯಾಗಿ ಉಳಿದುದರಿಂದ ಆ ಕಾಲದಲ್ಲಿಯೇ ಪುರುಷರನ್ನು ಅಷ್ಟರಮಟ್ಟಿಗೆ ಧಿಕ್ಕರಿಸುವ ಛಾತಿ ಅವರಲ್ಲಿ ಬೆಳೆದಿರಬಹುದು.

ಉದ್ಯೋಗಸ್ಥ ಸ್ತ್ರೀಯರ ಬವಣೆಗಳನ್ನು ಮೊದಲ ಬಾರಿಗೆ ಚಿತ್ರಿಸಿದ್ದು ರಾಜಲಕ್ಷ್ಮಿಯವರ ಕತೆಗಳು. ಮನೆಯಲ್ಲಿ ಹಿರಿಯ ಹೆಣ್ಣುಮಗಳಾಗಿ ಹುಟ್ಟಿದವರು ಹಾಲು ಕರೆಯುವ ಹಸುಗಳಾಗಿ ತಮ್ಮ ಕನಸುಗಳನ್ನು ಒಡಲಾಳದಲ್ಲಿ ಅಡಗಿಸಿಕೊಂಡು ಕೊರಗುವುದನ್ನು ರಾಜಲಕ್ಷ್ಮಿಯವರು ಮನಮುಟ್ಟುವಂತೆ ಚಿತ್ರಿಸುತ್ತಾರೆ. ಸಮಾಜದ ರೀತಿ ನೀತಿಗಳನ್ನು ಹಸಿಹಸಿಯಾಗಿ ವರ್ಣಿಸುತ್ತ ಕಟುಟೀಕೆಯ ವ್ಯಂಗ್ಯಬಾಣಗಳನ್ನೆಸೆಯುತ್ತಾರೆ. ಈ ಪುರುಷಪ್ರಧಾನ ಸಮಾಜದ ಕ್ರೂರ ನೀತಿಗಳು ಹೇಗೆ ಹೆಣ್ಣಿನ ಅಸ್ತಿತ್ವವನ್ನೇ ಇಲ್ಲವಾಗಿಸುತ್ತವೆ ಎಂಬುದನ್ನು ದೃಷ್ಟಾಂತ ಸಮೇತವಾಗಿ ತಮ್ಮ ಕತೆಗಳಲ್ಲಿ ನಿರೂಪಿಸುತ್ತಾರೆ.

ಇಂಗ್ಲಿಷ್ ಮತ್ತು ಮಲಯಾಳಗಳೆರಡರಲ್ಲೂ ಬರೆದು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟವರೆಂದರೆ ಕಮಲಾದಾಸ್ ಅಥವಾ ಮಾಧವಿ ಕುಟ್ಟಿ. ಪ್ರತಿಭೆ, ಚೆಲುವು, ಶ್ರೀಮಂತಿಕೆ, ಸ್ಥಾನಮಾನಗಳೆಲ್ಲವನ್ನೂ ಹೊಂದಿದ ಅದ್ಭುತ ವ್ಯಕ್ತಿತ್ವ ಈಕೆಯದು. ಗಣಿತ ಪರೀಕ್ಷೆಯಲ್ಲಿ ಪಾಸಾಗಲಾರದೆ ಹೈಸ್ಕೂಲು ವಿದ್ಯಾಭ್ಯಾಸವನ್ನೂ ಮುಗಿಸದೆ ಬಿಟ್ಟ ಮಾಧವಿಕುಟ್ಟಿ ಆ ನಂತರ ಇಂಗ್ಲಿಷ್ ಮತ್ತು ಮಲಯಾಳ ಸಾಹಿತ್ಯಗಳಿಗೆ ತಮ್ಮ ಅದ್ಭುತ ಕೊಡುಗೆಗಳನ್ನು ನೀಡಿ ಪ್ರಸಿದ್ಧರಾದರು. ಪ್ರೀತಿಯೆನ್ನುವುದು ಸಂಪೂರ್ಣವಾಗಿ ವ್ಯಕ್ತಿಯ ಸ್ವಂತ ನಿರ್ಧಾರದ ಮೇಲೆ ಅವಲಂಬಿತವಾಗಿದೆಯೆಂದು ನಂಬುವ ಇವರು ಸಾಮಾಜಿಕ ನೀತಿ ನಿಯಮಗಳ ಕಟ್ಟುಪಾಡಿಗೊಳಗಾಗಿ ಅದನ್ನು ಇತರರೊಂದಿಗೆ ಹಂಚಿಕೊಳ್ಳಲಾಗದೆ ಅಸಹಾಯಕರಾಗುವ ಸ್ತ್ರೀಪಾತ್ರಗಳನ್ನು ತಮ್ಮ ಕತೆಗಳಲ್ಲಿ ಸೃಷ್ಟಿಸುತ್ತಾರೆ.

ಉದಾಹರಣೆಗೆ ಇವರ ಒಂದು ಬಹಳ ಮುಖ್ಯವಾದ ಕತೆ ನಷ್ಟಪ್ಪೆಟ್ಟ ನೀಲಾಂಬರಿ (ಕಳೆದುಕೊಂಡ ನೀಲಾಂಬರಿ) – ಇದರಲ್ಲಿ ಕಥಾನಾಯಕಿಯಾದ ಡಾಕ್ಟರ್ ಸುಭದ್ರಾದೇವಿಯ ಅತೃಪ್ತವಾದ ವೈವಾಹಿಕ ಜೀವನದ ಚಿತ್ರಣವಿದೆ. ವಿವಾಹಪೂರ್ವದಲ್ಲಿ ಆಕೆ ಹದಿನೇಳನೆಯ

ವಯಸ್ಸಿನವಳಿದ್ದಾಗ ಆಕೆಯ ಹೃದಯದಲ್ಲಿ ಪ್ರೇಮವನ್ನರಳಿಸಿದ್ದ ವ್ಯಕ್ತಿಯನ್ನು ಮದುವೆಯಾಗಲು ಸಾಧ್ಯವಾಗದೆ ಆಕೆ ಬೇರೆ ಯಾರೋ ಶ್ರೀಮಂತನನ್ನು ಮದುವೆಯಾಗುತ್ತಾಳೆ. ಇಷ್ಟವಿಲ್ಲದ ಪತಿಯೊಂದಿಗೆ ಸುಖದಾಂಪತ್ಯದ ನಾಟಕದಲ್ಲಿ ಯಶಸ್ವಿಯಾಗುವ ಹೆಣ್ಣು ಸುಭದ್ರಾ. ಮೂವತ್ತ ಮೂರು ವರ್ಷಗಳಷ್ಟು ದೀರ್ಘಕಾಲದ ದಾಂಪತ್ಯ ಜೀವನದುದ್ದಕ್ಕೂ ಎಂದಾದರೊಮ್ಮೆ ತನ್ನ ಪ್ರೇಮಿಯನ್ನು ಕೂಡುವ ಆಸೆಯನ್ನು ಎದೆಯೊಳಗೆ ಬಚ್ಚಿಟ್ಟುಕೊಂಡು ಆಕೆ ಬದುಕುತ್ತಾಳೆ. ವಿಧವೆಯಾದ ತಕ್ಷಣ ತನ್ನ ಪ್ರೇಮಿಯನ್ನರಸಿ ಹೋಗುವ ಆಕೆಗೆ ಆತನನ್ನು ಕಾಣುವುದು ಸಾಧ್ಯವಾದರೂ ಕನಸುಗಳು ಕೈಗೂಡುವುದಿಲ್ಲ. ಇನ್ನೊಂದು ನೀಳ್ಗತೆ ರೋಹಿಣಿಯಲ್ಲೂ ಅಸಂತೃಪ್ತ ಹೆಣ್ಣಿನ ಮನದಾಳದ ತುಡಿತವಿದೆ. ಭೌತಿಕ ಸುಖಭೋಗಗಳಿಗೆ ಅಗತ್ಯವಾದ ಎಲ್ಲವೂ ಆಕೆಗಿದ್ದರೂ, ಬಾಹ್ಯನೋಟಕ್ಕೆ ಅನುರೂಪನೆನ್ನಿಸುವ ಗಂಡಸಿದ್ದರೂ ಆತ ಆಕೆಯಲ್ಲಿ ಯಾವುದೇ ರೀತಿಯ ಪ್ರೇಮ-ಕಾಮದ ಭಾವನೆಗಳನ್ನು ಅರಳಿಸುವುದಿಲ್ಲ. ಹೊರನೋಟಕ್ಕೆ ಅದು ಸುಖೀಸಂಸಾರ. ಮಕ್ಕಳು ಮಾತ್ರ ಆಗಿರುವುದಿಲ್ಲ. ತನ್ನ ವಂಶವು ಮುಂದುವರಿಯಬೇಕೆಂಬ ಆಗ್ರಹದಿಂದ ಪತಿಯು ತನ್ನ ಗೆಳೆಯನಿಗೆ ಹಣಕೊಟ್ಟು ಹೆಂಡತಿಯನ್ನು ಕೂಡುವಂತೆ ಹೇಳುತ್ತಾನೆ. ಆತನ ಪುರುಷತ್ವದಿಂದ ಆಗಲೇ ಆಕರ್ಷಿತಳಾಗಿದ್ದ ಆಕೆ ಪ್ರತಿಭಟಿಸುತ್ತಲೇ ಆತನನ್ನು ಕೂಡುತ್ತಾಳೆ. ತಾನು ಹಲವು ವರ್ಷಗಳಿಂದ ಹಂಬಲಿಸುತ್ತ ಬಂದ ವ್ಯಕ್ತಿ ಈತನೇ ಎಂಬುದು ಆಕೆಗೆ ಅರಿವಾಗುತ್ತದೆ. ಹೀಗೆ ಹೆಣ್ಣಿನ ದ್ವಂದ್ವ ವ್ಯಕ್ತಿತ್ವವನ್ನೂ, ವಿವಾಹವೆಂಬ ವ್ಯವಸ್ಥೆಯ ಟೊಳ್ಳುತನವನ್ನೂ ಮಾಧವಿ ಕುಟ್ಟಿಯವರು ಬಯಲಿಗೆಳೆಯುತ್ತಾರೆ. 'ಪ್ರೀತಿ' ಎನ್ನುವ ಎರಡಕ್ಷರಗಳು ಈಕೆಗೆ ಅದ್ಭುತವಾಗಿ ತೋರುತ್ತವೆ. ಭಾವಪರವಶಳನ್ನಾಗಿ ಮಾಡುತ್ತವೆ. ಸದಾ ತಾನು ಒಂಟಿಯೆಂಬ ಭಾವನೆ ಮತ್ತು ಪ್ರೀತಿಯ ನಲ್ನುಡಿಗಳಿಗಾಗಿ ಪರಿತಪಿಸುವ ಮನೋಭಾವ ಹಾಗೂ ಅವುಗಳ ನಿರಂತರ ಹುಡುಕಾಟದಲ್ಲಿ ಇವರ ಕತೆಗಳು ಮೈದುಂಬಿ ನಿಲ್ಲುತ್ತವೆ. ಮಾಧವಿ ಕುಟ್ಟಿಯವರ ಆತ್ಮಕಥೆಯೆಂದು ಹೇಳಲಾಗುವ ಎಂಡೆ ಕಥ (My story)ಯಲ್ಲಿ ಅವರು ಬರೆದ ದಿಟ್ಟ ವಿಚಾರಗಳಿಂದಾಗಿ ಅವರು ಬಹಳ ವಿವಾದಾಸ್ಪದ ವ್ಯಕ್ತಿಯಾದರು. ಹೆಣ್ಣಿನ ಮನದಾಳದಲ್ಲಿ ಹುದುಗಿದ ಅತ್ಯಂತ ಸಹಜವಾದ ಈ ಪ್ರೀತಿಯ ಬಯಕೆಯನ್ನು ಮಿತಿಮೀರಿದ ಕಾಮಾವೇಶವೆಂದು ತಪ್ಪಾಗಿ ತಿಳಿದು ಮಲಯಾಳದ ಓದುಗರು ಅವರನ್ನು ದೂರವಿಟ್ಟರು.

ಮಾಧವಿ ಕುಟ್ಟಿಯವರ ಬರಹಗಳನ್ನು ಓದಿದಾಗ ಆಕೆ ದಂತಗೋಪುರದೊಳಗೆ ಬಾಹ್ಯಜಗತ್ತಿನ ಪರಿವೆಯಿಲ್ಲದೆ ಇರುವವರೇನೋ ಎಂಬ ಸಂದೇಹ ಬರುವಂತಾದರೂ ವಾಸ್ತವದಲ್ಲಿ ಆಕೆಯ ವ್ಯಕ್ತಿತ್ವ ಬಹಳ ಭಿನ್ನವಾದುದು. ತನ್ನ ಸುತ್ತುಮುತ್ತಲ ಆಗುಹೋಗುಗಳನ್ನು ಎಚ್ಚರದಿಂದ ಗಮನಿಸುವ ಆಕೆ ಸಾಮಾಜಿಕ-ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರೇ ಆಗಿದ್ದಾರೆ. ಪತಿಯ ನಿಧನಾನಂತರ ಹಲವು ರೀತಿಯಲ್ಲಿ ತನ್ನ ನಿಲುವುಗಳನ್ನು ಬದಲಾಯಿಸಿಕೊಂಡು ಮುಸಲ್ಮಾನಳಾಗಿ ಮತಾಂತರ ಹೊಂದಿ ಕಮಲಾ ಸುರೈಯಾ ಆಗಿ ಇಡಿಯ ದೇಶವನ್ನೇ ಬೆಚ್ಚಿ ಬೀಳಿಸಿದ ದಿಟ್ಟ ಸ್ತ್ರೀ ಆಕೆ. ಸ್ತ್ರೀವಾದದ ಯಾವುದೇ ಘೋಷಣೆ ಕೂಗದೆ ಅತ್ಯಂತ ಸಹಜವಾಗಿ ಸ್ತ್ರೀಯರ ಅಂತರಂಗದ ಪುಟಪುಟಗಳನ್ನು ತೆರೆದಿಟ್ಟ ಕಥೆಗಳು ಆಕೆಯವು. ಸ್ತ್ರೀವಾದದ ಸಿದ್ಧಾಂತಗಳಿಗೆ ಮಾತ್ರ ಆಕೆ ಎಂದೂ ಬದ್ಧಳಾಗಿರಲಿಲ್ಲ.

"ತೀವ್ರವಾದ ಸ್ತ್ರೀಪರ ಕಾಳಜಿಯನ್ನು ಹೊಂದಿದ ಕಥೆಗಳನ್ನು ಬರೆದರೂ ಸ್ತ್ರೀವಾದವನ್ನು ಟೀಕಿಸಿ ಹೇಳಿಕೆಗಳನ್ನೇಕೆ ಕೊಡುತ್ತೀರಿ?" ಎಂದು ಸಂದರ್ಶಕರೊಬ್ಬರು ಕೇಳಿದ ಪ್ರಶ್ನೆಗೆ ಆಕೆ ನೀಡಿದ ಉತ್ತರವಿದು: "ಪಾಶ್ಚಾತ್ಯರು ಕಲ್ಪಿಸಿಕೊಂಡ ಸ್ತ್ರೀವಾದವು ನಾನು ನಂಬಿಕೊಂಡಿರುವ ಸ್ತ್ರೀವಾದಕ್ಕಿಂತ ಭಿನ್ನವಾದದ್ದು. ಪಾಶ್ಚಾತ್ಯರ ಸ್ತ್ರೀವಾದವು ಪುರುಷವಿರೋಧಿ ನಿಲುವಿನದ್ದು. ಆದರೆ ಪುರುಷದ್ವೇಷಿಯಾಗುವುದು ನನ್ನಿಂದ ಸಾಧ್ಯವಿಲ್ಲ. ನಾನು ನನ್ನ ಪತಿಯನ್ನು ತುಂಬ ಪ್ರೀತಿಸಿದ್ದೆ. ನನ್ನ ಮಗಂದಿರನ್ನೂ ಸಹ ಪ್ರೀತಿಸುತ್ತೇನೆ. ಪುರುಷ ಸಾಹಚರ್ಯದಲ್ಲಿ ನಾನು ತುಂಬ ಸಂತೋಷ ಪಟ್ಟಿದ್ದೇನೆ. ಆದ್ದರಿಂದ ಅವರನ್ನು ದ್ವೇಷಿಸುವುದು ನನ್ನಿಂದ ಸಾಧ್ಯವಿಲ್ಲ. ನಾನು ವಿದೇಶಗಳಲ್ಲಿ ಇದುವರೆಗೆ ಕಂಡ ಸ್ತ್ರೀವಾದಿಗಳೆಲ್ಲರೂ ಸಲಿಂಗ ಕಾಮಿಗಳು. ನಾನು ಸಲಿಂಗಕಾಮಿಯಲ್ಲವೆಂದು ನನ್ನ ಭಾವನೆ. ನಾನು ಸಲಿಂಗಕಾಮಿಯೇ ಅಥವಾ ಸಲಿಂಗಕಾಮಕ್ಕೆ ಸ್ಪಂದಿಸಬಲ್ಲೆನೇ ಎಂದು ಪರೀಕ್ಷಿಸಲು ನಾನು ಪ್ರಯತ್ನಿಸಿದೆ. ನಿಜ ಹೇಳಬೇಕೆಂದರೆ ನಾನು ಅದರಲ್ಲಿ ಸೋತೆ. ನೈತಿಕತೆಯ ಪಂಚಾಂಗವಿಲ್ಲದ ಯಾವುದೇ ನಂಬಿಕೆಯನ್ನು ನಾವು ಬೆಳೆಸಿಕೊಳ್ಳಬಾರದು ಮತ್ತು ನಂಬಿಕೆಯಿಲ್ಲದ ಸಿದ್ಧಾಂತಗಳಿಗೆ ಅಂಟಿಕೊಳ್ಳಬಾರದು ಎಂಬುದು ನನ್ನ ದೃಢ ನಿಲುವು". ಹೀಗೆ ಇತರ ಲೇಖಕಿಯರಿಗಿಂತ ಭಿನ್ನವಾದ ಹಾದಿಯಲ್ಲಿ ಸಾಗಿದ ಮಾಧವಿ ಕುಟ್ಟಿಯವರು ಮಲಯಾಳ ಸಾಹಿತ್ಯದಲ್ಲಿ ತನ್ನ ಅಪೂರ್ವ ಪ್ರತಿಭೆಯ ಮೂಲಕ ಪುರುಷರನ್ನು ಹಿಂದಿಕ್ಕಿ ತನ್ನ ಸ್ಪಷ್ಟವಾದ ಹೆಜ್ಜೆಗುರುತುಗಳನ್ನು ಮೂಡಿಸಿದ ದಿಟ್ಟ ಲೇಖಕಿ.

ಮಲಯಾಳದ ಸಣ್ಣ ಕಥೆಗಳಲ್ಲಿ ಸ್ತ್ರೀಪ್ರಜ್ಞೆಯ ಅರಿವಿನ ಘಟ್ಟವನ್ನು ದಾಟಿ ಪ್ರತಿಭಟನೆಯ ಹಂತವನ್ನು ತಲುಪುವುದು ಪಿ. ವತ್ಸಲಾರ ಕಥೆಗಳಲ್ಲಿ. ಸಮಕಾಲೀನ ಸಮಾಜದ ಬದುಕನ್ನು ವಿಮರ್ಶಿಸುವ **ಪರಶುಪುರದ ಸಂತೆಯಂತಹ** ಕಥೆಗಳು ಮಲಯಾಳದಲ್ಲಿ ಹೆಚ್ಚಿಲ್ಲ. ಅಸಂತೃಪ್ತವೂ ಅಸ್ಪಷ್ಟವೂ ಆದ ಬದುಕಿನ ಅವರ್ಣನೀಯ ಯಾತನೆಗಳನ್ನು ವತ್ಸಲಾರ ಎಲ್ಲ ಕಥಾಪಾತ್ರಗಳೂ ಅತ್ಯಂತ ವಿಶಿಷ್ಟರೀತಿಯಲ್ಲಿ ಬಿಂಬಿಸುತ್ತವೆ. **ಅರುಂಧತಿ ಅಳುವುದಿಲ್ಲ, ಒಂದೇ ಒಂದು ದಾರಿ** ಇತ್ಯಾದಿ ಕಥೆಗಳನ್ನು ಇಲ್ಲಿ ಉದಾಹರಿಸಬಹುದು. ಉದ್ಯೋಗ, ಗೃಹಕೃತ್ಯಗಳೆರಡನ್ನೂ ನಿಭಾಯಿಸುವ ದ್ವಂದ್ವ ವ್ಯಕ್ತಿತ್ವವನ್ನು ಬಿಂಬಿಸುವ ಗಾಡಿ ಎತ್ತುಗಳ ರೂಪಕವು ಮಲಯಾಳ ಸಾಹಿತ್ಯವನ್ನು ಪ್ರವೇಶಿಸಿದ್ದು ವತ್ಸಲಾರ ಕಥೆಗಳ ಮೂಲಕವೇ ಆಗಿದೆ. ಇಂದು ಸ್ತ್ರೀವಾದವು ಯಥಾಸ್ಥಿತಿವಾದದ ಜತೆಗೆ ಸೇರಿ ಹೊಸತೊಂದು ಸಿದ್ಧಾಂತವು ವಿಶ್ವಸಾಹಿತ್ಯದಲ್ಲಿ ರೂಪುಗೊಂಡಿದೆ. ಪ್ರಕೃತಿಯು ಸ್ವಾತಂತ್ರ್ಯದ ಸಂಕೇತವಾಗುವುದನ್ನೂ, ಪ್ರಕೃತಿ ಮತ್ತು ಸ್ತ್ರೀಯ ಸಮಸ್ಯೆಗಳು ಒಂದೇ ನೆಲೆಯಲ್ಲಿ ನಿಲ್ಲುವುದನ್ನು ವತ್ಸಲಾರ ಕೆಲವು ಕಥೆಗಳು ಪ್ರಸ್ತುತಪಡಿಸುತ್ತವೆ.

ಸ್ತ್ರೀವಾದವನ್ನು ಒಂದು ವಿರುದ್ಧ್ವನಿಯ ಘೋಷಣೆಯಾಗಿ ತಮ್ಮ ಕಥೆಗಳಲ್ಲಿ ಅಳವಡಿಸಿಕೊಂಡವರು ಕೇರಳದ ಸುಪ್ರಸಿದ್ಧ ಕಥೆಗಾರ್ತಿ ಸಾರಾ ಜೋಸೆಫ್, ೨೦೦೩ರಲ್ಲಿ ತಮ್ಮ ಕಾದಂಬರಿ **ಆಲಾಹಯುಡೆ ಪೆಣ್‌ಮಕ್ಕಳ್**‌ಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ್ದಾರೆ.

ಸಾರಾ ಜೋಸೆಫ್‌ರವರು. ಮನುಷ್ಯನ ಸಾಮಾಜಿಕ ಬದುಕಿನಲ್ಲಿ ಎಲ್ಲೆಡೆಯೂ ತಮ್ಮ ಪ್ರಭಾವ ಬೀರಿ ಅಧಿಕಾರ ಸ್ಥಾಪಿಸಿಕೊಂಡು ಸ್ತ್ರೀಯರ ಅಸ್ತಿತ್ವವನ್ನೇ ಇಲ್ಲವಾಗಿಸಿದ ಪುರುಷರ ವಿರುದ್ಧ ಬಂಡೇಳುವ ಇವರ ಕಥೆಗಳಲ್ಲಿ ಕ್ರಾಂತಿಕಾರಿ ಚಿಂತನೆಯಿದೆ. ಸ್ತ್ರೀಯರು ತಮ್ಮ ಅಳಲನ್ನು ತೋಡಿಕೊಳ್ಳಬಹುದಾದ ಒಂದೇ ಒಂದು ಮಾಧ್ಯಮವಾದ ಭಾಷೆಯಲ್ಲೂ ತುಂಬಿಕೊಂಡಿರುವ ಪುರುಷ ಪ್ರಾಧಾನ್ಯದ ಬಗ್ಗೆ ಅವರಿಗೆ ತಿರಸ್ಕಾರವಿದೆ. ಬರವಣಿಗೆಯೆನ್ನುವುದು ಹೆಣ್ಣಿನ ಪಾಲಿಗೆ ಒಂದು ಮುಳ್ಳಿನ ಕಿರೀಟವೆಂದೂ ಅದನ್ನು ಮುಂದುವರಿಸಿಕೊಂಡು ಹೋಗಬೇಕಾದರೆ ಆಕೆ ಅದೆಷ್ಟು ತ್ಯಾಗ ಮಾಡಬೇಕಾಗಿ ಬರುತ್ತದೆ ಎಂಬುದನ್ನು ಅವರು ತಮ್ಮ "ಪ್ರತಿಯೊಬ್ಬ ಲೇಖಿಕಿಯ ಒಳಗೆ" ಕೂಡಿ ಇಟ್ಟಿದ್ದ ಆಸೆ-ನಿರಾಸೆಗಳನ್ನು ಚಿತ್ರಿಸುವುದರ ಮೂಲಕ ಚಿಂತನೆಗೊಳಪಡಿಸುತ್ತಾರೆ. ಉಪಭೋಗ ಸಂಸ್ಕೃತಿಯನ್ನು ಕೊಟ್ಟಿರುವ ಸಮಕಾಲೀನ ಸೌಂದರ್ಯ ಸಾಧನಗಳನ್ನು ಪ್ರಬಲವಾಗಿ ವಿರೋಧಿಸುವ **ಬಿಳಿಯ ನಿರ್ಮಿತಿಗಳು ಮತ್ತು ಕಪ್ಪು ಕನ್ನಡಕಗಳು** ಪುರಾಣಗಳ ಆದರ್ಶ ಕಥಾಪಾತ್ರಗಳನ್ನು ಸ್ತ್ರೀ ದೃಷ್ಟಿಕೋನದಿಂದ ಸಮಗ್ರವಾಗಿ ಅವಲೋಕಿಸುವ **ಅಶೋಕ, ತಾಯ್‌ಕುಲ, ಕಪ್ಪುರಂಧ್ರಗಳು** ಇತ್ಯಾದಿ ಕಥೆಗಳು ಬಹಳ ಸತ್ವಯುತ ರಚನೆಗಳು. 'ನಿನ್ನನ್ನು ಪುನಃ ಸ್ವೀಕರಿಸುವ ಉದ್ದೇಶದಿಂದಲ್ಲ ನಾನು ಯುದ್ಧದಲ್ಲಿ ಜಯಿಸಿದ್ದು, ನನ್ನ ವಂಶದ ಮೇಲಾಗಿರುವ ಅಪಮಾನದ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ' ಎಂಬ ಮಾತುಗಳನ್ನು ರಾಮನಿಂದ ಕೇಳುವ ಸೀತೆ, ಸೋತವರು ಮತ್ತು ತನ್ನ ನಡುವೆ ಯಾವುದೇ ವ್ಯತ್ಯಾಸವಿಲ್ಲವೆಂದು ತಿಳಿಯುವ **ಅಶೋಕ**, ತನ್ನ ಮೊಲೆಹಾಲಿನ ಬೇರುಗಳನ್ನು ಕತ್ತರಿಸಿದವರ ಮೇಲೆ ಸೇಡು ತೀರಿಸಿಕೊಳ್ಳಬಯಸುವ ಶೂರ್ಪನಖಿಯನ್ನು ಚಿತ್ರಿಸುವ **ತಾಯ್‌ಕುಲ** ಇತ್ಯಾದಿ ಕಥೆಗಳು ಮಲಯಾಳ ಸಾಹಿತ್ಯಕ್ಕೆ ಸಿಕ್ಕಿದ್ದು ಸಾರಾ ಜೋಸೆಫ್ ಮೂಲಕ. ಪುರುಷ ಪ್ರಾಧಾನ್ಯಪರವಾದ ಮೌಲ್ಯವ್ಯವಸ್ಥೆಯು ಸ್ತ್ರೀಯನ್ನು ಪ್ರಕೃತಿಯನ್ನು ಶೋಷಿಸಿ ಆತ್ಮವನ್ನು ಅಪಹರಿಸಿದ್ದರ ಪರಿಣಾಮವಾಗಿ ಉದ್ಭವಿಸಿದ ಪ್ರತಿಕೂಲ ಪರಿಸ್ಥಿತಿಯ ಮೂಲಕ ಸ್ತ್ರೀವಾದದ ಅಡಿಗಲ್ಲಾದ ಶೋಷಣೆಯನ್ನು ಬೇರು ಸಹಿತ ಕಿತ್ತೊಗೆಯುವ ಅದಮ್ಯ ಹುಮ್ಮಸ್ಸು ಸಾರಾರವರ ಕಥೆಗಳಲ್ಲಿ ಅಡಗಿರುತ್ತದೆ.

ಚೌಕಗಳನ್ನು ಬರೆದು ಅದರೊಳಗೆ ಕೂಡಿಡುವಂಥದ್ದಲ್ಲ ಪ್ರೇಮ ಎಂಬ ಪ್ರಜ್ಞೆಯನ್ನು ಪ್ರಕಟಿಸುತ್ತವೆ. ಮಾನಸಿಯವರ ಕಥೆಗಳು ಪುರುಷ ಮತ್ತು ಸಮಾಜ ಹಾಕಿದ ಗೆರೆಗಳೊಳಗೆ ಹೆಣ್ಣು ತನ್ನ ಜೀವನ ಪೂರ್ತಿ ಕಳೆಯಬೇಕಾಗಿಲ್ಲವೆಂದು ಇವರ ಕಥಾಪಾತ್ರಗಳು ಹೇಳುತ್ತವೆ. 'ಪ್ರೇಮವೆನ್ನುವುದು ಒಂದು ಸುಗಂಧಭರಿತ ಪುಷ್ಪದ ಹಾಗೆ ಹುಚ್ಚುಹಿಡಿಸುವಂಥದ್ದು' ಎಂದು ಧೈರ್ಯವಾಗಿ ಹೇಳುವ ಒಬ್ಬ ಲೇಖಿಕಿಯನ್ನು ಸಮಾಜವೆಂದೂ ಮನ್ನಿಸುವುದಿಲ್ಲ. ಅಂತೆಯೇ ಮಾನಸಿಯವರ ಕಥೆಗಳನ್ನು ಸಮಾಜ ದೂರವಿಟ್ಟಿತು. ಅಪರೂಪವೆನ್ನಿಸುವಂತಹ ಸ್ವಂತಿಕೆಯಿರುವ ಕಥೆಗಳು ಈಕೆಯವು. 'ವಿನೋದನ ತಂದೆ ಯಾರೆಂದು ತಿಳಿದು ಅದರಿಂದ ಸಿಗುವ ಒಂದು ಸಂಬಂಧದ ಸುರಕ್ಷಿತತೆಯ ಅಗತ್ಯವು ತನಗಿಲ್ಲವೆಂದು ನಂಬುವ **ಸೇತುವೆಯಿಲ್ಲದ ನದಿಯ** ಸುಮಾ ಲೋಕನೀತಿಗೆದುರಾಗಿ ನಿಂತವಳು; ಅದರಿಂದಾಗಿ ಒಂಟಿಯಾಗಿ ಬಿಟ್ಟವಳು ಕೂಡಾ: "ಮುಖದಲ್ಲಿ ಚಿಮ್ಮುವ ನಗುವಿನ ಹಿಂದೆ ಬದುಕಿನ ದುಃಖಗಳನ್ನು ಅಡಗಿಸಿಕೊಳ್ಳುವವರು

ಉಪದೇಶದ ಪಂಜರದೊಳಗೆ ವಿಷದ ಸೂಜಿಗಳಿಂದ ಚುಚ್ಚಿಸಿಕೊಂಡವರು' - ಲತಾಳ ಗೆಳೆಯ ಎಂಬ ಕಥೆಯಲ್ಲಿ ಚಂದ್ರಮತಿ ಎಂಬವಳು ಹೇಳುವ ಮಾತಿದು. ಸಾಮಾನ್ಯವಾಗಿ ಲೇಖಕಿಯಾದ ಯಾರೇ ಆದರೂ ಸಮಾಜದ ಬಗ್ಗೆ ವಹಿಸುವ ಎಚ್ಚರವನ್ನು ಈ ಮಾತು ಸೂಚಿಸುತ್ತದೆ.

ಸಮಾಜ ಮತ್ತು ಹೆಣ್ಣಿನ ಮನಸ್ಸಿನ ನಡುವಣ ಸಂಘರ್ಷವೇ ಚಂದ್ರಮತಿಯವರ ಕಥೆಗಳ ಅಂತರ್ಧಾರೆ. ಈಕೆಯ ಕಥೆಗಳು ಹೊರನೋಟಕ್ಕೆ ಹಾಸ್ಯಪ್ರಧಾನವಾಗಿದ್ದು ನಗಿಸುತ್ತವಾದರೂ ಒಳಗಿನ ಸಂಘರ್ಷಗಳು ಮಾತ್ರ ಸೂಕ್ಷ್ಮ ಓದುಗನ ಗಮನಕ್ಕೆ ಬೀಳದಿರಲು ಸಾಧ್ಯವಿಲ್ಲ. ಸಾಮಾಜಿಕ ನೀತಿ ನಿಯಮಗಳೊಂದಿಗೆ ರಾಜಿ ಮಾಡಿಕೊಳ್ಳಲಾಗದೆ ಒಂದು ತುಣುಕು ಶುಭ್ರ ಆಕಾಶವನ್ನು ನೋಡುವ ಆಸೆಯನ್ನು ಒಳಗೆ ಬೆಳೆಸಿಕೊಂಡು ಬಂದರೂ ರೆಕ್ಕೆಗಳನ್ನು ಕಳೆದುಕೊಂಡು ಅಸಹಾಯಕರಾದವರ ಕಥೆಗಳು ಸಂಘರ್ಷಭರಿತವಾಗದಿರಲು ಹೇಗೆ ತಾನೇ ಸಾಧ್ಯ?

ಲಘುಹಾಸ್ಯದ ಶೈಲಿಯಲ್ಲಿ ಅತ್ಯಂತ ಗಂಭೀರವಾದ ವಿಚಾರಗಳನ್ನು ತಮ್ಮ ಕಥೆಗಳಲ್ಲಿ ಪ್ರಸ್ತುತಪಡಿಸುವ ಕೇರಳದ ಇನ್ನೊರ್ವ ಪ್ರಮುಖ ಲೇಖಕಿ ಗೀತಾಹಿರಣ್ಯನ್ ಎರಡು ವರ್ಷಗಳ ಹಿಂದೆ ತಮ್ಮ ನಡುವಯಸ್ಸಿನಲ್ಲೇ ತೀರಿಕೊಂಡರು. **ಬದುಕು - ಒಂದು ಪ್ರವಚನದ ವಿಷಯದಾಚೆಗೆ** ಎಂಬ ಕಥೆಯಲ್ಲಿ ಹೇಳುವ 'ಅವಳನ್ನು ಅವಳಿಗೆ ಮಾತ್ರ ಅರ್ಥ ಮಾಡಿಕೊಳ್ಳಲು ಸಾಧ್ಯ' ಎಂಬ ಮಾತುಗಳು ಎಷ್ಟೊಂದು ಅರ್ಥಪೂರ್ಣ! ಕೆಟ್ಟ ಹಠ ಮತ್ತು ಪ್ರೇಮ ದುರಂತಗಳ ಒಂದು ಅಸಾಮಾನ್ಯ ಮಿಲನವೇ ತನ್ನ ವ್ಯಕ್ತಿತ್ವವೆಂದು ಸ್ವಯಂ ವಿಶ್ಲೇಷಿಸಿಕೊಳ್ಳುವ ಸ್ತ್ರೀಯ ಪ್ರೀತಿಯ ಆಳವನ್ನು ಜಗತ್ತು ಒಮ್ಮೆಯೂ ಅರ್ಥಮಾಡಿಕೊಳ್ಳುವುದಿಲ್ಲ. ಆಕೆಯ ಪ್ರೀತಿಯೆನ್ನುವುದು ದಾಂಪತ್ಯದಲ್ಲಿ ಒಂದು ಹೊರೆಯಾಗಿ ಪರಿಣಮಿಸುತ್ತದೆ. ಕರಡಿಯ ಆಲಿಂಗನದಂತೆ ಭಯಾನಕವಾಗಿ ಕಾಣುತ್ತದೆ. ತಾಯಿ, ಗೃಹಿಣಿ, ಪತ್ನಿ, ಸೋದರಿ - ಹೀಗೆ ಹಲವು ಸ್ಥಾನಗಳಲ್ಲಿ ನಿಲ್ಲುವ ಸ್ತ್ರೀಯು ಬರವಣಿಗೆ ಎಂಬ ಸ್ವಂತ ಕೆಲಸಕ್ಕೆ ಕೈ ಹಚ್ಚಿದಾಗ ಆಕೆ ಎದುರಿಸಬೇಕಾಗುವ ಸಮಸ್ಯೆಗಳು ಗೀತಾ ಹಿರಣ್ಯನ್‌ರ ಕಥೆಗಳ ಪ್ರಬಲ ವಿಚಾರಧಾರೆಗಳಾಗಿವೆ. ಯಾವ ನೋಟಕ್ಕೂ ಯಾವುದೇ ಹಿಡಿತಕ್ಕೂ ಸಿಗದಂತಹ ವಾಸ್ತವದ ಕಟುಸತ್ಯಗಳನ್ನು ಅವರು ತಮ್ಮ ಕಥೆಗಳಲ್ಲಿ ಸೆರೆಹಿಡಿಯುತ್ತಾರೆ.

ಪರಂಪರೆಯಲ್ಲಿ ಹರಿದು ಬರುವ ಸುಳ್ಳುಗಳ ಪ್ರವಾಹದಿಂದಲೇ ಸ್ತ್ರೀಯರ ಬದುಕು ಸಾಗುತ್ತ ಹೋಗಿದೆಯೆಂಬ ಅರಿವು ಅಷಿತಾ ಎಂಬವರ ಕಥೆಗಳ ಅಂತಃಶಕ್ತಿಯಾಗಿದೆ. ಬದುಕಿನ ಭದ್ರತೆಯೆಂದು ನಾವು ತಿಳಿಯುವ ಆಧುನಿಕ ಜೀವನ ಶೈಲಿಯ ಕೃತಕತೆ ಮತ್ತು ಪೊಳ್ಳು ಆಶ್ವಾಸನೆಗಳನ್ನು ನೀಡುವ ಸುಳ್ಳುಗಳ ಸರಮಾಲೆಯನ್ನು ಅಷಿತಾ ತಮ್ಮ ಕಥೆಗಳಲ್ಲಿ ವಿರೋಧಿಸುತ್ತಾರೆ. ಒತ್ತಡದೊಂದಿಗೆ ಕಾಲೆಳೆಯುತ್ತ ಸಾಗುವ ಸಂಘರ್ಷಮಯ ಜೀವನವು ಈಕೆಯ **ಅಪೂರ್ಣ ವಿರಾಮಗಳು, ವಿಸ್ಮಯ ಚಿಹ್ನೆಗಳು, ಕಲ್ಲು ಹಾಕಿದ ಸುಳ್ಳುಗಳು, ಮಣ್ಣಿನ ಗಟ್ಟಿ, ಮತ್ತು ಕರಿ ಎಲೆ** ಮುಂತಾದ ಕಥೆಗಳಲ್ಲಿ ವೇದ್ಯವಾಗಿವೆ.

ಕೇರಳದಲ್ಲಿ ವೈಚಾರಿಕ ನೆಲೆಯಲ್ಲಿ ಬರೆಯುವ ಲೇಖಕಿಯರ ಪಟ್ಟಿ ಎಳೆದಷ್ಟೂ ಉದ್ದವಾಗುತ್ತದೆ. ಹಳ್ಳಿಯ ಶುದ್ಧ ನಿರ್ಮಲ ಸೌಂದರ್ಯವು ಎದ್ದು ಕಾಣುವ ಕಥೆಗಳನ್ನು ಬರೆದಿರುವ ಸೌಂದರ್ಯ, ಮೃದುತ್ವ ಮತ್ತು ನಿಷ್ಪಕ್ಷಪಾತ ಧೋರಣೆಗಳಿಂದ ತುಂಬಿರುವ ಗ್ರೇಸಿ, ಸ್ತ್ರೀವಾದದ ಯಶಸ್ಸಿನ ಬಗ್ಗೆ ಬಲವಾದ ನಂಬಿಕೆಯನ್ನಿಟ್ಟು ಕಥೆಗಳನ್ನು ಬರೆಯುತ್ತಿರುವ ಸಿ.ಎಸ್. ಚಂದ್ರಿಕಾ, ಭಾವನೆಗಳ ಕಣ್ಣುಕುಕ್ಕುವ ನಕ್ಷತ್ರಗಳ ಹೊಳಪಿನ ಕಥೆಗಳನ್ನು ಬರೆದಿರುವ ಪ್ರಿಯಾ ಎ.ಎಸ್., ಮುಸ್ಲಿಂ ಮಹಿಳೆಯರ ನಡುವಿನಿಂದ ಎದ್ದು ಬಂದು ಅರ್ಥಹೀನ ಸಂಪ್ರದಾಯಗಳನ್ನು ನೇರವಾಗಿ ತಮ್ಮ ಕಥೆಗಳಲ್ಲಿ ಖಂಡಿಸುವ ಬಿ.ಎಂ. ಸುಹರಾ, ಘಟನೆಗಳಿಗೆ ವಿಶಿಷ್ಟ ತಿರುವು ನೀಡುವುದರ ಮೂಲಕ ಪ್ರತ್ಯೇಕವಾಗಿ ನಿಲ್ಲುವ ಎಳೆಯ ಸ್ತ್ರೀಧ್ವನಿ ಸಿತಾರಾ ಎಸ್., ಹೆಣ್ಣಿನ ಸೂಕ್ಷ್ಮ ಸಂವೇದನೆಗಳನ್ನು ಮನಮುಟ್ಟುವಂತೆ ಚಿತ್ರಿಸುವ ಶೋಭಾ ವಾರಿಯರ್, ನಗರ ಮತ್ತು ಆಧುನಿಕ ಜೀವನಶೈಲಿಗಳು ಮನುಷ್ಯ ಸಂಬಂಧಗಳ ಮೇಲೆ ಮಾಡುವ ಆಕ್ರಮಣದ ಬಗ್ಗೆ ಕಾಳಜಿ ತೋರಿಸುವ ಕೆ.ಪಿ. ಸುಧೀರಾ, ಕೆ. ಆರ್. ಮಲ್ಲಿಕಾ, ತಾರಾ, ರೇಖಾ ಮುಂತಾದವರೆಲ್ಲರೂ ಒಂದಿಲ್ಲೊಂದು ಕಾರಣಕ್ಕೆ ಮಲಯಾಳ ಸಾಹಿತ್ಯದಲ್ಲಿ ತಮ್ಮ ಛಾಪನ್ನು ಮೂಡಿಸಿದವರೇ ಆಗಿದ್ದಾರೆ.

ಪುರುಷ ಪ್ರಧಾನ ಮೌಲ್ಯವ್ಯವಸ್ಥೆಯಲ್ಲಿ ತಮ್ಮದೇ ಆದ ಸ್ವಂತಿಕೆಯನ್ನು ಸ್ಥಾಪಿಸಿಕೊಳ್ಳಲು ಈ ಎಲ್ಲ ಕಥೆಗಾರ್ತಿಯರು ಪ್ರಯತ್ನಿಸುತ್ತಾರೆ. ಬಹಳ ಕಷ್ಟಕರವಾದ ಕೆಲಸ ಇದಾದರೂ ಲೇಖಕಿಯರ ಸ್ವಾನುಭವದ ತಾಜಾತನವು ಅವರ ಬರಹಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸುತ್ತದೆ. ಸ್ವಯಂ ವಿಶ್ಲೇಷಣೆಯೇ ಇವುಗಳ ವೈಶಿಷ್ಟ್ಯ. ಸ್ತ್ರೀ ಪುರುಷರ ನಡುವಿನ ಸಂಬಂಧ, ಸಂಘರ್ಷಗಳು, ಹೆಣ್ಣಿನ ಖಾಸಗಿ ಜಗತ್ತು, ಆಸೆ-ಕನಸುಗಳು, ಸಂತೋಷಗಳೆಲ್ಲವನ್ನೂ ನಾವು ಇಲ್ಲಿ ಕಾಣಬಹುದು. ಇವರೆಲ್ಲರೂ ಸಮಾನ ದುಃಖಿಗಳಾದುದರಿಂದ ಎಲ್ಲರೂ ಕಂಡುಕೊಳ್ಳುವ ಅನುಭವಗಳು ಒಂದೇ ತೆರನಾಗಿರುವ ಸಾಧ್ಯತೆಯೂ ಇದೆ. ವ್ಯಕ್ತಪಡಿಸುವ ದಾರಿಗಳು ಮಾತ್ರ ಬೇರೆ ಬೇರೆ.

'ಮಹಿಳಾ ಸಾಹಿತ್ಯ' ಎಂಬ ಹಣೆಪಟ್ಟಿ ಹಚ್ಚಿ ಸ್ತ್ರೀಯರ ಬರಹಗಳನ್ನು ಒಂದು ಮೆಟ್ಟಿಲು ಕೆಳಗಿಟ್ಟರೂ, ಸ್ಪಷ್ಟವಾಗಿ ಕಾಣಿಸುವ ಸತ್ಯಗಳನ್ನು ಬಹಳ ಕಾಲ ಕಡೆಗಣಿಸುವುದು ಸಾಧ್ಯವಿಲ್ಲ. ಮಹಿಳೆಯರ ರಚನೆಗಳನ್ನು ಅಡುಗೆಮನೆ ಸಾಹಿತ್ಯವೆಂದೋ, ಹಾಳು ಹರಟೆಯೆಂದೋ, ಕೆಲಸಕ್ಕೆ ಬಾರದ ಗೊಣಗಾಟವೆಂದೋ ಪುರುಷರು ಹೇಳುವುದಾದರೆ ಅದು ಉದ್ದೇಶಪೂರ್ವಕವಾಗಿ ಮಾಡುವ ಉಪೇಕ್ಷೆಯೆನ್ನದೆ ವಿಧಿಯಿಲ್ಲ. ಮಹಿಳಾ ಸಾಹಿತ್ಯವು ಹೊತ್ತು ಕಳೆಯಲು ಮಾಡುವ ಹಾಳುಹರಟೆಯಲ್ಲ, ಬದಲಾಗಿ ಅವರ ಆತ್ಮಾವಿಷ್ಕಾರದ ಒಳನೋಟಗಳು ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ.

ಸಂವಾದದ ಸಂದರ್ಭದಲ್ಲಿ ಶಿಬಿರಾರ್ಥಿಗಳಿಂದ ಬಂದ ಪ್ರಶ್ನೆಗಳು ಮತ್ತು ನೀಡಲಾದ ಉತ್ತರಗಳು.

**ಪ್ರಶ್ನೆ :** ನಾಯರ್ ಜನಾಂಗದಲ್ಲಿ ಈಗಲೂ ಗಂಡು ಹೆಣ್ಣಿನ ಮನೆಗೆ ಸಂಜೆಗಳಲ್ಲಿ ಮಾತ್ರ ಭೇಟಿಕೊಡುವ ಪದ್ಧತಿ ಇದೆಯೆ? ಮತ್ತು ನಂಬೂದಿರಿ ಬ್ರಾಹ್ಮಣರಲ್ಲಿ ಈಗಲೂ ಹಿರಿಯ ಮಗನಿಗೆ ಮಾತ್ರ ಆಸ್ತಿಯ ಹಕ್ಕು ಇರುವುದೇ?

**ಉತ್ತರ:** ಇಲ್ಲ. ನಾನು ಹೇಳಿದ್ದು ಹಿಂದಿನ ಕತೆ. ಈಗ ಎಲ್ಲವೂ ಬದಲಾಗಿದೆ. ೧೮೯೬ರಲ್ಲಿ ನಾಯರ್ ಸಮುದಾಯದ 'ಸಂಬಂಧಂ'ಗಳ ಪುನರ್‌ಪರಿಶೀಲನೆಗಾಗಿ ಜ್ಯಾರಿಗೆ ತಂದ ಹೊಸ ಕಾನೂನು ಮಲಬಾರ್ ವಿವಾಹ ಕಾಯಿದೆ. ನಾಯರ್ ಸಮುದಾಯದ ಕೆಲವು ಮಂದಿ ಪ್ರಮುಖರು ಮತ್ತು ಬ್ರಿಟಿಷ್ ಸದಸ್ಯರನ್ನು ಒಳಗೊಂಡಿದ್ದ ಒಂದು ಸಮಿತಿಯು ಈ ಪದ್ಧತಿಯನ್ನು ಅನಾಗರಿಕವೆಂದು ಘೋಷಿಸಿತು. ತತ್ಪರಿಣಾಮವಾಗಿ ಸ್ವೇಚ್ಛಾ ಸಂಬಂಧಗಳು ನಿಷೇಧಿಸಲ್ಪಟ್ಟು 'ಸಂಬಂಧಂ'ಗಳು ಕಾನೂನು ರೀತ್ಯಾ ವಿವಾಹಗಳೆಂದು ಪರಿಗಣಿಸಲ್ಪಟ್ಟವು. ಕೂಡುಕುಟುಂಬ ಪದ್ಧತಿಯೂ ಕ್ರಮೇಣ ಅವನತಿ ಹೊಂದಿ ಗಂಡ-ಹೆಂಡತಿ - ಮಕ್ಕಳು ಮಾತ್ರವಿರುವ ಸಣ್ಣಕುಟುಂಬಗಳು ಅಸ್ತಿತ್ವಕ್ಕೆ ಬಂದವು. ಎಲ್ಲರಿಗೂ ಕುಟುಂಬ ಜೀವನದ ಭದ್ರತೆಯೂ ಸಿಕ್ಕಿತು. ನಂಬೂದಿರಿ ಸಮಾಜದಲ್ಲೂ ಪ್ರಜ್ಞಾವಂತ ಯುವ ಸಂಘಟನೆಗಳಿಂದ ಬಂದ ಬಲವಾದ ವಿರೋಧ, ಪ್ರತಿಭಟನೆಗಳ ಮೂಲಕ ಬದಲಾವಣೆಯ ಗಾಳಿ ಬೀಸಿತು. 'ನಂಬೂದಿರಿ ಯಕ್ಷಗಾನ ಸಭಾ' ಎಂಬ ಸಂಘವು ತಮ್ಮ ಸಮುದಾಯದ ಎಲ್ಲ ಯುವಕರಿಗೆ ತಮ್ಮದೇ ಜನಾಂಗದ ಒಳಗೆ ಮದುವೆಯಾಗುವ ಹಕ್ಕಿಗಾಗಿ ಹೋರಾಡಿತು. ನಂಬೂದಿರಿ ಸ್ತ್ರೀಯರ ಸ್ಥಿತಿಗತಿಗಳನ್ನು ಉತ್ತಮಗೊಳಿಸಿ, ವಿಧವಾ ವಿವಾಹವನ್ನು ಪ್ರೋತ್ಸಾಹಿಸಿ, ಘೋಷಾ ಪದ್ಧತಿ, ಮರದ ಕೊಡೆಗಳಿಂದ ಮುಖವನ್ನು ಮರೆ ಮಾಡಿಕೊಳ್ಳುವ ಪದ್ಧತಿ, ಬಹು ಪತ್ನಿತ್ವ ಮತ್ತು ಬಾಲ್ಯವಿವಾಹಗಳನ್ನು ವಿರೋಧಿಸುವ ಕೆಲಸವನ್ನು ಮಾಡಿತು. ಸರಕಾರದ ಭೂಸುಧಾರಣಾ ಯೋಜನೆಯು ಜಮೀನ್ದಾರಿ ಪದ್ಧತಿಯನ್ನು ತೊಡೆದು ಹಾಕುವುದರೊಂದಿಗೆ ಮೇಲು ವರ್ಗದವರು ಸಾಮಾನ್ಯರ ಮಟ್ಟಕ್ಕಿಳಿದು ಪ್ರಧಾನವಾಹಿನಿಯನ್ನು ಸೇರಿಕೊಂಡರು.

**ಪ್ರಶ್ನೆ :** ಮಲಯಾಳ ಸಾಹಿತ್ಯದಲ್ಲಿ ಸ್ತ್ರೀವಾದದ ಸ್ಥಿತಿಗತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಉತ್ತರ :** ಮಲಯಾಳ ಸಾಹಿತ್ಯದಲ್ಲಿ ಸ್ತ್ರೀವಾದ ಬಹಳಷ್ಟು ಪ್ರಗತಿಯನ್ನು ಕಂಡಿದೆ. ಅಲ್ಲಿನ ಲೇಖಕಿಯರು ಪಾಶ್ಚಾತ್ಯ ಸಾಹಿತ್ಯದಿಂದ ತುಂಬ ಪ್ರಭಾವಿತರಾಗಿದ್ದಾರೆಂದು ಅವರ ಕೃತಿಗಳನ್ನು ಓದಿದಾಗ ನನಗನ್ನಿಸುತ್ತದೆ. ಆದರೆ ಆ ಪ್ರಭಾವವು ಕಂಡೂ ಕಾಣದಂತೆ ಅವರ ಕೃತಿಗಳಲ್ಲಿ ಪ್ರಕಟಗೊಳ್ಳುತ್ತದೆ. ಆದ್ದರಿಂದಲೇ ತೀರಾ ಸಹಜವಾಗಿ ಕಾಣುತ್ತದೆ ಕೂಡಾ. ಸ್ತ್ರೀವಾದವೆಂಬುದು ಒಂದು ಘೋಷಣೆಯಾಗಿ ಸೈದ್ಧಾಂತಿಕ ನೆಲೆಯಲ್ಲಿ ಕಾಣಿಸಿಕೊಳ್ಳದೆಯೇ ತಮ್ಮ ಉದ್ದೇಶವನ್ನು ಪೂರೈಸಿಕೊಳ್ಳುವಂತಹ ಅನೇಕ ಕಥೆಗಳು - ಕವನಗಳು ಮಲಯಾಳದಲ್ಲಿ ಬಂದಿದ್ದನ್ನು ನಾನು ನೋಡಿದ್ದೇನೆ. ಆದರೆ ವಾಸ್ತವಕ್ಕೆ ಬಂದಾಗ ಸಾಹಿತ್ಯವೂ ಒಂದು ರಾಜಕೀಯ ಸಂಘರ್ಷವಾಗಿ ಬಿಡುತ್ತದೆ. ಯಾರಾದರೂ

ಒಬ್ಬ ಸಾಹಿತಿ ಸ್ತ್ರೀಯರ ಅಥವಾ ಸ್ತ್ರೀವಾದದ ವಿರುದ್ಧವಾಗಿ ಏನಾದರೂ ಬರೆದರೆ ಅಥವಾ ಹೇಳಿಕೆ ಕೊಟ್ಟರೆ ತಕ್ಷಣವೇ ಲೇಖಕಿಯರು ಅದಕ್ಕೆ ಮಾತು ಅಥವಾ ಕೃತಿಯ ಮೂಲಕ ಪ್ರತಿಭಟನೆ ತೋರಿಸುತ್ತಾರೆ. ಉದಾಹರಣೆಗೆ, ಇಪ್ಪತ್ತನೇ ಶತಮಾನದ ಮೊದಲ ಭಾಗದಲ್ಲಿ ಬಂದ ಲೇಖಕಿ ಕೆ. ಸರಸ್ವತಿಯಮ್ಮ ಕುರಿತು ಹೇಳಿದೆನಲ್ಲ, ಅವರು **ರಮಣಿ'** ಅನ್ನುವ ಕಥೆ ಬರೆದದ್ದು ಪ್ರಸಿದ್ಧ ಕವಿ ಚಜ್ಞಪ್ಪುಳ ಎಂಬವರ ಕಾವ್ಯ **ರಮಣನ್**‌ಗೆ ಉತ್ತರ ರೂಪದಲ್ಲಾಗಿತ್ತು. **ರಮಣನ್** ಕಾವ್ಯ ತುಂಬ ಜನಪ್ರಿಯವಾಗಿತ್ತು. ತನ್ನನ್ನು ಅಪಾರವಾಗಿ ಪ್ರೀತಿಸುವ ಪ್ರೇಮಿಯನ್ನು ವಂಚಿಸಿ ಅದರ ನಾಯಕಿ ಬೇರೊಬ್ಬನನ್ನು ವಿವಾಹವಾಗುತ್ತಾಳೆ. ಶೇಕ್ಸ್‌ಪಿಯರ್ ಹೇಳುವ ಹಾಗೆ ಅದರಲ್ಲಿ ಹೆಣ್ಣು ಚಂಚಲ ಮನಸ್ಸಿನವಳಾಗಿರುತ್ತಾಳೆ. ಸರಸ್ವತಿಯಮ್ಮ **ರಮಣಿ**ಯಲ್ಲಿ ಗಂಡನ್ನು ವಿಶಿಷ್ಟ ರೀತಿಯಲ್ಲಿ ಚಿತ್ರಿಸಿದರು. ಈ ರೀತಿಯ ದಿಟ್ಟ ಪ್ರವೃತ್ತಿ ಆಧುನಿಕ ಕಥೆಗಾರ್ತಿಯರಲ್ಲಂತೂ ಬಹಳಷ್ಟು ಇದೆ. ಇದರಿಂದಾಗಿ ಕೇರಳದಲ್ಲಿ ಸ್ತ್ರೀವಾದಿಗಳನ್ನು ದ್ವೇಷಿಸುವ ಪುರುಷವರ್ಗವೂ ತುಂಬ ದೊಡ್ಡದಿದೆ.

**ಪ್ರಶ್ನೆ :** ಕನ್ನಡ ಮಹಿಳಾ ಸಾಹಿತ್ಯ ಹಾಗೂ ಮಲಯಾಳ ಮಹಿಳಾ ಸಾಹಿತ್ಯಗಳ ನಡುವೆ ಏನು ವ್ಯತ್ಯಾಸ ಕಾಣಿಸುತ್ತದೆ?

**ಉತ್ತರ :** ಹೋಲಿಸುವ ಕೆಲಸ ಕಷ್ಟ. ನಾನು ಆಳವಾದ ತೌಲನಿಕ ಅಧ್ಯಯನ ಮಾಡಿಲ್ಲ. ಮಲಯಾಳದ ಲೇಖಕಿಯರ ಮೇಲೆ ಪಾಶ್ಚಾತ್ಯ ಸ್ತ್ರೀವಾದದ ಪ್ರಭಾವ ಕನ್ನಡದ ಲೇಖಕಿಯರಿಗಿಂತ ಹೆಚ್ಚು ಕಾಣಿಸುತ್ತದೆ ಅಂತ ನನ್ನ ಅಭಿಪ್ರಾಯ. ನಿಸರ್ಗವಾದವು ಅವರ ಕಥೆಗಳಲ್ಲಿ ಬಹಳ ಹಿಂದೆಯೇ ಬಂದಾಗಿದೆ. ಸ್ತ್ರೀ ಸ್ವಾತಂತ್ರ್ಯ, ಸಮಾನತೆಗಳ ಬಗ್ಗೆ ಅವರಲ್ಲಿ ಹಲವರು ತೀವ್ರವಾದಿಗಳು. ಮಾಧವಿ ಕುಟ್ಟಿಯ ಹಾಗೆ ತನ್ನ ಅಂತರಂಗದ ಅನ್ನಿಸಿಕೆಗಳನ್ನು ನಿರ್ಭಯವಾಗಿ ಹೇಳಿಕೊಳ್ಳುವ ಧೈರ್ಯ ಪ್ರಾಯಶಃ ಕನ್ನಡದಲ್ಲಿ ಯಾವ ಲೇಖಕಿಯರಿಗೂ ಇಲ್ಲ. ಸಾರಾ ಜೋಸೆಫ್‌ರವರ ಪ್ರೌಢ, ಪ್ರಬುದ್ಧ ಹಾಗೂ ಆಳವಾದ ಚಿಂತನೆಗಳು ಕೂಡಾ.

**ಪ್ರ:** ಮಲಯಾಳ ಸಾಹಿತ್ಯದಲ್ಲೂ 'ಸ್ತ್ರೀವಾದಿ' ಕೃತಿಗಳು, ಜಾಗೃತಿ ಮೂಡಿ ಬಂದಿದೆಯೆ?

**ಉ:** ಖಂಡಿತ. 'ಸ್ತ್ರೀವಾದಿ ಕೃತಿ' ಅಂತ ಹಣೆಪಟ್ಟಿ ಹಚ್ಚಿಕೊಂಡು ಕೃತಿಗಳು ಬರುವುದಿಲ್ಲ ಬಿಡಿ. ಆದರೆ ಸ್ತ್ರೀವಾದಿ ಚಿಂತನೆಯು ಪ್ರಬಲವಾದ ಅಂತರ್ಧಾರೆಯಾಗಿ ಹರಿಯುವ ಅನೇಕ ಕೃತಿಗಳು ಮಲಯಾಳದಲ್ಲಿ ಬಂದಿವೆ - ಕಥೆಗಳು, ಕಾದಂಬರಿಗಳು. ಕಾವ್ಯ ಇತ್ಯಾದಿ. ಸಾರಾ ಜೋಸೆಫ್‌ರ **ಆಲಾಹಯುಡೆ ಪೆಣ್‌ಮಕ್ಕಳ್** (ಆಲಾಹಳ ಹೆಣ್ಣುಮಕ್ಕಳು) ಕಾದಂಬರಿಯಲ್ಲಿ ಆಕೆಯ ಸಣ್ಣಕಥೆಗಳಲ್ಲಿ ಅಷ್ಟು ತೀವ್ರವಾದ ಸ್ತ್ರೀವಾದ ಇಲ್ಲವೆನ್ನುತ್ತಾರೆ. ಆದರೆ ಎಂಟು ವರ್ಷದ ಎಳೆಯ ಹುಡುಗಿಯ ಪ್ರಜ್ಞೆಯಲ್ಲಿ ನಡೆಯುವ ಕಾದಂಬರಿಯ ಘಟನೆಗಳಲ್ಲಿ ಆಕೆಯ ಅರಿವಿಗೆ ಬಾರದಂತಹ ರೀತಿಯಲ್ಲಿ ಸ್ತ್ರೀಪರ

ವಾದಗಳು ತುಂಬಿಕೊಂಡಿವೆ. ಯಥೇಚ್ಛವಾಗಿ ನಿಸರ್ಗವಾದವೂ ಇದೆ;ಸಾಮಾಜಿಕ ಕಾಳಜಿಯೂ ಇದೆ.

**ಪ್ರಶ್ನೆ :** ಕನ್ನಡಿಗರ ಮತ್ತು ಮಲೆಯಾಳಿಗಳ ಸಂಸ್ಕೃತಿಯಲ್ಲಿರುವ ತಿರುವುಗಳನ್ನು ತುಲನಾತ್ಮಕವಾಗಿ ತಿಳಿಸಿ.

**ಉತ್ತರ :** ಕನ್ನಡಿಗರ ಸಂಸ್ಕೃತಿ ಮತ್ತು ಮಲೆಯಾಳಿಗಳ ಸಂಸ್ಕೃತಿಗಳ ನಡುವೆ ಹೇಳುವಂತಹ ವ್ಯತ್ಯಾಸವೇನೂ ಕಾಣಿಸುವುದಿಲ್ಲ. ಜೀವನಕ್ರಮ, ಆಹಾರಕ್ರಮ, ಮಾತು, ವರ್ತನೆ, ಉಡುಗೆ-ತೊಡುಗೆಗಳಲ್ಲಿ ಅಲ್ಪ-ಸ್ವಲ್ಪ ವ್ಯತ್ಯಾಸಗಳಿರಬಹುದು. ಮಲೆಯಾಳಿಗಳೂ ಸುಸಂಸ್ಕೃತರೇ. ಭಾರತೀಯ ಸಂಸ್ಕೃತಿಯ ಬಗ್ಗೆ, ತಮ್ಮ ಭಾಷೆಯ ಬಗ್ಗೆ ಅವರಲ್ಲಿ ಸ್ವಲ್ಪ ಹೆಚ್ಚೇ ಅಭಿಮಾನವಿದೆ. ಹಾಗೆಯೇ ಇತರ ಭಾಷಿಗರ ಬಗ್ಗೆ ಆದರವೂ ಇದೆ. ಇತರರಲ್ಲಿ ಒಳ್ಳೆಯ ಅಂಶಗಳನ್ನು ಗುರುತಿಸಿ, ಸ್ವೀಕರಿಸಿ, ಬೇಡವೆನಿಸಿದ್ದನ್ನು ಬಿಟ್ಟು ಬಿಡುವ ಬುದ್ಧಿವಂತಿಕೆ ಅವರಲ್ಲಿದೆ. ಜಾಗತೀಕರಣದ ಪ್ರಭಾವದಿಂದ ಇತ್ತೀಚೆಗೆ ಅಲ್ಲೂ ಬದಲಾವಣೆಯ ಗಾಳಿ ಬೀಸತೊಡಗಿದೆ.

**೬. ಪ್ರಶ್ನೆ:** ಮಲಯಾಳದಿಂದ ಕನ್ನಡಕ್ಕೆ ಅನೇಕ ಕೃತಿಗಳನ್ನು ಅನುವಾದಿಸಿದ್ದೀರಿ. ಮಲಯಾಳದಿಂದ ಕನ್ನಡಕ್ಕೆ ಅನುವಾದಿಸಿದ ಇತರ ಲೇಖಕರ ಹೆಸರುಗಳು ಮತ್ತು ಕೃತಿಗಳನ್ನು ತಿಳಿಸುವಿರಾ?

**ಉತ್ತರ:** ಇತರ ಭಾಷೆಗಳಿಂದ ಉತ್ತಮ ಕೃತಿಗಳನ್ನು ಸಮರ್ಥ ಅನುವಾದಕರ ಮೂಲಕ ಅನುವಾದ ಮಾಡಿಸಿ ಪ್ರಕಟಿಸುವ ಕೆಲಸ ಮಾಡುವ ಪ್ರಮುಖ ಸಂಸ್ಥೆಗಳೆಂದರೆ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳು. ತಕಳಿ ಶಿವಶಂಕರ ಪಿಳ್ಳೆಯವರ ಚೆಮ್ಮೀನ್ ಕಾದಂಬರಿಯನ್ನು ನಾ. ಕಸ್ತೂರಿಯವರೂ, ಏಣಿಪ್ಪಡಿಗಳ್ (ಏಣಿಯ ಮೆಟ್ಟಿಲುಗಳು) ಎಂಬ ಕೃತಿಯನ್ನು ಪ್ರೊ| ಬಿ. ಕೆ. ತಿಮ್ಮಪ್ಪ ಎಂಬವರೂ ಅನುವಾದಿಸಿದ್ದಾರೆ. ಎಂ. ಟಿ. ವಾಸುದೇವನ್ ನಾಯರರ ಕಾದಂಬರಿ ನಾಲುಕೆಟ್ಟ್ (ಚೌಕಟ್ಟಿನ ಮನೆ) ಮತ್ತು ಕಾಲ ಕಾದಂಬರಿಗಳನ್ನು ಬಿ.ಕೆ. ತಿಮ್ಮಪ್ಪ, ರಂಡಾಮೂಳಂ ಕಾದಂಬರಿಯನ್ನು ಕಾಸರಗೋಡಿನ ಸಿ. ರಾಘವನ್ ಅವರೂ ವಾರಣಾಸಿಯನ್ನು ಕೆ. ಎಸ್. ಕರುಣಾಕರನ್ ಅವರೂ ಅನುವಾದಿಸಿದ್ದಾರೆ. ಕೆ. ಕೆ. ನಾಯರ್‌ರವರು ಅನೇಕ ಉತ್ತಮ ಕಥೆ-ಕಾದಂಬರಿಗಳನ್ನು ಅನುವಾದಿಸಿದ್ದಾರೆ. ಹಾಗೆಯೇ ಕೆ. ಕೆ. ಗಂಗಾಧರನ್, ಡಾ| ಅಶೋಕ ಕುಮಾರ್. ಡಾ| ಮೋಹನ್ ಕುಂಟಾರ್, ಎಂ.ಎಸ್. ಲಕ್ಷ್ಮಣಾಚಾರ್, ವೆಂಕಟರಾಜ ಪುಣಿಂಚತ್ತಾಯ, ಕೆ.ಟಿ. ಶ್ರೀಧರ್ ಮುಂತಾದವರು ಕೂಡಾ. ಕಯ್ಯಾರ ಕಿಞ್ಞಣ್ಣ ರೈಯವರೂ ಒಂದೆ ಕುಮಾರ ನಾಶಾನ್‌ರವರ ಕಾವ್ಯವನ್ನು ಅನುವಾದಿಸಿದ್ದರೆಂದು ನೆನಪು.

ಪ್ರ: ಮಲಯಾಳಕ್ಕೆ ಕನ್ನಡದ ಯಾವ ಲೇಖಕ/ಲೇಖಕಿಯರ ಕೃತಿಗಳು ಅನುವಾದಗೊಂಡಿವೆ?

ಉ: ಅನಂತಮೂರ್ತಿಯವರ ಸಂಸ್ಕಾರ, ಘಟಶ್ರಾದ್ಧ, ಬರ, ಅವಸ್ಥೆ ಮೊದಲಾದ ಕಥೆಗಳು, ಶಿವರಾಮ ಕಾರಂತರ ಚೋಮನ ದುಡಿ, ಮೂಕಜ್ಜಿಯ ಕನಸುಗಳು, ನಿರಂಜನರ ಚಿರಸ್ಮರಣೆ, ಶ್ರೀಕೃಷ್ಣ ಆಲನಹಳ್ಳಿಯವರ ಕಾಡು, ಭುಜಂಗಯ್ಯನ ದಶಾವತಾರಗಳು, ಎಂ.ಕೆ. ಇಂದಿರಾರವರ ಫಣಿಯಮ್ಮ, ಮಾಸ್ತಿಯವರ ಸಣ್ಣ ಕಥೆಗಳು - ಹೀಗೆ ಅನೇಕ ಕನ್ನಡ ಕೃತಿಗಳು ಮಲಯಾಳಕ್ಕೆ ಹೋಗಿವೆ. ಅಕ್ಕನ ವಚನಗಳೂ ಅನುವಾದಗೊಂಡಿವೆ. ಆದರೆ ಅಲ್ಲಿಂದ ಇಲ್ಲಿಗೆ ಬಂದಷ್ಟು ಇಲ್ಲಿಂದ ಅಲ್ಲಿಗೆ ಹೋಗಿಲ್ಲ ಅನ್ನಿಸುತ್ತೆ. ಮಲಯಾಳಕ್ಕೆ ಬಹಳ ಹಿಂದಿನಿಂದಲೂ ಹೆಚ್ಚು ಅನುವಾದಗೊಂಡದ್ದು ಬಂಗಾಳಿ ಕೃತಿಗಳು.

ಪ್ರಶ್ನೆ: ಸೃಜನಶೀಲ ಅನುವಾದ (Creative Translation)ದ ಬಗ್ಗೆ ನಿಮ್ಮ ನಿಲುವೇನು? ಅದರ ಇತಿಮಿತಿಗಳೇನು?

ಉತ್ತರ: ಅನುವಾದದಲ್ಲಿ ಸೃಜನಶೀಲತೆ ಬಹಳ ಮುಖ್ಯ. ಅದು ಇದ್ದರೆ ಮಾತ್ರ ಅನುವಾದದಲ್ಲಿ ಸಹಜತೆಯಿದ್ದು ಸುಖವಾಗಿ ಓದಿಸಿಕೊಂಡು ಹೋಗುತ್ತೆ. ಅನುವಾದಕರು ತಿಳಿದುಕೊಳ್ಳಬೇಕಾದುದು ಏನೆಂದರೆ ಅನುವಾದವೆನ್ನುವುದು ಕೇವಲ ಭಾಷೆಯ ಬದಲಾವಣೆ ಅಥವಾ ಭಾಷಾಂತರವಲ್ಲ. ಅಲ್ಲಿ ಮೂಲಕೃತಿಯಲ್ಲಿ ಮಂಡಿತವಾದ ವಿಚಾರಗಳ ಮಂಥನವಿರುತ್ತೆ, ವಿಷಯಗಳ ಕುರಿತು ಮರುಚಿಂತನೆಯಿರುತ್ತೆ; ಮೂಲಕೃತಿಯಲ್ಲಿ ವ್ಯಕ್ತವಾದ ಭಾವನೆಗಳಿಗೆ ಆಳವಾದ ಸ್ಪಂದನವಿರುತ್ತೆ. ಮೂಲಕೃತಿಯ ಒಟ್ಟು ಸ್ವರೂಪದ ಒಂದು ಸ್ಪಷ್ಟ ಚಿತ್ರಣವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಮಾತ್ರ ಅನುವಾದಕರು ತಮ್ಮ ಭಾಷೆಯಲ್ಲಿ ತಮ್ಮದೇ ವಾಕ್ಯಗಳಲ್ಲಿ, ತನ್ನದೇ ಶೈಲಿಯಲ್ಲಿ ಆ ಕೃತಿಯ ಆಶಯಕ್ಕೆ ಭಂಗ ತರದಂತಹ ರೀತಿಯಲ್ಲಿ ಅದಕ್ಕೆ ಮರುಜನ್ಮ ನೀಡಲು ಸಾಧ್ಯ. ಈ ದೃಷ್ಟಿಯಿಂದ ಅನುವಾದಕರು ಸ್ವತಃ ತಾವು ಒಳ್ಳೆಯ ಲೇಖಕರೂ ವಿಮರ್ಶಕರೂ ಆಗಿದ್ದರೆ ಸೃಜನಶೀಲ ಅನುವಾದಕರೂ ಆಗಬಲ್ಲರು.

ಪ್ರಶ್ನೆ: 'ಅನುವಾದಕ ನಿಜವಾಗಿಯೂ ಕೊಲೆಗಡುಕ' ಎಂಬ ಹೇಳಿಕೆಗೆ ತಮ್ಮ ಪ್ರತಿಕ್ರಿಯೆ ಏನು?

ಉತ್ತರ: ಅನುವಾದಕರಲ್ಲಿ ಎರಡು ಭಾಷೆಗಳ ಮೇಲೆ ಪ್ರಭುತ್ವವಿರಬೇಕು. ಸೃಜನಶೀಲತೆ ಇರಬೇಕು. ಅಪಾರ ಪರಿಶ್ರಮ ಪಡುವ ಮನೋಭಾವವಿರಬೇಕು. ಮೂಲಕೃತಿಯಲ್ಲಿ ಅರ್ಥವಾಗದೇ ಇರುವ ವಿಚಾರಗಳನ್ನು ಬಲ್ಲ ಮೂಲಗಳಿಂದ ಶೋಧಿಸಿ, ಕೇಳಿ ತಿಳಿದುಕೊಂಡು ಅನುವಾದಿಸುವ ತೆರೆದ ಮನಸ್ಸು, ವಿನಯವಂತಿಕೆ ಮತ್ತು ಪ್ರಾಮಾಣಿಕತೆ ಇರಬೇಕು. ಮೂಲ ಕೃತಿಯ ಆಶಯಕ್ಕೆ ಭಂಗ ತರಬಾರದೆಂಬ ಪ್ರಜ್ಞೆಯಿರಬೇಕು. ಈ ಗುಣಗಳು ಇಲ್ಲದಿದ್ದರೆ ಅನುವಾದಕರು ಕೊಲೆಗಡುಕರಾಗಬಲ್ಲರು. ತಾವು ಕೈಗೊಂಡ ಕಾರ್ಯವನ್ನು 'ಹರಕೆ ಬಲಿ' ತೀರಿಸಿದಂತೆ ಅನುವಾದ ಮಾಡಿ ಮುಗಿಸುವುದು ಒಳ್ಳೆಯದಲ್ಲ.

**ಪ್ರಶ್ನೆ :** ಅನುವಾದದ ಕೆಲಸವೆಂದರೆ ಕೇವಲ ಶಬ್ದ-ವಾಕ್ಯಗಳ ಬದಲಾವಣೆ ಅಲ್ಲ ಎಂದಿರಿ. ಇದನ್ನು ಸ್ಪಷ್ಟಪಡಿಸಿ.

**ಉತ್ತರ :** ಹೌದು, ಸಾಮಾನ್ಯವಾಗಿ ಎಲ್ಲರೂ ತಿಳಿಯುವುದು ಏನೆಂದರೆ ಅನುವಾದ ಅನ್ನುವುದು ಕೇವಲ ಭಾಷೆ, ಶಬ್ದ ಮತ್ತು ವಾಕ್ಯರಚನೆಗಳಿಗೆ ಸಂಬಂಧಿಸಿದ್ದು ಅಂತ. ವಿಜ್ಞಾನ ವಿಷಯ ಅಥವಾ ದಾಖಲೆ ಪತ್ರಗಳಿಗೆ ಸಂಬಂಧಿಸಿದ ವಿಚಾರಗಳನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ತರುವಾಗ ಈ ಮಾತು ನಿಜವೂ ಹೌದು. ಆದರೆ ಸಾಹಿತ್ಯ ಕೃತಿಗಳ ಅನುವಾದವೆಂದರೆ ಕೇವಲ ಭಾಷಾಂತರವಲ್ಲ. ಅಲ್ಲಿ ಭಾವನೆಗಳಿರುತ್ತವೆ. ಸಂವೇದನೆಗಳಿರುತ್ತವೆ. ಸಾಲುಗಳ ನಡುವೆಯೇ ವ್ಯಕ್ತಗೊಳ್ಳಬೇಕಾದ ವಿಚಾರಗಳವು. ಸೃಜನಶೀಲ ಅನುವಾದಕರು ಮಾತ್ರ ಅವುಗಳನ್ನು ಸಮರ್ಥವಾಗಿ ವ್ಯಕ್ತಪಡಿಸಬಲ್ಲರು. ಎಲ್ಲಾ ಭಾಷೆಗಳಲ್ಲೂ ಆಯಾ ಪ್ರದೇಶದ ಸಂಸ್ಕೃತಿ ಮತ್ತು ಜೀವನಕ್ರಮಗಳಿಗೆ ಸಂಬಂಧಿಸಿದ, ಅಥವಾ ಜನಪದ ಕಥೆಗಳ ಹಿನ್ನೆಲೆಯಿರುವ ವಿಶಿಷ್ಟ ಪದಗಳು ಮತ್ತು ನುಡಿಗಟ್ಟುಗಳಿರುತ್ತವೆ. ಅವುಗಳಿಗೆ ತತ್ಸಮಾನವಾದ ನುಡಿಗಟ್ಟುಗಳು ಅನುವಾದ ಮಾಡುವ ಭಾಷೆ(target language)ಯಲ್ಲಿ ಇರುವುದಿಲ್ಲ. ಆಗ ಅನುವಾದಕರು ಆ ಸಂದರ್ಭಗಳಿಗೆ ಸರಿಹೊಂದುವಂತಹ ನುಡಿಗಟ್ಟಿನ ಕುರಿತು ಆಲೋಚಿಸಿ ಅಲ್ಲಿ ಪ್ರಯೋಗಿಸಬೇಕಾಗುತ್ತದೆ. ಶಬ್ದಕ್ಕೆ ಶಬ್ದ ಸೇರಿಸಿ ಅನುವಾದಿಸಿದರೆ ಮೂಲದ ಆಶಯ ಸೋರಿ ಹೋಗಿ ಕೃತಿ ಸೊರಗುತ್ತದೆ.

**ಪ್ರಶ್ನೆ :** ಅನುವಾದದ ಕೆಲಸವನ್ನು ಕೈಗೊಂಡ ಸಂದರ್ಭದಲ್ಲಿ ನಿಮಗೆ ಎದುರಾದ ಸಮಸ್ಯೆಗಳನ್ನು ತಿಳಿಸಿ. ನೀವು ಮೂಲತಃ ಮಲಯಾಳಿಯೇ ಅಥವಾ ನಂತರ ಕಲಿತವರೆ?

**ಉತ್ತರ:** ನಾನು ಅನುವಾದಿಸುವ ಕೆಲಸವನ್ನು ಪ್ರಾರಂಭಿಸಿದ್ದು ಎಂ.ಎ. ಮುಗಿಸಿ ಮೂಲ್ಕಿಯ ವಿಜಯಾ ಕಾಲೇಜಿನಲ್ಲಿ ಲೆಕ್ಚರರ್ ಆಗಿ ಸೇರಿದ ನಂತರ. ನನಗೆ ಮುಂಚಿನಿಂದಲೂ ಭಾಷೆಗಳನ್ನು ಕಲಿಯುವುದರಲ್ಲಿ ಆಸಕ್ತಿಯಿತ್ತು. ನಾನು ಮಲಯಾಳವನ್ನು ಔಪಚಾರಿಕ ಪಾಠಗಳ ಮೂಲಕ ಕಲಿತದ್ದಲ್ಲ. ಕಾಸರಗೋಡು ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದಾಗ ನನಗೆ ಅನೇಕ ಮಲಯಾಳಿ ಗೆಳತಿಯರು ಸಿಕ್ಕಿದರು. ಅವರ ಕೈಯಿಂದ ಅಕ್ಷರಗಳನ್ನು ಕಲಿತು ಓದುವುದನ್ನು, ಬರೆಯುವುದನ್ನು ರೂಢಿಸಿಕೊಂಡೆ. ಮಾತನಾಡಲಿಕ್ಕೂ ಕಲಿತೆ. ನಾನು ಹಿಂದಿಯಿಂದಲೂ ಕಥೆ-ಕಾದಂಬರಿ-ನಾಟಕಗಳನ್ನು ಅನುವಾದಿಸಿದ್ದೇನೆ. ಹಿಂದಿ ನಾನು ಬಿ.ಎ.ನಲ್ಲಿರುವಾಗ ದ್ವಿತೀಯ ಭಾಷೆಯಾಗಿ ಕಲಿತ ಭಾಷೆ. ಕಲಿತ ಭಾಷೆಗಳನ್ನು ಮರೆಯಬಾರದೆನ್ನುವ ಉದ್ದೇಶದಿಂದ ಆ ಭಾಷೆಗಳಲ್ಲಿ ಸಾಹಿತ್ಯಕೃತಿಗಳನ್ನು ಓದುತ್ತಿದ್ದೆ. ಹಾಗೆಯೇ ತುಳುಭಾಷೆಯನ್ನು ಚಿಕ್ಕವಳಿದ್ದಾಗ ಅಕ್ಕಪಕ್ಕದವರಿಂದ ಕಲಿತು ಮಾತನಾಡುತ್ತಿದ್ದೆ. ಎರಡು ವರ್ಷಗಳ ಹಿಂದೆ ಇಂಗ್ಲಿಷ್‌ನಿಂದ ಎರಡು ಕಿರುನಾಟಕಗಳನ್ನು ತುಳುವಿಗೆ ರೂಪಾಂತರಿಸಿ ಬಿನ್ನೆ ಎಂಬ ಕೃತಿಯನ್ನು ಪ್ರಕಟಿಸಿದ್ದೆ. ನನ್ನ ಮೊದಲ ಕೃತಿ **ಅಶ್ಕರ ಕಥೆಗಳು** ಪ್ರಕಟವಾದದ್ದು ೧೯೮೭ರಲ್ಲಿ. ೧೯೮೮ರಲ್ಲಿ ನನಗೆ ಮದುವೆಯಾಗಿ

ನಾನು ಕುಂದಾಪುರಕ್ಕೆ ಬಂದೆ. ಆ ನಂತರ ೧೦ ವರ್ಷಗಳ ಕಾಲ ನಾನು ಏನೂ ಬರೆಯಲಿಲ್ಲ. ನನ್ನ ಮುಂದಿನ ಕೃತಿ **ಗುರುದಕ್ಷಿಣೆ** ಎಂಬ ಮಕ್ಕಳ ನಾಟಕ ಪ್ರಕಟವಾದದ್ದು ೧೯೯೮ರಲ್ಲಿ. ನೀವು 'ಎದುರಾದ ಸಮಸ್ಯೆಗಳೇನು' ಅಂತ ಕೇಳಿದಿರಲ್ಲ? ಮದುವೆ ಮತ್ತು ಸಂಸಾರದ ಜವಾಬ್ದಾರಿಯು ಒಬ್ಬ ಲೇಖಕಿಗೆ ಉಂಟು ಮಾಡುವಷ್ಟು ಸಮಸ್ಯೆಗಳನ್ನು ಲೇಖಕನಿಗೆ ಒಡ್ಡುವುದಿಲ್ಲ. ಇನ್ನು ಅನುವಾದಕ್ಕೇ ಸೀಮಿತವಾಗಿರುವ ಸಮಸ್ಯೆಯೆಂದರೆ ಅನುವಾದಕರು ವಹಿಸಬೇಕಾದ ಎಚ್ಚರಿಕೆ. ಅವರಿಗೆ ಮೂಲ ಲೇಖಕರಿಗಿಂತ ಹೆಚ್ಚಿನ ಜವಾಬ್ದಾರಿಯಿದೆ. ಇನ್ನೊಂದು ಸಮಸ್ಯೆಯೆಂದರೆ, ಅನುವಾದಿಸಿದ ಕೃತಿಯ ಅಥವಾ ಪತ್ರಿಕೆ - ನಿಯತಕಾಲಿಕೆಗಳಲ್ಲಿ ಪ್ರಕಟಿಸುವ ಕಥೆಯ ಪ್ರಕಟಣೆಗೆ ಮೂಲ ಲೇಖಕರ ಅನುಮತಿ ಪಡೆಯುವುದು. ಪ್ರಸಿದ್ಧ ಕಥೆಗಾರರಾದರೆ ಕೆಲವೊಮ್ಮೆ ಅವರು ಪತ್ರಗಳಿಗೆ ಉತ್ತರಿಸುವುದೇ ಇಲ್ಲ. ಅಥವಾ ತುಂಬ ತಡವಾಗಿ ಉತ್ತರಿಸುತ್ತಾರೆ. ಅವರ ಪರಿಚಯವಾಗಿ ಸ್ನೇಹವೇರ್ಪಟ್ಟರೆ ಆ ಸಮಸ್ಯೆ ಇರುವುದಿಲ್ಲ.

**ಪ್ರಶ್ನೆ :** ಕರ್ನಾಟಕ ಸಾಹಿತ್ಯ ಅಕಾಡೆಮಿ ಅನುವಾದದ ಕುರಿತು ಕೆಲಸ ಮಾಡುತ್ತಿರುವಾಗ ಅದಕ್ಕೆಂದೇ ಪ್ರತ್ಯೇಕವಾದ ಅಕಾಡೆಮಿಯೊಂದರ ಆವಶ್ಯಕತೆ ಇತ್ತೆ? ಅನುವಾದ ಅಕಾಡೆಮಿಯಿಂದ ಯಾವ ರೀತಿಯ ಕೆಲಸ-ಕಾರ್ಯಗಳನ್ನು ನೀವು ನಿರೀಕ್ಷಿಸುತ್ತೀರಿ?

**ಉತ್ತರ :** ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾತ್ರವಲ್ಲ, ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಮತ್ತು ಇನ್ನೂ ಅನೇಕ ಖಾಸಗಿ ಪ್ರಕಾಶನ ಸಂಸ್ಥೆಗಳು ಅನುವಾದದ ಕೆಲಸವನ್ನು ನಿರ್ವಹಿಸುತ್ತಿವೆ. ಆದರೆ ಅದು ಏನೇನೂ ಸಾಲದೆಂದು ನನಗನ್ನಿಸುತ್ತದೆ. ಯಾಕೆಂದರೆ ಸರಕಾರಿ ಸಂಸ್ಥೆಗಳದ್ದಂತೂ ಬಹಳ ನಿಧಾನಗತಿ. ಇಷ್ಟು ಮಾತ್ರವಲ್ಲದೆ ಈ ಸಂಸ್ಥೆಗಳೂ ಅನುವಾದಕರಿಗೆ ಕೊಡುವ ಪ್ರಾಧಾನ್ಯ ಕಡಿಮೆಯೆಂದು ನನ್ನ ಅಭಿಪ್ರಾಯ. ಒಬ್ಬ ಒಳ್ಳೆಯ ಅನುವಾದಕರಾಗಲು ಅರ್ಹತೆಗಳೇನೆಂದು ನಾನು ಈ ಮೊದಲೇ ಹೇಳಿದ್ದೇನೆ. ಆದರೆ ನೀವು ಯಾವುದೇ ಅನುವಾದಿತ ಕೃತಿಯಲ್ಲಿ ನೋಡಿ, ಮೂಲ ಲೇಖಕರ ಹೆಸರನ್ನೇ ದೊಡ್ಡದಾಗಿ ಕಾಣುವಂತೆ ರಕ್ಷಾಪುಟದಲ್ಲಿ ಮುದ್ರಿಸುತ್ತಾರೆ. ಅನುವಾದಕರ ಹೆಸರು ಒಳಪುಟದಲ್ಲಿ ಮಾತ್ರ ಇರುತ್ತದೆ. ಈ ಮಲತಾಯಿ ಧೋರಣೆ ಏಕೆಂದು ನನಗೆ ಅರ್ಥವಾಗುವುದಿಲ್ಲ. ಎಷ್ಟೋ ಬಾರಿ ಓದುಗರಿಗೆ ಅನುವಾದ ಮಾಡಿದವರು ಯಾರೆಂದು ಕೂಡಾ ಗೊತ್ತಿರುವುದಿಲ್ಲ. ನಿಜವಾಗಿ ಯೋಚಿಸಿ ನೋಡಿದರೆ ಓರ್ವ ಅನುವಾದಕ ಒಂದು ಕೃತಿಯನ್ನು ಅನುವಾದಿಸಿದಾಗ ಆ ಭಾಷೆಯಲ್ಲಿ ಅದರ ಕರ್ತೃ ಆತನೇ ತಾನೆ? ಕನ್ನಡದ ಶೀರ್ಷಿಕೆ ಹೊತ್ತ ಒಂದು ಕೃತಿಯನ್ನು ಪ್ರೇಮಚಂದರೋ, ಶರತ್ಚಂದ್ರರೋ, ಟಾಗೋರರೋ ಬರೆಯಲು ಸಾಧ್ಯವೇ? ಅವರ ಹೆಸರುಗಳನ್ನು ಒಳಗೆ ಸೂಚಿಸುವುದಲ್ಲವೇ ಹೆಚ್ಚು ಸಮಂಜಸ? ಹೆಚ್ಚು ನ್ಯಾಯಯುತ? ಅನುವಾದಕ್ಕೆಂದೇ ಮೀಸಲಾಗಿಟ್ಟ ಅಕಾಡೆಮಿಯಿಂದ ನಾನು ಇಂತಹ ನ್ಯಾಯವನ್ನು ನಿರೀಕ್ಷಿಸುತ್ತೇನೆ.

❖❖❖

# ಪುಟ್ಟ ಚಿಂತನೆ

✍ ವೈದೇಹಿ

ನಮಸ್ಕಾರ.

ಈಗಷ್ಟೇ ಅಮೃತಾ ಪ್ರೀತಂ ಅವರ ಪರಿಸರದ ಮಾತು ಕೇಳಿದೆವು. ಪ್ರಶ್ನೋತ್ತರದಲ್ಲಿ ಅವರಿಗೆ ಅಂತಹ ಪರಿಸರ ಸಿಕ್ಕಿ ಅದು ಅವರಿಂದ ಬರೆಸಿತು ಎಂಬಂತೆ ಒಂದು ಅಭಿಪ್ರಾಯ ವ್ಯಕ್ತವಾಯ್ತು. ಇಲ್ಲಿಂದಲೇ ನನ್ನ ಮಾತು ಆರಂಭಿಸುತ್ತೇನೆ. ಪರಿಸರವೆಂಬುದು ಯಾರಿಗಿಲ್ಲ? ಪರಿಸರವೇ ಇಲ್ಲದವರು ಇದ್ದಾರೆಯೆ? ಇಲ್ಲಿ ಕುಳಿತಿರುವ ಒಬ್ಬೊಬ್ಬರನ್ನು ಕೇಳಿದರೂ ಅವರವರ ಪರಿಸರದಲ್ಲೇ ಕಂಡ ಕೇಳಿದ ನೂರಾರು ಸಾಮಾಜಿಕವೋ ಸಾಂಸಾರಿಕವೋ ಆದ ಕತೆ ಹೇಳಬಲ್ಲರು. ಏನೂ ನಡೆಯದ ಶೂನ್ಯ ಸ್ತಬ್ಧ ಸ್ಥಗಿತ ಪರಿಸರ ಎಂಬುದಿದೆಯೆ? ಪ್ರಶ್ನೆ ಇರೋದು ನಮ್ಮ ನಮ್ಮ ಪರಿಸರಕ್ಕೆ ನಾವು ಎಷ್ಟು ಸ್ಪಂದಿಸುತ್ತೇವೆ ಎಂಬಲ್ಲಿ. ಅಮೃತಾ ಪ್ರೀತಂ ಕಂಡ ಜಗತ್ತಿಗಿಂತ ಇಂದಿನ ಜಗತ್ತು ತೀರ ಭಿನ್ನವಾಗೇನೂ ಇಲ್ಲ. ದೊಂಬಿ. ಕೊಲೆ, ರಕ್ತಪಾತ, ಆತ್ಮಹತ್ಯೆಗಳಂತಹ ಅತಿರೇಕಗಳಂತೂ ಆದುವಲ್ಲ. ಕೋಮುಗಲಭೆಗಳು? ಏನು ಕಡಿಮೆಯೇ ಈಗ? ಅಲ್ಲಿ ಗುಜರಾತಿನಲ್ಲಿ ಆಗಿರೋದು ಬಿಡಿ. ನಮ್ಮ ಕಾಲಬುಡದಲ್ಲೇ ಆದುವಲ್ಲ, ಆಗುತ್ತಲೇ ಇವೆಯಲ್ಲ, ನಾವೆಷ್ಟು ಸ್ಪಂದಿಸುತ್ತೇವೆ? ಬರೆಯೋಕೇ ಅಂತಲೇ ಇನ್ನೇನು ವಿಶೇಷವಾದ ಒಂದು ಪರಿಸರ ಇರುತ್ತಾ? ಅಥವಾ ಬೇಕಾ? ಒಬ್ಬ ಸೂಕ್ಷ್ಮ ಸಾಹಿತಿಗೆ ನಿಂತ ನೆಲವೇ, ಬದುಕುತ್ತಿರುವ ಬದುಕೇ ಪರಿಸರ. ಬರೆಯಲು ಅಷ್ಟು ಸಾಕು. ಬರೆವ ಶಕ್ತಿ ಇದ್ದಲ್ಲಿ ತುಡಿತ, ವಿಶೇಷ ಸ್ಪಂದನಶೀಲತೆ ಇದ್ದಲ್ಲಿ. ಅಮೃತಾ ವಿಶಿಷ್ಟ ಲೇಖಕಿಯಾಗೋದೇ ಇಲ್ಲಿ. ಆಕೆ ತನ್ನ ಪರಿಸರಕ್ಕೆ ತನ್ನ ಸಂವೇದನೆಯಷ್ಟನ್ನೂ ಒಡ್ಡಿಕೊಂಡು ಬರೆದರು. ಆ ಚೇತನವೇ ಅಪರೂಪದ್ದಾಗಿ ಅದು ಸಾಧ್ಯವಾಯ್ತು. ಇಲ್ಲವಾದರೆ ಅವರದೇ ಪರಿಸರದಲ್ಲಿದ್ದ ಎಲ್ಲರೂ ಯಾಕೆ ಅವರಂತಹ ಬರಹಗಾರರಾಗಿಲ್ಲ ಎಂಬ ಪ್ರಶ್ನೆ ಬರತ್ತೆ. ಒಟ್ಟಿನಲ್ಲಿ, ಪರಿಸರವೆಂಬುದು ಕೊನೆಗೂ ನಮ್ಮ ಸುತ್ತಣವೇ ಇರುವಂಥದು. ನಮ್ಮಲ್ಲೇ, ನಮ್ಮ ಮನಸ್ಸಲ್ಲೇ ಇರುವಂಥದು.

ಬರಹಗಾರ್ತಿಯಾಗಿದ್ದು ಹೇಗೆ ಅಂತವೆ?

ಅದರ ಕುರಿತು ಸ್ಪಷ್ಟವಾಗಿ ಹೇಳಲು ನನಗೆ ತಿಳಿಯುವುದಿಲ್ಲ. ಹಾಗೆ ನೋಡಿದರೆ ಸಾಹಿತ್ಯದ ಗಂಭೀರ ಅಧ್ಯಯನದ ಮೂಲಕ ತೆರೆದುಕೊಂಡವಳಲ್ಲ ನಾನು. ಒಂದು ದೊಡ್ಡ ಕುಟುಂಬದಲ್ಲಿ ಹುಟ್ಟಿದೆ. ಅದೊಂದು ಸಮುದ್ರವೇ ಆಗಿತ್ತು. ಸಮುದ್ರದ ಒಂದು ಹನಿಯಲ್ಲಿ ಸಮುದ್ರಜಲದ ಎಲ್ಲ ಗುಣಗಳೂ ಇರುತ್ತದೆಯಲ್ಲ, ಹಾಗೆ, ನಾ ಬೆಳೆದ ಸುತ್ತಣ ಒಳಹೊರಗಲ್ಲಿ ಪ್ರಪಂಚದೊಳಗೆ ಇರುವುದೆಲ್ಲವೂ ಇತ್ತು. ಆ ಕಾಲ ಹೇಗಿತ್ತೆಂದರೆ - ಹೆಂಗಸರೆಲ್ಲ ಒಳಗೆ! ಬ್ರಾಹ್ಮಣರು, ಮುಂದುವರಿದವರು ಅಂತ. ಆದರೆ ಹೆಂಗಸರೆಲ್ಲ ಒಳಮನೆಯಲ್ಲಿ! ಹೊರಗೆ ಹೋಗಬೇಕೆಂದರೆ ಜೊತೆಗೊಬ್ಬರು ಇದ್ವೇ ಇರೋರು. ಬಸ್ಸು ಹತ್ತಿದರೆ ಸುಮ್ಮನೆ ನಿಶ್ಚಿಂತೆಯಿಂದ ಹೊರನೋಡುತ್ತಾ ಕುಳಿತರಾಯಿತು, ಟಿಕೆಟುಬಿಕೆಟು ಎಲ್ಲ ಅವರೇ ನೋಡಿಕೊಳ್ಳುತ್ತಾರೆ ಎಂದರೆ ಎಂಥಾ ಸುಖ ಅದು, ಗೊತ್ತೆ! ಹೆಂಗಸರಿಗೆ ಆ ರಕ್ಷಣೆ ಅಪೇಕ್ಷಣೀಯವೂ ಆಗಿತ್ತು ಬಹುಶಃ ನಿರಾಳತೆ, ತಾನು ಒಬ್ಬಂಟಿಯಲ್ಲ, ಜೊತೆಗೆ ಇದ್ದಾರೆ, ಏನೂ ತೊಂದರೆಯಿಲ್ಲ ಅಂತೆಲ್ಲ. ಆದರೆ ಆ ಖುಶಿ ನಿರಾಳತೆ ಯಾವಾಗ ಮಾಯವಾಗುತ್ತದೆ ಎಂದರೆ ಹಾಗೆ ರಕ್ಷಣೆಗೆ ನಿಂತವರು 'ನೀವು ಹೆಂಗಸರು ಅಬಲೆಯರು, ನಾವು ಸಬಲರು, ಶ್ರೇಷ್ಠರು, ನಾವು ನಿಮಗಿಂತ ಉಚ್ಚರು' ಅಂತೆಲ್ಲ ಎಣಿಸಲು ಹೋಗುತ್ತಾರಲ್ಲ, ಆಗ. ಕೂತ್ಕೋ. ಇಳಿ, ಹೋಗು. ಹತ್ತು ಅಂದ್ರೆ ಹತ್ತು - ಮುಂತಾಗಿ ಹೂಂಕರಿಸಲು ಪ್ರತ್ಯಕ್ಷವೋ ಪರೋಕ್ಷವೋ (ಅರಿವಿದ್ದೋ ಅರಿವಿಲ್ಲದೆಯೋ) ಸುರು ಮಾಡುತ್ತಾರಲ್ಲ, ಎಚ್ಚರ ಬರುವುದಿದ್ದರೂ ಆಗಲೇ! ಮನುಷ್ಯ ಎಚ್ಚರಗೊಳ್ಳುವುದೇ ಹೀಗೆ ಅಧಿಕಾರವಾಣಿಗೆ ಒಳಗಾಗಬೇಕಾಗಿ ಬಂದಾಗ ಮಾತ್ರವಷ್ಟೆ?

ನನ್ನ ಅಣ್ಣನೊಬ್ಬ ಬರೆಯುತ್ತಿದ್ದ. ಆ ನನ್ನ ಅಣ್ಣ ನಮ್ಮೊಡನೆ ಜಗಳಾಡುವ, ಕುಶಾಲು ಮಾಡುವ, ತಮಾಷೆ ಮಾಡಿ ಸಂತೋಷ ಕೊಟ್ಟು, ಛೇಡಿಸಿ ಅಳಿಸಿ ನಗಿಸುವ, ನಾವು ಹಬ್ಬಕ್ಕೆ ಹೊರಟರೆ ನಮಗೆ ತಿಳಿಯದಂತೆ ತಲೆಮೇಲೆ ಹಕ್ಕಿಪುಕ್ಕ ಹಾಕಿ 'ಹಬ್ಬಕ್ಕ್ ಹೋಪವ್ರ್ ತಲೇ ಮೇಲೆ ಕುಪ್ಪ ಕೂತಿತ್ತೋ' ಅಂತ ಹಾಡಿ ಖುಶಿ ಪಡುವವ. ಕಡೆಗೆ ಗಂಡನ ಮನೆಗೆ ಹೊರಟಾಗ ನಮ್ಮ ಉಡುಗೆಯನ್ನು ತಾನೇ ಪೆಟ್ಟಿಗೆಯಲ್ಲಿಟ್ಟು ಕೊಟ್ಟು ಕಣ್ಣಲ್ಲಿ ನೀರು ಹಾಕಿ ಕಳಿಸಿಕೊಡುವವ. ನಿಜವಾಗಿ ಜನಪದ ಕಾವ್ಯದಲ್ಲಿ ಬರುವ ಅಣ್ಣನೇ ಅವನು. ಈತ ಬರೆದಾಗ, ಅರರೆ! ಇವನು ಬರೀತಾನಲ್ಲ, ಹಾಗಾದರೆ ನಾನು ಬರೆಯಬಹುದೆ? - ಅಂತ ನನ್ನ ತಲೆಗೆ. ಹಾಗೆ ಮೆಲ್ಲ ಹೊರಟೆ. ಬರವಣಿಗೆಯ ಲೋಕದೊಳಗೆ ಬಂದೆ. ಬಂದ ಮೇಲೆ ಗೊತ್ತಾಗತ್ತೆ, ಈ ದಾರಿಗೆ ತುದಿಯೂ ಇಲ್ಲ, ಬುಡವೂ ಇಲ್ಲ, ಇದು ಅನಂತದಾರಿ. ಇದರಲ್ಲಿ ಎಲ್ಲಿವರೆಗೆ ನಮ್ಮಿಂದ ಸಾಧ್ಯವೋ ಅಷ್ಟು ದೂರ ಹೋಗುವುದು ಹೊರತು ಗುರಿ ಮುಟ್ಟಿತು ಅಂತಿಲ್ಲ. ನನ್ನಿಂದಾದ್ದು, ನನಗೆ ಹೇಳಬೇಕೆಂದಿರೋದು ನಾನು ಕಂಡದ್ದು ಮತ್ತು ನೋಡಿದ್ದು ಒಟ್ಟು ನನ್ನ ಅನುಭವಗಳನ್ನು ನನಗೆ ಬಂದಂತೆ ಹೇಳಿಕೊಂಡು ಕಾಲ ಬಂದೊಡನೆ ನಡೆದು ಬಿಡುವುದಷ್ಟೇ ನನ್ನ ಕೆಲಸ ಅಂತ. ದಾರಿ ಸಾಗುವಾಗ ಅನೇಕ ಚೇತನಗಳ ಪ್ರಭಾವ. ಬರವಣಿಗೆ ನಾಟಕಗಳು ಸಿನೆಮಾಗಳು ಬೀರಿದ ಪ್ರಭಾವಗಳಿಂದ ಪಡೆದ ಪುಷ್ಟಿ, ಎಲ್ಲವನ್ನು ಹೇಳುತ್ತ ಹೋದರೆ ಸಮಯ ಬೇಕು. ಮಾತ್ರ ಒಂದು.

ನೋವು ಇವೆಯಲ್ಲ, ಕಲೆಯ ಮೂಲ ಸೆಲೆಯೇ ಬಹುಶಃ ಅದೇ ಏನೋ. ಸಣ್ಣ ಪೆಟ್ಟೋ ದೊಡ್ಡ ಪೆಟ್ಟೋ, ಸಣ್ಣಕ್ಕೊಂದು ಚುಚ್ಚಿದ ನೋವು ಕೂಡ ಎಷ್ಟೋ ಸಲ ಶೂಲದ ತುದಿಯಲ್ಲಿ ನೆಟ್ಟುಕೊಂಡಂತೆ ಇರುತ್ತದೆ. ನೋಯುವುದು ಒಂದು ಶಕ್ತಿಯೂ. ನೋವಿಗಿರುವ ಶಕ್ತಿಗಾಗಿ ನಾವು ಅದನ್ನು ಪ್ರೀತಿಸುತ್ತೇವೆ. ಬರಹಗಾರರ ನೋವು ನಲಿವು ಸಂವೇದನೆಗಳೆಲ್ಲ ಸಾಹಿತ್ಯ ರೂಪದಲ್ಲಿ ಬಂದಾಗಲೇ ಅದು ಪೂರ್ಣವಾಗೋದು, ಅರ್ಥಪೂರ್ಣವೂ ಆಗೋದು, ಶೋಧವಾಗೋದು, ಅರಿವಿನ ಹಾದಿ ತೆರೆಯೋದು.

ಇನ್ನು ಸ್ತ್ರೀವಾದದ ಪ್ರಶ್ನೆ ಬಂತು.

ಸ್ತ್ರೀವಾದದ ಒಡಲೊಳಗೇ ಇರುವ ಗಾಂಭೀರ್ಯವನ್ನು ಅರಿತು ಮಾತಾಡೋದು ಬೇರೆ. ಅದರ ಆಳ ಆಗಲದ ಗೊಡವೆಯೇ ಇಲ್ಲದೆ ಮೇಲೆ ಮೇಲಿನ ಗ್ರಹಿಕೆ ಬೇರೆ. ಇಂತಹ ಮೇಲೆ ಮೇಲಿನ ಗ್ರಹಿಕೆಯಿಂದ ಎಷ್ಟೋ ಸಲ ನಾವು ತೆಳುವಾಗಿ ಚರ್ಚಿಸಹೊರಡುತ್ತೇವೆ. ಆಗೆಲ್ಲ ವಿಷಯವನ್ನು ಮಲಿನಗೊಳಿಸಿದಂತಾಗಿ ಆತಂಕವಾಗುತ್ತೆ. ಇದನ್ನು ತೀರಾ ವಿವರಿಸಹೋಗದೆ ಬಲು ಚಿಕ್ಕ ಸಂಗತಿಯೊಂದನ್ನು ಹೇಳಿ ಮುಂದೆ ಹೋಗುತ್ತೇನೆ. ನಾನು ಮೊನ್ನೆ ತಿರುವಣ್ಣಾಮಲೈಗೆ ಹೋಗಿದ್ದೆ. ಸಾಮಾನ್ಯವಾಗಿ ದಕ್ಷಿಣ ಭಾರತದ ಎಲ್ಲ ದೇವಾಲಯಗಳಂತೆ ಅಲ್ಲಿನ ದೇವಸ್ಥಾನವೂ ಎಷ್ಟು ಅದ್ಭುತವಾಗಿದೆಯೆಂದರೆ ಶಿಲ್ಪಕಲೆಯ ಬಗ್ಗೆ ಕಿಂಚಿತ್ ಜ್ಞಾನವಿಲ್ಲದವರೂ ಅವಾಕ್ಕಾಗಿ ನಿಲ್ಲಬೇಕು. ಹಾಗೆ. ತನ್ನ ಉತ್ತುಂಗ ಸ್ಥಿತಿಯಲ್ಲಿ ಪಂಡಿತ ಪಾಮರರೆಲ್ಲರನ್ನೂ ಸಮಾನವಾಗಿ ಸೆಳೆಯುವುದು ಕಲೆಯ ಲಕ್ಷಣವೇ ಸೈಯಷ್ಟೆ? ಇರಲಿ. ದೇವಸ್ಥಾನ ನೋಡುತ್ತ ಸುತ್ತು ಬರುತ್ತಿದ್ದಂತೆ ಅಲ್ಲೊಂದು ಅರ್ಧನಾರೀಶ್ವರ ಪ್ರತಿಮೆ. ಎರಡು ಕಣ್ಣು ಸಾಲದು ಅದನ್ನು ನೋಡಿ ಮನಸ್ಸು ತುಂಬಿಸಿಕೊಳ್ಳಲಿಕ್ಕೆ. ಅಂಥಾ ಸುಂದರ ಪ್ರತಿಮೆ ಅದು. ನನ್ನ ಜೊತೆಗಿದ್ದ ಗೆಳತಿ ಮಾತ್ರ ಅದನ್ನು ನೋಡಿದ್ದೇ ಚಡಪಡಿಸುತ್ತ ಎಂದಳು - ನೋಡು, ಅದೇನು, ಅರ್ಧ ನಾರೀಶ್ವರ? ಅರ್ಧ ಪುರುಷೇಶ್ವರಿ ಅಂತ ಯಾಕಿಲ್ಲ? ಇಲ್ಲೇ ಇರೋದು ಗುಟ್ಟು - ಅಂತ. ನನಗೊಮ್ಮೆ ಭಯಂಕರ ಆಶ್ಚರ್ಯವಾಯ್ತು. ಹೀಗೆಲ್ಲ ಪ್ರಶ್ನೆ ಕೇಳುತ್ತ ವಿಶ್ಲೇಷಿಸುತ್ತ ಹೋದರೆ ಅಂತ್ಯವುಂಟೆ ಇದಕ್ಕೆ? ನಿಧಾನವಾಗಿ ನಾವೂ ಒಂದು ಬಗೆಯ ಸಿನಿಕರೋ ಫೆನೆಟಿಕರೋ ಆಗುವುದಿಲ್ಲವೆ? ಎಷ್ಟೋ ಇಂತಹ ಅನಗತ್ಯ ವಿಚಾರಗಳನ್ನು ಹೆಕ್ಕಿ ಸಸೆಯುವುದನ್ನು ನಾವು ಬಿಟ್ಟುಬಿಡಬೇಕು. ಗೋಚರದಿಂದಲೇ ಆಚೆಗಟ್ಟಬೇಕು. ಇದು ಹೇಗಿದೆಯೆಂದರೆ ಒಂದು ವೇಳೆ ಅರ್ಧ ಪುರುಷೇಶ್ವರಿ ಯೆಂದು ಕರೆದರೂ ಅದೇನು, ಅರ್ಧ ನಾರೀಶ್ವರ ಅಂತ ಕರೆಯಬಾರದಿತ್ತೆ ಎಂದು ಗೊಣಗುವಂತೆ, ದೃಢತೆಯಿಲ್ಲದೆ, ವಿಚಾರಶಕ್ತಿಯ ಹೀನತೆಯಿಂದ ಇರುವುದರ ವಿರುದ್ಧವಾಗಿ ಸದಾಕಾಲ ಮಗುಚಿಕೊಳ್ಳುವ ಮನೋಭಾವವಿದು. ಒಂದು ರೀತಿಯ ಕೀಳರಿಮೆಯೂ. ನಮ್ಮೊಳಗೇ ಇರುವ ನಮಗರಿಯದ ಕೀಳರಿಮೆ ನಮಗೆ ಜಗತ್ತನ್ನು ಹೀಗೆಲ್ಲ ಕಾಣಿಸ ಹವಣಿಸುತ್ತದೆ. ಅದನ್ನು ಮೊದಲು ಕಿತ್ತು ಹಾಕೋಣ. ಆತ್ಮಸಮ್ಮಾನದ ಅರಿಮೆಯನ್ನು ಕಳೆಯದಿರೋಣ. ಇವತ್ತು ನಾವು ಯಾವುದರ ಕುರಿತು ನಮ್ಮ ಯೋಚನೆಗಳನ್ನು ಹರಿಯಬಿಡಬೇಕು, ಆ ಬಗ್ಗೆ ಚಿಂತಿಸೋಣ.

ಇವತ್ತು ನಮ್ಮ ಸುತ್ತ ಏನಾಗುತ್ತಿದೆ? ಹೆಣ್ತನದ ಘನತೆಗೆ ಏನಾಗುತ್ತಿದೆ? ಇದು ಸರಳವಾಗಿಯೂ ಸಂಕೀರ್ಣವಾಗಿಯೂ ಎದ್ದಿರುವ ಪ್ರಶ್ನೆ. ಹುಡುಗಿಯೊಬ್ಬಳು ಧೈರ್ಯವಾಗಿ ಸುರಕ್ಷಿತವಾಗಿ ಹೊರಬರಬಲ್ಲಳೆ? ಎಂಬುದು ಅದರಲ್ಲಿನ ಒಂದು ಉಪಪ್ರಶ್ನೆ. ಸಂಸ್ಕೃತ ನಾಟಕಗಳಲ್ಲಿ ಕಾವ್ಯಗಳಲ್ಲಿ ಕಾಣುತ್ತೇವಲ್ಲ, ನಾಯಕಿಯು ತನ್ನ ಗಂತವ್ಯದ ಕಡೆಗೆ ನಡುರಾತ್ರಿಯಲ್ಲಿಯೂ ಹೊರಡುವ ದೃಶ್ಯ. ಅಂಥದೊಂದು ಕಾಲವಿತ್ತು. ನಿರ್ಭಯವಾದ ಕಾಲ. ರಾತ್ರಿ ಹಗಲು ಸಮಾನವಾಗಿ ಗಂಡು ಹೆಣ್ಣು ಇಬ್ಬರಿಗೂ ದಕ್ಕುತ್ತಿದ್ದ ಕಾಲ. ಸೃಷ್ಟಿಯ ಮೊದಲಲ್ಲೇ ರಾತ್ರಿಗಳು ಹೆಣ್ಣಿಗೆ ದುಃಸ್ವಪ್ನಗಳಾಗಿದ್ದವೆ, ಖಂಡಿತವಾಗಿ ಇಲ್ಲ. ಹಾಗಾದರೆ ಆ ಕಾಲ ಹೇಗೆ ಮಾಯವಾಯ್ತು? ಎಲ್ಲಿಗೆ? ಯಾರು ಮಾಯವಾಗಲು ಬಿಟ್ಟವರು? ಇಂದು ನಮ್ಮಲ್ಲಿ ಯಾರಿಗಾದರೂ ತೀರಾ ಅಗತ್ಯದ ಸಮಯದಲ್ಲಿಯೂ ಒಬ್ಬರೇ ಹೊರಬರುವ ಧೈರ್ಯ ಇದೆಯೆ? ವಯಸ್ಸಾದ ಮಹಿಳೆಗೂ ಸುರಕ್ಷತೆಯ ಭರವಸೆಯಿಲ್ಲದಿರುವಾಗ? ಯೋಚಿಸಿ. ಹೆಣ್ಣಿಗೆ ತನ್ನ ದೇಹವೇ ಶತ್ರುವಾಗಿ ಕಾಣುವ, ಕಾಲದ ಈ ರೀತಿಯ, ಕಾಲಾಂತರವನ್ನು.

ತೀರ ಇತ್ತೀಚೆಗೆ ಬೆಂಗಳೂರಿನ ಕಾಲ್‌ಸೆಂಟರ್ ಒಂದರ ಉದ್ಯೋಗಿ ಪ್ರತಿಭಾ ಪ್ರಕರಣ ನೆನೆಸಿಕೊಳ್ಳೋಣ. ಆ ಸುದ್ದಿ ಕೇಳಿ ಯಾಯಾವ ಬಗೆಯ ಪ್ರತಿಕ್ರಿಯೆಗಳು ಬಂದವು! - ಅವಳು ನಡುರಾತ್ರಿ ಡ್ರೈವರ್ ಪಕ್ಕದಲ್ಲಿ ಕುಳಿತುಕೊಂಡದ್ದು ತಪ್ಪು; (ಕಾಲ್ ಸೆಂಟರ್) ಹುಡುಗಿಯರು ಜೋರಾಗಿ ಡ್ರೆಸ್ ಮಾಡಿಕೊಂಡು (!) ಹಾಗೆ ಒಬ್ಬೊಬ್ಬರೇ ಹೋದರೆ ಗಂಡಸರು ಕೆರಳುವುದಿಲ್ಲವೆ?; ಪಾಪ, ಡ್ರೈವರ್, ಹೆಂಡತಿ ಬಸುರಿಯಂತೆ ಅದಕ್ಕೇ...(ಪೂರ್ತಿಗೊಳಿಸಲು ಅಸಹ್ಯವೆನಿಸುತ್ತಿದೆ); ಇಷ್ಟೆಲ್ಲ ಆದ ಮೇಲೆ ಬದುಕಿರುವುದಕ್ಕಿಂತ ಅವಳು ಹೋದದ್ದೇ ಒಳ್ಳೆಯದಾಯ್ತು(!) - ಇನ್ನೂ ಮುಂತಾಗಿ ನುಡಿದ ಎಲ್ಲರೂ ಹೊರಗಣ್ಣಿಗೆ ತಣ್ಣಗೆ ಕಾಣುವ ಮಂದಿಯೇ. 'ದಿನಾ ದಿನಾ ಬೆಂಗಳೂರಿನ ಅಸಂಘಟಿತ ಕ್ಷೇತ್ರಗಳಲ್ಲಿ ನರಳುವ ಹೆಣ್ಣು ಮಕ್ಕಳ ಬಗ್ಗೆ ಸೊಲ್ಲೆತ್ತುವವರಿಲ್ಲ. ಈ ಕೇಸಿನ ಬಗ್ಗೆ ಯಾಕಿಷ್ಟು ಕಾಳಜಿ? ಕಾಲ್ ಸೆಂಟರ್ ಹುಡುಗಿಯರು ಅಂತವ?' - ಅಂತಲೂ ಹೇಳಿದರು. ಹೀಗೆ ಹೇಳುತ್ತ ಇದನ್ನೂ ನಗಣ್ಯ ಮಾಡಲು ಹೊರಟರು. ಘೋರ ಪ್ರಕರಣಗಳಲ್ಲೇ ತರತಮ ಹುಡುಕುವ ಇಂತಹ ಮೌಢ್ಯಕ್ಕೆ ಏನೆನ್ನಬೇಕು?

ಈ ಎಲ್ಲ ಪ್ರತಿಕ್ರಿಯೆಗಳನ್ನು ಗಮನವಿಟ್ಟು ನೋಡಿ. ಇವೆಲ್ಲವೂ ವ್ಯಕ್ತಿ ಘನತೆಗೆ ಕುಂದು ಬರಿಸುವಂಥವು. ವೈಯಕ್ತಿಕ ಸ್ವಾತಂತ್ರ್ಯವನ್ನೇ ಪ್ರಶ್ನೆ ಮಾಡುವಂಥವು. ಇಲ್ಲವಾದರೆ ಹುಡುಗಿಯರ ಅಲಂಕಾರದ ಕುರಿತು ಬೇಕಿತ್ತೆ ಇಲ್ಲಿ, ಇಂಥ ಸಂದರ್ಭದಲ್ಲಿ? ಅವಳ ಜಾಗದಲ್ಲಿ ನಮ್ಮನ್ನೇ ಊಹಿಸಿಕೊಂಡರೆ ನಾಲಿಗೆ ಇಷ್ಟು ಸಡಿಲವಾಗಿ ಹೊರಳುತ್ತದೆಯೇ? ನಮ್ಮ ಅತಿ ಆಪ್ತ ಜೀವಗಳನ್ನು ಅಲ್ಲಿ ಊಹಿಸಿಕೊಂಡು ನೋಡಿ. ಏನು, ಆಕೆ ಅವನ ಪಕ್ಕ ಕುಳಿತದ್ದೇ ತಪ್ಪಾಗಿ ಹೋಗುವುದೆಂದರೆ? ಹೇಗೆ ತಪ್ಪು? ಒಂದು ವೇಳೆ ತಪ್ಪೆಂದರೂ ಆತ ಅವಳಿಗೆ ಏನೂ ಮಾಡಿಬಿಡಬಹುದೆ? ಆ ಅಧಿಕಾರ ಆತನಿಗೆ ಕೊಟ್ಟವರಾರು?

'ಮಹಿಳೆಯರ ಸ್ಥಿತಿಗತಿ ಈಗ ಮುಂಚಿನಂತಿಲ್ಲ. ಸುಧಾರಿಸಿದೆ. ಹೆತ್ತವರು, ಅತ್ತೆ ಮಾವ, ಗಂಡ ಎಲ್ಲರೂ ಆಕೆಯನ್ನು ಈಗ ರಾತ್ರಿ ಪಾಳಿಯ ಕೆಲಸಗಳಿಗೂ ಬಿಡುತ್ತಿದ್ದಾರೆ' ಎಂದಿರಿ?

ಸರಿ. ಅಲ್ಲವೆನ್ನುವಂತಿಲ್ಲ. ಸುಧಾರಿಸಿದೆ. ಆದರೆ ಎಷ್ಟು ಮಂದಿಯ ಬದುಕು? ಅವರು ಕಳಿಸುವುದಾದರೂ, ಆಕೆ ಹೋಗುವುದಾದರೂ ಯಾವುದಕ್ಕೆ? ಒಳ್ಳೆಯ ಸಂಬಳ ತರುವ ಕೆಲಸಕ್ಕೆ. ಸಂಬಳ ಎಷ್ಟು ಪುಷ್ಕಳವಾಗಿದೆಯೆಂಬುದೂ ಇಲ್ಲಿ ಮುಖ್ಯವಾಗುತ್ತದೆ. ಕಂಪೆನಿಯವರು ಅವರದೇ ಜವಾಬ್ದಾರಿ ಮೇಲೆ ಕರೆದುಕೊಂಡು ಹೋಗುತ್ತಾರೆ ವಾಪಾಸು ಕರೆತರುತ್ತಾರೆ ಎಂಬ ಗ್ಯಾರೆಂಟಿ ಮೇಲೆ. ಆ ಗ್ಯಾರೆಂಟಿ ಎಷ್ಟು ಗ್ಯಾರೆಂಟಿ ಎಂಬುದು ಮಾತ್ರ ಒಂದೊಂದು ಘಟನೆ ನಡೆದಾಗಲೇ ತಿಳಿಯುತ್ತದೆ. ಆದರೂ ಏನೋ ಒಂದು ಹಿಂದೆಮುಂದಿಲ್ಲದ ಭರವಸೆ; ಎಲ್ಲೋ ಒಮ್ಮೆ ಹಾಗಾಯಿತೆಂದರೆ ಸದಾ ಆಗುತ್ತದೆಯೇ ಅಂತೆಲ್ಲ ಸಮಾಧಾನ ತಾಳುತ್ತ ಮುಂದರಿಯುತ್ತಾರೆ, ಯಾಕೆಂದರೆ ಅಲ್ಲಿರುವುದು ದುಡ್ಡು, ಬೇರೆಲ್ಲೂ ತಮಗೆ ಸಿಗದಷ್ಟು ದುಡ್ಡು. ದುಡ್ಡು ಕೊಡುವ ಧೈರ್ಯವದು. ಹೊರತು ಯಾವುದೇ ಕಲೋಪಾಸನೆಗಾಗಿ, ಸಂಗೀತಕ್ಕೋ ಡಾನ್ಸಿಗೋ ಅಂತ ನಡುರಾತ್ರಿಯಲ್ಲಿ ಆಕೆ ಹೊರ ಬೀಳಲಿ ನೋಡೋಣ. ಅದು ಸಾಧ್ಯ ಇರಬಹುದು. ಆದರೆ ಇದರಂತೆ ಸಾಮಾನ್ಯ ವಿದ್ಯಮಾನ ಆಗಲಾರದು.

'ಮುಂಬಯಿಯಂಥ ನಗರಗಳಲ್ಲಿ ಧೈರ್ಯವಾಗಿ ತಿರುಗಬಹುದು' ಅಂತವ? ತಿರುಗುವುದು ದೊಡ್ಡ ಮಾತಲ್ಲ. ಇಲ್ಲಿರೋದು, ಸುಪ್ತವಾಗಿ ಕೂಡ ಇರಬಾರದ ನಿರ್ಭಯತೆಯ ಮಾತು. ಮುಂಬಯಿಯಲ್ಲಿ, ದೊಡ್ಡ ದೊಡ್ಡ ಸಿಟಿಗಳಲ್ಲಿ ಮಾತ್ರವಲ್ಲ ನಮ್ಮ ಊರು, ಊರುಕೇರಿ ಓಣಿಗಳಲ್ಲಿಯೂ ನಿರ್ಭಯದ ವಾತಾವರಣವಿರಬೇಕು. ಮತ್ತು ಇದುವರೆಗೆ ರಾತ್ರಿಯಲ್ಲಿ ಹೊರಬರುವ ಮಾತನ್ನೇ ಆಡಿದ್ದು ಕೂಡ ಒಟ್ಟು ನಾವು 'ಪಡೆಯಲೇ ಬೇಕಾದ ನಿರ್ಭಯತೆಯ ಸಂಕೇತ ಮಾತ್ರವಾಗಿ. ದಯಮಾಡಿ ಅದನ್ನು ಗಮನಿಸಿ ನಾನಾಡಿದ ಮಾತುಗಳನ್ನು ಗ್ರಹಿಸಬೇಕು. ಸದಾ ಭೀತಿಯ ವಾತಾವರಣದಲ್ಲೇ ಬದುಕುವುದಾದಲ್ಲಿ ನಾವು ಹಾಡಿ, ಪಾಡಿ, ನರ್ತಿಸಿ ಏನು ಪ್ರಯೋಜನ? ಇಡೀ ದೇಹವನ್ನು ಮಣಿಸಿ ಕುಣಿಸಿ ದಣಿಸಿ ಪಡೆವ ಉಲ್ಲಾಸಕ್ಕೆ ಖುಷಿಗೆ ಅರ್ಥವಿದೆಯೆ? ಇಂಥ 'ವಾರಸುದಾರಿಕೆ' ಪ್ರವೃತ್ತಿ ಕೇವಲ ರಾತ್ರಿಯಷ್ಟಕ್ಕೇ ನಿಲ್ಲುವುದಿಲ್ಲ. ವಾಸ್ತವವಾಗಿ ಇದೊಂದು ಕಾಹಿಲೆಯ ಮೂಲ. ಈ ಕಾಹಿಲೆಯೇ ನಿಧಾನವಾಗಿ ಉಲ್ಬಣಿಸುತ್ತ ಈ ಭೂಮಿಗೆ ನಾನು ನಿಜವಾದ ವಾರಸುದಾರ. ಈ ರಾತ್ರಿಗೆ, ಈ ಹಗಲಿಗೆ, ಊರಿಗೆ, ಈ ನಾಡಿಗೆ ಈ ದೇಶಕ್ಕೆ, ಈ ಸಕಲ ಚರಾಚರ ಪ್ರಪಂಚಕ್ಕೂ ನಾನು, ನಾನೊಬ್ಬನೇ, ವಾರಸುದಾರ ಎಂಬಲ್ಲಿಗೆ ಹೋಗಿ ಮುಟ್ಟುತ್ತದೆ. ಧರ್ಮ ಮತ ಎಲ್ಲದಕ್ಕೂ ತಗಲುವ ಸಾಂಕ್ರಾಮಿಕವಾಗುತ್ತದೆ. ಮನುಜ ಧರ್ಮವನ್ನು ಹೊಸಕಿ ಹಾಕುತ್ತದೆ. ಇವತ್ತು ನಾವು ಚಿಂತಿಸಬೇಕಾಗಿರುವುದು ಇಂತಹ ಕಾಹಿಲೆ ಹಿಡಿದ ಮನಸ್ಸುಗಳ ಕುರಿತು. ಈ ಸಾಂಕ್ರಾಮಿಕ ಕೀಟ ಬಾಧಿತ ಮನಸ್ಸುಗಳಿಂದಾಗಿ ಇಡೀ ಮನುಕುಲವಷ್ಟೇ ಅಲ್ಲ, ಜೀವಸಂಕುಲ ಜಾಲವೇ ಸುಡು ನರಳುತ್ತದೆಯಲ್ಲ, ಆ ಕುರಿತು.

**(ಸಂಕ್ಷಿಪ್ತ ರೂಪ)**

# ಕಣ್ಮರೆಗೊಳಿಸಲ್ಪಟ್ಟ ಪ್ರತಿಭಾ

✍ ಎಚ್. ಪಟ್ಟಾಭಿರಾಮ ಸೋಮಯಾಜಿ

ಪ್ರತಿಭಾಳ ವಿಷಯ, ಸ್ತ್ರೀಯ ಮೇಲೆ ನಡೆಯುವಂಥ ಹಿಂಸೆಗಳ ಬಗ್ಗೆ ಬಹಳ ಪವರ್‌ಫುಲ್ ಆಗಿ ಮಾತಾಡಿದರು, ವೈದೇಹಿ. ಆದರೆ ಅದರಲ್ಲಿ ಒಂದೆರಡು ವಿಷಯ ಬಿಟ್ಟು ಹೋಗಿದೆ ಅಂತ ಅನ್ನಿಸ್ತು ನನಗೆ. ಇದು ಸುಮ್ಮನೆ ಅವರು ಹೇಳಿದ ಮಾತಿಗೆ ಸೇರ್ಪಡೆಯಾಗಿ, ವಿರೋಧವಾಗಿ ಅಲ್ಲ.

ಅದು ಏನು ಅಂದರೆ, ಬೆಂಗಳೂರು ನಗರ ಒಂದರಲ್ಲೇ ಈವಾಗ ಸುಮಾರು ಒಂದು ಲಕ್ಷ ಜನ ಆ ರೀತಿಯ ಹೆಣ್ಣು ಮಕ್ಕಳಿದ್ದಾರೆ. ಅವರು ರಾತ್ರಿಯಲ್ಲಿ ಎಷ್ಟೆಷ್ಟೋ ಹೊತ್ತಿಗೆ ಕೆಲಸಕ್ಕೆ ಹೋಗಿ ಬೆಳಿಗ್ಗೆ ವಾಪಾಸು ಮನೆಗೆ ಬರುವವರು. ಪ್ರತಿಭಾ ಥರ ರಾತ್ರಿ ಸುಮಾರು ೨ ಗಂಟೆಗೆ ಕೆಲಸಕ್ಕೆ ಹೋಗಿ ಬೆಳಿಗ್ಗೆ ಹನ್ನೊಂದು ಗಂಟೆ ಸುಮಾರಿಗೆ ಮನೆಗೆ ವಾಪಸು ಬರುವವರು. ನಮ್ಮಂಥವರ ಲೆಕ್ಕಾಚಾರದ ಪ್ರಕಾರ ಕೈತುಂಬಾ ಸಂಬಳ ಪಡೀತಾರೆ ಅನ್ನುವಷ್ಟು, ಒಳ್ಳೆಯ ಸಂಬಳ ಪಡೆಯುವವರು. ಕಡಿಮೆ ಅಂದರೆ ತಿಂಗಳಿಗೆ ೧೦ರಿಂದ ೨೦ ಸಾವಿರದಷ್ಟು. ಮತ್ತೆ, ಅವರೆಲ್ಲಾ ವಿದ್ಯಾವಂತರು, ಯಂಗ್ ಪೀಪ್‌ಲ್, ಯುವತಿಯರು. ಬೀಡಿ ಕಟ್ಟುವ ಯುವತಿಯರ ಹಾಗೋ, ಗೇರುಬೀಜ ಕಾರ್ಖಾನೆಗೆ ಕೆಲಸಕ್ಕೆ ಹೋಗುವ ಯುವತಿಯರ ಹಾಗೋ, ಕಟ್ಟಡ ಕೆಲಸ, ಮನೆಕೆಲಸ ಮಾಡುವ ಯುವತಿಯರ ಹಾಗೋ ಅಲ್ಲ. ನೋಡಲಿಕ್ಕೆ ಕೂಡಾ ಹೆಚ್ಚು ನಾಜೂಕು. ಇಂಗ್ಲಿಷ್ ಮೇಲೆ ಪ್ರಭುತ್ವ ಇರುವವರು. ಆಧುನಿಕ ತಂತ್ರಜ್ಞಾನದ ತಕ್ಕ ಮಟ್ಟಿನ ಹೊಕ್ಕು ಬಳಕೆ ಇರುವವರು. ಕೈಯಲ್ಲಿ ಮೊಬೈಲ್ ಫೋನ್ ಅನ್ನುವ ಆಯುಧ/ ಆಟಿಗೆ ಇರುವವರು. ಇನ್‌ಫ್ಯಾಕ್ಟ್, ಇವತ್ತಿನ ಗ್ಲೋಬಲೈಸಿಂಗ್ ಮೆಕೆನಿಸಮ್ ಏನಿದೆ ಅದರಲ್ಲಿ ಮುಖ್ಯ ಪಾತ್ರಧಾರಿಗಳಾಗಿರುವವರು. ಇದರ

ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾದ್ದಿದೆ, ಯಾಕೆಂದರೆ ಇದಕ್ಕೆ ಸಂಬಂಧ ಪಟ್ಟ ಹಾಗೆ ಹಲವಾರು ವಿಷಯ ಹೇಳೋದಿದೆ.

ಮೊದಲನೆಯದ್ದು ಏನು ಅಂದರೆ, ಸಾಂಪ್ರದಾಯಿಕವಾಗಿ ಹೇಗೆ ಕೆಲಸಗಳ ವರ್ಗೀಕರಣ ಆಗಿ ಹೆಂಗಸರನ್ನು ಮನೆಗಳಿಗೆ ಗಂಟು ಹಾಕುವ ಒಂದು ಫೆಮಿನೈಸೇಶನ್ ಆಫ್ ಲೇಬರ್ ಅಂತ ಏನು ಕರೀತಾರೆ, ಅದಷ್ಟೇ ಅಲ್ಲದೇ ಕೈಗಾರಿಕೀಕರಣ, ಆಧುನೀಕರಣ ಅಂತೆಲ್ಲಾ ಶುರುವಾದ ಮೇಲೆ ಒಂದು ಹೊಸ ರೀತಿಯ ಫೆಮಿನೈಸೇಶನ್ ಆಫ್ ಲೇಬರ್ ಶುರು ಆಯ್ತು. ಉದಾಹರಣೆಗೆ, ೧೯ನೇ ಶತಮಾನದಾದ್ಯಂತ ಕೈಗಾರಿಕಾ ಕ್ರಾಂತಿ ಶುರುವಾದ ಎಲ್ಲಾ ದೇಶಗಳಲ್ಲೂ, ಇಂಗ್ಲೆಂಡೂ ಸೇರಿದ ಹಾಗೆ, ಈಗಲೂ ಕೂಡಾ, ಸ್ಕೂಲ್ ಟೀಚರ್ಸ್ಸ್ ಹೆಣ್ಣು ಮಕ್ಕಳು, ಟೆಲಿಫೋನ್ ಆಪರೇಟರ್ಸ್ ಹೆಣ್ಣು ಮಕ್ಕಳು, ದಾದಿಯರು ಹೆಣ್ಣು ಮಕ್ಕಳು, ಟೈಪಿಸ್ಟ್ಸ್ ಹೆಣ್ಣು ಮಕ್ಕಳು ಇತ್ಯಾದಿ. ಈ ಉದ್ಯೋಗಗಳೆಲ್ಲಾ ಒಂದು ರೀತಿಯ ಸುಖೀ ಮತ್ತು ಕೀಳು ಉದ್ಯೋಗಗಳು ಅಂತ ಅನಿಸಿಕೊಂಡಂಥ ಉದ್ಯೋಗಗಳು. ಆದರೆ ಹೊಸ ಸಮಾಜಕ್ಕೆ ಅನಿವಾರ್ಯವಾಗಿರುವ ಕೆಲಸಗಳು ಕೂಡಾ ಹೌದು. ಶ್ರಮ ಹಾಗೂ ಅದಕ್ಕಿಂತ ಹೆಚ್ಚು ಅಚ್ಚುಕಟ್ಟು, ಈ ಕೆಲಸಗಳ ಸ್ವರೂಪ. ಆದರೆ ಅವುಗಳ ಸಾಮಾಜಿಕ ಸ್ಥಾನಮಾನ, ಸಂಬಳ ಬಹಳ ಆಕರ್ಷಕ ಅಲ್ಲ. ನಿಜ, ಈ ಉದ್ಯೋಗಗಳು ಸ್ತ್ರೀಯರಿಗೆ ಅವಕಾಶಗಳನ್ನು ಕೊಡುತ್ತವೆ, ಮನೆಯಿಂದ ಹೊರಗೂ ಹೊರಡಿಸುತ್ತವೆ. ಆದರೆ ಲಿಂಗತಾರತಮ್ಯವನ್ನು ಆ ಹೊಸ ಸಮಾಜದಲ್ಲಿ ಅಚ್ಚೊತ್ತಿ ಕೂಡ ಇರುತ್ತವೆ. ಇದರದ್ದೇ ಒಂದು ಮುಂದುವರಿದ ರೂಪವಾಗಿ, ಸುಮಾರು ಒಂದು ಲಕ್ಷ ಅಂತ ಹೇಳಿದೆನಲ್ಲಾ, ಆ ಹೆಣ್ಣು ಮಕ್ಕಳು ಬೆಂಗಳೂರಿನಲ್ಲಿದ್ದಾರೆ.

ಕೆಲವು ವರ್ಷಗಳ ಹಿಂದೆ, ಅರುಂಧತಿರಾಯ್, ಲೇಖಕಿ, ಬಹಳ ದೊಡ್ಡ ಹೋರಾಟಗಾರ್ತಿ ಆಕೆ, ವನ್ ಆಫ್ ಅವರ್ ಫೈನೆಸ್ಟ್ ಥಿಂಕರ್ಸ್ ಎಂಡ್ ಆ್ಯಕ್ಟಿವಿಸ್ಟ್ಸ್, ಆಕೆ ಒಂದು ಲೇಖನದಲ್ಲಿ ಇದರ ಬಗ್ಗೆ ಹೇಳಿದ್ದಾಳೆ. ಕಾಲ್ ಸೆಂಟರ್ಸ್, ಬ್ಯುಸಿನೆಸ್ ಪ್ರೋಸೆಸಸ್ ಔಟ್‌ಸೋರ್ಸಿಂಗ್ (ಬಿಪಿಒ) ಬಗ್ಗೆ. ಅದು ಇಂಡಿಯಾದಲ್ಲಿ ಕಾಲ್ ಸೆಂಟರ್ಸ್ ಶುರುವಾಗುತ್ತಿದ್ದ ಸಮಯದಲ್ಲಿ. ಈ ಪ್ರತಿಭಾ ಅನ್ನುವವಳು, ನೋಡಿ, ಅದು ಎಷ್ಟು ರೀತಿಯಲ್ಲಿ ಹಿಂಸೆಗಳ ಒಂದು ಕ್ರೋಢೀಕೃತ ಮೊತ್ತವಾಗಿದ್ದಾಳೆ ಆಕೆ ಅಂದರೆ, ಆ ವಿಷಯ ವೈದೇಹಿಯವರ ಮಾತುಗಳಲ್ಲಿ ಪ್ರಸ್ತಾಪ ಆಗಲಿಲ್ಲ ಅನ್ನುವ ಕಾರಣಕ್ಕಾಗಿ ಇದನ್ನು ಹೇಳುತ್ತಾ ಇರೋದು. ಅವಳು, ಪ್ರತಿಭಾ, ಕೆಲಸಕ್ಕೆ ಹೋಗುವುದು ರಾತ್ರಿ ಹೊತ್ತು, ಅಪರಾತ್ರಿ. ಒಂದು ನಿಶಾಚರ ವರ್ಗವೇ ನಮ್ಮಲ್ಲಿ ಸೃಷ್ಟಿಯಾಗಿದೆ. ಅದು ಗ್ಲೋಬಲೈಸೇಶನನ್ನು ಸಾಕಲಿಕ್ಕೆ. ಅಮೆರಿಕಾದಂಥ ದೇಶಗಳ ಟ್ರಾನ್ಸ್‌ನ್ಯಾಶನಲ್ ಕಂಪೆನಿಗಳೇನಿವೆ ಅವರು ಕೆಲವು ಉದ್ಯೋಗಗಳನ್ನು ಔಟ್ ಸೋರ್ಸ್ (ಹೊರಗುತ್ತಿಗೆ) ಮಾಡಿದ್ದಾರೆ. ಅವನ್ನ ನಮ್ಮಂಥ ದೇಶಗಳಿಗೆ ಕೊಟ್ಟಿದ್ದಾರೆ. ಅವು ಎಂಥ ಉದ್ಯೋಗಗಳು ಅಂತ ನೋಡಿದರೆ, ಗ್ಲೋಬಲೈಸೇಶನನ್ನು ಸಾಕುವವರು ನೀವಾದರೂ, ಗ್ಲೋಬಲೈಸೇಶನ್ ಮಾತ್ರ ನಿಮ್ಮ ಕೈವಶ ಅಲ್ಲ. ನಿಮ್ಮ ಶ್ರಮ, ಅಚ್ಚುಕಟ್ಟು, ಬಾಚೋದು, ತೊಳೆಯೋದು, ಅಂಗಿ ಚಡ್ಡಿ ಶೂ ಹಾಕಿ

ರೆಡಿ ಮಾಡೋದು ನೀವು. ಮೆರೆಯೋದು ಮಾತ್ರ ನೀವಲ್ಲ. ಈಗ ಮುಂದುವರಿದ ದೇಶಗಳಿಗೂ ನಮ್ಮಂಥ ದೇಶಗಳಿಗೂ ಇರುವ ಸಂಬಂಧ, ಸಾಮ್ರಾಜ್ಯಶಾಹಿಗೂ ನಮಗೂ ಇರುವ ಸಂಬಂಧ. ಅಥವಾ ವಸಾಹತುಶಾಹಿ ಇದ್ದ ಕಾಲದಲ್ಲಿ ವಸಾಹತುಶಾಹಿಗೂ ಮತ್ತು ಅದಕ್ಕೆ ಒಳಗಾದವರಿಗೂ ಇರುವ ಸಂಬಂಧ ಕೂಡಾ ಇದೇ ರೀತಿಯ ಲಿಂಗ ತಾರತಮ್ಯದ ಭಾಗ, ಆ ಮಾದರಿ ಏನಿದೆ ಅದನ್ನೇ ಹೋಲುವಂಥದ್ದು. ಈ ಹೊತ್ತಿನ ಮಾದರಿ ಕೂಡ ಅದೇ. ಅಮೆರಿಕಾದ ಎದುರು ಭಾರತದ ಪರಿಸ್ಥಿತಿ ಅದೇ. ಅಮೆರಿಕಾದ ಎದುರು ಇರಾಕಿನ ಪರಿಸ್ಥಿತಿ ಇದೇ. ಅಮೆರಿಕಾದ ಎದುರು ಅಫ್ಘಾನಿಸ್ತಾನದ ಪರಿಸ್ಥಿತಿ ಇದೇ. ಅಂಥದ್ದರ ಒಂದು ಅಂಗವಾಗಿ ಇವರು, ಪ್ರತಿಭಾಸಂಥವರು, ನಿಶಾಚರಿಗಳಾಗಿ ಮಾರ್ಪಾಟಾಗಿದ್ದಾರೆ. ಹಗಲುಗಳನ್ನು ಕಳಕೊಂಡಿದ್ದಾರೆ.

ನಮ್ಮ ದೃಷ್ಟಿಯಲ್ಲಿ ಅವರು ಅತ್ಯಂತ ಒಳ್ಳೆಯ ಸಂಬಳ ಪಡೆಯುವವರು, ನಿಜ. ಆದರೆ ಅಮೆರಿಕಾದವರಿಗೆ ಇದೇ ಚೀಪ್ ಲೇಬರ್. ಇವರು ಅಗ್ಗದಲ್ಲಿ ಸಿಗುವ ಕೆಲಸಗಾರರು. ಅವರ ಮೇಲೆ ಅಮೆರಿಕಾ ಏನೂ ಇನ್‌ವೆಸ್ಟ್ ಕೂಡಾ ಮಾಡಬೇಕಾಗಿಲ್ಲ. ಯಾವ ಮಲ್ಟಿನ್ಯಾಶನಲ್ ಕಾರ್ಪೋರೇಶನ್‌ನವರೂ ಇನ್‌ವೆಸ್ಟ್ ಮಾಡಬೇಕಾಗಿಲ್ಲ. ಅದೆಲ್ಲಾ ಇಲ್ಲೇ ತಯಾರಾಗಿರುತ್ತೆ. ಅವರ ಓದು, ಬರಹ, ಅವರಿಗೆ ಬೇಕಾದ ಇನ್‌ಫ್ರಾಸ್ಟ್ರಕ್ಚರ್‌ಗಳು ನಮ್ಮ ದೇಶಗಳಲ್ಲೇ ಇರುತ್ತೆ. ಅದನ್ನು ಬಳಸಿಕೊಂಡು ಅವರು ಅದು ಹೇಗೋ ತಯಾರಾಗಿರುತ್ತಾರಲ್ಲಾ, ಹಾಗೆ ತಯಾರಾಗಿ ಅವರು ಮಲ್ಟಿನ್ಯಾಶನಲ್‌ಗಳಿಗಾಗಿ ದುಡೀತಾರೆ. ಆದರೆ, ಡಾಲರ್‌ಗಳಲ್ಲಲ್ಲ, ರೂಪಾಯಿಗಳಲ್ಲಿ ಸಂಬಳ ಎಣಿಸುತ್ತಾರೆ.

ಅವರು ರಾತ್ರಿ ಹೊತ್ತು ಯಾಕೆ ದುಡೀತಾರೆ ಅಂದರೆ, ಅಮೆರಿಕಾದಂಥ ದೇಶವಲ್ಲಿ ಹಗಲು ಬೆಳಕಿಗೆ ಕಾಂತಿ ಬರಲಿ ಅಂತಲೇ ಹೊರತು ನಮ್ಮ ದೇಶದಲ್ಲಿ ಹೆಣ್ಣುಮಕ್ಕಳು ರಾತ್ರಿ ಹೊತ್ತು ನಿರ್ಭಯವಾಗಿ ಓಡಾಡಲಿ ಅನ್ನುವ ಕಾರಣಕ್ಕಾಗಿ ಅಲ್ಲ. ಎಲ್ಲಿಯ ಗಾಂಧಿ ಎಲ್ಲಿಯ ಅಮೆರಿಕಾ ಸರ್ಕಾರ? ಅಲ್ಲದೇ, ಇದೂ ನಾವು ಗಮನಿಸಬೇಕಾದ್ದು. ರಾತ್ರಿ ಹೊತ್ತು ಕೆಲಸಕ್ಕಾಗಿ ಹೋಗುವ ಈ ಹೆಣ್ಣು ಮಕ್ಕಳೆಲ್ಲಾ ಎಲ್ಲಿಗೆ ಹೋಗ್ತಾ ಇದ್ದಾರೆ. ಅವರು ಝುಗಝುಗಿಸುವ, ಜಾಗತೀಕರಣದ ಕೋರೈಸುವ ಬೆಳಕಿರುವ ಪ್ರದೇಶಗಳಿಗೆ ಮಾತ್ರ, ನಮ್ಮ ದೇಶದೊಳಗೆ ತಯಾರಾಗಿರುವ ದುಡಿಮೆಯ ಇಂಥ ದ್ವೀಪಗಳಿಗೆ ಮಾತ್ರ, ಹೋಗಬಹುದು ಅವರು. ಅಲ್ಲೂ ಅವರು ಸೇಫ್ ಅಲ್ಲ, ಪ್ರತಿಭಾ ಥರ, ನಿಜ, ಆದರೆ ಆ ಕೋರೈಸುವ ಬೆಳಕಿಗೆ ಹೋಗ್ತಾ ಇದ್ದಾರೆ ಅವರು. ಬೇರೆ ಪ್ರದೇಶಗಳಿಗೆ ಅವರಿಗೆ ಇಂದಿಗೂ ಪ್ರವೇಶ ಇಲ್ಲ. ಹಗಲಲ್ಲೂ ಕೂಡ. ಮಬ್ಬು ಬೆಳಕಿನಲ್ಲಿ, ಕತ್ತಲೆ ಕೂಪದಲ್ಲಿ ಸಿಕ್ಕಿಹಾಕಿಕೊಂಡ ಹೆಣ್ಣುಮಕ್ಕಳ ದೊಡ್ಡದೊಂದು ಲೋಕ ಏನಿದೆ, ಅದನ್ನು ಕೂಡಾ ಇವರು ಪ್ರತಿನಿಧಿಸಲಾರರು. ಹಾಗಂತ, ಅವರು ಬೆಳಕಿಗೆ ನಡೆದರು ಅಂತ ಕೂಡಾ ಹೇಳುವಂತಿಲ್ಲ.

ರಾತ್ರಿ ಹೊತ್ತು ಇವರು ಯಾಕೆ ಕೆಲಸಕ್ಕೆ ಹೋಗುತ್ತಾರೆ ಅಂದರೆ, ಅಮೆರಿಕಾ ಮತ್ತು ಯುರೋಪ್ ಮುಂತಾದ ಕಡೆಗಳಿಂದ ಬರುವ ಕರೆಗಳಿಗೆ ವಿದೌಟ್ ಎ ಟೈಂ ಲ್ಯಾಗ್, ಸಮಯದ

ಲ್ಯಾಗ್ ಇರದ ಹಾಗೆ, ಸಮಯದ ಜಿರುಕು ಇಲ್ಲದ ಹಾಗೆ ತಕ್ಷಣ ಉತ್ತರ, ಪ್ರತಿಕ್ರಿಯೆ ಕೊಡುವ ಹಾಗಿರಬೇಕು ಅವರು. ಅಲ್ಲಿ ಹಗಲಾದಾಗ ಇಲ್ಲಿ ರಾತ್ರಿ ಆಗಿರುತ್ತಲ್ಲ, ಅದಕ್ಕೋಸ್ಕರ. ಅಲ್ಲಿನ ಹಗಲನ್ನು ಇವರು ಅಡ್ರೆಸ್ ಮಾಡುತ್ತಾ ಇರೋದು.

ಆಮೇಲೆ, ಪ್ರತಿಭಾ ಅನ್ನೋದು ನಮಗೆ ನಿಮಗೆ ಗೊತ್ತಿರುವಂಥ ಹೆಸರು. ಸ್ಥಳೀಯ ಹೆಸರು. ಅವಳ ಉದ್ಯೋಗದಲ್ಲಿ ಆ ಹೆಸರಿಲ್ಲ. ಅವಳು ಪ್ರ್ಯಾತಿ, ಮೇರಿ, ಲೂಸಿ ಎಂಥದ್ದೋ ಒಂದು ಆಗಿರುತ್ತಾಳೆ. ಅಂದರೆ, ಅವಳು ತನ್ನ ಹೆಸರನ್ನ ಬದಲಾಯಿಸಿಕೊಳ್ಳಬೇಕು. ಯಾಕೆ ಹೆಸರನ್ನು ಬದಲಾಯಿಸಿಕೊಳ್ಳಬೇಕು ಅಂದರೆ, ಅವಳು ಯಾವ ಕಸ್ಟಮರ್ಸ್‌ಗೆ ಆನ್ಸರ್ ಮಾಡುತ್ತಾ ಇರುತ್ತಾಳೋ, ಆ ಕಸ್ಟಮರ್ಸಿಗೆ ತಾವು ತಮ್ಮದೇ ದೇಶದ ಅಥವಾ ರೀತಿ ರಿವಾಜುಗಳ ಜನರ ಜೊತೆಗೆ ಮಾತಾಡುತ್ತಾ, ವ್ಯವಹರಿಸುತ್ತಾ ಇದ್ದೇವೆ ಅಂತ ಅನ್ನಿಸಬೇಕು. ಗ್ರಾಹಕರೇ ಈ ಕಾಲದ ದೊರೆಗಳು, ಅವರಿಗೆ ಕಲ್ಚರಲ್ ಶಾಕ್ ಆದರೆ ಗ್ಲೋಬಲೈಸೇಶನ್ ಸಹಿಸೋದಿಲ್ಲ, ಅದಕ್ಕೋಸ್ಕರ. ಹಾಗಾಗಿ ಅವರು, ಪ್ರತಿಭಾ ಥರದವರು, ಮರುನಾಮಕರಣಗೊಂಡಿರುವ ಜನರು. ಮತ್ತು ಅವರ ಓದು, ಬರಹ. ಭಾಷೆ, ಉಚ್ಚಾರ, ತಿಳುವಳಿಕೆ ಎಲ್ಲವೂ ಅದಕ್ಕೆ ಲಗಾವಾಗಿರಬೇಕು. ಅವರು ಯಾವ ದೇಶದ ಕಸ್ಟಮರ್ಸ್ ಜೊತೆಗೆ ಮಾತಾಡುತ್ತಾರೋ, ಉದಾಹರಣೆಗೆ ಕಸ್ಟಮರ್ಸ್ ಅಮೆರಿಕಾದವರು ಅಂತ ಆದರೆ, ಅಮೆರಿಕಾದ ಸಿನೆಮಾಗಳ ಬಗ್ಗೆ, ಹವಾಮಾನದ ಬಗ್ಗೆ, ಅಮೆರಿಕಾದ ನ್ಯೂಸ್ ಪೇಪರುಗಳಲ್ಲಿ ಏನು ಗಾಸಿಪ್ ಬರುತ್ತಾವೆ ಅವರ ಬಗ್ಗೆ, ಆ ವಿಷಯಗಳನ್ನೆಲ್ಲಾ ತಿಳಿದುಕೊಂಡಿರಬೇಕಾಗುತ್ತದೆ. ಸೋದಟ್, ದ ಕ್ಯಾನ್ ಸ್ಪೀಕ್ ಟು ದಯರ್ ಕಸ್ಟಮರ್ಸ್ ಇನ್ ಎ ಲ್ಯಾಂಗ್ವೇಜ್ ಎಂಡ್ ವಿಲ್‌ಡೂ ಅಂಡರ್ಸ್ಟ್ಯಾಂಡ್.

ಅವನ್ಯಾವನೋ ಅಮೆರಿಕಾದಿಂದ ಫೋನ್ ಮಾಡುತ್ತಾನೆ ಅಂತ ಇಟ್ಟುಕೊಳ್ಳಿ. ಫೋನ್ ಮಾಡುತ್ತಾನೆ. ಒಂದು ೧೦-೧೫ ನಿಮಿಷ ಅವನನ್ನ ಅವನ ರೀತಿಯ ಇಂಗ್ಲಿಷಲ್ಲಿ ನೀವು ಆಟ ಆಡಿಸಬೇಕು, ಅವನು ಹೇಳುವ ತಲೆಬುಡ ಇಲ್ಲದ ಮಾತುಗಳಿಗೆ ಪ್ರತಿಕ್ರಿಯೆ ಕೊಡುತ್ತಾ ಚ್ಯಾಟ್ ಮಾಡಬೇಕು, ಒಂದು ೧೫ ನಿಮಿಷ. ಆಮೇಲೆ, ಅಷ್ಟೆಲ್ಲಾ ಆದ ಮೇಲೆ, ಅವನು ಕೇಳುತ್ತಾನೆ, ನಮ್ಮದು ವಾಷಿಂಗ್ ಮೆಷಿನ್ ಕೆಲಸ ಮಾಡುತ್ತಾ ಇಲ್ಲ. ಏನು ಮಾಡಬೇಕು ಅಂತ. ಆಗ ನೀವು ಹೇಳಬೇಕು. ಸ್ವಿಚ್ ಹಾಕಿ ಅಂತ. ಅಲ್ಲಿಗೆ ಮುಗಿಯಿತು. ಈ ಸೌಭಾಗ್ಯಕ್ಕೆ ೨೦ ಸಾವಿರ ರೂಪಾಯಿಯಷ್ಟು ಸಂಬಳ ಅವರಿಗೆ. ಸಂಬಳ ಕೂಡಾ ರೂಪಾಯಿಯಲ್ಲೇ ಹೊರತು ಡಾಲರ್‌ನಲ್ಲಿಲ್ಲ. ಮತ್ತೆ, ರಾತ್ರಿ ಪಾಳಿಯಲ್ಲಿ ಹೋಗಿ ಅವರು ಕೆಲಸ ಮಾಡಬೇಕು. ಕತ್ತಲೆ ಖಂಡದವರಾದ ನಾವು ನಮ್ಮ ಕತ್ತಲೆ ಕಳಕೊಂಡು ಬೆಳಗಾಗುವವರೆಗೆ. ಸೂರ್ಯ ಮುಳುಗದ ದೇಶದ ಆ ಜನ ಕಾಯೋದು ಸಾಧ್ಯ ಇಲ್ಲ ನೋಡಿ, ಅದಕ್ಕೆ. ಹಾಗೇ ಅಮೆರಿಕಾದವರ ಹಬ್ಬ ನಿಮಗೆ ರಜಾದಿನ, ನಿಮ್ಮ ಹಬ್ಬ. ಇಡೀ ದೇಶ ಇಲ್ಲಿ ಸ್ವಾತಂತ್ರ್ಯ ದಿನಾಚರಣೆ ಮಾಡುತ್ತಾ ಇದ್ದರೆ, ಈ ದೇಶಕ್ಕೆ ಅರ್ಧ ರಾತ್ರೀಲಿ ಸ್ವಾತಂತ್ರ್ಯ ಬಂದದ್ದೇ ಅಪರಾಧ ಆಯ್ತು ಅನ್ನುವ ಹಾಗೆ ಇವರು ಅಪರಾತ್ರಿಯಲ್ಲಿ ಕೆಲಸಕ್ಕೆ ಹೊರಡಬೇಕು. ನಮಗೆ ಸ್ವಾತಂತ್ರ್ಯ ಬಂದರೂ ಬಿಟ್ಟರೂ ಅಮೆರಿಕಾಕ್ಕೇನು?

ಇದು ಇಡೀ ಜಗತ್ತಿನ ಎಷ್ಟೊಂದು ಭಾಗಗಳನ್ನ, ಭೂ ಪ್ರದೇಶಗಳನ್ನ ಮಾತ್ರವಲ್ಲ, ದೇಶಗಳನ್ನ, ದೇಶಗಳ ಕಾನೂನುಗಳನ್ನ, ರೀತಿ ರಿವಾಜುಗಳನ್ನ, ಮತ್ತು ದೇಶದ ಜನರ ಘನತೆಯನ್ನು ವಸಾಹತಾಗಿ ಪರಿವರ್ತಿಸಿಕೊಂಡು ಮಾಡುತ್ತಾ ಇರುವ ದೌರ್ಜನ್ಯ. ಅಂದರೆ, ಜಾಗತೀಕರಣ ಅನ್ನುವ ಒಂದು ವಿದ್ಯಮಾನ ಇದೆ. ಅತ್ಯಂತ ಆಕ್ರಮಣಶೀಲವಾಗಿ ಇರುವಂಥ ಬಂಡವಾಳಶಾಹಿ ಅದು. ಬಹಳ ನಾಜೂಕು ಕೂಡಾ. ಪ್ರತಿಭಾ ಅಂದರೆ ಬರೀ ಪ್ರತಿಭಾ ಅಲ್ಲ. ಗ್ಲೋಬಲೈಸೇಶನ್ ಅನ್ನುವ ರಾಕ್ಷಸ ಯಂತ್ರದ ಒಂದು ನಾಡಿ ಆಕೆ. ಮತ್ತೆ, ಬಂಡವಾಳಶಾಹಿ ಈ ಹೊತ್ತು ತೊಡಗಿರುವುದು, ಇದು ಜಾಗತೀಕರಣದ ಬಗ್ಗೆ ಹೇಳಬಹುದಾದ ಸರಿಯಾದ ಮಾತು ಅಂತ ನನಗೆ ಅನ್ನಿಸುತ್ತೆ, ಸೆಲೆಬ್ರೇಶನ್ ಆಫ್ ಸರ್ಫೇಸಸ್‌ನಲ್ಲಿ, ಹೊರಮೈಯ ವಿಜೃಂಭಣೆಯಲ್ಲಿ. ನೀವು ಎಂಟರ್‌ಟೈನ್‌ಮೆಂಟ್ ಇಂಡಸ್ಟ್ರಿ ನೋಡಿ, ಎಡ್ವರ್ಟೈಸ್‌ಮೆಂಟ್ ಇಂಡಸ್ಟ್ರಿ ನೋಡಿ, ಅದರಲ್ಲಿ ಸ್ತ್ರೀಯ ಪ್ರಾಧಾನ್ಯ ನೋಡಿ. ನಾವು ಹೆಚ್ಚು ಹೆಚ್ಚು ಆಧುನಿಕರಾಗುತ್ತಾ ಹೋದ ಹಾಗೆ ಸಂಪೂರ್ಣ ಹೊರಮೈ, ಒಳತಿರುಳುಗಳ ಒಬ್ಬ ವ್ಯಕ್ತಿ ಇಲ್ಲ. ಸರ್ಫೇಸ್ ಓನ್ಲಿ, ವೆರಿ ಗ್ಲೋಸ್ಸಿ, ವೆರಿ ಅಟ್ರ್ಯಾಕ್ಟಿವ್, ವೆರಿ ಸೆಡಕ್ಟಿವ್. ಆ ರೀತಿಯ ವ್ಯಕ್ತಿತ್ವವಾಗಿ ಅವಳು ಪರಿವರ್ತನೆ ಆಗುತ್ತಾಳೆ. ಅದು ಕೂಡಾ ಬಂಡವಾಳಶಾಹಿಯ ಉತ್ಪನ್ನಗಳನ್ನು ಮಾರ್ಕೆಟ್ ಮಾಡುವುದಕ್ಕೆ. ಅದಕ್ಕೋಸ್ಕರ ಮಾತ್ರ ಬಂಡವಾಳಶಾಹಿಗಳಿಗೆ ಅವಳು ಬೇಕು. ಬೇಕು ಅಂದರೆ ಹಾಗಲ್ಲ. ಯಾವ ಸ್ವರೂಪದಲ್ಲಿ ಬೇಕು ಅಂದರೆ, ದುಡಿಯುವವಳಾಗಿ. ಮತ್ತೆ, ದುಡಿಯೋದು ಅಂದರೆ, ತನ್ನ ಕೆಲಸಕ್ಕೆ ತನ್ನ ವ್ಯಕ್ತಿತ್ವದ ಛಾಪನ್ನು ಅಂಟಿಸಬಲ್ಲ ವ್ಯಕ್ತಿತ್ವ ಇರುವವಳಾಗಿ ಅಲ್ಲ. ಶಿ ಈಸ್ ದಿ ಕಮೊಡಿಟಿ. ಶಿ ಹ್ಯಾಸ್ ಬಿಕಮ್ ಕಂಪ್ಲೀಟ್ಲಿ ಕಮೊಡಿಫೈಡ್. ಶಿ ಈಸ್ ಒನ್ ಕಮೊಡಿಟಿ ಮಾರ್ಕೆಟಿಂಗ್ ಎನದರ್. ಅವಳು ಒಂದು ವಸ್ತುವಾಗಿ, ಸಂಪೂರ್ಣ ವಸ್ತುವಾಗಿ ಪರಿವರ್ತನೆಯಾಗಿರುವಂಥವಳು. ಇತರ ವಸ್ತುಗಳನ್ನ ಇನ್ನಷ್ಟು ಆಕರ್ಷಕಗೊಳಿಸಬಲ್ಲ, ಮಾರಾಟ ಮಾಡುವ ಇನ್ನೊಂದು ವಸ್ತುವಾಗಿ. ಈ ಎರಡೂ ವಸ್ತುಗಳ ಹೊರಮೈ ಸೇರಿ ಬಂಡವಾಳಶಾಹಿ ಉತ್ಪನ್ನಗಳಿಗೆ ಇಲ್ಲದ ಒಳಮೈಯೊಂದು ಪ್ರಾಪ್ತವಾಗುತ್ತದೆ. ವಸ್ತುಗಳಿಗೇ ವ್ಯಕ್ತಿತ್ವ ಪ್ರಾಪ್ತವಾಗುತ್ತದೆ. ಪ್ರತಿಭಾಳಂಥ ವ್ಯಕ್ತಿಗಳ ವ್ಯಕ್ತಿತ್ವ ವಸ್ತುಗಳಲ್ಲಿ ಇನ್‌ವೆಸ್ಟ್ ಆಗುತ್ತದೆ. ಅವಳು ಕೇವಲ ಮಧುರ ಸ್ವರವಾಗಿ ಟೆಲಿಫೋನ್‌ನಲ್ಲಿ ಮಾತಾಡೋದು ಏನಿದೆ, ಈಮೆಯಿಲ್‌ನಲ್ಲಿ ನಾಜೂಕಾಗಿ ಚ್ಯಾಟ್ ಮಾಡೋದು ಏನಿದೆ, ಅಥವಾ ಚಿತ್ರವಾಗಿ ಎಡ್ವರ್ಟೈಸ್‌ಮೆಂಟಿನಲ್ಲಿ ನೀವು ಕ್ಲೀನ್ ಬೌಲ್ಡ್ ಆಗೋ ಹಾಗೆ ಕಾಣಿಸಿಕೊಳ್ಳುವುದು ಏನಿದೆ, ಇದು ಬಂಡವಾಳಶಾಹಿಯನ್ನು ಸಾಕಲಿಕ್ಕೆ ಇರುವ ವಸ್ತುವಾಗಿ ಆಕೆ ಪರಿವರ್ತನೆಯಾಗಿರುವ ಪ್ರಕ್ರಿಯೆ. ಇದರಲ್ಲಿ ಆಕೆಯ ಕಂಪ್ಲೀಟ್ ಕಮೋಡಿಫಿಕೇಶನ್ ಆಗಿದೆ. ಇದರಲ್ಲಿ ಅವಳು, ವ್ಯಕ್ತಿತ್ವವಿಲ್ಲದ ಕೇವಲ ಹೊರಮೈ ಮಾತ್ರ. ಅಥವಾ ಅವಳ ಹೊರಮೈಯೇ ಅವಳ ವ್ಯಕ್ತಿತ್ವ.

ವಾಲ್ಟರ್ ಬೆಂಜಮಿನ್ನನನ್ನು ಓದಿರುವವರಿಗೆ ನಾನು ಹೇಳುತ್ತಿರುವುದು ಹೆಚ್ಚು ಅರ್ಥವಾಗುತ್ತದೆ ಅನ್ನಿಸುತ್ತೆ. ಅವನು, ಹೇಗೆ ಫೋಟೋಗ್ರಫಿ, ಸಿನೆಮಾಗಳೆಲ್ಲಾ ಬಂದ ಮೇಲೆ, ಎಷ್ಟು ಬೇಕಾದರೂ ಪ್ರತಿಗಳನ್ನು ಆ ಮೂಲಕ ತೆಗೆಯಲು ಸಾಧ್ಯವಾದ ಮೇಲೆ, ಕಲಾವಿದನೊಬ್ಬ,



ಕಣ್ಮರೆಗೊಳಿಸಲ್ಪಟ್ಟ, ಪ್ರತಿಭಾ

ಕ್ಯಪ್ಯಾರೆ ಬಿಡಿಸಿದ ವರ್ಣಚಿತ್ರಗಳ ಕಾಲದಲ್ಲಿ ನಾವು ರೂಢಿಸಿಕೊಂಡ ಒರಿಜಿನಲ್‌ನ ಕಲ್ಪನೆ ಹೊರಟು ಹೋಗಿ, ಬರೀ ಹೊರಮ್ಮೆ ಅನ್ನುವುದು ಬಹಳ ಸೆಡಕ್ಟಿವ್ ಆಗುತ್ತೆ, ಅಂದರೆ ನಮ್ಮನ್ನು ಮೋಹ ಪರವಶಗೊಳಿಸುವ ವಸ್ತುವಾಗಿ ಪರಿವರ್ತನೆ ಹೊಂದುತ್ತೆ ಅಂತ ಬರೆದಿದ್ದಾನೆ. ಮೊನಾಲಿಸಾ ವರ್ಣಚಿತ್ರದ ಲಕ್ಷಾಂತರ ಉತ್ಕೃಷ್ಟ ಪ್ರತಿಗಳನ್ನು ಈಗ ತಯಾರಿಸಬಹುದು. ಅವೆಲ್ಲಾ ನಮ್ಮ ಭಾಷೆಯಲ್ಲಿ ಡೂಪ್ಲಿಕೇಟ್ಸ್. ಆದರೆ, ಈ ಡೂಪ್ಲಿಕೇಟ್ಸೇ, ಈ ಹೊರಮ್ಮೆಯೇ ಈ ಕಾಲದ ವೈಭವಯುತ ಸರಕು. ಎಲ್ಲರೂ ಮುಗಿಬೀಳುವುದು ಅದಕ್ಕೇ. ಇದೊಂದು ಅಪರಾಧ ಅಂತ ಅಲ್ಲ. ಪ್ರತಿಗಳನ್ನ ತಯಾರಿಸುವ ಸೌಲಭ್ಯ ಪಡೆದವರು ಯಾರು, ಅವರ ಉದ್ದೇಶ ಏನು ಅನ್ನುವ ಪ್ರಶ್ನೆ. ಆ ಸೌಲಭ್ಯ ಇರುವುದು ಈ ಕಾಲದ ಬಂಡವಾಳಶಾಹಿಯಲ್ಲಿ. ಮೂಲದಿಂದ ಬಿಡುಗಡೆಗೊಂಡ ನಕಲುಗಳನ್ನ, ಹೊರಮ್ಮೆಗಳನ್ನ ಇವತ್ತು ಬಂಡವಾಳಶಾಹಿ ನಮಗೇ ವಾಪಾಸು ಮಾರುತ್ತಿದೆ ಅಂತ ಇದರ ತಾತ್ಪರ್ಯ. ವರ್ಕ್ ಆಫ್ ಆರ್ಟ್ ಇನ್ ದಿ ಏಜ್ ಆಫ್ ಮೆಕ್ಯಾನಿಕಲ್ ರಿಪ್ರೊಡಕ್ಷನ್ ಅಂತ ಬಹಳ ಪ್ರಸಿದ್ಧವಾದ ಲೇಖನದಲ್ಲಿ ವಾಲ್ಟರ್ ಬೆಂಜಮಿನ್ ಇದನ್ನು ಬರೆದಿದ್ದಾನೆ. ಅದರದ್ದೇ ಒಂದು ಮುಂದುವರಿದ ಮಾದರಿ ಇದು ಅಷ್ಟೇ.

ಹಾಗಾಗಿ ನಾವು ಪ್ರತಿಭಾಳ ವಿಷಯ ಮಾತಾಡುವಾಗ ಇದೊಂದು ನೆನಪಿನಲ್ಲಿ ಇಡಬೇಕಾದ ವಿಷಯ. ಯಾಕೆಂದರೆ, ದೌರ್ಜನ್ಯ ಅನ್ನೋದು ಯಾವನೋ ಡ್ರೈವರ್ ಮಾಡಿರೋ ದೌರ್ಜನ್ಯ ಅಲ್ಲ ಅದು. ಇದರಲ್ಲಿ ದೇಶಗಳು ಶಾಮಿಲಾಗಿರೋದು ಇದೆ. ಮಲ್ಟಿನ್ಯಾಶನಲ್ ಕಂಪೆನಿಗಳು ಶಾಮೀಲಾಗಿರೋದಿದೆ. ಹೊಸ ತಂತ್ರಜ್ಞಾನ ಹಳೆ ಸಮಾಜವನ್ನು ಬಗ್ಗುಬಡೀತಾ ಇರುವ ಬಂಡವಾಳಶಾಹಿ ಇದೆ. ನೋಡಿ, ಸರಕಾರವನ್ನು ನಾವು ಅಷ್ಟೆಲ್ಲಾ ಬಯ್ಯಬಹುದು. ನಿಜ, ಸರಕಾರದ ಪಾತ್ರ ತುಂಬಾ ಇದೆ. ಇದರಲ್ಲಿ ಗ್ಲೋಬಲೈಸೇಶನನ್ನ ಮಣೆಹಾಕಿ ಕರಕೊಂಡು ಬರೋದ್ರಲ್ಲಿ, ಐಟಿ ಕಂಪೆನಿಗಳಿಗೆ ಹೋಗುವ ರಸ್ತೆಗಳನ್ನ ಮಾತ್ರ ಸರಿ ಮಾಡುವುದರಲ್ಲಿ, ಅವರಿಗೆ ತೆರಿಗೆ ವಿನಾಯಿತಿ, ಸುಲಭದಲ್ಲಿ ನೆಲಜಲ ಒದಗಿಸೋದರಲ್ಲಿ, ಇದೇ ಈ ದೇಶದ ದೊಡ್ಡ ಜವಾಬ್ದಾರಿ ಅನ್ನುವ ಥರ ಮಾಡುವುದರಲ್ಲಿ, ಇದೆ ನಿಜ. ಆದರೆ ನಿಮಗೆ ಗೊತ್ತಿರಬಹುದು. ಪ್ರತಿಭಾಳ ಕೇಸಿನಲ್ಲಿ, ಅವಳು ಬೇರೆ ಕಾರಿನಲ್ಲಿ ಕೂತದ್ದನ್ನ, ಮಾಮೂಲಾಗಿ ಬರುತ್ತಾ ಇದ್ದ ಡ್ರೈವರ್ ತನಗೆ ಗೊತ್ತಾದ ತಕ್ಷಣವೇ ಕಂಪೆನಿಗೆ ಇನ್‌ಫಾರ್ಮ್ ಮಾಡಿದ್ದಾನೆ. ಹಾಗಾಗಿ, ಕಂಪೆನಿಗೆ ಅದರ ಇನ್ಫೋರ್ಮೇಷನ್ ಇತ್ತು. ಆದರೆ, ಕಂಪೆನಿಯವರು ಅದರ ಆಧಾರದ ಮೇಲೆ ಏನೂ ಮಾಡಲಿಲ್ಲ. ಮಾತ್ರ ಅಲ್ಲ, ಮರುದಿವಸ ಕೆಲಸಕ್ಕೆ ಬರಲಿಲ್ಲ ಅಂತ ಅವಳಿಗೊಂದು ನೋಟೀಸ್ ಕೂಡಾ ಜಾರಿ ಮಾಡಿದ್ದಾರೆ. ಆದರೂ ಅವರನ್ನ ನೀವು ಪ್ರಶ್ನೆ ಮಾಡೋ ಹಾಗೇ ಇಲ್ಲ. ನೋ ಬಡಿ ಕ್ಯಾನ್ ಕ್ವೆಶ್ಚನ್ ದೆಮ್. ಮೂರು ಕಾರಣಕ್ಕೆ.

ಒಂದು, ಅವರು ಮಾತಿನಲ್ಲಿ, ವಾದದಲ್ಲಿ ತುಂಬಾ ಚುರುಕಾಗಿರುತ್ತಾರೆ, ಮಲ್ಟಿನ್ಯಾಶನಲ್ ಕಂಪೆನಿಯವರಲ್ವಾ ಅವರು? ಕೆರೆಗಳೇನು, ಹಲವಾರು ಹೊಳೆ, ಸಮುದ್ರಗಳ ನೀರನ್ನೇ ಆಪೋಶನ ತೆಗೆದುಕೊಂಡವರು ಅವರು. ರೆಪ್ರೆಸೆಂಟೇಶನ್ಸ್ ಆಫ್ ದಿ ಇಂಟೆಲೆಕ್ಚುವಲ್ ಅನ್ನುವ ಪುಸ್ತಕದಲ್ಲಿ

ಎಡ್ವರ್ಡ್ ಸೈದ್ ಈ ವಿಷಯ ತುಂಬಾ ಚೆನ್ನಾಗಿ ಹೇಳಿದ್ದಾನೆ. ಈ ಕಾಲದ ಎಲ್ಲಾ ಬುದ್ಧಿವಂತರೂ, ನಿಪುಣರೂ ಪ್ರಭುತ್ವದ ಕೈಗೊಂಬೆಗಳು ಅಂತ. ಸಾವಿರಾರು ರೂಪಾಯಿ ಸಂಬಳ ಕೊಟ್ಟು ಈ ನಿಪುಣರನ್ನು ಕೆಲಸಕ್ಕೆ ತಗೊಳ್ಳಲಿಕ್ಕಾಗಲೀ, ಉಳಿಸಿಕೊಳ್ಳಲಿಕ್ಕಾಗಲೀ ನಮಗೆ ನಿಮಗೆ ಬಿಡಿ, ನಮ್ಮ ಸರಕಾರಗಳಿಗಾದರೂ ಸಾಧ್ಯವಾ? ಆದರೆ ಅವರನ್ನು ವಿದ್ಯೆ ಕೊಟ್ಟು, ಜಾಗ ಕೊಟ್ಟು ಸಾಕಿ ಬೆಳೆಸುವವರು ಮಾತ್ರ ನಾವೇ, ನಮ್ಮ ಭ್ರಷ್ಟ, ಬಡಪಾಯಿ ಸರಕಾರಗಳೇ ಅನ್ನುವುದು ಇದರ ಇನ್ನೊಂದು ವ್ಯಂಗ್ಯ.

ಎರಡನೆಯದಾಗಿ, ಅವರಿಗೆ ಯಾವ ಕಾನೂನುಗಳೂ ಲಗಾವಾಗೋದಿಲ್ಲ. ಒಂದು ವೇಳೆ ಲಗಾವಾದರೂ, ಅವರದ್ದೇ ದೇಶದಲ್ಲಿ ಹೋಗಿ ನೀವು ಕಾನೂನು ಯುದ್ಧ ಮಾಡಿ ಬೆಪ್ಪುತಕ್ಕಡಿಗಳ ಹಾಗೆ ಹಿಂದಕ್ಕೆ ಬರಬೇಕಾಗುತ್ತದೆ. ಭೋಪಾಲ್ ಅನಿಲ ದುರಂತದ ಕತೆ ನಿಮಗೆ ಗೊತ್ತೇ ಇದೆ.

ಮೂರನೆಯದಾಗಿ, ಈ ವಿಷಯಗಳನ್ನೆಲ್ಲ ಜೋರಾಗಿ ಮಾತಾಡೋ ಹಾಗೇ ಇಲ್ಲ. ಜೋರಾಗಿ ಮಾತಾಡಿದ್ರೆ, ಜನ ಏನು ಹೇಳುತ್ತಾರೆ, ಸರಕಾರಗಳೂ ಕೂಡಾ ಏನು ಹೇಳುತ್ತಾವೆ? ದೊಡ್ಡ ದೊಡ್ಡ ಕಂಪೆನಿಗಳನ್ನೆಲ್ಲಾ ಓಡಿಸುತ್ತಾ ಇದ್ದೀರಿ, ಅಂತ. ಅಂದರೆ, ನಾರಾಯಣ ಮೂರ್ತಿಯಂಥವರು ಮಾತ್ರ ಮಾತಾಡಬೇಕು. ಅವರಿಗೆ ಗೊತ್ತಿದ್ದ ಗೊತ್ತಿಲ್ಲದ ಎಲ್ಲಾ ವಿಷಯದ ಬಗೆಗೂ, ತಜ್ಞರ ಹಾಗೆ ಅವರು ಮಾತ್ರ ಮಾತಾಡಬಹುದು. ಇಲ್ಲಿನ ಕಾನೂನು ಕಟ್ಟಳೆ ಗೌರವ ಅದು ಇದು ಅಂತ ಹೇಳಿ ಓಡಿಸ್ತಾ ಇದ್ದೀರಿ, ಅಂತಲೇ ಅವರ ಮಾತು. ಅಂದರೆ ಬಹುರಾಷ್ಟ್ರೀಯ ರನ್ನ ಇಲ್ಲಿಗೆ ಕರೆಯುವುದೇ ಒಂದು ದೊಡ್ಡ ವಿಷಯ ಅಂತ ಆಗಿರೋದರಿಂದ, ಮತ್ತೆ ನಾವು ಮಾತನಾಡುವ ಹಾಗೇ ಇಲ್ಲ. ಮೊದಲೇ ಬೇಕಂತ ಕೈಕಟ್ಟಿ ನಿಂತುಕೊಂಡವರು ಆಮೇಲೆ ಕೈಯೆತ್ತಿ ಪ್ರತಿಭಟಿಸಿ ನಮ್ಮ ಹುಚ್ಚು ಜಗಜ್ಜಾಹೀರಾಗಲು ಬಿಡುತ್ತಾರಾ? ಇದು ಒಂದು ಮುಖ್ಯ ಅಂಶ.

ಖಾಸಗೀಕರಣವನ್ನು ವಿಜೃಂಭಿಸುವವರಿಗೇನೂ ಕಮ್ಮಿ ಇಲ್ಲ. ಸರಕಾರೀ, ಸಾರ್ವಜನಿಕ ಕ್ಷೇತ್ರವನ್ನು ಹಾಳು ಮಾಡಿದ್ದೂ ಅಲ್ಲದೇ ಅದನ್ನು ನಿಂದೆ ಮಾಡುವವರೂ ನಾವೇ. ಅದೇ, ಪ್ರತಿಭಾಳ ಕಂಪೆನಿ ಒಂದು ಸಾರ್ವಜನಿಕ ಕ್ಷೇತ್ರದ ಉದ್ಯಮವಾಗಿದ್ದರೆ, ನಾವು ಸರಕಾರವನ್ನು ಎಷ್ಟೋ ಬಯ್ಯಬಹುದು, ಆದರೆ ಪ್ರತಿಭಾಳ ಡ್ರೈವರ್ ತನ್ನ ಉದ್ಯೋಗದ ಭದ್ರತೆಯ ಕಾರಣದಿಂದ, ಖಾಯಂ ಸರಕಾರಿ ನೌಕರಿ ಕಾರಣದಿಂದ, ಇಂಥ ದುಸ್ಸಾಹಸಕ್ಕೆ ಕೈ ಹಾಕುತ್ತಿದ್ದನಾ? ಇದು ಯೋಚನೆ ಮಾಡಬೇಕಾದ ವಿಷಯ. ಖಾಸಗೀಕರಣವನ್ನು ಕೊಂಡಾಡುವ ಮೊದಲು ನಾವು ಬಲಿಕೊಟ್ಟ, ಸಾಮುದಾಯಿಕ ಜವಾಬ್ದಾರಿಗಳೇನು ಅಂತ ಕೂಡ ನೋಡಬೇಕಾಗಿದೆ.

ಗ್ಲೋಬಲೈಸೇಶನ್ ಅಂದರೆ ಒಂದು ಸೆಲೆಬ್ರೇಶನ್ ಆಫ್ ಸರ್ಫೇಸಸ್. ಹೊರಮೈಯ ವಿಜೃಂಭಣೆ ಅಂತ ನಾನು ಮೊದಲು ಹೇಳಿದ ಮಾತಿಗೆ ಈ ಅರ್ಥ ಕೂಡಾ ಇದೆ. ಖಾಸಗೀಕರಣ ಒಳ್ಳೆಯದು ಅನ್ನುವ ನಮ್ಮ ಜನಾಭಿಪ್ರಾಯ ಕೂಡಾ ಇದೇ ರೀತಿಯ ಹೊರಮೈಯ ವಿಜೃಂಭಣೆಯ ಒಂದು ಮುಖ ಅಷ್ಟೇ. ಪೆಪ್ಸಿ, ಕೋಕಾಕೋಲಾ, ಪೀಜ್ಜಾಗಳು ನಮ್ಮ ರುಚಿಗಳನ್ನೇ ಬದಲಾಯಿಸಿವೆ. ಪ್ಲಾಚಿ ಮಾಡಾದಲ್ಲಿ ಜನ ಕೂಗಾಡಿದರೆ ಅವರಿಗೇನೂ ಚಿಂತೆ ಇಲ್ಲ. ಮಜ್ಜಿಗೆ,

ಎಳನೀರು, ಕಷಾಯ, ರಸಾಯನ ಕುಡಿಯುವುದನ್ನು ಬಿಟ್ಟು, ಪೆಪ್ಸಿ, ಕೋಕಾಕೋಲಾ ಕುಡೀತಾ ಇರುವ ಜನರ ಜೊತೆ ಮಾತಾಡೋದಾದರೂ ಹೇಗೆ? ಇಂಥ ಅಧ್ಯಾತ್ಮಗಳೋ ಅನ್ನುವ ಮಟ್ಟಿಗೆ ನಾವೂ ಸಾಮ್ರಾಜ್ಯಶಾಹಿಯೂ ಜೊತೆ ಸೇರಿ ಜಾಗತೀಕರಣವನ್ನು ಏರಿಸಿ ಇಟ್ಟಿದ್ದೇವೆ. ಧರ್ಮ ಮತ್ತು ಅಧ್ಯಾತ್ಮಗಳನ್ನ ಕೇವಲ ಸಂಕೇತಗಳನ್ನಾಗಿ, ಹೊರಮೈಯಾಗಿ ಪರಿವರ್ತಿಸಿ ಅದರ ಹೆಸರಿನಲ್ಲಿ ವ್ಯವಹಾರ ನಡೆಸುವುದು, ಯಾವುದನ್ನು ನಾವು ಕೋಮುವಾದ, ಮತೀಯವಾದ ಅಂತ ಕರೆಯುತ್ತೇವೆ ಅದು ಇದರದ್ದೇ ಇನ್ನೊಂದು ಸ್ವರೂಪ. ಇವೆರಡೂ, ಮಾರುಕಟ್ಟೆಯೇ ಧರ್ಮ ಆಗಿರುವುದು, ಧರ್ಮ ಮಾರುಕಟ್ಟೆಯ ವಸ್ತು ಆಗಿರುವುದು, ಇವೆರಡೂ ಜಾಗತೀಕರಣ ಅನ್ನುವ ಒಂದೇ ನಾಣ್ಯದ ಎರಡು ಮುಖಗಳು, ಒಂದರ ಜೊತೆ ಒಂದು ಫಿಟ್ ಆಗುವಂಥವು. ಮತೀಯವಾದದ ಕರಾಳತೆ ಬಗ್ಗೆ ಮಾತಾಡದೇ ಹೆಣ್ಣಿಗೆ ಧರ್ಮಗಳು ಕೊಡುವ ನಗಣ್ಯ ಸ್ಥಾನದ ಬಗ್ಗೆ ಮಾತಾಡಲು ಹೇಗೆ ಸಾಧ್ಯವಿಲ್ಲವೋ ಹಾಗೇ ಜಾಗತೀಕರಣ ಅನ್ನುವ ಮತಾಂಧತೆಯನ್ನು ನಯವಂಚನೆಯನ್ನ ಕುರಿತು ಮಾತಾಡದೇ ಪ್ರತಿಭಾಳ ಬಗ್ಗೆ ಮಾತಾಡುವುದು ಹೇಗೆ ಅನ್ನುವುದೇ ನಾನು ಕೇಳುತ್ತಿರುವ ಮೊದಲನೇ ಪ್ರಶ್ನೆ.

ಇನ್ನು ಎರಡನೇ ಪ್ರಶ್ನೆ. ವೈದೇಹಿ ನಮ್ಮ ಒಳ್ಳೆಯ ಕಥೆಗಾರ್ತಿ ಅನ್ನುವುದು ಸುಮ್ಮನೇ ಅಲ್ಲ. ಪ್ರತಿಭಾಳ ಕೊಲೆ ವಿಷಯ ತೆಗೆದುಕೊಂಡು, ಆಕೆ ಮೈಮೇಲೆ ಬಂದವರ ಹಾಗೆ ಅವರು ಮಾತಾಡಿದರು. ಹೆಣ್ಣೊಬ್ಬಳು ಮನುಷ್ಯಳಾಗಿ ವ್ಯವಹರಿಸೋದಕ್ಕೆ ಸಾಧ್ಯವಾ ಅನ್ನುವ ಪ್ರಶ್ನೆಯನ್ನ ಗಂಡಸರಂತೂ ತಬ್ಬಿಬ್ಬಾಗಿ ಯೋಚನೆ ಮಾಡುವಷ್ಟು ಪ್ರಖರವಾದ ಮಾತುಗಳವು. ಅವರ ಮಾತು ಕೇಳಿ ನಾನಂತೂ ಪೂರ್ತಿ ಗಲಿಬಿಲಿ ಆಗಿಬಿಟ್ಟೆ. ನಡೂರಾತ್ರಿಯಲ್ಲಿ ಸಾಲಂಕೃತಳಾಗಿ ಕೆಲಸಕ್ಕೆ ಹೊರಟ ಪ್ರತಿಭಾ ಯಾರೋ ಹೇಳಹೆಸರಿಲ್ಲದ ಡ್ರೈವರನೊಬ್ಬನ ಪಕ್ಕದಲ್ಲಿ ಒಬ್ಬಂಟಿಯಾಗಿ ಹೋದದ್ದರ ವಿಚಾರ ಬಿಡಿ, ಪರಿಚಿತರಾದ ನಾನು ನೀವು ಅಕ್ಕಪಕ್ಕ ಕೂತು, ಹಗಲೋ ರಾತ್ರಿಯೋ, ಮನುಷ್ಯರ ಹಾಗೆ ಮಾತಾಡುವುದು ಸಾಧ್ಯವಾ ಅಂತ ಅವರದ್ದೊಂದು ಪ್ರಶ್ನೆ. ಮರ್ಮಕ್ಕೆ ನಾಟುವ ಪ್ರಶ್ನೆ. ನಾನು ಗಲಿಬಿಲಿಗೊಂಡದ್ದಕ್ಕೆ ಆ ಡ್ರೈವರನ ಸೀಟಿನಲ್ಲಿ ನಾನು ಕೂತ ಹಾಗಾಯ್ತು ಅನ್ನುವುದೂ ಕಾರಣ. ಆ ಡ್ರೈವರನ ಸೀಟನ್ನ ನಿವಾರಿಸಿಕೊಳ್ಳದೇ, ಪ್ರತಿಭಾಳ ಪಕ್ಕದಲ್ಲಿ ಅಪರಾತ್ರಿಯಲ್ಲಿ ಆ ಡ್ರೈವರನ ಸೀಟಿನಲ್ಲೇ ಕೂತು ನನ್ನ ಈ ಕೆಲವು ಕರಾಳ ಯೋಚನೆಗಳು.

ಪ್ರತಿಭಾ ಕೊಲೆ ಆಗಿರುವುದು, ಅದಕ್ಕೂ ಮೊದಲು ಆಕೆಯ ಮಾನಭಂಗ ಆಗಿರುವುದು, ವಿಕಾರದ ದಾರಿಯನ್ನು ತರ್ಕಬದ್ಧವಾಗಿ ಹಿಡಿದ ಆ ಇಡೀ ಪ್ರಕ್ರಿಯೆ ಇವೆಲ್ಲ ನಮ್ಮನ್ನು ಪೂರ್ತಿ ಕಂಗಾಲು ಮಾಡುತ್ತವೆ. ಬಹಳ ಯೋಚನೆಗೆ ನಮ್ಮನ್ನು ಹಚ್ಚುತ್ತವೆ. ವೈದೇಹಿಯವರು ನಮ್ಮನ್ನು ಬಹಳ ಯೋಚನೆಗೆ ಹಚ್ಚುವ ಹಾಗೆ ಮಾತಾಡಿದರು. ಆದರೂ, ಇಂಥ ವಿದ್ಯಮಾನಗಳು ನಡೆಯುತ್ತವಲ್ಲ, ದಿನಂಪ್ರತಿ ನಡೆಯುತ್ತವಲ್ಲ, ಇದನ್ನು ಗ್ರಹಿಸುವುದು ಹೇಗೆ, ಅನ್ನುವುದರ ಬಗ್ಗೆ ಬರೀ ಒಂದು ಭಾವನಾತ್ಮಕವಾಗಿ ರೆಸ್ಪಾಂಡ್ ಮಾಡುವುದಷ್ಟೇ ಅಲ್ಲದೇ, ಮನುಷ್ಯ ಸ್ವಭಾವದ ಬಗ್ಗೆ, ಹೆಣ್ಣಿನ ಲೈಂಗಿಕತೆಯ ಬಗ್ಗೆ, ಆ ಡ್ರೈವರನ ಬಗ್ಗೆಯೂ, ಯೋಚನೆ

ಮಾಡಬೇಕಾದ ಪರಿಸ್ಥಿತಿ ಇದೆ. ನಾನು ಹೇಳುತ್ತಾ ಇರುವುದು ಸುಮ್ಮನೇ ಮಾತು. ವೈದೇಹಿ ಹೇಳಿದ್ದೇ ನಿಜ. ಆದರೂ, ಆ ಡ್ರೈವರನ ಸೀಟಲ್ಲಿ ನಾನಿದ್ದಿದ್ದರೆ ಏನು ಮಾಡುತ್ತಿದ್ದೆ ಅಂತ ನನಗೆ ನಿಜವಾಗಿಯೂ ಗಾಬರಿಯಾಗಿ ಹೋಯ್ತು. ಇದು ನಿಜವಾಗ ಎಕ್ಸಿಸ್ಟೆನ್ಶಿಯಲ್ ಪ್ರಶ್ನೆ ಇದು.

ನೀವು ಟಾಲ್‌ಸ್ಟಾಯ್ ಹೆಸರು ಕೇಳಿದ್ದೀರಿ. ಬಹಳ ದೊಡ್ಡ ಲೇಖಕ ಅವನು. ಕುವೆಂಪು ಅವನನ್ನು ಟಾಲ್‌ಸ್ಟಾಯ್ ಮಹರ್ಷಿ ಅಂತ ಕರೀತಾರೆ. ಗಾಂಧಿಗೆ ಗುರುವಾಗಿದ್ದವನು. ಗಾಂಧಿ ಟಾಲ್‌ಸ್ಟಾಯ್ ಫಾರ್ಮ್ ಅಂತಾನೇ ನಡೆಸುತ್ತಾ ಇದ್ದರು, ಆಫ್ರಿಕಾದಲ್ಲಿದ್ದಾಗ. ಅವನು ಅನ್ನಾಕರೆನೀನಾ ಅನ್ನುವ ಕಾದಂಬರಿ ಬರೆದ. ಬಹಳ ಗ್ರೇಟ್. ಇಟ್ ಈಸ್ ಎ ಗ್ರೇಟ್ ನಾವೆಲ್. ಅದು ಶುರುವಾಗೋದು, ಎಲ್ಲಾ ಸಾಂಪ್ರದಾಯಿಕ ಕತೆ ಕಾದಂಬರಿಗಳು ಮದುವೆಯಲ್ಲಿ ಮುಗಿದರೆ, ಅದು ಮದುವೆಯ ಅನಂತರ ಶುರುವಾಗುತ್ತೆ. ಅದೊಂದು ದೊಡ್ಡ ನಾವೆಲ್. ೧೨೦೦ ಪುಟದ ಕಾದಂಬರಿ. ಮದುವೆಯ ನಂತರದ ಅಷ್ಟೊಂದು ಸುದೀರ್ಘ ಕತೆ. ಈ ಅನ್ನಾಕರೆನೀನಾ ಅನ್ನುವವಳು, ಅವಳ ಭಾವ ಏನೋ ಅಧಿಕ ಪ್ರಸಂಗ ಮಾಡುತ್ತಾ ಇರುತ್ತಾನೆ. ಮನೆಯಲ್ಲಿ ಕೆಲಸದ ಹುಡುಗಿಯ ಜೊತೆ ಪ್ರಣಯ ಚೇಷ್ಟೆಗಳು ನಡೆಯುತ್ತಾ ಇರುತ್ತವೆ. ಇದು ಗೊತ್ತಾಗಿ ಹೆಂಡತಿ ಮುನಿಸಿಕೊಂಡಿರುತ್ತಾಳೆ. ಅದನ್ನು ಸರಿ ಪಡಿಸಲಿಕ್ಕೆ, ಅವನ ಮದುವೆಯನ್ನು ಸೆಟ್‌ರೈಟ್ ಮಾಡಲಿಕ್ಕೆ ಅನ್ನಾಕರೆನೀನಾ ಹೊರಡುತ್ತಾಳೆ. ಅಲ್ಲಿಂದ ಕಾದಂಬರಿ ಶುರುವಾಗುತ್ತೆ. ಅದನ್ನು ಮಾಡಲು ಹೊರಟವಳು ತನ್ನ ವಿವಾಹದಿಂದ ಕೂಡ ಹೊರ[illegible]ಯುತ್ತಾಳೆ. ಅದರ ಕಥೆ ಅದು. ನೀವು ಖಂಡಿತವಾಗಿಯೂ ಗಮನಿಸಬೇಕಾದ ಕೃತಿ ಅದು; ಅವಳು, ಅನ್ನಾ ಕರೆನೀನಾ, ಅವಳಿಗೂ ಗೊತ್ತಿಲ್ಲದ ಹಾಗೆ, ಸುತ್ತಮುತ್ತಲಿನವರಿಗೂ ಗೊತ್ತಾಗದ ಹಾಗೆ. ಗೊತ್ತು ಪಡಿಸಬಾರದು ಎಂದು ಅವಳು ಕೂಡಾ ಪ್ರಯತ್ನಿಸಿ ಸೋತ ಹಾಗೆ, ರಾನ್‌ಸ್ಕಿ ಅಂತ ಒಬ್ಬ ಇರುತ್ತಾನೆ. ಸೊಗಸುಗಾರ, ತರುಣ, ರಸಿಕ. ಅವನೂ ಕೂಡಾ ದಿಙ್ಮೂಢನಾಗಿ ನೋಡುವ ರೀತಿಯಲ್ಲಿ ಈಕೆ, ಈ ವಿವಾಹಿತೆ, ಸಂಸಾರಗಳನ್ನು ನೇರ್ಪುಗೊಳಿಸುವ ಹಠ ತೊಟ್ಟವಳು ಬಿಕಮ್ಸ್ ಸೋ ಅಟ್ರ್ಯಾಕ್ಟಿವ್, ಸೋ ಲವ್‌ಲೀ, ಸೋ ಡಿಫಿಕಲ್ಟ್ ಟು ಮ್ಯಾನೇಜ್ ಎಟ್ ಟೈಮ್ಸ್. ಕೆಲವು ಸಂದರ್ಭಗಳಲ್ಲಿ ಎಷ್ಟು ಲೈವ್‌ಲೀ ಆಗಿದ್ದಾಳೆ ಅಂದರೆ, ಅವಳು ವಿವಾಹ ಬಂಧನದಿಂದ ಹೊರಬಂದ ಕೂಡಲೇ, ಅವಳು ಪ್ರೇಮಿ ಅಂತ ಆದ ಕೂಡಲೇ, ಯಾವ ಸ್ವರೂಪದ ಚೈತನ್ಯ ಅವಳೊಳಗೆ ಸೆಲೆ ಒಡೆಯುತ್ತದೆ ಅಂದರೆ, ಅವಳ ಪ್ರೇಮಿಯೇ ಧಿಙ್ಮೂಢನಾಗಿ ಬಿಡುತ್ತಾನೆ. ಶಿ ಹ್ಯಾಸ್ ಸಚ್ ಎ ಪವರ್‌ಫುಲ್ ಪ್ರೆಸೆನ್ಸ್. ಕೆಟ್ಟ ಅರ್ಥದಲ್ಲಿ ಅಲ್ಲ. ಮಾಟಗಾತಿಯಂತೆ ಅಲ್ಲ. ಐ ಮೀನ್ ಶಿ ಈಸ್ ಫುಲ್ಲಿ ಎ ಪರ್ಸನ್. ಆಲ್ಸೋ ಬಿಕಾಸ್ ಶಿ ಈಸ್ ಔಟ್ ಆಫ್ ಮ್ಯಾರೇಜ್. ಮೋರ್ ಕರೆಕ್ಟ್‌ಲೀ, ಬಿಕಾಸ್ ಶಿ ಹ್ಯಾಸ್ ಬ್ರೋಕನ್ ಔಟ್ ಆಫ್ ಹರ್ ಮ್ಯಾರೇಜ್. ಒಂದು ಅತ್ಯಂತ ಕ್ರಿಯಾಶೀಲವಾದ, ಸೃಜನಶೀಲವಾದ ವ್ಯಕ್ತಿತ್ವವಾಗಿ ಅವಳು ಪರಿವರ್ತನೆ ಆಗುತ್ತಾಳೆ. ನೋಡಿದವರೆಲ್ಲಾ ಅವಳ ಹೊಸ ಸೌಂದರ್ಯದ ಎದುರು, ಹೊಸ ಪರಿಪೂರ್ಣ ವ್ಯಕ್ತಿತ್ವದ ಎದುರು ದಿಙ್ಮೂಢರಾಗುವಷ್ಟು. ಅವಳ ಗಂಡನೇನೂ ದುಷ್ಟನಲ್ಲ. ಸಭ್ಯ. ದೊಡ್ಡ ಉದ್ಯೋಗದಲ್ಲಿರುವವನು. ಸ್ವಲ್ಪ ಮಟ್ಟಿಗೆ ತನ್ನ ಮಹತ್ವಾಕಾಂಕ್ಷೆಗಳನ್ನೇ ವಿವಾಹವಾದವನು. ಆದರೆ ಹೆಂಡತಿಯನ್ನು ಯಾವುದೇ

ಸಾಂಪ್ರದಾಯಿಕ ಗಂಡನಂತೆ ಚೆನ್ನಾಗಿಯೇ ನೋಡಿಕೊಂಡವನು. ಅವನೂ ಅವಳ ಈ ಹೊಸ ಅವತಾರ ನೋಡಿ ತತ್ತರಿಸಿ ಹೋಗುತ್ತಾನೆ. ಅವಳಿಗೊಂದು ವ್ಯಕ್ತಿತ್ವವಿದೆ ಎಂಬುದು ನಿಧಾನವಾಗಿ ಅವನ ಅರಿವಿಗೆ ಬರಲು ಶುರುವಾಗುತ್ತದೆ. ಕೆಲವೊಂದು ಸಂದರ್ಭದಲ್ಲಂತೂ ಅವಳ ಉತ್ಕಟ ಪ್ರೇಮಿ ರಾನ್ಸ್ಕಿ ಕೂಡಾ ಅವಳ ಕಾಲಬುಡದಲ್ಲಿ ಬೆಪ್ಪನಂತೆ ತತ್ತರಿಸಿ ನಿಲ್ಲಬೇಕಾಗುತ್ತದೆ. ಶಿ ಈಸ್ ಆಲ್ ಎನರ್ಜಿ. ಅಂದರೆ ಮಹಾಕಾಳಿಯಂತಲ್ಲ. ಸುತ್ತಮುತ್ತಲ ಜನರು, ಹೆಂಗಸರೂ ಸೇರಿದಂತೆ, ಅವಳನ್ನು ನೋಡಿ ಮರುಳಾಗುವಂತೆ, ಗಂಡ ಬಿಡಿ, ಪ್ರೇಮಿ ಕೂಡಾ ತನ್ನ ಲೆಕ್ಕಕ್ಕಿಂತ ಸ್ವಲ್ಪ ಕೆಳಗೆ ಎಂಬ ಆಕೆಯ ಆತ್ಮವಿಶ್ವಾಸದಲ್ಲಿ ಅವಳು ಯಾರ ಕೈಗೊಂಬೆಯೂ ಅಲ್ಲ. ರಾನ್ಸ್ಕಿಯ ಉತ್ಕಟ ಪ್ರೇಮ ಕೂಡಾ ಬಯಸುವುದು ದಿವ್ಯ ಪ್ರಿಯತಮೆಯನ್ನ. ಅನ್ನಾಕರೆನೀನಾ ನಿಜಕ್ಕೂ ಪ್ರಿಯತಮೆಯೇ ಆದರೂ, ವಿವಾಹದಿಂದ ಹೊರಬಂದು ಪ್ರೇಮವಾಗಿ ಅರಳಿದ ಮೇಲೆ ಅವಳು ಪ್ರೇಮಲೋಕಕ್ಕಿಂತಲೂ ಮೇಲೇರಿದವಳು. ವಿವಾಹದ ಹೊರಗಿನ ಪ್ರೇಮ ಕೂಡಾ ಅವಳ ಈ ವ್ಯಕ್ತಿತ್ವವನ್ನು ಗ್ರಹಿಸಲಾರದೇ ಹೋದಂತಾಗಿ ಆಕೆ ಆತ್ಮಹತ್ಯೆಗೆ ಶರಣಾಗುತ್ತಾಳೆ. ಯಾರ ಹತೋಟಿಗೂ, ನಿರ್ಬಂಧಕ್ಕೂ, ಜರ್ಝರಗೊಳ್ಳುವ ಪ್ರೇಮದ ಆಲಿಂಗನಕ್ಕೂ ಸಿಕ್ಕದ ಹಾಗೆ ಅವಳು ಪಾರಾಗುತ್ತಾಳೆ. ಅಂದರೆ, ಸಾಯುತ್ತಾಳೆ.

ಅರಳಿದ ಹೆಣ್ಣಿನ ಪರಿಪೂರ್ಣ ವ್ಯಕ್ತಿತ್ವಕ್ಕೆ ಸಾವೇ ಬಿಡುಗಡೆ ಎಂಬುದು ಟಾಲ್‌ಸ್ಟಾಯ್‌ನ ಅರ್ಥವೂ ಅಲ್ಲ, ಉದ್ದೇಶವೂ ಅಲ್ಲ. ಆಕೆಯನ್ನು ನೆಲೆಗೊಳಿಸದೇ ಹೋದ ನತದೃಷ್ಟ ಲೋಕವೇ ಟಾಲ್‌ಸ್ಟಾಯ್‌ನ ಗಮನಕೇಂದ್ರ.

ಆದರೆ ಇಂಥ ಕಾದಂಬರಿಯನ್ನು ಬರೆದ ಟಾಲ್‌ಸ್ಟಾಯ್, ಅವನು, ಈ ಥರದ ವಿಚಾರಗಳ ಬಗ್ಗೆ ಯೋಚನೆ ಮಾಡುವುದು ಕೂಡಾ ತಪ್ಪು ಅಂತ ತಿಳಕೊಂಡವನು. ಗಾಂಧಿಗೆ ಬ್ರಹ್ಮಚರ್ಯದ ಮಾತುಗಳನ್ನು ಹೇಳಿಕೊಟ್ಟವನು. ಈ ಕಾದಂಬರಿ ಬರೆದ ಟಾಲ್‌ಸ್ಟಾಯ್ ಅದನ್ನು ಸುಟ್ಟು ಹಾಕಿದನಂತೆ. ಅವನ ವಿಚಾರಗಳಿಗೆ ಅದು ವಿರುದ್ಧವಾಗಿದೆ ಅಂತ. ಐದು ವರ್ಷದ ಅನಂತರ ಅದನ್ನು ಪುನಃ ಆತ ಬರೆದ. ಅಂದರೆ, ಅಷ್ಟು ಒತ್ತಾಯ ತಂದು ಅನ್ನಾಕರೆನೀನಾ ಅವನಿಂದ ಅದನ್ನು ಬರೆಸಿದ್ದಾಳೆ. ಆಮೇಲೆ ಅವನು ಬರೆದ ಕಾದಂಬರಿ ಏನಿದೆ, ಅಂದರೆ, ತನಗೇ ವಿರುದ್ಧವಾಗಿ ಆತ ಬರಕೊಂಡ ಕಾದಂಬರಿ ಏನಿದೆ, ಅದೇ ಈಗಿನ ಅನ್ನಾಕರೆನೀನಾ ಕಾದಂಬರಿ. ಮದುವೆಯಿಂದ ಹೊರಗೆ ಬಂದ ಪ್ರೇಮದಲ್ಲಿ ಅರಳುತ್ತಾ ಇರುವ ಅನ್ನಾಕರೆನೀನಾಳ ಎನರ್ಜಿ ನೋಡಿ ಲೇಖಕನೇ ತತ್ತರಿಸಿಹೋಗಿದ್ದಾನೆ, ಮಂತ್ರಮುಗ್ಧನಾದವನ ಹಾಗೆ ಬರೀ ಅವಳ ಮಾತುಗಳನ್ನ ಅವನು ಲಿಪಿಕಾರನ ಹಾಗೆ ಕಾಪಿ ಮಾಡುತ್ತಾ ಇದ್ದಾನೆ ಅನ್ನಿಸುವ ಎಷ್ಟೊಂದು ಭಾಗಗಳು ಆ ಕಾದಂಬರಿಯಲ್ಲಿ ಇವೆ.

ಲೈಂಗಿಕತೆಯನ್ನ ಹೊರತುಪಡಿಸಿ ಹೆಣ್ಣು ಗಂಡು ಅಂತ ಇಲ್ಲ ಅಂತ ಈ ಬ್ರಹ್ಮಚರ್ಯ ಬೋಧಿಸುವ ಟಾಲ್‌ಸ್ಟಾಯ್‌ಗೆ ಇಲ್ಲಿ ಕಾಣಿಸುತ್ತೆ. ಮತ್ತೆ, ಈ ಹೆಣ್ಣಿನ ಲೈಂಗಿಕತೆಯನ್ನು ಅದರ ದಮನದಿಂದ ಬಿಡುಗಡೆ ಮಾಡಿದರೆ ಆಗ ಅವಳು ಬರೀ ಲೈಂಗಿಕ ಜೀವಿಯಾಗಿ ಮಾತ್ರ ಅಲ್ಲ,

ಅದೂ ಹೌದು, ಆದರೆ ಅದನ್ನೂ ಮೀರಿ ಒಂದು ಪರಿಪೂರ್ಣ ವ್ಯಕ್ತಿ ಅಂತ ಆದರೆ, ಹಾಗೆ ಅವಳು ಆಗಲಿಕ್ಕೆ ಇದುವರೆಗೆ ಬಿಟ್ಟಿಲ್ಲ ಅಂತ ಅವನ ಆತಂಕ, ಪರಿಪೂರ್ಣ ವ್ಯಕ್ತಿ ಅಂತ ಆದರೆ ಅದನ್ನ ತಾಳಿಕೊಳ್ಳುವ ವ್ಯವಸ್ಥೆ ನಮ್ಮಲ್ಲಿ ಇದೆಯಾ, ವ್ಯಕ್ತಿತ್ವ ನಮ್ಮಲ್ಲಿ ಇದೆಯಾ, ಈ ಲೈಂಗಿಕತೆ ಅನ್ನೋದೇ ಒಂದು ದೊಡ್ಡ ಸಮಸ್ಯೆ ಅಲ್ಲವಾ ಅಂತ ಟಾಲ್‌ಸ್ಟಾಯ್ ಪ್ರಶ್ನೆ. ಅದಕ್ಕೇ, ಹೆಣ್ಣು ಒಂದು ಪರಿಪೂರ್ಣ ವ್ಯಕ್ತಿ ಅಂತ ಆಗಿ ಅರಳಬೇಕಾದರೆ ಗಂಡಸು ತನ್ನ ಲೈಂಗಿಕತೆಯನ್ನು ಸಂಪೂರ್ಣ ಹತ್ತಿಕ್ಕಬೇಕು, ಬ್ರಹ್ಮಚರ್ಯ ಪಾಲನೆ ಮಾಡಬೇಕು, ಆಗ ಮಾತ್ರ ಹೆಣ್ಣು ಭೋಗ ವಸ್ತುವಾಗಿ ಕಾಣುವ ದುರಂತದಿಂದ ಬಿಡುಗಡೆ ಅಂತ ಅವನ ವಾದ. ಅವನ ವಾದ ಸರಿಯೋ, ತಪ್ಪೋ. ಆದರೆ, ಹೆಣ್ಣಿನ ಶೋಷಣೆಯ ಹೆಚ್ಚೂ ಕಡಿಮೆ ಎಲ್ಲಾ ಮುಖಗಳೂ ಲೈಂಗಿಕ ಅನ್ನೋದು, ಬಂಡವಾಳಶಾಹಿಗಂತೂ ಅದೊಂದು ತೋಡಿ ಮುಗಿಯದ ಗಣಿ ಅನ್ನುವ ಹಾಗೆ ಹೆಣ್ಣಿನ ಲೈಂಗಿಕತೆಯ ರಾಗಾಲಾಪ ಮಾಡುತ್ತಾ ಇರೋದು ನಮ್ಮ ಕಣ್ಣೆದುರೇ ನಡೆಯುತ್ತಾ ಇರುವಂಥದ್ದು. ಹೆಣ್ಣಿನಲ್ಲಿ, ಆಕೆಯ ಲೈಂಗಿಕತೆಯಲ್ಲಿ ಬಂಡವಾಳಶಾಹಿ ಮಾಡಿರೋ ಇನ್‌ವೆಸ್ಟ್‌ಮೆಂಟ್ ಏನೂ ಕಡಿಮೆ ಅಲ್ಲ.

ಹಾಗಾಗಿ, ಅವಳು ಕಾರಲ್ಲೇ ಓಡಾಡಿದರೂ, ಒಳ್ಳೇ ಇಂಗ್ಲಿಷ್ ಮಾತಾಡಿದರೂ, ಎಷ್ಟೇ ಸಂಬಳ ಪಡೆದರೂ ಅವಳನ್ನ ನೋಡುವ ದೃಷ್ಟಿ ಬದಲಾದೀತು ಅನ್ನುವುದು ಸುಲಭ ಅಲ್ಲ. ಮಾತ್ರ ಅಲ್ಲ, ಇದೆಲ್ಲ ಅವಳ ಆಕರ್ಷಣೆಯನ್ನ ಹೆಚ್ಚಿಸೋವಂಥ ಹೊಸ ಅಲಂಕಾರಗಳೇ ಆಗಬಹುದು. ಪ್ರತಿಭಾ ಲೈಂಗಿಕ ಆಕ್ರಮಣಕ್ಕೂ ಒಳಗಾದಳು, ಕೊಲೆಯೂ ಆದಳು. ಇವತ್ತು ಪ್ರತಿಭಾ ಡ್ರೈವರ್ ವಿಷಯ ಬಿಡಿ, ಸಮುದಾಯಗಳು, ಜನರು, ಸೈನಿಕರು, ದೇಶಗಳು ಕೂಡಾ, ಲೈಂಗಿಕ ಆಕ್ರಮಣ ಮತ್ತೆ ಕೊಲೆ ಎರಡೂ ಒಂದೇ ಅನ್ನುವ ರೀತಿಯಲ್ಲಿ ಮಾಡುವಂಥವು. ಎದುರು ಕಾಣುವ ಇನ್ನೊಂದು ಗುರುತನ್ನ ನಾಶ ಮಾಡೋದು ಅಂದರೆ ಲೈಂಗಿಕ ಆಕ್ರಮಣವನ್ನ ಕೊಲೆಯ ರೀತಿಯಲ್ಲಿ ಮಾಡೋದು, ಆಮೇಲೆ ಕೇವಲ ಒಂದು ಆಫ್ಟರ್ ಥಾಟ್ ಆಗಿ, ಕೊಲೆ ಕೂಡಾ ಮಾಡೋದು ಅನ್ನುವುದು ಮೇಲಿಂದ ಮೇಲೆ ನಾವು ಕಂಡೇ ಇದ್ದೇವೆ. ದೇಶ ಇಬ್ಭಾಗ ಆದಾಗ ಮುಖ್ಯವಾಗಿ ಆದದ್ದು ಇದೇ ಲೈಂಗಿಕ ದುರಾಕ್ರಮಣ. ಸಾದತ್ ಹಸನ್ ಮಾಂಟೋನನ್ನ ಓದಿ ಗೊತ್ತಾಗುತ್ತೆ. ಗುಜರಾತಲ್ಲಿ ಕೂಡಾ ಗರ್ಭಿಣಿಯ ಹೊಟ್ಟೆ ಸೀಳಿ ತ್ರಿಶೂಲದ ತುದೀಲಿ ಭ್ರೂಣವನ್ನ ಹೊತ್ತುಕೊಂಡು ಪ್ರೇತನೃತ್ಯ ಮಾಡಿದವರೂ ಕೂಡಾ ಬಯಸೋದು, ಹೆಣ್ಣು, ಅಂದರೆ ತಮ್ಮ ಎದುರಿರುವವರು, ಲೈಂಗಿಕತೆಯ ಜೊತೆಗೇ ಬರೋ ತಮ್ಮ ವ್ಯಕ್ತಿತ್ವಗಳನ್ನು ಅದುಮಿಕೊಳ್ಳಲಿ, ನಮ್ಮ ಕಾಲಡಿ ಮಾತ್ರ ಸಿಕ್ಕಲಿ ಅಂತ ತಾನೇ?

ಟಾಲ್‌ಸ್ಟಾಯ್‌ದು ಇನ್ನೊಂದು ಕಥೆ ಇದೆ. ತುಂಬಾ ದೊಡ್ಡ ಕತೆ. ೧೨೦ ಪುಟದಷ್ಟು ದೊಡ್ಡದು. ಕ್ರೋಯ್‌ತ್ಸೆರ್ ಸೊನಾಟಾ ಅಂತ. ಬಹಳ ವಿಲಕ್ಷಣವಾದ ಕತೆ ಅದು. ನನ್ನನ್ನಂತೂ ಪೂರ್ತಿ ಕಂಗಾಲು ಮಾಡಿರೋ ಕಥೆ ಅದು. ಇಂಗ್ಲಿಷಲ್ಲಿ ಒಂದು ಪದ ಇದೆ. ಮಿಸೋಜಿನಿ ಅಂತ. ಅಂದರೆ ಸ್ತ್ರೀದ್ವೇಷ ಅಂತ. ಇದೊಂದು ಮಿಸೋಜಿನಿಸ್ಟ್ ಕಥೆ. ಸ್ತ್ರೀದ್ವೇಷಿ ಇದರಲ್ಲಿ ಒಬ್ಬ

ಕೇಂದ್ರ ಪಾತ್ರ ಆಗಿದ್ದಾನೆ. ಅವನು ಗಂಡನೂ ಹೌದು, ತನ್ನ ಹೆಂಡತಿಯನ್ನು ಆಗ ತಾನೇ ಕೊಲೆಮಾಡಿ ಬಂದಿರೋ ಕೊಲೆಗಡುಕನೂ ಹೌದು. ಟಾಲ್‌ಸ್ಟಾಯ್ ಹೇಳುತ್ತಾನೆ, ಇವೆರಡೂ ಬೇರೆ ಅಲ್ಲ, ಗಂಡ ಅಂದರೂ ಹೆಂಡತಿಯ ಕೊಲೆಗಾರ ಅಂದರೂ ಒಂದೇ. ನಿಜವಾಗಿಯೂ ಆತ ಮಾಡಿದ ಕೊಲೆ ಒಂದು ಆಫ್ಟರ್ ಥಾಟ್. ದಾಂಪತ್ಯದ ಉದ್ದಕ್ಕೂ, ಹೆಂಡತಿ ಬದುಕಿದ್ದಾಗಲೂ ನಡೆದದ್ದೇ ನಿಜವಾದ ಕೊಲೆ, ಅದಕ್ಕೆ ಲೈಂಗಿಕತೆ ಅನ್ನುವ ವಿಷಯವೇ ಕಾರಣ ಅಂತ ಅದರಲ್ಲಿ ಅವನ ವಾದ. ಇದು ಗಮನಿಸಬೇಕಾದ ಬಹಳ ಪವರ್‌ಫುಲ್ ಸ್ಟೋರಿ. ಅದರಲ್ಲಿ ಮಹಿಳಾ ಚಳುವಳಿಯ ಕೆಲವರು ಹೆಣ್ಣುಮಕ್ಕಳು ಬರುತ್ತಾರೆ. ಮಾಡರ್ನ್, ಫ್ಯಾಶನೆಬಲ್, ಫ್ರೀ ಥಿಂಕಿಂಗ್. ಅವರನ್ನೆಲ್ಲಾ ಕೇಂದ್ರ ಪಾತ್ರವಾಗಿರೋ ವ್ಯಕ್ತಿ ತಮಾಷೆ ಮಾಡುತ್ತಾನೆ. ಮದುವೆಗಳು ಪ್ರೇಮದ ಆಧಾರದ ಮೇಲೆ, ಪ್ರೇಮ ಅಂದರೆ ದಿವ್ಯವಾದದ್ದು ಅಂತ ಅವರು ಹೇಳಿದರೆ, ನೀವು ಹೇಳುವ ಪ್ರೇಮ ಯಾವ ಚೆಂದದ ಹೆಣ್ಣನ್ನು ಕಂಡರೂ ಗಂಡಿಗೆ ಉಂಟಾಗುತ್ತೆ, ಮತ್ತೆ ಪ್ರೇಮ ದಿವ್ಯವಾದದ್ದು, ಆದರ್ಶ ಅಂತೆಲ್ಲಾ ಆದರೆ ಅದನ್ನ ಹಾಸಿಗೆಗೆ ಯಾಕೆ ತೆಗೆದುಕೊಂಡು ಹೋಗಬೇಕು, ನಿಮ್ಮ ದಿವ್ಯಪ್ರೇಮ ಅಂದರೆ ಹಾಸಿಗೆ ಏರೋದು ಅಂತ ಅಲ್ಲವಾ ಅಂತ ಅವನು ಮಾತಾಡುವವನು. ಪ್ರೇಮದ ಬಗ್ಗೆ, ಮ್ಯೂಸಿಕ್ ಬಗ್ಗೆ, ಕಲೆ ಬಗ್ಗೆ ಬಹಳ ತೀಕ್ಷ್ಣವಾದ, ಕಟುವಾದ ವಿಮರ್ಶೆ ಮಾಡುತ್ತಾನೆ. ಅದು ಸರಿ ಇಲ್ಲ ಅಂತ. ಅವೆಲ್ಲಾ ಮನುಷ್ಯರ ಭಾವನೆಗಳನ್ನು ಉದ್ದೀಪಿಸುವುದಕ್ಕೆ ಇವೆ ಅಂತ. ಪ್ಲೇಟೋ ಥರ. ಅಂದರೆ ಕ್ರೋಯ್‌ತ್ಸೆರ್ ಸೊನಾಟಾ ಕತೆ ಬರೆಯಲಿಕ್ಕೆ ಅವನಿಗೆ ಪ್ರೇರೇಪಣೆ ಆದ ಕ್ರೋಯ್‌ತ್ಸೆರ್ ಸೊನಾಟಾ ಅನ್ನುವ ಬೀಥೋವೆನ್ ಸಿಂಫೊನಿ ಏನಿದೆ, ಸಂಗೀತ ಏನಿದೆ, ಅದರ ವಿರುದ್ಧವೇ ಅವನ ತಕರಾರು. ಆಮೇಲೆ, ಕಥೆ ಓದುತ್ತಾ ಹೋದಾಗ ಏನು ಗೊತ್ತಾಗುತ್ತೆ ಅಂದರೆ, ಆ ವ್ಯಕ್ತಿ ತನ್ನ ಹೆಂಡತಿಯನ್ನು ಕೊಲೆ ಮಾಡಿ ಬಂದಿರುತ್ತಾನೆ, ಮತ್ತೆ ತನ್ನದೇ ವೈಖರಿಯಲ್ಲಿ ಕನ್‌ಫೆಶನ್ ಮಾಡಿಕೊಳ್ಳುತ್ತಾ ಇದ್ದಾನೆ, ಅಂತ. ತನ್ನ ಹೆಂಡತಿ ಕೊಲೆಯಾಗಿ ಸತ್ತಳು ಅಂತಲ್ಲ, ಅವಳ ವ್ಯಕ್ತಿತ್ವ ಯಾರಿಗೂ ಬೇಡ ನೋಡಿ, ಅವಳ ವ್ಯಕ್ತಿತ್ವ ಎಲ್ಲರಿಗೂ, ನನಗೂ, ಒಂದು ಸವಾಲು ಅಂತ ಆತನ ಕನ್‌ಫೆಶನ್.

ಅವನ ಹೆಂಡತಿ ಬದುಕಿದ್ದಾಗ, ಅವಳು ಜೀವಂತ ಇದ್ದಾಗ, ಅವಳನ್ನು ಭೋಗಿಸಿ, ಪೀಡಿಸಿ ತನ್ನ ಗುರುತನ್ನು ಉಳಿಸಿಕೊಂಡವ ಅವನು. ಅವಳ ಕೊಲೆ ಆದ ಮೇಲೆ, ಅಂದರೆ ಅವಳ ಕೊಲೆ ಮಾಡಿದ್ದರಿಂದ, ಅವಳಿಂದ ಇನ್ನು ಮೇಲೆ ತನ್ನ ವ್ಯಕ್ತಿತ್ವಕ್ಕೆ, ಲೈಂಗಿಕ ಆಸೆಗೆ ಸವಾಲಿಲ್ಲ, ಛಾಲೆಂಜ್ ಇಲ್ಲ ಅಂತ ಆದ ಮೇಲೆ, ಈಗ ಅವಳು ಆತನಿಗೆ ವ್ಯಕ್ತಿತ್ವವಾಗಿ ಕಾಣಿಸುತ್ತಾಳೆ. ಮತ್ತೆ ಅವನ ಅಹಂಕಾರ ಕೂಡಾ ಈಗ ಕರಗಿದೆ. ಅವನ ಕನ್‌ಫೆಶನ್ ಏನಿದೆ, ಅದು ತಪ್ಪು ಮಾಡಿದವರು, ಅಯ್ಯೋ ಏನೋ ತಪ್ಪಾಯ್ತು ಅನ್ನೋ ಥರದ ಕನ್‌ಫೆಶನ್ ಅಲ್ಲ. ಅವಳು ಇಲ್ಲವಾದ ಮೇಲೆ ಕನ್‌ಫೆಶನ್ ಅಲ್ಲದೇ ಬೇರೆ ಸಾಧ್ಯ ಇಲ್ಲ ಅನ್ನುವ ಥರದ್ದು. ಅಂದರೆ, ಅವಳು ಇದ್ದಾಗ ಅವಳ ಕೊಲೆ ಮಾಡದೇ ತನಗೆ ಅಸ್ತಿತ್ವ ಇಲ್ಲ ಅನ್ನುವ ಥರದ್ದು. ಇಲ್ಲ ಅಂತಾದಾಗ ಮಾತ್ರ ಅವಳಿಗೆ ವ್ಯಕ್ತಿತ್ವ ಅನ್ನುವ ಥರದ್ದು.

ಇದೆಲ್ಲಾ ನೋಡಿ, ಟಾಲ್‌ಸ್ಟಾಯ್ ಹೇಳುವ ಮಾತು ಏನು ಅಂದರೆ, ಗಂಡು ಹೆಣ್ಣಿನ ಲೈಂಗಿಕ ಆಕರ್ಷಣೆ, ಲೈಂಗಿಕತೆ, ಮನುಷ್ಯತ್ವವನ್ನೇ ನಾಶಮಾಡುವಂಥದ್ದು. ಹಾಗಾಗಿ ಲೈಂಗಿಕ ಸಂಪರ್ಕ ಅಪರಾಧ ಅಂತ. ಅದಕ್ಕೇ ಅವನು ಗಂಡಸರಿಗೆ ಬ್ರಹ್ಮಚರ್ಯವನ್ನು ಬೋಧಿಸುವುದು. ಬರೀ ಲೈಂಗಿಕ ಸಂಪರ್ಕ ಮಾತ್ರ ಅಪರಾಧ ಅಂತ ಅಲ್ಲ, ಕ್ರೋಯ್‌ತ್ಸೆರ್ ಸೊನಾಟಾದಲ್ಲಿ ಅವನು ಹೇಳುವುದು ಮದುವೆಯ ಒಳಗೆಯೇ ಲೈಂಗಿಕ ಸಂಪರ್ಕ ಅಪರಾಧ ಅಂತ. ಗಂಡಸರು ಪಶುಗಳಾಗುವುದು ಅದರಿಂದಲೇ ಅಂತ. ಹೆಂಗಸರು ಗಂಡಸರನ್ನು ಕೈವಶ ಮಾಡಿಕೊಳ್ಳುವ ಮಾಟಗಾತಿಯರ ಹಾಗಾಗುವುದು ಕೂಡಾ, ತಮ್ಮ ವ್ಯಕ್ತಿತ್ವವನ್ನ ಕಳಕೊಳ್ಳೋದು ಕೂಡಾ, ಅದರಿಂದಲೇ ಅಂತ.

ಝಾರ್ ಆಡಳಿತದ ರಷ್ಯಾ ಸರಕಾರ ಈ ಕಥೆಯನ್ನ ಬಹಿಷ್ಕಾರ ಮಾಡಿತ್ತು. ಮದುವೆ ಅನ್ನುವ ಸಂಪ್ರದಾಯಕ್ಕೆ ಕೂಡಾ ಇವನು ದೊಡ್ಡ ಕಂಟಕ ಅಂತ. ಓರ್ಥೊಡೋಕ್ಸ್ ಚರ್ಚ್ ಕೂಡಾ ಟಾಲ್‌ಸ್ಟಾಯ್ ವಿರುದ್ಧ ಝಾರ್‌ಗೆ ದೂರು ಕೊಟ್ಟಿತ್ತು. ಹಾಗಾಗಿ ರಷ್ಯಾದಲ್ಲಿ ದೊಡ್ಡ ಕೋಲಾಹಲವೇ ಆಗಿತ್ತು. ಇದನ್ನ ಬರೆಯುವಾಗ ಟಾಲ್‌ಸ್ಟಾಯ್‌ಗೆ ೬೨ ವರ್ಷ. ಕ್ರೋಯ್‌ತ್ಸೆರ್ ಸೊನಾಟಾ ಅನ್ನುವುದು ಬೀಥೋವೆನ್ನನ ಒಂದು ಸುಪ್ರಸಿದ್ಧ ಸಿಂಫೋನಿ. ಮೊದಲ ಸಾರಿ ಈ ಕ್ರೋಯ್‌ತ್ಸೆರ್ ಸೊನಾಟಾ ಅನ್ನುವ ಬೀಥೋವೆನ್ ಸಿಂಫೊನಿಯನ್ನು ಕೇಳಿದಾಗ ಟಾಲ್‌ಸ್ಟಾಯ್, ಈ ಅಜ್ಜ, ಎದ್ದು ಕಿಟಕಿ ಪಕ್ಕ ಹೋಗಿ ನಿಂತು ಗಳಗಳ ಅತ್ತಿದ್ದ. ಅದು ಆತನ ೬೦ ನೇ ವಯಸ್ಸಲ್ಲಿ. ಆದರೆ ಅದೇ ರಾತ್ರಿ ಅವನ ಹೆಂಡತಿಗೆ 13ನೇ ಮಗುವಿಗೆ ಗರ್ಭವನ್ನೂ ನೀಡಿದ್ದ. ಎರಡು ವರ್ಷ ಕಳೆದು, ಅವನು ೬೨ರಲ್ಲಿದ್ದಾಗ, ಅದೇ ಸಿಂಫೊನಿಯನ್ನು ಮತ್ತೊಮ್ಮೆ ಕೇಳಿ, ಆ ಉತ್ಕಟತೆಯಲ್ಲಿ ಅವನು ಬರೆದಿರೋ ಕಥೆ ಇದು. ಆ ದಿನ ರಾತ್ರಿ ಟಾಲ್‌ಸ್ಟಾಯ್‌ನ ಹೆಂಡತಿ ತಾನು ಇವತ್ತು ೧೪ನೇ ಮಗುವಿನ ತಾಯಿ ಆಗುತ್ತೇನೇನೋ ಗಾಬರಿ ಆಗಿದ್ದಳು. ಬ್ರಹ್ಮಚರ್ಯ ಬ್ರಹ್ಮಚರ್ಯ ಅಂತ ಮಾತಾಡುವ ಟಾಲ್‌ಸ್ಟಾಯ್ ಕೂಡ, ಅಯ್ಯೋ ದೇವರೇ, ನಾಳೆ ಈ ಕತೆ ಬರೆದ ದಿನಾಂಕ, ಮತ್ತೆ ಹುಟ್ಟಬಹುದಾದ ೧೪ನೇ ಮಗುವಿನ ಜನ್ಮದಿನ ಎರಡೂ ತಾಳೆ ಆಗುತ್ತಲ್ಲ, ನನ್ನ ಮಕ್ಕಳು ನನ್ನನ್ನ ತಮಾಷೆ ಮಾಡೋದಿಲ್ಲವಾ ಅಂತ ಗುಟ್ಟಾಗಿ ಬರಕೊಂಡು ಕೊರಗುತ್ತಾನೆ.

ಟಾಲ್‌ಸ್ಟಾಯ್‌ನಿಂದ ಜೀವಮಾನ ಇಡೀ ಲೈಂಗಿಕ ದುರಾಕ್ರಮಣಕ್ಕೆ ತಾನು ಒಳಗಾದೆ ಅಂತ ಆತನ ಹೆಂಡತಿ ತನ್ನ ಡೈರಿಯಲ್ಲಿ ದಿನಂಪ್ರತಿ ಬರಕೊಳ್ಳುತ್ತಾಳೆ. ಟಾಲ್‌ಸ್ಟಾಯ್ ಮಹರ್ಷಿತ್ವದಿಂದಾಗಿ ಅದೆಲ್ಲಾ ಯಾರೂ ಕೇಳಲೇ ಇಲ್ಲ. ಈ ಮೃಗ ಬಂದು ನನ್ನ ಮೈಮೇಲೆ ಬಿತ್ತು ಅಂತ ಒಂದು ದಿನ ಅವಳು ಬರಕೊಳ್ಳುತ್ತಾಳೆ. ಟಾಲ್‌ಸ್ಟಾಯ್ ಸಾಯುವಾಗ ಆತನಿಗೆ ೮೧ ವರ್ಷ. ಅದರ ಹಿಂದಿನ ವರ್ಷ ಕೂಡಾ ಆಕೆ ಬರಕೊಂಡದ್ದು, ಡೈರಿಯಲ್ಲಿ, ಪ್ರೀತಿ ಅಂದರೆ ಹಿಂಸೆ, ನನ್ನ ವ್ಯಕ್ತಿತ್ವವೇ ಇದರಡಿಯಲ್ಲಿ ಧೂಳೀಪಟ ಆಗಿದೆ ಅಂತ. ಪ್ರೀತಿ ಅಂದರೆ ನಾನು ಕೇಳಿದ್ದು ಆರ್ದ್ರತೆಯನ್ನ, ಬೆಚ್ಚನೆ ಗಮನವನ್ನ, ನಾನೂ ಒಂದು ಜೀವ ಅಂತ ಅಂತಾಳೆ. ಟಾಲ್‌ಸ್ಟಾಯ್ ಸಾಯುವ ಹಿಂದಿನ ವರ್ಷ ಅವಳ ಡೈರಿಯಲ್ಲಿ ಅವಳು ಬರಕೊಂಡದ್ದರ ಪ್ರಕಾರ

ಉತ್ಕಟ ಲೈಂಗಿಕತೆಯ ಸ್ಫೋಟ ಮತ್ತು ದೀರ್ಘಕಾಲ ಅವನ ತಿರಸ್ಕಾರ, ಅದು ಮಾತ್ರ ತಾನು ಕಂಡದ್ದು ಅಂತ. ಕ್ರೋಯ್‌ತ್ಸರ್ ಸೊನಾಟಾದಲ್ಲಿ ಕಥೆಯ ಕೇಂದ್ರ ಪಾತ್ರ ಮಾಡುವ ಕನ್‌ಫೆಶನ್‌ನಲ್ಲಿ ಒಂದು ಮಾತಿದೆ. ಅದು ಟಾಲ್‌ಸ್ಟಾಯ್‌ದೇ ಮಾತಿರಬಹುದು. ಹೆಂಡತಿಯ ಕೊಲೆ ಮದುವೆಯಾದ ಹೊಸದರಲ್ಲೇ ಶುರುವಾಯ್ತು ಅಂತ. ಅದಕ್ಕೇ ಟಾಲ್‌ಸ್ಟಾಯ್‌ನ ಹೆಂಡತಿ ಝಾರ್ ಜೊತೆ ಮಾತಾಡಿ ಜಗಳಕಾದು ಕ್ರೋಯ್‌ತ್ಸರ್ ಸೊನಾಟಾ ಕಥೆಯ ಮೇಲಿದ್ದ ಬಹಿಷ್ಕಾರವನ್ನ ಹಿಂದೆ ತೆಗೆಸಿದ್ದಳು. ಅದು ಪ್ರಕಟವಾಗುವ ಹಾಗೆ ನೋಡಿಕೊಂಡಿದ್ದಳು. ಅದು ಅವಳದ್ದೇ ಕಥೆ ಅಂತ ಅವಳಿಗೇನೂ ಯಾರೂ ಹೇಳಿಕೊಡಬೇಕಾಗಿರಲಿಲ್ಲ.

ವೈದೇಹಿ ಜೊತೆ ನನ್ನ ಪ್ರಶ್ನೆ ಇಷ್ಟೇ: ಪ್ರತಿಭಾನ್ನ ಕೊಲೆ ಮಾಡಿದ ಡ್ರೈವರ್ ಏನು ಇದಾನೆ, ಅವನು ನಾವೂ ಆಗಿರಬಹುದಲ್ಲವಾ? ಇದೇನೂ ನನ್ನ ಪ್ರಶ್ನೆ ಅಲ್ಲ. ವೈದೇಹಿ ಕೇಳುವ ಪ್ರಶ್ನೆ ಕೂಡಾ ಇದೇ. ಆದರೆ, ನಮ್ಮ ನಿಯಂತ್ರಣ ತಪ್ಪಿಸುವವರನ್ನೆಲ್ಲಾ ಬಿಟ್ಟು, ಗ್ಲೋಬಲೈಸೇಶನ್ನಿನ ಪ್ರಶ್ನೆ ಬಿಟ್ಟು, ಲೈಂಗಿಕತೆಯ ಪ್ರಶ್ನೆ ಬಿಟ್ಟು, ನಮ್ಮನ್ನ ಬಿಟ್ಟು, ಪ್ರತಿಭಾಳ ಕಾರ್ ಡ್ರೈವರ್‌ನ್ನ ನೋಡಲಿಕ್ಕೆ ಸಾಧ್ಯವಾ ಅಂತ. ನನಗಂತೂ ಗೊತ್ತಿಲ್ಲ. ನಿಜವಾಗಲೂ ಗೊತ್ತಿಲ್ಲ. ತಪ್ಪಿಸಿಕೊಳ್ಳುವುದಕ್ಕೆ ಅಂತ ಕೇಳುತ್ತಾ ಇರುವ ಪ್ರಶ್ನೆ ಅಲ್ಲ ಇದು.

◆

# ಸಮಾರೋಪ ಭಾಷಣ

✍ ಡಾ. ಮೋಹನ ಆಳ್ವ

ಮುದ್ರಿತ ಭಾಷಣದ ಬರೆಹ ರೂಪ: **ಹರೀಶ್ ಟಿ.ಜಿ.**

ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಜಂಟಿಯಾಗಿ ಆಯೋಜಿಸಿದ ಈ ಮಹಿಳಾ ಸಾಹಿತ್ಯ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷನಾಗಿ ಭಾಗವಹಿಸುತ್ತಿರುವುದಕ್ಕೆ ನನಗೆ ತುಂಬಾ ಸಂತೋಷವಾಗುತ್ತಿದೆ. ಇಂತಹ ಒಳ್ಳೆಯ ಶಿಬಿರವನ್ನು ಏಳು ದಿನಗಳ ಕಾಲ ನಡೆಸುವುದಕ್ಕೆ ನಮ್ಮ ಶಿಕ್ಷಣ ಸಂಸ್ಥೆಯ ಸಹಾಯ ಕೋರಿದ ಅಕಾಡೆಮಿಯ ಅಧ್ಯಕ್ಷರಾದ 'ನಾಡೋಜ' ಶ್ರೀಮತಿ ಗೀತಾ ನಾಗಭೂಷಣರಿಗೆ, ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೆ ಮತ್ತು ಅಕಾಡೆಮಿಯ ಸದಸ್ಯರಾದ ಹಾಗೂ ನಮ್ಮವರೇ ಆದ ಡಾ. ಸಬಿಹಾರವರಿಗೆ ನಮ್ಮ ಸಂಸ್ಥೆಯ ವಿಶೇಷ ಕೃತಜ್ಞತೆಗಳು.

ನಮ್ಮ ಸಂಸ್ಥೆ ಕಳೆದೆರಡು ವರ್ಷಗಳಿಂದ 'ಆಳ್ವಾಸ್ ನುಡಿಸಿರಿ' ಎಂಬ ಕನ್ನಡ ನಾಡುನುಡಿಯ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿರುವುದು ತಮಗೆ ತಿಳಿದಿರಬಹುದು. ಕಳೆದ ಎಂಟು ವರ್ಷಗಳಿಂದ ಭಾರತೀಯ ಸಂಗೀತ, ನೃತ್ಯ ಮತ್ತು ರಂಗಕಲೆಗಳ ಉತ್ಸವವಾಗಿ ನಾವು 'ಆಳ್ವಾಸ್ ವಿರಾಸತ್' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಭಾರತದ ಬಹುರೂಪೀ ಕಲಾಪರಂಪರೆ ಮತ್ತು ಸಂಸ್ಕೃತಿಗಳನ್ನು ಪರಿಚಯಿಸುವ ಈ ಕಾರ್ಯಕ್ರಮವನ್ನು ಕಳೆದ ಏಳು ದಿನಗಳಿಂದ ನೀವು ನೋಡುತ್ತಾ ಬಂದಿದ್ದೀರಿ, ಅನುಭವಿಸಿದ್ದೀರಿ ಕೂಡಾ.

ಶಿಕ್ಷಣ ಸಂಸ್ಥೆಗೆ ಒಂದು ಖಚಿತವಾದ ಸಾಂಸ್ಕೃತಿಕ ನೀತಿ ಇರಬೇಕು ಎಂಬುದನ್ನು ನಾನು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದವನು. ನಮ್ಮನ್ನಾಳುವ ಪ್ರಭುತ್ವಕ್ಕೆ ಸ್ಪಷ್ಟವಾದ ಆರ್ಥಿಕ

ನೀತಿ, ಕರಾರುವಕ್ಕಾದ ವಿದೇಶಾಂಗ ನೀತಿ ಇರುವುದು ಎಷ್ಟು ಸಹಜವೋ ಹಾಗೆಯೇ ದೇಶದ ಯೋಗ್ಯ ನಾಗರಿಕರನ್ನು ತಯಾರು ಮಾಡುವ ಶಿಕ್ಷಣ ಸಂಸ್ಥೆಗಳಿಗೆ ಸ್ಪಷ್ಟವಾದ ಸಾಂಸ್ಕೃತಿಕ ನೀತಿಯೊಂದಿದ್ದರೆ ಅದು ಉದಾತ್ತವೂ, ಯೋಗ್ಯವೂ ಆದ ನಾಗರಿಕರನ್ನು ಸಮಾಜಕ್ಕೆ ಕೊಡಲು ಸಾಧ್ಯ. ಈ ನಿಟ್ಟಿನಲ್ಲಿ ನಾವು ಈಗಾಗಲೇ ಕಾರ್ಯಾಚರಿಸಿದ್ದೇವೆ. ಆಳ್ವಾಸ್ ನುಡಿಸಿರಿ, ಆಳ್ವಾಸ್ ವಿರಾಸತ್‌ಗಳು ಈ ಸಾಂಸ್ಕೃತಿಕ ನೀತಿಯ ಎರಡು ಬೃಹತ್ ಜೀವಂತ ಉದಾಹರಣೆಗಳು. ಅಕಾಡೆಮಿ ಹಮ್ಮಿಕೊಂಡಿರುವ ಈ ಶಿಬಿರವು ನಮ್ಮ ಸಂಸ್ಥೆಯ ಅಂತಹ ನೀತಿಯ ಮುಂದುವರಿಕೆಯೆ ಆಗಿದೆ.

ಕರ್ನಾಟಕದ ಬೇರೆ ಬೇರೆ ಮೂಲೆಗಳಿಂದ ಬಂದ ಶಿಬಿರಾರ್ಥಿಗಳಿಂದ ನೀವು ನಮ್ಮ ನಾಡಿನ ಸಂಸ್ಕೃತಿಯನ್ನು ಮೊತ್ತಮೊದಲನೆಯದಾಗಿ ತಿಳಿದಿರಬೇಕಾದುದು ಅಗತ್ಯ. ನಮ್ಮ ಅಡುಗೆಮನೆ ವೈವಿಧ್ಯ, ನಮ್ಮ ಆಚರಣೆಗಳ ವೈವಿಧ್ಯ, ಬದುಕಿನ ಕ್ರಮಗಳ ವೈವಿಧ್ಯ, ಬೆಳೆಯ ಮತ್ತು ಬೆಳೆಯುವ ಕ್ರಮದಲ್ಲಿನ ವೈವಿಧ್ಯ ಇವೆಲ್ಲವನ್ನು ನೀವು ಒಂದು ಕ್ಷಣ ಕಣ್ಣು ಮುಚ್ಚಿ ಧ್ಯಾನಸ್ಥ ಸ್ಥಿತಿಯಲ್ಲಿ ಯೋಚಿಸಿದರೆ ನಮ್ಮ ಸಮುದಾಯದ ವಿರಾಟ್‌ರೂಪವೊಂದರ ದರ್ಶನ ನಿಮಗಾಗುವುದಕ್ಕೆ ಸಾಧ್ಯ.

ನಮ್ಮ ಚಿಂತನ ಕ್ರಮದಲ್ಲಿನ ವ್ಯತ್ಯಾಸ, ಈ ದೇಶದಲ್ಲಿ ಬೆಳೆದು ಬಂದ ಬೇರೆ ಬೇರೆ ಮತಗಳ ನಡುವಿನ ವ್ಯತ್ಯಾಸ, ವಿರೋಧವಾಗಿಯೋ - ಪೂರಕವಾಗಿಯೋ ಬಂದಿದ್ದರೂ ಈ ಮಣ್ಣಿನಲ್ಲಿ ಒಂದು ಅಪಾರವಾದ ವರ್ಣವೈವಿಧ್ಯತೆಯನ್ನು ಸೃಷ್ಟಿಸಿರುವುದನ್ನು ಯಾರೂ ನಿರಾಕರಿಸಲಾರರು. ನಮ್ಮಲ್ಲಿ ಭಿನ್ನಮತವಿರಬಹುದು, ಮತಭೇಧಗಳಿರಬಹುದು, ಬದುಕಿನ ಕ್ರಮದಲ್ಲಿ ಮೂಲಭೂತ ವ್ಯತ್ಯಾಸಗಳಿರಬಹುದು. ಇವೆಲ್ಲವೂ ನಾವು ರೂಢಿಸಿಕೊಂಡವುಗಳು. ಆದರೆ ಮೂಲತಃ ನಾವೆಲ್ಲರು ಮನುಷ್ಯರು ಎಂಬುದನ್ನು ಮರೆಯಬಾರದು.

ನಾನು ದೇವಸ್ಥಾನಕ್ಕೆ ಹೋಗುತ್ತೇನೆ, ಹಾಗೆಯೇ ಚರ್ಚು, ಮಸೀದಿಗಳಿಗೂ ಹೋಗುತ್ತೇನೆ, ನನ್ನ ಧರ್ಮದ ಮೇಲೆ, ನಾನು ಬೆಳೆದು ಬಂದ ಸಂಸ್ಕೃತಿಯ ಮೇಲೆ ನನಗೆ ಅಪಾರವಾದ ಗೌರವ, ಹೆಮ್ಮೆಯಿದೆ. ಆದರೆ ಹಾಗಂತ ಉಳಿದವುಗಳ ಮೇಲೆ ನನಗೆ ತಿರಸ್ಕಾರವಿಲ್ಲ, ಅವುಗಳ ಬಗ್ಗೆಯೂ ನನಗೆ ಅಪಾರವಾದ ಪ್ರೀತಿ ವಿಶ್ವಾಸವಿದೆ. ಯಾವುದೋ ಒಂದನ್ನು ತುಳಿದು ನನ್ನದ್ದನ್ನ ಶ್ರೇಷ್ಠ ಎಂದು ಹೇಳುವ ಆತಂಕಕಾರಿ ನಿಲುವು ನನ್ನದಲ್ಲ.

ಇವತ್ತು ನಮ್ಮ ಸೂಫಿ ಪರಂಪರೆ ಮತ್ತು ಹಿಂದೂಸ್ಥಾನಿ ಸಂಗೀತ ಇವೆರಡನ್ನು ಗಮನಿಸಿದರೆ ಸಾಕು. ಚರಿತ್ರೆಯ ಅದಾವುದೋ ಹಂತದಲ್ಲಿ ಈ ಮಣ್ಣಿಗೆ ಬಂದ ಮುಸಲ್ಮಾನ ಬಂಧುಗಳು ತತ್ವಚಿಂತನೆಯಲ್ಲಿ, ಕಲಾಪ್ರಕಾರದಲ್ಲಿ ಎಂತಹ ಕೊಡುಗೆ ನೀಡಿದ್ದಾರೆ. ನಿನ್ನೆಯ ನಮ್ಮ ಆಳ್ವಾಸ್ ವಿರಾಸತ್ ಕಾರ್ಯಕ್ರಮದಲ್ಲಿ ಬೇಗಂ ಪರ್ವೀನ್ ಸುಲ್ತಾನರವರು ಹಿಂದೂಸ್ಥಾನಿ ಸಂಗೀತ ನಡೆಸಿಕೊಟ್ಟರು. ವೇದಿಕೆಗೆ ಬರುವುದಕ್ಕೆ ಮೊದಲು ಅವರು ನಮಾಝ್ ಮಾಡಿ ಬಂದಿದ್ದರು, ವೇದಿಕೆಯನ್ನೇರಿ ಅವರು ಗಣಪತಿಯ ಆರಾಧನೆಯ ಭಕ್ತಿ ಸ್ತೋತ್ರ ಹಾಡಿದರು. ಇದು, ಈ ದೇಶದ ನಿಜವಾದ ಆತ್ಮ ಅಂತ ಬಲವಾಗಿ ನಂಬಿಕೊಂಡು ಬಂದವನು ನಾನು.

ಕವಿವಾಣಿಯಂತೆ 'ಮತ ಪರಸ್ಪರರನ್ನು ಕಾದುವಂತೆ ಮಾಡುತ್ತದೆ, ಧರ್ಮ ಕೂಡಿಸುವಂತೆ ಮಾಡುತ್ತದೆ' ಎನ್ನುವುದು ನನ್ನ ತಿಳುವಳಿಕೆಯಲ್ಲಿ ಬೇರೂರಿದ ವಿಚಾರ. ಹಾಗಾಗಿ ನಾನು ಹಿಂದೂವಾಗಲಿ, ಜೈನವಾಗಲಿ, ಇಸ್ಲಾಂ ಆಗಲಿ, ಕ್ರೈಸ್ತವಾಗಲಿ ಇವುಗಳನ್ನು ಧರ್ಮ ಎಂದು ಕರೆಯುವುದೇ ಇಲ್ಲ. ಅವೆಲ್ಲವೂ ಮತಗಳು. ಧರ್ಮ ಒಂದೇ - ಅದು 'ಮಾನವ ಧರ್ಮ' ಎಂಬ ಸರಳ ತಿಳುವಳಿಕೆಯವನು ನಾನು.

ನಮ್ಮ ಸಂಸ್ಥೆಯಲ್ಲಿ ನೂರಾರು ಜಾತಿಗಳವರು, ಹಲವಾರು ಧರ್ಮಗಳವರು ಉದ್ಯೋಗಿಗಳಾಗಿ, ವಿದ್ಯಾರ್ಥಿಗಳಾಗಿ ಸೇರಿದ್ದಾರೆ. ಸುಮಾರು ೬೫೦ರಷ್ಟು ವಿದ್ಯಾರ್ಥಿಗಳು ಊಟ, ವಸತಿಯೊಂದಿಗೆ ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇವರಾರೂ ಜಾತಿ ಧರ್ಮ, ಭಾಷೆ ಎಂಬ ಮೀಸಲಾತಿಗಳಿಂದ ಬಂದವರಲ್ಲ. ಪ್ರತಿಭೆ, ಅರ್ಹತೆ ಎನ್ನುವುದೊಂದೆ ನಮ್ಮ ಸಂಸ್ಥೆಯಲ್ಲಿ ಸೇರುವವರಿಗೆ ಇರುವ ಏಕೈಕ ಮಾನದಂಡ.

ಸಾಹಿತ್ಯ - ಮಹಿಳೆ ಎನ್ನುವ ವಿಚಾರಕ್ಕೆ ಬಂದರೆ - ಒಂದು ಕಾಲಕ್ಕೆ ಪುರುಷ ಮಾತ್ರ ಸಮಾಜದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮುಂಚೂಣಿಯಲ್ಲಿ ಕಾಣಿಸಿಕೊಳ್ಳುತ್ತಿದ್ದ. ಅಂತಹ ಸಂದರ್ಭದಲ್ಲಿ ಮಹಿಳಾ ಪರವಾದ, ವಿರೋಧವಾದ, ಹಾಗೆಯೇ ಮಹಿಳೆಯ ಕುರಿತು ದಿವ್ಯ ನಿರ್ಲಕ್ಷ್ಯದ ಅದೆಷ್ಟೋ ಕೆಲಸಗಳು ನಡೆದಿರಬಹುದು. ಇವತ್ತಿನ ಜಗತ್ತು ನಮಗೆ ಕೊಟ್ಟ ತಿಳುವಳಿಕೆಯಲ್ಲಿ ನಾವದನ್ನು ಮರುಮೌಲ್ಯಮಾಪನ ಮಾಡುವಾಗ ಸಾಕಷ್ಟು ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗುತ್ತದೆ.

ರಾಮ, ಕೃಷ್ಣ, ಭರತ, ಬಾಹುಬಲಿ ಇವೆಲ್ಲವು ಕೇವಲ ಪಾತ್ರಗಳಲ್ಲ ಇವು ಆಧ್ಯಾತ್ಮಿಕ ಸಂಕೇತಗಳೆಂದು ನನ್ನ ಭಾವನೆ. ನಾವು ಈ ಕುರಿತು ಪುನರ್ ಓದು ನಡೆಸಬೇಕಾಗುತ್ತದೆ. ಹಾಗಾಗಿ ಪುರಾಣ ಪರಂಪರೆಯಲ್ಲಿ ನಾವು ಕೈಗೊಳ್ಳುವ ತೀರ್ಮಾನಗಳು ಯಾವುದೇ ಕಾರಣಕ್ಕೂ ದಿಢೀರ್ ತೀರ್ಮಾನವಾಗಬಾರದು. ನಮ್ಮ ತಿಳುವಳಿಕೆಯ ಮಿತಿಯನ್ನು ದಾಟಿ ಈ ಸಂಕೇತಗಳು ನಮ್ಮ ನಡುವೆ ಅದೆಷ್ಟು ಕಾಲದಿಂದಿದೆ ಎಂಬುದನ್ನು ಗಮನಿಸಬೇಕು.

ಇವತ್ತು ಮಹಿಳಾ ಪ್ರಜ್ಞೆ ನಮ್ಮಲ್ಲಿ ಆಧುನಿಕ ವಿದ್ಯಾಭ್ಯಾಸ ಮತ್ತು ಚಿಂತನೆಯ ಕಾರಣವಿಂದ ಸರಿಯಾಗಿಯೇ ಉದ್ಭವಿಸಿದೆ ಮತ್ತು ಚರ್ಚಿತವಾಗುತ್ತಿದೆ. ಇದು ಅತ್ಯಂತ ಯೋಗ್ಯವಾದ, ಉದಾತ್ತವಾದ ವಿಚಾರ. ತಮ್ಮ ದಮನಕ್ಕೆ ಮತ್ತು ಹಿಂದುಳಿದಿರುವಿಕೆಗೆ ಕಾರಣವಾದ ಅಂಶಗಳ ಬಗೆಗೆ ಇವತ್ತು ಅತ್ಯಂತ ಸರಿಯಾದ ಮಾರ್ಗದಲ್ಲಿ ಚಿಂತನೆ ನಡೆಯಬೇಕಿದೆ. ಇದು ಕೇವಲ ಲಿಂಗದ ಪ್ರಶ್ನೆಯಲ್ಲ. ಇದೊಂದು ಸಾಮಾಜಿಕ ಪ್ರಶ್ನೆ. ಮಾನವೀಯ ಪ್ರಶ್ನೆ. ಜಗತ್ತಿನ ಎಲ್ಲ ಶೋಷಿತ, ದಮನಿತ ಜನಸಮುದಾಯದ ಕುರಿತು ನಮ್ಮ ನಿಲುವು ಜಾತಿ-ಲಿಂಗ ವರ್ಗ - ವರ್ಣಭೇದಗಳಿಲ್ಲದೆ ಅವರಿಗೆ ಪೂರಕವಾಗಬೇಕು ಎನ್ನುವುದು ನನ್ನ ಆಶಯವಾಗಿದೆ.

ವ್ಯಕ್ತಿ ಯಾರೇ ಇರಬಹುದು, ಅವನು ವಿದ್ಯಾವಂತನಿರಬಹುದು, ಬಡವನಿರಬಹುದು, ದೊಡ್ಡ ಶ್ರೀಮಂತನಿರಬಹುದು, ವೈದ್ಯನಾಗಿರಬಹುದು ಅಥವಾ ಸಾಮಾನ್ಯ ಕೂಲಿ

ಕೆಲಸದವನಿರಬಹುದು. ಆದರೆ ಬದುಕಿನಲ್ಲಿ ನಮಗೆ ಸೌಂದರ್ಯಪ್ರಜ್ಞೆಯಿರಬೇಕು. ಈ ಸೌಂದರ್ಯ ಪ್ರಜ್ಞೆಯಿದ್ದವ ದೇಶವನ್ನು ಅಗಾಧವಾಗಿ ಪ್ರೀತಿಸುತ್ತಾನೆ. ದೇಶದ ಸಂಸ್ಕೃತಿಯನ್ನು ಪ್ರೀತಿಸುತ್ತಾನೆ. ಆದ್ದರಿಂದ ಸೌಂದರ್ಯ ಪ್ರಜ್ಞೆಯಿರುವ ವ್ಯಕ್ತಿ ದೇಶದ ಅಮೂಲ್ಯ ಸಂಪತ್ತು. ಯಾರಿಗೆ ಸೌಂದರ್ಯ ಪ್ರಜ್ಞೆ ಇಲ್ಲವೋ ಅವನು ದೇಶಕ್ಕೆ ಅಪಾಯಕಾರಿಯಾದ ವ್ಯಕ್ತಿಯಾಗುತ್ತಾನೆ. ಅವನಿಗೆ ಎಂದಿಗೂ ತನ್ನ ದೇಶದ ಪ್ರಕೃತಿ, ಸಮಾಜ, ಸಂಸ್ಕೃತಿಯ ಮೇಲೆ ಯಾವುದೇ ಗೌರವವಿರುವುದಿಲ್ಲ. ಅಂತಹ ಒಂದು ಬದುಕು, ಅದೆಂತಹ ಬದುಕೆಂಬುದೇ ನನಗೆ ಅರ್ಥವಾಗುವುದಿಲ್ಲ. ಅದಕ್ಕಾಗಿ ನಿಮ್ಮಲ್ಲಿ ನನ್ನ ಕಳಕಳಿಯೆಂದರೆ ನೀವು ಸೌಂದರ್ಯಪ್ರಜ್ಞೆ ಬೆಳೆಸಿಕೊಳ್ಳಿ. ಅಂತಹ ಮನುಷ್ಯ, ಜೀವನವನ್ನು ಪ್ರೀತಿಸುತ್ತಾನೆ. ನಾವು ಒಂದು ಅಮೂಲ್ಯ ಕ್ಷಣದಲ್ಲಿದ್ದೇವೆ. ಇಂತಹ ಜೀವನವನ್ನ ಪ್ರೀತಿಸಬೇಕು. ಆಗ ಮಾತ್ರ ಜೀವನದ ಬೆಲೆ ನಮಗೆ ಅರಿವಾಗುತ್ತದೆ. ಈಗ ನಮ್ಮಲ್ಲಿರುವ ಎಡ, ಬಲ ಪಂಥಗಳ ಬಗೆಗೆ ನನಗೆ ಯಾವ ಅರಿವು ಇಲ್ಲ. ನಾನು ಈ ಯಾವ ಪಂಥಗಳಿಗೂ ಸೇರದೆ ನನ್ನದೇ ಆದ ಮನುಜ ಪಂಥಕ್ಕೆ ಸೇರಿದ್ದೇನೆ. ಅದರಲ್ಲೇ ನಾನು ಜೀವಿಸುತ್ತಿದ್ದೇನೆ. ಎಲ್ಲಾ ಪಂಥದವರು ನನಗೆ ಮಿತ್ರರೇ ಆಗಿದ್ದಾರೆ. ಇದು ನನ್ನ ಜೀವನ ಕ್ರಮವನ್ನು ಅವಲಂಬಿಸಿದೆ. ಆದ್ದರಿಂದ ಜೀವನ ಪ್ರೀತಿ ಬೇಕು. ಹೀಗಾದಾಗ ಮಾತ್ರ ನಮಗೆ ಸಮಾಜದ ಎಲ್ಲಾ ವರ್ಗದಿಂದ ಮಿತ್ರರು ದೊರಕುತ್ತಾರೆ. ನಮಗೆ ಇತಿಮಿತಿಗಳನ್ನು ನಾವೇ ಆರೋಪಿಸಿಕೊಳ್ಳಬಾರದು. ಅಂದರೆ ನಮ್ಮ ಕೆಲಸ ಕೇವಲ ಒಂದು ಪ್ರದೇಶಕ್ಕೆ, ನಮ್ಮ ಜಾತಿಗೆ, ಒಂದು ಭಾಷೆಗೆ ಸೀಮಿತವಾಗಬಾರದು, ಜಗತ್ತು ದೊಡ್ಡದಾಗಿದೆ. ಬಹಳಷ್ಟು ಜನರ ಸಂಪರ್ಕದಿಂದ ನಮಗೆ ಅಪಾರ ವಿಚಾರಗಳು ದೊರಕುತ್ತವೆ. ಅದೆಲ್ಲವನ್ನು ವಿಶಾಲ ಮನೋಭಾವದಿಂದ ಸ್ವೀಕರಿಸಬೇಕು. ಆಗ ಪ್ರೀತಿ ಮಾಡುವವರು, ಹಿರಿಯರು, ಸಮವಯಸ್ಕರು ದೊರಕುತ್ತಾರೆ. ಹಿರಿಯರ ಆದರ್ಶಗಳನ್ನು ಗುರುತಿಸಿ ಗೌರವಿಸಿ ಅವರ ವಿಚಾರವನ್ನು ಅರಿಯಬೇಕು. ಸಮಕಾಲೀನರ ಬಳಿ ಬೆರೆಯಬೇಕು, ಕಿರಿಯರನ್ನು ಗುರುತಿಸಿ ಅವರ ಆಸೆ, ಆಕಾಂಕ್ಷೆಗಳನ್ನು ಅರಿತು ಪ್ರೀತಿಸಬೇಕು. ಹೀಗೆ ಎಲ್ಲರಿಂದಲೂ ತಿಳಿಯಬೇಕಾದುದೇ ಜೀವನ. ಅದಕ್ಕಾಗಿಯೇ ನಮ್ಮ ಜೀವನವನ್ನು ಪ್ರೀತಿಸಬೇಕು. ಹಾಗಾದಾಗ ಮಾತ್ರ ಅದರ ಅರ್ಥ ತಿಳಿಯುತ್ತದೆ.

ನಮ್ಮ ದೇಶದ ಸಂಸ್ಕೃತಿ ಎಷ್ಟು ಶ್ರೀಮಂತವಾಗಿದೆ. ಸಂಸ್ಕೃತಿಯೆಂದರೆ ಕೇವಲ ಪ್ರದರ್ಶನ ಕಲೆ ಮಾತ್ರ ಅಲ್ಲ. ಬದಲಿಗೆ ಜೀವನಕ್ರಮವೇ ಸಂಸ್ಕೃತಿ. ಪ್ರದರ್ಶನ ಕಲೆಯೇ ಬೇರೆ, ನಮ್ಮ ಸಂಸ್ಕೃತಿಯೆಂದರೆ ಜೀವನಕ್ರಮ, ಕಲೆ, ದರ್ಶನ ಪರಂಪರೆ, ಆಚಾರ ವಿಚಾರ ಈ ಎಲ್ಲವನ್ನೂ ಒಳಗೊಂಡದ್ದು. ಇದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಯುವಕರಿಗೆ ಸಂಸ್ಕೃತಿ ಮತ್ತು ಮನೋರಂಜನೆಗಿರುವ ವ್ಯತ್ಯಾಸವೇ ತಿಳಿದಿಲ್ಲ. ಸಂಸ್ಕೃತಿಯಿಂದ ಮನೋರಂಜನೆ ಸಿಗುತ್ತದೆ. ಆದರೆ ಇಂದಿನ ಜನರು ಆಚರಿಸುತ್ತಿರುವ ಮನೋರಂಜನೆಯಿಂದ ಸಂಸ್ಕೃತಿ ದೊರಕುವುದಿಲ್ಲ. ಇಂದು ಬರಿಯ ಮನೋರಂಜನೆಯೇ ಮುಖ್ಯವಾಗಿದೆ. ಈ ಎರಡರ ವ್ಯತ್ಯಾಸವನ್ನು ನಾವು ಗುರುತಿಸಬೇಕು.

ಈ ಕಾರಣಕ್ಕಾಗಿಯೇ, ಸಂಸ್ಕೃತಿ ಪ್ರಸರಣಕ್ಕಾಗಿಯೆ ನಾವು ಆಳ್ವಾಸ್ ವಿರಾಸತ್ ಹಮ್ಮಿಕೊಂಡಿದ್ದೇವೆ. ಇಷ್ಟು ಸಾವಿರ ವರ್ಷಗಳ ಇತಿಹಾಸವಿರುವ ನಮ್ಮ ಭಾರತದಲ್ಲಿ ಎಷ್ಟೊಂದು ಸಂಸ್ಕೃತಿಗಳಿವೆ. ನಾವು ಹೇಳುವ /ಕೇಳುವ ರಾಮಾಯಣ, ಮಹಾಭಾರತ, ಶ್ರೀಕೃಷ್ಣನ ಕಥೆಗಳು ಬರಿಯ ಮನೋರಂಜನೆಯ ಮೂಢನಂಬಿಕೆಯ ವಿಚಾರಗಳಲ್ಲ. ನಾವು ಎಂದಿಗೂ ನಮ್ಮ ಪರಂಪರೆಯನ್ನು ಹೀಗೆ ಸಾರಾಸಗಟಾಗಿ ಮೂಢನಂಬಿಕೆಯೆನ್ನಬಾರದು. ನಂಬಿಕೆ ಬೇರೆ, ಮೂಢನಂಬಿಕೆ ಬೇರೆ.

ನಾವು ಅವುಗಳನ್ನು ಪೂರ್ತಿ ಮರೆಯಬೇಕೆಂದೇನಿಲ್ಲ. ಆ ವಿಚಾರಗಳಲ್ಲಿ ಶ್ರೇಷ್ಠವಾದುದನ್ನು ಆಯ್ದುಕೊಳ್ಳಬೇಕು. ನಮ್ಮ ರಾಮಾಯಣ ಮಹಾಭಾರತಗಳ ಕಥೆಗಳ ವಿಚಾರಗಳನ್ನು ಅರಿಯಬೇಕು. ರಾಮ ಶ್ರೀಕೃಷ್ಣರಂತಹ ವ್ಯಕ್ತಿಗಳು ನಮ್ಮಲ್ಲಿದ್ದುದರಿಂದಲೇ ಇಂದು ಇಷ್ಟು ಕಲಾವಿದರು ನಮ್ಮಲ್ಲಿ ಹುಟ್ಟಿದ್ದಾರೆ. ಸೋನಾಲ್ ಮಾನ್‌ಸಿಂಗ್‌ರಂತಹ ಕಲಾವಿದರನ್ನು ನೋಡಿ, ಅವರಂತವರು ಪರಂಪರೆಯ ಮುಂದುವರಿಕೆಗಳು. ಆದ್ದರಿಂದ ನಮ್ಮ ಪರಂಪರೆಗಳ ಅರಿವು ಅತೀ ಅಗತ್ಯ. ಅದಿಲ್ಲದೆ ನಮ್ಮ ಬದುಕಿಗೆಂತಹ ಬೆಲೆ?

ನಮ್ಮ ನವರಸಗಳು, ರಾಗಗಳು ಸುಮ್ಮಸುಮ್ಮನೆ ಉತ್ಪತ್ತಿಯಾದವುಗಳಲ್ಲ. ನಮ್ಮ ದೇಶದ ಶಾಸ್ತ್ರೀಯ, ಜಾನಪದ ಸಂಗೀತ ನೃತ್ಯಗಳನ್ನು ಪಕ್ಕವಾದ್ಯ, ರಾಗಗಳನ್ನು ಗಮನಿಸಿರಿ. ಶಾಸ್ತ್ರೀಯ ನೃತ್ಯಗಳು ಲೆಕ್ಕ ಮಾಡಿ ಎಂಟು ಬಗೆಯಲ್ಲಿವೆ. ಅದು ಏನೂ ಸಾವಿರಾರಿಲ್ಲ. ನಮ್ಮ ವಿದ್ಯಾರ್ಥಿಗಳು ಅದನ್ನ ಗುರುತಿಸಬಲ್ಲರು. ಶೈಲಿ, ಭಂಗಿ ಹೆಜ್ಜೆಗಳನ್ನು ನೋಡಿ ಇದು ಭರತನಾಟ್ಯ, ಇದು ಕಥಕ್, ಒಡಿಸ್ಸಿ, ಮಣಿಪುರಿ, ಕೂಚುಪುಡಿ, ಮೋಹಿನಿಯಾಟ್ಟಂ ಹೀಗೆ ಅದರ ವೇಷಭೂಷಣ ಹಿಮ್ಮೇಳ ನರ್ತನಗಳನ್ನು ನೋಡಿಯೇ ಗುರುತಿಸಬಹುದು.

ನೀವೇ ವಿರಾಸತ್‌ನಲ್ಲಿ ಈ ಎಲ್ಲ ಪ್ರಕಾರಗಳನ್ನ ಅದರ ವೈವಿಧ್ಯತೆಯಲ್ಲಿ ನೋಡಿದ್ದೀರಿ. ದೇವರು ಕೊಟ್ಟ ಸೂಕ್ಷ್ಮವಾದ ಕಣ್ಣಲ್ಲಿ ನಾವಿದನ್ನು ನೋಡಬೇಕು. ನಮ್ಮಲ್ಲಿ ಎಷ್ಟೊಂದು ಬಗೆಯ ರಾಗಗಳಿವೆ ಎಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನಮ್ಮ ಹಿಂದೂಸ್ತಾನಿಯಲ್ಲಿ ಮೂವತ್ತಾರು ಸಾವಿರಕ್ಕಿಂತ ಮಿಕ್ಕ ರಾಗಗಳನ್ನು ನಮ್ಮ ಹಿರಿಯರು ಗುರುತಿಸಿದ್ದಾರೆ. ನಾವು ಈ ಎಲ್ಲ ರಾಗಗಳನ್ನು ಅರಿಯಬೇಕಿಲ್ಲ. ಅತ್ಯಂತ ಸರಳವಾಗಿ ಭಾವಗೀತೆ ಎಂದರೇನು ಅದು ಹೇಗಿರುತ್ತದೆ, ಜಾನಪದ ಗೀತೆ ಹೇಗಿರುತ್ತದೆ, ಶಿಶುನಾಳ ಶರೀಫರ ತತ್ವಪದ ಹೇಗಿರುತ್ತದೆ, ಚಿತ್ರಗೀತೆ ಯಾವುದು, ಕರ್ನಾಟಕ ಸಂಗೀತ ಯಾವುದು, ಹಿಂದೂಸ್ತಾನಿ ಯಾವುದು, ದೇವರ ನಾಮ ಯಾವುದು ಎಂಬ ಸಾಮಾನ್ಯ ತಿಳುವಳಿಕೆ ಇರಬೇಕು. ಮುಖ್ಯವಾದ ರಾಗಗಳನ್ನು ಕೇಳಬೇಕೆಂಬ ಮನಸ್ಸಾದರೂ ಇರಲಿ. ಸಾವಿರಕ್ಕೂ ಮಿಕ್ಕಿದ ಪಕ್ಕವಾದ್ಯಗಳನ್ನ ಕೇಳಬೇಕು. ಇವು ಎಂತಹ ರಾಗಗಳನ್ನು ವೈವಿಧ್ಯವಾಗಿ ಸಂಯೋಜಿಸುತ್ತವೆ. ಮೋರ್ಸಿಂಗ್ ವಾದ್ಯವನ್ನು ಬಾಯಿಯಲ್ಲಿ ಕಚ್ಚಿ ನುಡಿಸುವ ಬಗೆಯೇನು? ಕೆಲವು ಬಾರಿ ಆಶ್ಚರ್ಯವಾಗುತ್ತದೆ. ವಿಶ್ವವಿದ್ಯಾನಿಲಯದ ಕುಲಪತಿಗಳು, ಬ್ಯಾಂಕಿನ ಚೇರ್‌ಮೆನ್‌ಗಳು ದೊಡ್ಡ ದೊಡ್ಡ ಅಧಿಕಾರಿ, ಪ್ರಾಧ್ಯಾಪಕರುಗಳು, ಅವರಂಥವರು ವೇದಿಕೆಯ ಮುಂಭಾಗದಲ್ಲಿ ಆರಾಮವಾಗಿ ಕೂತು ಆ ವಾದ್ಯವನ್ನು ನೋಡಿ

ಆವೆಂತದು ಬಾಯಿಯಲ್ಲಿ ಕಚ್ಚಿ ಹಲ್ಲಿನಿಂದ ಶಬ್ದ ಮಾಡುತ್ತಾರೆ ಅಂತ ಅಂದರೆ ನನಗೆ ವ್ಯಥೆಯಾಗುತ್ತದೆ. ನಾವೆಲ್ಲರೂ ದೊಡ್ಡ ದೊಡ್ಡ ಕಲಾವಿದರಾಗಬೇಕಿಲ್ಲ, ಬದಲಿಗೆ ಸಣ್ಣ ಅಭಿರುಚಿಯನ್ನಾದರೂ ಬೆಳೆಸಿಕೊಳ್ಳಬೇಕು. ಕನಿಷ್ಠ ತಿಳುವಳಿಕೆಯನ್ನಾದರೂ ರೂಢಿಸಿಕೊಳ್ಳಬೇಕು.

ನಾನು ನಾಸ್ತಿಕನಾಗಲಿ, ಆಸ್ತಿಕನಾಗಲಿ ಅಲ್ಲ. ಬದಲಿಗೆ ಜೀವನದಲ್ಲಿ ಕಾಣುವ ವಿಚಾರಗಳನ್ನು ತಿಳಿಯಬೇಕು. ಜೀವನಾನುಭವವೇ ನಿಜವಾದ ತಿಳುವಳಿಕೆ ಎಂಬ ನಿಲುವು ನನ್ನದು.

ನಾವು ಸತ್ತ ಮೇಲೆ ಸ್ವರ್ಗಕ್ಕೆ ಹೋಗಬೇಕಾದರೆ ಪುಣ್ಯ ಸಂಪಾದಿಸಬೇಕಿಲ್ಲ. ಜೀವನದಲ್ಲಿ ನಾವು ಮಾಡಿದ್ದು ನಮ್ಮ ಕಣ್ಣೆದುರು ನೋಡಲು ಸಾಧ್ಯವಾಗಬೇಕು. ನಾನಂತೂ ಈ ಸಿದ್ಧಾಂತದವನು. ಈ ಜೀವನದಲ್ಲಿ ಒಳ್ಳೆಯದಾಗುವುದನ್ನು ಮಾತ್ರ ನಾನು ಮಾಡುತ್ತೇನೆಯೇ ಹೊರತು ಬೇರೆ ಯಾವ ಯಾಗ.... ಅದು ...... ಇದು..... ಅಂತ ನಾನು ಮಾಡುವುದಿಲ್ಲ....

ಇದು ನನ್ನ ಜೀವನ. ಜೀವನದ ಬಗೆಗೆ ನನ್ನ ಖಚಿತ ನಿಲುವು. ಎಷ್ಟೋ ಜನ ನನಗೆ ಕೇಳ್ತಾರೆ ನಿಮ್ಮ ತಂದೆ ತಾಯಿಗಳಿಂದ ಈ ಆಸಕ್ತಿ ಬಂದಿತೇ? ನಿಮ್ಮ ಮಕ್ಕಳಿಗೆ ಈ ಆಸಕ್ತಿ ಬಂದಿದೆಯೇ? ಅಂತೆಲ್ಲಾ ಕೇಳ್ತಾರೆ. ತಂದೆ ತಾಯಿಯಿಂದ ನಮಗೆ, ನಮ್ಮಿಂದ ನಮ್ಮ ಮಕ್ಕಳಿಗೆ ಬರುವುದು ರೋಗ ಮಾತ್ರ ಎಂದು ನಂಬಿಕೆ. ನನಗೆ ಇಷ್ಟೆಲ್ಲಾ ಆಸಕ್ತಿಯನ್ನು ಬೆಳೆಸಿದ್ದು ನನ್ನ ತಂದೆ ತಾಯಿಯರು ಅಲ್ಲ. ಇವೆಲ್ಲವೂ ನನ್ನ ಸ್ವಂತ ಆಸಕ್ತಿಯ ಫಲ, ಜೀವನ ಪ್ರೀತಿ ಸಂಸ್ಕೃತಿಗಳಲ್ಲಿ ಕಲಿಕೆಯಿಂದ ತೊಡಗಿಕೊಳ್ಳುವುದರಿಂದಲೇ ಬರಬೇಕು, ನಮ್ಮ ಮಕ್ಕಳನ್ನು ನಾವೆಲ್ಲ ಇಂತಹ ಸಂಸ್ಕೃತಿ, ಜೀವನ ಪ್ರೀತಿಯ ಕೆಲಸಗಳಲ್ಲಿ ತೊಡಗಿಸಿ ಅವರು ಮಾರ್ಪಾಡು ಆಗುವಂತೆ ಮಾಡಬೇಕೇ ಹೊರತು ಅವರ ಮೇಲೆ ಇಂತಹ ವಿಷಯಗಳಲ್ಲಿ ಬಲಾತ್ಕಾರವಾಗಲಿ, ಹೇರಿಕೆಯಾಗಲಿ ಸಲ್ಲದು. ಈ ವಿಚಾರವನ್ನು ನಾವು ನಾವೇ ವಿಮರ್ಶಿಸಬೇಕು. ಒಳ್ಳೆಯದು ಕೆಟ್ಟದರ ವಿವೇಚನೆಗೆ ನಾವು ತೊಡಗಬೇಕು. ಒಳ್ಳೆಯದನ್ನು ಗ್ರಹಿಸುವ, ನಮ್ಮ ಜೀವನದ ಮಿತಿಯಲ್ಲಿ ಒಳ್ಳೆಯದನ್ನು ಮಾಡುವ ತೀರ್ಮಾನ ಮಾಡಬೇಕು. ಜೀವನವನ್ನು ಅರ್ಥ ಮಾಡಿಕೊಳ್ಳಬೇಕೇ ಹೊರತು ಎಲ್ಲವನ್ನು ಕಣ್ಣುಮುಚ್ಚಿ ಸ್ವೀಕರಿಸುವುದಲ್ಲ. ಈ ಕೆಲಸವನ್ನು ತಾವು ಮಾಡುತ್ತೀರಿ ಎಂಬ ನಂಬಿಕೆ ನನಗೆ. ಈ ರೀತಿಯ ಮಹಿಳಾ ಸಾಹಿತ್ಯ ಅಧ್ಯಯನವನ್ನು ಹಮ್ಮಿಕೊಂಡ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಇದನ್ನು ಆಗು ಮಾಡಿದ ಡಾ. ಸಬಿಹಾರವರಿಗೆ ವಂದನೆಗಳು.

ಡಾ. ಸಬಿಹಾರವರ ಬಗ್ಗೆ ನಮ್ಮ ಜಿಲ್ಲೆಯವರಿಗೆ, ನಮಗೆ ತುಂಬಾ ಗೌರವವಿದೆ. ಅವರ ವಿಚಾರಧಾರೆಗಳನ್ನು ಅರಿತಿದ್ದೇವೆ. ಅವರು ಈ ಶಿಬಿರದ ಬಗ್ಗೆ ಹೇಳಿದಾಗ ಸಂತೋಷವಾಗಿತ್ತು. ಯಾವುದೇ ಒಳ್ಳೆಯ ಕೆಲಸಗಳನ್ನು ನಡೆಸುವುದಕ್ಕೆ ಶಕ್ತಿ ಕೊಡಬೇಕು. ಬಿಲ್ಡಿಂಗ್ ಕಟ್ಟುವುದು ಮಾತ್ರ ಶಕ್ತಿಯಲ್ಲ. ಸಂಸ್ಕೃತಿಯ ಹಂಚಿಕೆ ಕೂಡ ಶಕ್ತಿಯೇ. ಇಂಥ ವಿಚಾರಗಳು, ಇಲ್ಲಿ ನಡೆದ ಸಮಾನ ಮನಸ್ಕರ ಚರ್ಚೆಗಳು ಇಂಥ ಶಕ್ತಿಗಳಾಗಿವೆ. ಈ ಕೆಲಸಕ್ಕೆ ವಿಶ್ರಾಂತಿಯೇ ಇಲ್ಲ. ದೇವರು ಕೊಟ್ಟಷ್ಟು ಕಾಲ ಈ ಕೆಲಸದಲ್ಲಿ ತೊಡಗಬೇಕು.

ಕೆಲವು ಜನ ಕೆಲವು ದಿನ ಮಾತ್ರ ಅಂದರೆ ವಿದ್ಯಾರ್ಥಿಗಳು ವಿದ್ಯಾರ್ಥಿದೆಸೆಯಲ್ಲಿ ಮಾತ್ರ, ಉದ್ಯೋಗಸ್ಥರು ಒಂದೆರಡು ವರ್ಷ ಮಾತ್ರ ಉತ್ಸಾಹದಲ್ಲಿದ್ದು ನಂತರ ನಿರ್ಲಿಪ್ತರಾಗುತ್ತಾರೆ. ಇದಾಗಬಾರದು. ಆದುದರಿಂದ ಇಲ್ಲಿಗೆ ಬಂದ ನೀವು ಇಲ್ಲಿಯ ಸುಂದರ ಕ್ಷಣವನ್ನು ಬರಿಯ ನೆನಪಿಸುವುದಲ್ಲ. ಅದನ್ನು ನಿರಂತರವಾಗಿಸಿಕೊಂಡು ಜೀವನದಲ್ಲಿ ಸೌಂದರ್ಯಪ್ರಜ್ಞೆಯನ್ನು ಜಾಗೃತವಾಗಿರಿಸಿಕೊಂಡು ನಿಮ್ಮ ಬರವಣಿಗೆಯಲ್ಲಿ ಅದು ಕಾಣುವಂತಾಗಬೇಕು. ಸಮಾಜದಲ್ಲಿ ಕಾಣುವ ವಿಚಾರಗಳಿಗೆ ನೀವು ಸ್ಪಂದಿಸಬೇಕು. ನಿನ್ನೆಯ ಕವಿಗೋಷ್ಠಿಯಲ್ಲಿ ಹೇಮಾ ವೆಂಕಟ್‌ರವರ ಕವನವನ್ನು ಕೇಳಿ ನನಗೆ ಕಣ್ಣಲ್ಲಿ ನೀರು ಬಂತು. ಅಮ್ಮನ ಬದುಕೇ ಚಂದವೆಂಬ ಕವನ ನನ್ನನ್ನು ಕಲುಕಿತು. ಎಷ್ಟು ಕುಟುಂಬಗಳು ನನ್ನ ಕಣ್ಣ ಮುಂದೆ ಬಂತು ಅಲ್ಲಿನ ನೋವು, ನಲಿವು, ಸಂಕಟಗಳು ಎಲ್ಲ ಒಮ್ಮೆ ನೆನಪಿನಲ್ಲಿ ಹಾದುಹೋದವು. ತುಂಬಾ ಚಂದದ ಕವನ, ಚಂದದ ಮುಕ್ತಾಯ. ನಮ್ಮ ಸಬಿಹಾ, ವೈದೇಹಿಯಂಥವರ ಕನಸು ನಿಮ್ಮಂಥವರ ಮೂಲಕ ಬೆಳವಣಿಗೆಯನ್ನು ಪಡೆಯಲಿ. ಆದ್ದರಿಂದ ಯಾವುದೇ ಪಂಥದ ಮುಖವಾಡವಿಲ್ಲದೆ ಸಮಾಜದ ಕನ್ನಡಿಗಳಾಗಿರಿ. ಬದುಕಿನ ಅನುಭವಗಳನ್ನು ಸವಿಯಿರಿ. ಈ ಆರು ದಿನಗಳಲ್ಲಿ ನೀವು ತುಂಬಾ ವಿಷಯ ಕಲಿತಿದ್ದೀರಿ. ತುಂಬಾ ಅರ್ಥಪೂರ್ಣವಾದ ಮಹಿಳಾ ಸಾಹಿತ್ಯ, ಅಧ್ಯಯನವೆಂಬ ಪರಿಕಲ್ಪನೆಯನ್ನಾಧರಿಸಿದ ಇಂತಹ ಚಿಂತನೆಗಳು ಸದಾ ನಡೆಯಲಿ ಅದಕ್ಕೆ ನಮ್ಮ ಪ್ರೋತ್ಸಾಹ ಸದಾ ಇದೆ. ನಮ್ಮ ಉದ್ದೇಶ ಕೂಡಾ ಇದೇ ಆಗಿದೆ. ಆಳ್ವಾಸ್ ನುಡಿಸಿರಿ, ಆಳ್ವಾಸ್ ವಿರಾಸತ್‌ಗಳು ಕೂಡಾ ಇದೇ ಸದಾಶಯವನ್ನು ಹೊಂದಿದೆ ಎಂದು ಹೇಳುತ್ತಾ ಇಂತಹ ಕೆಲಸ ಮಾಡಿದ ಡಾ. ಸಬಿಹಾರಿಗೆ, ನಮ್ಮ ಸಂಸ್ಥೆಯ ಕನ್ನಡ ಉಪನ್ಯಾಸಕರುಗಳಾದ ನಿತ್ಯಾನಂದ ಶೆಟ್ಟಿ, ಹರೀಶ್, ಧನಂಜಯ ಕುಂಬ್ಳೆಯವರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

◆

# ಲೇಖಕರ ವಿಳಾಸ

೧. **ಡಾ. ನಿರುಪಮಾ**<br>
ನಂ. ೮೦೪, 'ವಾತ್ಸಲ್ಯ',<br>
೭ನೇ ಕ್ರಾಸ್<br>
೮ನೇ ಮೈನ್, ೪ನೇ ಬ್ಲಾಕ್<br>
ಬಿ.ಇ.ಎಲ್. ಲೇಔಟ್,<br>
ವಿದ್ಯಾರಣ್ಯಪುರ<br>
ಬೆಂಗಳೂರು-೫೬೦ ೦೯೭

೨. **ಎಂ. ಆರ್. ಕಮಲ**<br>
ನಂ. ೪೦೫, ಉಮಾಶಂಕರ,<br>
೧ನೇ ಎನ್ ಬ್ಲಾಕ್<br>
೧೯ನೇ ಜಿ ಮೈನ್, ರಾಜಾಜಿನಗರ<br>
ಬೆಂಗಳೂರು-೫೬೦ ೦೧೦

೩. **ಡಾ. ಸಬಿಹಾ ಭೂಮಿಗೌಡ**<br>
ರೀಡರ್, ಕನ್ನಡ ಅಧ್ಯಯನ ವಿಭಾಗ<br>
ಮಂಗಳೂರು ವಿಶ್ವವಿದ್ಯಾನಿಲಯ<br>
ಮಂಗಳಗಂಗೋತ್ರಿ-೫೭೪ ೧೯೯

೪. **ತುಳಸಿ ವೇಣುಗೋಪಾಲ್**<br>
ಸಿ-೨ಎ, ೩೦೧,<br>
ಬಿ.ಕೆ.ಎಂ. ಸೊಸೈಟಿ<br>
ಜೆ. ಬಿ. ನಗರ, ಎಕ್ಸ್‌ಟೆನ್‌ಷನ್<br>
ಓಂನಗರ, ಸಾದರ್ ಪೈಪ್ ರೋಡ್<br>
ಅಂಧೇರಿ, (ಪೂರ್ವ),<br>
ಮುಂಬೈ-೪೦೦ ೦೯೯

೫. **ಶಶಿಕಲಾ ವೀರಯ್ಯಸ್ವಾಮಿ**<br>
'ಆನಂದ ನಿಲಯ', ೧೮೪,<br>
ಕಣಬರಗಿ ವಿಸ್ತರಣೆ<br>
ರಾಮತೀರ್ಥನಗರ,<br>
ಬೆಳಗಾವಿ-೫೯೦ ೦೧೫

೬. **ಎಲ್.ಸಿ. ಸುಮಿತ್ರಾ**<br>
ಕನ್ನಡ ಉಪನ್ಯಾಸಕಿ<br>
ತುಂಗಾ ಕಾಲೇಜು, ತೀರ್ಥಹಳ್ಳಿ<br>
(ಶಿವಮೊಗ್ಗ) ೫೭೭ ೪೩೨

೭. **ಕೆ. ಶರೀಫಾ**<br>
ಎ.ಪಿ.ಎಂ.ಸಿ. ಶಿವಮೊಗ್ಗ ರಸ್ತೆ<br>
ಹರಿಹರ-೫೭೭ ೬೦೧,<br>
ದಾವಣಗೆರೆ ಜಿಲ್ಲೆ

೮. **ಪ್ರೊ. ಸ. ಉಷಾ**<br>
'ಚಿತ್ತಾರ', ಮಾರುತಿನಗರ<br>
ಅರಸೀಕೆರೆ, ಹಾಸನ ಜಿಲ್ಲೆ

೯. **ಡಾ. ಮಲ್ಲಿಕಾ ಘಂಟಿ**<br>
ರೀಡರ್, ಕನ್ನಡ ವಿಭಾಗ<br>
ಸ್ನಾತಕೋತ್ತರ ಕೇಂದ್ರ,<br>
ಕೃಷ್ಣದೇವರಾಯನಗರ<br>
ಸೊಂಡೂರು-೫೮೩ ೧೧೯<br>
(ಬಳ್ಳಾರಿ ಜಿಲ್ಲೆ)

೧೦. ಅ.ನಾ. ಪೂರ್ಣಿಮಾ
ಮನೆ ನಂ. ೧೪೭, ಅಶೋಕನಗರ
ಮಂಗಳೂರು-೫೭೫ ೦೦೬ (ದ.ಕ.)

೧೧. ಪಾರ್ವತಿ ಜಿ. ಐತಾಳ್
'ಸುರಗಂಗಾ', ಬಸ್ರೂರು ಕ್ರಾಸ್ ರಸ್ತೆ
ಕುಂದಾಪುರ-೫೭೬ ೨೦೧

೧೩. ವೈದೇಹಿ
ಇರುವಂತಿಗೆ,
ಅನಂತನಗರ ೨ನೇ ಹಂತ
ಮಣಿಪಾಲ, ಉಡುಪಿ ಜಿಲ್ಲೆ

೧೪. ಡಾ. ಪಟ್ಟಾಭಿರಾಮ ಸೋಮಯಾಜಿ
ಅಧ್ಯಾಪಕರು, ವಿಶ್ವವಿದ್ಯಾಲಯ
ಕಾಲೇಜು, ಹಂಪನಕಟ್ಟೆ
ಮಂಗಳೂರು-೫೭೫ ೦೦೧

೧೫. ಹರೀಶ್ ಟಿ. ಜಿ.
ಕನ್ನಡ ಉಪನ್ಯಾಸಕರು
ಆಳ್ವಾಸ್ ಕಾಲೇಜು
ಮೂಡುಬಿದಿರೆ (ದ.ಕ. ಜಿಲ್ಲೆ)

ಮಹಿಳಾ ಸಾಹಿತ್ಯವನ್ನು ಕುರಿತಂತೆ ವಿಶಿಷ್ಟವಾದ ಮತ್ತು ಗಂಭೀರವಾದ "ಮಹಿಳಾ ಸಾಹಿತ್ಯ ಅಧ್ಯಯನ ಕಮ್ಮಟ"ವನ್ನು ಮೂಡುಬಿದರೆಯಲ್ಲಿ ಆಯೋಜಿಸಿದ್ದೆವು. ಇದರಲ್ಲಿ ಕನ್ನಡದ ಲೇಖಕಿಯರ ಸಾಧನೆ ಮತ್ತು ಇತರ ಭಾಷೆಯ ಲೇಖಕಿಯರ ಸಾಧನೆಯನ್ನು ಸೇರಿಸಿಕೊಂಡು ೬ ದಿನಗಳ ಕಾಲ ಈ ಕಮ್ಮಟ ನಡೆಸಿದೆವು. ಈ ಕಮ್ಮಟವನ್ನು ನಿತ್ಯಹಸುರಿನ ನಾಡು ಮೂಡುಬಿದಿರೆಯಲ್ಲಿ ನಡೆಸಲು ಸಹಕರಿಸಿದ ಆಳ್ವಾಸ್ ಶಿಕ್ಷಣ ಸಂಸ್ಥೆ, ಶಿಬಿರ ನಿರ್ದೇಶಕರು, ಸಂಚಾಲಕರು, ಭಾಗವಹಿಸಿದ ವಿದ್ವಾಂಸರು ಮತ್ತು ಶಿಬಿರಾರ್ಥಿಗಳ ಮನದಾಳದ ಕೆಲವು ಪುಟಗಳನ್ನು ಮಾತ್ರ ಈ ಕೃತಿಯ ಮೂಲಕ ಓದುಗರ ಕೈಗಿಡುತ್ತಿದ್ದೇವೆ.

ಬೆಲೆ ರೂ.: 60-0